ಸಾವಿರದ ಶೂರ

ಇದ್ದರೂ ಶತ್ರುಂತೆ ಇರುವವರೆ ಬಹುಜನರು,
ಇದ್ದವರಿಗೆಲ್ಲ ಸಾವಾಗಿ ಇರುವರು ಕೆಲರು,
ಮೊದ್ದುತನದಲಿ ಸಾವಿಗಂಜಿ, ಬದುಕನೆ ಸಾಪು
ಮಾಡಿಕೊಂಡವರು ಹಲರು—

ಇದ್ದಾಗ ನಿನ್ನಂತೆ ಇದ್ದವರು ಯಾರಿಹರು?
ಬಿದ್ದವರ ಬಾಳ್ವಿ ಜೀವಕಳೆಯನ್ನೂದಿ
ಸಿದ್ಧಿ ಹುಂಬಿದರಾರು ನಿನ್ನವೊಲು ಗಾಂಧೀಜಿ
ಸಾವಿರದ ಶೂರರಾರು?

* * *

ಹೂವಿನರಳುವ ಗುಣವೆ ನಿನ್ನ ನಗೆಯಾಯ್ತೊ,
ಜೇನ ಸವಿ ನಿನಗೆ ಮೆಲುಮಾತನೊದವಿಸಿತೊ;
ಅಗಸದ ವೈಶಾಲ್ಯ ಪದೆಯು ನಿನಗಾಯ್ತೊ,
ಸಾಗರದ ಅಳ ನಿನ್ನರಿವ ಪದವಿಸಿತೊ !

ಈ ಸಂಚಿಕೆಯಲ್ಲಿ

ಕನ್ನಡ ರಾಜ್ಯದಲ್ಲಿ ಕನ್ನಡಭಾಷೆಯ ಸ್ಥಾನ (ಸಂಪಾದಕೀಯ) ೨೪೧
ಸಂಪಾದಕರು

ಕಳೆದುಕೊಂಡ ಕನ್ನಡಪ್ರದೇಶ ೨೪೩
'ವಿಹಂಗಮ'

ಪರೀಕ್ಷೆ (ಒಂದು ವೈಶ್ಯಕತೆ) ೨೪೫
ಶ್ರೀ. ಅರವಿಂದ ರಾಜಪುರೋಹಿತ ಬಿ. ಎ. (ಆನರ್ಸ್), ಹೊಂಬಳ

ಹಿಂದೂಸಂಸ್ಕೃತಿ ಮತ್ತು ... ಆಚಾರ್ಯಗಳು (ಪರಿಚಯಾತ್ಮಕ) ೨೫೦
ಶ್ರೀ. ಲಕ್ಷ್ಮಣ ಜೋಶಿ ಬಿ. ಎ., ಬಿ. ಟಿ. ಕೂಡ್ಲಿಗಿ

ಕಾದು ಕುಳಿತಿಹೆ (ಕವನ) ೨೫೪
ಶ್ರೀ. ಮುದೇನೂರ ಸಂಗಣ್ಣ ಚಿಗಟೇರಿ

ಅಗ್ನಿದಿವ್ಯ (ಕವನ) ೨೫೪
ಶ್ರೀ. ರಾಮಚಂದ್ರ ಕೊಟ್ಟಲಗಿ, ಧಾರವಾಡ

ಪಟ್ಟಯಂಗಡ್ಡಿ ನಾರಾಯಣರಾಯರು (ಜೀವನ ಪರಿಚಯ) ೨೫೫
ಶ್ರೀ. ವೆಂಕಟೇಶ ಸಾಂಗಲಿ, ಬೆಳಗಾಂವಿ

ಬಯಕೆ (ನವ್ಯಕವನ) ೨೫೭
ಶ್ರೀ. ಶಾಂತಿನಾಥ ದೇಸಾಯಿ ಬಿ. ಎ. ಕೊಲ್ಹಾಪುರ

ಚಂದ್ರಗ್ರಹಣ (ಒಂದು ಸಣ್ಣಕಥೆ) ೨೫೮
ಶ್ರೀ. ಟಿ. ಆರ್. ನಾಡಗೀರ ಬಿ. ಎಸ್ಸಿ. (ಟೆಕ್) ಮುಂಬಯಿ

ನಲಚಂಪೂ (ಸಂಸ್ಕೃತ ಕಾವ್ಯಪರಿಚಯ) ೨೬೫
ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ. ಟಿ. ಧಾರವಾಡ

ಭಾರತದ ವಸ್ತುಸಂಗ್ರಹಾಲಯಗಳು (ಪರಿಚಯಾತ್ಮಕ) ೨೭೪
ಶ್ರೀ. ಎ. ಎಂ. ಅಣ್ಣಿಗೇರಿ ಎಂ. ಎ ಧಾರವಾಡ

ಅವಳಲ್ಲಿ ಮಲಗಿಹಳು (ನವ್ಯಕವನ) ೨೮೯
ಶ್ರೀ. ಶಾಂತಿನಾಥ ದೇಸಾಯಿ ಎಂ.ಎ. ಕೊಲ್ಹಾಪುರ

ಗುಂಡೂಮಾನಾನ ಯಾತ್ರೆ (ರಾಮತೀರ್ಥ-ರಾಮಾಯಣಕಾಲ) ೨೯೦
ಶ್ರೀ. ಪಿ. ವಿ. ಗುಡಿ ನ್ಯೂದಿಲ್ಲಿ

ನನ್ನ ದೀಪಾವಳಿ ಹಬ್ಬದ ರಸನಿಮಿಷಗಳು (ಪ್ರವಾಸ ಪ್ರಬಂಧ) ೨೯೩
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ

ಸಾಹಿತ್ಯವನವಿಹಾರ (ಉತ್ತರ-ಪ್ರತ್ಯುತ್ತರಗಳು) ೨೯೬
ಡಾ. ಕೆ. ಎಂ. ಕೃಷ್ಣರಾವ್ ಮತ್ತು ಬಿಜೆಗೇರಿ ಕೃಷ್ಣಶರ್ಮ

ಕವಿಯ ಬಯಕೆ (ಭಾವರೂಪಕ) ೨೯೯
'ಮುಕೇಶ'

ಪುಸ್ತಕ ವಿಮರ್ಶೆ ೩೦೨
ಶ್ರೀ. ಭಾರತೀಶ

ಸಾದರಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೬

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೬ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಕನ್ನಡ ರಾಜ್ಯದಲ್ಲಿ ಕನ್ನಡಭಾಷೆಯ ಸ್ಥಾನ

ಈಗ ನಮ್ಮ ಕನ್ನಡ ರಾಜ್ಯದ ವಿಧಾನಸಭೆಯಲ್ಲಿ ಭಾಷೆಯು ಪ್ರಶ್ನೆಯು ಮುಂದೆ ಬಂದು ನಿಂತಿದೆ. ನಮ್ಮ ರಾಜಕೀಯ ಧುರೀಣರ ಅಜಾಗರೂಕತೆಯ ಮೂಲಕವೇ ಎಂದು ಹೇಳಬಹುದು. ನಮ್ಮ ರಾಜ್ಯದ ವಿಧಾನಸಭೆಯಲ್ಲಿ ಕನ್ನಡ ಭಾಷೆಗೇ ಪ್ರಮುಖ ಸ್ಥಾನ ವಿರಬೇಕಾದುದು ಅನಿವಾರ್ಯ. ವಿಧಾನಸಭೆಯ ಸದಸ್ಯರಾಗಿ ಬಂದವರೆಲ್ಲ ಕನ್ನಡ ನುಡಿಯನ್ನನ್ನು ಬಲ್ಲವರಾಗಿ ಇರಲೇಬೇಕೆಂದು ನಿರ್ಬಂಧವಿರುವುದು ಅತ್ಯಗತ್ಯ. ಅಪವಾದಾತ್ಮಕವಾಗಿ ಯಾರಾದರೂ ಒಬ್ಬಿಬ್ಬರು ಕನ್ನಡ ಭಾಷೆಯನ್ನು ಅರಿಯದ ಸದಸ್ಯರು ಆಯ್ಕೆ ಪಡೆದುಬಂದಿದ್ದರೆ, ಅವರು ರಾಷ್ಟ್ರಭಾಷೆಯಾದ ಹಿಂದಿಯಲ್ಲಿಯಾಗಲಿ, ಸದ್ಯ ಸಾಮಾನ್ಯ ಭಾಷೆಯೆಂದು ಸ್ಥಾನ ಪಡೆದಿರುವ ಇಂಗ್ಲಿಷಿನಲ್ಲಿಯಾಗಲಿ ಮಾತನಾಡಬಹುದೇ ಹೊರತು, ತಂತಮ್ಮ ಮಾತೃಭಾಷೆಯಲ್ಲಿ ಅಲ್ಲ. ಮಾತೃಭಾಷೆಯಲ್ಲಿ ಮಾತನಾಡಬಹುದೆಂಬ ಸವಲತ್ತನ್ನು ಕೊಟ್ಟರೆ, ನಮ್ಮ ವಿಧಾನಸಭೆಯು ವಿವಿಧಭಾಷೆಗಳ ಸಮ್ಮೇಳನವಾಗುವಂತಹ ದುರ್ದೈವದ ಪರಿಸ್ಥಿತಿ ಈಗಂತೂ ಇವೆ. ಹೀಗೆ ಒಬ್ಬೊಬ್ಬರೂ ತಮ್ಮ ಭಾಷೆಯಲ್ಲಿ ಮಾತನಾಡುವ ಹಟ ಹಿಡಿದು ಹಾಗೆ ಮಾಡಲು ತೊಡಗಿದರೆ, ಒಬ್ಬರ ಮಾತು ಇನ್ನೊಬ್ಬರಿಗೆ ತಿಳಿಯದೆ, ಸಭೆಯ ಕಾರ್ಯಕಲಾಪಗಳೇ ಮುಂದುವರಿಯಲಿಕ್ಕಿಲ್ಲ. ಇಷ್ಟೇ ಅಲ್ಲ; ಪ್ರತಿಯೊಂದು ಭಾಷೆಯನ್ನೂ ಭಾಷಾಂತರಿಸಿ ಕೇಳಬಲ್ಲ ದ್ವಿಭಾಷಿಗಳನ್ನು ನಿಯಮಿಸಬೇಕಾಗಿ ಬಂದು, ಪರಕಾರದ ವೆಚ್ಚದ ಸಂಖ್ಯೆ ಹೆಚ್ಚಬಹುದು.

ಮೊನ್ನೆಯ ಅಧಿವೇಶನದಲ್ಲಿಯೆ ಬೆಳಗಾಂವಿಯ ಶ್ರೀ ಸಾಮಜಿ ಎಂಬ ಸದಸ್ಯರು—ತಮಗೆ ಬೇರೆಯ ಭಾಷೆ ಬರುತ್ತಿದ್ದರೂ—ಹಟದಿಂದ ಮರಾಟಿಯಲ್ಲಿ ಮಾತನಾಡಿದರು. ಅವರನ್ನು ಕಂಡು ಇನ್ನೊಬ್ಬ ಸದಸ್ಯ ಶ್ರೀ. ರೆಡ್ಡಿಯವರು, ತಮಗೆ ಕನ್ನಡ ಬರುತ್ತಿದ್ದರೂ—ಬರುವುದಿಲ್ಲವೆಂದು ಸಾಧಿಸಿ—ತೆಲುಗಿನಲ್ಲಿ ಮಾತನಾಡಿದರು. ಮರಾಟಿ-ತೆಲುಗು ಎರಡೂ ಭಾಷೆಗಳು ಬಾರದ ಬಹುಜನ ಸದಸ್ಯರು, ಒಬ್ಬರೊಬ್ಬರ ಮುಖವನ್ನು ಮಿಕಿಮಿಕಿ ನೋಡುತ್ತ ಕುಳಿತುಕೊಂಡರು. ಈ ಹುಚ್ಚಾಟ ಎಲ್ಲಿಯವರೆಗೆ ಹೀಗೆಯೆ ಸಾಗಬೇಕು? ಇವಿವೇಕಿಗಳಾದ ಹಟವಾದಿಗಳನ್ನೆಲ್ಲ ಹೀಗೆ ಸಡಿಲುಕಡಿಲ ತೋರಿಸುತ್ತ ಹೋಗುವುದರಲ್ಲಿ ಯಾವ ಪ್ರಯೋಜನವನ್ನು ಕಂಡಿದ್ದಾರೆ ನಮ್ಮ ಹೊಣೆಗಾರ ಧುರೀಣರು?

ಸಂದರ್ಭ ಇಷ್ಟಕ್ಕೇ ನಿಂತಿಲ್ಲ. ಮುಖ್ಯಮಂತ್ರಿಗಳು ಮರಾಠೀ ಸದಸ್ಯರಿಗಾಗಿ, ಮರಾಠಿಯಲ್ಲಿಯೇ ಪ್ರಶ್ನೋತ್ತರಗಳನ್ನು ಒದಗಿಸಿಕೊಡುವ ಅಭಿವಚನವನ್ನು ಇತ್ತಿದ್ದಾರಂತೆ! ಇದೇ ಅನುಕೂಲತೆಯನ್ನು ತೆಲುಗುಭಾಷೆಯ ಸದಸ್ಯರು ಕೇಳಿದಾಗ ಇಲ್ಲವೆಂದು ಹೇಳುವುದಕ್ಕೆ ಕಾರಣವಾವುದೋ ತಿಳಿಯದು. ಒಬ್ಬರೋ ಇಬ್ಬರೋ ಮರಾಠಿಗರಿಗಾಗಿ, ಆ ಅನುಕೂಲತೆಯನ್ನು ಒದಗಿಸಿಕೊಡುವ ಅಭಿವಚನದ ಅಗತ್ಯವೇನು ಇದ್ದಿತು ಮುಖ್ಯಮಂತ್ರಿಗಳಿಗೆ? ಮಿಕ್ಕ ರಾಜ್ಯಗಳಲ್ಲಿ ಕನ್ನಡಿಗರಿಗೆ ಈ ಬಗೆಯ ಅನುಕೂಲತೆಯು ದೊರೆಯಬಹುದೆ? ದೊರೆಯುವ ಅಗತ್ಯವಿದೆಯೇ?

ಸದ್ಯದ ವಿಧಾನಸಭೆಯಲ್ಲಿ ಕನ್ನಡಭಾಷೆಯೆ ಪರದೇಶಿ ಕೂಸಿನಂತಾಗಿದೆ. ಮುಸ್ಲಿಂಲೀಗ್ ಮನೋವೃತ್ತಿಯ ಈ ಪರಭಾಷಾಪ್ರಿಯ ಸದಸ್ಯರು, ತಮಗೆ ಕನ್ನಡ ಚೆನ್ನಾಗಿ ಮಾತನಾಡಲು ಬರುವುದಿಲ್ಲವೆಂದು ಹೇಳಿ, ಪರಭಾಷೆಯಲ್ಲಿಯೆ ಮಾತನಾಡುವ ಉದಾಸೀನ-ಭಾವದ ಸದಸ್ಯರು—ಇವರಿಂದಲೇ ಅದು ತುಂಬಿಹೋಗಿದೆ. ಕನ್ನಡನುಡಿಗೆ ಮೊದಲ ಪಟ್ಟವಿಲ್ಲದ

ತಿರುಗಿ

ರಾಜ್ಯವು ಕನ್ನಡಿಗರದೆನಿಸದು. ಕನ್ನಡಿಗರಿಗೆ ತಮ್ಮದೇ ಆದ ರಾಜ್ಯ ಬೇಕಾದುದು ತಮ್ಮ ತಾಯ್ನುಡಿಯ ಮೇಲೆಯಣೆಗೆಗಲ್ಲದೆ, ಇನ್ನೊಬ್ಬರ ಸುಡಿಯನ್ನು ಮೆರೆಸಲಿಕ್ಕೆಲ್ಲ.

ನಮ್ಮ ಧುರೀಣರ ರಾಜಕಾರ್ಯನೈಪುಣ್ಯ

ಕನ್ನಡಿಗರ ರಾಜ್ಯವೊಂದು ಸ್ಥಾಪನೆಯಾಯಿತೆಂದು ಇದ್ದುದರಲ್ಲಿಯೆ ಸಮಾಧಾನ ಹುಟ್ಟಿಕೊಂಡು ಮುಂದುವರಿಯಬೇಕೆಂದರೆ, ಅದಕ್ಕೂ ಈಗ ಅವಕಾಶವಿಲ್ಲದಂತಹ ಪರಿಸ್ಥಿತಿಯಿರುವುದು ವಿಷಾದಪಡತಕ್ಕ ಮಾತಾಗಿದೆ. ಇದನ್ನು ನೋಡಿದರೆ, ಕನ್ನಡಿಗರೆನಿಸಿಕೊಂಡು ರಾಜಕೀಯ ಕ್ಷೇತ್ರದಲ್ಲಿ ಮೆರೆದಾಡುತ್ತಿರುವ ಧುರೀಣರಿಗೆ ಕನ್ನಡದ ಬಗೆಗೆ ಭಾವನೆ ಇಲ್ಲವೋ, ಅಥವಾ ಬುದ್ಧಿಯೇ ಇಲ್ಲವೋ ಎಂದು ಯಾರಿಗಾದರೂ ಎನಿಸುವಂತಿದೆ.

ಬೆಳಗಾಂವಿಯ ಶ್ರೀ. ಭುಜಂಗ ಕೇಶವ ದಳವಿ ಎಂಬವರು, ಕನ್ನಡಿಗರ ವಿಧಾನಸಭೆಯಲ್ಲಿಯೇ ನಿಂತು, ಬೆಳಗಾಂವಿ ಜಿಲ್ಲೆಯ ಮರಾಠಿ ಪ್ರದೇಶವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು—ಎಂಬುದನ್ನು, ಸಾಕಷ್ಟು ತಪ್ಪು ಅಂಕಿ-ಸಂಖ್ಯೆಗಳೊಂದಿಗೆ ರಭಸದಿಂದ ಮಂಡಿಸಿದರು. ಅವರ ಮಾತುಗಳನ್ನು ಯಾವ ಪ್ರತಿಭಟನೆಯೂ ಇಲ್ಲದೆ ಉಳಿದ ಸದಸ್ಯರು ಕೇಳಿದರು. 'ಬೇರೆ ಭಾಷಿಗರ ವಿಧಾನಸಭೆಯಲ್ಲಿ ಕನ್ನಡ ಸದಸ್ಯನೊಬ್ಬನು ಈ ಬಗೆಯಾಗಿ ಮಾತನಾಡುವ ಧೈರ್ಯವನ್ನು ಎಂದೂ ತೋರಿಸಲಾರ; ಹಿಂದು ಮೇಳೆ ಅವನು ಛಾಗೆ ಮಾಡಿದರೆ, ಅಲ್ಲಿಯ ಮಿಕ್ಕ ಸದಸ್ಯರು ಎಂದೂ ಸಹಿಸರು.

ಇಂದಿನ ಪುನರ್ಘಟಿತ ರಾಜ್ಯಗಳನ್ನು ನೋಡಿದರೆ, ಕನ್ನಡಿಗರ ಹೊರತು ಮಿಕ್ಕವರಾರೂ ತಮ್ಮದೇ ಆದ ಪ್ರದೇಶವನ್ನು ಹೆಚ್ಚಾಗಿ ಕಳೆದುಕೊಂಡಿಲ್ಲ. ಕರ್ನಾಟಕದಲ್ಲಿ ಬೇರೆ ಭಾಷೆಯ ಪ್ರದೇಶಗಳು ಸೇರಿವೆಯೆ ಬುದು ಕೇವಲ ಆಭಾಸವಾಗಿದ್ದರೂ, ಅನ್ಯ ಭಾಷೆಯವರು ಆ ಪ್ರದೇಶಸಾಧನೆಗಾಗಿ ಹೋರಾಡುವುದನ್ನು ಬಿಟ್ಟಿಲ್ಲ. ಇನ್ನು ಕನ್ನಡಿಗರ ರೀತಿ-ನೀತಿಗಳನ್ನು ನೋಡಿದರೆ, ಕಳೆದುಕೊಂಡಿರುವ ಕನ್ನಡ ಪ್ರದೇಶಗಳ ಎಚ್ಚರವೇ ಇದ್ದಂತಿಲ್ಲ.

ಇಂತಹ ವೇಳೆಯಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳೆನಿಸಿಕೊಳ್ಳುವವರು: 'ಪುನರ್ಘಟನೆಯ ಕಾಲದಲ್ಲಿ ಪರಭಾಷೆಯ ಪ್ರದೇಶಗಳು ಕೆಲವು ನಮ್ಮ ರಾಜ್ಯದಲ್ಲಿ ಸೇರಿರಬಹುದು. ಆದರೆ, ಆ ಪ್ರದೇಶದ ಜನರಿಗೆ ನಮ್ಮ ರಾಜ್ಯದಲ್ಲಿ ಇರಲು ಅಪೇಕ್ಷೆಯಿಲ್ಲದಿದ್ದರೆ, ಅವರು ಅವಶ್ಯವಾಗಿ ತಮಗೆ ಇಷ್ಟವಿರುವ ಭಾಷಾರಾಜ್ಯಗಳಿಗೆ ಸೇರಿಕೊಳ್ಳಬಹುದು!' ಎಂಬ ಅರ್ಥದ ಮಾತುಗಳನ್ನು ಉಗ್ಗಡಿಸಿರುವರು. ನಮ್ಮ ಮುಖ್ಯಮಂತ್ರಿಗಳ ಕಣ್ಣೆದುರು ಅಂತಹ ಯಾವ ಪರಭಾಷಾ ಪ್ರದೇಶಗಳವೆಯೋ ಕಾಣೆವು. ರಾಜ್ಯಘಟನೆಯ ಸೂರ್ವದಲ್ಲಿ ಸರ್ವತೋಮುಖವಾಗಿ ವಿಚಾರ ನಡೆದು, ಕೇವಲ ಕನ್ನಡಿಗರಿಗೆ ಸಲ್ಲ ಬಹುದಾದ ಪ್ರದೇಶಗಳೆಂದು ಸಂಪೂರ್ಣ ಸಿದ್ಧವಾದುವುಗಳನ್ನೇ ಕನ್ನಡರಾಜ್ಯದಲ್ಲಿ ಸೇರಿಸಲಾಗಿದೆ. ಇಷ್ಟೇ ಅಲ್ಲದೆ ಸಂಪೂರ್ಣ ಕನ್ನಡಿಗರದೇ ಆದರೂ ಕಾಸರಗೋಡು ತಾಲೂಕನ್ನು ಬೇರೆಯ ರಾಜ್ಯಕ್ಕೆ ಸೇರಿಸಲಾಗಿದೆ. ಇದೆಲ್ಲ ಮಾತು ಗೊತ್ತಿದ್ದರೂ, ನಮ್ಮ ಮುಖ್ಯಮಂತ್ರಿಗಳು ಈ ಬಗೆಯ ಮಾತುಗಳನ್ನು ಆಡುವುದರಲ್ಲಿ ಯಾವ ಬಗೆಯ ವಿವೇಕವನ್ನು ಕಂಡಿದ್ದಾರೋ ಏನೋ! ಮಿಕ್ಕ ರಾಜ್ಯಗಳ ಮುಖ್ಯಮಂತ್ರಿಗಳು ಯಾರಾದರೂ ಈ ಬಗೆಯ ಹುಚ್ಚು ಔದಾರ್ಯದ ಮಾತುಗಳನ್ನು ಆಡಿದ್ದಾರೆಯೆ?

ಮುಖ್ಯಮಂತ್ರಿಗಳು ಅಷ್ಟು ಮಾತನಾಡುವುದೇ ತಡ. ಬೆಳಗಾಂವಿಯ ಮರಾಠೀ ಚಳವಳಿಗಾರರು ಹಿಗ್ಗಿ ಕುಣಿದಾಡಿದರು. ಅವರಲ್ಲಿ ಮತ್ತೆ ಹೊಸ ಉತ್ಸಾಹ-ಐಕ್ಯಮಣಿವೃತ್ತಿಗಳು ತಲೆದೋರಿದುವು. ಇದುವರೆಗೆ ಪುಂಡಾಡಿಕೆ ನಡೆಸಿದ ತುಂಟರ ಮುಂದಾಳುಗಳು ಸೇರಿ ಬೆಂಗಳೂರಿಗೆ 'ಶಿಷ್ಟಮಂಡಲ'ವನ್ನು ಕಳುಹಿಸಿದರು. ಅವರು ತಮ್ಮ ಕಾರವಾರ-ಬೆಳಗಾಂವಿ ಜಿಲ್ಲೆಗಳ ಬೇಡಿಕೆಯನ್ನು ಮುಖ್ಯಮಂತ್ರಿಗಳಿದುರು ಜೋರಿನಿಂದ ಇಟ್ಟರು. ಅದಕ್ಕೆ ಮುಖ್ಯಮಂತ್ರಿಗಳು 'ನಿಮ್ಮ ಬೇಡಿಕೆಯನ್ನು ಸಹಾನುಭೂತಿಯಿಂದ ವಿಚಾರಿಸುವೆವು!' ಎಂದು ಹೇಳಿಕಳುಹಿದರು. ಕೆರೆದು ಹುಣ್ಣು ಮಾಡಿ ಕೇರುಹಚ್ಚಿದಂತಹ ನೀತಿ ನಮ್ಮ ಮುಖ್ಯಮಂತ್ರಿಗಳದು. ರಾಜ್ಯನಿರ್ಮಿತಿಯಾಗಿ ಎಲ್ಲವೂ ಸಮಾಧಾನ ಸ್ಥಿತಿಗೆ ಬಂದಿರುವಾಗ, ರಾಜ್ಯದಲ್ಲಿರು ಪರಭಾಷೆಯ ಚಳವಳಿಗಾರರೂ ನಿರಾಶರಾಗಿ ತಮ್ಮ ಪುಂಡಾಟವನ್ನು ಉಪಸಂಹರಿಸುವ ಸಿದ್ಧತೆಯಲ್ಲಿ ಇರುವಾಗ, ನಮ್ಮ ಮುಖ್ಯಮಂತ್ರಿಗಳು ಅಪ್ರಾಸಂಗಿಕವಾಗಿ ಮಾತನಾಡಿ, ನಂದಿಹೋಗಲಿರುವ ಬೆಂಕಿಯ ಮೇಲೆ ಸವುದೆಯಿಕ್ಕುವ ಕಾರ್ಯಮಾಡಿದ್ದಾರೆ. ಇದು ನಮ್ಮ ಧುರೀಣರ ರಾಜಕಾರ್ಯದ ತಿಳಿವಳಿಕೆಯ ಮಾದರಿ!

ಜಯಂತಿಯ ಮುಂದಿನ ಸಂಚಿಕೆ

ಇದೇ ಜನವರಿ ತಿಂಗಳ ೧೨-೧೩ ದಿನಾಂಕಗಳಲ್ಲಿ ಧಾರವಾಡದಲ್ಲಿ ಸಣ್ಣ ಕತೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಳನವು ಸೇರಲಿದೆ. ಅದರ ಕಾರ್ಯಕಲಾಪಗಳನ್ನೂ ಅಲ್ಲಿ ಓದಿದ ಪ್ರಬಂಧ ಕಥೆಗಳನ್ನೂ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸಾ. ನಿಮರ್ಶೆಯ ಶಿಷ್ಟಣರಂಗೆ

ಕಾರಣಾಂತರದಿಂದ ಈ ಸಲ ಮೇಲಾಟದ ನಿರ್ಣಯವನ್ನೂ ನಿಮರ್ಶೆಗಳನ್ನೂ ಪ್ರಕಟಿಸಿಲ್ಲ. ಅವನ್ನು ಮುಂದಿನ ಸಂಚಿಕೆಯಲ್ಲಿ ಆವಶ್ಯ ಪ್ರಕಟಿಸಲಾಗುವುದು.

—ಸಂಪಾದಕ

ಕಳೆದುಕೊಂಡ ಕನ್ನಡ ಪ್ರದೇಶ

(ವಿಹಂಗಮ)

ಕರ್ನಾಟಕ ಪ್ರಾಂತರಚನೆಯಾಯಿತೆಂದು ಸಂತೋಷದಿಂದ ನಲಿದಾಡುವವರು, ಕರ್ನಾಟಕದ ಸಂಪೂರ್ಣಸ್ವರೂಪವನ್ನೆ ಕಂಡವರಲ್ಲವೆಂದು ಹೇಳಬಹುದು. ದಿಕ್ಕುದಿಕ್ಕುಗಳಲ್ಲಿಯೂ ಅಂಗಶಕಲಗಳನ್ನು ಕಳೆದುಕೊಂಡು ಗಾಯಗೊಂಡ ಕಬಂಧವನ್ನೆ 'ಕರ್ನಾಟಕಮಾತೆ' ಎಂದು ಭಾವಿಸಿ, ಸಂತೋಷಭ್ರಮೆಯಲ್ಲಿ ಇರುವರು ಅವರು. ಬಲಿಷ್ಠರಾದವರು ತಮ್ಮ ಕೈಯಲ್ಲಿ ನೊದಲೇ ಸಿಕ್ಕಿರುವ ಕನ್ನಡ ಭಾಗವನ್ನು ಬಿಡಲಿಲ್ಲ; ಇಷ್ಟೇ ಅಲ್ಲ—ಕಾಸರಗೋಡಿನಂತಹ ಹದಿನಾರಾಣೆ ಕನ್ನಡ ಭಾಗವನ್ನೇ ಹೊಸತಾಗಿ ಕಿತ್ತು ಕೊಂಡರು ಬಳ್ಳಾರಿಯ ಮೂರು ತಾಲೂಕುಗಳೊಂದಿಗೆ ಆಂಧ್ರರು ಕಿತ್ತುಕೊಂಡ ಪ್ರದೇಶದಲ್ಲಿ ಕನ್ನಡಿಗರಿಗೆ ಸಲ್ಲಬೇಕಾದ ಪ್ರದೇಶವೇ ಹೆಚ್ಚಿನ ಭಾಗವಾಗಿದೆ. ಅನಂತಪುರ ಜಿಲ್ಲೆಗೆ ಸೇರಿದ ಅಚ್ಚಗನ್ನಡ ಪ್ರದೇಶದ ಬಗೆಗೆ ನಮ್ಮ ಮುಂದಾಳುಗಳು ಲಕ್ಷ್ಯವನ್ನೇ ಕೊಟ್ಟಿಲ್ಲ. ಅದರಂತೆಯೇ ಸೇಲಂ ಜಿಲ್ಲೆಗೆ ಸೇರಿದ ಕನ್ನಡ ತಾಲ್ಲೂಕುಗಳ ಪಡಿಪಾಟಿಲು. ಅಲ್ಲಲ್ಲಿ ಇರುವ ಕನ್ನಡ ಜನರು ಕರ್ನಾಟಕದೊಂದಿಗೆ ಒಂದಾಗಲು ಎಷ್ಟೊಂದು ಆತುರರಾಗಿ ಇದ್ದಾರೆಂಬುದಕ್ಕೆ, ಕೆಳಗೆ ಪ್ರಕಟಿಸಿರುವ ಮನವಿಪತ್ರವು ಪ್ರತ್ಯಕ್ಷ ಸಾಕ್ಷಿಯಾಗಿದೆ. ನಮ್ಮ ಮುಂದಾಳುಗಳು ಇವರಿಗೆ ಯಾವ ಸಮಾಧಾನ ಹೇಳುವರು?

ಕೊಯಮತ್ತೂರು ಜಿಲ್ಲಾ ಗೋಬಿಚೆಟ್ಟಿ ಪಾಳ್ಯ ತಾಲ್ಲೂಕು

ತಾಳವಾಡಿ ಫಿರ್ಕಾದ ಜನರು ವಿನಯಪೂರ್ವಕವಾಗಿ ಅರ್ಪಿಸಿದ ಮನವಿಪತ್ರ

ಕನ್ನಡ ಭಾಷೆಯನ್ನಾಡುವ ಎಲ್ಲಾ ಜನರೂ ನೂತನ ಮೈಸೂರು ರಾಜ್ಯರಚನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದಾರೆ. ರಾಜ್ಯ-ಪುನರ್ವ್ಯವಸ್ಥೆಯ ಈ ಸಂದರ್ಭದಲ್ಲಿ ಕೊಯಮುತ್ತೂರು ಜಿಲ್ಲೆಯ ಗೋಬಿಚೆಟ್ಟಿ ಪಾಳ್ಯ ತಾಲ್ಲೂಕಿನ ತಾಳವಾಡಿ ಫಿರ್ಕಾವನ್ನು ನೂತನ ಮೈಸೂರಿಗೆ ಸೇರಿಸಲ್ಪಡದಿರುವುದು ನಮಗೆ ಅತ್ಯಂತ ನೋವನ್ನುಂಟು-ಮಾಡಿದೆ

ತಾಳವಾಡಿ ಫಿರ್ಕಾದ ವಿಸ್ತೀರ್ಣ ಸುಮಾರು ೨೫೦ ಚದುರು ಮೈಲಿ, ಪ್ರಜಾಸಂಖ್ಯೆ ಸುಮಾರು ೨೨,೫೦೦. ಈ ಪ್ರದೇಶ ಪಶ್ಚಿಮ ಹಾಗೂ ಉತ್ತರ ದಿಕ್ಕುಗಳಲ್ಲಿ ಮೈಸೂರು ಸಂಸ್ಥಾನಕ್ಕೆ ಹೊಂದಿಕೊಂಡಿದ್ದು, ದಟ್ಟವಾದ ಕಾಡುಗಳ ಉನ್ನತ ಬೆಟ್ಟಗಳು ಇನ್ನುಳಿದ ಎರಡು ದಿಕ್ಕುಗಳಲ್ಲಿವೆ ಸಮುದ್ರಮಟ್ಟದಿಂದ ಸುಮಾರು ೩,೦೦೦ ಅಡಿ-ಗಳಷ್ಟು ಉನ್ನತವಾಗಿರುವ ಈ ಪ್ರದೇಶ, ಮೈಸೂರು ಸೀಕ-ಭೂಮಿಯ ಒಂದು ಭಾಗವಾಗಿದೆ. ತಾಲ್ಲೂಕಿನ ಉಳಿದ ಭಾಗ ಕೊಯಮುತ್ತೂರಿನಲ್ಲಿರುವ ಬಯಲುಸೀಮೆಯಾಗಿದ್ದು ಅತ್ಯಂತ ಇಕ್ಕಟ್ಟಾದ ಕೆಟ್ಟದಾದ ಮಾರ್ಗಗಳಿಂದ ಅದರ ಸಂಪರ್ಕವನ್ನು ಹೊಂದಿದೆ.

ಈ ಫಿರ್ಕಾದಲ್ಲಿ ಒಟ್ಟು ೫೧ ಪ್ರಮುಖ ಗ್ರಾಮಗಳಿವೆ. ಕನ್ನಡ ಮಾತನಾಡುವ ಜನರು ಈ ಊರುಗಳಲ್ಲಿ ಶೇಕಡಾ ೯೫ರಿಂದ ೧೦೦ರ ವರೆಗೆ ಇರುವರು ಜನಗಣತಿಯ ಅಂಕಿ-ಅಂಶಗಳು ಇದನ್ನು ಬಲಪಡಿ-ಸುತ್ತವೆ. ಇಲ್ಲಿ ಒಟ್ಟು ೩೨ ಎಲಿಮೆಂಟರಿ ಶಾಲೆಗಳಿದ್ದು, ಅವುಗಳೆಲ್ಲ ಕನ್ನಡ ಶಾಲೆಗಳೇ ಆಗಿವೆ. ಎಲ್ಲಾ ತೆರನ ವ್ಯವಹಾರಗಳಲ್ಲೂ ಕನ್ನಡ-ವನ್ನೇ ಬಳಸಲಾಗುತ್ತದೆ. ಜಿಲ್ಲೆಯ ಉಳಿದ ಪ್ರದೇಶದಲ್ಲಿ ತಮಿಳು ಇದ್ದರೂ, ಸರ್ಕಾರಿದ ರಿಜಿಸ್ಟ್ರೇಷನ್ ಕಚೇರಿಯ ಭಾಷೆ ಇಲ್ಲಿ ಕನ್ನಡವೇ.

ಇತ್ತೀಚೆಗೆ ಮೆದ್ರಾಸ್ ರಾಜ್ಯದಿಂದ ಮೈಸೂರುರಾಜ್ಯಕ್ಕೆ ಸಮಂಜಸವಾಗಿ ವರ್ಗಾಯಿಸಲ್ಪಟ್ಟಿರುವ ಕೊಳ್ಳೇಗಾಲ ತಾಲ್ಲೂಕು ಹಾಗೂ ಮೈಸೂರು ಸಂಸ್ಥಾನ ಇವುಗಳೊಡನೆಯೆ ಈ ಫಿರ್ಕಾದ ಸಂಪರ್ಕವಿದ್ದು, ಅವುಗಳ ಸಾದೃಶ್ಯ-ಸಾಮ್ಯಗಳೂ ಇದಕ್ಕಿವೆ. ಇನ್ನೂ ಒಂದು ವಿಷಯವೆಂದರೆ: ೧೯೧೦ ರಿಂದ ೧೯೩೫ರ ವರೆಗೂ ಈ ಫಿರ್ಕಾವು ಕೊಳ್ಳೇಗಾಲದ ಕಂದಾಯ ತಾಲ್ಲೂಕಿನ ಭಾಗವೇ ಆಗಿತ್ತು. ರಾಜ್ಯ ಪುನರ್ವ್ಯವಸ್ಥೆಯಾಗುವ ವರೆಗೆ, ಎಂದರೆ ತಾ॥ ೧-೧೧-೫೬ರ ವರೆಗೂ ಈ ಫಿರ್ಕಾದ ನಾಗರಿಕ ವ್ಯವಹಾರ ಸಂಬಂಧ, ಸಿವ್ವಿಲ್, ಕ್ರಿಮಿನಲ್ ಪೋಲೀಸ್ ವ್ಯವಹಾರಗಳೆಲ್ಲ ಕೊಳ್ಳೇಗಾಲ ತಾಲೂಕಿಗೇ ಒಳಪಟ್ಟಿದ್ದುವು. ೧೯೫೦ ರವರಿಗಿನ ಶೈಕ್ಷಣಿಕ ವ್ಯವಹಾರ ಕೂಡ ಕೊಳ್ಳೇ-ಗಾಲ ತಾಲ್ಲೂಕು ರೇಂಜ್ ಇನ್ಸ್‌ಪೆಕ್ಟರವರಿಗೇ ಸೇರಿದುದಾಗಿತ್ತು. ಆಂಚೆಯ ವ್ಯವಹಾರವೆಲ್ಲ ಈಗಲೂ ಮೈಸೂರು ಪೋಸ್ಟಲ್ ವಿಭಾಗಕ್ಕೆ ಸೇರಿದೆ. ಇಲ್ಲಿ ಇನ್ನೂ ಒಂದು ಸ್ವಾರಸ್ಯವಾದ ವಿಷಯವೆಂದರೆ, ತಾಳ-ವಾಡಿ ಫಿರ್ಕಾವು ಇತರ ಭಾಗಗಳೊಂದಿಗೆ ಹೊಂದಿಕೊಳ್ಳದ್ದರಿಂದ ಅದನ್ನು ಕೊಳ್ಳೇಗಾಲ ತಾಲ್ಲೂಕಿನೊಂದಿಗೆ ಸೇರಿಸಿ ಒಂದು ಪ್ರತ್ಯೇಕ ಮತದಾರ ಕ್ಷೇತ್ರವನ್ನಾಗಿ ಮಾಡಬೇಕೆಂದು ಹಿಂದೆ ನಿರ್ಧರಿಸಲಾಗಿತ್ತೆಂಬುದೂ ಗಮನಾರ್ಹ.

ಗೋಬಿಚೆಟ್ಟಿ ಪಾಳ್ಯ ತಾಲ್ಲೂಕಿನ ಸ್ಥಳವನ್ನೊಳಗೊಂಡು ಉಳಿದ ಪ್ರದೇಶಕ್ಕಿರುವ ಈ ಫಿರ್ಕಾದ ಸಾಗಾಣಿಕೆಯ ದಾರಿ ಮೈಸೂರಿನ ಭಾಗದಲ್ಲಿಂದಲೇ ದಾಟಿ ಹೋಗುವುದು. ಬೇರೆ ದಾರಿಯೆಂದರೆ—

ಅತ್ಯಂತ ಅಪಾಯಕಾರಿಯಾದ, ತುಂಬುವೆಚ್ಚದ ಹಾಗೂ ಕಾಡುಗಳ ಮಧ್ಯೆ ಜೆಟ್ಟಿಗುಡ್ಡಗಳಲ್ಲಿ ಹೋಗುವ ದಾರಿ.

ತಾಳವಾಡಿ ತಿರ್ಕ್ ಪ್ರಾಕೃತಿಕವಾಗಿಯೂ ಮೈಸೂರಿನ ಗಡಿಯಲ್ಲಿದೆ. ಈ ಪ್ರದೇಶವು ಐತಿಹಾಸಿಕವಾಗಿ, ಸಾಮಾಜಿಕವಾಗಿ, ವ್ಯಾವಹಾರಿಕವಾಗಿ, ಆರ್ಥಿಕವಾಗಿ, ಸಾಂಸ್ಕೃತಿಕವಾಗಿ, ಭಾಷೆ ಹಾಗೂ ಭೌಗೋಲಿಕವಾಗಿಯೂ ಗೋಬಿಚೆಟ್ಟಿ ಸಾಳ್ಯ ತಾಲ್ಲೂಕಿನಿಂದ ಭಿನ್ನವಾಗಿದೆ; ಆದರೆ ಕೊಳ್ಳೆಗಾಲ ತಾಲ್ಲೂಕು ಹಾಗೂ ಮೈಸೂರು ಸಂಸ್ಥಾನ ಇವುಗಳಿಗೆ ಅತ್ಯಂತ ನಿಕಟವಾಗಿದ್ದು ಒಳಸಂಬಂಧವನ್ನು ಪಡೆದಿದೆ. ತಾಳವಾಡಿ ತಿರ್ಕ್‌ವು ಎಲ್ಲಾ ದಿಕ್ಕಿನಿಂದಲೂ ನೂತನ ಮೈಸೂರಿನೊಂದಿಗೆ ವಿಲೀನವಾಗುವುದು ಸಮಂಜಸವಾಗಿದೆ. ತಾಳವಾಡಿಯು ಮೈಸೂರ ಸಂಸ್ಥಾನದಲ್ಲಿಂದು ತಾಲ್ಲೂಕಿನ ಕೇಂದ್ರವಾಗಿರುವ ಹಾಗೂ ರೇಲ್ವೆಸ್ಟೇಷನ್ ಕೂಡ ಆಗಿರುವ ಚಾಮರಾಜನಗರದಿಂದ ಕೇವಲ ೩೬ ಮೈಲಿ ದೂರದಲ್ಲಿದೆ. ಅದರೆ ತಾಳ್ಲೂಕುಕೇಂದ್ರವಾದ ಗೋಬಿಚೆಟ್ಟಿ ಪಾಳ್ಯದಿಂದ ಇದು ೭೬ ಮೈಲಿ ದೂರವಾಗುತ್ತದೆ. ಈ ಕಾರಣಗಳಿಂದ, ಈ ಪ್ರದೇಶದ ಜನರು ಹೆಚ್ಚಿನ ಹಾಗೂ ಕಾಲೇಜು ಶಿಕ್ಷಣಕ್ಕಾಗಿ, ವೈದ್ಯಕೀಯ ಶಿಕ್ಷಣಕ್ಕಾಗಿ ಮೈಸೂರು ಸಂಸ್ಥಾನದಲ್ಲಿಯ ಸೌಲಭ್ಯಗಳನ್ನು ತಿಪಲಂಬಿಸಿದ್ದಾರೆ ಜಿಲ್ಲೆ ಅನುಕೂಲ ಹಾಗೂ ಸೇವೆಗೆ ಇವೆಲ್ಲ ಹೆಚ್ಚು ಕೈಗೆಟುಕುವಂತಿರುವುದಾಗಿದೆ. ಕಚೇರಿಗೆ ಹಾಗೂ ಅದಕ್ಕೆ ಸಂಬಂಧಿಸಿದ ಕೆಲಸಗಳಿಗೆ ಮಾತ್ರ ತಾಲ್ಲೂಕಿನ ಇನ್ನುಳಿದ ಭಾಗದ ಸಂಬಂಧ ನಮಗೆ ಬರುತ್ತದೆ. ತಿಪ್ಪೆಗೆ ನೂತನ ಮೈಸೂರಿಗೆ ಸೇರಿರುವ ಕೊಳ್ಳೇಗಾಲತಾಲ್ಲೂಕಿನೊಂದಿಗೆ ಇನ್ನು ನಮ್ಮ ವಿವಿಧ ಪೋಲಿಸ್ ಮತ್ತು ಕಿವಿನಲ್ ಸಂಬಂಧದ ವ್ಯವಹಾರಗಳಿಲ್ಲ ತಿಪ್ಪೆ ಭಾಷಾ ಪರಿಚಯವಿಲ್ಲದ ನಾವು ಗೋಬಿಚೆಟ್ಟಿ ಪಾಳ್ಯಕ್ಕೆ ಹೋಗಬೇಕಾಗಿರುವುದರಿಂದ ನಮ್ಮ ಸಂಕಷ್ಟಗಳು ತಿನ್ನುತಿಯಾಗಿ ಹೆಚ್ಚುವೆ ಮತ್ತು ಕಠಿಣವಾಗಿವೆ ತಿನ್ನು ಮುಂದಿನ ನಮ್ಮ ಕಿರಿಯ ಮಕ್ಕಳ ಶಿಕ್ಷಣಕ್ಕೆ ಅಗತ್ಯವಾದ ಎಲ್ಲಾ ತರದ ಸೌಲಭ್ಯಗಳನ್ನು ಒದಗಿಸಿಕೊಡುವುದು ಅಧಿಕಾರಿಗಳಿಗೆ ಸಾಧ್ಯವಾಗಲಿಕ್ಕಿಲ್ಲ, ಸಾಧ್ಯವೂ ಇಲ್ಲ. ಹೀಗೆ ಈ ಪ್ರದೇಶದ ಅಭಿವೃದ್ಧಿಯಾಗುವುದು ಅಸಂಭವವೇ.

ಈ ಪ್ರದೇಶ ಒಮ್ಮೆ ಮೈಸೂರಿನ ಅಡಳಿತಕ್ಕೆ ಒಳಪಟ್ಟಿತ್ತೆಂಬುವುದಕ್ಕೆ ಸ್ಪಷ್ಟ ದಾಖಲೆಗಳಿವೆ ಈ ಪ್ರದೇಶದಲ್ಲಿರುವ ಕನ್ನಡ ಶಿಲಾಲೇಖಗಳೇ ಇದನ್ನು ಹೇಳುತ್ತವೆ. ಮೈಸೂರು ಪೀಠಭೂಮಿಯಿಂದ ಉತ್ತರದಿಂದ ದಕ್ಷಿಣಕ್ಕೆ ಕೆಳಗಿನ ಬಯಲು ಸೀಮೆಗೆ ಹೋಗುವ ಪ್ರಸಿದ್ಧ ಟಿಪ್ಪುಸುಲ್ತಾನ್ ಘಾಟ್ ರೋಡು ಈ ಪ್ರದೇಶದ ಮಧ್ಯದಲ್ಲಿಂದಲೇ ಹೋಗುತ್ತದೆ. ಮತ್ತು ಈಗಲೂ ಉಪಯೋಗಿಸಲ್ಪಡುತ್ತಿದೆ.

ತಿರುವಾಂಕೂರು ಸಂಸ್ಥಾನದ ಪೆನ್‌ಕೋಟ್ಟಾ ತಾಲ್ಲೂಕನ್ನು ಭಾಷೆವು ವಿಭಾಗಿಸುವುದರಿಂದಾದ ಭಾಗಗಳನ್ನು ಬೇರ್ಪಡಿಸಿ ಮದರಾಸ್ ಮತ್ತು ಕೇರಳ ರಾಜ್ಯಗಳಿಗೆ ಸೇರಿಸಿದುದು ಸರಿಯೆ, ಸಮಂಜಸವೆ ಆದರಂತೆ ನಮ್ಮ ದೇಶವು ಪೂರ್ವದ ಭಾಷೆಗಳಿಂದ ಗೋಬಿಚೆಟ್ಟಿ ಪಾಳ್ಯದ ವಿಕ್ಕ ಪ್ರದೇಶದಿಂದ ಬೇರೆಯಾಗಿದೆ ಆದ್ದರಿಂದ ಪೂರ್ವದ ಭಾಷೆಗಳ ಉತ್ತರಕ್ಕಿರುವ ನಮ್ಮ ಪ್ರದೇಶವು ಬೇರ್ಪಟ್ಟಿರುವಂತೆಯೂ ಸುಲಭವಾಗಿ ಬೇರ್ಪಡಿಸಲ್ಪಡಬಹುದು ಮತ್ತು ಅದು ಸ್ಪಷ್ಟವಾಗಿಯೂ ಇದೆ. ರಾಜ್ಯ ಪುನರ್ವ್ಯವಸ್ಥೆಗೆಂದು ನೇಮಕವಾಗಿದ್ದ ಉಚ್ಚಾಧಿಕಾರ ಸಮಿತಿಯನ್ನೆಳಗೂಡು, ಈ ವಿಷಯದ ಪರಿಶೀಲನೆಗೆಂದಿದ್ದ ಎಲ್ಲಾ ಸಮಿತಿಗಳೆದುರೂ ನಾವು ಈ ಪ್ರದೇಶ ಮೈಸೂರು ರಾಜ್ಯಕ್ಕೆ ಸೇರಬೇಕೆಂಬ ಅಭಿಪ್ರಾಯವನ್ನು ಮರೆಯದೆ, ತಪ್ಪದೆ ವಿಶದೀಕರಿಸಿದ್ದೇವೆ. ಪ್ರಮುಖ ರಾಜಕಾರಣಿಗಳ ಸಹಕಾರ ಸಹಾಯಗಳಿಂದ ಅನೇಕ ಸಮ್ಮೇಳನಗಳು ನಡೆದು ಇದಕ್ಕೆ ಸಂಬಂಧಿಸಿದ ಗೊತ್ತುವಳಿಗಳು ಅಂಗೀಕರಿಸಲ್ಪಟ್ಟು, ಸಂಬಂಧಿಸಿದ ಅಧಿಕಾರಿಗಳಿಗೆಲ್ಲ ಕಳುಹಿಸಿಕೊಡಲಾಗಿದೆ ಇಲ್ಲಿಯವರೆಗೆ ಸಲ್ಲಿಸಿದ ಅಸಂಖ್ಯಾತ ಮನವಿಗಳು, ಹಾಗೂ ಕಳುಹಿಸಲ್ಪಟ್ಟ ಪ್ರತಿನಿಧಿಶ್ವಗಳಲ್ಲದೆ ನೂತನ ಮೈಸೂರು ರಾಜ್ಯಕ್ಕೆ ಸೇರಬೇಕೆಂಬ ಸಾರ್ವಜನಿಕ ಅಭಿಪ್ರಾಯವನ್ನು ಕೇಂದ್ರಕ್ಕೂ ಸಂಬಂಧಿಸಿದ ರಾಜ್ಯ ಸರ್ಕಾರಗಳಿಗೂ ತಿಳಿಸಲು ಈಗಲೂ ತನಕಿಸುತ್ತಿದ್ದೇವೆ ಇಂಥ ಕಾರಣಗಳಿರುವಾಗ, ಇಂಥ ಪರಿಸ್ಥಿತಿ ಇರುವಾಗ ನಮ್ಮ ಪ್ರದೇಶದ ಪರಿಶೀಲನೆ ರಾಜ್ಯ ಪುನರ್ವ್ಯವಸ್ಥಾ ಸಮಿತಿಯಿಂದ ಸರಿಯಾಗಿ ಆಗಿಲ್ಲವೆಂದು ನಮಗೆ ಸಂಕಟವಾಗಿರುವುದಲ್ಲದೆ ವಿಸ್ಮಯವೂ ಆಗಿದೆ.

ಈ ಎಲ್ಲಾ ಕಾರಣ ಹಾಗೂ ಸ್ಥಿತಿಗತಿಗಳಿಂದ ಈ ಪ್ರದೇಶವು ಸಂಪೂರ್ಣವಾಗಿ, ಸಕಾರಣವಾಗಿ ನೂತನ ಮೈಸೂರಿನೊಂದಿಗೆ ವಿಲೀನವಾಗಲು ಅರ್ಹವಾಗಿದೆ ಎಂದು ನಾವು ವಿನಯಪೂರ್ವಕವಾಗಿ ತಿಳುಸುತ್ತೇವೆ. ಕೇಂದ್ರ ಸರಕಾರದ ಯೋಚನೆಯಂತೆ ಗಡಿಯೊಂದಾಣಿಕೆ ಮೈಸೂರು ಮತ್ತು ಮದರಾಸ್ ಸರ್ಕಾರಗಳ ಪರಸ್ಪರ ಸಮ್ಮತಿಯಿಂದ ನಡೆಯಬಹುದು ಮದರಾಸ್ ಮತ್ತು ಮೈಸೂರು ಸರ್ಕಾರಗಳು ಈ ಪ್ರದೇಶದ ವರ್ಗಾವಣೆಯು ನೂತನ ಮೈಸೂರಿಗೆ ಸೇರುವಂತೆ ಸಮ್ಮತಿಸಬೇಕೆಂದು ಪ್ರಾರ್ಥಿಸುವ,

ತಾಳವಾಡಿ ತಿರ್ಕ್ ಗ್ರಾಮಸ್ಥರಾದ

ತಮ್ಮವರು

ಎಂ. ಆರ್. ಮಾದಪ್ಪ, ಜಿಲ್ಲಾಬೋರ್ಡ್ ಸದಸ್ಯ, ಮಹದೇಶ್ವರಪುರ

ಪರೀಕ್ಷೆ

(ಒಂದು ದೃಶ್ಯಕತೆ)

ಶ್ರೀ. ಅರವಿಂದ ರಾಜಪುರೋಹಿತ, ಬಿ. ಎ. (ಆನರ್ಸ್), ಹೊಂಬಳ

●

ಬದುಕಲೇ ಬೇಕೆನ್ನುವುದು ಪ್ರತಿಯೊಂದು ಜೀವಿಯ ನೈಸರ್ಗಿಕ ಮನೋವೃತ್ತಿ. 'ಬದುಕಿ ಇದ್ದರೆ ಭಾಗ್ಯದ ಕಾಲವನ್ನು ಕಾಣಬಹುದು!' ಎಂಬುದು ಲೌಕಿಕವನ್ನರಿತ ಆಪ್ತವಾಕ್ಯ. ನಿರಾಶೆಯ ಆಘಾತದಿಂದ ಕುರುಡರಾದವರು ನೈಸರ್ಗಿಕ ಮನೋವೃತ್ತಿ, ಆಪ್ತವಾಕ್ಯ ಎರಡನ್ನೂ ಮರೆಯುವರು. ಅದರೆ ಈ ಕಥಾನಾಯಕ ಕಂಡುದೇನು?

●

ಕೆಂಪು ಹುಡಿಯಿಂದ ತುಂಬಿದ ಆ ಸೀಳುದಾರಿಯು, ಮುಂದಕ್ಕೆ ಳಿಬಂದು ಟಿಸಿಲೊಡೆದು ಎರಡಾಗಿತ್ತು. ಅಲ್ಲಿ ಹಲಗೆಗಳ ಎರಡು ಾಜಕೊಂಡು ನಿಂತ ಒಂದು ಕಂಬ: ಒಂದು ದಾರಿ ವಿಶ್ವವಿದ್ಯಾ-ದತ್ತ ಹೋಗುವುದೆಂದೂ, ಮತ್ತೊಂದು ಅರಣ್ಯಖಾತೆಯ ಖ್ಯಾಧಿಕಾರಿಯ ಆಫೀಸಿನ ಕಡೆಗೆ ಹೊಸೆಯುವುದೆಂದೂ—ಬರೆಹ ಕೊಂಡು ನಿಂತಿದ್ದಿತು. ದಾರಿಯ ಅಂಚಿನಗುಂಟ ಮತ್ತು ಅದರ ದಿಯಲ್ಲಿ ಅಡ್ಡ-ತಿಡ್ಡಾಗಿ, ಎತ್ತರವಾಗಿ, ಯಾವ ಯಾವ ರದಲ್ಲೋ ಬೆಳೆದು ನಿಂತ ಗಿಡಗಳು. ಅಲ್ಲಿ ಒಂದು ಹಾಳುಗೋಡೆ ೀ ಕಟ್ಟಿ ನಿರ್ಮಿಸಿದ್ದವು. ತಳವಲ್ಲಿ ಬೆಳೆದ ಪೊದೆಗಳು, ಕಂಟಿಗಳು, ನ ಒಲೆಯು ಎಳೆಗಳಂತೆ ತಮ್ಮ ಟಿಸಿಲುಗಳನ್ನು ಒಂದರಲ್ಲಿ ಒಂದ ು, ಬಲೆಬೀಸಿ ಹರಡಿದ್ದವು. ಈಗ ಅವುಗಳ ಮೇಲೆಲ್ಲ ಬಿಸಿಲು ದ; ಒಳ್ಳೆಯ ತೀಕ್ಷ್ಣವಾದ ಬಿಸಿಲು! ಆ ತೀಕ್ಷ್ಣತೆಗೆ ದೆವ್ವನಂತೆ ನಿಂತ ಆ ಗಿಡಗಳ ನೆರಳುಗಳು ಹೆದರಿ, ಮುದುರಿ, ಬೊಡ್ಡೆಗಳನ್ನು ಯಿಸಿವೆ.

ಆಗಲೇ ಅಲ್ಲಿ ಒಂದು ಸಾಯ್‌ಕಲ್ಲು ಬಂದಿತು. ಅದು ವಿದ್ಯಾಲಯದ ನಾರಿಯಾಗಿ ಬಂದಿತ್ತು. ಕರಿಯ ಬಣ್ಣದ, ಯ ಚಪ್ಪಲಿಗಳನ್ನು ಮೆಟ್ಟಿಕೊಂಡ ಕಾಲುಗಳು ಸಾಯ್‌ಕಲ್ಲಿನ ಲುಗಳನ್ನು ನಿಧಾನವಾಗಿ ತುಳಿಯುತ್ತಿದ್ದುವು. ಆ ಕಾಲಲ್ಲಿ ಣವೇ ಇಲ್ಲವೇನೋ! 'ಫಾರ್ಸ್' (ಅರ್ಧಾಂಗವಾತ) ಬಿದ್ದ ಪುರುಷನ ಅವಯವದಂತೆ ಅದು ಒಮ್ಮೆ ಜೀವವನ್ನು ಬಿಟ್ಟುಬಿಡು-ತ್ತ; ಮತ್ತೊಮ್ಮೆ, ಮಳೆಯಲ್ಲಿ ನೆನೆದು ಗದಗದ ನಡುಗುವ ೈ ಬೊಂಗೆಗೆ ಗಟ್ಟಿಯಾಗಿ ಅವಿತುಕೊಂಡು ನಿಲ್ಲುವಂತೆ, ಈ ಾ ನಡುಗಿ, ಜೋರನೆ ಬೆನತು ಸಾಯ್‌ಕಲ್ಲಿನ ಪೆಡಲಿಗೆ ಗಟ್ಟಿ, ಗ ಅವಿತುಕೊಳ್ಳುತ್ತಿತ್ತು. ಅವಿತುಕೊಂಡಿದ್ದಂತೆಯೇ ನೆಲ್ಲನೆ ಲಿನ ಮೇಲೆ ನಸುಮಿಸುಕಿತು. ಪಾದರಸದ ಗುಂಡಿನಂತೆ ಪಳಕ್ಕನೆ ರಿತು. ಆ ಕಾಲು ಪೊಪ್ಪನೆ ನೆಲಕ್ಕೆಳಸಿದು ಕೆಂಪು ಹುಡಿಯನ್ನು ಾಸಿ ನೋಡಿತು.

'ಉಶ್' ಎಂದು ಜೋಲುಮುಖ ಹಾಕಿಕೊಂಡ ಅವನು ಸಾಯ್‌ಕಲ್ಲಿನಿಂದ ಕೆಳಗೆಬೀಳಬೀಳುತ್ತಲೇ, ಹೇಗೋ ಸಾವರಿಸಿಕೊಂಡು ನಿಂತನ್ನು. ನಿರಿಗೆಗಳು ಬಿದ್ದ ಆ ನವಯುವಕನ ಹಣೆಯಲ್ಲಿ ವೆರರು. ಕಣ್ಣೀರು ಕರೆಯತೊಡಗಿತ್ತು. ಅವನು ತನ್ನ ಪ್ಯಾಂಟಿನ ಕಿಸೆಯಲ್ಲಿಯ ಕರವಸ್ತ್ರದ ಮಡಿಕೆಯನ್ನು ವೇಸರದಿಂದ ಹೊರತೆಗೆದು, ಯಾಂತ್ರಿಕವಾಗಿ ಹಣೆಯ ಮೇಲಿನ ಆ ನೀರನ್ನು ತೊಡೆದುಕೊಂಡನು. ಅವನು ತೊಡೆದುಕೊಳ್ಳುತ್ತಿದ್ದಂತೆಯೇ ಅಲ್ಲಿ ಮತ್ತೆ ಗಂಗಾದೇವಿ ಪ್ರತ್ಯಕ್ಷ-ಳಾಗುತ್ತಿದ್ದಳು. ಅವನು ಮುಖ ತಗ್ಗಿಸಿ ಕೆಳಗೆ ನೋಡಿದನು. ಅವನ ಪ್ಯಾಂಟಿನ ಮಡಿಕೆಗಳೆರಡೂ ಕೆಂಪುಧೂಳಿಯಲ್ಲಿ ಮಿಂದಿದ್ದುವು. ಇನ್ನೂ ಕೆಳಗೆ, ಸಾಯ್‌ಕಲ್ಲಿನಿಂದ ಜಾರುವಾಗ, ಚಕ್ರ ತಗುಲಿ ಒಂದು ಪಾದಕ್ಕೆ ಚಿವುರಿಕೊಂಡಿತ್ತು. ಅದರ ಮೇಲೆಯೇ ಸ್ವಲ್ಪ ಕೆಂಪುಧೂಳಿ ಮೆತ್ತಿಕೊಂಡಿತ್ತು. ಅವನು ಮೆಲ್ಲಗೆ ಚಪ್ಪಲಿಯಿಂದ ಆ ಕಾಲನ್ನು ಕಡೆಗೆ ಮಾಡಿಕೊಂಡು, ಸ್ವಲ್ಪ ಹೊತ್ತು ಧ್ಯಾನನ ತಪಸ್ಸು ಮಾಡಿ-ಕೊಂಡನು. ಆ ಬಳಿಕ ತುದಿಬೆರಳುಗಳಿಂದ ನೆತ್ತರು ಬಸಿದು ಬರುತ್ತಿದ್ದ ಆ ಭಾಗವನ್ನು ಮೃದುವಾಗಿ ತಡವಿದನು. ಮತ್ತಿಷ್ಟು ಕತ್ತು ತಗ್ಗಿಸಿ ಅದಕ್ಕೆ 'ಉಫ್' ಎಂದು ಊದಿ ಏನೋ ಮಂತ್ರ ಹಾಕಿದನು.

ಆ ಪಾದ ಮತ್ತೆ ಚಪ್ಪಲಿಯಲ್ಲಿ ಸೇರಿತು. ಪ್ಯಾಂಟಿನ ಮಡಿಕೆ-ಗಳನ್ನು ಅವನು ಸ್ವಲ್ಪ ಜಾಡಿಸಿಕೊಂಡನು. ಕೆಂಪು ಧೂಳು ಹಾರಿ ಬಿಸಿಲಲ್ಲಿ ಮಾಯವಾಯಿತು. ಅವನು ಮತ್ತೆ ಸಾಯ್‌ಕಲ್ಲು ಏರಿದನು; ನಡುಗುತ್ತಿರುವ ಕೈಗಳಿಂದಲೇ ಹೇಗೋ ಗಟ್ಟಿಯಾಗಿ ಹಿಡಿಕೆಗಳನ್ನು ಹಿಡಿದು ಪೆಡಲುಗಳನ್ನು ತುಳಿಯತೊಡಗಿದನು. ಅವನು ಹತ್ತು ಮಾರು ಮುಂದೆ ಹೋಗಿದ್ದನು; ಅಷ್ಟರಲ್ಲಿ ಸಾಯ್‌ಕಲ್ಲು ಮತ್ತೆ ನಿಂತಿತು. ಅವನು ಕೆಳಗೆ ಇಳಿದು ನಿಂತನು. ಅವನ ಹಣೆ ಜೋರೆನೆ ಬೆವತಿತ್ತು. ಈ ಸಲ ಅವನು ಕರವಸ್ತ್ರ ಹೊರತೆಗೆಯಲಿಲ್ಲ. ಹಾಗೆಯೇ ತನ್ನ ಎಡಗೈಯ ಹಿಂಬದಿಯಿಂದ ಆ ಬೆವರನ್ನೆಲ್ಲ ತೊಡೆದು ಹಾಕಿದನು. ಅವನ ಮುಖ ಕೆಂಜಿಗನಂತೆ ಆಯಿತು.

ಅವನೀಗ ಆ ಹೆದ್ದಾರಿ ಟಿಸಿಲೊಡೆಯುವಲ್ಲಿ ಬಂದಿದ್ದನು. ಹಲಗೆ ಹೊತ್ತು ನಿಂತ ಕಂಬಕ್ಕೆ ಅವನು ಸಾಯ್‌ಕಲ್ಲನ್ನು ಆನಿಸಿ ಇಟ್ಟು, ಮತ್ತೊಮ್ಮೆ ಎಡಗೈಯ ಹಿಂಬದಿಯಿಂದ ಹಣೆಯ ಬೆವರನ್ನು ತೊಡೆದು ಕೊಂಡನು. ಕಣ್ಣು ಕುಕ್ಕುತ್ತಿರುವ ಬಿಸಿಲಲ್ಲಿ ಅವನು ಮೂರೂ ದಾರಿಗಳನ್ನೂ ಒಂದೊಂದು ಸಲ ನೋಡಿದನು. ನಟ್ಟು ನಿರು ಕರಿಯುವಂತೆ ಒಂದು ಸಲ ನೀಳವಾಗಿ ಮುಖ ಮಾಡಿದನು. ಆ ಬಳಿಕ ಎರಡೂ ಕರತಲಗಳ ಮಧ್ಯದಲ್ಲಿಯೂ ತಲೆಯನ್ನು ಒತ್ತಿ ಹಿಡಿದು ಸ್ವಲ್ಪ ಹೊತ್ತು ನಿಂತನು. ಮಂಕು ಬಡಿದವನಂತೆ ನಿಂತನು. ಅತ್ತ, ಇತ್ತ, ಸುತ್ತುಮುತ್ತಲೂ ನೋಡಿದನು. ಕಡೆಗೆ ಕಂಬಕ್ಕೆ ಆನಿಸಿ ಇಟ್ಟ ಸಾಯ್‌ಕಲ್ಲನ್ನು ಬದಿಗೆ ಎಳೆದುಕೊಂಡು, ಆದನ್ನೇರಿ, ಹಲಗೆಯು "ಅರಣ್ಯಖಾತೆಯ ಮುಖ್ಯಾಧಿಕಾರಿಯ ಆಫೀಸಿನ ಕಡೆಗೆ"— ಎಂದು ತೋರಿಸುತ್ತಿದ್ದ ದಿಶೆಯಲ್ಲಿ ಧಾವಿಸತೊಡಗಿದನು. ಆ ಕಿರಿಯಗಲವಾದ ದಾರಿಯಲ್ಲಿ ಅವನ ಸಾಯ್‌ಕಲ್ಲು ನಿಧಾನವಾಗಿ ಮುಂದುವರಿಯತೊಡ ಗಿತು. ಅವನು ಎಮ್ಮೆಗಳನ್ನು ಕಾಯುವ ಹುಡುಗರ ಗುಂಪೊಂದರ ಮಧ್ಯದಲ್ಲಿ ಸೀಳಿಹೋದನು. ಇವನ ಬೆಂಳುಗಳು ಸಾಯ್‌ಕಲ್ಲಿನ ಗಂಟೆಯ ಕಿವಿಯನ್ನು ಹಿಂಡುತ್ತಿದ್ದಂತೆಯೇ, ದಾರಿಯನ್ನು ಅಡ್ಡಕಟ್ಟಿ ಹೊರಟ ಎಮ್ಮೆಗಳೆಲ್ಲ ಬದಿಗೆ ಸರಿದು ದಾರಿ ಮಾಡಿಕೊಟ್ಟುವು. ಅಲ್ಲಿ ಮುಂದೆ, ಕಟ್ಟಿಗೆಯ ಹೊರೆಗಳನ್ನು ಹೊತ್ತು ತರುತ್ತಿದ್ದ ಕಾಡು ಜಾತಿಯ ಹೆಣ್ಣುಮಕ್ಕಳು, ಇವನ ಸಾಯ್‌ಕಲ್ಲು ಬರುತ್ತಲೇ ಬದಿಗೆ ಸರಿದು ನಿಂತರು.

ಇವನು ಯಾವ ಪರಿವೆಯೂ ಇಲ್ಲದೆ ಸ್ಕಾಯ್‌ಕಲ್ಲಿನ ಪೆಡಲು ಗಳನ್ನು ತುಳಿಯತೊಡಗಿದ್ದನು. ಎಡಬಲಗಳಲ್ಲಿ ಗಿಡಗಳ ಸಂದಣಿ ಗುತ್ತಾಗುತ್ತ ಬಂದಿತು. ಒಂದು ಮೋಟು ಮರದ ಬಳಿ ಬಂದು ನಿಂತಿತು. ಅವನುಕೆಳಗೆ ಇಳಿದು ತನ್ನ ಬಲಬದಿಗೆ ನೋಡಿದನು. ಎತ್ತರ ವಾಗಿ ಬೆಳೆದುನಿಂತ ಮತ್ತಿ, ಹೊಂಗೆ ಮರಗಳ ಮಧ್ಯದಲ್ಲಿ, ಅಲ್ಲೊಂದು ಕಾಲ್ದಾರಿ ಸೀಳಿ ಹೋಗಿತ್ತು. ಅವನು ಅಲ್ಲಿಯೇ ನಿಂತು ಆ ದಾರಿಗುಂಟ ತನ್ನ ದೃಷ್ಟಿಯನ್ನು ಬಹು ದೂರ ಓಡಿಸಿದನು. ಕೊನೆಗೆ ತನ್ನ ಸಾಯ್‌ಕಲ್ಲನ್ನು ದೂಡಿಕೊಂಡು ಹೋಗಿ ಆ ಕಾಲ್ದಾರಿಗೆ ಕೂಡಿಸಿದನು. ಕಲ್ಲು-ಮುಳ್ಳುಗಳು ತುಂಬಿದ್ದ ಆ ದಾರಿಯಲ್ಲಿ ಅವನು ಸಾಯ್‌ಕಲ್ಲನ್ನು ಕೈಯಿಂದ ನೂಕಿಸುತ್ತ ಇನ್ನೂ ಮುಂದೆ ಹೋದನು. ಅಲ್ಲಿ ಗಿಡಗಳ ದಟ್ಟಣೆ ಸ್ವಲ್ಪು ಕಡಮೆಯಾಗಿತ್ತು. ಬಿಸಿಲು ನೆಲ ಮುಟ್ಟಿತ್ತು. ಸೂರ್ಯನ ಕಿರಣಗಳು ಇವನ ಮುಖವನ್ನು ಚುಚ್ಚುತ್ತಿದ್ದುವು. ಹೀಗೆಯೇ ಆ ದಾರಿ ಅಂಕು-ಡೊಂಕಾಗಿ, ಏರು-ತಗ್ಗುಗಳನ್ನು ಏರಿ ಇಳಿಯುತ್ತ ಮುಂದೆ ಸಾಗಿತ್ತು. ಇವನು ತನ್ನ ಮೈಯಲ್ಲಿಯ ಶಕ್ತಿಯನ್ನೆಲ್ಲ ಆ ಸಾಯ್‌ಕಲ್ಲಿನ ಮೇಲೆ ಉಪಯೋಗಿಸಿ, ಅದನ್ನು ದೂಡಿಕೊಂಡು ಮುಂದೆ ನಡೆದೇ ಬಿಟ್ಟನು.

ಅವನು ಸಾಕಷ್ಟು ದೂರ ನಡೆದು ಬಂದು ಇನ್ನು ಕಾಲುಗಳು ಸೋತುವು, ಎನ್ನುವ ಹೊತ್ತಿಗೆ, ಎದುರಿಗೆ ರೇಲ್ವೆ ದಾರಿ ಅನತಿ ದೂರ ದಲ್ಲಿಯೇ ಕಾಣಿಸಿಕೊಂಡಿತು. ಅವನು ತಾನು ನಿಂತಲ್ಲಿಯೇ ದೂರದಲ್ಲಿ ದೃಷ್ಟಿ ಹರಿಸಿದನು. ಅಲ್ಲಿ ಸ್ವಲ್ಪ ಹೊಗೆ ಕಾಣಿಸಿತು. ಕೋರಿಯ ಹುಳುವಿನಂತೆ ನುಸುಳಿಬರುತ್ತಿದ್ದ ಗಾಡಿಯೂ ಕಾಣಿಸಿತು. ಇವನು ನಿಂತಲ್ಲಿಯೇ ನಿಂತು ದೃಷ್ಟಿ ಒಂದುಮಾಡಿ ಆ ಕಡೆಗೆ ನೋಡಿದನು. ಕೋರಿಯ ಹುಳುವು ಹೆಬ್ಬಾವಾಗಿ, ಹೆಬ್ಬಾವು ಆನೆಗಳ ಸಾಲಾಗಿ ದೊಡ್ಡದಾಗುತ್ತ ಬರುವುದು ಕಂಡಿತು. ಇವನು ಸಾಯ್‌ಕಲ್ಲನ್ನು ಮುಂದೆ ಒತ್ತುತ್ತ ಇನ್ನಿಷ್ಟು ಮುಂದೆ ಹೋಗತೊಡಗಿದನು. ಗಾಡಿಯು ಸಮೀಪದಲ್ಲಿಯೇ ಬಂದಿತು. ಬಂದೇಬಿಟ್ಟಿತು. ಬರುವ ವುರು. ಸೊತ್ತಿಲ್ಲದೆ, ಕಿಟಕಿಯಲ್ಲಿ ಗೋಣು ಹಾಕಿ ಕುಳಿತ ಎಷ್ಟೋ ಮುಖಗಳ ಗುರುತು ಹಿಡಿಯಲು ಕೂಡ ಅವಕಾಶಕೊಡದೆ, ಆ ರೇಲ್ವೆಯ ಹಳಿಗಳ ಗುಂಟ ಓಡಿಹೋಗಿಯೇಬಿಟ್ಟಿತು.

ಅವನು ನಿಂತಲ್ಲಿಯೇ ಇನ್ನೂ ಸ್ವಲ್ಪ ಹೊತ್ತು ನಿಂತನು. ಹೊಟ್ಟೆಯಲ್ಲಿ ಏನೋ ಸಂಕಟವಾಗುತ್ತಿರುವಂತೆ ಅವನು ಮುಖ ಕಿವುಚಿಕೊಂಡನು. ಮತ್ತೆ ಜೋಲುಮುಖಹಾಕಿ ನಿಂತನು. ಹಣೆ ಬೆವತು ಬೆವತು ಆ ನೀರನ್ನು ಮತ್ತೆ ಇಂಗಿಸಿಕೊಳ್ಳತೊಡಗಿತ್ತು. ಅವನು ಯಥಾಪ್ರಕಾರವಾಗಿ ಚಿಕ್ಕ ಚಿನ್ನೆಯ ಇಳಿದಾರಿನಲ್ಲಿ ಗಿಡ-ಗಂಟೆಗಳ ಮಧ್ಯೆ ಜಾರಿಹೋದ ಆ ಕಾಲ್ದಾರಿಯಲ್ಲಿ, ಸಾಯ್‌ಕಲ್ಲನ್ನು ಒತ್ತುತ್ತ ಇಳಿಯತೊಡಗಿದನು. ಮುಳ್ಳಿನ ಕಂಟಿಗಳ ಮರೆಯಲ್ಲಿ ಅವನು ಚಕ್ರಾಕಾರವಾಗಿ ಇಳಿಯುತ್ತ ಹೋಗಿ, ಅಡವಿಯ ಹೆಣ್ಣುಮಗಳ ಬೈತಲೆಯಂತೆ ನೀಳವಾಗಿ ಹೋದ ಆ ರೇಲ್ವೆಯ ಹಳಿಗಳ ಬಳಿ ಬಂದು ನಿಂತನು.

ಅಲ್ಲೊಂದು ಚಿಕ್ಕ ಕಂಟಿ ಇದ್ದಿತು. ಅವನು ಸಾಯ್‌ಕಲ್ಲನ್ನು ಒಯ್ದು ಅದಕ್ಕೆ ಆನಿಸಿ ಇಡಲು ಹೋದನು. ಆ ಎಳೆಯ ಕಂಟಿ ಸಾಯ್‌ಕಲ್ಲಿನ ಭಾರವನ್ನು ತಾಳಲಾರದೆ ಬಾಗಿಕೊಂಡಿತು. ಸಾಯ್‌-ಕಲ್ಲು ನುಣುಚಿಕೊಂಡು ದೊಪ್ಪನೆ ನೆಲಕ್ಕೆ ಅಪ್ಪಳಿಸಿತು. ಅವನು ಎರಡೂ ಕೈಗಳನ್ನು ಬಿಟ್ಟು ಸ್ವಲ್ಪ ಹಿಂದೆ ಸರಿದು, ಆ ಕಡೆಗೆ ವಿಷಣ್ಣ ಮುಖದಿಂದ ನೋಡಿದನು. ಮತ್ತೆ ಮುಖ ಹೊರಳಿಸಿ, ಅತ್ತ ಇನ್ನು ಎಂದಿಗೂ ನೋಡುವುದಿಲ್ಲ—ಎನ್ನುವವನಂತೆ ಒತ್ತಿಒತ್ತಿ ಕಾಲುಗಳನ್ನು ಇಡುತ್ತ ಈ ಕಡೆಗೆ ಬಂದುಬಿಟ್ಟನು.

ಅಲ್ಲಿ ರೇಲ್ವೆಯ ಹಳಿಗಳೆರಡೂ ಸಮಾಂತರವಾಗಿ ಒಂದೇ ಪಾತಳಿಯಲ್ಲಿ ಸರಿದುಹೋಗಿ ಮುಂದೆ ಹೊರಳಿದ್ದುವು. ಐದು ಬೆರಳು ಗಳಷ್ಟು ಅಗಲವಾದ ಆ ಕಬ್ಬಿಣದ ಹಳಿಗಳನ್ನು ಅವನು ಪರೀಕ್ಷಕನಂತೆ ನೋಡಿದನು. ಕಟ್ಟಿಗೆಯ ಹಲಗೆಗಳ ಮೇಲೆ ದಪ್ಪವಾದ ಮೊಳೆಗಳನ್ನು ಬಡಿದು ಹಳಿಗಳನ್ನು ನೆಲಕ್ಕೆ ಹೇಗೆ ಕೂಡಿಸಿರುತ್ತಾರೆ—ಎಂಬುದನ್ನು ಅವನು ನೋಡಿದನು. ಆ ಬಳಿಕ ಜಲ್ಲಿಯನ್ನು ಏರಿಹೋಗಿ, ಒಂದು ಹಳಿ ದಾಟಿ, ಎರಡೂ ಹಳಿಗಳ ಮಧ್ಯದಲ್ಲಿಯ ಕಟ್ಟಿಗೆಯ ಹಲಗೆಯ ಮೇಲೆ ನಿಂತನು. ಮತ್ತೆ ಅಲ್ಲಿಯೇ ಕುಳಿತನು. ಇಲ್ಲಿ ಒಳ್ಳೆ ಹಿತವೆನಿಸುತ್ತಿದೆ, ಎನ್ನುವಂತೆ ಎರಡೂ ಕಾಲುಗಳನ್ನೂ ನಿಡಿದುಮಾಡಿ, ದಂಡೆಯ ಜಲ್ಲಿಯನ್ನು ಒದೆದು, ಕೆಲವು ಕಲ್ಲುಗಳನ್ನು ಉರುಳಿಸಿದನು. ಹಾಗೆಯೇ ಅವನು ಅಡ್ಡಾದನು. ಅವನ ಕುತ್ತಿಗೆಯ ಸಂದಿಗುಂಟ ಒಂದು ಹಳಿ ಹೋಗಿತ್ತು. ಅವನ ಮೊಳಕಾಲ ಚಿಪ್ಪುಗಳ ಬುಡದಲ್ಲಿ

ಮತ್ತೊಂದು ಹಳಿ ಹಾಯ್ದಿತ್ತು. ಅವನ ಕೈಗಳು ನಿಡಿದಾಗಿ ಚಾಚಿ ಜಲ್ಲಿಗಳೊಡನೆ ಚಟವಾಡುತ್ತಿದ್ದುವು.

ಕತ್ತಿನ ಕಡೆಯ ಹಳಿಗೆ ಅವನು ತನ್ನ ಕಪ್ಪೋಲ ಹಚ್ಚಿ ತಿಕ್ಕಿದನು. ಮತ್ತೆ ಹುಚ್ಚನಂತೆ ಅದಕ್ಕೆ ಮುತ್ತಿಕ್ಕಿದನು. ಅವನು ಸ್ವಲ್ಪ ಮಾತ್ರ ಮುಖ ಮೇಲೆತ್ತಿದಾಗ, ಅವನ ಕಣ್ಣುಗಳಲ್ಲಿ ಸ್ವಲ್ಪ ನೀರು ತುಳುಕಿತು. ಅದು ಹನಿಯಾಗಿ ಆ ಹಳಿಯ ಮೇಲೆ ಉರುಳಿತು. ಅವನು ಮತ್ತೆ ತನ್ನ ಕಪ್ಪೋಲವನ್ನು ಹಚ್ಚಿ ತಿಕ್ಕಿ, ಆ ನೀರನ್ನು ಕನ್ನೆಗೆ ಸವರಿಕೊಂಡನು. ಈಗ ಒಂದು ಮಗ್ಗುಲು ಮುಖವಾಡಿ 'ಗೋಳೋ' ಎಂದು ಅತ್ತು ಬಿಟ್ಟನು. ಮುಂದೆ ಸ್ವಲ್ಪ ಹೊತ್ತಿನ ಮೇಲೆ ಸುಮ್ಮನೆ ಅದನು. ಒಣಮರದ ಬೊಡ್ಡೆಯಂತೆ ಬಿದ್ದು ಬಿಟ್ಟನು. ಕಣ್ಣು ಸಹ ಪಿಳುಕಿಸಲಿಲ್ಲ. ಕತ್ತಿನ ಕಡೆಯ ಹಳಿಗೆ ಅವನು ತನ್ನ ಕಿವಿ ಹಚ್ಚಿ ತಿಕ್ಕತೊಡಗಿದ್ದನು. ಏನಾಯಿತೋ ಏನೋ, ಒಮ್ಮಿಂದೊಮ್ಮೆಲೇ ದಿಂಗನೆ ಎದ್ದು ಕುಳಿತನು. ಚಟಚಟ ಮೈ ಜಾಡಿಸಿ ಎದ್ದು ನಿಂತನು. ತಲೆ ಕೊಡವುತ್ತ ಅತ್ತ ದೂರದಲ್ಲಿ ಏನನ್ನೋ ನೋಡಿದನು. ಸಮೀಪದಲ್ಲಿಯೇ ಹಳಿಗಳನ್ನು ನಿರೀಕ್ಷಿಸುವ ಅಧಿಕಾರಿಯನ್ನು, ಒಂದು ಒತ್ತುವ ಗಾಡಿಯಲ್ಲಿ ಕುಳ್ಳಿರಿಸಿ ಎಂಡು ಆಳುಗಳು ಒತ್ತಿಕೊಂಡು ಬರುತ್ತಿದ್ದುವು. ಆ ರಥದ ಮೇಲಿನ ಕೆಂಪು ಬಣ್ಣದ ನಿಶಾನೆಯು ಸ್ಪಷ್ಟವಾಗಿ ಕಾಣಿಸಿಕೊಳ್ಳತೊಡಗಿತ್ತು.

ಇವನ ಮುಖ ಆ ರಥವನ್ನು ನೋಡಿ ಹೆದರಿಬಿಟ್ಟಿತು. ಇವನು ಲಗುಬಗೆಯಿಂದ ಕಂಟಿಗಳ ಮರೆಯಲ್ಲಿ ನುಸುಳಿದವನೇ ತನ್ನ ಸಾಯ್‌ಕಲ್ಲು ಬಿದ್ದ ಸ್ಥಳಕ್ಕೆ ಹೋಗಿ ನಿಂತನು. ಅವಸರದಿಂದ ಅದನ್ನು ಎತ್ತಿ ನಿಲ್ಲಿಸಿ, ಬಿಚ್ಚಿಹೋದ ಸರಪಳಿಯನ್ನು ಗಾಲಿಯ ಚಕ್ರಕ್ಕೆ ತೊಡಕಿಸಿದನು. ಮತ್ತೆ ಹಿಂದೊಮ್ಮೆ ಮುಂದೊಮ್ಮೆ ನೋಡಿ, ಸಾಯ್‌ಕಲ್ಲನ್ನು ಏರಿ, ದಾರಿಸಿಕ್ಕತ್ತ ಪೆಡಲುಗಳನ್ನು ತುಳಿಯತೊಡಗಿದನು.

ಸ್ವಲ್ಪ ದೂರ ಹೋಗಿ ಅವನು ಸಾಯ್‌ಕಲ್ಲನ್ನು ನಿಲ್ಲಿಸಿ ಹಿಂತಿರುಗಿ ನೋಡಿದನು. ಸಾಹೇಬರನ್ನು ಕುಳ್ಳಿರಿಸಿಕೊಂಡ ಆ ಕೆಂಪು ಬಾವುಟದ ರಥವನ್ನು ನುಗಿಸುತ್ತ ಎರಡೂ ಆಳುಗಳು ಹಳಿಯ ಮೇಲೆ ಓಡುತ್ತಿದ್ದುವು. ರಥದ ವೇಗ ಸ್ವಲ್ಪ ಹೆಚ್ಚಾಗುತ್ತಲೇ, ಅವರೂ ಆ ರಥದ ಹಿಂಬದಿಗೆ ಹತ್ತಿ ನಿಂತುಬಿಟ್ಟರು. ರಥ ಒ-ದೇ ವೇಗದಿಂದ ಓಡತೊಡತೊಡಗಿತು. ಓಡಿಓಡಿ ಅದು ಮರೆಯಾಗತೊಡಗಿತು. ಇವನು ತಾನು ನಿಂತಲ್ಲಿಯೇ ಇದನ್ನೆಲ್ಲ ಒಂದೇ ಕಣ್ಣಾಗಿ ನೋಡಿದನು. ನೋಡಿ ಒಂದು ನಿಟ್ಟುಸಿರುಬಿಟ್ಟನು. ಕುತ್ತಿಗೆಯ ಸಂದಿನಲ್ಲಿಯ ಬೆವರನ್ನು ಒರಸಿಕೊಳ್ಳುತ್ತ ಅವನು ತಾನು ಮೊದಲಿದ್ದ ಸ್ಥಳದ ಕಡೆಗೆ ಸಾಯಕಲ್ಲನ್ನು ನುಗಿಸಿಕೊಂಡು ಬಂದನು.

ಅವನು ಅಲ್ಲಿ ಸ್ವಲ್ಪ ಹೊತ್ತು ನಿಂತು, ಏನೋ ವಿಚಾರಿಸಿ, ಸಾಯ್‌ಕಲ್ಲನ್ನು ಅನಾಮತ್ತಾಗಿ ಎತ್ತಿ ಹಳಿಗಳನ್ನು ದಾಟಿಸಿ, ಆಚೆಯ ದಂಡೆಗೆ ತಂದನು. ಅಲ್ಲಿ ಅದನ್ನು ತುಸು ನುಗಿಸಿಕೊಂಡು ಹೋಗಿ ಒಂದು ಕಾಲ್ದಾರಿಗೆ ಕೂಡಿಸಿದನು. ಮತ್ತೆ ಯಾವುದೋ ನಿರ್ಧಾರಕ್ಕೆ



ಬಂದಂತೆ ಮುಖವಾಡಿ, ಸಾಯ್‌ಕಲ್ಲನ್ನು ಏರಿ ಆ ದಾರಿಯಾಗಿ ಪೆಡಲುಗಳನ್ನು ತುಳಿಯತೊಡಗಿದನು. ಇಲ್ಲಿ ಮರಗಳು ವಿರಲವಾಗಿ ದಾರಿ ಸ್ವಲ್ಪ ಸರಳವಾಗಿತ್ತು. ಆದರೂ ಮಧ್ಯ ಮಧ್ಯ. ಪಕ್ಕದಲ್ಲಿ ಬೆಳೆದ ಮುಳ್ಳಿನ ಪೊದೆಗಳು ಕಾಲು ಕೆದರಿ ಬಂದು ಇವನಿಗೆ ಕೈ ತೋರಿಸುತ್ತಿದ್ದುವು. ಇವನು ಅವೆಲ್ಲವುಗಳನ್ನೂ ಎದುರಿಸುತ್ತ ತೂರಿ-ಹೋದನು.

ಆಳ್ದ ದಾರಿ ಕೊಂಚ ಇರುಕಲಾದುದರಿಂದ ಅವನು ನಿಂತನು. ಸಾಯ್‌ಕಲ್ಲನ್ನು ಆ ಕಂದಕದಲ್ಲಿ ಹೇಗೋ ಇಳಿಸಿ ಮುಂದೆ ನಡೆದನು. ಕೆಳಗೆ ಬಯಲಿನಲ್ಲಿ ಎತ್ತರವಾಗಿ ಬೆಳೆದ ಹುಲ್ಲನ್ನು ಮೇಯುತ್ತ ಅಲ್ಲೊಂದು ಇಲ್ಲೊಂದು ದನಗಳು ನಿಂತಿದ್ದುವು. ದನಕಾಯುವ ಹುಡುಗರು ಎಲ್ಲಿಯೋ ಅಡಗಿದವೇರಿ ಕುಳಿತಿದ್ದರು. ಇವನು ಕೊರಕಲು ನೆಲದಲ್ಲಿ ಹೇಗೋ ಜೋಲಿಯನ್ನು ಹಿಡಿದುಕೊಂಡು, ಸಾಯ್‌ಕಲ್ಲಿನ ಟಾಯರುಗಳಿಗೆ ಏನಾದೀತು, ಎಂಬ ಪರಿವೆಯಿಲ್ಲದೆ ಮುಂದೆ ನುಗಿಸಿ-ಕೊಂಡು ಹೊರಟನು. ನಡುವೆ ಒಂದು ಹುಲ್ಲು ಬಯಲನ್ನು ದಾಟಿ ಹೋಗುವುದರಲ್ಲಿಯೇ ಅವನಿಗೊಂದು ಕಾಲುದಾರಿ ಸಿಕ್ಕಿತು. ಅವನು ಪುನಃ ಸಾಯ್‌ಕಲ್ಲನ್ನೇರಿ, ಹೊತ್ತು ಗೊತ್ತಿಲ್ಲದೆ ಆ ದಾರಿಯಾಗಿ ನಿಧಾನವಾಗಿ ಸಾಗಿದನು.

ರುದ್ರಾಕ್ಷಮಾಲೆಗಳನ್ನು ಧರಿಸಿದ ತಪಸ್ವಿಗಳಂತೆ ನಿಂತ ಒಂದೆರಡು ಹಣ್ಣು ಬಿಟ್ಟ ಈಚಲು ಮರಗಳು ಅವನನ್ನು ದಾರಿಯಲ್ಲಿ ಸ್ವಾಗತಿಸಿದುವು. ಅತ್ತ ದಿನ್ನೆಯ ಇಳುಕಲಿನಲ್ಲಿ ಎತ್ತರವಾಗಿ ಬೆಳೆದ ಗಲುಗಿನ ಪೆಳೆ ಗಾಳಿಗೆ ಅಲುಗುತ್ತಿತ್ತು. ಇವನ ಸಾಯ್‌ಕಲ್ಲು ಮಾತ್ರ ನಿಧಾನವಾಗಿ ಹೊರಟೇಬಿಟ್ಟಿತ್ತು.

ಒಂದು ಕಡೆಗೆ ಅವನ ಸಾಯ್‌ಕಲ್ಲಿನ ಮುಂದಿನ ಗಾಲಿ ಸ್ವಲ್ಪ ತೇವು ನೆಲದಲ್ಲಿ ಈಸಿ ಮೈಗೆಲ್ಲ ರೊಜ್ಜು ಮೆತ್ತಿಕೊಂಡದ್ದರಿಂದ, ಅವನು ನಿರ್ವಾಹವಿಲ್ಲದೆ ನಿಲ್ಲಬೇಕಾಯಿತು. ಅವನು ಹಾಗೆಯೇ ಸ್ವಲ್ಪ ಗಟ್ಟಿಯಾದ ನೆಲವನ್ನು ಶೋಧಿಸಿ ಆ ದಾರಿಯಾಗಿ ಸುತ್ತಿ ಬಂದನು. ಅವನ ಎದುರಿಗೇ ಈಚಲುಮರಗಳ ಸಾಲು ಬೆಳೆದಿತ್ತು. ಆ ಬೊಡ್ಡೆ-ಗಳ ಸಂದಿನಲ್ಲಿ ಅವನು ಹಣೆಯಿಕ್ಕಿ ನೋಡಿದಾಗ, ಎದುರಿಗೇನೇ ಒಂದು ಚಿಕ್ಕ ತೊರೆ ಜುಳುಜುಳು ಹರಿಯುತ್ತಿತ್ತು.

ಅವನು ಸಾಯ್‌ಕಲ್ಲನ್ನು ಒಂದು ಈಚಲುಗಿಡದ ಬೊಡ್ಡಿಗೆ ಅನಿಸಿ ನಿಟ್ಟು, ಆ ಮರಗಳ ಮಧ್ಯದಲ್ಲಿ ತೂರಿ ಬಂದು ತೊರೆಯ ದಡದಲ್ಲಿ ಇಂತನು. ತೊರೆಯ ಪಾತ್ರ ಚಿಕ್ಕದಾದರೂ ಬೇಸಗೆಯ ನೀರು ಸೊಪ್ಪೆ-ಸದೆಗಳನ್ನು ತೇಲಿಸಿಕೊಂಡು ತುಂಬಿ ಬಂದಿತ್ತು. ದಡದಲ್ಲಿ ಎಲ್ಲೆಲ್ಲಿಯೂ ತೇವ. ಇವನು ತನ್ನ ದೃಷ್ಟಿಯನ್ನು ಸ್ವಲ್ಪ ಮಗ್ಗಲು ಕೆಡವಿದಾಗ, ಅಲ್ಲಿ ಈಚಲ ಬೊಡ್ಡೆಯೊಂದನ್ನು ಅಡ್ಡವಾಗಿ ಮಲಗಿಸಿ ಒಂದು ಕಾಡುಸೇತುವೆ ಕಟ್ಟಿದುದನ್ನು ಕಂಡನು.

ಅವನು ನೇರವಾಗಿ ಆ ಸೇತುವೆಯ ಬಳಿ ಹೋಗಿ ನಿಂತನು. ಅದನ್ನೊಮ್ಮೆ ಮೊದಲಿನಿಂದ ಮುಗಿಯುವ ವರೆಗೆ ನೋಡಿದನು. ತನ್ನ ಬಲಗಾಲನ್ನು ಸೇತುವೆಯ ಮೇಲೆ ಇಟ್ಟು ಸ್ವಲ್ಪ ಒತ್ತಿದನು. ಸೇತುವೆ ಸ್ಥಿರವಾಗಿದ್ದಿತು. ಮತ್ತೊಂದು ಕಾಲನ್ನು ಮುಂದೆ ಇಟ್ಟನು. ಜೋಲಿ ಹೋದಂತಾಗಲು ಗಕ್ಕನೆ ಅದರ ನೇಲೆ ಕುಳಿತುಬಿಟ್ಟನು. ಮುಂದೆ ಅಂಬೆಗಾಲಿಕ್ಕುತ್ತ ಹೋಗಿ ಅರ್ಧದಾರಿ ಸಂದನು. ಸೇತುವೆ ಬಿಲ್ಲಿನಂತೆ ಮಣಿಯತೊಡಗಿತು. ತಳದಲ್ಲಿ ಒಂದು ಅಳ ನೀರು ಕೊರಕಲಿನಲ್ಲಿ ರಭಸದಿಂದ ಹರಿದು ಹೋಗುತ್ತಿತ್ತು. ಇವನ ಮುಖಕ್ಕೆ ಗಾಬರಿಯ ಸುಣ್ಣ ಬಳಿದುಕೊಂಡಿತು. ಆದರೂ ಇವನು ಮೈಯುಬ್ಬಿಸಿಕೊಂಡು ಮತ್ತೆ ಅಂಬೆಗಾಲು ಇಕ್ಕತೊಡಗಿದನು.

ಎರಡು ಹೆಜ್ಜೆ ಮುಂದೆ ಹೋಗುವುದರಲ್ಲಿಯೇ ಅವನ ಮೈ ನಡುಗಿತು. ಕಾಲುಗಳು ಥರಗುಟ್ಟಿದುವು. ಸೇತುವೆ ಹೆಚ್ಚು ಹೆಚ್ಚು ಮಣಿದು ಏಳತೊಡಗಿತು. ಒಂದು ಕಾಲು ಪಳಕ್ಕನೆ ಜಾರಿ ಸುಣುಚಿ ಕೊಂಡೇ ಬಿಟ್ಟಿತು. ಮತ್ತೊಂದು ಕಾಲೂ ಲಾಗ ಹೊಡೆಯಿತು. ಅವನ ಚಪ್ಪಲಿಗಳು ಕಳಚಿ ತೊರೆ ಸೇರಿಬಿಟ್ಟುವು ಅವನ ಕೈಗಳು ಮಾತ್ರ ಅಡಬಡಿಸಿ ಹೋಗಿ ಆ ಸೇತುವೆಗೆ ಬಿಗಿಯಾಗಿ ಅಪ್ಪಿಕೆ ಹಾಕಿಬಿಟ್ಟುವು. ಆ ಬಡಪ್ರಾಣಿ ಸೇತುವೆಗೆ ನೇತಾಡತೊಡಗಿದನು.

ಸ್ವಲ್ಪ ಹೊತ್ತು ಸುಮ್ಮನಿದ್ದು ಮೈಯಲ್ಲಿ ತುಸು ಚೈತನ್ಯ ಬಂದ ಮೇಲೆ, ಅವನು ಮೆಲ್ಲಗೆ ಕೈಗಳನ್ನು ಸರಿಸುತ್ತ ಆಚೆಯ ದಡದ ಕಡೆಗೆ ಹೊರಳಿದನು. ಹಾಗೂ ಹೀಗೂ ದಡಕ್ಕೆ ತೆವಳಿಬಂದು ದಡವನ್ನು ಅಂಗಲಾಚಿ ತಬ್ಬಿಕೊಂಡನು. ಒಂದು ಸಲ ಉಲುಮಿ ದಡದ ಮೇಲೇರಿ, 'ಉಶ್' ಎಂದು ಉಸುರ್ಗರೆದು ನಡುಗುತ್ತಿರುವ ತುಟಿಗಳನ್ನು ಒರಸಿಕೊಂಡನು.

ಅವನ ಬಟ್ಟೆಗಳೆಲ್ಲ ಹೊಲಸಾಗಿದ್ದುವು. ಪ್ಯಾಂಟಿಗೆ, ಅಂಗಿಗೆ, ಅಲ್ಲಲ್ಲಿ ರಾಡಿ ಬಡಿದಿದ್ದಿತು. ಅದನ್ನೆಲ್ಲ ನೋಡಿಕೊಂಡು ಅವನು ಒಂದು ಕ್ಷಣ ನಾಚಿಕೊಂಡನು. ಆ ಕೆಂಪುಬಣ್ಣದ ಸೂಕ್ಷ್ಮ ಶರೀರದ ಮನುಷ್ಯನ ಮುಖ ಒಣಗಿದ ಸಂಡಿಗೆಯಾಗಿತ್ತು. ಒಂದು ಕ್ಷಣ ಕೂಡ ಅವನಿಗೆ ತಾನು ನಿಂತಲ್ಲಿಯೇ ನಿಲ್ಲಲು ಮನಸ್ಸಾಗಲಿಲ್ಲ. ಯಾವ ಗೊತ್ತು-ಗುರಿಯೂ ಇಲ್ಲದೆ ಅವನು ಆ ತೊರೆಯ ದಡದಗುಂಟ ಮುಂದೆ ಸಾಗಿದನು. ಕಾಲಲ್ಲಿ ಚಪ್ಪಲಿಗಳು ಇಲ್ಲದುದರಿಂದ, ಒಂದೆರಡು ಈಚಲ ಮುಳ್ಳುಗಳು ಅವನನ್ನು ನೋಯಿಸಿದುವು. ಅವನು ಯಾವುದಕ್ಕೂ ಹಿಂದೆಗಯದೆ ದಡದಗುಂಟ ಹೊರಟೇಬಿಟ್ಟನು.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೪-೦
ಶ್ರೀ. ಭುಜೇಂದ್ರ ಮುಹಿಸವಾಡಿ	
ಮೂಲಶಿಕ್ಷಣದ ಮೌಲ್ಯಮಾಪನ	೦-೧೫-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೦-೪-೦
ಶ್ರೀ. ಬಾಳು ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾ ಸದನ, ಸೇಡಬಾಳ

(ಪೋ. ಸೇಡಬಾಳ, ಜಿಲ್ಲಾ ಬೆಳಗಾಂವಿ)

ಅವನು ಸ್ವಲ್ಪ ತಗ್ಗಿನಲ್ಲಿ ಇಳಿದುಹೋದಾಗ, ತೊರೆಯ ನೀರು ಅಲ್ಲಿ ದಡವನ್ನು ಒತ್ತಿ ಒಂದು ಪಕ್ಕದಲ್ಲಿ ಚಕ್ರಾಕಾರವಾಗಿ ತಿರುಗುತ್ತಿದ್ದುದನ್ನು ಕಂಡನು. ಅದೊಂದು ತಿರುಗಣಿಯ ಮಡುವು. ರಭಸದಿಂದ ಬರುವ ನೀರು ಆ ಒತ್ತಿನಲ್ಲಿ ಹೊಕ್ಕು ಗಿರಿಗಿರಿ ಮುಂದೆ ಹೋಗುತ್ತಿತ್ತು. ನೀರಿನ ಜೊತೆಗೆ ಬಂದ ಸೊಪ್ಪೆ-ಸದೆಗಳು ಅಲ್ಲಿ ಗರಿಯುಂತೆ ತಿರುಗುತ್ತ ನಿಂತು, ಹೊಸ ನೀರು ತುಂಬಿಬಂದಾಗ ಅದರ ರಭಸಕ್ಕೆ ತಪ್ಪಿಸಿಕೊಂಡು ಮುಂದೆ ಹೋಗುತ್ತಿದ್ದುವು. ಇವನು ಆ ತಿರುಗಣಿಯ ಬಳಿ ಬಂದಾಗ ಸೇತುವೆಯ ಬುಡವಲ್ಲಿ ಕಳೆದುಕೊಂಡ ಇವನ ಎರಡೂ ಚಪ್ಪಲಿಗಳು ಅಲ್ಲಿ ಬಂದು ಬಗಾಟಬಗರಿಯಾಡತೊಡಗಿದ್ದುವು. ಇವನಿಗೆ ಏನೋ ನೋಜೆನಿಸಿ ಮುಖ ಬಿಗಲವಾಯಿತು. ಅತ್ತಿತ್ತ ತುದುಕ್ಕಾಡಿ ಅವನೊಂದು ಬಿದಿರು ಕೋಲನ್ನು ಹುಡುಕಿದನು. ಬಳಿಕ ತಿರುಗಣಿಯ ದಂಡೆಯಲ್ಲಿಯೇ ಬಾಡಿಗಲ್ಲಿನ ಮೇಲೆ ಕುಳಿತು ಜೋಕೆಯಿಂದ ಎರಡೂ ಚಪ್ಪಲಿಗಳನ್ನು ಕೋಲಿಗೆ ತಗುಲಿಸಿ ಮೇಲೆ ಎಳೆದುಕೊಂಡನು. ಅವನ ಮುಖ ಈಗ ಪುಟ್ಟೂ ಅಪ್ಪು ಅಗಲವಾಯಿತು.

ಅವನು ಅಲ್ಲಿಯೇ ಕುಳಿತು, ತಿರುಗಣಿಯಲ್ಲಿ ಬಂದು ಬೊಗರಿಯಾಡಿ ಹೋಗುವ ಸೊಪ್ಪು-ಸದೆಗಳ ಮೋಜು ನೋಡತೊಡಗಿದನು. ಅವನು ನೋಡುತ್ತಿದ್ದಂತೆಯೇ ಒಂದು ಕಟ್ಟಿರುವೆ ಆ ಮಡುವಿನಲ್ಲಿ ಬಂದು ಸಿಲುಕಿತು. ದಡಕ್ಕೆ ಬರಬೇಕೆನ್ನುವ ಅದರ ಪ್ರಯತ್ನಗಳೆಲ್ಲ ವಿಫಲವಾಗಿ, ಅದು ಮಡುವಿನಲ್ಲಿ ಚಕ್ರಾಕಾರವಾಗಿ ಸುತ್ತತೊಡಗಿತು. ಅವನು ಈ ನೋಡನ್ನು ಸ್ವಲ್ಪ ಹೊತ್ತು ನೋಡುತ್ತ ಕುಳಿತನು. ಬಳಿಕ ಏನೋ ನೆನಪಾದಂತಾಗಿ, ಅವನು ತನ್ನ ಪ್ಯಾಂಟಿನ ಕಿಸೆಯಲ್ಲಿಯ ಒಂದು ದೈನಿಕ ಪತ್ರಿಕೆಯನ್ನು ಹೊರತೆಗೆದನು; ಅದನ್ನು ಬಿಡಿಸಿ ಅವನು ತನ್ನ ಮುಖಕ್ಕೆ ಹಿಡಿದುಕೊಂಡನು. ಅದರಲ್ಲಿ ದೊಡ್ಡ ಅಕ್ಷರಗಳಲ್ಲಿ "ಬಿ ಎ. ಪರೀಕ್ಷೆಯ ಪರಿಣಾಮ" ಎಂದು ತಲೆಬರೆಹದಲ್ಲಿ ಬರೆದಿತ್ತು. ಅವನು ವಿಷಣ್ಣವದನನಾಗಿ ಅದರಲ್ಲಿಯ ಅಕ್ಷರಗಳನ್ನು ನಿರೀಕ್ಷಿಸಿದನು. ಪ್ರಥಮವರ್ಗ, ದ್ವಿತೀಯವರ್ಗ, ತೃತೀಯ ವರ್ಗಗಳಲ್ಲಿ ಪಾಸಾದ ವಿದ್ಯಾರ್ಥಿಗಳ ಹೆಸರುಗಳನ್ನು ತಾತ್ಸಾರದಿಂದಲೇ ಅವನು ಓದುವ ಪ್ರಯತ್ನಮಾಡಿದನು. ಆದರೆ, ಅವನ ಮುಖದಲ್ಲಿ ದುಃಖ ಉಮ್ಮಳಿಸಿ ಬಂದಿತು. ಅವನಿಗೆ ಸ್ವಲ್ಪ ಸಿಟ್ಟು ಬಂದಿತು. ಅವನು ಆ ಪತ್ರಿಕೆಯನ್ನು ಚೂರುಚೂರಾಗಿ ಹರಿದು ಆ ತಿರುಗಣಿ ಮಡುವಿನಲ್ಲಿ ಹಾಕಿಬಿಟ್ಟನು. ಆ ತುಂಡುಗಳನ್ನೆಲ್ಲ ತಿರುಗಣಿಯ ಸೆಳವಿಗೆ ತಿರ್ಪನೆ ತಿರುಗತೊಡಗಿದುವು. ಮತ್ತಷ್ಟು ನೀರು ಬಂದು ಆ ಹಗುರಾದ ಹಾಳೆಗಳನ್ನು ಕೊಚ್ಚಿಕೊಂಡು ತಿರುಗಣಿಯಿಂದ ಪಾರುಮಾಡಿ ಒಯ್ದುಬಿಟ್ಟಿತು.

ಆ ಇರುವೆ ಮಾತ್ರ ಶತಪ್ರಯತ್ನ ಮಾಡಿ ದಡ ತಲುಪಲು ಹವಣಿಸುತ್ತಿತ್ತು. ಆದರೆ ಆ ತಿರುಗಣಿ ಅದನ್ನು ಮತ್ತೆ ತಿರುಗಲು ಹಚ್ಚುತ್ತಿತ್ತು. ಅವನಿಗೆ ಕರುಣೆ ಬಂದಿತು. ಅವನು ತನ್ನ ಬಳಿಯಲ್ಲಿಯೇ ಇದ್ದ ಬಿದಿರುಕೋಲನ್ನು ಆ ನುಡುವಿಗೆ ಹಚ್ಚಿದನು; ಇರುವೆ ತಿರುಗಿ ತಿರುಗಿ ಬರುವ ದಾರಿಯಾಗಿ ಅದನ್ನು ಹಿಡಿದನು. ಇರುವೆ ಪ್ರಯತ್ನಪಟ್ಟು ಕೋಲನ್ನು ಹಿಡಿಯಿತು. ಇವನು ಅದನ್ನು ದಡಕ್ಕೆ ತಲುಪಿಸಿದನು.

ಅಲ್ಲಿಂದ ಮೇಲಕ್ಕೆದ್ದು ಅವನು ನೆನೆದು ಹೋದ ಚಪ್ಪಲಿಗಳನ್ನು ಗಿಡದ ತೊಪ್ಪಲ ತಿಕ್ಕಿ ಸ್ವಲ್ಪ ಒಣಗಿಸತೊಡಗಿದನು. ಬಳಿಯಲ್ಲಿಯೇ ಇದ್ದ ಹುಣಿಸೆಯ ಮರದ ಮೇಲಿಂದ ಒಂದು ತಾಯಿಮಂಗವು ತನ್ನ ಮರಿಯನ್ನು ಎದೆಗೆ ಅವಚಿಕೊಂಡು ಟಣ್ಣನೆ ಕೆಳಗೆ ಜಿಗಿಯಿತು. ಇವನು ಅದನ್ನು ನೋಡಿ ನಕ್ಕನು. ಅದು ಇವನನ್ನು ಅಣಕಿಸಿ ಮುಂದೆ ಹೋಗಿಬಿಟ್ಟಿತು.

ಇವನು ಹಣೆಯ ಮೇಲಿನ ಬೆವರು ಒರಸಿಕೊಳ್ಳಲು ಕಿಸೆಯಲ್ಲಿಯ ಕರವಸ್ತ್ರ ಕಡೆಗೆ ತೆಗೆದನು. ಅದರ ಜೊತೆಗೇ ಅವನ ಹಣದ ತೊಗಲಿನ ಚೀಲ ಕಡೆಗೆ ಬಂದಿತು. ಅವನದನ್ನು ಸಹಜವಾಗಿ ನೋಡಿದನು. ಅವನ ಕಣ್ಣಿಗೆ ಮೊದಲು ಬಿದ್ದುದು 'ವ್ಲಾಸ್ವಿಕ್ಕಿ'ನ

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುದ್ರಣ!!!

ಶಿಕ್ಷಣ - ಶಿಕ್ಷಕದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಂತಹ, ಅನೇಕ ವಿದ್ವನ್ಮಣಿಗಳ ಸದಭಿಪ್ರಾಯವನ್ನು ಪಡೆದಂತಹ ಶೈಕ್ಷಣಿಕ ಉದ್ಗ್ರಂಥ

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ನಾವಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳವೆ! ೪೭೫ ಪುಟಗಳು.

ಸಾದಾಪ್ರತಿಗೆ ೩-೦-೦. ಸುಂದರ ಪ್ರತಿಗೆ ೪-೦-೦.
ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ:

ನಿಂಬಾಳ ಕಲ್ಯಾಣಪ್ಪ, ಪೋ. ತಿಕೋಟ,
ಜಿ. ವಿಜಾಪುರ
೨. ಆಶಾ ಸಾಹಿತ್ಯಮಂದಿರ, ವಿಜಾಪುರ

ಕನ್ನಡಿಯಲ್ಲಿ ಹಾಯ್ದು ಹೊರಗೆ ಕಾಣುವ ಒಬ್ಬ ವೃದ್ಧ ಸ್ತ್ರೀಯ ಚಿತ್ರ. ಅದರ ಬುಡದಲ್ಲಿ ಇಂಗ್ಲಿಷಿನಲ್ಲಿ "ಮಾಯ್ ಮದರ್" ಎಂದು ಬರೆದಿತ್ತು!

ಅವನು ಆ ತೊಯ್ದ ಚಪ್ಪಲಿಗಳನ್ನೇ ಮೆಟ್ಟಿಕೊಂಡು ಏನೋ ಕಳೆದುಕೊಂಡವನಂತೆ ಸೇತುವೆಯ ದಡಕ್ಕೆ ಬಂದು ನಿಂತನು. ಯಾವುದೋ ಧೈರ್ಯದಿಂದ ಅವನು ಸೇತುವೆಯ ಮೇಲೆ ಅಂಜಿ ಗಾಲಿಕ್ಕುತ್ತ ದಾಟತೊಡಗಿದನು. ಸೇತುವೆ ಮಣಿಮಣಿದು ಎದ್ದರೂ ಅವನು ಮುಂದುವರೆಯುವುದನ್ನು ಬಿಡಲಿಲ್ಲ. ಅವನು ಕಡೆಗೆ ಸೇತುವೆಯನ್ನು ದಾಟಿಯೇ ಬಿಟ್ಟನು.

ಈಗ ಅವನ ಮೈ ಉಬ್ಬಿತ್ತು. ಅವನು ಸರಸರನೆ ಈಚಲು ಮರಗಳ ಸಂದಿಯಲ್ಲಿ ತೂರಿ ಹೋಗಿ ತನ್ನ ಸಾಯ್‌ಕಲ್ಲು ಹಿಡಿದುಕೊಂಡನು. ಅದನ್ನು ಏರುತ್ತಲೇ ಅವನು ಬಂದ ದಾರಿಯಲ್ಲಿ ಸೆಡಲು ತುಳಿಯತೊಡಗಿದನು.

ಹಿಂದೂ ಸಂಸ್ಕೃತಿ ಮತ್ತು ಸಮಾಜದ ಆಚಾರಗಳು

ಲೇಖಾಂಕ ೨

ಶ್ರೀ. ಅಪ್ಪಣ್ಣ ಹೋತಿ, ಕೂಡ್ಲಿಗಿ

ಹಿಂದುಗಳ ಜೀವನನೆಂದರೆ ಧರ್ಮಪ್ರಧಾನವಾದುದು. ಧರ್ಮದ ನಿಯಮಗಳು ಕಾಲಾನುಸಾರ ಬದಲಾಗಲಾರವು. ಅವು ನಿತ್ಯ-ನಿಶ್ಚಿತ ಸೂರ್ಯನಿಗೆ ಬೆಳಕು, ಅಗ್ನಿಗೆ ಉಷ್ಣ ಗಾಳಿಗೆ ಚಲನ ಇರುವಂತೆ ಮಾನವನಿಗೆ ಧರ್ಮ—ಎಂಬುದುಹಿಂದುಗಳ ದೃಢನಿಷ್ಠೆ !

ಆಚಾರದ ಆದರ್ಶ

ನಾವು ನಮ್ಮ ಜಾತಿಯ ಹೆಸರನ್ನು "ಹಿಂದು" ಪದದ ಆಧಾರದ ಮೇಲೆ "ಹಿಂದೂ" ಎಂದೇಕೆ ಇಟ್ಟುಕೊಂಡೆವು? ಸಂಸ್ಕೃತದಲ್ಲಿ. ಯಾದರೂ ಯಾವ ಶಬ್ದವೂ ನಿರರ್ಥಕವಾಗಿರದು; ಯಾವ ಪರಿವರ್ತನೆಯೂ ವ್ಯರ್ಥವಾಗಿ ಮಾಡಲ್ಪಡುವುದಿಲ್ಲ. "ಹೀನಂ ದೂಷಯತೀತಿ ಹಿಂದುಃ" ಇದು ವೇರುಶಾಂತ್ರದ ಪರಿಭಾಷೆಯಿದೆ. ಸುಳ್ಳು ಹೇಳುವವನ್ನು ಶಾಸ್ತ್ರೀಯ ಕಾರ್ಯಗಳನ್ನು ದ್ವೇಷಿಸುವವನು, ಉಪಸ್ಥಾನ (ಸಂಧ್ಯಾದಿಕರ್ಮ) ಮಾಡದಿರುವವನು, ನಿರುತ್ತರನು (ತನ್ನ ಅಸತ್ಯವಾದದ ಮೇಲೆ ಹಟ ಮಾಡುವವನು) ಆಮಂತ್ರಣವನ್ನು ಕೊಟ್ಟು ಕರೆಯಿಸಿ ಬಂದವನನ್ನು ಉಪಮಾನಿಸುವವನು, —ಈ ಪಂಚವಿಧ ಜನರನ್ನು "ಹೀನ" ಎಂದು ಕರೆಯಲಾಗಿದೆ ಯಾರು ಇಂಥವರನ್ನು ತಮ್ಮ ಸಮಾಜದಿಂದ ಹೊರಗೆ ಹಾಕುವರೋ ಅವರನ್ನು ಹಿಂದೂ ಎಂದು ಕರೆಯುತ್ತಿದ್ದರು. ಇದು ನಮ್ಮ ಸಮಾಜದ ಆದರ್ಶವಾಗಿದ್ದಿತು. ಈ ಶಬ್ದಕ್ಕೆ ಮತ್ತೊಂದು ವ್ಯಾಖ್ಯೆ ಇದೆ "ಹೀನ ಹಿಂಸಾದುನೋಡಿ" ಹಿಂಸೆಯನ್ನು ನಾಶಮಾಡುವ-ಎಂದರೆ ಅಹಿಂಸಕ ಎಂದು. ಇದೇ ಶಬ್ದವು ಯೂನಾನಿಯಲ್ಲಿ "ಹ"ದ ಲೋಪವಾಗಿರುವುದರಿಂದ "ಇಂದು" ವಾಯಿತು ಮತ್ತಿದರಿಂದ "ಇಂಡಿಯಾ" ಎಂದು ಇಂಗ್ಲಿಷಿನಲ್ಲಾಯಿತು. ಜಾತಿಯ ಹೆಸರಿನಲ್ಲೇ ನಮ್ಮ ಸಮಾಜದ ಆದರ್ಶವು ನಿಹಿತವಾಗಿದೆ ಮತ್ತೆ ಜಾಮಳರಣದಲ್ಲಿ ನಮ್ಮ ಸನಾತನಪ್ರಣಾಳಿಯೂ ಇದೇ ಆಗಿದೆ.

ಪ್ರಾಣಿಗಳಿಗೆ ಕಷ್ಟವಾಗಬಾರದೆಂಬ ಆದರ್ಶವನ್ನೆದುರಿಗೆ ಇಟ್ಟುಕೊಂಡೇ ಹಿಂದೂ ಸಮಾಜದ ಸಮಸ್ತ ಆಚಾರಗಳು ನಡೆಯುತ್ತವೆ. ಮನುಷ್ಯನು ಅಂತರ್ಮುಖಿಯಾಗಲಿ; ಬಹಿರ್ಮುಖವಾದ ಪ್ರವೃತ್ತಿಯು ಅಸಂತೋಷ ಮತ್ತು ಸಂಘರ್ಷಣೆಯನ್ನುತ್ಪನ್ನ ಮಾಡುತ್ತದೆ. ಅದರಿಂದಾಗಿ ಪ್ರಾಣಿಗಳಿಗೆ ಕಷ್ಟವಾಗುತ್ತದೆ ಮತ್ತು ಜೀವನದಲ್ಲಿ ದುಃಖಿಗಳ ಸಂಖ್ಯೆ ಹೆಚ್ಚಾಗುತ್ತದೆ. ಅಂತರ್ಮುಖಿಯಾಗುವುದೇ ಶಾಂತಿಯ ಮೂರ್ತಿ. ಇದರಿಂದಾಗಿ ಅಧಿಕಾರತ್ಯಾಗವೂ ತನಗಾಗಿ ಕನಿಷ್ಠಮ ಸಂಚಯವೂ ಮತ್ತು ಉಪಭೋಗವೂ—ಇವು ಹಿಂದೂ ಆಚಾರದ ಮುಖ್ಯ ಆದರ್ಶವಿದೆ. ವಿಶ್ವದಲ್ಲಿ ಸುಖ ಮತ್ತು ಶಾಂತಿಯು ನೆಲಸುವುದಕ್ಕೆ ಇದಕ್ಕಿಂತ ಸುಲಭಕರ ಮಾರ್ಗವೆ ಮತ್ತೊಂದಿಲ್ಲ.

ಜೀವನವಿಷ್ಟೇ ಅಲ್ಲ. ಅದು ಅನಾದಿ ಮತ್ತು ಅನಂತವಾಗಿದೆ. ಈ ಲೌಕಿಕಜೀವನವು ಆ ಜೀವನದ ಅತ್ಯಂತ ಕ್ಷುದ್ರವಾದಂಶವು. ಆದರೂ ಮನುಷ್ಯನ ಜೀವನವು ಅತ್ಯಂತ ಬಹುಮೂಲ್ಯವಾದುದು. ಇದು ಕರ್ಮಯೋನಿಯು. ಇದೇ ಯೋನಿಯು ಕರ್ಮಶೇಷವನ್ನು ಸಮಸ್ತಜೀವನಗಳಲ್ಲಿ ಭೋಗಿಸಬೇಕಾಗಿದೆ. ಇದು ಉಪಾರ್ಜನೆಯ ಸ್ಥಾನ. ಸತ್ಯವೇ ಆಗಲಿ ಅಸತ್ಯವೇ ಆಗಲಿ, ಎಂತಹುದೇ ಕರ್ಮವೆ ಮಾಡಲ್ಪಟ್ಟರೂ ಅದನ್ನೇ ಭೋಗಿಸಬೇಕಾಗುವುದು ಸಂಪೂರ್ಣ ಜೀವಿಗಳಲ್ಲಿ ಕೇವಲ ಶರೀರಭೇದವಿದೆ. ನಾವು ಮುಂದೆ ಯಾವುದೇ ಆಗಲಿ—ಜೀವವಲ್ಲಿ ಉತ್ಪನ್ನವಾಗಬಹುದು. ನಮ್ಮ ಪೂರ್ವಜನ್ಮದಲ್ಲಿ ಸಂಬಂಧಿ ಯಾರಾಗಿದ್ದರೂ ಮತ್ತೆ ಮುಂದಿನ ಜನ್ಮದಲ್ಲಿ ಯಾರಾಗುವರೆಂಬದನ್ನು ಹೇಳಲಾಗದು. ಈ ರೀತಿಯಾಗಿ ಪ್ರಾಣಿಮಾತ್ರದೊಡನೆ ಅತ್ಮೀಯತೆಯ ಸತ್ಯರ್ಮದ ಪ್ರೇರಣೆಗೆ ಹಿಂದೂಸಂಸ್ಕೃತಿಯು ಕೊಡುವಷ್ಟು ವ್ಯಾಪಕ, ಸುದೃಢ ಮತ್ತು ಸಂಪೂರ್ಣ ಆಧಾರವೆ

ಅನ್ಯತ್ರ ಅಪ್ರಾಪ್ಯವು. ಈ ಆಧಾರದ ಮೇಲೆಯೇ ಹಿಂದೂಸಮಾಜವು ಪ್ರತಿಷ್ಠಿತವಾಗಿದೆ.

ವನಸ್ಪತೀನಾಂ ಸರ್ವೇಷಾಮುಪಘಾತಂ ಯಥಾ ತಥಾ |
ತಥಾ ತಥಾ ದಮಃ ಕಾರ್ಯೋ ಹಿಂಸಾಯಾಮಿತಿ ಧಾರಣಾ ||

(ಮನು: ೮-೫-೨೮೫)

ಯಾವನೇ ಆಗಲಿ, ವನಸ್ಪತಿಗಳಿಗೆ ಕಷ್ಟ ಕೊಟ್ಟರೆ, ಅವನು ಯಾವ ಯಾವ ಪ್ರಕಾರದ ಕಷ್ಟವನ್ನು ಕೊಡುತ್ತಾನೆಯೋ ಆಯಾ ಪ್ರಕಾರದ ದಂಡನೆಯನ್ನು ರಾಜನು ಅವನಿಗೆ ವಿಧಿಸುವನು. ಈ ಆಜ್ಞೆಯು ಘೋಷಿಸುವುದೇನು ?— ಜೀವಹಿಂಸೆಯಂತು ದೂರದ ಮಾತಾಯಿತು. ವೃಕ್ಷಾದಿಗಳನ್ನು ಕಡಿಯುವುದೂ ಅಪರಾಧವಾಗಿ ಪರಿಗಣಿಸಲ್ಪಡುತ್ತಿದ್ದಿತೆಂದು ಸ್ಪಷ್ಟವಾಗಿದೆ; ಮತ್ತು ಆದಕ್ಕಾಗಿ ಶಿಕ್ಷೆಯು ಅತಿ ಕಠೋರವಾಗಿದ್ದಿತು. ಉರುವಲಿಗೆಂದು ಹಸಿ ಮರಗಳನ್ನು ಕಡಿಯುವುದೂ ಅಪವಿತ್ರ ಭೋಜನವೂ ಒಂದೇ ಜಾತಿಯ ಪಾಪಗಳೆಂದು ಪರಿಗಣಿಸಲ್ಪಟ್ಟಿದ್ದುವು. ಬ್ರಾಹ್ಮಣನಾದವನೇ ಆದರೂ ಅವಶ್ಯಕತಾವಶನಾಗಿ ಯಾವುದಾದರೂ ಫಲವೀವ ಪುಷ್ಪವನ್ನೀವ ವೃಕ್ಷ ಅಥವಾ ಲತೆಯನ್ನು ಕಡಿದುದೇ ಆದರೆ, ಅವನಿಗೆ ನೂರು ಗುಚ್ಛೆಗಳ ಜಪವನ್ನು ಗೈದು ಈ ಪಾಪದ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕಾಗಿದ್ದಿತೆಂದು ನಿರ್ದೇಶವಿದೆ.

ಹಿಂದೂಸಂಸ್ಕೃತಿಯು ಧರ್ಮಪ್ರಾಣವಾಗಿದೆಯೆಂಬುದರ ಬಗ್ಗೆ ಯಾರಿಗೂ ಯಾವ ಶಂಕೆಯೂ ಇಲ್ಲ. ಧರ್ಮಾಚಾರದಿಂದಲೇ ಲೌಕಿಕ ಮತ್ತು ಪಾರಲೌಕಿಕ ಅಭ್ಯುದಯವಾಗುವುದೆಂದು ಶಾಸ್ತ್ರಗಳು ಸ್ಪಷ್ಟವಾಗಿ ಘೋಷಿಸುತ್ತವೆ. ಆದುದರಿಂದ ಸಮಸ್ತ ಹಿಂದೂ ಆಚಾರವು ಧರ್ಮವನ್ನೇ ಪ್ರಧಾನವಾಗಿಟ್ಟುಕೊಂಡು ನಡೆಯುತ್ತದೆ. ಮಾನವನ ಸಾಮಾಜಿಕಜೀವನದಲ್ಲಿ ಅರ್ಥಕಾಮಗಳೇ ಪ್ರಧಾನವಾದುವುಗಳು. ವರ್ತಮಾನ ಪರಿಭಾಷೆಯಲ್ಲಿ ಮನುಷ್ಯನ ಸಮಸ್ಯೆಗಳೆಂದರೆ ಆಹಾರವು ಮತ್ತು ಸಂತಾನೋತ್ಪಾದನೆ. ಹಿಂದೂ ಸಮಾಜವು ಈ ಎರಡೂ ಅವಶ್ಯಕತೆಗಳನ್ನು ಒಪ್ಪಿಕೊಂಡಿದೆ; ಆದರೆ ಗೌಣವಾಗಿ ಇವು ಮುಖ್ಯ ಅವಶ್ಯಕತೆಗಳಲ್ಲ. ಮನುಷ್ಯನ ಮುಖ ಲಕ್ಷ್ಯವು ಮೋಕ್ಷವು. ಕರ್ಮವನ್ನು ಗೈದು ಜೀವನ-ಮರಣವಲಯದಿಂದ ಬಿಡುಗಡೆ ಹೊಂದುವುದಕ್ಕೆಂದೇ ಈ ಕರ್ಮಕ್ಷೇತ್ರದಲ್ಲಿ ಮನುಷ್ಯನು ಬಂದಿರುವುದು. ಭೋಜನ-ಸಂತಾನೋತ್ಪಾದನೆಗಳನ್ನು ಕ್ರಿಮಿಕೀಟಕಗಳೂ ನಡಸುವುವು. ಮನುಷ್ಯನೂ ಇದರಲ್ಲಿಯೇ ತೊಡಗಿರುವುದಾದರೆ, ಅವನಲ್ಲಿ ವಿಶೇಷವೇನುಳಿಯಿತು ? ಮೋಕ್ಷವನ್ನು ಪ್ರಧಾನೋದ್ದೇಶವಾಗಿ ಪರಿಗಣಿಸಿದುದರಿಂದ, ಧರ್ಮವು ಪ್ರಧಾನವಾಯಿತು. ಧರ್ಮದಿಂದಲೇ ಅಂತಃಕರಣದ ಶುದ್ಧಿಯಾಗುವುದೆಂದೂ ಇದರಿಂದಲೇ ಜ್ಞಾನೋದಯವಾಗಿ ಮೋಕ್ಷವು ಪ್ರಾಪ್ತವಾಗುವುದು. ಆದುದರಿಂದಲೇ ಸಾಮಾಜಿಕವ್ಯವಹಾರದಲ್ಲಿ ಧರ್ಮವು ಪ್ರಧಾನವಾಯಿತು. ಧರ್ಮದಿಂದ ಅವಿರೋಧಿಯಾದ (ಧರ್ಮಶಾಸ್ತ್ರಸಮ್ಮತವಾದ) "ಅರ್ಥ" ಮತ್ತು "ಕಾಮ"ಗಳ ಸೇವನೆಯು ಹಿಂದೂಸಮಾಜದಲ್ಲಿ ನಿಯತವಾಗಿದೆ. ಆದರೆ ಧರ್ಮಕ್ಕಾಗಿ ಜೀವನವನ್ನೂ ತ್ಯಾಗ ಮಾಡಲು ಸಿದ್ಧರಾಗಿರಬೇಕು. ತಿಲಮಾತ್ರವಾದರೂ ಧರ್ಮವಿರುದ್ಧವಾದ "ಅರ್ಥ" ವಾಗಲಿ, "ಕಾಮ" ವಾಗಲಿ ಎಷ್ಟು ಮಹೋನ್ನತವಾಗಿದ್ದರೂ ಸರ್ವದಾ ತ್ಯಾಜ್ಯವು.

ಪ್ರತಿಯೊಂದು ಸಮಾಜವು ತನ್ನ ಆಚಾರ-ವಿಚಾರವನ್ನು, ನಡೆ-ನುಡಿಗಳನ್ನು, ವೇಷ ಭೂಷಣಗಳನ್ನು ತನ್ನ ಆದರ್ಶಕ್ಕೆ ಅನುಗುಣವಾಗಿಯೆ ಸ್ಥಿರಗೊಳಿಸುವುದು. ತನ್ನ ಆದರ್ಶವನ್ನು ಪಡೆಯಬೇಕಾದರೆ, ವ್ಯಕ್ತಿಗೆ ತನ್ನ ಜೀವನವನ್ನು ತನ್ನ ಆದರ್ಶಕ್ಕೆ ಅನುಸಾರವಾಗಿ ಹೊಂದಿಕೊಂಡಿರುವಂತೆ ಮಾಡಿಕೊಳ್ಳಬೇಕಾಗುವುದು. ಹಿಂದೂಸಮಾಜದ ಆದರ್ಶವು ಮೋಕ್ಷವು—ಅಂತರ್ಮುಖತೆ. ಅತಏವ ಅವನ ಆಚಾರವು ಸರ್ವಥಾ ಧರ್ಮನಿಯಂತ್ರಿತವಾಗಿರುವುದು. ಆದರಲ್ಲಿ ತಿಲಮಾತ್ರವೂ ಪ್ರಮಾದಕ್ಕೆ ಅಥವಾ ಉಚ್ಛೃಂಖಲತೆಗೆಡೆ ಇಲ್ಲ. ಆದರಲ್ಲಿ ಪ್ರತಿಯೊಂದು ಕೃತ್ಯದ ಮೌಲ್ಯವು ಧರ್ಮದಿಂದ— ಅಂತರ್ಮುಖತೆಯಿಂದ— ನಿರ್ಧಾರಿತವಾಗುತ್ತದೆ. ಅಲ್ಲಿ ಸಂಗ್ರಹಕ್ಕಿಂತ ತ್ಯಾಗಕ್ಕೆ ಹೆಚ್ಚು ಆದರವು ದೊರೆಯುತ್ತದೆ. ಈ ಮಾತನ್ನು ಹೃದಯಂಗಮ ಮಾಡಿಕೊಳ್ಳದಲೆ ಹಿಂದೂಗಳ ಆಚಾರ, ರೀತಿ-ರಿವಾಜುಗಳು ಮೊದಲಾದುವುಗಳ ಮಹತ್ವ ಮತ್ತು ಅವುಗಳ ಸಾರ್ಥಕತೆ ತಿಳಿಯಲಾರದು.

ಯುಗಾನುರೂಪ ಆಚಾರ

ಹಿಂದೂ ಆಚಾರದ ಆಧಾರ ಧರ್ಮವು; ಧರ್ಮವು ನಿತ್ಯವಾದುದು; ಆದುದರಿಂದ ನಮ್ಮ ಆಚಾರಶಾಸ್ತ್ರಗಳೂ ನಿತ್ಯವಾದುವುಗಳು. ಧರ್ಮವು ಸಮಯಾನುಸಾರವಾಗಿ ಪರಿವರ್ತಿತವಾಗುತ್ತಲಿರುತ್ತದೆಯೆಂತಲೂ, ಆಚಾರವು ಪರಿಸ್ಥಿತಿಗಳಿಗನುಸರಿಸಿ ಪರಿವರ್ತಿತವಾಗುತ್ತಲಿರುತ್ತದೆಯೆಂದೂ ಇಂದು ಹೇಳುವರು. ವಸ್ತುತಃ ಧರ್ಮವೆಂದಿಗೂ ಬದಲಾಗುವುದೇ ಇಲ್ಲ. ಅಗ್ನಿಯ ಧರ್ಮವೆಂದಿಗೂ ಉಷ್ಣತೆ; ಅದೆಂದಿಗೂ ಉಷ್ಣವಾಗಿಯೇ ಇರುತ್ತದೆ. ಆಚಾರದ ಆದರ್ಶವು ಬದಲಾಗುವುದಿಲ್ಲ. ಪರಿಸ್ಥಿತಿಗಳಿಗನುಸರಿಸಿ ಆಚಾರಗಳಲ್ಲಿ ಆಗಬೇಕಾದ ಪರಿವರ್ತನೆಗಳ ವಿಧಾನವೂ ಶಾಸ್ತ್ರಗಳಲ್ಲಿದೆ. ಪ್ರಕೃತಿಯಲ್ಲಿ ಪರಿವರ್ತನೆಯು ಅನಿಯಮಿತ ರೂಪದಲ್ಲಾಗುವುದಿಲ್ಲ. ಪರಿವರ್ತನೆಗಳಿಗೂ ನಿಯಮಗಳಿವೆ. ಆದುದರಿಂದ ಪರಿಸ್ಥಿತಿಯೂ ಸಹಸಾ ಪರಿವರ್ತನೆಯನ್ನು ಪಡೆಯುವುದಿಲ್ಲ. ಅದು ಸಹ ನಿಯಮಾನುಸಾರವೇ ಉಪಸ್ಥಿತವಾಗುತ್ತದೆ. ಈ ನಿಯಮಗಳನ್ನು ತಿಳಿದುಕೊಂಡು ಪ್ರತ್ಯೇಕ ಯುಗಕ್ಕೆಂದು ಶಾಸ್ತ್ರಗಳು ಆಚಾರದಲ್ಲಿ. ಸಾಧನದಲ್ಲಿ ಕೆಲವು ಭೇದಗಳನ್ನು ಸೂಚಿಸಿವೆ. ಆ ಪರಿವರ್ತನೆಗಳು ಶಾಸ್ತ್ರೀಯ ಸೀಮೆಯಲ್ಲಿಯೇ ಇರುತ್ತವೆ. ಸಮಾಜದಲ್ಲಿ ಉಂಟಾಗಿರುವ ಪರಿವರ್ತನೆಗಳು ಶಾಸ್ತ್ರವನ್ನು ತೊರೆದಿದ್ದರೆ, ಅವು ಪರಿವರ್ತನೆಗಳಲ್ಲ, ವಿಕಾರಗಳಾಗುವುವು. ಅವುಗಳಿಂದ ಸಮಾಜದ ಪತನವಾಗಿದೆ; ಆಗುತ್ತದೆ.

ಹಿಂದೂಸಮಾಜದ ಆಚಾರಗಳ ನಿಯಂತ್ರಣವನ್ನು ಸ್ಮೃತಿಗಳು ಮಾಡುತ್ತವೆ. ಪ್ರತಿಯೊಂದು ಯುಗಕ್ಕೆಂದು ಸ್ಮೃತಿಗಳು ಕೆಲವು ವಿಶೇಷ ಆದೇಶಗಳನ್ನೂ ಪ್ರದಾನಮಾಡಿವೆ. ಸಾಮಾನ್ಯ ಆದೇಶ-

ಳು ಸಕಲಯುಗಗಳಲ್ಲಿಯೂ ಪಾಲಿಸತಕ್ಕುವು. ವಿಶೇಷ ಆದೇಶ. ೇ ಯುಗಾಚಾರಗಳೆಂದು ಕರೆಯುಲ್ಪಡುತ್ತವೆ. ಈ ಸೃತಿಗಳಲ್ಲವೆ ಗೃಹ್ಯಸೂತ್ರಗಳೂ ಇವೆ. ಇವು ಕುಲಾಚಾರದ ಆದೇಶಗಳನ್ನು ಒದಗಿಸುತ್ತವೆ ಈ ಯುಗಾಚಾರ. ಕುಲಾಚಾರಗಳನ್ನು ಧ್ಯಾನ. ನಲ್ಲಿಡದೆ, ಜನರು ಪುರಾತನ ನೀತಿ-ರೀತಿಗಳ ಬಗ್ಗೆ ವಿಚಾರಿಸಲು ಯತ್ನಿಸಿದರೆ ಅವರು ತೀರಾ ಭ್ರಮೆಯಲ್ಲಿ ಬೀಳುವರು.

ಮನುಷ್ಯನನ್ನು ಅಂತರ್ಮುಖಿಯನ್ನಾಗಿ ಮಾಡುವುದೇ ಹಿಂದೂಸಂಸ್ಕೃತಿಯ ಮುಖ್ಯಲಕ್ಷ್ಯ. ಇದನ್ನು ಅನುಲಕ್ಷಿಸಿಯೆ. ಯುಗಾಚಾರಗಳು ಆದೇಶಗಳನ್ನು ಕೊಡುತ್ತವೆ. ಮನುಷ್ಯನ ಶಕ್ತಿಯು ಕ್ರಮಶಃ ಕ್ಷೀಣವಾಗುತ್ತಾ ನಡೆದಿದೆ—ಎಂಬ ಮಾತು ಶಾರೀರಿಕ ಮತ್ತು ಮಾನಸಿಕ ದೃಷ್ಟಿಗಳಿಂದ ಸತ್ಯವಿದೆ. ಸಶಕ್ತರಿಗಿಂತಲೂ, ನಿಶ್ಶಕ್ತರೇ ಹೆಚ್ಚು ಸಂಯಮವನ್ನೂ ಕಡಿಮೆ ಶ್ರಮವನ್ನೂ ಮಾಡಬೇಕೆಂಬುದು, ವಿಶ್ವದಲ್ಲಿ ಸಾಧಾರಣ ನಿಯಮವಿದೆ. ಯೋಗ್ಯನಾದ ಚಿಕಿತ್ಸಕನು ಸ್ವಸ್ಥನಾದ, ಸಬಲನಾದ ವ್ಯಕ್ತಿಗೆ ಆಹಾರಾದಿ. ನಿಯಮಗಳನ್ನು, ರೋಗಿಯ ಮೇಲೆ ಹೇರುವಷ್ಟು ಹೇರುವುದಿಲ್ಲ. ಏಕೆಂದರೆ ಆರೋಗ್ಯವನ್ನು ಕಾಪಾಡುವುದೇ ಆತನ ಉದ್ದೇಶವಿರುತ್ತದೆ. ರೋಗಿಯಾದವನು—ನಿರ್ಬಲ ವ್ಯಕ್ತಿ-ಸಹಜವಾಗಿಯೇ ರುಗ್ಣನಾಗುವನು. ಹೆಚ್ಚು ಪಥ್ಯವು ಮತ್ತು ಕಡಿಮೆ ವಿಶ್ರಾಂತಿಯಿಂದ (ದುರ್ಬಲನಾದ) ರೋಗಿಗೆ ಕೇಡಾಗುವುದು. ಆದರೆ ಸಬಲವ್ಯಕ್ತಿಯು ಆಹಾರಾದಿಗಳು, ಶ್ರಮ, ಸಂಯಮವಾದಿ ಏನೇ ಕಾರ್ಯಗಳಿಂದ ಸುಖಸಮ್ಮನ್ನು ಪಡೆಯುವನು. ಅವು ಅವನ ಸ್ವಾಸ್ಥ್ಯದ ಮೇಲೆ ದುಷ್ಪ ಪ್ರಭಾವ ಬೀರುವುದಿಲ್ಲ. ಇನ್ನೊಂದು ಕಡೆಯಿಂದ ನೋಡಿದರೆ, ಸಬಲನಾದವನು ದುಡಿದಷ್ಟು ನಿರ್ಬಲನು ದುಡಿಯಲಾರನು. ಮನುಷ್ಯನ ಮಾನಸಶಕ್ತಿಯು ಕ್ರಮವಾಗಿ ಕ್ಷೀಣಿಸಿದೆ. ಹೇಗೆ ನಿರ್ಬಲನ ಶರೀರವು ಶೀಘ್ರವಾಗಿ ರುಗ್ಣವಾಗುತ್ತ, ಕಷ್ಟದಿಂದ ಆರೋಗ್ಯವನ್ನು ಪಡೆಯುತ್ತದೆಯೋ ಹಾಗೆಯೇ ಸಬಲನ ಶರೀರವು ದೈಹಿಕ ದೃಷ್ಟಿಯಿಂದ ತಾತ್ಕಾಲಿಕ ರುಗ್ಣತೆಯನ್ನು ಪಡೆದರೂ, ಶೀಘ್ರವಾಗಿ ಆರೋಗ್ಯವನ್ನು ಪಡೆದು ಮೊದಲಿನ ಶಕ್ತಿಯನ್ನು ಪಡೆಯುತ್ತದೆ. ಹಾಗೆಯೇ, ದುರ್ಬಲನಾದ ಮಾನವನು ಅಲ್ಪ ವಿಕಾರಗಳಿಗೆ ಪ್ರಶ್ರಯವನ್ನೊದಗಿಸಿಯೇ ಬಹಿರ್ಮುಖಿಯಾಗುವನು. ಮತ್ತೆ ಅವನನ್ನು ತಿರುಗಿ ಅಂತರ್ಮುಖಿಯನ್ನಾಗಿ ಮಾಡುವುದು ಅತಿ ಕಠಿಣವಾಗುತ್ತದೆ.

ಪ್ರಬಲ ಮಾನಸಿಕ ಶಕ್ತಿಯಿದ್ದರೆ—ಒಂದು ವೇಳೆ ಬಹಿರ್ಮುಖಿಯಾದರೂ— ಅವನಲ್ಲಿ ವಿಷಯಪ್ರವೃತ್ತಿಯಾದರೂ — ಅವನು ಸರಳವಾಗಿ ನಿವೃತ್ತಿಹೊಂದಿ ಮತ್ತು ಮೊದಲಿನಂತೆಯೇ ಶೀಘ್ರವಾಗಿ ಅಂತರ್ಮುಖಿಯಾಗುವನು. ನಾವು ಇಂದಿನ ಮಾನವ ಜೀವನವನ್ನು ನೋಡಿದರೆ, ಮತ್ತು ಪುರಾಣಗಳಲ್ಲಿಯ ಋಷಿಗಳ ಚರಿತ್ರೆಗಳನ್ನು ಗಂಭೀರತೆಯಿಂದ ಮನನ ಮಾಡಿದರೆ, ಈ ಮಾತು ಸ್ಪಷ್ಟವಾಗುತ್ತದೆ. ಇದಕ್ಕೆಂದೇ ಶಾಸ್ತ್ರಗಳು ಸಂಯಮದ ಸೀಮೆಗಳನ್ನು ಪ್ರತಿಯೊಂದು ಯುಗದಲ್ಲಿಯೂ ಕ್ರಮಕ್ರಮವಾಗಿ (ಬರುಬರುತ್ತ) ಕಠಿಣತರವಾಗಿ ಮಾಡಿರುವುವು. ಈ ಸಂಯಮದ ಕಾಠಿಣ್ಯವು ನಿರ್ಬಲಮನಸ್ಕನಾದ ಮಾನವನಿಗೆ ಪರಮಾವಶ್ಯಕವು. ಎಲ್ಲಿ ಸಂಯಮದ ಸೀಮೆಗಳು ಕಠಿಣತರವಾಗಿ, ಕಠೋರವಾಗಿದೆಯೋ ಅಲ್ಲಿ ಆಧ್ಯಾತ್ಮಿಕ ಸಾಧನೆಯು ಸರಳವೂ ಸುಲಭವೂ ಆಗುತ್ತ ಬಂದಿದೆ. ನಿರ್ಬಲ ಮಾನವನಿಗೆ ಶ್ರುತಿಯ ಸೀಮೆಗಳನ್ನು ಕಡಿಮೆ ಮಾತಲಾಗಿದೆ. ನಮ್ಮ ಸಾಮಾಜಿಕ ಆಚಾರ, ಶಾಸನ, ಗೃಹ, ನಗರ, ಯಾತಾಯಾತ ಪ್ರಭೃತಿ ಸಮಸ್ತದ ಮೇಲೆ ಯುಗಾಚಾರದ ಪ್ರಭಾವವು ಬಿದ್ದಿದೆ. ಆದ ಕಾರಣ ಪ್ರಾಚೀನದ ಅನ್ವೇಷಣದಲ್ಲಿ ಈ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳದೇ ವಿವೇಚನೆ ಮಾಡುವುದು ಭ್ರಮೆಪೂರ್ಣವಾಗಿದೆ.

ಶಾಸ್ತ್ರೀಯ ಜೀವನ.

ಯುಗಾನುರೂಪ ಆಚಾರ ಮತ್ತು ಸಾಧನೆಗಳಲ್ಲಿ ಪರಿವರ್ತನೆಯನ್ನು ಮನುಷ್ಯನ ಮಾನಸಿಕ ಮತ್ತು ಶಾರೀರಕ ಶಕ್ತಿಗಳ ಹ್ರಾಸವನ್ನು ಗಮನಿಸಿಯೇ ಮಾಡಲಾಗಿದೆಯೆಂಬುದು ನಿಜ. ತನ್ನ ಪೂರ್ಣ ದೃಷ್ಟಿಯಲ್ಲಿ ಯಾವುದನ್ನು ಜೀವನವೆಂದು ಹಿಂದೂ ಸಮಾಜವು ಬಗೆಯುತ್ತದೆಂಬ ಪ್ರಶ್ನೆಯು ಸಹಜವಾಗಿ ಈ ಸಂದರ್ಭದಲ್ಲಿ ಎದ್ದು ಕಾಣಿಸುತ್ತದೆ. ಈ ರೀತಿಯಾಗಿ ನೋಡಿದರೆ ರೋಗಿ ಮತ್ತು ದುರ್ಬಲನಾದವನಿಗೆ ಚಿಕಿತ್ಸಕನು ಆದೇಶಿಸುವುದೇ ಪೂರ್ಣ ಜೀವನವು. ಸಬಲ ಪುರುಷನ ಜೀವನವು ಅವನ ಸ್ವಂತಿಕೆಯ ವಸ್ತುವಾಗುವುದೇ ಅಗಲಿ ಆಚರಣೆಯ ವಸ್ತುವಾಗಲಾಗಲಾರದು. ಅವನು ಆ ರೀತಿಯಲ್ಲಿ ಆಚರಣೆಯನ್ನು ತಂದುಕೊಂಡರೆ ಹಾನಿಯೇ ತಂದುಕೊಳ್ಳುವನು. ಇದೇ ತೆರನಾಗಿ ಇಂದಿನ ಯುಗಕ್ಕೆಂದು ಶಾಸ್ತ್ರಗಳು ಯಾವ

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ನಿದರ್ಶನಾದಾರಿಗಳಾಗಿವೆ.

ಕ್ರಾ. ಅ. ೧೨೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಆಚಾರಗಳನ್ನು ಮತ್ತು ಸಾಧನೆಗಳನ್ನು ನಿರ್ದಿಷ್ಟಗೊಳಿಸಿವೆಯೋ ಅವೇ ಇಂದಿಗೆ ಆಚರಣೀಯವಾಗಿವೆ. ಇಂತಹ ಮನುಷ್ಯನ ಪೂರ್ಣ ಜೀವನವು ಮತ್ತು ಆಚಾರವು ಅದಿಯುಗದ್ದೇ ಆಗಿದೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಹಿಂದೂ ಸಂಸ್ಕೃತಿಯು ಅರಣ್ಯಾನಿ— ಸಂಸ್ಕೃತಿಯಾಗಿದೆ. ಸ್ವಚ್ಛಂದ ತಪೋವನಗಳಲ್ಲಿ ಜೀವಿಸುವ ತ್ಯಾಗಿಗಳಾದ ಮಹರ್ಷಿಗಳು ಇದನ್ನು ಪೋಷಿಸಿರುವರು ಆ ತಪೋಮೂರ್ತಿಗಳೇ ಈ (ಮಾನವ) ಸಮಾಜದ ಆದರ್ಶವಾಗಿರುವರು. ಈಗೀಗ ಪಾಶ್ಚಾತ್ಯ ಪ್ರಪಂಚದಲ್ಲಿ ಪ್ರಾಕೃತಿಕ ಜೀವನದ ಮೇಲೆ ಹೆಚ್ಚು ಧ್ಯಾನವನ್ನು ಕೊಡುವುದು ಪ್ರಾರಂಭವಾಗಿದೆ. ಆದರೆ ತಪೋವನದ ಸಂಯಮಪೂರ್ಣ ಶಾಸ್ತ್ರೀಯ ಜೀವನಕ್ಕೂ, ಪ್ರಾಕೃತಿಕ ಉತ್ಸೃಂಖಲ ಪಶುಜೀವನಕ್ಕೂ ಅತ್ಯಂತ ಅಂತರವಿದೆಯೆಂಬುದನ್ನು ನೆನಪಿನಲ್ಲಿಡಬೇಕಾಗಿದೆ. ಮನುಷ್ಯನ ಪ್ರಾಚೀನ ವನ್ಯಜೀವನವೇ ಚೆನ್ನಾಗಿದ್ದಿತೆಂಬ ಪಾಶ್ಚಾತ್ಯರ ಮಾತು ಸರಿಯಾದುದೇ. ವರ್ತಮಾನ ನಾಗರಿಕ ಜೀವನವು ಅವನನ್ನು ಹೀನಶಕ್ತನನ್ನಾಗಿಸಿದೆ. ಆದರೆ ಪುರಾತನ ಜೀವನವು ಪಶುಸಮಾನ ಪ್ರಾಕೃತಿಕ ಜೀವನವು ಎಂದಿಗೂ ಹಿಂದೂ ಸಮಾಜದ ಅಭೀಷ್ಟ ನಾಗಿರಲಿಲ್ಲ; ಆಗಿರಲೂ ಆಗದು.

ಪಾಶ್ಚಾತ್ಯ ಜಗತ್ತಿನ ಪ್ರಕೃತಿವಾದಿಗಳು ಪ್ರತಿಯೊಂದು ಪಶುಗಳ ಉದಾಹರಣೆಯನ್ನು ಕೊಡಲು ಯತ್ನಿಸುತ್ತಾರೆ. ಡಾರ್ವಿನ್ನಿನ ವಿಕಾಸವಾದದಿಂದ ಅವರು ಭ್ರಾಂತರಾಗಿರುವರು. ಇಂದಿನ ವಿವಿಧ ಜಾತಿಗಳಲ್ಲಿ ಮಾಂಸಾಹಾರಿಗಳೇ ಅಧಿಕ ಸಂಖ್ಯೆಯಲ್ಲಿರುವರು ಕ್ರೂರರು, ಮೂರ್ಖರು ಮತ್ತು ಅಸಭ್ಯರಾಗಿರುವರೆಂದು ಅವರ ಯೋಚಿಸರು. ಮನುಷ್ಯನು ಪಶುವಾಗಬೇಕೆಂದು ಇಚ್ಛಿಸನು ಪ್ರಾಕೃತಿಕ ಜೀವನವನ್ನು ಅಳವಡಿಸಿಕೊಳ್ಳುವ ಮೋಹದಲ್ಲಿ ಬಿದ್ದು ಶಿಕ್ಷೆ-ದೀಕ್ಷೆಗಳನ್ನು ತ್ಯಜಿಸಿದನಾದರೆ ಮನುಷ್ಯನು ಮೂರ್ಖನೂ ಅಸಭ್ಯನೂ ಆಗಿಬಿಡುವನು. ಪಶುಗಳಿಗೆ ತಮ್ಮ ತಮ್ಮ ಆಹಾರಗಳನು ಗುರುತಿಸುವ ಸ್ವಾಭಾವಿಕ ಶಕ್ತಿಯಿದೆ; ಅವು ಸಂತಾನೋತ್ಪಾದನದ ಸಂಬಂಧವಾಗಿ ನಿಶ್ಚಿತಸಮಯದಲ್ಲಿ ಪ್ರವೃತ್ತವಾಗುವ ಸ್ವಭಾವವನ್ನಿಟ್ಟುಕೊಂಡಿವೆ. ಭೋಜನಪ್ರಾಪ್ತಿ ಮತ್ತು ಆತ್ಮರಕ್ಷಣೆಯ ಸಾಧನೆಗಳು ಅವುಗಳಿಗೆ ಜನ್ಮಜಾತನಾಗಿ ಪ್ರಾಪ್ತವಾಗಿರುತ್ತವೆ. ಮನುಷ್ಯನ ಬಾಲಕನು ಕಲಿಸಿಕೊಡದಂತೆಯೇ ಮಂಗನಂತೆ ಈಜಾಡಲೂ ಆರನು, ಮರಗಳನ್ನು ಏರಲಾರನು. ಅವನಿಗೆ ತನ್ನ ಆಹಾರದಲ್ಲಿ ಇದು ಹಾನಿಕಾರಕ,—ಇದು ಲಾಭಪ್ರದವೆಂದು ಗುರುತಿಸುವ ಶಕ್ತಿಯೂ ಇಲ್ಲ. ಇಂತಹ ನಿರ್ಬಲ ಪ್ರಾಣಿಯು ತನ್ನನ್ನು ಪ್ರಕೃತಿಯ ಸ್ವಾಧೀನಕ್ಕೆ ಬಿಟ್ಟುಕೊಂಡರೆ ನಶಿಸಿಹೋಗುವುದು. ವನ್ಯಜಾತಿಗಳಿಗೂ ತಮ್ಮ ಬುದ್ಧಿಯ ಅನುಸಾರವಾಗಿ ಬಹಳ ಮಟ್ಟಿಗೆ ಅಸ್ವಾಭಾವಿಕ ವ್ಯವಹಾರವನ್ನು ಮಾಡಬೇಕಾಗುವುದು. ಒಂದು ವೇಳೆ ಅವು ಸಂಪೂರ್ಣವಾಗಿ ಪಶುಗಳಂತೆ ಪ್ರಕೃತಿಯನ್ನೇ ಅನುಸರಿಸಲು ಇಚ್ಛಿಸಿದ್ದರೆ ಇಂದು ಅವುಗಳ ಸುಳಿವೇ ಇರುತ್ತಿರಲಿಲ್ಲ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಹಾರ್ಮೋನಿಯಂ, ರೇಡಿಯೋ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜೆ. ಮುತ್ತಗಿ

ಭಾರತೀಯ ಆಚಾರವು ತಪೋವನಗಳಿಗೆ ಮಹತ್ತ್ವವನ್ನು ಕೊಡುತ್ತದೆ; ಆದರೆ ಅದರ ಅರ್ಥ ತ್ಯಾಗವೆಂದಾಗಲಿ, ಪಶುತ್ವವೆಂದಲ್ಲ. ವನಗಳಲ್ಲಿ ವಾಸಿಸುತ್ತಿದ್ದ ಮಹರ್ಷಿಗಳು ವಿದ್ಯೆ ಮತ್ತು ಕಲೆಗಳ ಪ್ರಜ್ವಲಿತ ಪ್ರಕಾಶರೂಪಿಗಳಾಗಿದ್ದರು. ಅವರಿಂದಲೇ ಸಮಸ್ತ ವಿಶ್ವವು ತನಗೆಂದು ಆಚಾರ, ಕಲೆ, ಮತ್ತು ಜ್ಞಾನಗಳ ಆದರ್ಶಗಳನ್ನು ಪಡೆಯಿತು. ಪಾಶ್ಚಾತ್ಯ ವಿವೇಚಕರು ಸತ್ಯವು ಸದಾ ಸಮಾನವಾಗಿರುತ್ತದೆಂಬುದನ್ನು ಮರೆತುಬಿಡುವರು. ನಿಯಮಗಳು ಎಲ್ಲೆಡೆಗಳಲ್ಲಿಯೂ ಒಂದೇ ವಿಧವಾಗಿರುತ್ತವೆ. ಮನುಷ್ಯನ ಶಾರೀರಿಕ ಶಕ್ತಿಯು ಕ್ರಮವಾಗಿ ಹ್ರಾಸವಾಗಿದೆ ಎಂಬುದನ್ನು ಅವರು ಒಪ್ಪುವರು; ಆದರೆ ಮಾನಸಿಕ-ಬೌದ್ಧಿಕ ಶಕ್ತಿಗಳ ಹ್ರಾಸವಾಗಿದೆ ಎಂಬುದರ ಬಗ್ಗೆ ಭ್ರಮಿಸುವರು. ಅವರು ಬೌದ್ಧಿಕಹ್ರಾಸವೂ ಆಗಿದೆ ಎಂಬುದನ್ನರಿತುದೇ ಆದರೆ, ಶಾರೀರಿಕ ಶಕ್ತಿಯನ್ನು ಪಡೆಯಲೋಸುಗ ಪಶುತ್ವವನ್ನು ಸ್ವೀಕಾರಮಾಡುವ ಆವಶ್ಯಕತೆ ಇರುವುದಿಲ್ಲ ಮನುಷ್ಯನು ಅಜ್ಞಾನವಶನಾಗಿ— ಮೋಹಪರವಶನಾಗಿ – ಅಧುನಿಕ, ನಾಗರಿಕ, ಯಾಂತ್ರಿಕ ಜೀವನವನ್ನು ಸ್ವೀಕರಿಸಿರುವನೆಂದು ಸ್ಪಷ್ಟವಾಗುತ್ತದೆ. ಇದರಿಂದ ಪರಿತ್ರಾಣವನ್ನು ಪಡೆಯುವ ಪಥವೆಂದರೆ ಜ್ಞಾನದ ವಾಸ್ತವಿಕ ವಿಕಾಸವು. ಇದು ಮನುಷ್ಯನನ್ನು ಪಶುವನ್ನಾಗಿಯಲ್ಲ, ಪೂರ್ಣಮಾನವನನ್ನಾಗಿ ಮಾಡಬೇಕಾಗಿದೆ. ಶಾಸ್ತ್ರೀಯ ಜೀವನವನ್ನು ಪಡೆಯಬೇಕಾಗಿದೆ. ಪ್ರಾಕೃತಿಕ ಜೀವನ ಮತ್ತು ಶಾಸ್ತ್ರೀಯ ಜೀವನಗಳ ಭೇದವನ್ನು ಧ್ಯಾನದಲ್ಲಿಡದೆ ಹೋದರೆ-ಹಿಂದೂ ಸಮಾಜದ ಆಚಾರಗಳ ರಹಸ್ಯವು ತೊಡಕಿನಲ್ಲಿಯೇ ಇದ್ದುಬಿಡುತ್ತದೆ.

ಕಾದು ಕುಳಿತಿಹೆ.

ಶ್ರೀ. ಮುದೇನೂರ ಸಂಗಣ್ಣ, ಹಿಗಟೇರಿ

೧

ಎನ್ನ ಜೀವದ ಜೀವವಾಗಿಹ
ನೀರ, ಏತಕೆ ಬಾರೆಯೊ?
ಖೂಜರಾಗಿರುವೆನ್ನ ತನುವಿಗೆ
ಹಸಿರು ವಸನವ ತಾರೆಯೊ?

೨

ಕೋಟಿಕಂಬನಿ ಶಂಬಹೊತ್ತಿಹ
ವಿರಹ ಮುಂಟಪದೊತಲಲಿ
ಜೀವ ಶಲ್ಲಣಗೊಂಡು ಮುರುಟಿದೆ—
(ನಿನ್ನ ನೆನಹಿನ ಸಿಡಿಲಲಿ!)

೩

ಒಲುಮೆಯುರಿಮಸಿ ನಿನ್ನ ಚಿತ್ರವ
ಬರೆದೆ ಬರಿವುದು ಕರುಳಲಿ:
ಒಮ್ಮೆ ಬಾರೆಲೊ ಮೊಗವ ತೋರೆಲೊ
ಕಣ್ಣಾತರ ಕರಗಲಿ!

೪

ಬಿಸಿಲನುಂಡಿಹ ದಗ್ಧಬಗೆಯಿದೊ
ನಿನ್ನ ಅಪ್ಪುಗೆಗೆಳಸಿದೆ—
ನಿನ್ನ ಮುಂಬನಿ ಮುದ್ದ ಬಯಸುತ
ಬಾಳಚಾತಕ ನಡೆಸಿದೆ.

೫

ಕಠಿಣಹೃದಯನೆ ಕೇಳು ಕೇಳೀ
ಹೃದಯವೇದನೆಯೊರಲಿತೆ—
"ವಿರಹನೈಶಾಖವಿದ ಸಹಿಸೆನು
ನೋಡು ನಾನಭಿಸಾರಿಕೆ!"

೬

ಕಾದು ಕುಳಿತಿಹೆನೆದೆಯ ಬಯಲೊಳ.
ಗಿಳ್ಳುತಾಸೆಯ ಪೂವಲಿ,
ಬಾಗಿ ನೀಡುವೆ ಭವ್ಯ ಸ್ವಾಗತ
ಮನದ ಮೂರುತಿ ಮನವೊಲಿ—

೭

ಹಾರಿ ಮಲ್ಲಳಿಯಾಗಿ ಬಾರೈ
ಕಾಡಿಬೇಡುವೆ ಬಂಧವಿ
ಎದೆಯ ರಸಮಧು ಬತ್ತುತಿರುವುದು
ಸಾಯುತಿಹೆ ಮಧುಮಾಧವಿ!

೮

ಈ ವಸುಂಧರೆ ಮೊರೆದು ಕರೆವಳು
ನೀರ ನಿನ್ನನು ಭರದಲಿ—
ಒಡಲ ಕರುಣೆಯೆ ನೋಡವಾಗುತ
ಹರ್ಷವರ್ಷವ ಕರೆಯಲಿ.

ಅಗ್ನಿದಿವ್ಯ

ಶ್ರೀ. ರಾಮಚಂದ್ರ ಕೊಟ್ಟಲಗಿ, ಧಾರವಾಡ

೧

ಅಪ್ರತಿಮ ಚರಿತಳು ಶಂಕಿಸಿರೆ ಲೋಕ
ರಾಮಪ್ರಭು ನೊಂದಿದ್ದ ಕಾರುಣ್ಯಸಿಂದು.
ವಿಷನುಂಗಿ ವದಿಸಿದ್ದ: "ಸೌಮಿತ್ರಿ, ಬಂಧು,
ಜಾತವೇದನ ಕರೆಸು ಸಾಕ್ಷಿಗೆಂದು."

೨

ಗಂಧ ಚಂದನಕಾಷ್ಠ ವೇದಿಕೆಯ ಸುತ್ತಿ
ಅಗ್ನಿಗಭಿಮುಖಳಾಗಿ ನಿಲಲು ವೈದೇಹಿ.
ಚರಣಧೂಲಿಯ ಹೊತ್ತ ಸೌಮಿತ್ರಿ ಬಾಗಿ
ಶಿಬಿಯನಾಹ್ವಾನಿಸಿದ "ಏಹಿ, ಏಹಿ.

೩

"ಕ್ಷುಲ್ಲ ನಾಲಗೆ ಮಸೆದು ಹೊಲ್ಲನುಡಿಯಾಡಿ
ತಾಯಿ ಜಾನಕಿ ನಾಮಕೆಳೆದಿಹುದು ಬರೆಯ.
ಸತ್ಯಪಣಕೊಡ್ಡಿ-ನೀ ಸಾಕ್ಷಿನುಡಿ ಅಗ್ನಿ"
ಸಪ್ತಾರ್ಚಿ ಅಲಿಸಿದ ಲಕ್ಷ್ಮಣನ ಕರೆಯ.

೪

ಹಿಮವಾಗಿ, ಸುಮವಾಗಿ, ಸ್ವಯಮಗ್ನಿ ಪುರುಷ
ಕರಕಮಲ ಜಾಚಿರಲು ಜನಕಜಾತೆ.
"ಶ್ರೀರಾಮ ಜಯರಾಮ ಜಯಜಯರಾಮ"
ನುತಿಸಿ ಗೆದ್ದಳು ತಾಯಿ ಅಕಲಂಕಚರಿತೆ.

ಹಟ್ಟಿಯಂಗಡಿ ನಾರಾಯಣರಾಯರು

ಶ್ರೀ. ವೆಂಕಟೇಶ ಸಾಂಗಲಿ, ಬೆಳಗಾಂವಿ

—×—

ಹಟ್ಟಿಯಂಗಡಿ ನಾರಾಯಣರಾಯರು ಆಧುನಿಕ ಕನ್ನಡಸಾಹಿತ್ಯದ ಸ್ವರೂಪ ದೃಷ್ಟಾರರು. ಅವರು ಕನ್ನಡಸಾಹಿತ್ಯದ ಪುನರುಜ್ಜೀವನಕ್ಕಾಗಿ ತುಂಬ ದುಡಿದವರು. ಇಂದಿನ ಕಾಲದಲ್ಲಿ ಇವರ ಹೆಸರು ನಮ್ಮ ಜನರ ಕಿವಿಗೆ ಅಪರಿಚಿತವಾಗಿ ಕಾಣಬಹುದು.

ಪ್ರಬುದ್ಧ ಭಾರತಕ್ಕೆ ಸಂದ ಕನ್ನಡದ ಕಾಣಿಕೆ ಮೊತ್ತದಲ್ಲಿಯೂ, ಯೋಗ್ಯತೆಯಲ್ಲಿಯೂ ಯಾವ ಪ್ರಾಂತಕ್ಕಿಂತಲೂ ಕಡಿಮೆಯದಲ್ಲ. ಆದರೂ ಆ ಅಭಿಮಾನಧನವನ್ನು ಗುರುತಿಸುವ ಕೆಲಸ ಮಾತ್ರ ಇನ್ನೂ ಬಹಳಷ್ಟು ಆಗಬೇಕಾಗಿದೆ. ಕಳೆದ ಶತಮಾನದಲ್ಲಿ ಭಾರತದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಗತಿಗಾಗಿ ಅನೇಕ ಅನೇಕ ಕನ್ನಡಿಗರು ಸ್ಪೃಹಣೀಯವಾದ ಕಾರ್ಯಮಾಡಿದ್ದಾರೆ. ಆದರೆ ಹೀಗೆ ಕಾರ್ಯಮಾಡಿದವರು ತಮ್ಮ ಕನ್ನಡತ್ವದ ಬಗ್ಗೆ ಪಟ್ಟು ಹಿಡಿಯದ್ದರಿಂದಲೋ, ಅಂದಿನ ಇತಿಹಾಸ ಬರೆದವರು ಕನ್ನಡದ ಪರಿಚಯದವರಲ್ಲದ್ದರಿಂದಲೋ, ಆ ಕಾರ್ಯದ ಯಥಾರ್ಥ ಉಲ್ಲೇಖ ಚಾರಿತ್ರ ಹೋಗಿದೆ.

ಹೀಗೆ ದುಡಿದವರಲ್ಲಿ ದಕ್ಷಿಣಕನ್ನಡದ ಹಟ್ಟಿಯಂಗಡಿ ನಾರಾಯಣರಾಯರೊಬ್ಬರು. ಇವರು ಭಾರತದ ಅಂದಿನ ಸಾಮಾಜಿಕ ಜೀವನವನ್ನು ರೂಪಿಸುವಲ್ಲಿ ಪತ್ರಿಕಾಕರ್ತರಾಗಿ, ಗ್ರಂಥಲೇಖಕರಾಗಿ ಕೆಲಸಮಾಡಿದರು. ಅವರ ಚರಿತ್ರೆ ಮತ್ತು ಕಾರ್ಯದ ಹಲವು ಅಂಶಗಳನ್ನು ಪ್ರಸ್ತುತ ಪರಿಚಯಮಾಡಿಕೊಡಲಾಗಿದೆ.

ಕನ್ನಡಿಗರು ಕನ್ನಡೇತರ ಪತ್ರಿಕೆಗಳ ಮುಖಾಂತರವಾಗಿ ಆಧುನಿಕ ಶಿಕ್ಷಣವನ್ನು ಪ್ರಾರಂಭಿಸಿದ್ದು ಪ್ರಾಯಶಃ ಸರ್ ನಾರಾಯಣ ಚಂದಾವರಕರರು 'ಇಂದು ಪ್ರಕಾಶ' ಪತ್ರಿಕೆಯ ಸಂಪಾದಕರಾದಂದಿನಿಂದಲೇ ಎನ್ನಬಹುದು. ಅದು ಮುಂಬಯಿಯಿಂದ ಹೊರಟ ಮರಾಠಿ ಪತ್ರಿಕೆ. ಕನ್ನಡಿಗರೇ ಆದ, ಕನ್ನಡದಲ್ಲಿಯೇ ಶಿಕ್ಷಣಪಡೆದ ಚಂದಾವರಕರರ ಇಂಗ್ಲೀಷ್ ಬರವಣಿಗೆ ಈ ಪತ್ರಿಕೆಯಲ್ಲಿ. ನವೀನ ವಿಚಾರ-ಸಂಯುಗಳ ಪ್ರಸಾರದಿಂದ ಜನತೆಯ ಅಜ್ಞಾನ-ಅಂಧಶ್ರದ್ಧೆಯನ್ನು ತೊಗಲಾಡಿಸುವ ಉದ್ದೇಶದಿಂದ. ಅಂದಿನ ಧುರೀಣರು ಪತ್ರಿಕಾಶ್ರಯವನ್ನೇ ಅವಲಂಬಿಸಿದ್ದರು. ಆಂಗ್ಲ ವಿದ್ಯಾಭ್ಯಾಸದ ಪರಿಣಾಮವಾಗಿ ಸ್ವದೇಶ, ಸ್ವಭಾಷೆ, ಸ್ವಧರ್ಮಾಭಿಮಾನದಿಂದ ಜಾಗೃತವಾದ ಒಂದು ಸುಶಿಕ್ಷಿತವರ್ಗವು ಆಗಲೇ ದೇಶದಲ್ಲಿ ನಿರ್ಮಾಣಗೊಳ್ಳುತ್ತಿತ್ತು. ಈ ವರ್ಗವನ್ನು ತಮ್ಮ ತಮ್ಮ ವಿಚಾರ ಪ್ರಣಾಲಿಗೆ ಒಳಿಸಿಕೊಳ್ಳುವಂತೆ ಬೇರೆ ಬೇರೆ ಧುರೀಣರು ಪ್ರಯತ್ನ ನಡಿಸಿದ್ದರು.

ಪತ್ರಿಕಾಪ್ರಪಂಚದಲ್ಲಿ, ಪಾಶ್ಚಿಮಾತ್ಯ ಆಚಾರ—ವಿಚಾರ—ಸಂಸ್ಕೃತಿಯ ಪ್ರಚಾರಕ್ಕೆ ಬೆಂಬಲ ಕೊಡುವ ಒಂದು ವರ್ಗವೂ, ಆಚರಣೆಯನ್ನು ಧಿಕ್ಕರಿಸುವ, ವಿದೇಶಿಯ ನಡೆ—ನುಡಿಗಳನ್ನು ಪ್ರತ್ಯಕ್ಷ-ಪರೋಕ್ಷವಾಗಿ ದ್ವೇಷಿಸುವ ಇನ್ನೊಂದು ವರ್ಗವೂ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದುವು. ರಾಜಕೀಯ ಕ್ಷೇತ್ರದಲ್ಲಿದ್ದ 'ಉದಾರಮತವಾದಿ,' 'ತೀಕ್ಷ್ಣವಾದಿ'ಗಳ ಪ್ರಭಾವವು ಪತ್ರಿಕೆಗಳ ಮೇಲೂ ಉಂಟಾಗಿತ್ತು. ದೇಶಭಾಷೆಯ ಪತ್ರಿಕೆಗಳು ನಿಶೇಷವಾಗಿ ಮೇಲೆ ಹೇಳಿದ ಎರಡನೆಯ ವರ್ಗದಲ್ಲಿ ಬರುತ್ತಿದ್ದುವು. ಪಶ್ಚಿಮದಿಂದ ಬಂದುದೆಲ್ಲವೂ ದೊಷಪೂರ್ಣ ಎಂದು ನಂಬಿ, ಆ ದಿಶೆಯಲ್ಲಿಯೇ ಪ್ರಚಾರಕಾರ್ಯ ನಡೆಸಿದ್ದುವು. ಬ್ರಿಟಿಶರ ಆಚಾರ-ವಿಚಾರಗಳನ್ನು ತೆಗಳುವುದೆಂದರೆ ಸ್ವಾಭಿಮಾನದ ದ್ಯೋತಕ—ಎಂಬ ಭಾವನೆ ಆಗ ಅನೇಕರಲ್ಲಿ ರೂಢವಾಗಿತ್ತು.

ಕಳೆದ ಶತಮಾನದ ಕೊನೆಯಲ್ಲಿ ಮದ್ರಾಸಿನಿಂದ ಹೊರಡುತ್ತಿದ್ದ, ನಟೇಶಾಚಾರ್ ಅವರ Indian Social Reformer ಎಂಬ ಪತ್ರಿಕೆಯು, ಮೇಲೆ ಹೇಳಿದ ಉಭಯ ಪಕ್ಷಗಳಿಂದಲೂ ದೂರವಾಗಿದ್ದುಕೊಂಡು, ವಿವೇಕಯುತವಾದ ಟೀಕೆ-ಟಿಪ್ಪಣಿಗಳಿಂದಲೂ, ಪದಭಿರುಚಿಗೆ ಸಮ್ಮತವಾದ ಘೋರಣಿಯಿಂದಲೂ ತನ್ನದೇ ಆದ ವಿಶಿಷ್ಟ ಸ್ಥಾನಮಾನವನ್ನು ಬೆಳೆಸಿಕೊಂಡು, ಸುಶಿಕ್ಷಿತ ವರ್ಗದಲ್ಲಿ ಗೌರವಾದರಗಳನ್ನು ಪಡೆದುಕೊಂಡಿತ್ತು. ಆಗ ತಾನೇ ಬಿ. ಎಲ್. ಪಾಸಾಗಿ ಮದ್ರಾಸ್ ಹೈಕೋರ್ಟಿನಲ್ಲಿ ವಕೀಲಿ ವೃತ್ತಿಯನ್ನು ಆರಂಭಿಸಿದ್ದ ನಾರಾಯಣರಾಯರು, ಧೈರ್ಯದಲ್ಲಿ ಈ ಪತ್ರಿಕೆಯ ಸಂಪಾದನ ಕಾರ್ಯವಹಿಸಿಕೊಂಡರು. ಆ ಮೊದಲು ಕೆಲವು ವರ್ಷ ಅಧ್ಯಾಪಕರಾಗಿ ಕೆಲಸ ಮಾಡಿದ್ದ ಇವರು, ಸ್ವಭಾವತಃ ವ್ಯಾಕರಣಪ್ರಿಯರೂ, ವೃತ್ತಿಯಿಂದ ವಿದ್ಯಾತ್ಮನಾದಿಗಳೂ ಆಗಿದ್ದರು. ಅಲ್ಲದೆ ಆ ಕಾಲದಲ್ಲಿ ತಮ್ಮ ಕನ್ನಡಪ್ರೇಮ ಹಾಗೂ ಪಾಂಡಿತ್ಯಪ್ರಭಾವದಿಂದ ವಿದ್ಯಾರ್ಥಿವೃಂದವನ್ನು ಅತಿಶಯವಾಗಿ ಆಕರ್ಷಿಸಿದ್ದರು. ಮುಂದೆ ವಕೀಲರಾದ ಬಳಿಕವೂ ಇವರಿಗೆ ಕೋರ್ಟಿನ 'ಕಾರಭಾರ'ಕ್ಕಿಂತ ಗ್ರಂಥಭಾಂಡಾರದ ಪ್ರಶಾಂತವಾತಾವರಣವೇ ಹೆಚ್ಚು ಪ್ರಿಯವೆನಿಸಿತ್ತು.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ
● ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಅಂತೆಯೇ ಬುದ್ಧಿಗೂ, ಲೆಕ್ಕಣಿಕೆಗೂ ತೀವ್ರವಾದ ಕೆಲಸ ಕೊಡ. ಬಹುದಾದ ಪತ್ರಿಕಾವೃತ್ತಿಯನ್ನು ಸ್ವೀಕರಿಸಿ, ಅದರಲ್ಲಿಯೇ ಸಮಾಧಾನ ಕಂಡರು. ಮುಂದೆ 'ರಿಫಾರ್ಮರ್' ಪತ್ರಿಕೆಯು ಸ್ಥಾನಾಂತರವಾಗಿ ಮುಂಬಯಿಗೆ ಹೋದನಂತರ, ಬರವಣಿಗೆಯ ಹಂಬಲದಿಂದ ಇವರ ಮನಸ್ಸು ಚಡಪಡಿಸಹತ್ತಿತು. ಪತ್ರಿಕೆಯನ್ನು ಬಿಟ್ಟಿರುವುದು ಅಸಾಧ್ಯವಾಗಿ, ಪತ್ರಿಕಾವ್ಯವಸಾಯಿಯಾಗಿಯೇ ಮುಂಬಯಿಗೆ ಬಂದರು. ಈ ಸಲ Indian Spectator ಎಂಬ ಪತ್ರಿಕೆಯ ಸಂಪಾದನ ಕಾರ್ಯವನ್ನು ವಹಿಸಿಕೊಂಡರು.

ಇದು ಬಿ. ಎಂ. ಮಲಬಾರಿಯವರ ಪತ್ರಿಕೆ. ೧೯ನೆಯ ಶತಮಾನದಲ್ಲಿ ಹಿಂದೂಸಮಾಜ ಸುಧಾರಣೆಗಾಗಿ ನಿಶ್ಚಾಂತ ಶ್ರಮ ವಹಿಸಿ ದುಡಿದ ಹಲವು ಪ್ರಮುಖರಲ್ಲಿ ಮಲಬಾರಿಯವರೂ ಒಬ್ಬರು. ಆಂಗ್ಲ ವಿದ್ಯಾಭ್ಯಾಸ, ಸಂಸ್ಕೃತಿ, ಪರಂಪರೆಗೆ ಮಾರುಹೋದ ಇವರು, ಭಾರತವು ಬ್ರಿಟಿಶ್ ಚಕ್ರಾದಿಪತ್ಯದ ಅಡಿಯಲ್ಲಿಯೇ ಉಳಿದು ಪ್ರಗತಿ ಸಾಧಿಸಬೇಕು' ಎಂಬ ದೃಢನಂಬಿಕೆಯುಳ್ಳವರಾಗಿದ್ದರು. ಇದು ಅಲ್ಲದೆ ಸಮಾಜ ಸುಧಾರಣೆಯು ಕಾಯದೆಯ ಬಲದಿಂದಲೇ ಆಗಲಿ' ಎನ್ನುವ ಹವ್ಯಾಸಳುಳ್ಳವರಾದುದರಿಂದ ಜನಮನದಲ್ಲಿ ಇವರ ಚಟುವಟಿಕೆಗಳು ಶಾಶ್ವತ ಮನ್ನಣೆ ಪಡೆಯಲಿಲ್ಲ. ಆದರೆ ಸಮಾಜಸುಧಾರಣೆಯ ಬಗ್ಗೆ ಇದ್ದ ಇವರ ಕಳಕಳಿಯು ನಿರ್ವಿವಾದವಾಗಿತ್ತು. ಸಮಾಜ ಸುಧಾರಣೆಯ ವಿವಿಧ ಆಂದೋಲನಗಳಲ್ಲಿಯೂ ನವೀನ ವಿಚಾರಗಳ ಪ್ರಸಾರಕ್ಕೆಂದು ಕೈಕೊಂಡ ಪತ್ರಿಕಾ ಪ್ರಪಂಚದಲ್ಲಿಯೂ, ಇವರ ಕಾರ್ಯವು ಬೆಲೆಯುಳ್ಳದ್ದಾಗಿದೆ. Indian Spectator ನ ಜೊತೆಗೆ, ಪೂರ್ವ-ಪಶ್ಚಿಮದ ಪರಸ್ಪರ ಸ್ನೇಹ ಸೌಹಾರ್ದವನ್ನು ಸಾಧಿಸುವುದಕ್ಕೆಂದು East & West ಎಂಬ ಪತ್ರಿಕೆಯನ್ನೂ ನಾರಾಯಣರಾಯರ ಸಹಕಾರದಿಂದ ಮಲಬಾರಿಯವರು ಹೊರಡಿಸಿದರು. ಭಾರತ ಹಾಗೂ ಭಾರತೀಯರ ವಿಷಯವಾಗಿ ನಿಜವಾದ ತಳವಳಿಕೆಯನ್ನು ಹುಟ್ಟಿಸಿ, ಆಳರಸರ ಮನಸ್ಸಿನಲ್ಲಿ ನಮ್ಮ ಬಗ್ಗೆ ಗೌರವಾದರ ಉಂಟುಮಾಡಲು ಈ ಪತ್ರಿಕೆಗಳು ಶ್ಲಾಘನೀಯ ಕೆಲಸ ಮಾಡಿದುವು. ಜನಾನುರಾಗಕ್ಕಿಂತ ಜನತಾಶಿಕ್ಷಣವೇ ಈ ಪತ್ರಿಕೆಗಳ ಧೋರಣೆಯಾದ್ದರಿಂದ, ಪುರಸ್ಕಾರ ಅಥವಾ ತಿರಸ್ಕಾರಕ್ಕೆ ಅವರು ವಿಶೇಷ ಮಹತ್ತ್ವ ಕೊಟ್ಟರಲ್ಲಿ. ಅಧಿಕಾರವರ್ಗವನ್ನು ದ್ವೇಷಿಸದೆ, ಅವರ ನಡವಳಿಕೆಯಲ್ಲಿ ದುರುದ್ದೇಶವನ್ನು ಕಲ್ಪಿಸದೆ, ತಾತ್ಕಾಲೀನ ಘಟನೆಯ ಅಥವಾ ಸಮಸ್ಯೆಯ ಪೃಥಕ್ಕರಣೆಯನ್ನು ಮಾಡುವುದು ಇವರ ಪತ್ರಿಕಾನೀತಿಯಾಗಿತ್ತು. ಅಂತೆಯೇ ವೈಯಕ್ತಿಕ ಟೀಕೆಗೆ ಇಲ್ಲಿ ಅನುವಿರಲಿಲ್ಲ. ನಾರಾಯಣರಾಯರ ವಿಚಾರಸರಣಿಯು ಸ್ವತಂತ್ರ ವೃತ್ತಿಯದಿದ್ದುದರಿಂದ 'ಸ್ಪೆಕ್ಟೇಟರ್'. ದಲ್ಲಿ ವ್ಯಕ್ತವಾದ ಅಭಿಪ್ರಾಯಗಳಿಗೆ ಎಂತಹ ವಿರೋಧಕರೂ ಒಮ್ಮೊಮ್ಮೆ ತಲೆದೂಗಬೇಕಾಗುತ್ತಿತ್ತು. ಅಂದಿನ ಸರಕಾರವು ಕೂಡ ಅನೇಕ ಸಂದರ್ಭಗಳಲ್ಲಿ 'ಸ್ಪೆಕ್ಟೇಟರ'ದ ಧೋರಣೆಯನ್ನು ಒಪ್ಪಿ ತನ್ನ ಹೆಜ್ಜೆಗಳನ್ನು ತಿದ್ದಿಕೊಂಡದ್ದೂ ಉಂಟು. ಇಂತಹ ಪ್ರಸಂಗಗಳಲ್ಲಿ ವಸ್ತುಸ್ಥಿತಿಯನ್ನು ತಿಳಿಯದೆ, 'ಇನ್ನೊಂದು ಬಾಲ ಬಡೆಯುವ ಪತ್ರಿಕೆ' ಎನ್ನುವ ವಿರೋಧಕರ ಸಂಖ್ಯೆಯೂ ಕಡಿಮೆಯಾಗಿರಲಿಲ್ಲ.

೧೯೨೦ರಿಂದ ಹೆಚ್ಚುವರುಷ ನಾರಾಯಣರಾಯರು ಈ ಎರಡೂ ಪತ್ರಿಕೆಗಳೊಂದಿಗೆ ಪ್ರತ್ಯಕ್ಷಸಂಬಂಧವನ್ನಿಟ್ಟುಕೊಂಡಿದ್ದರು. ೧೯೨೮ರಲ್ಲಿ ಮಲಬಾರಿಯವರ 'ಸ್ಪೆಕ್ಟೇಟರ್' ನಿಂತಿತು. East & West ಸ್ಥಾನಾಂತರವಾಯಿತು. ತದನಂತರ, Times of India. Bombay Chronicle, Parsi Subodha Patrika ಮುಂತಾದ ಪತ್ರಿಕೆಗಳಿಗೆ ಲೇಖನ ಬರೆಯುವುದರಲ್ಲಿ ನಾರಾಯಣರಾಯರು ನಿರತರಾದರು Behind the Indian Veil ಎಂಬ ಶಿರೋ ಲೇಖನದಡಿಯಲ್ಲಿ Times of India ಪತ್ರಿಕೆಯಲ್ಲಿ ಪ್ರತಿವಾ ಸ್ಪಟವಾಗುತ್ತಿದ್ದ ಲೇಖಾಂಕವು ನಾರಾಯಣರಾಯರದೇ ಆಗಿತ್ತು. ಇವರು ಸಂಪಾದಿಸುತ್ತಿದ್ದ ಪತ್ರಿಕೆ ಹಾಗೂ ಇವರ ಲೇಖನವೃತ್ತಿಯ ಬಗ್ಗೆ ಅಂದಿನ ಹಿರಿಯರೊಬ್ಬರು ಬಹು ಯಥಾರ್ಥವಾಗಿ ಹೇಳಿದ್ದಾರೆ

"Both journals were conducted in the best traditions of journalism & exercised an immense power on the politics of the day. Mr. Rao's wide culture and wider human sympathies, his intimate knowledge of constitutional law and current movements, keen sense of humour, combined with ever unruffled temper and a style, chaste, clear and incisive made his writings always delightful reading

ನಾರಾಯಣರಾಯರು ಕನ್ನಡ ಪಂಡಿತರಾಗಿದ್ದರೆಂದು ಮೊದಲೇ ಹೇಳಲಾಗಿದೆ. ಪಾಂಡಿತ್ಯದ ಆಳ ವೈಶಾಲ್ಯತೆಯೊಂದಿಗೆ ಪಾಶ್ಚಿಮಾತ್ಯ ವಿಚಾರಗಳ ಅಳವಡಿಕೆಯ ಪರಿಣಾಮವಾಗಿ ಸ್ವಲ್ಪ ಹಾಗೂ ಹಾಗೂ ವ್ಯಾಪಕವಾದ ನವೀನ ಸಾಮಾಜಿಕ ದೃಷ್ಟಿ

ಇನರಲ್ಲಿ ಬೆಕೆವಿತ್ತು. ಆ ಕಾಲದ ಅನೇಕ ಕನ್ನಡ ನಿಯತ ಕಾಲಿಕ-ಗಳಲ್ಲಿ ಇವರು ವ್ಯಕ್ತಪಡಿಸಿದ ಅಭಿಪ್ರಾಯಗಳು, ಸಂಕಲನ ರೂಪ-ದಲ್ಲಿ ಒಂದೆಡೆಗೆ ಬರಬೇಕಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ 'ಕನ್ನಡಕಥಾನಕ,' ಭಕ್ತಿಗೀತೆಗಳ ಸಂಗ್ರಹವಾದ 'ಬ್ರಾಹ್ಮಗೀತಾ' ಹಾಗೂ ಆಂಗ್ಲ ಕವಿತೆಗಳ ಸಂಗ್ರಹವಾದ 'ಆಂಗ್ಲ ಕವಿತಾವಳಿ' ಇವು ಮೂರು ಇವರ ಪ್ರಕಟಿತ ಗ್ರಂಥಗಳು. ಕನ್ನಡ ಸಾಹಿತ್ಯ ಸಂಶೋಧನೆಯ ಕ್ಷೇತ್ರದಲ್ಲಿ ರಾಯಿಸ್ ಹಾಗೂ ಕವಿಚರಿತ್ರ-ಕಾರರ ಕಾರ್ಯವು ಅದೇ ಸುಮಾರಿಗೆ ಬೆಳಕುಕಂಡಿತ್ತು. 'ಶ್ರೀ' ಯವರ ಇಂಗ್ಲೀಷ ಗೀತಗಳು ಕೂಡ ಬಿಡಿಬಿಡಿಯಾಗಿ ಪ್ರಕಟವಾಗಿ-ದ್ದುವು. 'ಕನ್ನಡಕಥಾನಕ'ವೂ 'ಆಂಗ್ಲಕವಿತಾವಳಿ'ಯೂ ಅಕಾರ-ದಲ್ಲಿ ಚಿಕ್ಕವು; ಆದರೆ ಸಾಹಿತ್ಯ ಚರಿತ್ರೆಯ ಇತಿಹಾಸದಲ್ಲಿ ಅವುಗಳಿಗೆ ಸ್ಥಾನ ಇದ್ದೇ ಇದೆ. ಪಾಪರಹಿತವಾದ ಕವಿತೆಗಳನ್ನು ಕನ್ನಡದಲ್ಲಿ ರಚಿಸಲು ಯತ್ನಿಸಿದ ಅನೇಕ ಮಹನೀಯರಲ್ಲಿ ನಾರಾ-ಯಣರಾಯರೂ ಒಬ್ಬರು ಎಂಬುದನ್ನು ನಾವು ಮರೆಯುವಂತಿಲ್ಲ. 'ಆಂಗ್ಲಕವಿತಾವಳಿ'ಯಲ್ಲಿಯ ಪದ್ಯಗಳನ್ನು ಆ ಕಾಲದ ಇತರ ಭಾಷಾಂತರಗಳೊಂದಿಗೆ ಹೋಲಿಸಿ ವಿಮರ್ಶಿಸುವುದು ಅಗತ್ಯವಾಗಿದೆ. ಹೊಸಗನ್ನಡ ಕಾವ್ಯದ ಹುಟ್ಟು-ಬೆಳವಣಿಗೆಯ ವಿಚಾರವಾಗಿ ಇದ-ರಿಂದ ಕೆಲ ನವೀನ ಅಂಶಗಳು ಬೆಳಕಿಗೆ ಬರುವುವಲ್ಲದೆ, ಕನ್ನಡಸಾಹಿತ್ಯ ಸೇವಕರಲ್ಲಿ ನಾರಾಯಣರಾಯರ ತಕ್ಕ ಸ್ಥಾನವನ್ನು ಗುರುತಿಸಿದಂತಾ-ಗುವುದು. ಆಂಗ್ಲ ಕವಿತೆಯ ಬಗ್ಗೆ ಅಂದಿನ ವಿಮರ್ಶಕರೊಬ್ಬರು, a veritable garland of the most fragrant blossoms culled from the more beautiful of English verseland" ಎಂದು ಅಭಿಪ್ರಾಯಪಟ್ಟಿದ್ದಾರೆ. ಇಂಗ್ಲಿಷು-ಕನ್ನಡ ಶಬ್ದಕೋಶವನ್ನು ಸಿದ್ಧಗೊಳಿಸಲು ಇವರು ಬಹು ಪರಿಯಾಗಿ ಶ್ರಮಿಸಿದರೆಂದೂ ಅದರಿ ಅದು ಅಪೂರ್ಣವಾಗಿಯೇ ಉಳಿ-ದಿದೆಯೆಂದೂ ಹೇಳಲಾಗುತ್ತದೆ ಕೊನೆಕೊನೆಗೆ ನಾರಾಯಣರಾಯರು ಅಧ್ಯಾತ್ಮಚಿಂತನೆಯಲ್ಲಿ ಹೆಚ್ಚಿನ ಕಾಲ ಕಳೆದರು. ಹೆಸರಾಂತ ಪತ್ರಿಕಾಕರ್ತರೂ, ರಸಿಕರು, ಪ್ರಗತಿಶೀಲ ಸಮಾಜ ಸುಧಾರಕರು, ಬಹುಶ್ರುತ ಪಂಡಿತರು ಆಗಿದ್ದರೂ ನಾರಾಯಣರಾಯರ ಹಲವು ಘಟನೆಗಳೂ, ಅನುಭವಗಳೂ ಇದಕ್ಕೆ ಕಾರಣವಾಗಿದ್ದುವು. ಚಿಂತನದ ಸಮಯದಲ್ಲಿ Tracts for thinkers ಎಂಬ ಹೆಸರಿನಲ್ಲಿ ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಸುಭಾಷಿತಗಳನ್ನು ಸಂಗ್ರಹಿಸಿ-ದರು. ಪ್ರಕಟವಾದ ಈ ಸುಭಾಷಿತ ಮತ್ತು ಉಕ್ತಿಗಳು, ಶಾಂತಿ-ಪ್ರಿಯರಾದವರೆಲ್ಲರಿಗೂ ಬುದ್ಧಿಗೆ ಆಹಾರವನ್ನೂ ಹೃದಯಕ್ಕೆ ಚೈತ-ನ್ಯವನ್ನೂ ಕೊಡಬಲ್ಲ ಕೈಪಿಡಿಯಾಗಿವೆ ಇವರ ಪ್ರಗತಿಶೀಲ ವಿಚಾರಕ್ಕೆ ನಿರಭಿಮಾನವೃತ್ತಿಗೆ ದೃಷ್ಟಾಂತ ಕೊಡುತ್ತಾರೆ: ನಾರಾಯಣರಾಯರು ಜನಿವಾರವನ್ನು ಹರಿದೊಗೆದರೂ ಗಾಯತ್ರಿಮಂತ್ರಕ್ಕೆ ಶರಣಾಗೋಗಿ-ದ್ದರಂತೆ; ಕನ್ನಡಪ್ರೇಮಿಯಾಗಿದ್ದರೂ, ದಿನಾಲು ತುಕಾರಾಮ ಹಾಗೂ ಇತರ ಸಂತ-ಮಹಾತ್ಮರ ಅಭಂಗ ಹೇಳದೆ ಬಾಯಲ್ಲಿ ನೀರು ಹಾಕು-ತ್ತಿರಲಿಲ್ಲವಂತೆ.

---

* ಗ್ರಂಥಕರ್ತರ ಚರಿತ್ರಕೋಶ 'ವನ್ನು ಆಧಾರಿಸಿದುದು.

ಬಯಕೆ

ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಕೊಲ್ಲಾಪುರ

ಜಗತ್ತನ್ನೆ ಬಯಲಾಗಿಸುವ ಬಯಕೆ
ಕತ್ತಲೆಯನ್ನೆ ಬೆಳಕಾಗಿಸುವ ಬಯಕೆ
ಘನಘೋರ ಬಯಕೆ
ಹುಚ್ಚೋ, ಮಂಕೋ, ಕಣ್ಣಿನಲಿ ಮಣ್ಣೋ
ಯೋಗಿಯ ಸಮಾಧಿಯೋ
ಮುಕ್ಕಣ್ಣನ ಕಣ್ಣೋ
ಏನೋ—

ವಿಶ್ವ ಕರಗಿ ಬದಿಯ ಹೆಣ್ಣಿನಲಿ
ಅವಳೇ ದೇಹದಲಿ ಕಣ್ಣಿನಲಿ
ಓತು, ಮಲ್ಲಿಗೆಯಾಗಿ
ಅರಳಿತಹ

ಈ ಬಯಕೆಯಿಂದ !
ಇನ್ನು
ಅವಳೇ ಸಮುದ್ರವನು
ಅಗಸ್ತ್ಯನೊಲು ಕುಡಿವ ಹಂಬಲು
ಲಕ್ಷ್ಮಿ ಬರಲಿ, ಚಂದ್ರ ಬರಲಿ, ಅಮೃತ ಹಾಲಾಹಲ ಬರಲಿ
ಕಂಡು ಕುಡಿವ ಹಂಬಲು

ಅವಳ-ಜೀವದಲಿ-ಜ್ವಾಲೆಯಲಿ
ಭೇನಿಕ್ಸದೊಲು
ಕರಗಿ, ಸತ್ತು, ಪುನಃ
ಉದ್ಭವಿಸುವ ಹಂಬಲು
ಇದು ವಿಶ್ವಹೃದಯದ
ಜನ್ಮ-ಜನ್ಮಾಂತರದ ಹಂಬಲು.....

ಅಹ
ಈ ಒಂದು ಕ್ಷಣದಲ್ಲಿ
ನಾನಲ್ಲ ನಾನು
ಅವಳಲ್ಲ ಅವಳು
ನಾವೀಗ
ಪ್ರಕೃತಿ-ಪುರುಷರು
ಸೂರ್ಯ-ಚಂದ್ರರು
ಸಮುದ್ರ-ವರ್ಷತ
ಮರ-ಹುಲ್ಲು-ಹೂಗಳು
ದೇವತೆಗಳು—
ದೇವರು !

ಚಂದ್ರಗ್ರಹಣ

(ಒಂದು ಸಣ್ಣಕಥೆ)

ಶ್ರೀ. ಟಿ. ಆರ್. ನಾಡಗೀರ, ಬಿ. ಎಸ್ಸಿ. (ಟೆಕ್) ಮುಂಬಯಿ

ಬಡತನದೊಂದಿಗೆ ಹೋರಾಡಬೇಕಾದ ಜೀವ, ತನ್ನಲ್ಲಿಯ ಯಾವ ಗುಣಗಳನ್ನು ಬೆಳೆಸಿ ಮೆರೆಸಲು ಸಮರ್ಥವಾದೀತು! ನನ್ನು, ಸಮಾಜದ ಉಪೇಕ್ಷಾಭಾವನ, ಚಂದೂನಂತಹ ಎಷ್ಟು ಜನ ಕಲಾವಿದರನ್ನು, ಅಕಾಲದಲ್ಲಿಯೆ ಕಳೆದುಕೊಳ್ಳುತ್ತಿದೆಯೋನೊ!

'ಹೋಗಿ ಬರುತ್ತೇನೆ ದಾದಾ!'

ಹೋಗಿ ಬರುತ್ತೇನೆ ಆಯಿ!'

'ಹೋಗಿ ಬಾಪ್ಪಾ ಚಂದೂ! ಎಲ್ಲಿದ್ದಲ್ಲಿ ಆಯುಷ್ಮಂತನಾಗಿರು ನನ್ನಪ್ಪಾ' ಆಯೀ ಉಕ್ಕಿ ಬರುತ್ತಿರುವ ದುಃಖಕ್ಕೆ ಕಣ್ಣೀರಿನ ಮೂಲಕ ಮಾರ್ಗ ಕೊಡುತ್ತ ಎದೆಯಾರೆ ಹರಸಿದರು.

'ಆರೋಗ್ಯ. ಕಾಪಾಡಿಕೋ ಚಂದೂ' ದಾದಾನ ವಾತ್ಸಲ್ಯ ಪೂರಿತ ನುಡಿ ಇದು.

ಗಾಡಿ ಸಿಳ್ಳು ಹಾಕಿತು, ಗಾರ್ಡ್ ಹಸಿರುಬಾವುಟವನ್ನು ಬೀಸಿದ. ಎಂಜಿನ್ ನಿದಾನವಾಗಿ ಚಲಿಸತೊಡಗಿತು. ನಿರ್ಜೀವ ಯಂತ್ರವೇನು ಬಲ್ಲದು ಈ ಜೀವಿಗಳ ಹೃದಯಾಂದೋಲನವನ್ನು? ಮೂಕರೋದನವೇ ಮೂವರನ್ನೂ ಪಾರಸ್ಪರಿಕವಾಗಿ ಬೀಳ್ಕೊಟ್ಟಿತು. ದಿಟ್ಟಿ ಹರಿಯುವ ವರೆಗೆ ಒಬ್ಬರೊಬ್ಬರನ್ನು ನೋಡಿದರು. ಗಾಡಿ ಕಣ್ಣಳತೆಗೆ ಕಾಣದಾದ ಮೇಲೆ ದಾದಾ, ಆಯೀ ಭಾರವಾದ ಹೃದಯವನ್ನು ಹೊತ್ತುಕೊಂಡು, ನಿಃಸತ್ವ ಕಾಲುಗಳಿಗೆ ಯಾಂತ್ರಿಕ ಚಲನೆಕೊಟ್ಟು ಮನೆಗೆ ನಡೆದರು.

ತಾಯಿ-ತಂದೆ ಕಾಣದಾದ ಮೇಲೆ ಚಂದೂ ಕಲಹೊತ್ತು ವ್ಯಗ್ರನಾದ. 'ಇನ್ನೀ ಊರಿಗೆ ಬರಲು ಬಹಳ ದಿನಗಳವೆ' ಎಂಬ ವಿಚಾರಮೂಡಲು, ತನ್ನ ಊರನ್ನು ಮೈಯೆಲ್ಲಾ ಕಣ್ಣಾಗಿಸಿ ನೋಡ ಬಯಸಿದ. ತಾನು ತಿರುಗಾಡಿದ ಸ್ಥಳ, ಗೆಳೆಯರೊಂದಿಗೆ ನಲಿದಾಡಿದ ಕಾಣಗಳು—ತನ್ನಿಂದ ಬಹು ವೇಗವಾಗಿ ಮರೆಯಾಗುತ್ತಿದ್ದುದನ್ನು ಗಮನಿಸಿದ ಚಂದು. ತನ್ನ ದೃಷ್ಟಿಯನ್ನು ಊರಿನ ನಿಟ್ಟಗೇ ನೆಟ್ಟಿದ್ದ; ತನ್ನ ಪರಿಚಯದ ಸ್ಥಳಗಳನ್ನು ನೋಡುತ್ತಿದ್ದಂತೆ, ಹರ್ಷ ಹದ ವಿಸಾರುತ್ತಿತ್ತು. ಆ ಸ್ಥಳಗಳು ಜಾರಿಹೋದಂತೆಲ್ಲ ಹರ್ಷಹಾರಿ ಹೋಗಿ ಮಃಖ ಧುಮ್ಮಿಕ್ಕುತ್ತಿತ್ತು. ಅದೆಷ್ಟೋ ಹೊತ್ತು ತನ್ನೂರಿನತ್ತಲೇ ನೋಡಿದನು ಚಂದೂ. ಊರಿನ ಮೇರೆ ದಾಟಲು ಬಹಳಕಾಲ ಹಿಡಿಯಲಿಲ್ಲ. ಈ ನೋವಲು ಕಂಡ ದೃಶ್ಯಗಳನ್ನೆ ಪುನಃ ಪುನಃ ಮನಸ್ಸಿನಲ್ಲಿ ಚಿತ್ರಿಸಿಕೊಂಡ.

ಹುಬ್ಬಳ್ಳಿ ಬುದಿತು. ಇಳಿವವರ ಎರಡರೆಷ್ಟು ಜನ ಹತ್ತಿದರ ಗಾಡಿ ಎರಡು ತಾಸು ವಿಶ್ರಾಂತಿಪಡೆದು ಮುನ್ನಡೆಯಿತು. ಊ ನಿಂದ ದೂರ ಹೋಗುತ್ತಿರುವ ವಿಚಾರ ಅತನಿಗೆ ಅಳು ತಂದಿ ಪ್ರೀತಿಯ ತಾಯಿ, ತಂದೆ, ಅಣ್ಣ ಇವರಿಂದ ತಾನು ಬಹುದೂ ಹೋಗುತ್ತಿರುವುದು ಇದೇ ಮೊದಲು. ಕಣ್ಣಂಚಿನಲ್ಲಿ ಕಂಡ ನಿಃ ಸುತ್ತುಮುತ್ತಲಿನ ಜನರನ್ನು ಗಮನಿಸಿ, ಮುಂದಕ್ಕೆ ಹರಿಯಲಿ ಅಪಾರವ್ಯಥೆಯನ್ನು ಅಂತರ್ಯದಲ್ಲಿಯೇ ಅನುಭವಿಸಿದ.

ತಾವಿಬ್ಬರೇ ಅಣ್ಣ-ತಮ್ಮಂದಿರು. ದಾದಾ ಮರಾಠೀ ಶಾ ಯಲ್ಲಿ ಮುಖ್ಯಾಧ್ಯಾಪಕರಾಗಿದ್ದುಕೊಂಡು ಅಣ್ಣನ ಶಿಕ್ಷಣವನ್ನ ಮ್ಯಾಟ್ರಿಕ್ ವರೆಗೆ ಪೂರಯಿಸಿ ಅತನನ್ನು ಪೋಸ್ಟ್ ಖಾತೆಯ ಸೇರಿಸಿದ್ದರು. ಚಂದೂ ಮಾಧ್ಯಮಿಕಶಾಲೆಯನ್ನು ಪ್ರವೇಶಿಸಿ ತ್ತಿದ್ದಂತೆಯೇ ದಾದಾನಿಗೆ ಪಿಂಚಣಿ ದೊರೆಯಿತು. ವಿದ್ಯಾರ್ಥಿ ಶಿಕ್ಷಕರ ವರವಾನ ಯಾರಿಗೆ ಗೊತ್ತಿಲ್ಲ? ಪಿಂಚಣಿಯಾದ ಮೇಲಂತೂ ದೇವರೇಬಲ್ಲ ಅವರ ಗೋಳನ್ನು. ಅಣ್ಣನೂ ಯಥಾಶಕ್ತಿ ಸಹಾಯ ಮಾಡುತ್ತಿದ್ದ. ಬರುತ್ತಿದ್ದಷ್ಟರಲ್ಲಿಯೇ ಸಮಾಧಾನ ತಂದುಕೊಂ ಸಾಧ್ಯವಾದ ಸೌಕರ್ಯಗಳನ್ನು ಒದಗಿಸಿಕೊಳ್ಳುತ್ತಿದ್ದಳು ಆಯಿ.

ಚಂದೂನಿಗೆ ಚಿತ್ರಕಲೆಯಲ್ಲಿ ಚಿಕ್ಕಂದಿನಿಂದಲೂ ಆಸ ಕೈಯಲ್ಲಿ ಖಡು ಸಿಕ್ಕಿತೆಂದರೆ ಗೀಚುಗರೆಗಳಿಂದ ನೆಲ ತುಂಬಿಹೊ ತ್ತಿತ್ತು. ಆ ಗೀಚುಗೆರೆಗಳಲ್ಲಿ ಚಂದೂನ ಚಿತ್ರಕಲೆಯಲ್ಲಿಯ ಸು ಗತಿಯನ್ನು ಗುರುತಿಸಬಹುದಾಗಿತ್ತು. ಮಾಧ್ಯಮಿಕ ಶಿಕ್ಷಣವ ಪಡೆಯುತ್ತಿದ್ದಂತೆ ಚಿತ್ರಕಲೆಯಲ್ಲಿಯ ಅತನ ಆಸಕ್ತಿ ಕರಗ ನಡೆಯಿತು. ಈತನಿಗೆ ಪ್ರೋತ್ಸಾಹನ ನೀಡಿದವರು ಕಲಾಗು ಗಳಾದ ಶ್ರೀ. ಜೋಶಿಯವರು. ಈತನು ೬ನೆಯ ವರ್ಗದಲ್ಲಿದ ಚಿತ್ರಕಲೆಯ ಪ್ರಾರಂಭಿಕ ಪರೀಕ್ಷೆಗೆಂದು ತರಬೇತಿ ನಡೆಯಿತು.

ಪ್ರಾರಂಭಿಕ ಪರೀಕ್ಷೆಯ ತಯಾರಿ ಭರದಿಂದ ಸಾಗಿದಾಗ ಒಂದು ದಿನ, ಚಂದೂನ ವರ್ಗದಲ್ಲಿ ಒಂದು ಘಟನೆ ನಡೆಯಿತು. ಈ ಘಟನೆಯನ್ನು ಚಂದೂ ಎಂದೂ ಮರೆಯುವಂತಿಲ್ಲ. ಅಂದಿನ ಘಟನೆಯೇ ಚಂದೂನಲ್ಲಿ ಮ್ಯಾಟ್ರಿಕ್ ಆದ ಮೇಲೆ ಕಲೆಯನ್ನೇ ಅಭ್ಯಸಿಸಬೇಕೆಂಬ ಪ್ರೇರಣೆಗೆ ನಾಂದಿಯಾಯಿತು.

ಅಂದು ಚರಿತ್ರೆಯ ಗುರುಗಳಾದ ಶ್ರೀ. ಅಧ್ಯಾಪಕರು, ಚರಿತ್ರೆಯ ವಿಷಯವನ್ನು ವಿದ್ಯಾರ್ಥಿಗಳೊಂದಿಗೆ ವಿನೇಚಿಸುತ್ತಿದ್ದರು. ಚಂದೂನ ಕಲಾಪರೀಕ್ಷೆ ತೀರ ಸಮೀಪಿಸಿದ್ದರಿಂದ, ಸದಾ ಅದರಲ್ಲಿಯೇ ನಿಮಗ್ನನಾಗಿರುತ್ತಿದ್ದ. ದೇಹ ಮಾತ್ರ ವರ್ಗದಲ್ಲಿರುತ್ತಿತ್ತಷ್ಟೆ. ಶ್ರೀ. ಅಧ್ಯಾಪಕರು ಚಂದೂ ಪಾಠದ ಕಡೆಗೆ ನಿರ್ವಿಕ್ಷವಿದ್ದುದನ್ನು ಸಹಜವಾಗಿ ಗಮನಿಸಿದರು. ಅತನ ನಿರ್ಲಕ್ಷ್ಯ ಇವರ ಸಹನೆಯನ್ನು ಕಣಕಿತು. ವಿಕಾರವಾಗಿ ಕೂಗಿದರು: 'ಚಂದ್ಯಾ, ಎಲ್ಲಿಟ್ಟಿದೀ ನಿನ್ನ ಲಕ್ಷ್ಯ?' ಈ ಕರ್ಕಶಸ್ವರ ಚಂದೂನನ್ನು ಎಚ್ಚರಿಸಿತು. ಅಧ್ಯಾಪಕರ ಕಣ್ಣುಗಳು ಕಿಡಿಕಾರುತ್ತಿರುವುದನ್ನು ಕಂಡುಕೊಂಡ. 'ಸರ್, ಚಿತ್ರಕಲೆಯ ಪರೀಕ್ಷೆ ತೀರ ಹತ್ತಿರವಿರುವುದರಿಂದ, ಆ ವಿಷಯದಲ್ಲಿಯೇ ತನ್ಮಯನಾಗಿದ್ದೆ. ಕ್ಷಮಿಸಬೇಕು ಸರ್!' ದೈನ್ಯದಿಂದ ಕೇಳಿಕೊಂಡ ಚಂದೂ. ಚಂದೂ ಪ್ರಶ್ನೆಗೆ ಬೇಕಾದಷ್ಟೇ ಉತ್ತರ ಕೊಡದ್ದು ಅವರ ಕೋಪಾಗ್ನಿಗೆ ಎಣ್ಣೆ ಸುರುವಿದಂತಾಯಿತು. 'ಚಂದ್ಯಾ, ಎಷ್ಟು ಅದು ಬೊಗಳೂದು? ಗೀಚುಗೆರೆ ನಿನಗೆ ಗರ್ವತಂದಿದೆ. ಅಧಿಕಪ್ರಸಂಗಿ!' 'ಗೀಚುಗೆರೆ ನಿನಗೆ ಗರ್ವತಂದಿದೆ!' ಎಂಬ ಮಾತಿನಿಂದ ಮರ್ಮಾಹತನಾದ ಚಂದೂ. ಹಾಗೆ ನೋಡಿದರೆ ಆ ವರ್ಗದಲ್ಲಿ ಚಂದೂನಂಥ ನಿಗರ್ವಿ. ಸಚ್ಚೀಲ ವಿದ್ಯಾರ್ಥಿ ಇನ್ನೊಬ್ಬನಿರಲಿಲ್ಲ. 'ಸರ್....ನನಗೆ.... ಗರ್ವ....' ಎಂದು ಕ್ಲಾಸಬಿಟ್ಟವನೇ ಚಂದೂ ನೇರವಾಗಿ ಕಲಾಶಿಕ್ಷಕರನ್ನು ಸಂಧಿಸಿದ: ಅಳುತ್ತಿರುವ ಶಿಷ್ಯೋತ್ತಮನನ್ನು ಕಂಡು, ವಾತ್ಸಲ್ಯದಿಂದ ಬೆನ್ನುಸವರುತ್ತ ನಯವಾಗಿ ಚಂದೂನ ಅಳುವಿನ ಕಾರಣವನ್ನು ಕೇಳಿದರು. ದುಃಖ ಶಮನವಾಡಿಕೊಂಡು ನಡೆದು. ದದನ್ನು ವಿವರಿಸಿ, 'ಸರ್, ನನಗೆ ಗರ್ವ ಬಂದಿದೆಯೆ?' ಎಂದು ಕೇಳಿದ. ಏನು ಹೇಳಬೇಕು ಗುರುಗಳು? 'ಚಂದೂ ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನಿನ್ನ ಹಿತಕ್ಕಲ್ಲವೆ ಅವರು ಬಯ್ದರು! ಆಭ್ಯಾಸ ಚೆನ್ನಾಗಿ ಮಾಡಿ ಎಲ್ಲದರಲ್ಲಿಯೂ ಯಶಸ್ವಿಯಾಗು. ಹೋಗು, ಎಲ್ಲಿ, ನಗು!' ಜೋಶಿಯವರ ಮೃದುಮಧುರವಾಣಿ ಅವನ ಮನಸ್ಸಿನ್ನು ರಮಿಸಿತು. 'ಆಗಲಿ ಸರ್, ಶಾಲೆಯ ಅಭ್ಯಾಸವನ್ನು ಅಷ್ಟೇ ಜೋರಿನಿಂದ ಮಾಡುವೆ. ನನ್ನ ಗೀಚುಗೆರೆಯನ್ನೂ ಶಿದ್ದುವೆ. ನಿಮ್ಮ ಆಶೀರ್ವಾದದ ರಕ್ಷೆ ನನಗಿರಲಿ' ಗುರುಚರಣಕ್ಕೆರಗಿದ ಶಿಷ್ಯೋತ್ತಮ. 'ಅಪೂರ್ವ ಯಶಸ್ಸು ನಿನ್ನ ದಾಗಲಿ' ಎಂದರು ಗುರುಗಳು.

ಸರಿ. ಅಂದನಿಂದ ಚಂದೂ ಯಾವುದೇ ವಿಷಯದಲ್ಲಿ ಹಿಂದುಳಿಯಲಿಲ್ಲ. ಎಲ್ಲದರಲ್ಲೂ ಮೊದಲಿಗನು. ಕಲಾಪರೀಕ್ಷೆಯೆಲ್ಲಂತೂ ಕೇಂದ್ರಕ್ಕೇ ಮೊದಲಿಗನಾಗಿ ಉತ್ತೀರ್ಣನಾದನು. ಅತನ ಯಶಸ್ಸು ಅಧ್ಯಾಪಕರನ್ನು ಆಶ್ಚರ್ಯಗೊಳಿಸಿತು. ಚಿತ್ರಕಲೆಯ ಪರಿಣಾಮ ಹೊರಬಿದ್ದೊಡನೆ ಚಂದೂನನ್ನು ಮೊಟ್ಟಮೊದಲು ಅಭಿನಂದಿಸಿ ಅಲಿಂಗಿಸಿದವರು ಅಧ್ಯಾಪಕರು. 'ಚಂದೂ, ನಾನು ನಿನಗೆ ಮಹಾ ಅನ್ಯಾಯ ಮಾಡಿದ್ದೇನೆ. ನಾನು ನಿನ್ನ ಗೀಚುಗೆರೆಯ ಸಾಮರ್ಥ್ಯ ತಿಳಿಯದ ಹೋದೆ; ಏನೇನೋ ಗಳುಹಿದೆ. ನನ್ನನ್ನು ಕ್ಷಮಿಸು ಚಂದೂ!' ಭಾರವಾದ ಕಂಠದಿಂದ ಅಪರಾಧೀಭಾವದಲ್ಲಿ ಹೇಳಿದರು. ಅಧ್ಯಾಪಕರು 'ಸರ್, ಎಂತಹ ಮಾತನ್ನಾಡುತ್ತಿರುವಿರಿ ನೀವು? ನನ್ನ ಕಣ್ಣನ್ನು ತೆರೆಯಿಸಿದವರು ನೀವು. ನನ್ನೀ ಯಶಸ್ಸಿನ ಶ್ರೇಯ ನಿಮಗೆ ಸಲ್ಲಬೇಕು. ನಿಮಗೆ ನಾನು ಕೃತಜ್ಞನಾಗಿದ್ದೇನೆ ಸರ್. ಅಂದು ನೀವು ನನ್ನನ್ನು ಎಚ್ಚರಿಸದಿದ್ದರೆ, ಇಂತಹ ಯಶಸ್ಸಿನ ಭಾಗ್ಯ ನನ್ನದಾಗುತ್ತಿರಲಿಲ್ಲ ಎಲ್ಲ ನಿಮ್ಮಾಶೀರ್ವಾದ!' ಸಾಷ್ಟಾಂಗನೆರಗಿದ ಚಂದೂ.....

ಚಿತ್ರಕಲೆಯ ದ್ವಿತೀಯ ಪರೀಕ್ಷೆಯಲ್ಲಂತೂ ಪ್ರಾಂತಕ್ಕೇನೆ ಮೊದಲಿಗನಾಗಿ ಉತ್ತೀರ್ಣನಾಗಿದ್ದನು. ಜೋಶಿಯವರಿಗೆ ಚಂದೂನ ಯಶಸ್ಸು ಅಪಾರವಾದ ಆನಂದವನ್ನುಂಟುಮಾಡಿತ್ತು. ಅಧ್ಯಾಪಕರಂತೂ ಚಂದೂ ಮ್ಯಾಟ್ರಿಕ್ ನಂತರ, ಜೇ. ಜೇ. ಕಲಾಶಾಲೆ ಸೇರುವುದೇ ವಿಹಿತವೆಂದು ಅಭಿಪ್ರಾಯಪಟ್ಟಿದ್ದರು.

ಗಾಡಿ ವೇಗವಾಗಿ ಸಾಗಿತ್ತು. ಅದಕ್ಕೂ ಹೆಚ್ಚಿನ ವೇಗದಿಂದ ಚಂದೂನ ಕಣ್ಮಂಚಿನಲ್ಲಿ ಗತಿಸಿದ ಈ ಸಂಗತಿಗಳು ಮಿಂಚಿ ಮಾಯವಾಗುತ್ತಿದ್ದುವು ಚಂದೂ, ಅಧ್ಯಾಪಕರು ತನ್ನನ್ನು ಅಭಿನಂದಿಸಿದ ಸ್ವಾರಸ್ಯಪೂರ್ಣ ಸನ್ನಿವೇಶವನ್ನು ಪುನಃ ಪುನಃ ಸೃಷ್ಟಿಸಿಕೊಂಡ. ಎಂಥ ಉದಾರ ಹೃದಯರು ಅಧ್ಯಾಪಕರು! ತನ್ನ ಮಾಧ್ಯಮಿಕ ಶಿಕ್ಷಣ ಯಶಸ್ವಿಯಾಗಿ ಪೂರೈಸಿದ ಮೇಲೆ, ತನಗೆ ಧೈರ್ಯತುಂಬಿ ಚಿತ್ರಕಲೆಯನ್ನೇ ಜೀವನದ ಗುರಿಯನ್ನಾಗಿ ಮಾಡಿಕೊಳ್ಳಲು ಹೇಳಿದರಲ್ಲ! ಇದಲ್ಲದೆ ಜೇ. ಜೇ. ಕಲಾಶಾಲೆಯಲ್ಲಿ ತನಗೆ ಸುಲಭವಾಗಿ ಪ್ರವೇಶ ದೊರಕಿಸಿಕೊಟ್ಟರು. ಕಲಾಶಿಕ್ಷಕರಾದ ಜೋಶಿಯವರನ್ನಂತೂ ಚಂದೂ ಎಂದಿಗೂ ಮರೆಯುವಂತಿಲ್ಲ. ಚಂದೂನ ಶಾಲೆಯ ಜೀವನದಲ್ಲಿ ಶ್ರೀ. ಜೋಶಿಯವರ ಪ್ರವೇಶವಾಗದಿದ್ದಲ್ಲಿ ತಂದೀನಾಗುತ್ತಿದ್ದ ಚಂದೂ! ತನ್ನ ತಂದೆ–ತಾಯಿಗಳಿಗೆ ಸಾಂತ್ವನ ಹೇಳಿ ತಮ್ಮ ಕಿಸೆಯಿಂದಲೇ ೫೦ ರೂಪಾಯಿಗಳನ್ನು ಕೊಟ್ಟು ಮುಂಬಯಿಗೆ ಬೀಳ್ಕೊಟ್ಟರಲ್ಲ! ಮೇಲಾಗಿ 'ಚಂದೂ, ನೀನು ಯಾವುದಕ್ಕೂ ಸಂಕೋಚಪಡಬೇಡ. ನಿನ್ನ ಹಿರಿಯಣ್ಣನೆಂದೇ ನನ್ನನ್ನು ತಿಳಿ! ನಿನಗೆ ಮುಂಬಯಿಯಲ್ಲಿ ಸರ್ವವಿಧದ ಸಹಾಯ ಮಾಡಲು ನನ್ನ ಮಿತ್ರರಾದ, ಜೇ. ಜೇ. ಕಲಾಶಾಲೆಯ ಅಧ್ಯಾಪಕರಾದ ಕೇಳ್ಕರರಿಗೆ ಕೇಳಿಕೊಂಡಿದ್ದೇನೆ. ಅವರು ನಿನಗೆ ನೆರವಾಗುವರೆಂಬುದರಲ್ಲಿ ಸಂದೇಹವಿಲ್ಲ. ದೇವರ ಮೇಲೆ ಭಾರಹಾಕು. ಎಲ್ಲಿದ್ದಲ್ಲಿ ನಿನಗೆ ಜಯದೇವಿ ಒಲಿಯಲಿ ಎಂದು ಹಾರೈಸುತ್ತೇನೆ' ಎಂದು ಆಶೀರ್ವದಿಸಿದ್ದರು ಆ ಪಿತೃಸದೃಶ ಅಧ್ಯಾಪಕರು. 'ಸರ್ ನಿಮ್ಮನ್ನೆಂತು ಮರೆಯಲಿ? ನಿಮ್ಮ ಆಶೀರ್ವಾದ ಫಲಿಸಲಿ.' ಎಂದು ಚಂದೂ ತನ್ನಲ್ಲಿಯೇ ಆ ಕಾಣದ ಕೈಗೆ ಕೈಜೋಡಿಸಿದ.

× × × ×

ಚಂದೂನ ಪುರಾಕೃತ ಸಂಚಯಿತಪುಣ್ಯದ ಫಲವೆಂಬಂತೆ ಶ್ರೀ. ಕೇಳ್ಕರರು, ಅತನಿಗೆ ಸರ್ವವಿಧದ ಸಹಾಯಮಾಡಲು ಸಿದ್ಧ.

ರಾಗಿದ್ದರು. ಆತನನ್ನು ಮುಂಬಯಿ ನಿಲ್ದಾಣದಲ್ಲಿ ಸ್ವಾಗತಿಸಿ ತಮ್ಮ ಮನೆಗೆ ಕರೆದೊಯ್ದರು. ಮಾರನೆಯ ದಿನ ಶಾಲೆಯು ತೆರೆದುದರಿಂದ, ಕೇಳ್ವರರು ಚಂದೂನನ್ನು ಆತನ ಕೆಲ ಚಿತ್ರಗಳೊಂದಿಗೆ, ಮುಖ್ಯಾಧ್ಯಾಪಕರ ಸಂದರ್ಶನಕ್ಕೆ ಕರೆದೊಯ್ದರು. ಚಂದೂನ ಆ ಚಿತ್ರಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ, 'ಚಂದ್ರ, ನಾನೊಂದು ಮಾತು ಹೇಳಿದ್ದನ್ನು, ನೀನು ಅತಿಶಯೋಕ್ತಿಯೆಂದು ಭಾವಿಸಬಾರದು. ನೀವು ಹುಟ್ಟುಕಲಾವಿದರು. ಈ ಶಾಲೆ ನಿಮ್ಮ ಕಲೆಗೆ ಕೇವಲ Finishing touch ಮಾತ್ರ ಕೊಡಬಲ್ಲದು.' ಎಂದು ಅಭಿಪ್ರಾಯಪಟ್ಟರು ಮುಖ್ಯಾಧ್ಯಾಪಕರ ಈ ಪ್ರಶಂಸೆ ಆತನನ್ನು ಕಲಹೊತ್ತ ಮೂಕನನ್ನಾಗಿಸಿತು. ಚಂದೂ ತಡೆದು ಹೇಳಿದ: 'ಸರ್' ಎಲ್ಲ ನಿಮ್ಮ ಆಶೀರ್ವಾದ; ನನ್ನನ್ನು ಪ್ರಾರಂಭದಿಂದಲೂ ಪ್ರೋತ್ಸಾಹಿಸುತ್ತ ಬಂದ ನನ್ನ ಕಲಾಗುರುಗಳಾದ ಜೋಶಿಯವರಿಗೆ ಈ ಗೌರವ ಸಲ್ಲತಕ್ಕದ್ದು!'

ಕೇಳ್ವರರಿಂದ ಚಂದೂನ ಆರ್ಥಿಕ ಪರಿಸ್ಥಿತಿಯನ್ನರಿತ ಮುಖ್ಯಾಧ್ಯಾಪಕರು, ಕೆಲವು ದಿನಗಳಿಲ್ಲಿಯೆ, ಆತನಿಗೆ ಬಾಂದ್ರಾದಲ್ಲಿರುವ ಬ್ಯಾಂಡ್‌ಸ್ಟ್ಯಾಂಡ್ ವಸತಿಗೃಹದಲ್ಲಿ ವಸತಿ ಸೌಕರ್ಯವನ್ನು ದೊರೆಕಿಸಿ ಕೊಟ್ಟು ಬಿಡುವಿನ ವೇಳೆಯಲ್ಲಿ ಒಂದು ಕೆಲಸವನ್ನು ದೊರೆಕಿಸಿ ಕೊಟ್ಟರು. ತಾನರಿಯದ, ತನ್ನವರಲ್ಲದ ಆತ ತನಗೆ ಈ ಪರಿ ಸಹಾಯವನ್ನಾಡುತ್ತಿರುವಲ್ಲಿ ದೈವಲೀಲೆಯು ಕೈವಾಡವಿರುವುದಾಗಿ ಚಂದೂ ಭಾವಿಸಿದ.

ಬ್ಯಾಂಡ್‌ಸ್ಟ್ಯಾಂಡ್! ಎಂಥ ಮನೋಹರವಾದ ಸ್ಥಳ ಅಲ್ಲಿಯ ಸುಪ್ರಭಾತದ ಸೊಬಗನ್ನೂ, ಸಾಯಂಪ್ರಭೆಯನ್ನೂ ಸವಿದಷ್ಟೂ ಸವಿಯಬೇಕೆಂಬ ಬಯಕೆಯನ್ನು ಹುಟ್ಟಿಸುವಂಥದು! ಚಂದೂ ಈ ಬಗೆಯ ಸೌಂದರ್ಯವನ್ನು ನೋಡಿ ಮುಗ್ಧನಾಗಿ, ವಿಶ್ವಕರ್ಮನ ಲೀಲಾಡವನ್ನು ತನ್ನ ಚಿತ್ರಗಳಲ್ಲಿ ಮೂಡಿಸಬಯಸಿದ. ಬೆಳುದಿಂಗಳಿನ ದಿನಗಳಲ್ಲಂತೂ ಬ್ಯಾಂಡ್‌ಸ್ಟ್ಯಾಂಡಿನ ಶೋಭೆ ಇನ್ನು ಹೆಚ್ಚಾಗಿರುತ್ತದೆ. ಹುಣ್ಣಿವೆಯಂದಂತೂ ಜನ ಗುಂಪುಗುಂಪಾಗಿ, ಮಧ್ಯರಾತ್ರಿ ಸರಿಯುತ್ತಿದ್ದುದ್ದನ್ನೂ ಲಕ್ಷಿಸದೆ, ಆನೋದ-ಪ್ರಮೋದಗಳಲ್ಲಿ ಮೈಮರೆಯುತ್ತಿದೆ. ಚಂದೂ ಇಂಥವೆಷ್ಟೋ ಹುಣ್ಣಿವೆಗಳ ರಾತ್ರಿಗಳ ಸೊಬಗನ್ನು ಸವಿದನು. ಪೂರಬಂದಾಗ ಸೊಕ್ಕಿನಿಂದ ಅಪ್ಪಳಿಸುವ ಸಾಗರದ ತೆರೆಗಳನ್ನು ಕಂಡು ಬೆರಗಾದರೆ, ಮತ್ತೆ ತೆರೆ ಇಳಿದು ಸಾಗರ ಪ್ರಶಾಂತವಾದಾಗ, ಅದರ ಪ್ರಶಾಂತತೆಗೆ ಮಾರುಹೋಗುತ್ತಿದ್ದನು. ಅದೇಷ್ಟೊ ಬಾರಿ, ಮೇಲೆ ಪ್ರಶಾಂತವಾಗಿ ಪ್ರವಹಿಸುವ ಮಹಾಸಾಗರದ ಗರ್ಭದಲ್ಲಿ ಹುದುಗಿರುವುದೇನು? ಘನಘೋರ ಭೀಕರಜಲಚರಗಳೇ? ಹೊಳೆವ ಮುತ್ತು-ಸಿಂಪುಗಳೇ? ಎಂದು ಯೋಚಿಸಿ ತಾನೇ ಉತ್ತರಕೊಡುತ್ತಿದ್ದನು. 'ಒಂದೇ ಇಲ್ಲ, ಎಲ್ಲವೂ ಇವೆ. ಇವೆಲ್ಲವನ್ನು ಗರ್ಭದಲ್ಲಡಗಿಸಿ ಮೇಲೆ ಸೌಮ್ಯ ಮುಖವಾಡವನ್ನು ಧರಿಸಿದೆ' ಸಾಗರದ ಈ ಸೌಮ್ಯತೆ ಚಂದೂನ ದುಗುಡವನ್ನು ಪರಿಹರಿಸಲು ಸಹಾಯಕವಾಗಿದೆ. ದಿನ ವಿಡೀ ದುಡಿದು ಬೇಸತ್ತ ಚಂದೂನ ಜೀವಕ್ಕೆ ಸಾಗರ ತಂಗಾಳಿ ತಂಪನ್ನೊಡ್ಡಿದೆ. ಮನಸ್ಸಿಗೆ ಬೇಸರವಾದಾಗಲೆಲ್ಲ ಚಂದೂ ತನ್ನ ಕಾಲುಗಳನ್ನು ನೀರಿನಲ್ಲಿಳಿಬಿಟ್ಟು ಏನೇನೋ ಚಿತ್ರಿಸಿಕೊಳ್ಳುವನು. ಬೇಸರ ಕಳೆದಾದ ಮೇಲೆ ಮನಸ್ಸಿನಲ್ಲಿ ಮೂಡಿದ ಚಿತ್ರಗಳಿಗೆ ರೂಪ ಕೊಡ ಬಯಸುತ್ತಿದ್ದನು.

ಇಂಥ ಸುಂದರ ವಾತಾವರಣದಲ್ಲಿ ಚಂದೂನಿಗೆ, ಒಂದು ವರ್ಷ ಕಳೆದುಹೋಗುತ್ತಿದ್ದುದು ತಿಳಿಯುದಾಯಿತು

ಇತ್ತ ಮಾಸ್ತರರ ಆರ್ಥಿಕಸ್ಥಿತಿ ಏರುತ್ತಿರುವ ಬೆಲೆಗಳಿಗೆ ಎಷ್ಟೆಷ್ಟೂ ಏರದೂಗುತ್ತಿರಲಿಲ್ಲ. ಬರುತ್ತಿರುವ ಪಿಂಚಣಿಯಿಂದ ಎಂಥ ಪರಿಹಾರ ನಿಯೋಜಿಸಬಹುದು? ಅಣ್ಣನ ಆದಾಯ ಅಳತೆಯಲ್ಲಿಯೇ ಇದ್ದುದರಿಂದ, ಚಂದೂ ಬರುವ ವರುಷದ ಫೀಗಾಗಿ ಮನೆಯನ್ನು ನಂಬುವುದು ಗಗನಕುಸುಮಕ್ಕೆ ಕೈಹಾಕಿದಂತೆಯೆ. ಆದ್ದರಿಂದ ಚಂದೂ ಬೇಸಗೆಯ ರಜೆಯನ್ನು ಮುಂಬಯಿಯಲ್ಲಿಯೇ ಕಳೆಯಬೇಕಾಯಿತು. ಮುಖ್ಯಾಧ್ಯಾಪಕರಿಂದಾಗಿ ಚಂದೂನಿಗೆ ಪೂರ್ಣಾವಧಿ ನೌಕರಿಯೂ ದೊರೆಯಿತು. ಈ ಮೊದಲಿನ ಅಲ್ಪಾವಧಿ ಕೆಲಸವನ್ನು ಬಿಡಲಿಲ್ಲ ಅಲ್ಪಾವಧಿ ಕೆಲಸ ಕೊಟ್ಟ ಮಾಲಕರ ಮನವೊಲಿಸಿ, ಅಳಿದುಳಿದ ಕೆಲಸವನ್ನು ವಸತಿಗೃಹದಲ್ಲಿ ಪೂರೈಸಲು ಅನುಮತಿ ಪಡೆದಿದ್ದ. ಈ ಪರಿಯ ಹಗಲಿರುಳಿನ ಕಾರ್ಯಭಾರದಿಂದಾಗಿ, ಆತನಲ್ಲಿ ಹಣ ಶೇಖರಿಸಿತೇನೋ ನಿಜ; ಆದರೆ ಆರೋಗ್ಯ ಅಸಮಾಧಾನಕಾರಕವಾದ ಅವಸ್ಥೆಯಲ್ಲಿತ್ತು. ದುಡಿತಕ್ಕೆ ತಕ್ಕ ಆಹಾರ ತೆಗೆದುಕೊಳ್ಳುವುದನ್ನು ಕಡೆಗಣಿಸಿದ. ಬಂದ ಹಣದಲ್ಲಿ ಬಹ್ವಂಶ ಹಣವನ್ನು ತಂದೆ-ತಾಯಿಗಳಿಗೆ ಕಳಿಸಿ, ಉಳಿದದ್ದರಲ್ಲಿ ಫೀಗಾಗಿ ಹಾಗು ಅತ್ಯಾವಶ್ಯಕ ಖರ್ಚಿಗಾಗಿ ಕಾದಿರಿಸಿದ.

ಈ ಬಗೆಯ ಕಷ್ಟಮಯ ಜೀವನವನ್ನು ಚಂದೂ ೪ ತಿಂಗಳು ಮಾತ್ರ ಮಾಡಲು ಶಕ್ತನಾದ. ಬೆಳೆಯುತ್ತಿರುವ ದೇಹಕ್ಕೆ ಅವಶ್ಯವಾದ ಪೋಷಕ ಆಹಾರ ದೊರೆಯದಿದ್ದರೆ ನಡೆದೀತೆ? ದುಡಿಯುತ್ತಿರುವ ದೇಹಕ್ಕೆ ವಿಶ್ರಾಂತಿ ಕೂಡಬೆ? ಅವಶ್ಯಕ ಆಹಾರ, ಅಗತ್ಯದ ವಿಶ್ರಾಂತಿ, ಆತನಿಗೆ ದೊರೆಯದ್ದರಿಂದ, ನಿನೋನಿಯಾ ಅವನ ಬಳಿ ಸಾರಿತು. ಈ ಬೇನೆಗೆ ತಕ್ಕ ಔಷಧೋಪಚಾರವನ್ನು ಆತನ ಮಿತ್ರರು ಮತ್ತು ವಸತಿಗೃಹದ ಮೇಲ್ವಿಚಾರಕರು ಒದಗಿಸಿದ್ದರಿಂದ, ಆತ ಬಹು ಬೇಗ ಗುಣಮುಖನಾದ. ಆದರೆ ನಿಃಶಕ್ತಿ ಅತಿಯಾಗಿದ್ದುದರಿಂದ, ಊರಿಗೆ ಹೊರಡುವುದು ಅನಿವಾರ್ಯವಾಯಿತು.

ಕಳೆದ ಒಂದು ವರುಷದಿಂದ ಕಾಣದ ಮಗನ ಆಗಮನವನ್ನು ಆಶ್ಚರ್ಯದಿಂದ ನಿರೀಕ್ಷಿಸುತ್ತಿದ್ದ ಆ ತಾಯಿಗೆ, ಚಂದೂನ ಕೃಶಶರೀರ, ನಿಸ್ತೇಜ ಮುಖ ಅತೀವ ವೇದನೆಯನ್ನುಂಟುಮಾಡಿದುವು. ಕಣ್ಣೀರಿನ ಬಿಲುನೆ ಪುಟಿದಿದ್ದಿತು. 'ಚಂದೂ, ಎಷ್ಟೊಂದು ಸೊರಗಿರುವಿಯಲ್ಲಾ? ಇಲ್ಲಿಂದ ಹೊರಡುವಾಗ್ಗೆ ಹೇಗಿದ್ದಿ? ಈಗ ಹೇಗಾಗಿರುವಿಯಲ್ಲಾ?' ಮಾತೃಹೃದಯಕ್ಕೆ ಸಾಂತ್ವನ ದೊರೆಯುವುದೆಂತು? 'ಅಯೀ, ನಿನ್ನ ಆರೈಕೆಯಿಂದ ಹದಿನೈದು ದಿನಗಳಲ್ಲಿಯೇ ಮತ್ತೆ ಮೊದಲಿನಂತೆ ಮೈ ತುಂಬಿಕೊಳ್ಳುವೆ' ಎಂದು ತಾಯಿಯ ಕಣ್ಣೀರನ್ನು ತನ್ನ ಕೈಯಿಂದಲೇ ತೊಡೆದುಹಾಕಿ, 'ಅಯೀ ನಗು, ಹಾ! ಇನ್ನೊಮ್ಮೆ ನಗು' ನನ್ನ ಅಯೀ, ನಿನ್ನ ಅಳುಮೋರೆಯನ್ನು ನಾನು ನೋಡಲಾರೆ.' ಎಂದು ಹೇಳಿದನು. ಮಗನ ಆಗ್ರಹಕ್ಕಾಗಿ, ಅತನ ಸಂತೋಷಕ್ಕಾಗಿ ಆ ಮಹಾ

ತಾಯಿ ದುಃಖವನ್ನು ಮರೆಸುವಂತೆ ಕಡತಂದ ನಗು ಬೀರಿದಳು. ದಾದಾ ಮೌನವಾಗಿ ದುಃಖವನ್ನು ನುಂಗಿದರು.

ಚಂದೂ ತನ್ನೂರಲ್ಲಿ ಒಂದು ತಿಂಗಳು ಮಾತ್ರ ಇದ್ದನು. ಈ ಅವಧಿಯಲ್ಲಿ ತಾಯಿಯು ಅರಿಯಿಕೆಯಿಂದಾಗಿ ಜೀವಕಳೆ ರಾರಾಜಿಸ. ಲಾರಂಭಿಸಿತು ಆ ಊರಿನಲ್ಲಿದ್ದಷ್ಟೂ ದಿನ, ಜಕ್ಕಣನು ಕಟ್ಟಿದ ಶಂಭು. ಲಿಂಗನ ದೇವಾಲಯದಲ್ಲಿ ಬಹು ವೇಳೆಯನ್ನು ಕಳೆಯುತಿದ್ದರಲಿಲ್ಲ. ಜಕ್ಕಣನ ಶಿಲ್ಪಕಲಾ ಚಾತುರ್ಯ ಅವನನ್ನು ಆಕರ್ಷಿಸಿತ್ತು. ಚಂದೂ ವೈಯೆಲ್ಲಾ ಕಣ್ಣಾಗಿಸಿ ಆ ಕಲಾವೈಭವವನ್ನು ನೋಡುತ್ತಿದ್ದಂತೆ, ಆ ಅಮರಶಿಲ್ಪಿಯ ಚಿತ್ರಗಳನ್ನು ತಾನು ಹಾಳೆಯ ಮೇಲೆ ಚಿತ್ರಿಸ. ಬಲ್ಲೆನ—ಎಂದುಕೊಳ್ಳುತ್ತಿದ್ದನು. ಈ ಬಗೆಯ ಅವಿರತ ಯೋಚನೆ ಅತನನ್ನು ಕಾರ್ಯೋನ್ಮುಖನನ್ನಾಗಿ ಮಾಡಿತು. ಚಿತ್ರ ಹಾಳೆಯ ಮೇಲೆ ಮೈವೆತ್ತುತ್ತಿದ್ದಂತೆ, ಕಲ್ಲಿನಲ್ಲಿಯ ಕೆತ್ತನೆಗೆ ಸಾದೃಶ್ಯವಿದ್ದು. ದನ್ನು ಕಂಡು ಚಂದೂ ಅನಂದತುಂದಿಲನಾದ. ವಿಜಯದ ನಗೆ ಅತನಿಗರಿಯದಂತೆ ತುಟಿಯಲ್ಲಿ ಮೂಡಿತು. ಒಂದೊಂದು ಚಿತ್ರ ಬರೆದಾದಂತೆ, ಅವುಗಳನ್ನು ಶ್ರೀ. ಜೋತಿಯವರಿಗೆ ತಿದ್ದಲು ಕೊಟ್ಟಾಗ ಅವರು ಬೆಕ್ಕಸಬೆರಗಾಗಿ 'ಚಂದೂ, ನೀನು ನಿಜವಾಗಿಯೂ ಹುಟ್ಟು ಕಲಾವಿದನು. ನಿನ್ನ ಮುಖ್ಯಾಧ್ಯಾಪಕರು ನುಡಿದ ಮಾತು ಯಥಾರ್ಥ ವಿದೆ. ಅಪೂರ್ವ ಯಶಸ್ಸು ನಿನ್ನದಾಗಲಿ!' ಎಂದು ಹಾರೈಸು. ತ್ತಿದ್ದರು.

'ಒಂದು ತಿಂಗಳು ಎಷ್ಟು ಬೇಗ ಸವೆಯಿತಲ್ಲಾ' ಎಂದು ತಂದೆ-ತಾಯಿ ಮರುಗಿದರು. ತಂದೆ-ತಾಯಿಗಳಿಂದ ದೂರ ಹೋಗಲೇ. ಬೇಕಾಯಿತು. 'ಆರೋಗ್ಯ ಅಲಕ್ಷಿಸಬೇಡ ಚಂದೂ, ಪನ್ನಾಣೆಯಿದೆ' ಎಂದು ಅಮ್ಮೀ ಹೇಳಿದರು.

ಮುಂಬಯಿಗೆ ಬಂದು ಮೊಟ್ಟಮೊದಲು ಮುಖ್ಯಾಧ್ಯಾಪಕರನ್ನು ಕಂಡು, ತಾನು ತೆಗೆದ ಜಕ್ಕಣನ ಶಿಲ್ಪಕಲಾಚಾತುರ್ಯದ ಪ್ರತಿ. ಚಿತ್ರಗಳನ್ನು ತೋರಿಸಿದ. ಅವರು ಆ ಚಿತ್ರಗಳನ್ನು ನಿರೀಕ್ಷಿಸುತ್ತಿ. ದ್ದಂತೆ, ಅವರ ಮುಖದಲ್ಲಿ ಸಂತೋಷದ ನಗು, ಆಶ್ಚರ್ಯದ ಮುದ್ರೆ ಮೂಡಿದುವು. ಚಂದ್ರನ ಬೆನ್ನು ತಟ್ಟುತ್ತ ಹೇಳಿದರು: 'ಚಂದ್ರ, ನೀನು ಅಸಾಮಾನ್ಯ. ನೀನು ನಮ್ಮ ಶಾಲೆಯ ಅಪೂರ್ವಸಂಪತ್ತು. ಇನ್ನೂ ಇಂತಹ ನೂರಾರು ಕೃತಿಗಳು ನಿನ್ನಿಂದಾಗಲಿ.'

ಸರಿ, ಶಾಲೆ ಅದೇ ತಾನೇ ಪ್ರಾರಂಭವಾಗಿ ತಿಂಗಳೊಂದಾ. ಗಿತ್ತು. ಚಂದೂನ ಯಾಂತ್ರಿಕಜೀವನ ಮತ್ತೆ ಪ್ರಾರಂಭವಾಯಿತು. ಮುಂಜಾನೆ ವರ್ಗಗಳು ೭॥ ಗಂಟೆಗೆ ಆರಂಭವಾಗುತ್ತಿದ್ದುದರಿಂದ, ಅತ ಬ್ಯಾಂಡ್‌ಸ್ಟ್ಯಾಂಡನ್ನು ೬॥ ಗಂಟೆಗೇನೆ—ಪ್ರಾತರ್ವಿಧಿಗಳನ್ನು ಪೂರೈಸಿ ಕೊಂಡು—ಬಿಡಬೇಕಾಗುತ್ತಿತ್ತು. ೭॥ಯಿಂದ ಮಧ್ಯಾಹ್ನ ೨ ಗಂಟೆಯವರೆಗೆ ವರ್ಗಗಳು ನಡೆಯುತ್ತಿದ್ದುವು. ವರ್ಗಗಳಿಂದ ವಿಮುಕ್ತ ನಾದಮೇಲೆ, ಬಳಿಯ ಹೋಟಿಲ್ಲೊಂದರಲ್ಲಿ ಒಂದೆರಡು ಬಾಳೆಹಣ್ಣು ಒಂದಿಷ್ಟು ಚಹಾ ಮೇಲೆ ತಂಬಿಗೆ ನೀರು ಕುಡಿದು ಉದರಬ್ರಹ್ಮನಿಗೆ ಸಮಾಧಾನ ಹೇಳುತ್ತಿದ್ದ. ಅನಂತರ ಅಲ್ಲಾವಧಿಯ ನೌಕರಿಗೆ ಹೋಗಬೇಕು. ಈ ಕೆಲಸದಿಂದ ನಿತ್ಯ ಬಿಡುಗಡೆ ದೊರೆಯುವುದು ೬॥ ಗಂಟೆಗೆ. ವಸತಿಗೃಹ ಸೇರಲು ೮॥ ಗಂಟೆಯಾದರೂ ಆಗುತ್ತಿತ್ತು. ಊಟ ಮುಗಿದು ಅಭ್ಯಾಸವನ್ನು ಕೈಕೊಳ್ಳುವಷ್ಟರಲ್ಲಿ ೯॥ ಗಂಟೆ ಯಾಗುವುದು. ಮಧ್ಯಾಹ್ನದ ವೇಳೆಯನ್ನು ಉದರನಿಮಿತ್ತವಾಗಿ ವಿನಿ. ಯೋಗಿಸುತ್ತಿದ್ದುದರಿಂದ, ಆ ಆ ದಿವಸದ ಅಧ್ಯಾಪ ಪೂರ್ತಿಸುವಷ್ಟರಲ್ಲಿ ಬೆಳಗಿನ ೩ ಗಂಟೆ ಆಗಿರುವುದು. ಇನ್ನುಮೇಲೆ ಚಂದೂನಿಗೆ ನಿದ್ರೆ. ಈ ಬಗೆಯ ಶಾರೀರ್ರಮಿಕ ಜೀವನಕ್ರಮ ಚಂದೂನದಿದ್ದರೂ ಅತ ಎದೆಗೆಡಲಿಲ್ಲ. ಮುಖ್ಯವಾಗಿ ಮಾನಸಿಕ ತೃಪ್ತಿ ಅತನಿಗಿತ್ತು. ಇನ್ನೇನು, ಮೂರು ವರುಷಗಳು ಕಳೆದರಾಯಿತು. ಇಲ್ಲಿಯ ಶಿಕ್ಷಣ ಮುಗಿ. ಯುವುದು—ಎಂದು ಚಂದೂ ನಿತ್ಯವೂ ದಿನಗಳನ್ನು ಎಣಿಸುತ್ತಿದ್ದ. ಮುಖ್ಯಾಧ್ಯಾಪಕರ ಹರಕೆ ನೆರವೇರಲೆಂದು ಭಗವಂತನಲ್ಲಿ ಮೊರೆ ಇಡುತ್ತಿದ್ದ.

• ದೀಪಾವಳಿಯಾದ ಮೇಲೆ ಚಳಿ ಮುಂಬಯಿಯಲ್ಲಿ ಕಾಲಿಕ್ಕಿತು. ಆ ವರುಷವಂತೂ ಎಂದಿಲ್ಲದ ಚಳಿ. ಚಂದೂನಲ್ಲಿ ಚಳಿಯಿಂದ ರಕ್ಷಿಸಿ. ಕೊಳ್ಳಲು ಸಾಕಷ್ಟು ಅರಿವೆ-ಹೊದಿಕೆಗಳು ಇಲ್ಲದ್ದರಿಂದ, ಚಳಿ ಅತನ ಮೇಲೆಬೆನ್ನಾಗಿ ವಕ್ರಿಸಿತು. ಮೊಟ್ಟಮೊದಲು ಶೀತಸಂಚಾರವಾಗಿ, ಆದರ ಬೆಂಬತ್ತಿ ಕೆಮ್ಮು ಕಾಲಿಟ್ಟಿತು. ಅಲ್ಪವೆಂದು ತೋರುವ ಈ ಮಹಾಬ್ಯಾಧಿಯ ಚಿಹ್ನಗಳಿಗೆಲ್ಲವನ್ನೂ ಚಂದೂ ತನಗೆ ಗೊತ್ತಿದ್ದ ಮಾತ್ರೆ, ಮಿಶ್ರಣಗಳಿಂದ ನಿವಾರಿಸಲು ಪ್ರಯತ್ನಿಸಿದ. ಅದರಿಂದಾಗಿ ಶೀತ-ಕೆಮ್ಮುಗಳು ತಾತ್ಪೂರ್ತಿಕವಾಗಿ ಹಿಮ್ಮೆಟ್ಟುತ್ತಿದ್ದುವು. ಆದರೆ ಅತನ ದುರ್ಬಲಶರೀರದಲ್ಲಿ ಅವುಗಳಿಗೆ ಪ್ರವೇಶ ಸುಲಭಸಾಧ್ಯ. ವೆಂಬುದನ್ನು ಅವು ಕಂಡುಕೊಂಡಿದ್ದವೇನೋ!

ಈಗಲೇ ಚಂದೂನ ಪರೀಕ್ಷಾಕಾಲ ಬಂದಿತೆನ್ನಬಹುದು. ಅತನ ಕಲೆಗೆ ಬೆಳಕು ದೊರೆಯಲಿರುವ ಸದವಕಾಶ ಲಭಿಸಿತೆನ್ನಲಡ್ಡಿ. ಯಿಲ್ಲ. ವಿಶ್ವ ಸಂಸ್ಥೆಯ ಆಶ್ರಯದಲ್ಲಿ ಸಾಂಸ್ಕೃತಿಕ ಗೋಷ್ಠಿಯ ಪರವಾಗಿ ಚಿತ್ರಕಲಾಸ್ಪರ್ಧೆ ನಡೆಯಲಿತ್ತು. ಆ ಸ್ಪರ್ಧೆಯಲ್ಲಿ ಭಾರತವೂ ಭಾಗ ವಹಿಸಲಿದ್ದುದರಿಂದ, ಭಾರತಸರಕಾರದವರು, ಎಲ್ಲಾ ಕಲಾಶಾಲೆಗಳಿಗೆ, ಚಿತ್ರಕಲಾ ಸ್ಪರ್ಧೆಯನ್ನೇರ್ಪಡಿಸಿ ಬಹು. ಮಾನಿತ ಚಿತ್ರಗಳನ್ನು ಕಳಿಸಿಕೊಡಲು ಪ್ರಾರ್ಥಿಸಿದ್ದರು. ಈ ಪ್ರಾರ್ಥನೆಯನ್ನು ಮನ್ನಿಸಿದ ಜೆ. ಜೆ. ಕಲಾಶಾಲೆಯವರು ಸ್ಪರ್ಧೆಯ ದಿನಾಂಕವನ್ನು ಘೋಷಿಸಿದರಲ್ಲದೆ, ಶಾಲೆಯ ವಿದ್ಯಾರ್ಥಿಗಳಿಗೆ ಅತ್ಯು. ತ್ಸಾಹದಿಂದ ಭಾಗವಹಿಸಲು ಕೇಳಿಕೊಂಡರು. ಚಂದೂ ಈ ಸ್ಪರ್ಧೆ. ಯಲ್ಲಿ ಭಾಗ ವಹಿಸಿದನೆಂಬುದು ಅಸಂಭವನೇನಲ್ಲ.

ಈ ಸ್ಪರ್ಧೆ ತನ್ನ ಸುಪ್ತಶಕ್ತಿಗೆ ಚಲನವನ್ನೀಯಲೆಂದು ಕಾಣದ ಕೈಗೆ ಕೈಮುಗಿದು, ಪೆನ್ಸಿಲನ್ನೆತ್ತಿಕೊಂಡ ಚಂದೂ. ಚಿತ್ರವನ್ನು ನಿರ್ಮಿಸುವಲ್ಲಿ ತನ್ನ ತನು-ಮನಗಳೆರಡನ್ನೂ ಸೂರೆಗೊಂಡಿದ್ದ. ಕೈಯ. ಲ್ಲಿದ್ದ ಕುಂಚಕ್ಕೆ ಬಿಡುವು ದೊರೆಯುವುದು, ಕೇವಲ ಅವರಿವಾರ್ಯ ಕಾರಣಗಳ ಮೂಲಕವಾಗಿಯೇ! ಭೀಷ್ಮವ್ರತನಾದ ಚಂದೂ, ಹಗಲಿ. ರುಳೆನ್ನದೆ, ಮೈಕೊರೆವ ಚಳಿಯನ್ನು ಅಲಕ್ಷಿಸಿ, ಚಳಿಯಿಂದಾಗಿ

ತಲೆದೋರಿದ ನೆಗಡಿ– ಕೆಮ್ಮುಗಳನ್ನು ಕಡೆಗಾಣಿಸಿ, ಒಂದು ವಾರದಲ್ಲಿ ಚಿತ್ರವನ್ನು ಸಿದ್ಧಪಡಿಸಿದ. ಶಾಲೆಯಲ್ಲಿ ಚಿತ್ರವನ್ನು ಕೊಟ್ಟು ವಸತಿ ಗೃಹಕ್ಕೆ ಬಂದ ದಿನವೇ ಹಾಸಿಗೆ ಹಿಡಿಯುವಂತಾಯಿತು ಚಂದೂ. ವಾರವಿಡೀ ಹಗಲಿರುಳೆನ್ನದೆ ದುಡಿದು ಬೇಸತ್ತ ದೇಹಕ್ಕೆ ವಿಶ್ರಾಂತಿ ಅಗತ್ಯವಿತ್ತು. ಅಗತ್ಯದ ವಿಶ್ರಾಂತಿಗೆಂದೇ ಚಂದೂ ಮಲಗಲಿಲ್ಲ; ಹಾಸಿಗೆ ಹಿಡಿಯುವುದು ಅನಿವಾರ್ಯವಾಯಿತು, ಶೀತ ಕೆಮ್ಮುಗಳು ಬಲವಾಗಿ, ಜ್ವರವೂ ಬಂದಿತ್ತು. ತನಗೆ ಗೊತ್ತಿದ್ದ ಮಾತ್ರೆಗಳನ್ನು ಗುಟುಕರಿಸಿದ. ಮಾರನೆಯ ದಿನ ಕೆಲಮಟ್ಟಿಗೆ ಕಡಿಮೆಯಾದಂತೆ ತೋರಿತು ಚಂದೂನಿಗೆ. ಎಂತಲೇ ಶಾಲೆಗೆಂದು ಹೊಂಟ ತನ್ನ ಬಾಡಿದ ಮುಖಕ್ಕಾಗಿ ವಿವರಣೆ ಕೇಳಿದ ಕೇಳ್ಕರರಿಗೆ, ನಿದ್ದೆ ಇಲ್ಲದಿರುವುದೆಂದು ಕೊಡಲಾಯಿತು. ಶಾಲೆಯಿಂದ ವಸತಿಗೃಹಕ್ಕೆ ಮರಳುವಷ್ಟರಲ್ಲಿ ಮೈ ಕಾದಹಂಚಾಗಿತ್ತು. ಬಾಯಿ ಅಸ್ವಾದವನ್ನು ಕಳೆದುಕೊಂಡಿತ್ತು. ತನಗೆ ಗೊತ್ತಿದ್ದ ಗುಳಿಗೆಗಳನ್ನು ನುಂಗಿದ ಹಾಸ್ಟೆಲಿನ ಮೇಲ್ವಿಚಾರಕರಿಂದ ಔಷಧೋಪಚಾರ ದೊರೆಯಿತು.

ಕಳೆದ ನಾಲ್ಕು ದಿನಗಳಿಂದ ಕಾಣದಾಗಿದ್ದ ಚಂದೂನನ್ನು ಕಾಣಲೆಂದೇ ಬಂದ ಕೇಳ್ಕರರನ್ನು, ಚಂದೂನ ಕರ್ಣಕಠೋರ—ಹೃದಯವಿದ್ರಾವಕ ಕೆಮ್ಮು ಸ್ವಾಗತಿಸಿತು. ಕೋಣೆಯ ಬಾಗಿಲನ್ನು ಮೆಲ್ಲಗೆ ಸರಿಸಿ ಒಳಗೆ ಪ್ರವೇಶಿಸಿದ ಕೇಳ್ಕರರನ್ನು ಕಂಡು ಚಂದೂ ಆಶ್ಚರ್ಯಚಕಿತನಾದ. 'ಹೀಗೆ ಬನ್ನಿರಿ' ಎಂದು ಕುರ್ಚಿಯತ್ತ ಕೈ-ಮಾಡಿ ಏಳಬಯಸಿದ ಚಂದೂನಿಗೆ, ಹಾಗೆ ಮಾಡದಿರಲು ಕೇಳ್ಕರರು ಸೂಚಿಸಿದರು. 'ಚಂದೂ, ನಾನು ನಿನಗೆ ಪರಕೀಯನಾದೆನೆ? ನನಗೆ ಹೇಳಿಕಳಿಸಬಾರದಾಗಿತ್ತೆ?' ಕೇಳ್ಕರರ ಧ್ವನಿಯಲ್ಲಿ ಸಂತಾಪ ಹಾಗು ಅನುತಾಪ ಬೆರೆತುಕೊಂಡಿದ್ದುವು. 'ನೋನ್ನೆ ಶಾಲೆಯಲ್ಲಿ ಕಂಡಾಗ್ಲೇನೆ ನನಗೆ ಸಂಶಯಬಂದಿತ್ತು.' 'ಓಹ್! ಅಂಥದೇನು ಇಲ್ಲ ಸಾರ್!' ಬಹುಪ್ರಯಾಸದ ಮುಗುಳ್ನಗೆ ಬೀರಿದ ಚಂದೂ. 'ಕಳೆದವಾರ ನಿದ್ದೆ ಮಾಡದ್ದರಿಂದ ಅಯಾಸವಾಗಿದೆಯಷ್ಟೆ?' ಹೀಗೇ ಎನ್ನುವಷ್ಟರಲ್ಲಿ ಚಂದೂ ಕೆಮ್ಮಿನಿಂದ ಕಸಿವಿಸಿ ಪಡುವಂತಾಯಿತು. ಚಂದೂನ ಮೈಮೇಲೆ ಓಡಾಡಿದ ಕೇಳ್ಕರರ ಕೈಬೆರಳುಗಳು ಜುರುಕ್ ಎಂದುವು; 'ಚಂದೂ, ನಾನು ೫ ನಿಮಿಷಗಳಲ್ಲಿ ಬರುವೆನು' ಎಂದ. ಹೇಳಿದ ಕೇಳ್ಕರರು ತಮ್ಮ ಮಿತ್ರರಾದ K. E. M. ಆಸ್ಪತ್ರೆಯ ಡಾಕ್ಟರರಿಗೆ ಫೋನ್ ಮಾಡಿದರು ಅರ್ಧ ಗಂಟೆಯಲ್ಲಿ ಆ ಡಾಕ್ಟರರು ಬಂದು ದೇಹ ಪರೀಕ್ಷಿಸಿ, ಆಸ್ಪತ್ರೆಗೆ ಸ್ಥಳಾಂತರಿಸುವುದು ಸೂಕ್ತವೆಂದು ಸೂಚಿಸಿದರು. ಈ ಸೂಚನೆ ಕೇಳ್ಕರರಿಗೂ ಮಾನ್ಯವಾಯಿತು. ಆಸ್ಪತ್ರೆಲಿನ ಮೇಲ್ವಿಚಾರಕರು ಆಗಲೆನಿಸಿದ್ದರಿಂದ, ಅವರ ಅಪ್ಪಣೆಯನ್ನು ಪಡೆಯಲಾಯಿತು. 'ಡಾಕ್ಟರ್ ಘಾಟೆಕ, ಈತನ ಬಗ್ಗೆ ನೀವು ದಕ್ಷತೆ ವಹಿಸಬೇಕೆಂದು ನನ್ನ ಪರವಾಗಿ ಕೇಳಿಕೊಳ್ಳುತ್ತೇನೆ.' ಎಂದು ನಮ್ರರಾಗಿ ಕೇಳ್ಕರರು ಪ್ರಾರ್ಥಿಸಿ, ಚೇನೆಯ ಗುಣವಿಶೇಷವನ್ನು ಕೇಳಿದರು. ಸದ್ಯಕ್ಕೆ ಯಾವುದನ್ನೂ ಖಚಿತವಾಗಿ ಹೇಳುವುದು ಸರಿಯಲ್ಲವೆಂದೂ, ನಾಳೆ 'ಕ್ಷ' ಕಿರಣ ಪರೀಕ್ಷೆಯಿಂದ ಚೇನೆಯ ಗುಟ್ಟು ತಿಳಿಯುವುದೆಂದೂ ಘಾಟೆಕರು ಹೇಳಿದರು.



ಮಾರನೆಯ ದಿನ 'ಕ್ಷ' ಕಿರಣ ಪರೀಕ್ಷೆಯಾಯಿತು. ಕ್ಷಯದ ಸಲ್ಲಕ್ಷಣಗಳಲ್ಲಿ ಸುಸ್ಪಷ್ಟವಾಗಿದ್ದುವು. ಈ ವಿವರವನ್ನು ಕೇಳ್ಕರರಿಗೆ ಹೇಳಲಾಗಿ ಅವರು ಗಾಬರಿಯಾದರು. 'ಕೇಳ್ಕರ, ನಾನು ಸಾಧ್ಯವಿದ್ದ ಪ್ರಯತ್ನ ಮಾಡುವೆನು. ಬೇನೆ ಮಾಧ್ಯಮಾವಸ್ಥೆಯಲ್ಲಿದೆ. ಪ್ರಾಥಮಿಕ ಲಕ್ಷಣಗಳು ಈತನಿಗೆ ತಿಳಿಯದೆ ಹೋಗಿವೆ. ಕೆಮ್ಮು-ನೆಗಡಿಗಳನ್ನು ಸಾಮಾನ್ಯವೆಂದು ಭಾವಿಸಿದ್ದೇ ತಪ್ಪಾಗಿದೆ. ದೇವರ ಮೇಲೆ ಭಾರ ಎಂದು ಘಾಟೆಕರು ಹೇಳಿದಾಗ ಕೇಳ್ಕರರಿಗೆ ದಿಗ್ಭ್ರಾಂತಿಯಾಯಿತು. ಕೆಲಹೊತ್ತಿನ ಮೇಲೆ 'ಡಾಕ್ಟರ್ ನಿಮ್ಮ ಕೈಯಿಂದಾದ ಎಲ್ಲ ಪ್ರಯತ್ನ ಮಾಡಿರಿ. ಬಡ ಹುಡುಗನನ್ನು ಬದುಕಿಸಿರಿ!' ಎಂದು ದೀನತೆಯಿಂದ ಪ್ರಾರ್ಥಿಸಿದರು. ಮಾರನೆಯ ದಿನವೇ ಚಂದೂನ ಊರಿಗೆ ಕೇಳ್ಕರರ ಪತ್ರ ಹೋಯಿತು. ಒಂದೆರಡು ದಿನಗಳಲ್ಲಿಯೇ ದಾದಾ, ಅಯ್ಯ ಮತ್ತು ಜೋಶಿಯವರು ಮುಂಬಯಿಗೆ ಬಂದರು. ತನಗಾಗಿ ಅನುತಾಪ ಪಡುತ್ತಿರುವ ಕೇಳ್ಕರ, ಜೋಶಿಯವರಿಗೆ ಚಂದೂ ಮೌನ ಕೃತಜ್ಞತೆಗಳನ್ನು ಸಮರ್ಪಿಸಿದನು. ಚಂದೂನ ಕೃಶಶರೀರ, ಒಳಸೇರಿದ ಕಣ್ಣುಗಳನ್ನು ಕಂಡ ತಂದೆ-ತಾಯಿಗಳ ಕಣ್ಣಲ್ಲಿ ನೀರಿನ ಕಾರಂಜಿ ಪುಟಿಯಿತು. ಮುಂಬಯಿಗೆ ಬರಲು ತಮಗೆ ದೊರೆತ ಸಂಧಿಯನ್ನು ವಿಮರ್ಶಿಸಿಕೊಂಡರು ಆ ತಂದೆ-ತಾಯಿ. ಮಗನ ಮಗ್ಗುಲಲ್ಲಿ ಕುಳಿತುಕೊಂಡು ಆತನ ಪ್ರಕೃತಿಯ ಬಗ್ಗೆ ಕೇಳಿದರು. ಚಂದೂ ಏನು ತಾನೆ ಕೇಳಬಹುದು? ಒಳಯಲ್ಲಿ ನಿಂತಿರುವ ಕೇಳ್ಕರರು ಏನು ಉತ್ತರಿಸಬೇಕು? ಇಬ್ಬರಿಗೂ ತಿಳಿಯದಾಯಿತು. ಕ್ಷಣಹೊತ್ತು ಚಂದೂ ಹೇಳಿದನು—'ಒಂದು ವಾರದಿಂದ ಜ್ವರ ಮತ್ತು ಕೆಮ್ಮು ಬರುತ್ತಿತ್ತು. ಈಗ ಎಷ್ಟೋ ಪಾಲು ಕಡಿಮೆಯಾಗಿದೆ. ನನ್ನ ಆರಯಿಕೆಯನ್ನು ನಿಮ್ಮ ಪರವಾಗಿ ಕೇಳ್ಕರರು ಮಾಡಿರುವುದೋ ಜನ್ಮದ ಋಣ ತೀರಿಸಿದ್ದಾರೆ' ತಾಯಿ-ತಂದೆ ಕಣ್ಣೀರು ಸುರಿದರು, ತಮ್ಮ ಚಂದೂ ನನ್ನು ಕೇಳ್ಕರರು ಎಷ್ಟು ಹಚ್ಚಿಕೊಂಡಿದ್ದಾರೆಂದು ನೆನೆದು. ಕೇಳ್ಕರರ ಚಂದೂನ ಉತ್ತರದಿಂದ ದಿಙ್ಮೂಢರಾದರು: ಮಹಾ ಬೇನೆಗೆ ಒಳಗಾದಾಗ ಯಾರಾದರೂ ಆರೈಕೆ ಮಾಡಿದ್ದು, ಒದುಕು-ಸಾವುಗಳ ನಡುವೆ ತನ್ನ ಜೀವಕ್ಕೆ ತೊಂದರೆಯಾಗುವುದನ್ನು ತಪ್ಪಿಸಿದ್ದು ಸಮಾಧಾನವಾಗಿತ್ತಿದ್ದಂತೆ, ಸಹಜವಾಗಿ ಹೇಳಿದನಲ್ಲಾ ಎಂದು. ಕೇಳ್ಕರರು ಚಂದೂನ ತಾಯಿ-ತಂದೆ ಹಾಗೂ

ಶ್ರೀ. ಜೋಶಿಯವರನ್ನು ಡಾಕ್ಟರರಿಗೆ ಪರಿಚಯ ಮಾಡಿಕೊಟ್ಟರು. ಅಯಿಯ ಅಕ್ಕರತೆಯ ಪ್ರಶ್ನೆಗೆ ಡಾಕ್ಟರರು ಗಾಬರಿಗೊಳ್ಳದಿರಲು ಸೂಚಿಸಿದರು.

ಚಂದೂ ಆಸ್ಪತ್ರೆ ಸೇರಿದ ೧೫ ದಿನಗಳಲ್ಲಿ ಕಲಾಕಾಲೆಯ ಚಿತ್ರ-ಸ್ಪರ್ಧೆಯ ಪರಿಣಾಮ ಪ್ರಕಟವಾಯಿತು. ಚಂದೂನಿಗೇ ಪ್ರಥಮ ಸ್ಥಾನ ಲಭಿಸಿತ್ತು. ಇಂಥ ಒಳ್ಳೆಯ ಸುದ್ದಿನ್ನು ಕೇಳಿ, ನಲಿಯುವ ಸ್ಥಿತಿಯಲ್ಲಿರಲಿಲ್ಲ ಚಂದೂ. ಈ ವಾರ್ತೆ ಕೇಳಿದಾಗ, ಸ್ಮಿತಹಾಸ್ಯ ಮಾತ್ರ, ತುಟಿಗಳಲ್ಲಿ ಮೂಡಿ ಮಾಯವಾಯಿತು. ಮಗನ ಯಶಸ್ಸನ್ನು ತಿಳಿದ ತಂದೆ-ತಾಯಿ ಹರ್ಷದಿಂದಿರುವ ಅವಕಾಶ ಅದಾಗಲಿಲ್ಲ. ದೇವರ ಕೃಪೆಯಿಂದ ಮಗು ಒದುಕಿ ಬಾಳಲೆಂದು ನಿತ್ಯವೂ ಪ್ರಾರ್ಥಿಸುತ್ತಿದ್ದರು. ಆದರೆ....? ಡಾಕ್ಟರರ ಪ್ರಯತ್ನಕ್ಕೂ ಬಗ್ಗದೇ ತಂದೆ-ತಾಯಿಗಳ ದೈನ್ಯದ ಪ್ರಾರ್ಥನೆಗೂ ಕಿವಿಗೊಡದೆ, ಮುಂದೆ ಒಂದೇ ವಾರದಲ್ಲಿ ಚಂದೂನ ಜೀವಪಕ್ಷಿ ಹಯಣ ಬೆಳಸಿತು. ಮಗನು ಶಿಕ್ಷಣ ಪೂರೈಸಿ ದೊಡ್ಡನನಾಗಿ ಮೆರೆಯುತ್ತಿರುವಾಗ ತಾವು ಮುಂಬಯಿಯಲ್ಲಿ ಬಂದು ನೆಲಸುವಂತಾಗಲೆಂಬ ದಾದಾ ಅಯಿಯ ಹೊಂಗನಸು ವಾಸ್ತವಕ್ಕೆ ಇಳಿಯದಿದ್ದುದು ಅವರ ದುರ್ದೈವ.

× × × ×

ದಾದಾನ 'ಚರ್ಚಗೇಟ್‌ಮಂಜರ'ಯ ಪಾರಾಯಣಕ್ಕೆ ಭಂಗ ಉಂಟಾಗುವುದು, ಅದೇ ತಾನೆಪ್ಪೋಸ್ಟ್‌ಮನ್ನನು ಒಗೆದುಹೋದ ಪತ್ರದಿಂದ ಪತ್ರವೆಂದಮೇಲೆ ಅಯಿಯೂ ದಾದಾನ ಬಳಿ ಬಂದರು. ಕವರು ತೆರೆಯುತ್ತಿರುವಂತೆ ಹತ್ತೆಂಟು ವಿಚಾರಗಳು ಅವರ ತಲೆಯಲ್ಲಿ ಸುಳಿದುಹೋದುವು. ಓಲೆ ಒಡೆಯುತ್ತಲೆ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಎಂಬ ಶಬ್ದಗಳು ಅವರ ಕಣ್ಣುಕುಕ್ಕಿಸಿದುವು. ಪಳಕ್ಕನೆ ಕಣ್ಣೀರು ಉದುರಿದುವು. ದಾದಾನ ಈ ಭಾವದಿಂದ ಅಯಿಗೆ ಅತೀವ ವೇದನೆಯುಂಟಾಯಿತು. 'ಯಾರದದು ಪತ್ರ?' ಎಂದು ಅಳುತ್ತಲೆ ಕೇಳಿದ್ದಕ್ಕೆ ದಾದಾ 'ಚಂದೂನ ಶಾಲೆಯದು' ಎನ್ನಲು ನಾಕುಬೇಕಾಯಿತು. ಬಹು ಪ್ರಯಾಸದಿಂದ ಓಲೆ ಓದತೊಡಗಿದರು:—

"ಮಾನ್ಯರೆ,

ಬಹು ಭಾರವಾದ ಹೃದಯದಿಂದ ಈ ಓಲೆ ಬರೆಯುತ್ತಿದ್ದೇನೆ. ಚಂದೂನ ಮರಣದಿಂದ ನಿಮಗೆ ಮಾತ್ರವಲ್ಲದೆ ಭಾರತಕ್ಕೇ ಹಾನಿಯಾಗಿದೆ. ಭಾರತಕ್ಕೆ ಅಪೂರ್ವ ಕೀರ್ತಿಯನ್ನು ತಂದ ಆ ಸುಪುತ್ರ ಕಣ್ಮರೆಯಾಗಿ ನನ್ಮೆಲ್ಲರನ್ನೂ ಅನಾಥರನ್ನಾಗಿ ಮಾಡಿದ್ದಾನೆ..... ಹೆಚ್ಚಿಗೆ ಬರೆಯಲಾರೆ. ಮನಸ್ಸು ಕಸಿವಿಸಿಗೊಂಡಿದೆ....ಕೈ ಒತ-ದಾಗಿದೆ....ಇದರೊಂದಿಗೆ ವಿಶ್ವಶಂಸ್ಥೆಯ ಪ್ರಶಂಸಾಪತ್ರವನ್ನಿಡಲ್ಲಾಗಿದೆ ..... ಕ್ಷಮಿಸಿರಿ.

ತಮ್ಮ,
ಡಿರೆಕ್ಟರ್

ವಿ. ಸೂ: ಅಯ್ಯೋ, ನಮಸ್ಕಾರವೆಂದೂ ಅನ್ನಲೂ ಮರೆತೆನಲ್ಲ? ಕ್ಷಮೆ ಇರಲಿ."

ಪ್ರಿಯವಾಚಕ,

ಒಂದು ನಿಮಿಷ!

ಪ್ರೊ. ವಿ. ಕೃ. ಗೋಕಾಕ ಅವರ
ಅದ್ಭುತರಮ್ಯ-ಶ್ರದೀರ್ಘ ಕಾವ್ಯಕೃತಿ

ನೀರದ

ಚಿತ್ತಾಕರ್ಷಕವಾಗಿ ಚಿತ್ರಮಯವಾಗಿ
ಪ್ರಕಟವಾಗಲಿದೆ.

ವಿವರಗಳಿಗೆ

ಪರಾಗ ಪ್ರಕಾಶನ, ಧಾರವಾಡ

ಇವರಿಗೆ ಬರೆಯುವದು.

ವಿಶ್ವಶಂಸ್ಥೆಯ ಪತ್ರ ಓದುವಾಗಲಂತೂ ಕಂಠ ಗದ್ಗದಿತವಾಗಿತ್ತು. 'ವಿಶ್ವಶಂಸ್ಥೆಯ ಆಶ್ರಯದಲ್ಲಿ ಸಾಂಸ್ಕೃತಿಕ ವಿಭಾಗದ ಪರವಾಗಿ ವಿಶ್ವದಿಸಲಾದ ಚಿತ್ರಕಲಾಸ್ಪರ್ಧೆಯಲ್ಲಿ ಭಾರತದ ಶ್ರೀ. ಚಂದ್ರರ ಚಿತ್ರಕ್ಕೆ ಪ್ರಥಮ ಬಹುಮಾನ ದೊರೆತಿದೆ ಎಂದು ಘೋಷಿಸಲು ಅನಂದಿಸುತ್ತೇವೆ ಶ್ರೀ. ಚಂದ್ರರು ಇನ್ನೂ ವಿದ್ಯಾರ್ಥಿ ದೆಶೆಯಲ್ಲಿರುವರೆಂಬುದನ್ನು ಗಮನಿಸಿದಾಗ ಇವರಿಗೆ ಅಪೂರ್ವ ಭವಿಷ್ಯ ಕಾದಿದೆ ಎಂಬುದನ್ನು ನಾವು ಮನಗಂಡೆವು. ಇಂಥ ಕಲಾವಿದನಿಗೆ ಭಾರತ ಸರಕಾರದವರು ಉದಾರವಾಗಿ ಸಹಾಯ ಮಲ್ಲಿಸುವದಾಗಿ ನಾವು ನಂಬುತ್ತೇನೆ. ಶ್ರೀ. ಚಂದ್ರನನ್ನು ಪಡೆದ ನಾಡು ಧನ್ಯ. ಶ್ರೀ. ಚಂದ್ರನಿಗೆ ದೀರ್ಘಾಯುರಾರೋಗ್ಯ ದೊರೆಯಲೆಂದು ನಾವು ಪ್ರಾರ್ಥಿಸುತ್ತೇವೆ!'

ಕಣ್ಣೀರಿನ ಕಾಲುವೆ ಅವಿರಳವಾಗಿ ಹರಿಯತೊಡಗಿತು. 'ದಾದಾ ಹೋಗಿ ಬರುತ್ತೇನೆ, ಅಯೀ ಹೋಗಿಬರುತ್ತೇನೆ....ಹೋಗಿ ಬಾ ಚಂದೂ —' ಎಂಬ ಬಿಳ್ಕೊಡುಗೆಯ ದೃಶ್ಯ ದಾದಾ ಸ್ಮರಿಸಿದರೆ, ಅಯಿ 'ಅಯುಷ್ಯಂತನಾಗಿರು ನನ್ನಪ್ಪಾ' ಎಂಬ ತಮ್ಮ ಆಶೀರ್ವಚನವನ್ನು ಸ್ಮರಿಸಿದರು. ಆದರೆ...'ಚಂದೂ, ಎಲ್ಲಿದ್ದಿ, ಚಂದೂ ನನ್ನ ಚಂದ್ರಾ' ಎಂಬ ಹಲುಬುವಿಕೆ ವಿನ, ಅವರಿಗೆ ಗತ್ಯಂತರವಿಲ್ಲ.

ಮಗ್ಗಲು ಮನೆಯಲ್ಲಿಯ ವಿದ್ಯಾರ್ಥಿಯೊಬ್ಬ ತನಗೆ ತೋಚಿದಂತೆ ಗುಣಗುಣಿಸುತ್ತಿದ್ದ.

"ಮಳೆಬಿಲ್ಲಿನಂತೆನ್ನ ಬಾಳು ಚೆಲುವಾವೀನು?"
"ಹೀನನಾಗಿಹ ಬಾಳು ಮುಗಿಗಳೆದ್ದರೇನು?"

ನಲಚಂಪೂ

(ಸಂಸ್ಕೃತಕಾವ್ಯದ ಪರಿಚಯ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ, ಎಂ. ಎ., ಬಿ. ಟಿ. ಧಾರವಾಡ

ಸಂಸ್ಕೃತದಲ್ಲಿ ಚಂಪೂಕಾವ್ಯವನ್ನು ಬರೆದು ಪ್ರಸಿದ್ಧರಾದವರು ಹೆಚ್ಚಾಗಿ ದಕ್ಷಿಣ ಭಾರತದವರೆ—ಅದರಲ್ಲಿಯೂ ಕರ್ನಾಟಕದವರೆ ಸಂಸ್ಕೃತ ಚಂಪೂಕಾವ್ಯಕರ್ತೃಗಳಲ್ಲಿ ಮೊದಲಿಗರಾದ ತ್ರಿವಿಕ್ರಮಭಟ್ಟನೂ ಕರ್ನಾಟಕದವನೇ ಎಂದು ತೋರುವುದು!

ಅಂತಃ ಕೇವಲಮುಲ್ಲಸಂತಿ ಪುನರ್ವಾಚಾಂ ಕು ಯೇ ಗೋಚರಾಃ ।
ಯೇಷಾಂ ನೋ ಧರಣಾದಯೋಽಪಿ ಕವಯಃ ಕರ್ತಾರಂ ವಿವೇಕಂ ಕ್ಷಮಾಃ ॥
ಲಜ್ಜಾ ಮಂಥರಯೋಃ ಪರಸ್ಪರ ಮಿಲದ್ ದೃಷ್ಟಿಪ್ರಪಾತೇ ತಯೋಃ ।
ತೇ ಸರ್ವೇ ಸಮುಪಾಲಮೇದ ಹೃದಯೇಷ್ವಾಸ್ಯಾವಿರಾಸನ್ ಗುಣಾಃ ॥

"ಗಾಢಾನುರಕ್ತ ಆ ಪ್ರಣಯಿಗಳು ಪ್ರಥಮ ಸಲ ಪರಸ್ಪರರನ್ನು ಅವಲೋಕಿಸಿದಾಗ, ಯಾವುವು ಕೇವಲ ಅಂತರಿಗದಲ್ಲಿ ಅರಳುತ್ತವೆ—ಹೊರಹು ಹೂತಿಗೆ ನಿಲುಕಲಾರವೊ, ಯಾವುದೆರ ಸೂಕ್ಷ್ಮ ಪರಿಶೀಲನೆ ಮಾಡುವುದು ಭರತ ಮೊದಲಾದ ಕವಿಗಳಿಗೂ ಸಾಧ್ಯವಿಲ್ಲವೊ, ಅಂತಹ ಯಾವುವೊ ರಸಗಳು ಅವರ ಹೃದಯದಲ್ಲಿ ಏಕಕಾಲಕ್ಕೆ ಉದಿತವಾದುವು." ಇದು ಮೇಲಿನ ಶ್ಲೋಕಾರ್ಥ.

ಆದರೆ ಎಷ್ಟೇ ಅನಿರ್ವಚನೀಯವಿದ್ದರೂ, ಕವಿಗಳು ಎಂದೂ ಕೈಚೆಲ್ಲಿ ಕುಳಿತಿಲ್ಲ. ಅನಾದಿಕಾಲದಿಂದಲೂ ಇದರ ಅವಿಷ್ಕಾರದಲ್ಲಿ ತೊಡಗಿದ್ದಾರೆ. ಈ ರಸಭಂಗದ ದೃಶ್ಯವೇ ಆದಿಕವಿಯು ಕರುಣೆಯನ್ನು ಕರಗಿಸಿ, ಜಗತ್ತಿಗೆ ದಿವ್ಯವಾದ ರಾಮಾಯಣವನ್ನು ಒದಗಿಸಿತು. ವಸಂತ ಕುಸುಮದಂತೆ—ತರಲ ಮನೋಹರವಾದ, ಗ್ರೀಷ್ಮ ಫಲದಂತೆ—ಪರಿಪಕ್ವವಧುರವಾದ ಈ ರಸದ ಅನ್ಯಾದೃಶ ಚೇತೋಹಾರಿ ಚಿತ್ರಣವೇ ಕಟ್ಟಿತು ಕಾಲಿದಾಸನಿಗೆ—ಕವಿ ಕುಲಗುರುಪಟ್ಟವನ್ನು. ಸಮಾಗಮದಲ್ಲಿ, ವಿಯೋಗದಲ್ಲಿ, ಪ್ರತೀಕ್ಷೆಯಲ್ಲಿ, ಪುನರ್ಮಿಲನದಲ್ಲಿ, ಪಟ್ಟಣದಲ್ಲಿ, ಬಳ್ಳಿಯಲ್ಲಿ, ರಾಜನುಂದಿರದಲ್ಲಿ, ಭಗ್ನಕುಟೀರದಲ್ಲಿ, ಸ್ವರ್ಗದ ಸೀಮೆಯಲ್ಲಿ, ಮೃತ್ಯುವಿನ ದವಡೆಯಲ್ಲಿ—ಹೀಗೆ ವಿವಿಧ ಅವಸ್ಥೆಯಲ್ಲಿ, ನಾನಾಪ್ರಕಾರದ ಸನ್ನಿವೇಶಗಳಲ್ಲಿ ಇದನ್ನು ಎಷ್ಟು ಆಸ್ವಾದಿಸಿದರೂ ತೃಪ್ತಿಯೆಂಬುದಿಲ್ಲ ಸಹೃದಯರಿಗೂ ಸಾಹಿತ್ಯಕರಿಗೂ ಗದ್ಯ, ಪದ್ಯ, ನಾಟಕ, ಚಂಪೂ, ಖಂಡಕಾವ್ಯ, ಮುಕ್ತಕಾವ್ಯ ಹೀಗೆ ಸಾಹಿತ್ಯದ ಸಮಸ್ತ ಅಂಗಗಳೂ ಇದರ ವಾಹಕವಾಗಿವೆ ಆದರೆ ಎಂದಿನಂತೆ ಇದು ಚಿರನೂತನವೂ ಚಿತ್ತಾಕರ್ಷಕವೂ ಆಗಿ ಉಳಿದಿದೆ. ಇಂತಿದೆ ಈ ಶೃಂಗಾರರಸದ ಮೋಹಕತೆ.

ಆರಂಭದಲ್ಲಿ ಉದಾಹೃತವಾದ ಶ್ಲೋಕವು ನಲ-ದಮಯಂತಿಯರ ಪ್ರಥಮ ಸಂದರ್ಶನವನ್ನು ಬಣ್ಣಿಸುತ್ತದೆ. ಇದು ನಲಚಂಪೂ ಎಂಬ ಕಾವ್ಯದಿಂದ ಉದ್ಧೃತವಾದದ್ದು. ನಾನೀಗ ಹೇಳುತ್ತಿರುವುದು ಈ ಗ್ರಂಥದ ವಿಷಯಕ್ಕೇ. ಇದರ ಕರ್ತೃವಾದ ತ್ರಿವಿಕ್ರಮಭಟ್ಟನು ಸಂಸ್ಕೃತ ಸಾಹಿತ್ಯದ ಚಂಪೂಕಾರರಲ್ಲಿ ತೀರ ಮೊದಲಿಗನೆಂದು ಸಾಮಾನ್ಯವಾಗಿ ನಂಬಲಾಗಿದೆ. ಇವನ ಕಾಲಕ್ಕಿಂತ ಮೊದಲಿನ ಯಾವ ಚಂಪೂಗ್ರಂಥವೂ ಇನ್ನೂ ಉಪಲಬ್ಧವಾಗಿಲ್ಲ. ಇವನು ತನ್ನ ಗ್ರಂಥದಲ್ಲಿ ಬಾಣನನ್ನು ನಿರ್ದೇಶಿಸಿರುವುದರಿಂದಲೂ, ಭೋಜನು ಇವನ ಒಂದು ಶ್ಲೋಕವನ್ನು 'ಸರಸ್ವತೀಕಂಠಾಭರಣ'ದಲ್ಲಿ ಉದಾಹರಿಸಿರುವುದರಿಂದಲೂ, ಇವನು ಬಾಣನಿಗಿಂತ ಈಚಿನವನೂ ಭೋಜನಿಗಿಂತ ಪ್ರಾಚೀನನೂ ಆಗಿದ್ದು, ಕ್ರಿ.ಶ. ೯ನೆಯ ಶತಮಾನದ ಉತ್ತರಾರ್ಧದವನಾಗಿರಬೇಕೆಂದು ತೋರುತ್ತದೆ.

ಇವನ ಬಗೆಗೆ ಒಂದು ಪ್ರಚಲಿತವಾದ ಕಥೆಯುಂಟು. ಇವನ ತಂದೆಯಾದ ದೇವಾದಿತ್ಯನು ಮಹಾಪಂಡಿತನಿದ್ದು, ಒಮ್ಮೆ ಕಾರ್ಯಾರ್ಥಿಯಾಗಿ ಗ್ರಾಮಾಂತರಕ್ಕೆ ತೆರಳಿದಾಗ, ಮತ್ತೊಬ್ಬ ಪಂಡಿತನು ರಾಜಸಭೆಗೆ ಬಂದು, ತನ್ನ ಸಂಗಡ ವಾದಿಸಲು ಯಾರನ್ನಾದರೂ ನಿಯಮಿಸಬೇಕೆಂದೂ, ಇಲ್ಲದಿದ್ದರೆ ಜಯಪತ್ರ ಕೊಡಬೇಕೆಂದೂ ಹಟ ಹಿಡಿದನಂತೆ. ದೇವಾದಿತ್ಯನು ಊರಲ್ಲಿ ಇಲ್ಲದಿರುವುದನ್ನು ತಿಳಿದು, ರಾಜನು ಅವನ ಮಗನನ್ನೇ ಕರೆಕಳುಹಿದನು ಜನ್ಮಾರಭ್ಯ ಶುಂಟನೂ, ಏಕೂ ಓದದವನೂ ಆದ ತ್ರಿವಿಕ್ರಮಭಟ್ಟನಿಗೆ ಪಶ್ಚಾತ್ತಾಪವಾಗಿ, ತನ್ನ ತಂದೆಯು ತಿರುಗಿ ಬರುವಮಟ್ಟಿಗಾದರೂ ತನ್ನಲ್ಲಿ ನೆಲಸಬೇಕೆಂದು, ಸರಸ್ವತಿಯನ್ನು ಪ್ರಾರ್ಥಿಸಿ, ಅವಳ ಅನುಗ್ರಹದಿಂದ ಬಂದ ಪಂಡಿತನನ್ನು ಗೆದ್ದನು. ಅಲ್ಲದೆ ತಂದೆ ಬರುವಷ್ಟರಲ್ಲಿ ತನ್ನ ಕೀರ್ತಿ ಉಳಿಯಲೆಂದು ಯಾವುದಾದರೊಂದು ಗ್ರಂಥ ರಚಿಸಬೇಕೆಂದು, ಈ ಚಂಪೂಗ್ರಂಥವನ್ನು ಕೈಕೊಂಡನು. ಇದರ ಏಳನೆಯ ಆಶ್ವಾಸ ಮುಗಿಯುವಷ್ಟರಲ್ಲಿ ದೇವಾದಿತ್ಯನು ಮರಳಿ ಬಂದನು ಗ್ರಂಥವು ಅಲ್ಲಿಗೇ ಅಸಮಾಪ್ತವಾಗಿ ಉಳಿದಿದೆ.

ಗ್ರಂಥಾರಂಭದಲ್ಲಿ, ತನ್ನ ತಂದೆಯ ಪಾಂಡಿತ್ಯವನ್ನು ಅತಿಶಯೋಕ್ತಿ ಹೊಗಳಿಕೆಯೂ, ವಿನಯದ್ಯೋತಕಕಕ್ಕಾಗಿ ಇರಬಹುದು—ತನ್ನನ್ನು

ಅಂಯಾಗಿ ಹೀಯಾಳಿಸಿಕೊಂಡುದೂ, ಈ ಕಥೆಗೆ ಚಾಲನೆಯನ್ನು ಕೊಟ್ಟರಬೇಕೇ ಹೊರತು, ಇದಕ್ಕೆ ಯಾವ ಐತಿಹಾಸಿಕ ಸತ್ಯವೂ ಇರಲಾರದು.

ಈ ಗ್ರಂಥಕ್ಕೆ ಚಂಡಪಾಲ, ಗುಣವಿನಯಗಣಿ, ಮತ್ತು ದಾಮೋದರಭಟ್ಟ ಎಂಬ ಮೂವರು ಟೀಕೆಗಳನ್ನು ಬರೆದಿದ್ದಾರೆ. ಇವುಗಳಲ್ಲಿ ಚಂಡಪಾಲನ " ವಿಷಯಪದಪ್ರಕಾಶ " ಎಂಬ ಟೀಕೆಯೇ ಪ್ರಸಿದ್ಧವಾಗಿದೆ.

ಈ ಕಾವ್ಯವು ಗದ್ಯಪದ್ಯಾತ್ಮಕ ಚಂಪೂಗ್ರಂಥವಾಗಿದ್ದು, ಶೈಲಿಯು ದೀರ್ಘಸಮಾಸ-ಶ್ಲೇಷ-ಕ್ಲಿಷ್ಟತೆಗಳಿಂದ ಕೂಡಿ, ಸುಬಂಧು-ಬಾಣರ ಕಾವ್ಯಶೈಲಿಯನ್ನು ಹೋಲುತ್ತದೆ. ಅದರೂ ಸರಸಪೂರ್ಣವಾಗಿದೆ.

ಮಂಗಲಾಚರಣದಲ್ಲಿ ಚಂದ್ರಮೌಳಿಯನ್ನು ಸ್ತುತಿಸುತ್ತ ಕಥೆಯಲ್ಲಿಯ ಮುಖ್ಯಪಾತ್ರಗಳ ನಿರ್ದೇಶ ಮಾಡುತ್ತಾನೆ. ಮತ್ತು ಕವಿಗಳ ಅಮೃತಬಿಂದುಸ್ಪಂದಿಯಾದ ವಾಗ್ವಿಲಾಸವನ್ನು ಹೊಗಳುತ್ತಾನೆ ಮುಂದಿನ ಶ್ಲೋಕದಲ್ಲಿ ಸಕಲ ಸಂಸಾರದ ಬಳ್ಳಿಗೆ ಬೇರಿನಂತಿರುವ ಕಂದರ್ಪನನ್ನೂ, ತರುಣಯೋಷಿಲ್ಲೋಚನವಿಲಾಸವನ್ನೂ ಹೊಗಳುತ್ತ ತನ್ನ ಕಾವ್ಯಕ್ಕೆ ಶೃಂಗಾರವೇ ಮುಖ್ಯರಸವೆಂದು ಸೂಚಿಸುತ್ತಾನೆ. ವ್ಯಾಸ-ವಾಲ್ಮೀಕಿ-ಬಾಣ-ಗುಣಾಢ್ಯರನ್ನು ವಂದಿಸಿ ಕುಕವಿಗಳನ್ನು ನಿಂದಿಸುತ್ತಾನೆ:

ಅಪ್ರಗಲ್ಭಾಃ ಪದನ್ಯಾಸೇ ಜನನೀರಾಗಹೇತವಃ।
ಸಂತ್ಯೇವೇ ಬಹುಲಾಲಾಪಾಃ ಕವಯೋ ಬಾಲಕಾ ಇವ ॥

" ಅಪ್ರಗಲ್ಭಾಃ ಪದನ್ಯಾಸೇ "— ಪದಪ್ರಯೋಗದಲ್ಲಿ ಅಪ್ರಬುದ್ಧರೂ " ಜನನೀರಾಗಹೇತವಃ " ಜನರಿಗೆ ವಿರಸವನ್ನುಂಟುಮಾಡುವವರೂ, " ಬಹುಲ-ಅಲಾಪಾಃ " ಬಹಳ ಅರ್ಥಶೂನ್ಯ ಮಾತನಾಡುವವರೂ " ಬಹುಲ-ಅಲಾಪಾಃ " ಬಹಳ ಅರ್ಥಶೂನ್ಯ ಮಾತನಾಡುವವರೂ ಆದ ಅನೇಕ ಕವಿಗಳೂ, " ಅಪ್ರಗಲ್ಭಾಃ ಪದನ್ಯಾಸೇ " ಶಬ್ದವ ಹೆಜ್ಜೆ ಹಾಕುವವರೂ, " ಜನನೀ-ರಾಗಹೇತವಃ " ತಾಯಿಗೆ ಸಿಟ್ಟು ಬರುವಂತೆ ವರ್ತಿಸುವವರೂ, " ಬಹು-ಲಾಲಾ-ಪಾಃ " ಬಹಳ ಜೊಲ್ಲುಬುರುಕರೂ ಆದ ಬಾಲಕರಂತೆ ಇರುತ್ತಾರೆ " ಎಂದು ಅಪ್ರಬುದ್ಧ ಕವಿಗಳನ್ನು ಶ್ಲೇಷಮೂಲಕವಾಗಿ ಬಾಲಕರಿಗೆ ಹೋಲಿಸುತ್ತಾನೆ.

ಸಮಗ್ರ ಗ್ರಂಥವೆಲ್ಲ ಈ ತರದ ಶ್ಲೇಷೋಕ್ತಿಗಳಿಂದ ಕೂಡಿದೆ. ನಲ-ಹರಿಶರ ನಡುವಿನ ಸಂವಾದವೂ, ಹಂಸ-ದಮಯಂತಿಯರ ಸಂಭಾಷಣೆಯೂ, ಶ್ಲೇಷದಲ್ಲಿ ನಡೆಯುವುದಲ್ಲದೆ ರಾಜದೂತ, ವನಪಾಲಿಕೆ, ಸಂನ್ಯಾಸಿ, ಬೇಡ, ಪ್ರವಾಸಿ, ತಾಪಸ, ಕೆಂಬಹುಸಾ, ಈ ಮುಂತಾದವಿನಲ್ಲಿ ಬರುವ ಎಲ್ಲ ಪಾತ್ರಗಳೂ ಶ್ಲೇಷೋಕ್ತಿಚತುರರೇ. ಈ ಚಮತ್ಕೃತಿಯು ಎಲ್ಲಲ್ಲಿ ಬಂದರೂ ಒಳಿತು; ಆದರೆ ಅತಿರೇಕವಾದರೆ ಬೇಸರು ಉಂಟಾಗುತ್ತದೆ. ಇದರ ಅರಿವು ಕವಿಗೂ ಇರಬೇಕು. ಏಕೆಂದರೆ:

ವಾಚಃ ಕಾಶ್ಚನ್ಯಮಾಯಾಂತಿ ಭಂಗಶ್ಲೇಷ ವಿಶೇಷತಃ।
ನೋದ್ವೇಗಸ್ತತ್ರ ಕರ್ತವ್ಯೋ ಯಸ್ಮಾನ್ನೈಕೋ ರಸಃ ಕವೇಃ ॥

ಭಂಗಶ್ಲೇಷಬಾಹುಲ್ಯದ ಮೂಲಕ ನನ್ನ ಗ್ರಂಥವನ್ನು ಅರ್ಥಮಾಡಿಕೊಳ್ಳಲು ಕಠಿಣವಾಗಬಹುದು. ಆದರೆ ಬೇಜಾರುಪಡಕಕ್ಕಿದ್ದಲ್ಲ. ಯಾಕೆಂದರೆ ಕವಿಗೆ ಒಂದೇ ರಸವಿರುವುದಿಲ್ಲ— ಎಂದು ತನ್ನ ಕಾವ್ಯಕ್ಲಿಷ್ಟತೆಯನ್ನು ತಾನೇ ಒಪ್ಪಿಕೊಂಡಿದ್ದಾನೆ.

ಉದಾತ್ತನಾಯಕೋಪೇತಾ ಗುಣವದ್ವೃತ್ತಮುಕ್ತಕಾ।
ಚಂಪೂಶ್ಚ ಹಾರವದ್ಭಿಶ್ಚ ಕೇನ ನ ಕ್ರಿಯತೇ ಹೃದಿ ॥

ಎಂದು ಶ್ಲೇಷದಿಂದ ಚಂಪೂಕಾವ್ಯವನ್ನು ಮುತ್ತಿನ ಹಾರಕ್ಕೆ ಹೋಲಿಸಿ ಅದನ್ನು ಯಾರು ಹೃದಯದಲ್ಲಿ ಧಾರಣಮಾಡಲಿಕ್ಕಿಲ್ಲ ?— ಎಂದು ಕೇಳುತ್ತಾನೆ. ಮುಂದೆ ಕಥೆ ಪ್ರಾರಂಭವಾಗುತ್ತದೆ :

ಅಸ್ತಿ ಸಮಸ್ತವಿಶ್ವಂಭರಾಭೋಗಭಾಸ್ವಲ್ಲಲಾಮ ಲೀಲಾಯಮಾನಃ, ಸಮಾನಃ ಸೇವ್ಯತಯಾ ಸ್ವರ್ಗಲೋಕಸ್ಯ.... .....ಧಾಮ ಧರ್ಮಸ್ಯ, ಅಸ್ಪದಂ ಸಂಪದಾಂ, ಆಶ್ರಯಃ ಶ್ರೀಯಶಾಂ, ಆಕರಃ ಸಾಧುವ್ಯವಹಾರ ರತ್ನಾನಾಂ, ಆಚಾರ್ಯಭವನಂ ಆರ್ಯಮಯಾದೋಷದೇಶಾನಾಂ, ...ಆರ್ಯಾವರ್ತೋ ನಾಮ ದೇಶಃ।

ಇದು ಇವನ ಗದ್ಯಶೈಲಿಯ ಮಾದರಿಯು. ಇದರಲ್ಲಿಯ ಓಘ, ಓಜಸ್ಸು, ತಾಲಬದ್ಧತೆ, ಪದಲಾಲಿತ್ಯ ಇವು ಯಾರ ಶ್ರುತಿಗೋಚರವಾಗಲಿಕ್ಕಿಲ್ಲ ?

ಈ ಆರ್ಯಾವರ್ತದಲ್ಲಿ ನಿಷಧ ಎಂಬ ಜನಪದ ಉಂಟು. ಅಲ್ಲಿ ನಲ ಎಂಬ ಅರಸು ರಾಜ್ಯವಾಳುತ್ತಿದ್ದನು. ಅವನಿಗೆ ಅನುರೂಪನಾದ ಶಕ್ತಿಶೀಲ ಎಂಬ ಮಹಾಮಂತ್ರಿ ಇದ್ದನು. ಅವನ ಮೇಲೆ ಸಕಲ ರಾಜ್ಯಭಾರವನ್ನು ಅರ್ಪಿಸಿ, ಸ್ವಯಂ ಯೌವನಾರಂಭರಮಣೀಯ ವಯಸ್ಸಿನಲ್ಲಿದ್ದ ಮೂಲಕ ನಲನು ಸಕಲ ಸಂಸಾರಸುಖವನ್ನು ಅನುಭವಿಸಲು ಉದ್ಯುಕ್ತನಾದನು.

ಒಮ್ಮೆ ಅಶ್ವಾರೋಹಣದಲ್ಲಿ, ಒಮ್ಮೆ ಪರ್ವತಪ್ರದೇಶಸ್ಯಂದನದಲ್ಲಿ, ಒಮ್ಮೆ ಸರೋವರಸ್ನಾನದಲ್ಲಿ, ಮತ್ತೊಮ್ಮೆ ಕಾಂತಾಜನವಿಲಾಸದಲ್ಲಿ, ಒಮ್ಮೆ ಬೇಟೆಯಲ್ಲಿ, ಮಗುದೊಮ್ಮೆ ಪಗಡೆಯಲ್ಲಿ, ಒಮ್ಮೆ ದಾನವಿತರಣದಲ್ಲಿ, ಮತ್ತೊಮ್ಮೆ ಪಂಡಿತರ ಸಹವಾಸದಲ್ಲಿ ಹೀಗೆ ಆ ರಾಜನು ವೇಳೆ ಕಳೆಯುತ್ತಿದ್ದನು.

ಹೀಗಿರುವಾಗ ನುಳೆಗಾಲವು ಪ್ರಾಪ್ತವಾಗುತ್ತದೆ. ರಾಜನು ಬೇಟೆಯಾಡಲು ಹೊರಡುತ್ತಾನೆ (ಇಲ್ಲಿ ಸುದೀರ್ಘವಾದ ಮೃಗಯಾವರ್ಣನೆ ಬಂದಿದೆ). ಬೇಟೆಯ ಶ್ರಮವನ್ನು ಪರಿಹರಿಸಿಕೊಳ್ಳಲು ಒಂದು ವಿಶಾಲ ಅಲದ ಮರದ ಕೆಳಗೆ ಅರಸನು ವಿಶ್ರಮಿಸಿದಾಗ, ಒಬ್ಬ ಪ್ರವಾಸಿಯು ಅಲ್ಲಿಗೆ ಬರುವನು. ' ಏನು ವರ್ತಮಾನ ? ' ಎಂದು ಕೇಳಲಾಗಿ, ಅವನು ದಕ್ಷಿಣಾಪಥವನ್ನೂ, ಆ ನಾಡಿನ ಸಂಪತ್ತು, ಪುರುಷರ ಔದಾರ್ಯ, ಸ್ತ್ರೀಯರ ಸೌಂದರ್ಯ ಮೊದಲಾದುವನ್ನೂ

ಬಹು ವಿಧವಾಗಿ ವರ್ಣಿಸುತ್ತಾನೆ. ಈ ವರ್ಣನೆಯೂ, ಪಂಪರನ್ನ-ಮೊದಲಾದವರ ಕಾವ್ಯಗಳಲ್ಲಿ ಬರುವ ಕನ್ನಡನಾಡಿನ ವರ್ಣನೆಯೂ, ಒಂದಕ್ಕೊಂದು ಸಂವಾದಿಯಾಗಿವೆ. 'ಕರ್ನಾಟಕವು ಆಗ ಗೋದಾವರಿಯ ವರೆಗೆ ಹಬ್ಬಿತ್ತು' ಎಂಬ ನೃಪತುಂಗನ ಉಕ್ತಿಯನ್ನು ತ್ರಿವಿಕ್ರಮಭಟ್ಟನೂ ಪುಷ್ಟೀಕರಿಸಿದಂತಿದೆ. ದಮಯಂತಿಯ ತಂದೆಯನ್ನು ವಿದರ್ಭದ ಎಂಬಂತೆ, ಈಗಿನ ವರ್ಹಾಡದ ಅಧಿಪತಿಯನ್ನು ಕರ್ನಾಟಕದ ಅರಸು ಎಂದು ಕರೆಯಲಾದ ಈ ಶ್ಲೋಕವನ್ನು ಕೇಳಿರಿ :

ದೇವೋ ದಕ್ಷಿಣ ದಿಙ್ಮುಖಸ್ಯ ತಿಲಕಃ ಕರ್ನಾಟಕಾಂತಾ
ಕುಚ ।
ಕ್ರೀಡಾಶೈಲಮೃಗಃ ಪ್ರಕಾಶಕದಲೀ ಕಾಂಡಃ ಸ ಕೆಂ
ವರ್ಣ್ಯತೇ ॥

ಈ ನಾಡಿನ ಸೊಬಗು ಎಂಥದು, ಇಲ್ಲಿ ವಾಸಿಸುವ ಜನರು ಯಾವ ಸ್ವಭಾವದವರು, ಎಂಬುದನ್ನು ಈ ಮುಂದಿನ ಶ್ಲೋಕದಲ್ಲಿ ಹೇಳುತ್ತಾನೆ :

ಅಸ್ತಿ ಸ್ವರ್ಗಸಮಃ ಸಮಸ್ತ ಜಗತಾಂ ಸೌಖ್ಯೈಕ ಸೇವ್ಯತ್ವ
ಸಂಪ್ರಾಗ್ರೇಣೀಃ ।
ದೇಶೋ ದಕ್ಷಿಣ ದಿಙ್ಮುಖಸ್ಯ ತಿಲಕಃಸ್ತ್ರೀಣಾಂಚ
ರತ್ನಾಕರಃ ॥
ಯಸ್ಮಿಂಸ್ತ್ಯಾಗ ಮಹೋತ್ಸವವ್ಯಸನಿಭಿರ್ಧನ್ಯೈರಶೂನ್ಯಾ
ಜನೈಃ ।
ಉದ್ದೇಶಾಃ ಸ್ಪೃಹಣೀಯ ಭಾವ ಭರಿತಾಃ ಕಂ ನೋತ್ಸುಕಂ
ಕುರ್ವತೇ ॥

"ಸೌಭಾಗ್ಯದೃಷ್ಟಿಯಿಂದ ಸಮಸ್ತ ಜಗತ್ತಿಗೂ ಅಗ್ರೇಸರವಾದ, ಮಾನವಶ್ರೇಷ್ಠರಿಗೆಗಳಿಗೆ ಕಣಿಯಂತಿದ್ದ, ಸ್ವರ್ಗಸಮಾನವಾದ ದಕ್ಷಿಣಾಪಥವಿರುವುದು. ಅಲ್ಲಿ ತ್ಯಾಗವೇ ಮಹೋತ್ಸವವೆಂದು ತಿಳಿದು, ಅದರಲ್ಲಿ ಆಸಕ್ತರಾದ ಜನರು ಸಮೃದ್ಧಿಯಾಗಿ ವಾಸಿಸಿದ್ದಾರೆ. ಇಂತಹ ಸ್ಪೃಹಣೀಯಭಾವಭರಿತವಾದ ದೇಶವನ್ನು ನೋಡಬೇಕೆಂದು ಯಾರು ತಾನೆ ಉತ್ಸುಕರಾಗಲಿಕ್ಕಿಲ್ಲ ? "

ಇಲ್ಲಿಯ ಸ್ತ್ರೀಯರ ಸೌಂದರ್ಯವನ್ನು ಎಷ್ಟು ಹೃದಯಂಗಮವಾಗಿ ವರ್ಣಿಸಿದ್ದಾನೆ ಕೇಳಿರಿ :

ಅಸ್ತು ಸ್ವಸ್ತಿ ಸಮಸ್ತರತ್ನನಿಧಯೇ ಶ್ರೀದಕ್ಷಿಣಸ್ಯೈ ದಿಶೇ ।
ಸ್ವರ್ಗಸ್ಪರ್ಧಿ ಸಮೃದ್ಧಯೇ ಹೃದಯಹೃದ್ ಗೋದಾವರೀ ದೋಧಸೆ ॥
ಯತ್ರ ತ್ರಸ್ತಕುರಂಗಕಾರ್ಭಕ ದೃಶಃ ಸಮ್ಮೋದ ಲೀಲಾ
ಭುವಃ ।
ಸೌಖ್ಯಸ್ಯಾಯತನಂ ಭವಂತಿ ತನಿತಾಃ ಕಂದರ್ಪ
ಶಸ್ತ್ರಂ ಸ್ತ್ರಿಯಃ ॥

ಸಮಸ್ತ ರತ್ನಗಳಿಗೆ ನಿಧಿಯಾದ, ಸಮೃದ್ಧಿಯಲ್ಲಿ ಸ್ವರ್ಗದೊಂದಿಗೆ ಸ್ಪರ್ಧಿಸುವ ದಕ್ಷಿಣ ದಿಕ್ಕಿಗೆ, ಅದರಲ್ಲಿಯೂ ಹೃದಯ ಹಾರಿ ಗೋದಾವರೀ ತೀರಕ್ಕೆ ನಮಸ್ಕಾರವಿರಲಿ. ಅಲ್ಲಿ ಅನಂಗನ ಅಸ್ತ್ರದಂತಿದ್ದ, ಸಮ್ಮೋದಲೀಲಾಭುವನೆಂದಾ, ರಸಿಕರಾದ ಚಿಗರೆಗಣ್ಣಿನ ಚಲುವೆಯರು ಎಲ್ಲ ಸುಖದ ಆಗರವಾಗಿದ್ದಾರೆ. "

ಇಷ್ಟು ಆತ್ಮೀಯ ಭಾವವನ್ನು ವ್ಯಕ್ತಪಡಿಸಿರುವುದರಿಂದ, ಈ ಕವಿಯು ದಾಕ್ಷಿಣಾತ್ಯನೂ, ಅದರಲ್ಲಿಯೂ ಕನ್ನಡಿಗನೂ ಆಗಿರಬೇಕೆಂದು ಬಲವಾದ ಸಂಶಯ ಬರುತ್ತದೆ. ಈ ಉದಾಹೃತ ಶ್ಲೋಕಗಳು ತ್ರಿವಿಕ್ರಮಭಟ್ಟನ ಪದ್ಯಶೈಲಿಯ ನಿದರ್ಶನಗಳು. ಶ್ಲೇಷ-ದೀರ್ಘಸಮಾಸಗಳಿಂದ ಇವನ ಗದ್ಯವು ಗಡುಚಾಗಿದ್ದರೆ, ಪದ್ಯಗಳು ಮಾತ್ರ ಅರ್ಥವ್ಯಕ್ತಿ, ಪ್ರಸಾದ, ಸಮತಾ-ಮಾಧುರ್ಯ, ಸೌಕುಮಾರ್ಯಾದಿ ಗುಣಗಳಿಂದ, ಮನೋಹರವಾಗಿವೆ. ಅಂತೆಯೇ ಪ್ರಾಚೀನ ಪದ್ಯಸಂಗ್ರಹಕಾರರು ಈ ಕಾವ್ಯದಿಂದ ಅನೇಕ ಶ್ಲೋಕಗಳನ್ನು ತಮ್ಮ ಗ್ರಂಥಗಳಲ್ಲಿ ಸೇರ್ಪಡಿಸಿಕೊಂಡುದು ಆಶ್ಚರ್ಯಕರವಲ್ಲ.

ನಿರ್ದಿಷ್ಟ, ಅಲ್ಪಾವಧಿಯಲ್ಲಿ ಸಮಗ್ರಗ್ರಂಥದ ಸಿಂಹಾವಲೋಕನ ಮಾಡುವುದು ಸಾಧ್ಯವಿಲ್ಲದ್ದರಿಂದ, ಸ್ವಲ್ಪದರಲ್ಲಿ ಸ್ವರೂಪದರ್ಶನ ಮಾಡಲಾಗಿದೆ. ಕಥೆಯು ಬಹುಮಟ್ಟಿಗೆ ಮಹಾಭಾರತದಲ್ಲಿಯ ಮೂಲವನ್ನೇ ಅನುಸರಿಸಿದೆ. ಅದು ಸಾಮಾನ್ಯವಾಗಿ ಸರ್ವರಿಗೂ ವಿದಿತವಿರುವುದರಿಂದ, ಇಲ್ಲಿ ಪುನರುಕ್ತಿಗೊಳಿಸುವುದು ಅನಾವಶ್ಯಕ.

ವಸ್ತುರಚನೆಯಲ್ಲಾಗಲೀ, ಪಾತ್ರಪರಿಪೋಷಣೆಯಲ್ಲಾಗಲೀ, ತ್ರಿವಿಕ್ರಮಭಟ್ಟನು ಯಾವ ನಾವೀನ್ಯವನ್ನೂ ಚಮತ್ಕಾರವನ್ನೂ ತೋರಿಸಿಲ್ಲ. ಸುಬಂಧು-ಬಾಣರನ್ನು ಬುದ್ಧಿಪುರಸ್ಸರವಾಗಿ ಅನುಕರಿಸಲು ಹೊರಟು ಇವನು, ಹೆಚ್ಚಾಗಿ ಅವರ ದೋಷಗಳನ್ನೇ ಅನುಕರಿಸಿದ್ದಾನೆ ಎಂಟುನೂರು ಸಣ್ಣ ಶ್ಲೋಕಗಳನ್ನು ವಿಸ್ತೃತ, ನಿರಾಭರಣಶೈಲಿಯಲ್ಲಿ ಹೇಳಲಾದ ಮಹಾಭಾರತದ ನಲೋಪಾಖ್ಯಾನವು ಜಗತ್ತಿನ ವಾಙ್ಮಯದಲ್ಲಿಯೇ ಅತ್ಯಂತ ಹೃದಯಸ್ಪರ್ಶಿ ಕಥೆಗಳಲ್ಲಿ ಒಂದಾಗಿದೆ. ಸರೋವ್ಯದಲ್ಲಿ ಪರಸ್ಪರ ರೂಪ-ಯೌವನ ವೃತ್ತಾಂತವನ್ನು ಕೇಳಿ ಪ್ರವೃದ್ಧಾನುರಾಗರಾದ ಪ್ರಣಯಿಗಳು ಒಬ್ಬರನ್ನೊಬ್ಬರು ಕಾಣುತ್ತಾರೆ. ಇಷ್ಟಕ್ಕೇ ವಿಶ್ರಾಂತವಾಗುವ ಒಂದು ಚಿಕ್ಕಘಟನೆಯ ಸುತ್ತ ವಿಠಾವಮವರಿಯದ ವರ್ಣನೆಯ ಮಹಾರಣ್ಯವೇ ಬೆಳೆದು ನಿಂತಿದೆ ಮುಗಿಲಮುಟ್ಟುವ ಮರಗಳ ತುದಿಯು ಕಾಣದಂತೆ, ಎರಡು ಮೂರು ಪುಟಗಳನ್ನು ಶ್ರಮಪೂರ್ವಕ ಓದಿದರೂ, ವಾಕ್ಯ ಮುಗಿದೀತೆಂಬ ಭರವಸೆ ಇಲ್ಲ. ದೀರ್ಘಸಮಾಸದ ಘಟಸರ್ಪಗಳು ಹೆಜ್ಜೆ-ಹೆಜ್ಜೆಗೆ ಕಾದು ನಿಂತಿವೆ. ಶ್ಲೇಷದ ಯಕ್ಷಪ್ರಶ್ನೆಗಳನ್ನು, ತಲೆತುರಿಸಿ ಬಿಡಿಸಿದರೂ, ರಸದ ಒರತೆ ದೊರೆತೀತೆಂಬ ನಿಯಮವಿಲ್ಲ. ಕಾದಂಬರಿಯ ಜಲವು ಮೃಗಜಲವೇ ! ಬಾಣಕಾದಂಬರಿಯಲ್ಲಿ ಚಿತ್ರಿತವಾದ ಪ್ರಣಯಕಥೆಯು ವಿಚಿತ್ರ, ಲೋಕಾತೀತ, ಸ್ವಪ್ನಸದೃಶ ಎಂದು

ಎನಿಸಿದಾಗ್ಯೂ, ಮಾನವಪ್ರೇಮದ ಅಳವನ್ನೂ, ಸೌಕುಮಾರ್ಯವನ್ನೂ ರೂಪಿಸಲೆಳಸಿದ ಆ ಕವಿಯ ಕೌಶಲವು ಅನ್ಯಾದೃಶವಾಗಿದೆ. ದುಃಖ ಮರಣಗಳನ್ನು ದಾಟಿಸಿಂಕ ಅನುಗತ ಆಶಾಬಂಧದಿಂದ ನಿಶ್ಚಲ ಶ್ರದ್ಧೆಯಿಂದ, ಮಣಿಯದ ಮನೋದಾರ್ಢ್ಯದಿಂದ ಅದರ್ಶ ಶೃಂಗವನ್ನೇರಿದ ತಪಃಪ್ರಭೃತಿ ಆ ಪ್ರೇಮಕ್ಕೆ ಒಂದು ಮಾರ್ಮಿಕತೆ, ಮನೋವೇಧಕತೆ, ಮಾನ್ಯತೆ ಪ್ರಾಪ್ತವಾಗಿವೆ. ಅಂಥ ಅಲೌಕಿಕ ಪ್ರೀತಿಗೆ ಆ ಅಸಾಮಾನ್ಯಶೈಲಿ ಅನುರೂಪವಾಗಿರಬಹುದು; ಆದರೆ ಇಲ್ಲಿ ಚಿತ್ರಿತವಾದ ಪ್ರೇಮವು ತೀರ ಸಾದಾ ಪ್ರೇಮವು. ಸಾದ ಪ್ರೇಮವೆಂದರೂ ನಡೆಯಬಹುದು. (it is a tame affair.) ಇದಕ್ಕೆ ಇಂಥ ಅತಿರಂಜಿತ ಶೈಲಿಯು ಎಂದೂ ಅನುಗುಣವಾಗದು.

ಒಬ್ಬ ತರಲ ಸಾಹಸ ಹಾಗೂ ಗಂಧರ್ವಕನ್ನಿಕೆಯ ಸರಲ ಪ್ರೇಮದ ವಿರುದ್ಧ ಅಲ್ಲಿ ವಿಶ್ವದ ಕಲ್ಯಾಣಶಕ್ತಿಗಳೇ ಶಸ್ತ್ರಧಾರಣ ಮಾಡಿವೆ. "ಅಹೋಽನ್ಯಾಯಮಹೋಽನ್ಯಾಯಮ್" ಎಂದು ಧರ್ಮವು ಕವಿಯ ಮೇಲೆ ಕೈಯಿಟ್ಟುಕೊಂಡರೆ, "ಆ" ಎಂದು ಮರಣವು ಬಾಯ್ತೆರೆದಿದೆ. ನಿರ್ಜನ ಹಿಮವಿಸ್ತಾರದ ನಿಶ್ಶಬ್ದ ಶಿಶಿರ ಕಾಂತಾರದಲ್ಲಿ ವಿಲಾಸಲೋಕದ ವಿಲಾಸಪ್ರಿಯ ರಾಜಕನ್ನಿಕೆಯು ಕೈಕೊಂಡ ಅಜನ್ಮ ಏಕಾಂತವಾಸವೂ, ದಂಡಕಾರಣ್ಯದಲ್ಲಿ ಅಂಡಲೆಯುವ ಚಂಡಾಲರ ಕೈಗೆ ಸಿಲುಕಿ ಬನ್ನಬಡುತ್ತಿರುವ ಬ್ರಹ್ಮನವಿಹಾರಿಗೆ ಒದಗಿದ ಪಂಜರಬದ್ಧ ಪಕ್ಷಿಜೀವನದ ಪಾರವಶ್ಯವೂ ಆ ಪ್ರೇಮದ ಸತ್ತ್ವವನ್ನು ಪರೀಕ್ಷಿಸಿವೆ. ಅದರೆ ಮಾನಸ ಸರಸ್ತೀರದ ಶಿವಾಲಯವನ್ನು ಪಂಪಾಸರಸ್ತಟಾಕದ ತಮಾಲ ತರುಕೋಟರದೊಂದಿಗೆ ಬಂಧಿಸಿದ ರೇಶಿಮೆಗಿಂತ ಮೃದುವಾದ, ಜೇಡಜಾಲದ ಎಳೆಗಿಂತ ಸೂಕ್ಷ್ಮವಾದ ಒಂದು ಆಶಾತಂತುವನ್ನು, ವಿಶ್ವಶಕ್ತಿಗಳ ಆಟೋಪವೇ ಹರಿದೊಗೆಯಲು ಸಮರ್ಥವಾಗಿಲ್ಲ ಈ ಚಂಪೂಕಾವ್ಯದ ನಾಯಕ-ನಾಯಿಕೆಯರ ಪ್ರಣಯಕಥೆಯು ಹಾಗಿಲ್ಲ. ಪಥಿಕ, ಪಕ್ಷಿ, ಪಾಂಥ, ಚಂಡಪಾಣಿ, ನಭೋವಾಣಿ–ಹೀಗೆ ಎಲ್ಲರೂ ಎಲ್ಲವೂ ಇವರ ಪ್ರಣಯವನ್ನು ಪುರಸ್ಕರಿಸುವವರೇ. ಆದರೂ ಇವರು ಹೆಜ್ಜೆಹೆಜ್ಜೆಗೆ "ಹಾಯ್ ಹಾಯ್", ಎಂದು ಉಸುರ್ಗರೆಯುವುದನ್ನು ಬಿಟ್ಟಿಲ್ಲ. ವೀರರಸದಂತೆ ಶೃಂಗಾರದಲ್ಲಿಯೂ ಕೂಡ ಧೈರ್ಯ, ಸ್ಥೈರ್ಯ, ಸಾಹಸಗಳು ಸಹೃದಯರ ಮನವನ್ನು ಸೂರೆಗೊಳ್ಳುತ್ತವೆ ವಿನಾ, ಎಷ್ಟೇ ಮಧುರವಿದ್ದರೂ ರೋಚನವಲ್ಲ. ಅದೆಲ್ಲವನ್ನು ಬಿಟ್ಟು ಅವರ ಅಂತಸ್ಸು, ವೈಭವ ವಿಲಾಸಗಳನ್ನು ಅತ್ಯುಕ್ತಿಪೂರ್ವಕವಾಗಿ ವರ್ಣಿಸಿದರೆ, ಅದು ಲಗ್ನ-ಸಮಾರಂಭದಲ್ಲಿಯು ಭೂಮದ ಪಾಡಾಗಬಹುದೇ ಹೊರತು ರಸನಿಷ್ಪಂದಿ, ಸಹೃದಯಾನಂದಿ ಕಾವ್ಯವಾಗಲಾರದು.

ಕಾದಂಬರಿಯಲ್ಲಿಯು ನಾಯಕ-ನಾಯಿಕೆಯರು ಪ್ರಣಯಯೋಗಿಗಳಾಗದ್ದರೆ, ಇಲ್ಲಿಯವರು ಪ್ರಣಯರೋಗಿಗಳು. ದೇವತೆಗಳು ಪ್ರಣಯಯಾಚನೆಗಾಗಿ ನಲ, ನಿಡೆಗೆ ಬಂದಾಗ, ಅವನ ಮನೋದ್ವಂದ್ವವನ್ನು ಮಾರ್ಮಿಕವಾಗಿ ಚಿತ್ರಿಸಬಹುದಾಗಿತ್ತು; ಆದರೆ ಬಾಹ್ಯಸೃಷ್ಟಿಯ ರಾಗರಂಗಗಳಿಗೆ, ತಾನವಿತಾನಗಳ ಬಗೆಗೆ ತ್ರಿವಿಕ್ರಮನ ಕಣ್ಣು ಕವಿಗಳು ಹರಿತವಿದ್ದಂತೆ, ಮಾನವನ ಅಂತರಂಗದ ಪದರು-ಪದರುಗಳ ಮೇಲೆ, ಭಾವಸಪ್ತಕದ ಅನಂತ ಮೂರ್ಛನೆಯ ಮೇಲೆ ಅವನ ಹಿಡಿತವಿದ್ದಂತೆ ತೋರುವುದಿಲ್ಲ. 'ಕಾವ್ಯಸ್ಯಾತ್ಮಾ ರಸಃ" ಎಂಬುದನ್ನು ಮರೆತು, ಕೇವಲ ಅಲಂಕಾರಗಳಿಗೆ, ಉಕ್ತಿವೈಚಿತ್ರ್ಯಕ್ಕೆ ವಾಗಾಡಂಬರಕ್ಕೆ ಮಾರುಹೋಗುವುದರಿಂದ ಯಾವ ಪ್ರಮಾದವಾಗುತ್ತದೆ—ಎಂಬುದಕ್ಕೆ ಈ ಕಾವ್ಯವೊಂದು ನಿದರ್ಶನವಾಗಿದೆ.

ಆದರೂ ನಿರೀಕ್ಷಣಾಶಕ್ತಿಯೂ, ಚಿತ್ರವತ್ತಾಗಿ ವರ್ಣಿಸುವ ಸಾನುಭ್ಯವೂ, ನಿಸರ್ಗಪ್ರೇಮವೂ, ಕಲ್ಪನಾಬಾಹುಲ್ಯವೂ, ಶಬ್ದ ಸಂಪತ್ತೂ ಇವು ಇವನ ಉತ್ಕೃಷ್ಟಗುಣಗಳೆಂಬುದು ನಿರ್ವಿವಾದವು. ಪ್ರಮಾಣಪರಿಜ್ಞಾನವೊಂದಿದ್ದರೆ ಇವನು ಉತ್ತಮ ಕವಿಯಾಗುತ್ತಿದ್ದುದರಲ್ಲಿ ಯಾವ ಸಂದೇಹವೂ ಇಲ್ಲ. ಕಾವ್ಯವು ಹೇಗಿರಬೇಕೆಂಬುದಕ್ಕೆ ತ್ರಿವಿಕ್ರಮನೇ ಒಂದು ಅಳತೆಗೋಲನ್ನು ಸೂಚಿಸಿದ್ದಾನೆ.

ಕಿಂ ಕವೇಸ್ತೇನ ಕಾವ್ಯೇನ ಕಿಂ ಕಾಂಡೇನ ಧನುಷ್ಮತಃ।
ಪರಸ್ಯ ಹೃದಯಂ ಲಗ್ನಂ ನ ಘೂರ್ಣಯತಿ ಯಚ್ಛಿರಃ ॥

"ಹೃದಯದಲ್ಲಿ ನೆಟ್ಟು ತಲೆಯನ್ನು ತೂಗಿಸದ ಕವಿಯ ಕಾವ್ಯದಿಂದಾಗಲಿ, ಧನುರ್ಧಾರಿಯ ಬಾಣದಿಂದಾಗಲಿ ಏನು ಪ್ರಯೋಜನ?" ಎಂದು ಕೇಳುತ್ತಾನೆ. ಈ ಒರೆಗಲ್ಲಿಗೆ ಇವನ ಕಾವ್ಯವು ಇಡಿಯಾಗಿ ಇಳಿಯ ಲಿಕ್ಕಿಲ್ಲ. ಆದರೆ ಬಿಡಿಯಾಗಿ ಅಲ್ಲಲ್ಲಿ ಬರುವ ಸುಲಲಿತ ಪದ್ಯಗಳು ರವ್ಯ ಗದ್ಯದ ಹೃದಯಗಹ್ವರದಲ್ಲಿ ಪ್ರತಿಧ್ವನಿಸುತ್ತವೆ. ಕವಿಯಲ್ಲಿ ಗಂಭೀರ್ಯವಿದ್ದುದಕ್ಕೆ ಇವೆ ಎಂದು ನಿಶ್ಚಯವಾಗಿ ಹೇಳಬಹುದು.

ಭಾರತದ ವಸ್ತುಸಂಗ್ರಹಾಲಯಗಳು

ಶ್ರೀ. ಎ. ಎಂ. ಅಣ್ಣಿಗೇರಿ, ಎಂ. ಎ. ಕನ್ನಡ ರಿಸರ್ಚ್ ಇನ್ಸ್ಟಿಟ್ಯೂಟ್, ಧಾರವಾಡ

ವಸ್ತುಸಂಗ್ರಹಾಲಯಗಳ ಬಾಹುಲ್ಯವು ರಾಷ್ಟ್ರದ ಸಂಸ್ಕೃತಿಯ ಅಭ್ಯಾಸ-ಅಭಿವೃದ್ಧಿಗಳಿಗೆ ಸಾಧನವಾಗಿದೆ. ಒಬ್ಬ ಸಾಮಾನ್ಯ ಮನುಷ್ಯನೂ ಒಂದು ಸಲ ವಸ್ತುಸಂಗ್ರಹಾಲಯದಲ್ಲಿ ಹೊಕ್ಕು ಹೊರಬಿದ್ದನೆಂದರೆ, ಅವನಿಗೆ ಎಷ್ಟೋ ಹೊಸವಿಷಯಗಳ ಪರಿಚಯವಾಗಿರುವುದು.

ಭಾರತದಲ್ಲಿ ಇತ್ತೀಚೆಗೆ ವಸ್ತುಸಂಗ್ರಹಾಲಯಗಳು ಹುಟ್ಟುತ್ತಿರುವುದು ಸಂತೋಷದ ವಿಷಯ. ಅವುಗಳ ಉಪಯುಕ್ತತೆ ಈಗ ಜನರಿಗೆ ವಿಶೇಷವಾಗಿ ಕಾಣಬರುತ್ತಿದೆ. ಮುಂದುವರಿದ ಎಲ್ಲ ರಾಷ್ಟ್ರಗಳೂ ದೊಡ್ಡ ದೊಡ್ಡ ವಸ್ತುಸಂಗ್ರಹಾಲಯಗಳನ್ನು ನಿರ್ಮಿಸಿ, ಲಕ್ಷಾಂತರ, ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡಿ, ಅವುಗಳನ್ನು ಹೆಚ್ಚು ಆಕರ್ಷಕ ಮತ್ತು ಉಪಯುಕ್ತವಾಗುವಂತೆ ಮಾಡುತ್ತಿರುವುವು.

೧೯೩೮ರ ಸುಮಾರಿಗೆ ಭಾರತದಲ್ಲಿ ಕೇವಲ ೧೦೫ ಸಾರ್ವಜನಿಕ ವಸ್ತುಸಂಗ್ರಹಾಲಯಗಳಿದ್ದುವೆಂದು, ಮಾರ್ಟಿಮರ್ ವ್ಹೀಲರ್ ಮತ್ತು ಹಾರ್ಗ್ರೀವ್ಜ್ ಅವರು ಬರೆದ 'ಭಾರತದ ವಸ್ತುಸಂಗ್ರಹಾಲಯಗಳು' ಎಂಬ ವರದಿಯಿಂದ ತಿಳಿದುಬರುತ್ತದೆ. ೩೫ ಕೋಟಿ ಜನರಿರುವ ವಿಶಾಲವಾದ ಭಾರತದೇಶದಲ್ಲಿ ೧೦೫ ವಸ್ತುಸಂಗ್ರಹಾಲಯಗಳ ಸಾಕಷ್ಟು ಲಾಭ ದೊರೆಯುತ್ತಿದ್ದಿಲ್ಲವೆಂಬ ಮಾತು ನಿರ್ವಿವಾದವಾದುದು. ಆಗ ಸ್ವತಂತ್ರನಂತಹ ಸಣ್ಣ ರಾಷ್ಟ್ರದಲ್ಲಿಯೂ ೧೬೦ ವಸ್ತುಸಂಗ್ರಹಾಲಯಗಳಿದ್ದುವು.

ಭಾರತದಲ್ಲಿಯೆ ಅತ್ಯಂತ ಪ್ರಾಚೀನವಾದ ವಸ್ತುಸಂಗ್ರಹಾಲಯವು ಕ್ರಿ. ಶ. ೧೭೮೫ರಲ್ಲಿ ಪ್ರಾರಂಭವಾಯಿತು. ಸರ್ ಉಲಿಯಮ್ ಜೋನ್ಸ್ ಎಂಬವನು ಬಂಗಾಲದಲ್ಲಿ 'ಏಸಿಯಾಟಿಕ್ ಸೊಸಾಯಿಟಿ' ಎಂಬ ಸಂಸ್ಥೆಯನ್ನು ೧೭೮೪ರಲ್ಲಿ ಸ್ಥಾಪಿಸಿದನು. ಆ ಸೊಸಾಯಿಟಿಯ ಸದಸ್ಯರು ಸಂಗ್ರಹಿಸಿದ ವಸ್ತುಗಳನ್ನು ಪ್ರದರ್ಶಿಸಲು ಮೇಲೆ ಹೇಳಿದ ವಸ್ತುಸಂಗ್ರಹಾಲಯವು ಅಸ್ತಿತ್ವದಲ್ಲಿ ಬಂದಿತು. ಪುರಾಣ ವಸ್ತುಶಾಸ್ತ್ರ, ಮಾನವಜನಾಂಗಶಾಸ್ತ್ರ (Ethnology) ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ ಇವುಗಳಿಗೆ ಸಂಬಂಧಿಸಿದ ವಸ್ತುಗಳನ್ನು ಅಲ್ಲಿ ಪ್ರದರ್ಶಿಸಹತ್ತಿದರು. ೧೮೫೭ರ ಸುಮಾರಿಗೆ ಬಳ್ಳಾರಿ, ಮಂಗಳೂರು, ಕೊಯಮತ್ತೂರು, ಉದಕಮಂಡಲ ಮುಂತಾದ ಕಡೆಗೆ ಸ್ಥಳಿಕ ವಸ್ತುಸಂಗ್ರಹಾಲಯಗಳು ಉಗಮಹೊಂದಿದುವು. ೧೮೬೦ರಲ್ಲಿ ಮೈಸೂರು ಗವ್ಹರ್ಮೆಂಟ್ ಮ್ಯೂಸಿಯಮ್ ಸ್ಥಾಪಿತವಾಯಿತು. ಭಾರತದ ಗವ್ಹರ್ನರ್ ಜನರಲ್‌ರಾಗಿದ್ದ ಲಾರ್ಡ್ ಕರ್ಜನ್ ಅವರು ಪುರಾಣವಸ್ತುಗಳಿಗೆ ವಿಶೇಷವಾದ ಮಹತ್ವ ಕೊಟ್ಟು, ಆಗ ಭಾರತದಲ್ಲಿ ಆರ್ಕಿಯಾಲಜಿಯ ಡಾಯರೆಕ್ಟರ್ ಜನರಲ್‌ರಾದ ಸರ್ ಜಾನ್ ಮಾರ್ಷಲ್ ಅವರಿಗೆ ಹೆಚ್ಚು ಸ್ಫೂರ್ತಿಯನ್ನು ಕೊಟ್ಟು, ವಸ್ತುಸಂಗ್ರಹಾಲಯದ ಕಾರ್ಯವನ್ನು ಬಲಗೊಳಿಸಿದನು. ಆ ಕಾಲದಲ್ಲಿಯೆ ವಿಜಾಪೂರದಲ್ಲಿಯ ವಸ್ತುಸಂಗ್ರಹಾಲಯ ಅಸ್ತಿತ್ವದಲ್ಲಿ ಬಂದಿತು. ಭಾರತ ಮತ್ತು ಪ್ರಾಂತಸರಕಾರಗಳು ವಸ್ತುಸಂಗ್ರಹಾಲಯಗಳನ್ನು ಕಟ್ಟುವದಂತೆ ಜಯಪೂರ, ಬಡೋದಾ, ಹೈದರಾಬಾದ್, ಭಾವನಗರ, ಧರಮ್‌ಪೂರ, ಇಂದೂರ, ಗ್ವಾಲಿಯರ್, ಕೊಲ್ಹಾಪೂರ, ಅಕ್ಕಲಕೋಟ ಮೊದಲಾದ ಸಂಸ್ಥಾನಗಳೂ ತಮ್ಮ ತಮ್ಮ ವಸ್ತುಸಂಗ್ರಹಾಲಯಗಳನ್ನು ಬೆಳೆಸಿದುವು. ದೊರಾಬ್ಜಿ ಟಾಟಾ, ರತನ್ ಟಾಟಾ ಮುಂತಾದ ಧನಿಕರೂ ವಸ್ತುಸಂಗ್ರಹಾಲಯಗಳಲ್ಲಿ ಆಸ್ಥೆ ವಹಿಸಿ ಅವುಗಳಿಗೆ ತಮ್ಮ ಕಲಾಸಂಗ್ರಹ ಮತ್ತು ನಿಧಿಯನ್ನು ಕೊಟ್ಟು ಸಹಾಯ ಮಾಡಿದರು.

ವಸ್ತುಸಂಗ್ರಹಾಲಯವೆಂದರೆ ಒಂದು ಜಾದುಗೃಹ ಎಂಬ ಕಲ್ಪನೆ ಕೆಲವು ಕಾಲ ಇತ್ತು. ಅದು ಹಾಗಿರದೆ, ವಸ್ತುಗಳ ಮುಖಾಂತರ ಜ್ಞಾನಕೊಡುವ ಕಲಾಭವನವಾಗಿರುವುದು ಸಣ್ಣವರು ದೊಡ್ಡವರು, ಅಶಿಕ್ಷಿತರು ಸುಶಿಕ್ಷಿತರು, ಬಡವರು ಧನಿಕರು ಎಲ್ಲರಿಗೂ ಬೋಧಕವಾಗಿವೆ ಈ ವಸ್ತುಸಂಗ್ರಹಾಲಯಗಳು ಇಲ್ಲಿ ಪ್ರತ್ಯಕ್ಷವಸ್ತುಗಳ ಮುಖಾಂತರ ವಸ್ತುಗಳ ನಿಜಜ್ಞಾನ ಲಭಿಸುತ್ತದೆ. ಪುಸ್ತಕಗಳನ್ನೋದಿ ತಿಳಿದುಕೊಳ್ಳುವ ಜ್ಞಾನಕ್ಕಿಂತ ವಸ್ತುಸಂಗ್ರಹಾಲಯದಲ್ಲಿ ಸಿಗುವ ಜ್ಞಾನ ಸುಲಭವಾಗಿ, ಅಲ್ಪಕಾಲದಲ್ಲಿ ದೊರೆಯುವುದಲ್ಲದೆ ಮನಸ್ಸಿನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ವಸ್ತುಸಂಗ್ರಹಾಲಯದಲ್ಲಿ ದೊರೆಯುವ ಪ್ರತ್ಯಕ್ಷ ಜ್ಞಾನದಿಂದ ಶಾಲೆಯ ಮಕ್ಕಳು ವಿಶೇಷವಾದ ಲಾಭ ಹೊಂದುತ್ತಿದ್ದರೆಂಬ ವಿಷಯವನ್ನು ಶೈಕ್ಷಣಿಕ ವಿದ್ವಾಂಸರು ಮನಗಂಡಿದ್ದಾರೆ.

ಮೈಸೂರು ರಾಜ್ಯದಲ್ಲಿ—ದಿಲ್ಲಿ ಕಲಕತ್ತಾ, ಮುಂಬೈ, ಮದರಾಸ್ಟ್ಣಾ, ನಾಗಪೂರ, ಹೈದರಾಬಾದು ಮುಂತಾದ ಪಟ್ಟಣಗಳಿರುವ ದೊಡ್ಡ ವಸ್ತುಸಂಗ್ರಹಾಲಯಗಳಂತೆ ಮೈಸೂರಿನ

ಒಂದು ದೊಡ್ಡ ವಸ್ತುಸಂಗ್ರಹಾಲಯವನ್ನು ಸ್ಥಾಪಿಸುವಷ್ಟು ಕಲಾ ಕುಸುರಿನ ಅವಶೇಷಗಳು, ಔದ್ಯೋಗಿಕ ವಸ್ತುಗಳು, ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಕೀಟಕಶಾಸ್ತ್ರ, ಮೀನಶಾಸ್ತ್ರ, ತಾಂತ್ರಿಕ-ಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿದ ವಸ್ತುಗಳು ಬೇಕಾದಷ್ಟಿವೆ. ಅವುಗಳನ್ನು ಉಪಯೋಗಿಸಿ ಕರ್ನಾಟಕದವರು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ವಿವಿಧಮಾದರಿಯ ವಸ್ತುಸಂಗ್ರಹಾಲಯಗಳನ್ನು ಸ್ಥಾಪಿಸಬಹುದು. ಬೆಂಗಳೂರಲ್ಲಿ ಗವ್ಹರ್ಮೆಂಟ್ ಮ್ಯೂಝಿಯಂ, ವಿಜಾಪೂರದಲ್ಲಿ ಆರ್ಕಿಯಾಲಾಜಿಕಲ್ ಮ್ಯೂಝಿಯಂ, ಧಾರವಾಡದಲ್ಲಿ ಕರ್ನಾಟಕ ರಿಸರ್ಚ್ ಇನ್ಸ್ಟಿಟ್ಯೂಟ್ ಮ್ಯೂಝಿಯಂ—ಆಗ್ರಿ-ಕಲ್ಚರಲ್ ಮ್ಯೂಝಿಯಂ, ಕರ್ನಾಟಕ ಕಾಲೇಜಿನಲ್ಲಿ ಪ್ರಾಣಿ ಮತ್ತು ಸಸ್ಯಶಾಸ್ತ್ರಗಳ ಮ್ಯೂಝಿಯಂ ಇತ್ಯಾದಿಗಳಿವೆ. ಇವೆಲ್ಲ ವಸ್ತುಸಂಗ್ರ-ಹಾಲಯಗಳಿಗೆ ಸಂಸ್ಕಾರದವರು ಮತ್ತು ಧನಿಕರು ಸಾಕಷ್ಟು ಸಹಾಯ ಕೊಟ್ಟು ಪ್ರೋತ್ಸಾಹಿಸಿದರೆ, ಆ ಆ ಸಂಸ್ಥೆಗಳಿಂದ ಹೆಚ್ಚಿನ ಕಾರ್ಯ ಭರದಿಂದ ಸಾಗಲಿಕ್ಕೆ ಏನೂ ಅಭ್ಯಂತರವಿಲ್ಲವೆಂದು ಹೇಳಬಹುದು. ಕರ್ನಾಟಕದಲ್ಲಿ ವಸ್ತುಸಂಗ್ರಹಾಲಯಕ್ಕೆ ಬೇಕಾಗುವ ಪ್ರದರ್ಶಕ ವಸ್ತುಗಳ ಅಭಾವವಿಲ್ಲ. ದೈವೀದತ್ತವಾದ ಈ ನಾಡಿನಲ್ಲಿ ಎಲ್ಲ ತೆರನಾದ ಸಮೃದ್ಧಿಯಿದೆ. ಅವುಗಳನ್ನು ಬಳಸಿಕೊಳ್ಳುವುದು ನಮ್ಮ ಸಾಮರ್ಥ್ಯದ ಮೇಲೆ ಅವಲಂಬಿಸಿದೆ.

ವಸ್ತುಸಂಗ್ರಹಾಲಯಗಳಿಂದ ಜ್ಞಾನಪ್ರಸಾರದ ಕಾರ್ಯ-ವಾಗುವುದರ ಜೊತೆಗೆ, ಅತ್ಯಂತ ಮಹತ್ತ್ವದ ವಸ್ತುಗಳನ್ನು ರಕ್ಷಿಸಿ-ಕೊಳ್ಳಲೂ ಅನುಕೂಲವಾಗುವುದು. ಅಲ್ಲಲ್ಲಿ ಬಿದ್ದು ಅಜ್ಞಾನಿಗಳ ಮತ್ತು ನೈಸರ್ಗಿಕ ಪರಿಣಾಮಗಳಿಂದ ಹಾಳಾಗುತ್ತಿರುವ ವಸ್ತುಗಳನ್ನು ವಸ್ತುಸಂಗ್ರಹಾಲಯದಲ್ಲಿ ಸಂರಕ್ಷಿಸಿ, ಶಾಸ್ತ್ರೀಯ ರೀತಿಯಿಂದ ಅವು-ಗಳನ್ನು ಅಭ್ಯಸಿಸಿ ಪ್ರಸಿದ್ಧಮಾಡಲು ಬರುತ್ತದೆ. ವಸ್ತುಸಂಗ್ರ-ಹಾಲಯದಿಂದ ಮತ್ತೊಂದು ಮಹತ್ತ್ವದ ಲಾಭವಿದೆ. ಅದೇನೆಂದರೆ ಅಲ್ಲಲ್ಲಿ ಇದ್ದ ವಸ್ತುಗಳನ್ನು ಕೇಂದ್ರೀಕರಿಸಿ ವಸ್ತುಸಂಗ್ರಹಾಲಯ-ದಲ್ಲಿಟ್ಟರೆ, ಎಲ್ಲರಿಗೂ ನೋಡಲು ಅನುಕೂಲವಾಗುವುದು. ಮೇಲಾಗಿ ತುಲನಾತ್ಮಕ ಅಭ್ಯಾಸಮಾತಲು ಅನುವು ದೊರೆಯುವುದು.

ಅವಳಲ್ಲಿ ಮಲಗಿಹಳು

ಶ್ರೀ. ಶಾಂತಿನಾಥ ದೇಸಾಯಿ ಎಂ. ಎ. ಕೊಲ್ಹಾಪುರ

ಅವಳಲ್ಲಿ ಮಲಗಿಹಳು :
ಕೂಸಿನೊಲು ಮುಗ್ಧ-ಮುಖ, ನಿಷ್ಪಾಪಿ ಜೀವ....
ಜೀವ-ಮುನ್ದೆಯನೊಂದ ಗರ್ಭದಲಿ ಬೆಳೆಸುತ್ತ :
'ಎಲ್ಲವೂ ಸರಿಯುಂಟು, ಸೇವಿಸೀ ಟಾನಿಕ್ಕು'
'ಕಾಂಗಾ ಶ್ಯೆಲೇಶನ್ನು, ಪೇಢೆಯೋ, ಬಫಿಯೋ ?'
'ನಿಮ್ಮ ಅಜ್ಜಗೆ ಈಗ ಸಾಯಲೇನಡ್ತಿ ?'
'ನಿಮ್ಮ ಮನೆತನ-ದೈವ ತೆರೆಯಿತಹ ನೋಡಿ !'
ವಿಜ್ಞಾನದ ಕೈಯಲ್ಲಿ, ಹಳೆ-ಚೇಷ್ಟೆಗಾಳಿಯಲಿ
ಅದ್ಭುತ ಚಮತ್ಕೃತಿಯು ಬದನೆಕಾಯಹುದು !
ರಕ್ತ-ಮಾಂಸದ ಕಾಯಿ ! ಅದಕೆ ನೀರೆರೆಯುತ್ತ
ಅವಳಲ್ಲಿ ಮಲಗಿಹಳು.

ಅಂದು ಮಾಡಿದ ಮೌಢ್ಯ ಇಂದು ಗೂಢಪವಾಡ :
ಸರಳ ನೀರಿನ ಹರಿತ ಕುರುಡು ಕಣಿನೆಯ ಧಮುಕೆ
ರವ-ಅದ್ಭುತ-ಧೀರ ಜೋಗ ಜಲಪಾತ—
ತಿಳಿವಮಿಂಚಿದ ಶಕ್ತಿಗದುವೆ ಸೂಚಕ ನೋಡು !
ಕುರುಡು-ಅದ್ಭುತ-ನಿಮ್ಯ-ಧೀರ ಶಕ್ತಿಯು ಅಳು
ಅವಳಲ್ಲ ಮಲಗಿಹಳು.

ಯುಗಯುಗದ ನೇಪರಿನ ಕದಿರುಗಳ ಕೂಡಿಯುತ್ತ
ಹೊಸ ಹೊಸತು ಗಾಳಿಯನು, ಚೈತನ್ಯದಾಯಿಯನು.
ಜೀವ ತುಂಬುವ ಭಣಿಸಿ-ನೆತ್ತರನು ಸೇವಿಸುತ
ಗಿಡವೊಂದು ಬಿಟ್ಟಿತಹ ಹೂ-ಹಣ್ಣು !
'ರಪ್ಪಗಾಳಿ-ನೆಲ'ಕದುವೆ ಅರ್ಪಣವು !
ಅವಳಲ್ಲಿ ಮಲಗಿಹಳು
ಅವಳ ಹೃದಯವ ಅಡರಿ ನಿಂತಿಹುದು ಭವಿತವ್ಯ
ಅವಳ ಹೃದಯದ ಮೇಲೆ ಅಧಿಕಾರ ಸಾವಿ;
ಅಥವಾ ಯಾರಿಗೆ ಗೊತ್ತು. ಅವಳ ಅತ್ಯವ ಹೀರಿ
ಕೊನರಲಿಹುವುದೆ ಆ ಭವಿತವ್ಯ-ಲತೆಯು ?
ಅವಳಲ್ಲಿ ಮಲಗಿಹಳು :
ಕಾಣುತಿರುವಳೆ ಕನಸು ? :—'ಬಂದಿತಹ ಹೊಂಗಾಲ
ಎಲ್ಲೆಲ್ಲು ಎಳ-ಬಿಸಿಲು, ನೋಡಿರಹ ಚೆಂದವಹ
ಮಾವು-ಮಲ್ಲಿಗೆ-ಸೇಬು-ಚಿಂಗುಲಾಬಿ !'
ಅವಳ ಕನಸಿಗೆ ಇಲ್ಲ ಅವಳ ದೇಹದ ಬಸಿರು !
ಮರೆತಿಹಳೆ-'ಈ ಬಾಳು ಈ ಬಾಳೇ
ಈ ಜಗವು ಈ ಜಗವೆ, ಮಾನವರು ಮಾನವರೆ-
ತನ್ನದೇ ಗೆರೆ ಹಿಡಿದು ತಿರುಗುವುದು ಹೊಸಜೀವ—
ಅದರ ಎದೆಯಲಿ ಇಹುದು ಅದರ ದೈವ....?'
ನಿತ್ಯ-ಶಕ್ತಿಯು ಮರವು ಕುರುಡು ಕನಸಲಿ ಮರೆತು
ಸುಪ್ತವಾಗಿಯೇ, ನೋಡು, ದೈವ ನಿರ್ಮಿಸುತಿಹುದು
ಅವಳಲ್ಲಿ ಮಲಗಿಹಳು.

ಗುಂಡೂಮಾಮಾನ ಯಾತ್ರೆ

(ರಾಮತೀರ್ಥ ಮತ್ತು ರಾಮಾಯಣದ ಕಾಲ)

ಶ್ರೀ. ಪಿ. ವಿ. ಗುಡಿ, ಸ್ಯಾದಿಲ್ಲಿ

ಭಾರತದ ಹಿಲ್ಲ ಕಡೆಗಳಲ್ಲಿಯೂ ನಮ್ಮ ಪುರಾತನ ಚರಿತ್ರೆಗೆ ಸಂಬಂಧಿಸಿದ ಸ್ಮಾರಕ ಸ್ಥಳಗಳಿವೆ. ಆದರೆ ಅವುಗಳ ನಿಜವಾದ ಚರಿತ್ರೆಯನ್ನು ಅತವರು ಅರಿಯೋಕ್ಕೆ. ಅದುದರಿಂದಲೇ ಅವುಗಳ ಕಥೆ ಕೆಲವೆಡೆ ಅತಿರಂಜಿತ; ಕೆಲವೆಡೆ ಅಚ್ಚುತ!

ಅಂದು ಸೂಟಿಯ ದಿವಸ. ಇತೀ ದಿವಸ ಮನೆಯಲ್ಲಿಯೇ ಕುಳಿತು ಬೇಸರ ಆಗಿ, ಹೊತ್ತಿಗೆ ಹೊದಲೇ ಗುಂಡೂಮಾಮಾನ ಮನೆಗೆ ಹೋದೆ. ಅದರೆ ಅಲ್ಲಿ ನನಗಿಂತಲೂ ಹೊದಲೇ ಶೀನಪ್ಪ ಬಂದು ಕುಳಿತದ್ದನ್ನು ನೋಡಿ ಆಶ್ಚರ್ಯವೆನಿಸಿತು. ನಿನ್ನಿನ ದಿವಸ ಹೊತ್ತಾಗಿ ಬಂದದ್ದರ ಕಲುವಾಗಿ ಇಂದು ಬೇಗ ಬಂದಿರಬೇಕೆಂದು ಯೋಚಿಸಿದೆ. ಗುಂಡುಮಾಮಾ ಯಾವುದೋ ಪತ್ರ ಓದುತ್ತ ಕುಳಿತಿದ್ದರು. ಪತ್ರವೇನು? ಒಂದು ಚಿಕ್ಕ ಹೊತ್ತಗೆಯೇ ಎಂದು ಹೇಳಬೇಕು; ಗಜ-೨೦ ಪುಟಗಳಿಗೆ ಅದು ಕಡಿಮೆ ತಿರಲಾಕಿಲ್ಲವೆಂದು ಎನಿಸಿತು.

ಪತ್ರವನ್ನು ಮುಗಿಸಿ ಶೀನಪ್ಪನ ಕಡೆಗೆ ತಿರುಗಿ ಹೇಳಿದರು: "ಅಮೃತಸರದಿಂದ ಇಂದೇ ನನ್ನ ಮಿತ್ರರೊಬ್ಬರ ಪತ್ರ ಬಂದಿದೆ. ಅದರಲ್ಲಿಯ ಕೊನೆಯ ಪುಟ ನಿನಗಾಗಿಯೇ ಬರೆದಂತಿದೆ ಶೀನು! ನೀನು ಮೊನ್ನೆ ಕೇಳುತ್ತಿದ್ದೆಯಲ್ಲವೆ? ರಾಮಾಯಣಕಾಲದ ಸ್ಥಳಗಳಿವೆಯೇ—ಎಂದು; ಇಕ್ಷಿದೆ ನೋಡು!" ಎಂದು ಪತ್ರದ ಕೊನೆಯ ಪುಟ ನನಗೆ ಕೊಟ್ಟು, ಓದು ಎಂದು ಹೇಳಿದರು.

ನನ್ನ ಅಂದಾಜನಂತೆ ಕೊನೆಯಪುಟ ತುಸುವಿದ್ದು. ನಾನು ಓದತೊಡಗಿದೆ: "ಇಲ್ಲಿಯ ಪರಿಸ್ಥಿತಿ ನಾವು ತಿಳದುಕೊಂಡಷ್ಟು ಸುಲಭವಲ್ಲ. ಅದರ ಮೊದಲಿಗಿಂತ ಎಷ್ಟೋಪಾಲು ಸುಧಾರಿಸಿದೆಯೆಂದು ಹೇಳಬಹುದು. ಮೊದಲು ಇದೊಂದು ಮುಸ್ಲಿಂಲೀಗಿನ ಪುನರಾವೃತ್ತಿಯಿಂದೆ ಎನಿಸುವಂತಿತ್ತು; ಮತ್ತು ಅದರಿಂದ ಹಿಂದು—ಸಿಖರಲ್ಲಿಯ ಭೇದಭಾವನೆಯೂ, ವೈಮನಸ್ಸೂ ಸಾಕಷ್ಟು ಹೆಚ್ಚಾಗಿದ್ದುವು. ಯಾವ ಹೊತ್ತಿಗೆ ಕಿಡಿ ಹಾರುವುದೋ ಎಂದು ಎಲ್ಲರೂ ಗಾಬರಿಯಾಗಿದ್ದರು. ಆದರೆ ಈಗ ಅಕಾಲೀದಲದವರು ತಮ್ಮ ಧೋರಣೆ ಬದಲಿಸಿದ್ದರಿಂದ, ಮತ್ತೆ ಪರಿಸ್ಥಿತಿ ಶಾಂತಿದಾಯಕವಾಗಿದೆ. ಆದರೆ ಒನ್ಮೆಲೇ ಸಂಭವಿಸಿದ ಈ ಬದಲಾವಣೆಯ ಕಾರಣವೇನು? ಅಕಾಲೀದಲದವರು ರಾಜಕೀಯದಿಂದ ನಿವೃತ್ತರಾಗಿ ತಮ್ಮ ಚಟುವಟಿಕೆಗಳನ್ನು ತಮ್ಮ ಸಮಾಜದ ವಿದ್ಯಾಭ್ಯಾಸ ಮತ್ತು ಸಂಸ್ಕೃತಿಗಳ ಬೆಳವಣಿಗೆಯತ್ತ ಹೊರಳಿಸುವುದಾಗಿ ಹೇಳಿದ್ದಾರೆ. ಮತ್ತು ರಾಜಕೀಯದಲ್ಲಿ ಭಾಗ ತೆಗೆದುಕೊಳ್ಳುವವರು ಕಾಂಗ್ರೆಸ್ಸು ಸೇರುತ್ತಾರಂತೆ. ಕಾಂಗ್ರೆಸ್ಸಿನಲ್ಲಿಯ ಲಂಚಗೂಳಿತನ ನಿರ್ಮೂಲ ಮಾಡುವುದಕ್ಕಾಗಿ ತಾವು ಕಾಂಗ್ರೆಸ್ಸು ಸೇರುತ್ತೇವೆಂದು ತಾರಾಸಿಂಗರು ಹೇಳಿದ್ದಾರೆ. ಅಂತೂ ಎಲ್ಲವೂ ವಿಚಿತ್ರವಾಗಿದೆ. ಅಕಾಲಿಗಳು ಕಾಂಗ್ರೆಸ್ಸು ಸೇರುವುದರಿಂದ ಸಮಾಧಾನವಾಗುವುದಕ್ಕಿಂತಲೂ ಅದೊಂದು ಸಮಸ್ಯೆಯಾಗಿ ಕುಳಿತಿದೆ....'

"ಯಾವುದನ್ನು ಓದುತ್ತಿರುವಿ? ಇದಲ್ಲ, ಇದಕ್ಕೂ ಮುಂದಿನದು" ಎಂದರು ಗುಂಡೂಮಾಮಾ, "ಇದೆಲ್ಲ ಪಂಜಾಬಿನ ರಾಜಕೀಯ ಪರಿಸ್ಥಿತಿ; ಅದರದೊಂದು ದೊಡ್ಡ ಪುರಾಣವನ್ನೇ ಬರೆದಿದ್ದಾರೆ. ನಾನು ಹೇಳುವುದು ರಾಮತೀರ್ಥದ ಬಗ್ಗೆ. ಮೊನ್ನೆ ಶೀನೂ ಕೇಳುತ್ತಿದ್ದ ರಾಮಾಯಣಕಾಲದ ಸ್ಥಳಗಳ ಸಂಬಂಧವಾಗಿ. ರಾಮಾಯಣ ಬರೆದ 'ಆದಿಕವಿ' ವಾಲ್ಮೀಕಿಮಹಿಗಳ ಆಶ್ರಮ, ಲವಕುಶರ ಜನ್ಮಸ್ಥಳ ಅಮೃತಸರದ ಸಮೀಪದಲ್ಲಿವೆ. ಅದಕ್ಕೆ ರಾಮತೀರ್ಥವೆಂದು ಕರೆಯುತ್ತಾರೆ. ನನ್ನ ಮಿತ್ರರು ಇದರ ಸಂಬಂಧವಾಗಿ ಬರೆದಿದ್ದಾರೆ. ಪತ್ರದ ಕೊನೆಯಲ್ಲಿರುವ ಅದನ್ನು ಓದು ಎಂದು ಹೇಳಿದೆ."

ನಾನು ಓದತೊಡಗಿದೆ: "ನೀವು ಹೇಳಿದ ರಾಮತೀರ್ಥದ ಸೆಲುವಾಗಿ ವಿಚಾರಿಸಿದೆ. ಅದು ಇಲ್ಲಿಂದ ೭೫-೮೦ ಮೈಲುಗಳು ದೂರದಲ್ಲಿದೆ. ಇಲ್ಲಿಯ ಜನರದೊಂದು ವಿಚಿತ್ರವೇ! ಇದರ ಸಂಬಂಧವಾಗಿ ಹೆಸರನ್ನುಳಿದು ಏನೂ ಗೊತ್ತಿಲ್ಲದ ಜನರೇ ಬಹಳ; ಅದರೆ ಹಾಗೆ ಒಪ್ಪಿಕೊಳ್ಳುವವರು ಬಹಳೇ ವಿರಳ. ತನಗೆ ಎಲ್ಲ ಗೊತ್ತಿದೆಯೆಂದೂ, ಸ್ವತಃಯೊಂದು ಸ್ಥಳವನ್ನು ತೋರಿಸುತ್ತೇನೆಂದೂ ಅಮೃತಸರದಲ್ಲಿಯ ಮಹಾನುಭಾವರೊಬ್ಬರು ನನ್ನ ಸಂಗಡ ಬಂದರು. ನನಗೊಬ್ಬ ಗೈಡ್ (Guide) ಸಿಕ್ಕಾತಾಯಿತೆಂದು ನನಗೂ ಆನಂದವಾಯಿತು.

ರಾಮತೀರ್ಥವನ್ನು ತಲುಪಿದಾಗ ಮುಂಜಾನೆ ೭-೭॥ ಗಂಟೆ ಆಗಿರಬಹುದು. ಅದೊಂದು ಮನೋಹರವಾದ ಪ್ರಶಾಂತಸ್ಥಳ. ಸುಂದರವಾಗಿ ಕಟ್ಟಿದ ದೊಡ್ಡ ದೊಂದು ಕೆರೆಯಿದೆ. ಅದರ ದಂಡೆಗೆ

೩-೪ ಚಿಕ್ಕ ಗುಡಿಗಳಿವೆ. ಒಂದು ಕಡೆಗೆ ಚಿಕ್ಕದೊಂದು ಬಾವಿ; ಅದಕ್ಕೇನೇ ಸೀತಾಕುಂಡವೆಂದು ಕರೆಯುತ್ತಾರೆ. ನಾವು ಅಲ್ಲಿ ಮುಟ್ಟಿದ ಕೂಡಲೇ, ನಮಗೆ ತೋರಿಸಲಿಕ್ಕೆಂದು ಬಂದವರು ಹೇಳಲಿಕ್ಕೆ ಪ್ರಾರಂಭಿಸಿದರು: 'ಈ ಕೆರೆಯು ಪುರಾತನಕಾಲದ್ದು; ವಾಲ್ಮೀಕಿ ಋಷಿಗಳು ಅಲ್ಲಿ ಕಾಣುವ ಗುಡಿಯ ಸ್ಥಳದಲ್ಲಿ ತಪಸ್ಸಿಗೆ ಕುಳಿತುಕೊಳ್ಳುತ್ತಿದ್ದರು. ಅದ್ದರಿಂದ ಅದಕ್ಕೆ ಈಗ 'ವಾಲ್ಮೀಕಿ ಗುಡಿ' ಎಂದು ಕರೆಯುತ್ತಾರೆ ಅಲ್ಲಿ ಆಚೆಯ ದಂಡೆಗೆ ಕಾಣುವ ಮರವು ಕೂಡ ಬಹಳ ಹಳೆಯದು. ಪುರಾಣಗಳ ಆಧಾರದಿಂದ, ವ್ಯಾಧನು ಕ್ರೌಂಚ ಪಕ್ಷಿಯನ್ನು ಕೊಂದದ್ದು ಅಲ್ಲಿಯೇ ಎಂದು ಕಾಣುಬರುತ್ತಿದೆ.... ಮುಂ.' ನನಗೊಳ್ಳೇ ನಗೆ ಬರತೊಡಗಿತು. ಆ ಕೆರೆಯನ್ನು ಕಟ್ಟಿದರೀತಿ ಮತ್ತು ಇಟ್ಟಂಗಿಗಳಿಂದ ಜೋಡಿಸಿದ ಪಾವಟಿಗೆಗಳನ್ನು ನೋಡಿದರೆ, ಅದು ೨೦೦ವರ್ಷಗಳಿಗಿಂತ ಹಳೆಯದಲ್ಲವೆಂದು ಯಾರಾದರೂ ಹೇಳಬಹುದಾಗಿತ್ತು. ಮತ್ತು ಇಂತಹ ಕೆರೆ, ಆ ಗಿಡ ೩-೪ಸಾವಿರ ವರ್ಷಗಳ ಹಿಂದಿನವು ಹೇಗಿರಬೇಕು? ಇತ್ತ ಕಡೆಗೆ ಸಂಸ್ಕೃತ ಗೊತ್ತಿದ್ದವರು ಸ್ವಲ್ಪೇಜನ; ಅಂಥಲ್ಲಿ ಇವರು 'ಶಾಸ್ತ್ರಿ' ಪರೀಕ್ಷೆಗೆ ಕುಳಿತಿದ್ದೇವೆಂದು ಹೇಳುತ್ತಿದ್ದರು. ಅದಬಳಿಕ ವೇದ-ಪುರಾಣಗಳಲ್ಲಿ ಇವರೇ ಇಲ್ಲಿ authority. ತಾವು ಹೇಳಿದ್ದನ್ನೆಲ್ಲ ನಿಜವೆಂದೇ ಎಲ್ಲರೂ ನಂಬುತ್ತಾರೆಂಬ ಭಾವನೆಯು ಇವರಲ್ಲಿ ಇದ್ದಂತೆ ತೋರಿತು. ಅಷ್ಟರಲ್ಲಿಯೇ ನಮ್ಮನ್ನು ನೋಡಿ, ಸಮೀಪದಲ್ಲಿದ್ದ ಗುಂಡಿಯಿಂದ ಸಾಧುಗಳೊಬ್ಬರು ನಮ್ಮ ಕಡೆಗೆ ಬಂದರು; ನಮ್ಮ ಯೋಗಕ್ಷೇಮ ವಿಚಾರಿಸಿದರು: ಅನಂತರ ಅವರು ರಾಮತೀರ್ಥದ ಬಗ್ಗೆ ಹೀಗೆ ಹೇಳಿದರು: 'ಅಗಿನ ಕಾಲದ ಕುರುಹುಗಳು ಈಗ ಏನೂ ಇಲ್ಲ; ೩-೪ಸಾವಿರ ವರ್ಷಗಳನಂತರ ಇರುವುಬಾದರೂ ಹೇಗೆ? ಆದರೆ ಗೊತ್ತಿದ್ದ ವಿಷಯವೆಂದರೆ:—ಈ ಸ್ಥಳದಲ್ಲಿಯೇ ವಾಲ್ಮೀಕಿಋಷಿಗಳ ಆಶ್ರಮವಿದ್ದಿತು. ಇಲ್ಲಿಯ ಬಯಲು ಸ್ಥಳ, ಸುತ್ತಲಿನ ಅಡವಿ, ಸಮೀಪದಲ್ಲಿಯೇ ಇದ್ದ ನದಿ-ಇವುಗಳನ್ನು ನೋಡಲಾಗಿ, ಇದು ವಾಲ್ಮೀಕಿಋಷಿಗಳ ಆಶ್ರಮಸ್ಥಳವು ಇದ್ದಿರಬಹುದೆಂದು ಎನಿಸುತ್ತದೆ. ಇಲ್ಲಿ ಒಂದು ಚಿಕ್ಕ ಬಾವಿಯೆಂದೆ. ಸೀತಾದೇವಿಯು ಜನರ ಅಪವಾದಕ್ಕಾಗಿ ರಾಮಚಂದ್ರನಿಂದ ತ್ಯಕ್ತಳಾಗಿ ಇಲ್ಲಿ ಆಶ್ರಮದಲ್ಲಿದ್ದಾಗ, ಇದೇ ಹೊಂಡದಿಂದ ನೀರು ಒಯ್ಯುತ್ತಿದ್ದಳೆಂದು ಹೇಳುತ್ತಾರೆ ಅದ್ದಕ್ಕಾಗಿಯೇ ಇದಕ್ಕೆ ಸೀತಾಕುಂಡವೆಂದು ಈಗಲೂ ಕರೆಯುತ್ತಾರೆ. ಎಷ್ಟೋ ಜನರು ಇನ್ನೂ ಏನೇನೋ ಹೇಳುತ್ತಾರೆ. ಆದರೆ ಅದೆಲ್ಲ ನಂಬಲಸಾಧ್ಯ'

ನಾನು ಕೇಳಿದೆ: 'ಹಾಗಾದರೆ ಈ ಕೆರೆ, ಆ ಗಿಡ ಮತ್ತು ವಾಲ್ಮೀಕಿ-ಗುಡಿಗಳ ಸಂಬಂಧವಾಗಿ ಏನು?' ಎಂದು.

'ಅವುಗಳ ವಿಷಯವಾಗಿ ಏನು ಇರಬೇಕು?' ಎಂದರು ಆ ಸಾಧುಗಳು 'ಇದೊಂದು ಕೆರೆ, ಒಬ್ಬ ಸರದಾರನು ಕಟ್ಟಿಸಿದ್ದು; ಅದೊಂದು ಗಿಡ ಅದರ ದಂಡೆಯ ಮೇಲಿನದು; ಆ ಗುಡಿ ಕೆಲವು ಬೇಡರು ಕಟ್ಟಿಸಿದ್ದು; ಬೇಡರು ತಾವು ವಾಲ್ಮೀಕರೆಂದು ಹೇಳಿಕೊಳ್ಳುತ್ತಾರೆ. ಅವರು ಕಟ್ಟಿಸಿದ ಗುಡಿ 'ವಾಲ್ಮೀಕಿಗುಡಿ' ಆಗಿದೆ ಅಷ್ಟೆ.

ಆಗ ನಮ್ಮ 'ಗೈಡ'ನೆ ನೋರಿ ನೋಡುವಂತಿತ್ತು. ಆ ಸಾಧುಗಳು ಹೇಳಿದರು: 'ನಿಜವಾಗಿಯೂ ಇದು ವಾಲ್ಮೀಕಿಗಳ ತಪಸ್ಥಾನವಾಗಿರಲಿಕ್ಕೆ ಬೇಕು ಅದರಿಂದಾಗಿಯೇ ನಮ್ಮ ಧ್ಯಾನ, ಯೋಗಾಭ್ಯಾಸ ನಿರ್ವಿಘ್ನವಾಗಿ ಸಾಗಿದೆ. ಇಲ್ಲಿಯ ಶಾಂತ ವಾತಾವರಣದಿಂದಾಗಿಯೇ ಮನಶ್ಶಾಂತಿಗೆ ಏನೂ ಭಂಗ ಬಂದಿಲ್ಲ..... ನನ್ನಂತೆ ಇಲ್ಲಿ ಇನ್ನೂ ಕೆಲವು ಸಾಧುಗಳಿದ್ದಾರೆ. ನಮ್ಮ ಗುರುಗಳೂ ಇಲ್ಲಿಯೇ ಇದ್ದಾರೆ. ಮಹಾಂತರೆಂದು ಅವರನ್ನು ಕರೆಯುತ್ತೇವೆ. ಅವರೂ ದೊಡ್ಡ ಯೋಗಿಗಳು. ಅವರು ಇಲ್ಲಿ ಒಂದು ಧರ್ಮಾರ್ಥ ಅನ್ನಛತ್ರ ನಡೆಯಿಸಿಕೊಂಡು ಬಂದಿದ್ದಾರೆ.'

ರಾಮತೀರ್ಥದ ಬಗ್ಗೆ ಇದಕ್ಕೂ ಹೆಚ್ಚಿನ ವಿಷಯಗಳು ತಿಳಿಯಲಿಲ್ಲ ಇಲ್ಲಿ ಅನೇಕ ಐತಿಹಾಸಿಕ ಸ್ಥಳಗಳಿವೆ. ಪತ್ರದ ಗಾತ್ರ ಈಗಾಗಲೇ ಸಾಕಷ್ಟು ದೊಡ್ಡದಾಯಿತು. ಅವುಗಳ ವಿಷಯ "ಮುಂದಿನ ಪತ್ರದಲ್ಲಿ ಬರೆಯುವೆ...." ಪತ್ರವನ್ನು ಗುಂಡೂಮಾಮಾನಿಗೆ ಕೊಟ್ಟೆ.

"ನಮ್ಮ ಹಿಂದೂಧರ್ಮ, ಸಮಾಜ- ಸಂಸ್ಕೃತಿಗಳ ಬೆಳೆವಣಿಗೆಗಾಗಿ ಪ್ರಯತ್ನಿಸುವೆವೆಂದು ಹೇಳಿಕೊಳ್ಳುವ ಸಂಸ್ಥೆಗಳು ಎಷ್ಟೋ ಇವೆ. ಅವು ನಮ್ಮ ಪ್ರಾಚೀನ ಸಂಸ್ಕೃತಿಗಳ ಕೇಂದ್ರಸ್ಥಾನಗಳಾದ ಇಂತಹ ಸ್ಥಳಗಳ ಸಂಬಂಧವಾಗಿ ಎಲ್ಲರಿಗೂ ಗೊತ್ತುಮಾಡಿಕೊಡಲಿಕ್ಕೆ ಪ್ರಯತ್ನಿಸಬೇಕು. ಇಂತಹ ಸ್ಥಳಗಳು ನಮಗೆ ಸಮೃದ್ಧಿಯಾಗಿರ" ಎಂದರು ಗುಂಡೂಮಾಮಾ. "ಇಂತಹ ರಾಮತೀರ್ಥದ ಬಗ್ಗೆ ಖಚಿತವಾದರೀತಿಯ ಜನರಿಗೇನೇ ಹೆಚ್ಚು ಗೊತ್ತಿಲ್ಲವೆಂದರೆ ನಮ್ಮ ದುರ್ದೈವವೇ ಸರಿ!"

"ಇವೆಲ್ಲಾ ಆಯಿತು. ಪೊನ್ನೆ ನೀವು ಯಾಜ್ಞವಲ್ಕ್ಯ-ಗಾರ್ಗಿಯ ಸಂವಾದದ ಸಂಬಂಧವಾಗಿ ಹೇಳುತ್ತಿದ್ದಿರಲ್ಲ?" ಎಂದು ಶೀನಪ್ಪ ಕೇಳಿದ.

"ಆಮ ನಮ್ಮ ಪೂರ್ವಜರಾದ ಆರ್ಯರು ಭಾರತಕ್ಕೆ ಬಂದಾಗ ಅಲ್ಲಿಯ ಮೂಲನಿವಾಸಿಗಳೊಂದಿಗೆ ಅವರು ನಡೆದುಕೊಂಡ ರೀತಿ-ಸ್ಥಾನ, ತೋರಿಸುವ ಗುಪ್ತನಿಧಿಗಳ ಅಧಾರ!" ಎಂದು ಕಿಟ್ಟುವು ನಡುವೆಯೇ ಬಾಯಿ ಹಾಕಿದನು. ನಾವೆಲ್ಲ ಅವನ ಕಡೆಗೆ ಒಳ್ಳೇ ಆಶ್ಚರ್ಯದಿಂದ ಹೊರಳಿ ನೋಡಿದೆವು. "ಈ ವಿಷಯವನ್ನು ಯಾರೂ ಅಲ್ಲಗಳೆಯುವಂತಿಲ್ಲ ಬೃಹದಾರಣ್ಯಕೋಪನಿಷತ್ತಿನಲ್ಲಿಯೇ ೩ನೆಯ ಅಧ್ಯಾಯದಲ್ಲಿ ಇದರ ಉಲ್ಲೇಖವಿದೆ. ಯಾಜ್ಞವಲ್ಕ್ಯ ಮತ್ತು ಗಾರ್ಗಿ ಇವರಲ್ಲಿ ಜನಕಮಹಾರಾಜನ ಆಸ್ಥಾನದೊಳಗೆ ವಾದ ನಡೆಯಿತು. ಗಾರ್ಗಿಯ ಪ್ರಶ್ನೆಗಳಿಗೆ ಯಾಜ್ಞವಲ್ಕ್ಯರಿಗೆ ಉತ್ತರ ಕೊಡುವುದಾಗಲಿಲ್ಲ; ಕಡೆಗೆ ಗಾರ್ಗಿಗೆ ಹೇಳಿದರು: 'ಇನ್ನು ಇಂತಹ ಪ್ರಶ್ನೆ ಕೇಳಿದರೆ ನೀನು ನಿನ್ನ ಪ್ರಾಣಕ್ಕೆ ಎರವಾಗದೇಇರಾದೀತು. ಎಚ್ಚರಿಕೆ!' ಎಂದು. ಇಲ್ಲಿಗೆ ಸಭೆ ಮುಕ್ತಾಯವಾಯಿತು. ಗಾರ್ಗಿಯು ಮೊದಲು ಯಾಜ್ಞವಲ್ಕ್ಯರಲ್ಲಿಯೇ ವಿದ್ಯಾರ್ಜನೆ ಮಾಡಿ ವೇದವಾಂಗಳಾದವಳು. ಆಗಿನ ಕಾಲದಲ್ಲಿ ಯಾಜ್ಞವಲ್ಕ್ಯರೆಂದರೆ

(ಉಳಿದದ್ದು ಪುಟ ನೋಡಿರಿ)

ನನ್ನ ದೀಪಾವಳಿಯ ರಸನಿಮಿಷಗಳು

(ಪ್ರವಾಸ ಪ್ರಬಂಧ)

ಶ್ರೀ. ಎನ್. ಎಸ್. ಗದಗಕರ, ಬಿ. ಎ. ಧಾರವಾಡ

ಪ್ರವಾಸಸಂದರ್ಭವು ಅನೇಕ ರಸನಿಮಿಷಗಳಿಗೆ ಆಗರವಾಗಿರುವುದು. ಹೊಸ ಹೊಸ ವಾತಾವರಣ, ಹೊಸ ಹೊಸ ಪ್ರದೇಶಪರಿಚಯ, ಹೊಸ ಹೊಸ ಜನರ ಸಂಘಟನೆ— ಇವುಗಳಿಂದ ಪ್ರವಾಸಕಾಲವು ವಿವಿಧರೀತಿಯ ಅನುಭವಗಳನ್ನು ಒದಗಿಸಿಕೊಡುವುದು.

ಪೂನಾ-ಬೆಂಗಳೂರು ಪ್ಯಾಸಿಂಜರ್ ಗಾಡಿ, ರಾತ್ರಿ ಮೂರರ ಸುಮಾರಿಗೆ ಅಂದು ಬರುವುದಿದ್ದಾಗ, ಕೇವಲ ಇಪ್ಪತ್ತು ನಿಮಿಷ ಮೊದಲು, ಧೋ ಧೋ ಎಂದು ಸುರಿಯುವ ಮಳೆಯಲ್ಲಿ, ತೀರ ಸಾಮಾನ್ಯ (?) ಟಾಂಗೆಯಲ್ಲಿ ಮೂವರು ಪ್ರವಾಸಿಕರು ತಮ್ಮ ಗಂಟು ಗದಡಿಗಳೊತನೆ ತೊಯಿಸಿಕೊಂಡು ಸಾಗಿದ್ದುದನ್ನು ಕಂಡವರು 'ಛೆ! ಇವರೇನು ಪ್ರದೀರ್ಘ ಪ್ರವಾಸಮಾಡಿ ಮುಂದಾದಾರು' ಎಂದು ಸಂಶಯ ತಳೆಯುವಂತಿದ್ದಿತು. ಏನೇ ಆಗಲಿ, ಸಂಶಯದ ಕಾರ್ಮೋಡ ಜೆದರಿ ನಮ್ಮ ಮನಸ್ಸೂ ಪ್ರಫುಲ್ಲಿತವಾಯಿತು— ಇನ್ನೂ ನಿಲ್ದಾಣಕ್ಕೆ ಗಾಡಿ ಬಾರದಿದ್ದುದನ್ನು ಕಂಡು! ಆಷ್ಟರಲ್ಲಿಯೇ ಇನ್ನುಳಿದವರೂ ನಮಗಿಂತ ತಡಮಾಡಿ ತಲುಪಿದರೂ ಅನಾನುಕೂಲವೇನೂ ಆಗಲಿಲ್ಲ. ಸುದ್ದಿವದಿಂದಲೊ ರೂಢಿಬಲದಿಂದಲೊ, ಗಾಡಿ ಅಂದು ತಡವಾಗಿಯೇ ಬಂದಿತು. ಅಲ್ಲಿ ಯಾರ ತಪ್ಪು ಏನು? ಒಳಗಂತೂ ಅಸೀನರಾದರು ಎಲ್ಲರೂ.

ಪ್ರವಾಸದಲ್ಲಿ ಮನೋರಂಜನೆಯೇ ಮುಖ್ಯವೆಂದು ನೆರೆನಂಬಿದ ಮಹನೀಯರು, ಇಸ್ಪೇಟುದೇವಿಯ ಆರಾಧಕರಾದರು. ಫಿಲಾಸಿ ಆಟಗಾರರು ಸಹಜವಾಗಿ ಪ್ರೇಕ್ಷಕವರ್ಗಕ್ಕೆ ಸೇರಿದರು. ಮೊದಮೊದಲು ಕಂಪಾರ್ಟ್‌ಮೆಂಟಿನಲ್ಲಿ ಸ್ಥಳ ಸಾಕಷ್ಟೆನಿಸಿದರೂ, ಮುಂದೆ ಮುಂದೆ ಕ್ರಮಿಸಿದಂತೆ ಗದ್ದಲ ಹೆಚ್ಚಾಗಿ ಕೊಂಚ ಗುದ್ದಾಟಕ್ಕೂ (ಶಾರೀರಿಕವಲ್ಲ!) ಇಂಬು ದೊರೆಯಿತು. ಎಲ್ಲರೂ ಹಣ ಕೊಟ್ಟೇ ಟಿಕೇಟು ಪಡೆದು ಹತ್ತಿದಾಗ 'ನಾಳು ಮೊದಲು ಬಂದು ಕೂಳಿತವ' ಎಂದರೆ, ವ್ಯವಹಾರಿಕ ಕಾಮಿಡೆಯು ದೃಷ್ಟಿಯಿಂದ ಒಪ್ಪಲಾಗುವುದಿಲ್ಲವೆಂದು ಇಂತಹ ರಸಕಸಿ ಸಹಜ. ಮೇಲಿಂದಮೇಲೆ ಇವು ಆದರೆ ಒಳಿತು ಎಂದು ಆಶಿಸಲೂ ಬಿಗದು. ಅಂತೂ ಕೈಗೆಕೈ ಹಚ್ಚುವುದನ್ನಷ್ಟೆ ಉಳಿಸಿದ ಸುಶಿಕ್ಷಿತರೇ (?) ಮುಂದೊಂದು ತಾಸಿನಲ್ಲಿ ಜೀವದ ಗೆಳೆಯರಾದರು (ತೆಗೆದುಕೊಳ್ಳುವವರಲ್ಲ)! ತಿಂಡಿ-ತೀರ್ಥಗಳ ನೈಭವದಲ್ಲಿ ಹಿಂದಿನ ಕದನ ಮರೆವಿನ ಸಾಮಾನ್ಯವ್ಯಕ್ಕೆ ಧುಮುಕಿ, ಕ್ರಮೇಣ ತಿಳಿ ವಾತಾವರಣವು ಎಲ್ಲೆಡೆ ಹರಡಿತು. ಎಲ್ಲರೂ ನಿಸರ್ಗ ನಿರೀಕ್ಷಣೆಯಲ್ಲಿ ತಲ್ಲೀನರಾದರು. ಅನ್ನದೇವ ಪ್ರತ್ಯಕ್ಷನಾದ ಮೇಲೆ ರಸಿಕತೆ ಅಡಿ ಇಟ್ಟರೆ ಏನು ಪ್ರಮಾದ? ಆ ಮಾತು ಈ ಮಾತು ತಳೆತುಂಬ ಆಡುವಾಗ, ನೋದಿಸುವಾಗ, ಆಟಕ್ಕೂ ಕಳೆ ಕಟ್ಟಿದಾಗ, ನಿದ್ರಾದೇವತೆಯೂ ಒಲಿಯುತ್ತಿರುವಾಗ ಬೆಂಗಳೂರಿನ ಸೆರಗೇ ನಮ್ಮ ಕಣ್ಣು ಕಟ್ಟಿತು!

ನಮ್ಮೊಬ್ಬ ಗೆಳೆಯರ ಶಿಫಾರಸಿನಿಂದ, ನಿಲ್ದಾಣದ ಸಮೀಪದ ಛತ್ರದಲ್ಲಿ ಇಳಿದುಕೊಂಡೆವು. ಒಂದು ವಾರ ಅಲ್ಲಿ ಇರುವ ಪ್ರಸಂಗ ಬಂದರೆ 'ಅಂದಮಾನನೇ ಚೆನ್ನು ಇದಕ್ಕಿಂತ' ಎಂದು ಅಭಿಪ್ರಾಯ ಪಡುವ ಮಟ್ಟಿಗೆ ನಮ್ಮ ಗೆಳೆಯರ ಗುಂಪಿನ ಉಪದ್ವ್ಯಾಪಿಯೊಬ್ಬ ಬಂದಿದ್ದ. ಕರ್ಮ-ಧರ್ಮ ಸಂಯೋಗದಿಂದ ದಣಿದು ಮಲಗಲಿಕ್ಕಷ್ಟೇ ಅಲ್ಲಿಗೆ ಮೂರು ರಾತ್ರಿ ನಾವು ಹೋದುದರಿಂದ—ಬದುಕಿದೆವೆನಿಸಿತು. ಅಷ್ಟು ಅಲ್ಲಿಯ ಅಚ್ಚುಕಟ್ಟುತನ! ಹಿಂದುಳಿದ ದೇಶಗಳು ಅಲ್ಲಿಯ ಸ್ವಚ್ಛತೆಯ ಮಾದರಿ ಅಭ್ಯಸಿಸಿದರೆ ಪಾಪವೇನು? ಸರಿ. ಇಂತಹ ಪಳೆ ಹೊಸದರ ತಿಕ್ಕಾಟದಲ್ಲಿಯೇ ನಾವು 'ವಿಧಾನಸೌಧ' ಕಂಡು ಬಂದೆವು. ಆ ಅಲೌಕಿಕ ಬೆಡಗಿಗೆ ಮಾರುಹೋದೆವು. ಸರಕಾರದ ಕಲಾಪ್ರೇಮಕ್ಕೆ, ಉಜ್ವಲ ಸಾಂಪತ್ತಿಕ ಸ್ಥಿತಿಗೆ ಅದೊಂದು ಜೀವಂತ ಸಾಕ್ಷಿದರ್ಶನವೆಂದು ನಮ್ಮ ಗೆಳೆಯರ ಬಳಗದ ಮುಖ್ಯ ಸೋಲ್ವಿಚಾರಕರು ಶರಾ ಹೊಡೆಯದೇ ಸಾಗಲಿಲ್ಲ. ಅವರೇನು ಬರಿ ಶಿಕ್ಷಕರಲ್ಲ; ಕಾಯಿದೆ ಪಂಡಿತರು. ಮೇಲಾಗಿ ಮದದ ಮೇಲಿನ ಮಂಗ ಕೈಬಿಡುವಂತೆ ಮಾಡುವಂತೆ ಮಾತಾಡುವವರು. ಹೆಚ್ಚೇನು? ನಾಮಾಂಕಿತ ವಿಲಾಸಿ ಹಾಗೂ ವಿನೋದಿ ನಟರೂ ಆಗಿರುದ್ದುದರಿಂದ, ಅವರ ಮಾತಿನಲ್ಲಿ ಎಲ್ಲರಿಗೂ ವಿಶ್ವಾಸ ಹುಟ್ಟಿತು. ತಾತ್ಸೇಕೆ? ಹಚ್ಚ ಹೊತ್ತು ಸೌಧ ನೋಡಿ ಬೆರಗಾಗಿ, ಎಲ್ಲರೂ ಕಬನ್ ಪಾರ್ಕ್ ಬಂದೆವು. ಊಟದ ವೇಳೆ ಸಮೀಪಿಸಲಿದ್ದರೂ ಹಲವರು ಅಲ್ಲಿ ಕಡಲೆ ಪುರಿ-ಉಸುಳಿ ಕೊಂಡು ತಿಂದರು. ಅದೇ ಅನ್ನಾದಿವಸ್ಯಯ ಸಂಜೆಗೆ ಲಾಲಬಾಗ ಪಾರ್ಕಿನ ಸಂದರ್ಶನವಾಯಿತು. ಸಾಹಿತ್ಯದ ಅಜರಾಮರತೆ ಪಡೆದ ಎರಡೂ ಪಾರ್ಕುಗಳಿಂದ ನನ್ನಲ್ಲಿ

ಕನಿಷ್ಠ ಇಬ್ಬರು ಮೂವರು ಸಾಹಿತ್ಯಿಕರು ಚಿಂತನ ಸ್ಫೂರ್ತಿ ಕಳೆದಿಂಬೇಕು!

ಮರುದಿನವೇ ಮಂಡ್ಯದ ಸಕ್ಕರೆಯ ಕಾರಖಾನೆಯ ಸಂದರ್ಶನ. ಮೊದ ಮೊದಲು ನೋಡುವ ಉತ್ಸುಕತೆಯಿಂದ ಪ್ರೇರಿತರಾಗಿ ಒಳಗೆ ಹೊಕ್ಕ ಕೆಲವರು, ಅಲ್ಲಿಯ ಅತ್ಯುಗ್ರ ವಾಸನೆಗೆ ಹಿಂತೆಗೆದು ಓಡಲನುವಾಗಿದ್ದರು; ಉಳಿದವರು ನಾವು, ಅವರನ್ನು ಹಿಡಿದು ತರಲು ಅತಿಯಾಗಿ ಶ್ರಮಿಸಬೇಕಾಯಿತು. ಏನೇ ಇರಲಿ, ಅಂತಹ ಭವ್ಯ ಯಾಂತ್ರಿಕ ಯೋಜನೆಯನ್ನು ಕಂಡು ದಂಗುಬಡಿಯದೇ ನಿಲ್ಲುವುದು ಯಾರಿಗೂ ಅಸಾಧ್ಯ! ಕಬ್ಬಿನ ಠಾಕಿ ಹೋಗಿ ಸಕ್ಕರೆ ಸಿದ್ಧವಾಗಿ, ಯಂತ್ರದಲ್ಲಿಯೇ—ಗೋಣಿಯ ಅಸಂಖ್ಯ ಚೀಲಗಳು—ವ್ಯವಸ್ಥಿತವಾಗಿ ಹೊಲಿಯಲ್ಪಟ್ಟು ಕೊರಬೀಳುವುದು ಸೋಜಿಗದ ಮಾತೇ ಅಹುದು. ಮನುಷ್ಯನ ಚಿಸ್ತಿತ್ವವನ್ನು ಅಳಿಸಲು ಹೆಣಗಿ ಯಶಸ್ವಿಯಾದ ಯಂತ್ರವೇ ನೀನೇ ಧನ್ಯನೆಂದು ನನ್ನ ಸಾಹಿತ್ಯಕಮಿತ್ರ ಉದ್ಗಾರ ಹೊರಡಿಸಿಯೇಬಿಟ್ಟ! ಕಂಪನಿ ನಾಟಕಗಳನ್ನೇ ಹೆಚ್ಚಾಗಿ ನೋಡಿ ಹುಚ್ಚನಾದ ಜನಕ್ಕೆ ಈ ಉದ್ಗಾರವು ತೀರ ಸಹಜವಿತ್ತು! ಇರದೇ ಏನು?

ಬತ್ತದ ಬೆಳೆಯ ಏಸಿರಿ ಕಂಡು ಆನಂದಿಸುವಾಗ ಮೈಸೂರು ಬಂದಿತು. ಇದುಳು ವಿಶ್ರಾಂತಿಯನ್ನು ಪಡೆದು, ಮೊದಲು ಮುಂಜಾವು ಮೋಟರಿನಲ್ಲಿ ಚಾಮುಂಡಿ ಬೆಟ್ಟ ಹತ್ತಿದೆವು. ಮಹಿಷಾಸುರನ ಭವ್ಯ ಮೂರ್ತಿ ನಮ್ಮ ಹೋಳಿಹುಣ್ಣಿಮೆಯ ಕಾಮಣ್ಣನ ನೆನಪು ತರುವಂತಹದು. ಸಂಜೆಗೆ 'ಕನಕಾಪೇ ಗಂಗಲೆ' (Zoo Garden), ಜಗನ್ಮೋಹಿನಿ ಪ್ಯಾಲೆಸ್ ನೋಡಿದ್ದಾಯಿತು. ರವಿವರ್ಮನ ಚಿತ್ರಗಳನ್ನೆಲ್ಲ ಹಿರಿಯಾಕಾರದಲ್ಲಿ ಕಂಡಾಗ, ಆನಂದ ಕೋಡಿಯೊಡೆದು ಹರಿಯಿತು. ದೇವಪೂಜೆಗೆ, ಪೂಜೆಯ ಸಾಮಗ್ರಿ— ಹಚ್ಚಿದ ನೀರಾಜನ ಓಯ್ಯುವ ಮುತ್ತೈದೆಯೊರ್ವಳ ಚಿತ್ರವು ವಾಸ್ತವತೆಯ ಮೂಲಕ ಜೀವಕಳೆಯಿಂದ ತುಂಬಿ ಪರಿಪೂರ್ಣನೆನಿಸಿತು. 'ಚಲಚ್ಚಿತ್ರ ಪಟದಲ್ಲಿ ಕನ್ನಂಬಾಡಿ ಅಣೆಕಟ್ಟು, ದೀಪೋತ್ಸವ ನೋಡಿರುವೆವು; ಮತೇಕೆ ಈ ಅನಾವಶ್ಯಕ ಖರ್ಚುಕಕ್ಷಿ?' ಎಂದು ಜುಕ್ಕು ಜುಲುಮೆಯಿಂದ ಕಾಲುಹಾಕುತ್ತ ಸಾಗಿ, ಅಲ್ಲಿಗೆ ಒಳಿಂಕ್ಕೆ ತಲುಪಿದಾಗ, ಚಿತ್ರ, ದೃಶ್ಯಕ್ಕೂ ಸೈಜತೆಗೂ ಇರುವ ಅಜಗಜಾಂತರವು ನಮ್ಮನ್ನು ಮೂಗ್ಧರನ್ನಾಗಿಸಿತು. ಬರುವಾಗ ನಾವಿನಲ್ಲಿ ಒಂದು ವಿಹಾರ ಸಾಧಿಸಿತು. ಬಹಳ ಹಣವಿಟ್ಟುಕೊಂಡ ನಮ್ಮ ವೈಲ್ವಿಚಾರಕ ಮಹನೀಯರು, ಅಂಜಿಕೆಯಿಂದ (ಮುಳುಗುವ)? 'ಮನೋಜವಂ ಮಾರುತತುಲ್ಯ ವೇಗಂ' ಎಂಬ ಮಂತ್ರ ಪಠಿಸಹತ್ತಿದರು. ವಿನೋದಕ್ಕಾಗಿ ಆಗ ಅವರು ಹಾಗೆ ನುಡಿದಿದ್ದರೂ, ನಗೆಯ ತುಷಾರ ಎಲ್ಲರಲ್ಲಿ ಚಿಮ್ಮದಿರಲಿಲ್ಲ. ಮುಂದೆ ಅವರು, ಕನ್ನಡವನ್ನಷ್ಟೇ ಬಲ್ಲ ಒಬ್ಬನ ಕತೆ ಹೇಳಿದರು. ದಾರಿಯಲ್ಲಿ ಅವನಿಗೆ ಹಿಂದಿಯನ್ನಷ್ಟೇ ಬಲ್ಲ ಬೇರೊಬ್ಬ ಸಂಧಿಸಿದನಂತೆ. ಕನ್ನಡ ಮಾತಾಡುವನನಿಗೆ ಎದುರಿಗೆ ಹೊರಟ ಪ್ರಾಣಿ ಆನೆ ಎಂಬುದು ತಿಳಿದಿರಲಿಲ್ಲವಾದ್ದರಿಂದ 'ಇದೇನು?' ಎಂದು ಕೇಳಿದ. ಹಿಂದಿ ಬಲ್ಲವನು 'ಕ್ಯಾ ಪೂಛತೇ ಮೇರಿ?' ಎಂದು ಉತ್ತರಿಸಿದ. ಕನ್ನಡಿಗನು, 'ಇದು ಕ್ಯಾ ಪೂಛತೇನ ಮರೀನಾ? ಇದರ ತಾಯಿ ಎಸ್ಟು ದೊಡ್ಡದಿದ್ದೀತಪ್ಪಾ!' ಎಂದು ಉದ್ಗರಿಸಿದನಂತೆ!

ಮರುದಿನ ಲಲಿತ ಮಹಲಿನ ಸಂದರ್ಶನ! ಪೌರ್ವಾತ್ಯ ಪಾಶ್ಚಿಮಾತ್ಯ ಕಲಾಭಿರುಚಿಯ ಸಮನ್ವಯವನ್ನಿಲ್ಲಿ ಕಾಣಬಹುದು. ಐತಿಹಾಸಿಕ ಘಟನೆಗಳೂ ಇಲ್ಲಿ ರಮ್ಯವಾಗಿ ಚಿತ್ರಾರ್ಪಿತವಾಗಿವೆ. ಟೀಪುವಿನ ಮಕ್ಕಳು ಆಂಗ್ಲ ಅಧಿಕಾರಿಗಳ ಕೈಗೆ ಸಿಕ್ಕಾಗಿನ ನೋಟವು ಕರುಳು ಕೊರೆಯುವಂತಹುದು! ಶೂರನಾದ ಆ ದೊರೆಯ ಅಪಜಯದ ಅವಮಾನಕ್ಕೆ ಮುಕ್ಕಳ ವಿರಹದ ಬರೆ! ಬಾಲ್‌ರೂಮ್‌ನ್ನು ಕಂಡಾಗಂತೂ ನಮ್ಮ ಹಿರಿ ಶಿಕ್ಷಕರು ಡಾನ್ಸಿನ ಪೋಜನ್ನೇ ಕೊಟ್ಟು ನಿಂತರು. ಸಂಗೀತ ಇದ್ದರೆ ಕಾಣಿಯಬಹುದಿತ್ತೇನೋ—ಎಂದು ಪುಣ್ಯಕ್ಕೆ ಯಾರೂ ಕುಚೇಷ್ಟೆ ಮಾಡಲಿಲ್ಲ! ಹಿರಿಯರಿಗೆ ಅಮರ್ಯಾದೆ ಯಾರು ಮಾಡಿಯಾರು? ಆದರೆ ನಗೆಯ ಸೀಮೆ ಮೀರಿ ಉಕ್ಕಿತು. ಆ ಮಾತೇ ಬೇರೆ.

ಗುಲಾಬಿವರ್ಣರಂಜಿತ ಸೂರ್ಯರಶ್ಮಿಗಳು ಅದೇ ಭೂವಲಯವನ್ನು ಅಪ್ಪುಲ್ತಿರುವಾಗ, ಶ್ರೀರಂಗಪಟ್ಟಣಕ್ಕೆ ನಮ್ಮನ್ನೊಯ್ಯುವ ಬಸ್ಸು ಛತ್ರದ ಮುಂದೇ ಬಂದು ದಾರಿ ಕಾಯುತ್ತಿತ್ತು. ಫಲ್ಗುಣೀ ವೇಳೆಯಲ್ಲಿ ಎಲ್ಲರೂ ತಿಂಡಿ ತೀರ್ಥದ ಕಾರ್ಯಕಲಾಪ ಮುಗಿಸಿ ಹೊರಟೆವು. ದಾರಿಯಲ್ಲಿ ನಮ್ಮಲ್ಲಿಯ ಉತ್ಸಾಹಿ ಗೆಳೆಯನೊಬ್ಬ—ಸಾಹಿತಿಯ ವ್ಯಾಖ್ಯೆ ಮಂಡಿಸಿ—'ನೂತುಗಾರಿಕೆ, ಬರೆಸಣಿಗೆಯುಳ್ಳ, ಹೆಚ್ಚಾದ ಓದು' ಇಲ್ಲದವನು ಸಾಹಿತಿಯಾಗಲಾರ—ಎಂದು ಆಹ್ವಾನಿಸಿ ಹಲವಾರು ವಿಖ್ಯಾತ ಜನರನ್ನು ಈ ತರ್ಕದ ತಿರುಗಣಿಯಲ್ಲಿ ತಿರುಗಿಸಿಬಿಟ್ಟ. ಮೊದಲು ಹಗುರಾದ ಮಾತು ಕ್ರಮೇಣ ಬಲಿತು ಬಲಿತು ವಿತಸಕ್ಕಿಟ್ಟುಕೊಂಡಿತು. ಕೊನೆಗೆ ಒಬ್ಬಿಬ್ಬರ ಬುದ್ಧಿವಂತಿಕೆಯಿಂದ ವಿಷಯ ಮರೆಸಿ ಬತ್ತಳಿಕೆಯಲ್ಲಿ ಹಾಕಿಡಬೇಕಾದರೆ ಸಾಕು-ಸಾಕಾಯಿತು! ಭಲೆ ಸಾಹಿತ್ಯದ ಪ್ರಭಾವವೆ! ಇಂತು ಗಂಗನಾಥ ಸ್ವಾಮಿಯ ದಿವ್ಯಮಂದಿರ ಹೊಕ್ಕಾಗ 'ಕಂಗಳಿದ್ದಾ ಶ್ರತಿಕೊ, ಕಾವೇರಿ ರಂಗನ ನೋಡಪ' ಎಂಬ ದಾಸರ ಉಕ್ತಿಯ ಮಹಿಮೆ ನಿಜವಾಗಿ ಪರಿಣಮಿಸಿತು. ಕಾಯಿ ಒಡೆಸಿ ಕರ್ಪೂರದಾರತಿ ಬೆಳಗಿಸಿ ಮುನ್ನಡೆವಾಗ,—ಟೀಪುವಿನ ಕೋಟೆ, ಅವನು ಆಂಗ್ಲ ಸೆರೆಯಾಳುಗಳನ್ನು ಹಾಕಿದ ಡಂಜನ್ ನೋಡಿದೆವು. ಬಳಿಯಲ್ಲಿ 'Here the dead body of Tippu was found' ಎಂಬ ಅಂಕಿತದ ಕಲ್ಲುಬರಹ ಕಂಡೆವು. ವೀರಾಗ್ರೇಸರನೆನಿಸಿ ವೀರಮರಣವನ್ನೈದಿದ ಆ ಮಹಾವೀರನಿಗೆ ಈ ಮೈಲುಗಲ್ಲೇ ಸ್ಮಾರಕವೇ—ಎಂದು ಕೆಡುಕೆನಿಸಿತು. ಟೀಪು, ಹೈದರ, ಅವನ ಪತ್ನಿಯರ ಗೋರಿಗಳನ್ನು ನೋಡಿ ದರಿಯಾ ದೌಲತ್ತಿನ ಏಸಿರಿಗೆ ಮಾರುಹೋಗಿ, ಜುಮ್ಮಾಮಸೀದಿಯ ಅಸಂಖ್ಯಾತ ಪಾವಟಿಗೆ ಹತ್ತಿದೆವು. ಮೊದಲು ತಲೆಗೆ ಚಿತ್ರ ಬರುವಂತಾಗಿದ್ದರೂ, ಮುಂದೆ ತುದಿಮುಟ್ಟಿದಾಗ ಅಲ್ಲಿಯ ಅಂದವಾದ ವಿಸ್ತೃತ ನೋಟ—ಚಂದ್ರಾಪೀಡನ ಕಿನ್ನರಮಿಥುನದ ದರ್ಶನದ ಆನಂದ ನೆನಪಿಗೆ ತಂದುಕೊಟ್ಟಿತು. ಸರಿ.

"Sceptre and Crown must tumble down and with dust be equal made" ಎಂಬ ಕರ್ಲೆ ಕವಿಯ ವೇದಾಂತ ನೆನಸಿಕೊಂಡು ಐತಿಹಾಸಿಕಸಾಮ್ರಾಜ್ಯ ಬಿಟ್ಟುಕೊಟ್ಟು ಮುಂದುವರಿದೆವು.

ಮನಸ್ಸಿಲ್ಲದಿದ್ದರೂ ಹಲವರು ಊದಕಮಂಡಳದ ಮೋಟರ ಪ್ರವಾಸಕ್ಕೆ ಅಣಿಯಾದರು ಮರುದಿನ. ಹಲವರಿಗೆ ನೂರು ಮೈಲು ಪ್ರವಾಸ ತಡೆಯಲಿಲ್ಲ. ತಲೆತಿರುಗಿ ಬೀಳುವಂತೆನಿಸಿತು ನಾಲ್ಕು hairpin bendsನಲ್ಲಿಯಂತೂ ಅವರನ್ನು ದೇವರೇ ಕಾಪಾಡುವಂತಾಗಿತ್ತು. ಅಂತಹ ಅಂಕುಡೊಂಕು ಮಾರ್ಗ! ಅಲ್ಲಲ್ಲಿ ಕೊಳ್ಳದಲ್ಲಿ, ಗುಡ್ಡದಡಿಯಲ್ಲಿ ನೀಲಗಿರಿ, ಸಿಂಕೋನಾ, ಚಹಾ ತೋಟಗಳು ಕಣ್ಣಿಗೆ ಬಿದ್ದುವು. ಚಹ ಬೆಳೆಸಲು ಸಾಲುಸಾಲಾಗಿ ಹಚ್ಚಿ ಬೆಳೆಸಿದ ಉನ್ನತ ವೃಕ್ಷಗಳು ತಲೆಕೊಡಹುವ ದೃಶ್ಯವು ಮೋಹಕವೇ ಸೈ. ಪರ್ವತ-ಶ್ರೇಣಿಗಳಷ್ಟನ್ನಲ್ಲದೇ ನಮ್ಮನ್ನೂ ಮುತ್ತಿನ ಮೋಡಗಳನ್ನು ಕಣ್ಮುಚ್ಚಿ ಕಂಡ ನಮಗೆ ಸೋಜಿಗವೆನಿಸದಿರಲಿಲ್ಲ. ದೂರದ ಡಾಂಬರ ಬೀದಿಗುಂಟ, ಪರ್ವತಾನಳಿಯಲ್ಲಿ ಮೇಲೆ ಕ್ರಮಿಸುತ್ತಿದ್ದ ಬಸ್ಸು ಇಲಿಯ ಮರಿಯಂತೆ ತೋರುತ್ತಿತ್ತು. ಒಟ್ (ಒಂದು) ಕಿತ್ ಮಂದಿರ ಎಂಬ ಶಬ್ದೋತ್ಪತ್ತಿಗೆ ನಮ್ಮ ಸಂಶೋಧಕರು ತಲೆಹಾಕುವಾಗ ಊದಕಮಂಡಲ ಬಂದೇ ಬಿಟ್ಟಿತು. ಅಲ್ಲಿಯ ಸಿಮ್ಸ್‌ಪಾರ್ಕ್, ದೊಡ್ಡ ಬೆಟ್ಟ ಪೀಕ್ ಕಂಡು ಮನಸ್ಸು ಹರುಷಸಾಗರದಲ್ಲಿ ಲೋಲಾಡಿತು. ಹಲವಾರು ಸಂಸ್ಥಾನಿಕರು (ರಾಜಪ್ರಮುಖರೆನ್ನಿಬೇಕಾದರೆ!) ಬೇಸಗೆಯಲ್ಲಿ ಬೀಡುಬಿಡುವುದಕ್ಕೆಂದು ಕಟ್ಟಿಸಿಕೊಂಡ ಕಬ್ಬಡಗಳೇ ಊಟಿಯು. ಆರೋಗ್ಯಧಾಮವೆಂಬುದಕ್ಕೆ—ಒಳ್ಳೇ ನಿದರ್ಶನಗಳು. ಅವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿ ಕುನ್ನೂರಿಗೆ ಪ್ರಯಾಣ ಬೆಳೆಸಿದೆವು.

ಕಾಶಿಗೆ ಹೋಗಿ ವಿಶ್ವೇಶ್ವರನನ್ನು ಕಾಣದೆ ಬಂದ ಹೆಜ್ಜನ ಗತಿ ಕುನ್ನೂರ ಕಾಣಧಿದ್ದರಾಗುವುದೆಂದು ಉಸಿರಿದರೆ, ಓದುಗರು ನನ್ನನ್ನು ಬಹಳ ಹಳೆಯ ಲಿಕ್ಕಿಲ್ಲ. ಅದರ ರೈಲುಪ್ರವಾಸವು ಚಿಕ್ಕದಿದ್ದರೂ ಕಣ್ಣಿಗೆ ಚಿರಂತನ ಉನ್ಮಾದದ ಹಬ್ಬ. ನುಲಿಗಳ ಮಾಲೆಯಲ್ಲಿ ಸುತ್ತು ಸುತ್ತು ಹಾಕಿ ಒನಪು ಒಯ್ಯಾರದಿಂದ ಹೊರಡುವ ರೈಲು ಸೌಂದರ್ಯದಲಗರವೇ! ಅಳವಾದ ಕೊಳ್ಳದ ವಿಸ್ತಿರ್ಣವನ್ನು ನೋಡಲು ಈಶ್ವರ ನಿರ್ಮಿತ ಕಣ್ಣು ಸಾಲವು ಎಂದನಿಸಿದರೆ ಸಾಸವಲ್ಲ! ಅಲ್ಲಲ್ಲೇ ಕೊಳ್ಳದಲ್ಲಿ ಅಚ್ಚು ಕಟ್ಟಾದ ಸಿರಿವಂತರ ಅಂದವಾದ ಕಬ್ಬಡಗಳು. ಪಾವಿಟ್ಟಾದ ಮಾಟ ಮನೆಗಳನ್ನವು ಹೋಲುವಂತೆನಿಸಿತು. ಉದಾಹರಣೆಗೆ ತೀರಿಸಿಯೇ, Pastures' Institute, Food nutrition research Department ಸಂದರ್ಶಿಸಿದೆವು. ಬಿಳಿ ಇಲಿ, ಮಂಗಗಳ ಮೇಲಿನ ಪ್ರಯೋಗಗಳು ನಿಜವಾಗಿಯೂ ಶಾಸ್ತ್ರೀಯ ದೃಷ್ಟಿಯಿಂದ ಕುತೂಹಲಕಾರಿಯೇ ಆದವು. ಜಪಾನೀ ಪದ್ಧತಿಯಂತೆ ರೇಷ್ಮೆ ಹುಳು ಬೆಳೆಸುವ ಸಂಸ್ಥೆಯ ಕಾರ್ಯವೂ ಮಹತ್ತರವಾಗಿ ತೋರಿತು.

ಊಟಿಯಿಂದ ಮರಳಿ ಮೈಸೂರಿಗೆ ಬಂದ ಮೇಲೆ, ನೇರವಾಗಿ ಶ್ರವಣಬೆಳ್ಗೊಳಕ್ಕೆ ನಮ್ಮ ಪಯಣ ಸಾಗಿತು. ಮೋಟರ್ ಡ್ರೈವರ್. ವ್ಹರನ ತಜಾಗರೂಕತೆಯಿಂದಲೊ, ದಾರಿಯ ಅಂದಗೇಡಿತನದಿಂದಲೊ, ಪ್ರವಾಸವಷ್ಟು ರುಚಿಕರವಾಗಲಿಲ್ಲ. ಆ ಡ್ರೈವ್ವರನ ದೌಲತ್ತಿಗೇನೊ ಕೊರತೆ ಇರಲಿಲ್ಲ. ಇಂಗ್ಲಿಶ್ ಬಲ್ಲವ. ಮುಕ್ಕಳಲ್ಲಿ ಒಬ್ಬನು ಎಂಜಿನಿಯರನಂತೆ! ಇನ್ನೊಬ್ಬ ಬಿ. ಎ. ವರ್ಗದಲ್ಲಿ ಇರುವನಂತೆ. ಮೇಲಾಗಿ ತಿಂಗಳಿಗೆ ೨೦೦ ರೂಪಾಯಿ ವರಮಾನದ ಶ್ರೀಮಂತ ಮನೆಗಳು. ಹೀಗಿದ್ದರೂ ಡ್ರೈವ್ವಿಂಗಿಗೆ ಅವನು ಮೊರೆ ಹೋದುದೇಕೆ—ಎಂದು ಸಂಶಯಪಟ್ಟು ಕ್ಷಣ ಕಾಲ ತರ್ಕದ ತಂತಿಯನ್ನಾಶ್ರಯಿಸಿ ಥಕ ಥಕ ಕುಣಿಯಲುನುವಾಗಿದ್ದೆ. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದೆಂಬ ನಾಣ್ಣುಡಿ ಅವನನ್ನು ಮೋಹಿಸಿದ್ದೀತೆ? ಅಥವಾ ಅವನ ಅಸಂಖ್ಯ ಚಟಗಳಿಗೆ ಈ ವ್ಯವಸಾಯ ಹಣ ಪೂರೈಸದಿದ್ದರೆ ಏನಚ್ಚರಿ? ಇರಲಿ. ಪ್ರಸ್ತುತವನುಸರಿಸೋಣ! ಇಂತಹ ಡ್ರೈವ್ವರನ ಕೌಶಲ (?) ದಿಂದಲೆ ಎಲ್ಲರೂ ಕೆಟ್ಟ ನಾರಿನುನ್ನು ದಾಟಿ ಊರು ಮುಟ್ಟಿದೆವು. ಮನದಲ್ಲಿ ದೈವವನ್ನು ಪ್ರಶಂಸಿಸಿದೆವು.

ಬೆಳುಕೊಳ್ಳದ ಊರನ್ನಷ್ಟು ಪರಿಕಿಸದಲೇ ನಾವು ಊಟ. ವಿಶ್ರಾಂತಿಯ ನಂತರ ಗೊಮ್ಮಟೇಶ್ವರನ ಸಾನ್ನಿಧ್ಯಕ್ಕೆ ಬಂದೆವು. ಎಂತಹ ಅಜಾನುಬಾಹು ಮೂರ್ತಿ! ಹಸುಗೂಸಿನ ಪ್ರಸನ್ನ ಮುಖ್ಯ ಮುದ್ರೆ. ಕೂಸಿನದೇ ೧೮೦ ಮಿಡಿ ತಿದ್ದಿ ಬೆಳಸಿದ ಅನೃತ್ತಿಯದು. ಯೋಗಾವಸ್ಥೆಯಿಂದ ಇನ್ನಿಷ್ಟು ಗಾಂಭೀರ್ಯ. ಸುಮಾರು ೫೬ ಅಡಿಯ ಆ ಮೂರ್ತಿಯನ್ನು ಎಷ್ಟು ಯಾರು ನೋಡಿದರೂ ಎಲ್ಲಿಯ ತೃಪ್ತಿ? ಸಮಗ್ರ ಭೂಮಂಡಲದಲ್ಲಿಯು ಒಣ ಹೆಮ್ಮೆಯ ಹುಚ್ಚು ಹಟದ ಹೋರಾಟ ನೋಡಿ ರೋಸಿ ಸ್ಥಿತಪ್ರಜ್ಞಾವಸ್ಥೆಯಲ್ಲಿ ನಿಂತ ಆ ಮೂರ್ತಿಯ ಭಂಗಿ ನಿಜವಾಗಿಯೂ ಮನೋಹರವಾಗಿ ಗೋಚರಿಸಿತು. ಆಗ ಶಿಲ್ಪಿ ಮಹಾಕವಿಯ ಅಧಿಮಾಂಡಿಯಸ್ ಸುನೀತ, ಇಜಿಪ್ತಿನ ಪಿರ್ಯಾಮಿಡ್ಡುಗಳು ಮನದಾಗಸದಲ್ಲಿ ಮಿಂಚಿ ಹೋದುವು. ಏನೇ ಆಗಲಿ, ೬೦ ಸೋಪಾನ ಏರಿ ಮೈ ನುಗ್ಗುನುಗ್ಗು ಮಾಡಿಕೊಂಡರೂ ಆನಂದಕ್ಕೇನೂ ಭಂಗಬರಲಿಲ್ಲ. ಇಂತಹ ಮಹಾಮೂರುತಿಯ—೧೪ ವರ್ಷಕ್ಕೊಮ್ಮೆಯು ಮಹಾ ಮಸ್ತಕಾಭಿಷೇಕಕ್ಕೆ ಲಕ್ಷಾಂತರ ಜನರು ಕೂಡುವುದು ಏನು ಹೆಚ್ಚಿನ ಮಾತು? ಶಿಲಾಶಾಸನದ ಕೆಳಗಿನ ಬರಿಹ ಓದಿದಾಗ ಚಾವುಂಡರಾಯ ಮಂತ್ರಿಯ ಕೈವಾಡ, (ಶಿಲ್ಪಿ ಅರಿಷ್ಟನೇಮಿಯೆಂಬನ ಬೇರೆ ಇದ್ದರೂ) ಗಂಗರಾಜರ ವೈಭವ, ಬಾಹುಬಲಿ (ಗೊಮ್ಮಟೇಶ್ವರ) ಭರತರ ದ್ವಂದ್ವಯುದ್ಧ, ತದನಂತರದ ತಮ್ಮನ ವೈರಾಗ್ಯಭಾವ—ಎಲ್ಲ ಐತಿಹಾಸಿಕ ಹಿನ್ನೆಲೆಯಲ್ಲಿ ಸುಳಿದುಹೋದವು. ಸಾವಿರ ವರುಷದ ಹಿಂದಿನ ಉಜ್ವಲ ಸಂಸ್ಕೃತಿ ಮನಸ್ಸಿನಲ್ಲಿ ಭವ್ಯತೆ ದಿವ್ಯತೆ ಹುಟ್ಟಿಸಿದುವು.

ಹಲವು ಗೆಳೆಯರ ಆಗ್ರಹದ ಮೇರೆಗೆ ಈ ವಿಂಧ್ಯಗಿರಿಯನ್ನು ಬಿಟ್ಟು ಮುಂದೆ ಚಂದ್ರಗಿರಿಯೆಂಬ ಎದುರಿಗಿನ ಕಲ್ಲಿನ ಗುಡ್ಡ ಹತ್ತಿದೆವು. ಇತಿಹಾಸ, ಸ್ಥಳಪುರಾಣ, ಅರಿಷ್ಟನೇಮಿಯ ಕಲೆ, ಬೆರಳಿನಲ್ಲಿ ಇಡ್ಲೀಡು ಮಾಡಿದ ಅವನ (ದೃಷ್ಟಿತೆಗೆಯುವುದೇನೊ)! ವೈಶಿಷ್ಟ್ಯ—ಚರ್ಚಿಸುತ್ತ ನಡೆದಾಗ ಒಬ್ಬಿಬ್ಬರು ಚಹಾ ಪ್ರೇಮಿಗಳು ಬೇಸತ್ತು—ಬಸುತರ ಉಳಿದವರ ಸೊಳ್ಳು ಹರಟೆಗೆ—ಅಂಗಡಿ ಎಡೆಗೆ ಧಾವಿಸಿದರು. ಆತಿ ಉತ್ಸಾಹದ ಕೆಲವರು ಕತ್ತಲೆಯಾಗಿದ್ದರೂ

ಜ್ಯಾಪರಿಯ ಸಹಾಯದಿಂದಲಕ್ಕನೆ ಬಸದಿ, ಶಾಂತಿನಾಥ ದೇವಾಲಯ, ೨೪ ತೀರ್ಥಂಕರರ ಪ್ರತಿಮೆ ನೋಡಿ ಅತೀವ ತೃಪ್ತಿಪಟ್ಟು ಇಳಿದ ಸ್ಥಳಕ್ಕೆ ಮರಳಿದರು.

ಶ್ರವಣ ಬೆಳುಕೊಳದ ನೆನಪು ಮಸಳಿಸುವಾಗಲೇ ನಮ್ಮ ಬಾಡಿಗೆಯ ವಾಹನವು ಎಲ್ಲರನ್ನೂ ಬೇಲೂರಿಗೆ ಚೆನ್ನಕೇಶವಸ್ವಾಮಿಯ ಪಾದದಡಿಗೆ—ತಂದಿತ್ತು. ಮುಂಜಾವು ಹತ್ತಕ್ಕೆ ಅಲ್ಲಿಗೆ ಮುಟ್ಟಿದಾಗ ಭಾವುಕರು ಮೊದಲು ದೇವಾಲಯ ಸಂದರ್ಶಿಸಿದರು. ಉಳಿದವರು ಪ್ರಥಾಪ್ರಕಾರ ಇಂಟರ್‌ವ್ಹಲ್ಲಿನ ಚಹಕ್ಕೆ ಸನ್ನದ್ಧರಾಗಿ ಆ ಕಾರ್ಯ ಮುಗಿಸಿದರು. ತಾಸಿನ ನಂತರ ಸಮಾಚೀನ ಊಟ. ಮಧ್ಯಾಹ್ನ ನಾಲ್ಕಕ್ಕೆ ಮಾರ್ಗದರ್ಶಕನ ಸಹಾಯದಿಂದ ಗುಡಿಯ ಅಂತರಂಗ ಬಹಿರಂಗ ಕಂಡು ಮೂಕ ವಿಸ್ಮಿತರಾದೆವು. ಶಿಲಾಬಾಲಿಕೆಯರಂತೂ ಎಂತಹ ಅರಸಿಕರನ್ನೂ ದಂಗುಬಡಿಸುವರು. ಕಲ್ಲಾಗದೆ ಮೇಣದ ಮೂರ್ತಿಗಳೇ ಅವು-ಅನ್ನುವ ವಿನಯ-ನಾಚಿಕೆ-ಕಲಾಪ್ರೌಢಿಮೆ ಕಂಡು ಹಸಿವೆ ನೀರಡಿಕೆ ಮರೆತರೇನು ತಪ್ಪು? ಕನ್ನಡಿ ನೋಡುವ ಬಾಲೆ, ಮುಳ್ಳು ತೆಗೆಯಿಸಿಕೊಳ್ಳುವವಳು, ಉಟ್ಟ ವಸ್ತ್ರದಲ್ಲಿ ಜೇಳಿತ್ತೆಂದು ಝಾಡಿಸಿದಾಗಿನ ಭಾವಪೂರ್ಣ ಮುದ್ರೆಯುಳ್ಳವಳು, ಭರತನಾಟ್ಯದ ಭಂಗಿ ಪ್ರದರ್ಶಿಸುವ ಅನೇಕರನ್ನು—ಎಂದೂ ಯಾರೂ ಮರೆಯರು. ಕೆತ್ತನೆಯ ಕುಸುರಿನ ಕೆಲಸ ಇಲ್ಲಿ ಉಜ್ವಲ. ವಿವಿಧ ಗೋಪುರ, ರಾಮಾಯಣ-ಭಾಗವತ-ಮಹಾಭಾರತದ ಅಪಮ್ಯ ಸನ್ನಿವೇಶಗಳು ಚಿರಂತನ ಸ್ಫೂರ್ತಿಯ ಆಗರ. 'ಶಿಲೆಯಲ್ಲವಿದು ಕಲೆಯ ಒಲೆಯು' ಎಂಬ ಕೆ. ವಿ. ಪುಟ್ಟಪ್ಪನವರ ಮಾತೇ ನಿಜ—ಎಂದುಸುರದೆ ವಿಧಿ ಇಲ್ಲವೆನಿಸುವುದು. ಮುಂದೆ ಹಳೇಬೀಡು ಮರುದಿನ ಕಂಡರೂ ಇದರದೇ ಇನ್ನಿಷ್ಟು ಭವ್ಯ ದಿವ್ಯ ಅವತಾರವದು ಎಂದು ಮನವರಿಕೆಯಾಗದೆ ಹೋಗಲಿಲ್ಲ.

ಹಣದ ಕೊರತೆ, ಎಲೆ ಅಡಿಕೆ ತಂಬಾಕು ಸುಣ್ಣದ ಕೊರತೆ ಏನೂ ಆಗಲಿಲ್ಲವೆಂದು ಮೇಲ್ವಿಚಾರಕ ಗೆಳೆಯರು ಹರಟುತ್ತ ಸಾಗಿದಾಗ, ಎಲ್ಲ ಕಲೆಗಳ ಅವಾಸವನ್ನು ಹಿಂದೆ ಬಿಟ್ಟೆನೆಂಬ ಹಳಹಳಿಯೇ ಉಳಿದವರ ಮನವನ್ನು ಆವರಿಸಿ ಕ್ಷಣಕಾಲ ಉದ್ವಿಗ್ನತೆ ಉಂಟು ಮಾಡಿತು. 'ಜೀವನವೇ ಪ್ರವಾಸ; ಪ್ರವಾಸವೇ ಜೀವನ' ಎಂಬ ಸಿದ್ಧಾಂತವನ್ನು ನಮ್ಮ ಮುಂದಾಳು ಶಿಕ್ಷಕರು ಮಂಡಿಸುವಾಗ ಮೋಟರು ಅರಸಿಕೆರೆ ತಲುಪಿತು. ವಾಯುವೇಗದಿಂದಲ್ಲ! ತನ್ನ ವೇಗದಿಂದಲೆ! ಅರಸಿಕೆರೆಯಿಂದ ಮುಂದೆ ಧಾರವಾಡದ ವರೆಗೆ ಹೆಚ್ಚಾಗಿ ಇಸ್ಪೇಟಿನ ಆಟವೆ ಹಲವರಿಗೆ ಆಧಾರವಾದೂ ಒಬ್ಬಿಬ್ಬ ಭಾವಜೀವಿಗಳಿಗೆ ಮಾತ್ರ ಈ ಯಾತ್ರೆಯ ರಸನಿಮಿಷಗಳು ವರ್ಡ್ಸ್‌ವರ್ಥ್ ಮಹಾಕವಿಗಳು:

"For oft, when on my couch I lie
In vacant or in pensive mood,
They flash upon that inward eye
which is the bliss of solitude"

ಎಂಬ ವಿಚಾರ ಸರಣಿಯನ್ನೇ ನೆನಪಿಗೆ ತಂದುಕೊಟ್ಟಿವು. ನಿಜವಾದ ಸುಂದರ ವಸ್ತುಗಳು ಮೂರಳಿ ಮರಳಿ ಮಿಂಚಿ ನಿರಂತರ ಹರುಷ ಹುಟ್ಟಿಸುವುದು ತೀರ ಸಹಜವಲ್ಲವೇ?

(ಕಂಗಿನೆಯು ಪುಟದಿಂದ ಬಂದುದು)

ವೇದಶಾಸ್ತ್ರಗಳಲ್ಲಿ ಒಳ್ಳೇ ನಿಷ್ಣಾತರು. ಜನಕಮಹಾರಾಜನ ಮೇಲೆ ತಮ್ಮ ಪ್ರಭಾವ ಚೆನ್ನಾಗಿ ಬೀರಿದ್ದರು. ಎಂತಲೇ ಉಳಿದ ಪಂಡಿತರು ಇವರ ಸಂಗಡ ವಾದಕ್ಕೆ ಹೆದರುತ್ತಿದ್ದರು. ಗಾರ್ಗಿಯ ಸ್ವಭಾವ ಸೇರಿಯಾಗಿದ್ದಿತು. ಹೆಂಗುಸಾದರೂ ಹೆದರುವ ಸ್ವಭಾವದವಳಾಗಿರಲಿಲ್ಲ. ಮೂಲ ನಿವಾಸಿಗಳ ಮೇಲೆ ಆರ್ಯರು ಮಾಡುವ ಅತ್ಯಾಚಾರ ಅವಳಿಗೆ ಸಹನವಾಗಲಿಲ್ಲ. ಮೂಲನಿವಾಸಿಗಳನ್ನು ದೈತ್ಯರೆಂದು ಕರೆದು ಪಶುಗಳಂತೆ ಅವರನ್ನು ಬೇಟೆಯಾಡುವ ಆರ್ಯರ ವೃತ್ತಿ ಅವಳಿಗೆ ಹೇಸಿಗೆಯನ್ನುಂಟುಮಾಡಿತ್ತು. ಅವಳು ಯಾಜ್ಞವಲ್ಕ್ಯರನ್ನೇ ಪ್ರಶ್ನಿಸಿದಳು: 'ಇವರನ್ನು ಕೇಳರಿಂದು ಹೀಯಾಳಿಸಿ ಹೊಡೆದೋಡಿಸುವುದು, ಕೊಲ್ಲುವುದು ಏತಕ್ಕಾಗಿ? ಅವರ ಮನೆ, ಅವರ ಹೊಲ-ಮನೆ, ಅವರ ದನಕರುಗಳು ನಿಮಗೆ ಬೇಕೆಂತಲೇ ಅಲ್ಲವೇ?'

ಯಾಜ್ಞವಲ್ಕ್ಯರಿಗೆ ಹೇಗೆ ಹೇಗೋ ಎನ್ನಿಸಿತು. ಗಾರ್ಗಿ ನುಡಿದದ್ದು ತೀರ ಸತ್ಯ. ಆದರೆ ಅದಕ್ಕೆ ಒಪ್ಪಿಕೊಂಡರೆ ತಮ್ಮ ಪದವಿ ಸ್ಥಿತಿ ಏನು? ಎಲ್ಲಿಗೆ ಹೋಗಬೇಕು? ತಮ್ಮ ಈ ಗುಟ್ಟನ್ನರಿತ ಅವಳನ್ನು ಹಾಗೇ ಬಿಡುವುದಾದರೂ ಹೇಗೆ? ಬಿಟ್ಟರೆ....! ಭವಿಷ್ಯ ಭೀಕರವೆನ್ನಿಸಿತು. ಕೂಡಲೇ ಸಿಟ್ಟಿನಿಂದ ನುಡಿದರು: 'ನೀನು ಇಷ್ಟ ದಿವಸ ವೇದಾಧ್ಯಯನ ಮಾಡಿದ್ದು ವ್ಯರ್ಥ. ನೀನು ಅನಾರ್ಯಳಂತೆ ಮಾತನಾಡುತ್ತಿರುವೆ. ನಿನಗೆ ಇನ್ನು ಮೇಲೆ ಯಾವ ಯಜ್ಞದಲ್ಲಿಯೇ ಆಗಲಿ, ಸಭೆಯಲ್ಲಿಯೇ ಆಗಲಿ, ಯಾವ ಸ್ಥಾನವೂ ಸಿಕ್ಕಲಾರದು.' ಅಂದಿನಿಂದ ಗಾರ್ಗಿಯು ಯಾಜ್ಞವಲ್ಕ್ಯರ ಆಶ್ರಮ ಬಿಡಬೇಕಾಯಿತು. ಇದು ನಮ್ಮ ಆರ್ಯರ ನೀತಿ!"

"ನೀನು ಹೇಳುವುದೆಲ್ಲ ನಿಜ ಕಿಟ್ಟೂ" ಎಂದರು ಗುಂಡೂಮಾವನೂ. "ಅದೂ ಇದೊಂದರಿಂದಲೇ ನೀನು ಈ ನಿರ್ಧಾರಕ್ಕೆ ಹೇಗೆ ಬಂದಿರುವೆ? ಅದೇ ಉಪನಿಷತ್ತಿನಲ್ಲಿ ಎನೆಯ ಅಧ್ಯಾಯದಲ್ಲಿ ಬರುವ ಅದೇ ಯಾಜ್ಞವಲ್ಕ್ಯ ಮತ್ತು ಅವರ ಹೆಂಡತಿ ಮೈತ್ರೇಯಿಯಂಬಲ್ಲಿಯ ಸಂಭಾಷಣೆಯನ್ನೇಕೆ ವಿಚಾರಿಸಬಾರದು? ಆದು ಅವರು ಅಧ್ಯಾತ್ಮ ವಿಷಯದಲ್ಲಿ ಎಷ್ಟು ಮುಂದುವರೆದಿದ್ದರೆಂಬುದನ್ನು ತೋರಿಸುತ್ತದೆ. ಯಾವುದೇ ವಿಷಯವಾಗಲಿ, ಆಗಿನ ಕಾಲದ ಪರಿಸ್ಥಿತಿಗಳನ್ನು ನೋಡಿ ನಿರ್ಧಾರಕ್ಕೆ ಬರಬೇಕು. ಮೊದಲನೆಯ ಸಾರೆ ಓದಿದಾಗ ನನಗೂ ಹಾಗೆಯೇ ಎನ್ನಿಸಿತ್ತು."

"ಅಹುದು ಗುಂಡೂಮಾವಾ, ಯಾವುದೇ ಆಗಲಿ, ಐತಿಹಾಸಿಕ

ದೃಷ್ಟಿಯಿಂದ ನೋಡಿದರೆ ಹೀಗೇನೂ ಆಗುವುದಿಲ್ಲ! " ಎಂದು ನುಡಿದರು ರಂಗಣ್ಣ. " ಈ ಯಾಜ್ಞವಲ್ಕ್ಯ ಮತ್ತು ಜನಕನಮಹಾರಾಜ ಇವರು ಇದ್ದ ಕಾಲವೆಂದರೆ ಸ್ವಲ್ಪ ಹೆಚ್ಚು-ಕಡಿಮೆ ರಾಮಾಯಣ ಕಾಲವೆನ್ನಬಹುದು. ಆನಂತರ ೯೦೦-೧೦೦೦ ವರ್ಷದನಂತರ ಕೌರವ-ಪಾಂಡವರ ಕಾಲ. ಎಂದರೆ ರಾಮಾಯಣ ಕಾಲ ಸರಾಸರಿ ೩-೪ ಸಾವಿರ ವರ್ಷಗಳ ಮೊದಲೆಂದು ಹೇಳಬಹುದು. ರಾಮಾಯಣ ಕಾಲದಲ್ಲಿ ಆರ್ಯರು ಭಾರತದಲ್ಲಿ ಇದೇ ಕಾಲೂರಕೊಡಗಿದ್ದರು. ಹೊಸದಾಗಿ ಬಂದ ಇವರಿಗೆ ಮೂಲನಿವಾಸಿಗಳು ಅದಷ್ಟು ವಿಘ್ನ-ಗಳನ್ನು ತಂದೊಡ್ಡಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ: ಎಂದಬಳಿಕ ಉಳಿದ ಉಪಾಯವೇನು? ಯುದ್ಧ ಮಾಡುವುದೇ. ಹಾಗೆ ಅದದ್ದು ಆಗಿನ ಕಾಲದಲ್ಲಿ ಅಷ್ಟೇ ಅಲ್ಲ; ಮುಸಲ್ಮಾನರು ಆನಂತರ ಪಾಶ್ಚಾತ್ಯರು ಬಂದಾಗ ಆದದ್ದೆಲ್ಲ ಅದೇ ರೀತಿಯಾಗಿಯೇ ಅಲ್ಲವೇ? History repeats itself ಎಂದು ಹೇಳುವುದು ಅದಕ್ಕಾಗಿಯೇ. "

ರಂಗಣ್ಣ ಹೇಳಿದ್ದು ಹದಿನಾರಾಣೆ ಸತ್ಯ" ಎಂದರು ಗುಂಡೂ ಮಾವಾ. "ಆರ್ಯರು ಬಂದಾಗ ಉತ್ತರದಲ್ಲಿ ಸುಪರ್ಣ, ನಾಗ, ಕಿರಾತ ಮುಂತಾದ ಮೂಲನಿವಾಸಿಗಳ ಪಂಗಡಗಳೂ, ದಕ್ಷಿಣದಲ್ಲಿ ರಾಕ್ಷಸ, ವಾನರ ಮುಂತಾದ ಪಂಗಡಗಳೂ ಇದ್ದಿರಬೇಕೆಂದು ಪುರಾಣ-ಗಳಿಂದ ಕಂಡುಬರುತ್ತಿದೆ. ಇವರು ಆರ್ಯರೊಡನೆ ಹೊಡೆದಾಡಿ ಸೋತು, ಕಡೆಗೆ ಸುಪರ್ಣರು ಪೂರ್ವಭಾರತದ ಕಡೆಗೂ, ಕಿರಾತರು ಹಿಮಾಲಯದ ಕಡೆಗೂ, ನಾಗರು ಮಧ್ಯಭಾರತದ ಕಡೆಗೂ ಹೋಗಿ ನೆಲಸಿರಬೇಕೆಂದು ತೋರುತ್ತದೆ. ಇದರಿಂದಲೇ ಮಧ್ಯಭಾರತದಲ್ಲಿಯೆ ನಾಗಪುರ, ಛೋಟಾನಾಗಪೂರ ಎಂಬ ಹೆಸರುಗಳು ಬಂದಿರಬಹುದು. ಆರ್ಯರು ಈ ಮೂಲನಿವಾಸಿಗಳನ್ನು ಹೀಯಾಳಿಸಿ, ಸುವರ್ಣ ಮತ್ತು ನಾಗ ಶಬ್ದಗಳಿಗೆ ಪಕ್ಷಿ ಮತ್ತು ಹಾವು ಎಂದು ಕೀಳು ಅರ್ಥ ಮಾಡಿ-ದ್ದರೂ ಮಾಡಿರಬಹುದು. ಅಥವಾ ಆ ಹೆಸರುಗಳು ಈಗಿನ 'ಕಾಳಿ', 'ಗೌರಿ' ಎಂಬಂತೆ ಹಾಗೇ ಹೆಸರುಗಳಿದ್ದರೂ ಇರಬಹುದು.

ರಾಮಾಯಣ ಕಾಲದಲ್ಲಿ ಇವರ ಸಂಗಡ ಇದ್ದ ಆರ್ಯರ ಸಂಬಂಧವೆಂದರೆ ಹೊಡೆದಾಟವಷ್ಟೇ ಎಂದು ತೋರುತ್ತದೆ. ಬ್ರಿಟಿ-ಶರು ಬಂದಾಗ ಇಲ್ಲಿ ಇದ್ದ ಪರಿಸ್ಥಿತಿ ಆಗಲೂ ಇರಬಹುದು. ಸುಪರ್ಣ ಮತ್ತು ನಾಗರ ನಡುವಿನ ದ್ವೇಷ ಪುರಾಣಪ್ರಸಿದ್ಧವಿದೆ. ಸುಪರ್ಣ ಪಂಗಡದ ರಾಜಕನ್ಯೆ ವಿನತಾ, ಎಷ್ಟೋ ದಿನ ನಾಗಪಂಗಡದ ಕದ್ರು-ವಿನ ದಾಸಿಯಾಗಿದ್ದಳು. ಕಡೆಗೆ ವಿನತಾಳ ಮಗ ಗರುಡನು ಅವಳನ್ನು ಮುಕ್ತಗೊಳಿಸಿದನು. ಅದರಂತೆ ದಕ್ಷಿಣದಲ್ಲಿಯೂ ವಾನರ ಪಂಗಡದ-ವರಿಗೂ ರಾಕ್ಷಸ ಪಂಗಡದವರಿಗೂ ವೈಮನಸ್ಸು ಇದ್ದೇ ಇತ್ತು. ಇದರಿಂದಲೇ ವಾನರರ ಸಹಾಯದಿಂದ ರಾಕ್ಷಸರನ್ನು ಸೋಲಿಸಲು ಆರ್ಯರಿಗೆ ಸಾಧ್ಯವಾಯಿತು. ಇದೆಲ್ಲ ರಾಮಾಯಣ ಕಾಲದ ಇತಿ-ಹಾಸ. ಆಮೇಲೆ ಸುಮಾರು ೯೦೦ ವರ್ಷಗಳನಂತರ ಮಹಾಭಾರ-ತದ ಕಾಲದಲ್ಲಿ ಈ ರೀತಿ ಕಂಡುಬರುವುದಿಲ್ಲ. "

" ರಾಮಾಯಣ-ಮಹಾಭಾರತ ಕಾಲಗಳಲ್ಲಿ ೯೦೦ ವರ್ಷಗಳ ಅಂತರವೇ? " ಎಂದು ಶೀನಪ್ಪ ಕೇಳಿದ.

ಗುಂಡೂಮಾವಾ ಹೇಳಿದರು: " ಇದೇನು ಶೀನು, ಈ ವಿಷಯ-ಗಳಲ್ಲಿ ಬಹಳೇ interest ತೆಗೆದುಕೊಂಡಂತೆ ತೋರುತ್ತದೆ. ಮಹಾ-ಭಾರತದಲ್ಲಿ ಉಲ್ಲೇಖವಿದೆ—ಅಭಿಮನ್ಯುವಿನಿಂದ ಕೊಲ್ಲಲ್ಪಟ್ಟ ಬೃಹ-ದ್ಬಲಕೋಸಲನು ಶ್ರೀರಾಮಚಂದ್ರನಿಂದ ಶಿಕ್ಷೆಯವನೆಂದು. ಒಬ್ಬೊ-ಬ್ಬರಿಗೆ ಸರಾಸರಿ ೩೦-೩೨ ವರ್ಷ ಹಿಡಿದರೂ ೯೦೦-೧೦೦೦ ವರ್ಷ-ಗಳಾಗುತ್ತವೆ. ಈ ಸಾವಿರ ವರ್ಷಗಳಲ್ಲಿ ಆರ್ಯರು ಭಾರತದಲ್ಲಿ ಸಾಕಷ್ಟು ಸ್ಥಿರವಾಗಿ ಕಾಲೂರಿದ್ದರೆಂದು ಹೇಳಬಹುದು. ಅದ್ದರಿಂದ ಜ್ಞಾನ ಮತ್ತು ತಮ್ಮ ಸಂಸ್ಕೃತಿಗಳನ್ನು ಬೆಳೆಯಿಸುವುದರಲ್ಲಿ ಹೆಚ್ಚು ನಿರತರಾಗಿದ್ದರು. ಆನಾರ್ಯರೊಂದಿಗೆ ಯುದ್ಧ ಮಾಡಿದೆ, ಅವರೊಂದಿಗೆ ಬೇರತು ಅವರಲ್ಲಿ ತಮ್ಮ ಸಂಸ್ಕೃತಿಯನ್ನು ಹೆಚ್ಚಿಸುವುದಕ್ಕಾಗಿ ಪ್ರಯತ್ನಿ-ಸಿದರು. ಇದಕ್ಕೆ ಬೇಕಾದಷ್ಟು ಉದಾಹರಣೆಗಳು ಮಹಾಭಾರತದಲ್ಲಿ ಸಿಗುತ್ತವೆ. ಅರ್ಜುನನು ನಾಗಕನ್ಯೆ ಉಲೂಪಿಯನ್ನು ಲಗ್ನಮಾಡಿ-ಕೊಂಡನು. ಜರತ್ಕಾರುವಿನ ಕಥೆಯೂ ಒಳ್ಳೇ ಪ್ರಸಿದ್ಧವಿದೆ ಅವನು ಲಗ್ನಮಾಡಿಕೊಳ್ಳದೇ ಇದ್ದದ್ದರಿಂದ, ಅವನ ಪಿತೃಗಳು ಅಧೋಗತಿಗೆ ಹೋಗುತ್ತಿದ್ದರು. ಅವರನ್ನು ಉದ್ಧಾರಮಾಡುವುದಕ್ಕಾಗಿ ನಾಗ-ರಾಜನಾದ ವಾಸುಕಿಯ ತಂಗಿಯನ್ನು ಲಗ್ನಮಾಡಿಕೊಂಡನು. ಇವರ ಮಗನೇ ಒಳ್ಳೇ ಹೆಸರಾದ, ಜನಮೇಜಯರಾಜನನ್ನು ನಾಗ-ಯಜ್ಞದಿಂದ ವಿಮುಖನನ್ನಾಗಿ ಮಾಡಿದ 'ಆಸ್ತಿಕ' ಋಷಿ. ಹೀಗೆ ಇನ್ನೂ ಎಷ್ಟೋ ಇವೆ. "

ಆಗಲೇ ರಾತ್ರಿ ಹತ್ತರ ಗಂಟೆಯಾಯಿತು. ಗುಂಡೂಮಾವಾ ಹೇಳಿದರು: " ಈ ವಿಷಯ ಯೋಚಿಸಿದಷ್ಟು ಹೆಚ್ಚೆಚ್ಚಾಗುತ್ತಲೇ ಹೋಗುತ್ತದೆ. ಇದರಲ್ಲಿ ನಮ್ಮ ಶಾಸ್ತ್ರಿಗೂ ಆಸಕ್ತಿ ಹೆಚ್ಚು. ಅವನೂ ಬಂದಾಗ ಇದರ ವಿಷಯ ಇನ್ನೊಮ್ಮೆ ಚರ್ಚಿಸೋಣ. "

ಆನಂತರ ಎಲ್ಲರೂ ಮನೆಯ ಕಡೆಗೆ ಹೊರಟೆವು. ಆದರೆ ನನಗೆ ಮಾತ್ರ ಗುಂಡೂಮಾವಾನಿಗೆ ಬಂದ ಆ ಪತ್ರದ ವಿಷಯವೇ ಯೋಚನೆಯಾಗಿತ್ತು. ' ಇವರ ಆ ಮಿತ್ರ ಅಮೃತಸರದಿಂದ ಪಂಜಾ-ಬದ ರಾಜಕೀಯದ ಬಗ್ಗೆ ಇಷ್ಟು ದೊಡ್ಡ ಪತ್ರ ಬರೆಯುವ ಕಾರಣ-ವೇನು? ಗುಂಡೂಮಾವಾನಿಗೆ ರಾಜಕೀಯದ್ದೂ ಹುಚ್ಚು ಇದೆಯೆ?

ಸಾಹಿತ್ಯವನವಿಹಾರ

ಕಳೆದ ಸಂಚಿಕೆಯ ಈ ವಿಭಾಗದಲ್ಲಿ ಈನೆಯ ವಿಹಾರವಾಗಿ "ಪಿಎಚ್. ಡಿ. ಪ್ರಬಂಧದಲ್ಲಿ ಒಂದು ಪ್ರಮಾದ" ಎಂಬ ವಿಷಯ ಬಂದಿದ್ದಿತಲ್ಲವೆ? ಅದರಿಂದ ಅಸಮಾಧಾನಗೊಂಡ ಡಾ. ಕೆ. ಎಂ. ಕೃಷ್ಣರಾವ್ ಎಂ. ಎ. ಪಿಎಚ್. ಡಿ. ಅವರು ಅದಕ್ಕೆ ಉತ್ತರರೂಪವಾಗಿ ಒಂದು ಚಿಕ್ಕ ಲೇಖನವನ್ನು ಬರೆದುಕಳುಹಿಸಿದ್ದಾರೆ. ಅದನ್ನು ಪ್ರಕಟಿಸಲೇಬೇಕೆಂದು ಅವರು ಅಪೇಕ್ಷೆಪಟ್ಟುದರಿಂದ, ಆ ಲೇಖನವನ್ನೂ ಅದರ ವಿಷಯಕವಾಗಿರುವ ಶ್ರೀ. ಬೆಟಗೇರಿ ಕೃಷ್ಣಶರ್ಮರ ಅಭಿಪ್ರಾಯವನ್ನೂ ಇಲ್ಲಿ ಪ್ರಕಟಿಸಲಾಗಿದೆ.

—ಸಂಪಾದಕರು

"ಪ್ರಮಾದ"ಕ್ಕೆ ಉತ್ತರ

ಬರೆದವರು: ಶ್ರೀ. ಕೆ. ಎಂ. ಕೃಷ್ಣರಾವ್.

ನನ್ನ "ಶ್ರೀಜಗನ್ನಾಥದಾಸರು" ಗ್ರಂಥದ ಪುಟ ೯೧ರಲ್ಲಿ ಶ್ರೀವ್ಯಾಸರಾಜರ ಭಾವಗೀತವೆಂದು ಉದಾಹರಿಸಿರುವ "ಕೊಳಲನುಡಿಸು ಕವಿಯೊಳೆನಗೆ ಚೆಲುವ ಮೋಹನ" ಎಂಬ ಪದ ತಮ್ಮದೆಂದೂ, ಅದನ್ನು ೧೯೩೬ರಲ್ಲಿ ತಾವು ಸಂಕಲಿಸಿ ಪ್ರಕಟಿಸಿದ 'ಭಾವಗೀತ' ಎಂಬ ಭಕ್ತಕವಿಗಳ ಕೀರ್ತನ ಗ್ರಂಥದಲ್ಲಿ ಸೇರಿಸಿದುದಾಗಿಯೂ ಶ್ರೀ. ಕೃಷ್ಣಶರ್ಮ ಬೆಟಗೇರಿಯವರು ತಮ್ಮ 'ಜಯಂತ' ಪತ್ರಿಕೆಯ ೧೯೩೬ ಡಿಸೆಂಬರ್ ಸಂಚಿಕೆಯಲ್ಲಿ ಹೇಳಿದ್ದಾರೆ.

ಅಧುನಿಕಯುಗದ 'ಆನಂದಕಂದ' ಎಂಬ ಅಂಕಿತನಾಮವುಳ್ಳ ಶ್ರೀ. ಕೃಷ್ಣಶರ್ಮ ಬೆಟಗೇರಿಯವರು ರಚಿಸಿದ ಕವಿತೆ ಅದು ಎಂದು ಇವರೇ ಹೇಳಿಕೊಂಡಿರುವುದರಿಂದ, ಅದನ್ನು ಅನುಮಾನಿಸುವ ಅಗತ್ಯವಿಲ್ಲ ಇದರಿಂದ ಶ್ರೀವ್ಯಾಸರಾಜರಿಗೆ ನನ್ನಿಂದ ತುಂಬ ಅಪಚಾರವಾಯಿತೆಂಬ ಕೊರಗು ನನ್ನದಾಗಿದೆ. ಅದಕ್ಕಾಗಿ ಆ ಮಹಾಮಹಿಮರ ಕ್ಷಮೆ ಯಾಚಿಸುತ್ತೇನೆ—ಅನೇಕ ಸಾಷ್ಟಾಂಗ ನಮಸ್ಕಾರಗಳೊಂದಿಗೆ.

ಆದರೆ ಈ 'ಪ್ರಮಾದ' ಘಟಿಸಿದುದಕ್ಕೆ ಬಹುಮಟ್ಟಿಗೆ ಕಾರಣರು ಜವಾಬ್ದಾರರು ಆ ಕವಿತೆಯ ಕರ್ತರು ತಾವು ಎಂದು ಈಗ ಹೇಳಿಕೊಳ್ಳುತ್ತಿರುವ ಶ್ರೀ. ಕೃಷ್ಣಶರ್ಮ ಬೆಟಗೇರಿಯವರೇ ಎಂದು ಹೇಳದೆ ವಿಧಿ ಇಲ್ಲ! ಅದಕ್ಕೆ ಕಾರಣ ಇಷ್ಟು:

ಶ್ರೀವ್ಯಾಸರಾಜರ ಭಾವಗೀತವೊಂದು ತುಂಬ ಚೆನ್ನಾಗಿದೆ, ನೋಡಿ—ಎಂದು ನನಗೆ ಅದನ್ನು ಒಬ್ಬ ಮಹನೀಯರು ಕೊಟ್ಟಿದ್ದರು. ಅದರಲ್ಲಿ ಅವರದೂ ತಪ್ಪಿಲ್ಲವೆಂದೇ ತೋರುತ್ತದೆ. 'ಭಾವಗೀತ' ಎಂಬ ಭಕ್ತಕೃತಿಗಳ ಸಂಕಲನ ಶ್ರೀ. ಕೃಷ್ಣಶರ್ಮ ಬೆಟಗೇರಿಯವರಿಂದ ಸಂಪಾದಿತವಾಗಿ ಪ್ರಕಟವಾದ ಪುಸ್ತಕ. ಅವರಲ್ಲಿ ನಮ್ಮ ನಾಡಿನ ಹಿಂದಿನ ಅನೇಕ ಭಕ್ತಶ್ರೇಷ್ಠರ, ಅನುಭಾವಿಗಳ ಕೃತಿಗಳಿವೆ;—ಸಿರಿ ಪುರಂದರವಿಠಲ, ಶ್ರೀಪುರಂದರವಿಠಲ, ತಂದೆ ಪುರಂದರವಿಠಲ, ಗುರು ಪುರಂದರವಿಠಲ, ಶ್ರೀಕೃಷ್ಣ, ವಿಜಯವಿಠಲ, ಶ್ರೀರಂಗವಿಠಲ, ಗೋಪಾಲವಿಠಲ, ಜಗನ್ನಾಥವಿಠಲ, ಆದಿಕೇಶವ, ಕಾಗಿನೆಲೆಯಾದಿಕೇಶವ, ಶ್ರೀಕೃಷ್ಣಕಿಂಕರ (ಅಡಿಯಲ್ಲಿ ಹಾಗೆಂದು ಕೊಟ್ಟಿದೆ), ಶಂಭುಲಿಂಗ, ಗುರುಸಿದ್ಧ, ರತ್ನಾಕರ ವರ್ಣಿ (ಕೃತಿಯ ಅಡಿಯಲ್ಲಿ ಈ ಹೆಸರಿದೆ) ಮುಪ್ಪಿನಷಡಕ್ಷರಿ ಹೀಗೆ ಆಯಾ ಅಂಕಿತಗಳ ಮೇಲಿಂದ ಆಯಾ ಗ್ರಂಥಕರ್ತರ ಹೆಸರನ್ನು ಹೇಳುವ ರೂಢಿಯೂ ಇದೆ. ಉದಾ: ಪುರಂದರವಿಠಲ=ಪುರಂದರದಾಸರು; ಶ್ರೀಕೃಷ್ಣ=ವ್ಯಾಸರಾಜರು, ಕಾಗಿನೆಲೆಯಾದಿಕೇಶವ=ಕನಕದಾಸರು; ರಂಗವಿಠಲ=ಶ್ರೀಪಾದರಾಜರು—ಇತ್ಯಾದಿ.

ಈ ದೊಡ್ಡ ದೊಡ್ಡ ಹಿಂದಿನ ಭಕ್ತಕವಿಕೃತಿಗಳ ಸಾಲಿನಲ್ಲಿ ತಮ್ಮದೂ ಒಂದು ಕವಿತೆಯನ್ನು, ಅಡಿಯಲ್ಲಿ ತಮ್ಮ ಹೆಸರನ್ನಾಗಲೀ, ಕಾವ್ಯನಾಮವನ್ನಾಗಲೀ ಹಾಕದೆ ಶ್ರೀಕೃಷ್ಣಶರ್ಮರು ಏಕೆ ಸೇರಿಸಿಕೊಂಡರೋ ತಿಳಿಯದಾಗಿದೆ!

"ಕೃಷ್ಣ", "ಶ್ರೀಕೃಷ್ಣ" ಎಂಬುದು 'ದಾಸಕವಿಶ್ರೇಷ್ಠ'ರಾದ ಶ್ರೀವ್ಯಾಸರಾಜರ ಅಂಕಿತವೆಂಬುದು ಸುಪ್ರಸಿದ್ಧವಾಗಿದೆ. ಹಾಗಿರುವಾಗ "ನಾನೂ ಒಬ್ಬ ದಾಸಸಾಹಿತ್ಯದ ನಮ್ರ ಅಭ್ಯಾಸಿ" ಎಂದು ಹೇಳಿಕೊಂಡಿರುವ ಶ್ರೀಕೃಷ್ಣಶರ್ಮರು 'ದಾಸಕೂಟ-ವ್ಯಾಸಕೂಟ' ಗಳೆರಡರಲ್ಲೂ ಪ್ರಮುಖರಾದ ಶ್ರೀವ್ಯಾಸರಾಜ ಶ್ರೀಪಾದಂಗಳವರ ಅಂಕಿತವನ್ನು ಕೇಗೆ ಏಕೆ ಬಳಸಿಕೊಂಡರು? ದಾಸಸಾಹಿತ್ಯಪರಿಚಯವಿಲ್ಲದವರು ಹಾಗೆ ಮಾಡಿದ್ದರೆ ಆ ಮಾತು ಬೇರೆ. ದಾಸಸಾಹಿತ್ಯಾಭ್ಯಾಸಿ ಎಂದು ಹೇಳಿಕೊಳ್ಳುವವರು ಇಂತಹ ಪ್ರಮಾದ ಮಾಡಬಹುದೆ—ಎಂದು ಕೇಳಬೇಕಾಗಿದೆ.

ಶ್ರೀ. ಕೃಷ್ಣಶರ್ಮ ಬೆಟಗೇರಿಯವರು ಈ "ಶ್ರೀಕೃಷ್ಣ" ಎಂಬ ಅಂಕಿತವನ್ನು, ಆ ಪದದ ಅಂಕಿತಸ್ಥಾನದಲ್ಲಿ ಬಳಸಿಕೊಳ್ಳದೇ ಇದ್ದಿದ್ದರೆ, ಅಲ್ಲಿರುವ ಮಹಾನುಭಾವರ ಕೃತಿಗಳೊಂದಿಗೆ ತಮ್ಮದೂ ಒಂದು ಕೃತಿಯನ್ನು ತಮ್ಮದೆಂದು ನೇರವಾಗಿ ಅಲ್ಲೇ ಹೇಳಿಕೊಳ್ಳದೇ

ಸೇರಿಸದೇ ಹೋಗಿದ್ದೆರೆ, ಆ ಪದ ಶ್ರೀವ್ಯಾಕರಾಜರದೆಂಬ ಭ್ರಾಂತಿ ನನಗೇ ಏಕೆ ಯಾರಿಗೂ ಬರಲು ಅವಕಾಶನೇ ಇರುತ್ತಿರಲಿಲ್ಲವಲ್ಲವೆ ? ಈಗ ಈ 'ಪ್ರಮಾದ'ಕ್ಕೆ ಕಾರಣರು ಯಾರು ಎಂಬುದು ಸ್ಪಷ್ಟವಾಗಿರಬೇಕೆಂದು ಒಗೆಯುತ್ತೇನೆ.

ಹರಿದಾಸರಿಗೆಲ್ಲ ಗುರುಗಳಾಗಿರುವ ಶ್ರೀ ವ್ಯಾಸರಾಜರಂತಹವರ ಅಂಕಿತವನ್ನು ಈಗನವರು ಬಳಸಿಕೊಳ್ಳುವುದು ಉಚಿತವಲ್ಲ. ದಾಸ ಸಾಹಿತ್ಯದಲ್ಲಿ ಇನ್ನೂ ಸರಿಯಾದ ಸಮಗ್ರ ಸಂಶೋಧನೆಯು ಅಗತ್ಯ ವಿರುವುದರಿಂದ, ಅದರ ಸಂಕಲನವನ್ನಾಗಲೀ, ಮುದ್ರಣವನ್ನಾಗಲೀ ಮಾಡುವ ಮಹನೀಯರು ಇನ್ನೂ ಹೆಚ್ಚು ಪ್ರಾಮಾಣಿಕರಾಗಿದ್ದರೆ ಇಂತಹ 'ಪ್ರಮಾದ' ಗಳು ಘಟಿಸಲಾರವಲ್ಲವೆ ?

ಅದೃಷ್ಟವಶಾತ್ 'ಭಾವಗೀತ' ವೆಂಬ ಇವರ ಸಂಕಲನದಿಂದ ನಾನು ಆರಿಸಿಕೊಂಡಿರುವ ಪದ ಇದೊಂದೇ ಆಗಿರುವದು ನನ್ನ ಸುದೈವ! ಅದೂ ಒರ್ವ ಮಹನೀಯರ ಸೂಚನೆಯಮೇರೆ— ಆ ಸಂಕಲನದಲ್ಲಿ ಇನ್ನೂ ಯಾರ ಯಾರ ಪದಗಳು ಯಾವ ಹೆಸರೂ ಇಲ್ಲದೆ ಯಾವ ವೇಷದಲ್ಲಿ ಅಲ್ಲಿ ಸ್ಥಾನಪಡೆದಿವೆಯೋ ನೋಡ-ಬೇಕಾಗಿದೆ.

ಒಬ್ಬ ಮಹಾಮಹಿಮರ ಜೀವನ, ವ್ಯಕ್ತಿತ್ವ ಮತ್ತು ಕೃತಿಗಳನ್ನು ವಿವರವಾಗಿ ಅವಲೋಕಿಸುವ ಒಂದು ಸಂಶೋಧನಗ್ರಂಥ ಕನ್ನಡದಲ್ಲಿ ಪ್ರಕಟವಾದಾಗ, ಅದರಬಗ್ಗೆ 'ನಮ್ಮವರ' ದೃಷ್ಟಿ ಎಂತಹುದು ಎಂಬುದು 'ಜಯಂತಿ'ಯ ಆ 'ಪ್ರಮಾದ'ಲೇಖನದಿಂದ ಜೆನ್ನಾಗಿ ತಿಳಿಯುತ್ತದೆ. ಅಲ್ಲಿ ಹೇಳಿರುವ ವಿಷಯಕ್ಕಿಂತಲೂ ಅದರ ಹಿಂದಿರುವ ಮನಸ್ಸು ಹೃದಯ ಎಂತಹುದು ಎಂಬುದು ಯಾರಿಗಾದರೂ ಅರಿವಾಗಬಹುದು. ಸಂಶೋಧನೆ ಮಾಡುವವರಿಗೆ ನಮ್ಮ ಜನ— ಅದರಲ್ಲೂ ಸ್ವತಃ ತಾವೇ ಒಬ್ಬ ಲೇಖಕರೂ ಆಗಿರುವಂತಹವರು— ನೀಡುವ ಪ್ರೋತ್ಸಾಹ ಎಂತಹದು ಎಂಬುದನ್ನು ನೆನೆದರೆ, ಯಾರಿ. ಗಾದರೂ ವಿಷಾದವಾಗುವುದಿಲ್ಲವೆ ?

ಇನ್ನೂ ಎಂತೆಂತಹ ತಪ್ಪುಗಳು 'ಈ ಪುಸ್ತಕ' ದಲ್ಲಿವೆಯೋ ಎಂಬುದನ್ನು ನೋಡುವುದಕ್ಕಾಗಿ, ಗ್ರಂಥದ ವಿವರವಿಮರ್ಶೆ ಮಾಡುವುದಕ್ಕಾಗಿ ಪುಸ್ತಕವನ್ನು ಸ್ನೇಹಿತರಿಂದ ಎರವಲು ಪಡೆದು. ಕೊಂಡಿರುವುದಾಗಿ ಶ್ರೀ. ಕೃಷ್ಣಶರ್ಮರು ಅಲ್ಲಿ ಹೇಳಿದ್ದಾರೆ. ತುಂಬ ಸಂತೋಷಕರವಾದ ವಿಷಯ. ಆ ಗ್ರಂಥದ ವಿವರವಿಮರ್ಶೆಗಾಗಿ ನಾನೂ ಕಾಯುತ್ತಿದ್ದೇನೆ— ಆದರೆ ಅದರಲ್ಲಿ ತಪ್ಪುಗಳೇ ಏನಿವೆ ಎಂಬುದನ್ನೇ ಬೆದಕಿ ನೋಡುವ, ಇರಬಹುದಾದ ಅಲ್ಪವಿಷಯಗಳನ್ನೇ ಪ್ರಮಾದವೆಂದು ದೊಡ್ಡದು ಮಾಡಿ ಅಸಭ್ಯಪ್ರಚಾರದ ಉದ್ದೇಶದಿಂದಲೇ ಮಾಡುವ ಕುಹಕ ಕುತ್ಸಿತ ವಿಮರ್ಶೆಗಳಿಗಾಗಿ ಅಲ್ಲ! ಸಹೃದಯತೆ ಯಿಂದ ಕೂಡಿದ ಎಂತಹ ವಿಮರ್ಶೆಯನ್ನಾದರೂ ಸಂತೋಷದಿಂದ ಸ್ವಾಗತಿಸುವೆ.

ಉತ್ತರಕ್ಕೆ ಪ್ರತ್ಯುತ್ತರ

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

ಡಾ. ಕೆ. ಎಂ. ಕೃಷ್ಣರಾವ್ ಅವರು ಬರೆದು ಕಳುಹಿಸಿದ ಉತ್ತರವನ್ನು ನೋಡಿದೆನು. ಅದನ್ನು ಸಂಪೂರ್ಣವಾಗಿ ಓದಿ ವಿಸ್ಮಯಪಟ್ಟೆನು. ಅಲ್ಲದೆ ಡಾಕ್ಟರರ ಸಾಹಿತ್ಯಾಭ್ಯಾಸದ ಮಟ್ಟವನ್ನು ಕಂಡು ಕಳವಳ ಉಂಟಾಗದೆ ಇರಲಿಲ್ಲ. ತಾವು ಮಾಡಿದ ತಪ್ಪಿನ ಹೊಣೆಯನ್ನು ಸಂಪೂರ್ಣವಾಗಿ ನನ್ನಮೇಲೆ ಹೊರಿಸಲು ಸಿದ್ಧರಾದ ಅವರ ಮನೋಭಾವದ ಹಿಂದಿರುವ ಅಜ್ಞಾನವನ್ನು ಕಂಡು ಆಶ್ಚರ್ಯ ಪಡಬೇಕೋ ದುಃಖಪಡಬೇಕೋ ಎಂಬುದು ನನಗೆ ತಿಳಿಯದಂತಾಯಿತು.

ನನ್ನ ಮೇಲಿನ ಅವರದೊಂದು ದೊಡ್ಡ ಆರೋಪವೆಂದರೆ, ಶ್ರೀವ್ಯಾಸರಾಯರ ಅಂಕಿತವಾದ 'ಶ್ರೀಕೃಷ್ಣ' ಎಂಬ ಅಂಕಿತವನ್ನು ನಾನು ಇರಿಸಿಕೊಂಡಿರುವೆನು—ಎಂಬುದು. ನಾನು ನನ್ನ ಕೃತಿಗಳ ಕೊನೆಯಲ್ಲಿ ಎಂದೂ ಯಾವ ಅಂಕಿತವನ್ನೂ ಹಾಕಿಲ್ಲ. 'ಕೊಳಲ ನುಡಿಸು' ಎಂಬ ಪದ್ಯವು ಶ್ರೀಕೃಷ್ಣನನ್ನು ಕುರಿತುದೇ ಆದುದರಿಂದ, ಆದು 'ಶ್ರೀಕೃಷ್ಣಮೂರ್ತಿ' ಎಂಬ ಸಂಬೋಧನದೊಂದಿಗೆ ಕೊನೆಗೊಳ್ಳುವುದಿಷ್ಟೆ!

ಪ್ರಾಚೀನ ದಾಸ-ಶರಣರ ಕೃತಿಗಳ ಸಂಕಲನದೊಂದಿಗೆ ನನ್ನ ಈ ಗೀತವನ್ನು ಸೇರಿಸಿದುದೂ ಒಂದು ತಪ್ಪೆಂದು ಶ್ರೀ ಕೃಷ್ಣರಾವ್ ಅವರು ಹೇಳುವರು. ನಾನು ಆ ಸಂಕಲನವನ್ನು ಮಾಡಿದುದು ಭಕ್ತಿ ಭಾವದ ಗೀತಗಳನ್ನು ಆಯ್ದು ಒಂದೆಡೆ ಸೇರಿಸಿಕೊಡಬೇಕೆಂಬ ಉದ್ದೇಶದಿಂದ; ಪ್ರಾಚೀನರು-ಆಧುನಿಕರು—ಎಂಬ ಭೇದವನ್ನು ನಾನು ಇರಿಸಿಕೊಂಡಿರಲಿಲ್ಲ. ಎಂತಲೇ ಆ ಕಾಲದಲ್ಲಿ ಭಕ್ತಿಗೀತಗಳನ್ನು ಬರೆದು ಪ್ರಕಟಿಸಿದ ಶ್ರೀಮಾನ್ ವಾಸ್ತಿವೆಂಕಟೇಶ ಅಯ್ಯಂಗಾರ್, ಶ್ರೀ. ಡಿ.ವಿ. ಗುಂಡಪ್ಪ ನವುತ್ತು 'ಶ್ರೀಕೃಷ್ಣಕಿಂಕರ' ಎಂಬವರ ಕೆಲವು ಕೃತಿಗಳನ್ನೂ ಅದರಲ್ಲಿ ಸೇರಿಸಿಕೊಂಡಿದ್ದೇನೆ. ಆಧುನಿಕ ಕವಿಗಳ ಕೃತಿಗಳಿಗೆ ಅಂಕಿತಗಳು ಇರದುದರಿಂದ, ಆ ಆ ಕವಿಗಳ ಗೀತಗಳ ಅಡಿಯಲ್ಲಿ ಆ ಆ ಕವಿಗಳ ಹೆಸರುಗಳನ್ನು ಸ್ಪಷ್ಟವಾದ ಅಕ್ಷರಗಳಲ್ಲಿ ಸ್ಫುಟಪಡಿಸಲಾಗಿದೆ. ಅಲ್ಲದೆ ಪ್ರಾರಂಭದಲ್ಲಿಯೇ 'ಗೀತಗಳ ಕರ್ತೃ-ಗಳು ಮತ್ತು ಅವರ ಅಂಕಿತಗಳು' ಎಂಬ ಪರಿವಿಡಿಯೊಂದನ್ನು ಕೊಟ್ಟು, ಅದರಲ್ಲಿ ಕೊನೆಯ ಮೂರು ಜನ ಆಧುನಿಕ ಕವಿಗಳ ಹೆಸರುಗಳ ಮುಂದೆ 'ಅಂಕಿತವಿಲ್ಲ' ಎಂದು ಸ್ಪಷ್ಟವಾಗಿ ಬರೆಯ-ಲಾಗಿದೆ. ಇಷ್ಟೆಲ್ಲವಿದ್ದರೂ 'ಇನ್ನೂ ಹೆಚ್ಚು ಪ್ರಾಮಾಣಿಕರಾಗಿದ್ದರೆ' ಎಂದು ಬರೆದಿರುವ ಡಾಕ್ಟರರ ಬರಹಕ್ಕೆ ಯಾವ ಬಗೆಯ ಸಮಾಧಾನ ವನ್ನು ಬರೆಯಬೇಕೋ ನನಗೆ ತಿಳಿಯದಾಗಿದೆ.

'ಕೃಷ್ಣ ಎಂದು ನನಗೆ ನಮ್ಮ ಹಿರಿಯರು ಹೆಸರಿಟ್ಟುದೂ ಒಂದು ತಪ್ಪೆಂದು ಡಾಕ್ಟರರು ಬರೆಯದೆ ಇರುವುದು ನನ್ನ ಸುದೈವವೆಂದೆ ಭಾವಿಸಬೇಕಾಗಿದೆ. ನಾನು 'ಶ್ರೀಕೃಷ್ಣಕಿಂಕರ' ಎಂಬ ಹೆಸರಿನಿಂದ ಕವಿತೆಗಳನ್ನು ಬರೆದುದು ಈ ಮಹನೀಯರ ಭ್ರಮೆಗೆ ಕಾರಣವಾಗಿದೆ

ಯಂತೆ. ೧೯೩೧ರಿಂದ ೧೯೩೬ರವರೆಗೆ ನಾನು ಬರೆದ ಅನೇ. ರಾಷ್ಟ್ರೀಯ ಕವನಗಳೂ ಭಕ್ತಿಗೀತೆಗಳೂ 'ಶ್ರೀಕೃಷ್ಣಕಿಂಕರ' ಎಂಬ ಉಪನಾಮದಿಂದಲೇ ಪ್ರಕಟವಾಗಿವೆ. 'ಅನಂದಕಂದ' ಎಂಬ ಉಪನಾಮದಿಂದ ಬರೆಯತೊಡಗಿದುದು ೧೯೩೬ರ ತರುವಾಯ 'ಕೊಳಲನುಡಿಸು' ಎಂಬ ಪದವನ್ನು ತಾವು ಯಾವ ಸಂಕಲನದಿಂದ ತೆಗೆದುಕೊಂಡಿರುವೆವೆಂದು ಒಪ್ಪಿರುವರೋ, ಆ 'ಭಾವಗೀತ' ಎಂಬ ಪುಸ್ತಕದಲ್ಲಿಯೆ ಬೇರೆ ಎರಡು ಗೀತಗಳು 'ಶ್ರೀಕೃಷ್ಣಕಿಂಕರ' ಎಂಬ ಹೆಸರಿನಿಂದಲೇ ಪ್ರಕಟವಾಗಿವೆಯಲ್ಲ! ಅವೇಕೆ ಇವರ ಕಣ್ಣಿಗೆ ಬಿದ್ದಿಲ್ಲವೆಂದು ಜಾರಿನೆ? ಸಾಹಿತ್ಯಸಂಶೋಧಕರಾದ ಇವರಿಗೆ ಅರುವರ್ಷಕಾಲ ಪ್ರಚಾರದಲ್ಲಿ ಇದ್ದ 'ಶ್ರೀಕೃಷ್ಣಕಿಂಕರ' ಎಂಬ ಹೆಸರು ಅಧುನಿಕ ಕವಿಯದೆಂದು ಗೊತ್ತಾಗಬಾರದೆ?

'ಅದೃಷ್ಟವಶಾತ್ ಭಾವಗೀತವೆಂಬ ಇವರ ಸಂಕಲನದಿಂದ ನಾನು ಆರಿಸಿಕೊಂಡಿರುವ ಪದ ಇದೊಂದೇ ಆಗಿರುವುದು ನನ್ನ ಸುದೈವ!' ಎಂದು ಡಾಕ್ಟರರು ಬರೆದುದು ಇನ್ನೂ ವಿಚಿತ್ರವಾದ ಮಾತು. 'ಭಾವಗೀತ' ದಿಂದಲೇ ಇದನ್ನು ತೆಗೆದುಕೊಂಡಿದ್ದರೆ, ಅದರಲ್ಲಿ ಇದ್ದಂತೆ ಏಕೆ ಪ್ರಕಟಿಸಿಲ್ಲ? ಮೇಲೆ ಬರೆದ ರಾಗ-ತಾಳ ನೊದಲುಮಾಡಿ ಇಡಿಯ ಹಾಡನ್ನು ಅಪಭ್ರಂಶಗೊಳಿಸಿ ತೆಗೆದುಕೊಳ್ಳಲು ಇವರಿಗೆ ಏನು ಅಧಿಕಾರ? ಹಾಗೆ ಮಾಡುವಾಗ ಸಂಶೋಧಕರಾದ ಇವರು, ಸಂಕಲನಕಾರನಾದ ನನ್ನನ್ನು ಬರೆದು ಕೇಳಿದ್ದರೆ, ಈ ಪ್ರಮಾದಕ್ಕೆ ಅವಕಾಶವೆಲ್ಲಿ ಉಂಟಾಗುತ್ತಿತ್ತು?

ಕನ್ನಡದಲ್ಲಿ ಯಾವ ಹೊಸಪುಸ್ತಕ ಬಂದರೂ ಅದನ್ನು ನಾನು ಆಸ್ಥೆಯಿಂದ ನೋಡುವೆನು. ಅಭ್ಯಾಸ ಪೂರ್ಣ ಗ್ರಂಥವಿದ್ದರೆ ಅಂತಹ ಅಭ್ಯಾಸ ಲೇಖಕರನ್ನು ಮನಸಾರೆ ಮೆಚ್ಚಿ ಗೌರವದಿಂದ ಕಾಣುವೆನು. ಪ್ರಸ್ತುತಗ್ರಂಥದಲ್ಲಾದ ಈ ಪ್ರಮಾದಕ್ಕೆ ನನ್ನ ಸಂಬಂಧವು ಇರದಿದ್ದರೆ, ನಾನು ಈ ಗ್ರಂಥವನ್ನು ಕುರಿತು ಬರೆಯುವ ಕಾರಣವೇ ಇರಲಿಲ್ಲ. ಆದರೆ ಒಂದು ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ಪ್ರಬಂಧವಲ್ಲಿ, ದ್ವಾಪರ ಹೆಸರಿನಲ್ಲಿ ನನ್ನ ಕವಿತೆ ಪ್ರಕಟವಾದುದು ನನ್ನ ವ್ಯಾವಹಾರಿಕ ಬುದ್ಧಿಗೆ ಸರಿಯೆನಿಸದಿದ್ದರಿಂದ, ಅನಿವಾರ್ಯವಾಗಿ ಇದೆಂದು ಪ್ರಮಾದವನ್ನು ಕುರಿತು ಮಾತ್ರ ಬರೆದು ಪ್ರಕಟಿಸಲೇ ಬೇಕಾಯಿತು.

'ವಿವರವಿಮರ್ಶೆಗಾಗಿ ನಾನೂ ಕಾಯುತ್ತಿದ್ದೇನೆ, ಎಂದು ಡಾಕ್ಟರರು ಆಶ್ವಾಸನಬುದ್ಧಿಯಿಂದ ಒಂದು ಮಾತನ್ನು ಬರೆದಿದ್ದಾರೆ. ಆದರೆ ಆ ಬಗೆಯ ವಿಮರ್ಶೆಗೆ ಕಾಯುದಿರುವುದೇ ಅವರಿಗೆ ಕ್ಷೇಮಕಾರಕವೆಂದು ನನ್ನ ಅಭಿಪ್ರಾಯ. ಏಕೆಂದರೆ ಈ ಬಗೆಯ ಪಿಎಚ್. ಡಿ. ಪ್ರಬಂಧಗಳ ಹೊಣೆಗಾರಿಕೆ, ಬರೆಯುವವರಿಗಿಂತ ದಿಗ್ದರ್ಶಕ-ಪರೀಕ್ಷಕರ ಮೇಲೆ ಹೆಚ್ಚಾಗಿ ಇರುವುದು ಇಲಿಯನ್ನು ಹೊಡೆಯಲು ಹೋದರೆ ಗಣಪತಿಗೆ ಏಟು ತಗಲುವ ಸಂಭವವುಂಟು.

ಡಾ ಕೃಷ್ಣರಾವ್ ಅವರ ಲೇಖನವನ್ನೆಲ್ಲ ಓದಿನೋಡಿದರೆ, ಅವರು 'ಭಾವಗೀತ' ಎಂಬ ನನ್ನ ಸಂಕಲನವನ್ನು ಇದುವರೆಗೂ ನೋಡಿಲ್ಲವೆಂದು ಎನಿಸಿಬರುವುದು. ಅವರು ಅದನ್ನು ಕಣ್ಣಿಂದ ನೋಡಿದ್ದರೆ ಈ ಬಗೆಯ ಪ್ರಶ್ನೆಯನ್ನು ಬರೆಯುತ್ತಿರಲಿಲ್ಲವೆಂದು ನನ್ನ ಭಾವನೆ. ಇನ್ನುಮೇಲಾದರೂ ನೋಡಿ, ನನ್ನ ಮೇಲೆ ತಪ್ಪುಹೊರಿಸಲು ಸಿದ್ಧರಾದ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕಾಗಿ ನನ್ನ ಬಿನ್ನಹ.

ಕವಿಯ ಬಯಕೆ

(ಭಾವರೂಪಕ)

(ಪ್ರಹೇತಃ)

ಕವಿಯ ಜೀವ ಹೊದಕುಳಿಗೊಂಡಿತ್ತು. ತನ್ನ ಭಾವ, ಕಲ್ಪನೆಗಳೈಬರಿ ಜಗದ ಜನಕ್ಕೆ ಜೀವ ಕೊಟ್ಟುಂತಾಗಲಿಲ್ಲವೆಂದು ಲೇಖನಿಯನ್ನು ಮೂಲೆಯೊಂದರಲ್ಲಿ ಬಿಸುಟು ವಿಷಣ್ಣವದನನಾಗಿ ಕುಳಿತಿದ್ದನು. 'ತನ್ನವರು ಸಂಕಟದ ಸುಳಿಯಿಂದ ಪಾರಾಗದಿರುವಾಗ ಅವರನ್ನೆಂತು ಬೀಗೆಯೆ ನಾನು ನೋಡುತ್ತಿರಬೇಕು.' ಎಂದು ಮನಸ್ಸು ಮರುಗಿತು. ಆಗ ಅವನಲ್ಲಿಯ ದೈವೀ ಸ್ಫೂರ್ತಿಯು ಇವನನ್ನು ಕುರಿತು, "ಹೇ ಕವಿಯೇ ನಿರ್ಜೀವ ವಸ್ತುಗಳಲ್ಲಿಯೂ ನಿಚಿತ ಪ್ರಖರತೆಯನ್ನು ತಿದ್ದಿತೀಡುವ ಶಕ್ತಿ ನಿನ್ನಲ್ಲಿರುವಾಗ ನಿನ್ನ ಜನಕ್ಕೆ ನೀನೇ ಜೀವ ತುಂಬದ ಸ್ಥಿತಿಗತಿಗಿಳಿದಿರುವಿಯೆಂದ ಮೇಲೆ ಆಶ್ಚರ್ಯವೆನಿಸದಿದು! ಚಂದ್ರ,ಸೂರ್ಯ, ತಾರೆಗಳೊಂದಿಗೆ ಚಕ್ಕಂದದಿಂದ ಮಾತಾಡುವ ನೀನು ನಿನ್ನವರೊಂದಿಗೆ ಮಾತಾಡಲಸಾಧ್ಯವೆ? ಅದೇ ರವಿ, ಅದೇ ರಜನಿ. ಅದೇ ತಾರೆಗಳು ನಿನ್ನಂತೆ ನಿನ್ನವರ ಬಗ್ಗೆ ನೊಂದಿರಲಾರವೆ? ಅವರೂ ತಮ್ಮ ನಿತ್ಯ ಕೆಲಸಗಳನ್ನು ಮಾಡುತ್ತವೆ—ತಂಗಿ ಬೆಳಗುತ್ತಾನೆ; ಶಶಿ ತೊಳಗುತ್ತಾನೆ; ನಕ್ಷತ್ರಗಳು ಮಿನುಗುತ್ತವೆ. ಇದು ನಿನ್ನ ಸಮಯ—ನಿನ್ನ ಕರ್ತವ್ಯ ಲೇಖನಿಯನ್ನೆತ್ತಿ ಹಿಡಿ. ಅದನ್ನೇ ಕೂರಲಗೆಂದು ತಿಳಿದು ಜನರ ಸುಪ್ತತೆಯನ್ನು ಭೇದಿಸಿ ಅವರಿನ ಕಣ್ಣನ್ನು ತೆರೆದು ತೋರಿಸು" ಎಂದು ಸುಡಿದು ಮಾಯವಾಯಿತು.

ಕವಿಯಲ್ಲಿಯ ಚೇತಸ್ಸು ಚಿಮ್ಮಿ ಹೊರಬಂದಿತು. ಲೇಖನಿ—ಕುಂಚದಲ್ಲಿಯ ಸತ್ತ್ವ ಸಜೀವನವಾಯಿತು. ಕಾರ್ಯ ಮುಂದುವರೆಯಿತು.

ಜನವರಿ ೧೯೩೭

ಪುಸ್ತಕ ವಿಮರ್ಶೆ

ಕ್ರೀಡಾಂಗಣ

(ಕವನ ಸಂಕಲನ)

ಬರೆದವರು:—ಶ್ರೀ. ಎನ್. ಎಸ್. ಗದಗಕರ. ಪುಟ ೪೬+೬ ಬೆಲೆ ೦-೧೫-೦ ಪ್ರಕಾಶಕರು ಪ್ರತಿಭಾಗ್ರಂಥಮಾಲೆ, ಧಾರವಾಡ.

ಶ್ರೀಮಾನ್ ಗದಗಕರರು ಈಗಾಗಲೇ ಅನೇಕ ಹರಟೆ ಸಂಕಲನಗಳನ್ನೂ ಮತ್ತು ನಾಟ್ಯಭಟಗಳನ್ನೂ ಬರೆದು ಕನ್ನಡ ಸಾರಸ್ವತ ಪ್ರಪಂಚಕ್ಕೆ ಪರಿಚಿತರಾಗಿರುವರು. ಇದೀಗ ಹೊರಬಂದ 'ಕ್ರೀಡಾಂಗಣ'ವು ಕವನಸಂಕಲನವಾಗಿದೆ. ಶ್ರೀ. ಗದಗಕರರ ಕಾವ್ಯದ ಓಟವನ್ನೂ ರೀತಿಯನ್ನೂ ನಾವು ಇಲ್ಲಿ ಈಗ ನೋಡಬೇಕಾಗಿದೆ. ಗದ್ಯ ಲೇಖಕರಲ್ಲಿಯೂ ಪದ್ಯದ ಹೊನಲು ಹೇಗೆ ಕರಿಯಬಲ್ಲದೆಂಬುವುದಕ್ಕೆ ಈ ಸಂಕಲನದಲ್ಲಿಯ ಕವನಗಳೇ ಸಾಕ್ಷಿಯಾಗಿವೆ. ಇಲ್ಲಿಯ ಕವನಗಳನ್ನು ಓದಿದಾಗ ಊಹೆ, ಕಲ್ಪನೆ, ಮತ್ತು ಸೌಂದರ್ಯೋಪಾಸನೆಗಳ ವಿವಿಧ ರೂಪಗಳನ್ನು ಕಂಡು ಓದುಗನು ತಣಿಯಬಹುದು. ಕಾವ್ಯಕ್ಕೆ ಪ್ರತಿಭೆ ಹಾಗೂ ಉತ್ಕಟವಾದ ಭಾವನೆಗಳು ಅವಶ್ಯವೆಂಬುದನ್ನು ಅಲ್ಲಗಳೆಯುವಂತಿಲ್ಲದಿದ್ದರೂ—ಸರಳ ಭಾವನೆಗಳೆ ಸರಸವಾಗಿ ಕವನಗಳಾದಾಗಲೂ ಒಂದು ಮೆರಗು ಬರಬಲ್ಲದೆಂಬುದಕ್ಕೆ ಈ ಸಂಕಲನದಲ್ಲಿಯ ಅನೇಕ ಕವನಗಳು ಉದಾಹರಣೆಯಾಗಿ ನಿಂತಿದೆ. ಚಂದಿರನನ್ನು ಕುರಿತು ಹೇಳುವಾಗ:—

"ಅನಂತ ಆಗಸದಂಗಣದುದ್ದಕು
ನೀನಲೆಯುವೆ ಏಕಾಕಿಯ ತೆರದಿ"

ಎಂಬ ಪಾದಗಳು ಸರಲವಾದರೂ ಭಾವನೆಗಳನ್ನು ಜಾಗ್ರತಿಗೊಳಿಸುವಂತಹವು. 'ಧಾರವಾಡ' ಎಂಬ ಕವನದಲ್ಲಿ

ಧಾರವಾಡದ ಸೆರಗಿನಲ್ಲಿರುವ ನೀಳ್ವಾರಿಗಳು
ವೃಕ್ಷರಾಜಿಯ ನಡುವೆ ತೂರಿ ತೂರಿ
ದೂರಕ್ಕೂ ಹಬ್ಬಿರುವ ಹುಲ್ಲುಗಾವಲಿಗೊಂದು
ಚೆಮ್ಮುಕಿಸುವೆ ಸೌಂದರ್ಯ ಭೂರಿ ಭೂರಿ!

ನಿರಾಭರಣಗಳಾದರೂ ಸುಂದರಿಯು ಸುಂದರಿಯೇ! ಅವರೂ ಆಕೆಗೆ ಆಭರಣದ ಮೋಹವೇನು ತಪ್ಪಿರಲಿಕ್ಕಿಲ್ಲ—ಅಲ್ಲೊಂದು ಇಲ್ಲೊಂದು ಒಪ್ಪುವಂತೆ ಆಭರಣ ಅವಶ್ಯವಲ್ಲವೆ? ಈ ಕೊರತೆಯನ್ನು ಲೇಖಕರು ಅನೇಕ ಕವನಗಳಲ್ಲಿ ತುಂಬಿಕೊಂಡಿದ್ದಾರೆನ್ನಲು ಏನೂ ಅಡ್ಡಿಯಿಲ್ಲ. ಹೊಸಗನ್ನಡ ಕಾವ್ಯ ಪ್ರಪಂಚದಲ್ಲಿ ಛಂದಸ್ಸಿನ ರೀತಿಯು ಹಲವಾರು ವಿಧವಾಗಿ ಹರಿಯತೊಡಗಿದೆ. ಕಾವ್ಯದಲ್ಲಿ ಶಿಥಿಲತೆಯು ಛಂದೋಭಂಗದಿಂದ ಕಂಡುಬರುತ್ತಿದೆಯಾದರೂ—ಕಲ್ಪನೆ, ಉತ್ಕಟ ವಿಚಾರಗಳ ಹೊರಹೊಮ್ಮುವಿಕೆ—ಜನತೆಯ ಜೀವನದ ಜಂಜಾಟದ ಪರಿಸ್ಥಿತಿಗಳನ್ನೇ ಉದ್ದೇಶವಾಗಿಟ್ಟುಕೊಂಡ ಈಗಿನ ಕವನಗಳಾದರೂ ನಮ್ಮ ನಿತ್ಯ ಜೀವನದ ಪ್ರತೀಕಗಳೇ ಆಗಿವೆಯೆಂದು ಹಳಹಳಿ ಪಡಬೇಕಾಗುವುದು! ನಮ್ಮ ಜೀವನವು ಹೇಗೆಯೋ—ಕಾವ್ಯವು ಹಾಗೆಯೇ ಅಲ್ಲವೆ? ತೆಳುವಾದ ಗಾಳಿಯಲ್ಲಿ ಸ್ವಚ್ಛಂದವಾಗಿ ಉಡ್ಡಾಣಮಾಡುವುದು ಈಗ ಸಾಧ್ಯವಾಗದಿದ್ದರೂ—ಮುರುಕು ಗುಡಿಸಲು, ಹಸಿದು ನರಳುವ ಮಾನವ, ಮತ್ತು ಗೂಡುಕಟ್ಟಿದ ದೇಹಗಳುಳ್ಳ ಮಗುಗಳನ್ನು ಕಂಡು—ಕಸವಿಸಿಗೊಂಡು ಹೊರಬಂದ ಕವನಗಳಲ್ಲಿ ಛಂದಸ್ಸು ತುಸು ಸರಿದು ಬದಿಗೆ ನಿಂತಿರಬಹುದು; ಅದು ಅನಿವಾರ್ಯ! ನವ್ಯ ಕವನಗಳನ್ನು ಪರಂಪರೆಯ ದೃಷ್ಟಿಕೋನದಿಂದ ನೋಡುವುದು ಅಷ್ಟು ಸರಿಯೆನಿಸದೆಂದೇ ಹೇಳಬಹುದು ಶ್ರೀ ಗದಗಕರರು ಪರಂಪರೆಯನ್ನು ಎಲ್ಲಿಯೂ ಮುರಿದು ನಿಂತಿಲ್ಲ. ಅವರು ಅನೇಕ ಮಟ್ಟಗಳನ್ನು ತಮ್ಮ ಸಂಕಲನದಲ್ಲಿ ಬಳಸಿಕೊಂಡು ಸಂಕಲನದ ಸೌಂದರ್ಯವನ್ನು ಹೆಚ್ಚಿಸಿದ್ದರಲ್ಲದೆ ಈಗಿನ ಸಂಧಿಕಾಲದಲ್ಲಿಯೂ ಪರಂಪರೆಯನ್ನು ಕಾಯ್ದುಕೊಂಡಿರುವರು. ಶ್ರೀಯುತರು ಪುರಾತನ ಕವಿಗಳ ಮೇಲೆ ಕಟ್ಟಿದ ಕವನಗಳಲ್ಲಿ ಒಂದು ಬಗೆಯ ದಿವ್ಯ ಭಾವನೆಗಳು ಎದ್ದು ಕಾಣುತ್ತಿದ್ದರೆ-ಆಧುನಿಕ ಸಾಹಿತ್ಯಕರ ಮೇಲಿನ ಕವನಗಳಲ್ಲಿ ಬರಿಕಗಾರಿಗಿರುವ ಅದರಭಾವಗಳು ಪಾದಪಾದದಲ್ಲಿ ಹೊರಹೊಮ್ಮುತ್ತಿವೆ. ಇನ್ನು ಸಾಮಾನ್ಯ ವಿಷಯಗಳ ಮೇಲೆ ಕಟ್ಟಿದ ಕವನಗಳತ್ತ ನೋಡಿದರೆ "ಜಾದೂಗಾರ" 'ಕ್ರೀಡಾಂಗಣ' 'ಆ ಸಂಜೆ' 'ಧಾರವಾಡ' 'ಚಂದಿರ' 'ಸುಗ್ಗಿಯದಿನ' ಮೊದಲಾದ ಕವನಗಳು ಸರಲವೂ ಸರಸವೂ ಆಗಿವೆ. 'ಮುದ್ದಣ' 'ಕುಮಾರವ್ಯಾಸ' 'ನಚಿಕೇತ' ಪದ್ಯಗಳು ವಸ್ತುವಿಗೆ ತಕ್ಕಂತೆ ಗಂಭೀರವಾಗಿವೆ. 'ಶ್ರೀರಂಗ' 'ಆನಂದಕಂದ' 'ವಿನಾಯಕ' ರ ಬಗ್ಗೆ ಬರೆದ ಕವನಗಳು ಸರಸ ಸಜ್ಜನಿಕೆಯನ್ನು ಹೊರಸೂಸುತ್ತಿದೆ. 'ತಿಮ್ಮಣ್ಣ' ಮೊದಲಾದ ಕೆಲವು ಕವನಗಳು ಮಾನವನ ಸ್ವಭಾವ ಚಿತ್ರಣ ಮೂಡಿಸುವಂತಹವಿದ್ದು ಅವುಗಳಲ್ಲಿ ಒಂದು ಜೀವನದ ಒಳನೋಟ ಕಂಡುಬರುತ್ತದೆ ಹೀಗೆ ಈ ಸಂಕಲನವು ವೈವಿಧ್ಯದಿಂದ ಕೂಡಿದುದಾಗಿದೆ. ಶ್ರೀಯುತರು ಪದಲಾಲಿತ್ಯದ ಕಡೆಗೂ ಉಟ್ಟ ಶಬ್ದಗಳ ಅಯ್ಕೆಯ ಕಡೆಗೂ ತುಸು ಗಮನವನ್ನಿತ್ತರೆ ಇನ್ನೂ ಮೆರಗು, ಕಾಂತಿ, ಕವನಗಳಿಗೆ ಬರಬಹುದಿತ್ತು. ಈ ಕೊರತೆಯನ್ನಾದರೂ "ಮುರಲೀನಾದ" 'ಚಂದಿರ' ದಂತಹ ಕೆಲ ಕವನಗಳು ತುಂಬಿಕೊಡುತ್ತವೆಯೆಂದು ಓದುಗನು ಅರಿತುಕೊಳ್ಳುವುದರಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀಮಾನ್ ಬೆಟಗೇರಿಯವರಂತೆ ತಮ್ಮ ಮುನ್ನುಡಿಯಲ್ಲಿ 'ಶೈಲಿಯು ಸೌಲಭ್ಯ,' ಅಲಂಕಾರಸಾಹಿತ್ಯ ಸ್ವಭಾವೋಕ್ತಿ ಇವುಗಳ ಮೂಲಕ, ಹೊಸಕಾಲದ ಅಭಿರುಚಿಯಂತೆ ರಿಂದಲೂ.....ಇವು ಮೆಚ್ಚುಗೆ ಪಡೆಯಬಹುದು ಎಂದಿದ್ದಾರೆ. ಹೊಸತನದ ಪ್ರತೀಕಗಳಾಗಿರುವ ಶ್ರೀಯುತರ ಕವನಗಳು ಮನವನ್ನು ಆಕರ್ಷಿಸುವದರಲ್ಲಿ ಏನಚ್ಚರಿ?

—ಶ್ರೀ. ಭಾ

ಸಾದರ ಸ್ವೀಕಾರ

೮೨ **ಕರ್ನಾಟಕ ವಿಲೀಕರಣದ ಕಥೆ** (ಸಂಚಯೋತ್ಸವ ಪುಸ್ತಕ) ಬರೆದವರು ಶ್ರೀಮಾನ್ ರಂಗನಾಥ ದಿವಾಕರರು. ಪ್ರಕಾಶಕರು ಲೋಕಶಿಕ್ಷಣ ಟ್ರಸ್ಟ್, ಹುಬ್ಬಳ್ಳಿ. ಡೆ. ಆ. ೧೩೪ ಪುಟಗಳು. ಬೆಲೆ ೧–೪–೦.

೮೩ **ಲೋಕಮಾನ್ಯ ಟಿಳಕ** (ಸಚಿತ್ರ ಜೀವನಚರಿತ್ರ) ಬರೆದವರು ಶ್ರೀ. ಭಾಲಚಂದ್ರ ಭಾಣೀಕರ, ಸಮಾಜ ಪುಸ್ತಕಾಲಯ, ಭಗತ ಸಿಂಗ ಬೀದಿ, ಧಾರವಾಡ. ಕ್ರಾ. ಆ. ೬೦ ಪುಟಗಳು. ಬೆಲೆ ೦–೧೨–೦.

೮೪ **ರಸಿಕಪಕ್ಷಿ** (ಕವನ ಸಂಕಲನ) ಶ್ರೀ. ಬ ಗಿ. ಯಲ್ಲಪ್ಪ. ಯವರು. ಪ್ರಕಾಶಕರು ಸ್ನೇಹ ಪ್ರಕಾಶನ, ಶಮನೇವಾಡಿ. ಕ್ರಾ. ಆ. ೬೪ ಪುಟಗಳು. ಬೆಲೆ ೧–೦–೦.

೮೫ **ಉದ್ಯೋಗ–ವ್ಯಾಪಾರ** (ಮರಾಠಿಯಲ್ಲಿ ವಾರ್ಷಿಕ ಸಂಪುಟ) ಸಂಪಾದಕರು ಶ್ರೀ. ನಾ. ಮ. ತಾಕೂರ ಬಿ ಎ. (ಆನರ್ಸ್) ಪ್ರಕಾಶಕರು ವ್ಯಾರಾಮಾವುಂಟ್ ಪಬ್ಲಿಸಿಟಿ ಸಿಂಡಿಕೇಟ್ (ಪ್ರೈವೇಟ್) ಲಿಮಿಟೆಡ್, ಳಲಗ ಶನಿವಾರ, ಪುಣೆ ೨. ಡೆ. ಆ. ೨೬೮ ಪುಟಗಳು. ಬೆಲೆ ೩–೦–೦.

೮೬ **ಸಹಕಾರ** (ಮಾಸಪತ್ರಿಕೆಯ ನವರಾಜ್ಯೋದಯ ಸಂಚಿಕೆ) ಸಂಪಾದಕರು ಶ್ರೀ. ಪಿ. ಆರ್. ಕಂಠಿಯವರು. ಪ್ರಕಾಶಕರು ಮುಂಬಯಿ ಪ್ರಾಂತೀಯ ಸಹಕಾರಿ ಸಂಸ್ಥೆ, ಕೊಪ್ಪಳಕರ್ ಬಿಲ್ಡಿಂಗ್, ಅತ್ತಿಕೊಳ್ಳ, ಧಾರವಾಡ. ಕ್ರಾ. ೧೭೮ ಪುಟಗಳು. ಬೆಲೆ ೦–೮–೦.

೮೭ **ಜೀವನಾದ** (ಕವಿತಾ ಸಂಕಲನ). ಬರೆದವರು ಶ್ರೀಮಾನ್ ಕೃಷ್ಣಮೂರ್ತಿ ಪುರಾಣಿಕ ಅವರು. ಪ್ರಕಾಶಕರು ಸುದರ್ಶನ ಪ್ರಕಾಶನ, ಶಾರಾನಿವಾಸ, ತಿಪಟೂರು. ಕ್ರಾ. ಆ. ೭೬ ಪುಟಗಳು; ಬೆಲೆ ೧–೦–೦

೮೮ **ಲೋಕಮಾನ್ಯ ಟಿಳಕ ಚರಿತ್ರೆಯು** (ಸಂಸ್ಕೃತಭಾಷೆಯಲ್ಲಿ ಜೀವನಚರಿತ್ರ, ಬರೆದವರು ಶ್ರೀಮಾನ್ ಪಂಢರಿನಾಥಾಚಾರ್ಯ ಳಲಗಲಿ, ಸಂಪಾದಕ 'ಮಧುರವಾಣಿ' ಗದಗು. ಡೆ. ಆ. ೧೦೪ ಪುಟಿಗಳು. ಬೆಲೆ ೩–೦–೦; ಈ ವರ್ಷದ ರಿಯಾಯತಿಯು ಬೆಲೆ ೧–೮–೦.

೮೯ **ಮುಂಬಯಿ ಕರ್ನಾಟಕ ಸಂಘ** (೩೬ನೆಯ ವಾರ್ಷಿಕ ವರದಿ–ಹಾಗೂ ಲೆಕ್ಕ ಪತ್ರಿಕೆಗಳು ೧೯೫೫–೫೬). ಗೌರವ ಕಾರ್ಯದರ್ಶಿಗಳು ಶ್ರೀ. ವಿ. ಬಿ. ಜೇಶಪಾಂಡೆ ಮತ್ತು ಶ್ರೀ. ಡಿ. ವೈ. ದೀಕ್ಷಿತ ಅವರು. ಸಂಯುಗಿಸದನ, ಗಿರಗಾಂವ, ಮುಂಬಯಿ ೪. ಡೆ. ಆ. ೨೨ ಪುಟಗಳು.

೯೦ **ವಾಸಂತಿಯ ಶಂಖ ಮತ್ತು ಸಿಂಧಿಡ್ರೆಸ್** (ಎರಡು ಏಕಾಂಕಗಳು). ಲೇಖಕರು ಶ್ರೀ. ಕೈವಾರ ರಾಜಾರಾಯರು. ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಪೂ. ಕ್ಯಾ. ಆ. ೧೦೦ ಪುಟಗಳು. ಬೆಲೆ ೧–೮–೦.

೯೧ **ವೈದ್ಯನ ವೈಜಯಂತಿ** (ಅನುವಾದಿತ ಗ್ರಂಥ). ಮೂಲ ಇಂಗ್ಲಿಷ್ ಲೇಖಕರು: ಆರ್ಥರ್ ಇ ಹರ್ಟ್‌ಸ್ಟರ್ ಕನ್ನಡಿಸಿದವರು 'ಧನ್ವಂತ.' ಪ್ರಕಾಶಕರು ಮೆ. ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಕ್ರಾ. ಆ. ೧೫೪ ಪುಟಗಳು. ಬೆಲೆ ೧–೮–೦.

೯೨ **ಯಾವ ನಾಟಕ?** (ದೃಶ್ಯ ಸಂಕಲನ) ಲೇಖಕರು ಶ್ರೀ. ಎಸ್. ಕೆ. ಜೋಶಿ ಬಿ. ಎ. ಪ್ರಕಾಶಕರು ಶ್ರೀ. ಗುರುರಾಜ ಎಂ. ಹಬ್ಬು, ಆನಂದ ಸಾಹಿತ್ಯಮಂದಿರ, ಗಲಗಲಿ. ಕ್ರಾ. ಆ. ೬೪ ಪುಟಗಳು. ಬೆಲೆ ೧–೦–೦.

೯೩ **ಪಾಪಚ್ಚಿ** (ಮಕ್ಕಳ ಮಾಸಪತ್ರಿಕೆಯ ೧೯೫೬ ನವಂಬರ್ ವಿಶೇಷಾಂಕ). ಸಂಪಾದಕರು ಶ್ರೀ. ಕುಮಾರ ನೆಂಕಣ್ಣ. ೫ ಆರ್. ಟಿ. ಸ್ಟ್ರೀಟ್ ಬೆಂಗಳೂರು. ೨. ಕ್ರಾ. ಆ. ೬೪ ಪುಟಗಳು. ಬೆಲೆ ೦–೪–೦.

೯೪ **ಕುಮ್ಮಟಿವಲ್ಲಭ** (ಐತಿಹಾಸಿಕ ನಾಟಕ). ಬರೆದವರು ಶ್ರೀ. ವಸುದೇವ ಭೂಪಾಲಂ, ಶಿವಮೊಗ್ಗಾ. ಪ್ರಕಾಶಕರು ಶಶಿ. ಪ್ರಕಾಶನ, ಬೆಂಗಳೂರು. ೩. ಕ್ರಾ. ಆ. ೧೧೬ ಪುಟಗಳು ಬೆಲೆ ೧

೯೫ **ಶ್ರೀ ಪ್ರಸನ್ನವೆಂಕಟದಾಸರು** (ಜೀವನ–ಕೃತಿಪರಿಚಯ). ಲೇಖಕರು ಡಾ. ಎ ಟಿ. ಪಾಟೀಲ, ಎಂ. ಎ, ಪಿಎಚ್. ಡಿ. ಜಮಖಂಡಿ ಧಾರವಾಡದ ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ ಅವರ ಪ್ರಕಟನೆ. ಕ್ರಾ. ಆ. ೨೫೦ ಪುಟಗಳು. ಬೆಲೆ ೩೫೦ ಪುಟಗಳು. ಬೆಲೆ –೦–೦.

೯೬ **ಪುಸ್ತಕ ಪ್ರಪಂಚ** (ವಿಮರ್ಶಾತ್ಮಕ ಲೇಖನಸಂಕಲನ). ಲೇಖಕರು ಪ್ರೊ. ಸ. ಸ. ಮಾಳವಾಡ ಎಂ ಎ. ಅವರು. ಪ್ರಕಾಶಕರು ಜಯಪ್ರಕಾಶನ, ಧಾರವಾಡ. ಕ್ರಾ. ಆ. ೭೪ ಪುಟಗಳು ಬೆಲೆ ೧–೦–೦.

Printed by N. A. Hoskeri at the Vijaya press, Dharwar and published for the proprietors Jayanti publications, by K. S. Betgeri at the Jayanti office, Dharwar

ಮೋಬಿಲಾಯಿಲ್

ನಿಮ್ಮ ಎಂಜಿನ್ನನ್ನು

ರಕ್ಷಿಸುತ್ತದೆ

ಎಂಜಿನ್ ಇರುವುದು ಕಾರಿಗೆ ಶಕ್ತಿಯನ್ನು ಕೊಡಲಿಕ್ಕೆ. ಆದರೆ ಹುಳ್ಳು ಮತ್ತು ಬಿಟ್ಟಿಸ್ಮಗಳು ಒರಿಂಜರಿಸಿ ಪಕ್ಕಗಳಿಗೆ ಕಚ್ಚಿ ಕಚ್ಚಿ ಉಂಟಾಗುವ ಸವೆತ ಇತ್ಯಾದಿಂದ ಎಂಜಿನ್ನು ಸನ್ನನ್ನು ಕಾಪೇ ರಕ್ಷಿಸಿಕೊಳ್ಳಲಾರದು. ಆದುದರಿಂದ ಕಾರಿನ ಜಲಿಸುವ ಸ್ಥಳ ಭಾಗಗಳ್ಳಿ ಮೋಬಿಲಾಯಿಲ್ ರಕ್ಷಣೆಯು ಆಗತ್ಯ. ಪ್ರಪಂಚದಲ್ಲೆಲ್ಲಾ ಅತ್ಯಂತ ಹೆಚ್ಚು ಮಾರಾಟವಾಗುವ ಈ ಮೋಟಾರ್ ಆಯಿಲ್ನು ಉಪಯೋಗಿಸಿ ನಿಮ್ಮ ಎಂಜಿನ್ಗೆ ಅತ್ಯುತ್ತಮ ರಕ್ಷಣೆಯನ್ನು ಕೊಡಿರಿ. ಮೋಬಿಲಾಯಿಲ್ ಒಗುತ್ತದು ಹಾರುವ ಕುದುರೆಯು ಗುರುತಿನದ್ದಿ.

ಈ ಗುರುತು ಇರುವಲ್ಲೆಲ್ಲಾ ಒಬ್ಬ ಸ್ನೇಹಮಯ ಸ್ಟಾಂಡರ್ಡ್ ವ್ಯಾಪಾರಿಯು ಇರುತ್ತಾನೆ

Mobilgas

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ

(ಯು.ಎಸ್.ಎ.ದಲ್ಲಿ ಸಂಸ್ಥಾಪಿತವಾದುದು. ಮೈಲುಗಳಷ್ಟೊಳಗಿನಾರಂಭಯು ಮಾತ್ರ)

ಜಯಂತಿ

ಸಮ್ಮೇಳನ ಸಂಚಿಕೆ

ಉದ್ಘಾಟಕರಾಗಿ ದಯೆಮಾಡಿದ ಶ್ರೀ. ಕೆ. ಎಫ್. ಪಾಟೀಲ ಅವರನ್ನು
ಸ್ವಾಗತಾಧ್ಯಕ್ಷ ಶ್ರೀ. ಬೆಟಗೇರಿ ಕೃಷ್ಣಶರ್ಮರು ಹೂಮಾಲೆ ಶುಂಠಾಯಿಗಳನ್ನಿತ್ತು ಸತ್ಕರಿಸುತ್ತಿರುವರು.

JAYANTI

ಈ ಸಂಚಿಕೆಯಲ್ಲಿ :

ಇದು ಸಮ್ಮೇಳನ ಸಂಚಿಕೆ (ಸಂಪಾದಕೀಯ)
ಸಂಪಾದಕರು ೩೨೧

ಗೀತನಾಟಕ—ಅಪೇರಾ (ಪರಿಚಯ ಪ್ರಬಂಧ)
ಶ್ರೀ. ಜಯದೇವಸಿಂಗ್ ಮುಖ್ಯನಿರ್ದೇಶಕರು, ಆಕಾಶವಾಣಿ, ಬೆಂಗಳೂರು ೩೨೩

ಹಿಕಾರಿ (ಸಣ್ಣಕತೆ)
ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ ೩೨೫

ಸ್ವಾಗತಾಧ್ಯಕ್ಷರ ಭಾಷಣ
ಶ್ರೀ ಬೆಟಗೇರಿ ಕೃಷ್ಣಶರ್ಮ, ಧಾರವಾಡ ೩೩೧

ಅಧ್ಯಕ್ಷ ಶ್ರೀ. ಕೃಷ್ಣಕುಮಾರರು (ವ್ಯಕ್ತಿಪರಿಚಯ)
ಶ್ರೀ. ಜ. ಬಾ. ಕುಲಕರ್ಣಿ, ಧಾರವಾಡ ೩೩೩

ಸಮ್ಮೇಲನಾಧ್ಯಕ್ಷರ ನೊದಲಮಾತು
ಶ್ರೀ. ಕಲ್ಲೂರ ಕೃಷ್ಣಕುಮಾರ ಎಂ. ಎ. ಮುಂಬಯಿ ೩೩೪

ಎರಡನೆಯ ದಿನದ ಕಾರ್ಯಕಲಾಪಗಳು
ವಿಹಂಗಮ ೩೩೯

ಸಣ್ಣಕತೆಗಾರನ ದರ್ಶನ (ಭಾಷಣಸಂಗ್ರಹ)
ಡಾ. ರಂ. ಶ್ರೀ. ಮುಗಳಿ ಎಂ. ಎ., ಪಿಎಚ್. ಡಿ. ಸಾಂಗಲಿ ೩೪೦

ಮಹಿಳೆಯರು ಬರೆದ ಸಣ್ಣಕತೆಗಳು
ಶ್ರೀಮತಿ ಶಾಂತಾದೇವಿ ಮಾಳವಾಡ, ಧಾರವಾಡ ೩೪೩

ಸಣ್ಣಕತೆಯು ಬೆಳವಣಿಗೆ (ಪ್ರಬಂಧ)
ಶ್ರೀ. ಕೆ. ನರಸಿಂಹಮೂರ್ತಿ, ಬೆಂಗಳೂರು ೩೪೫

ನವ್ಯಕಥೆ-ತಂತ್ರ ಮತ್ತು ನುಂತ್ರ (ಪರಿಚಯ)
ಶ್ರೀ. ವೆಂ ಮು. ಜೋಶಿ, ಧಾರವಾಡ ೩೪೮

ಲಲಿತಪ್ರಬಂಧ (ವಿಚಾರಸಂಕಿರಣದ ಅಧ್ಯಕ್ಷೀಯ ಭಾಷಣ)
ಪ್ರೊ. ಸ. ಸ. ಮಾಳವಾಡ ಎಂ. ಎ. ಧಾರವಾಡ ೩೫೦

ಲಲಿತಪ್ರಬಂಧಗಳ ಸಂಕ್ಷಿಪ್ತ ಸಮಾಲೋಚನೆ (ಭಾಷಣ)
ಶ್ರೀ. ಎನ್. ಕೆ. ಕುಲಕರ್ಣಿ ಎಂ. ಎ., ಬಿ. ಟಿ ಧಾರವಾಡ ೩೫೧

ಮೂವರ ಭಾಷಣಗಳ ಸಂಗ್ರಹ ವರದಿ
ಸಂಗ್ರಹಕಾರರು ಶ್ರೀ. ಜ. ಎನ್. ಕುಂದರಗಿ, ಧಾರವಾಡ ೩೫೩

ವೈಜ್ಞಾನಿಕ ಲಲಿತಪ್ರಬಂಧಗಳು (ಪರಿಚಯ)
ಶ್ರೀ. ಪಿ. ವೆಂಕಟರಮಣಾಚಾರ್ಯರು, ಹುಬ್ಬಳ್ಳಿ ೩೫೫

ಪ್ರೊ. ಗೋಕಾಕ ಅವರ ಅಧ್ಯಕ್ಷೀಯ ಭಾಷಣ
ವಿಹಂಗಮರಿಂದ ಸಂಗ್ರಹಿತವಾದುದು ೩೫೭

ಮಲಯಾಳಿ ಕಥೆಗಳು (ಭಾಷಣ)
ಶ್ರೀ. ಪಿ. ಎಸ್. ಭಟ್ಟಾತಿರಿ, ಧಾರವಾಡ ೩೫೯

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೯ ಸಂಚಿಕೆ ೯

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ತೀರಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಇದು ಸಮ್ಮೇಳನಸಂಚಿಕೆ

ಕಳೆದ ತಿಂಗಳ ೧೬-೧೭ನೆಯ ದಿನಾಂಕಗಳಲ್ಲಿ ಧಾರವಾಡದಲ್ಲಿ ಅಖಿಲಕರ್ನಾಟಕ ಸಣ್ಣಕಥೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಳನವು ನಡೆಯಿತು. ಸ್ವಾಗತಮಂಡಲಿಯವರು ಸಮ್ಮೇಳನದ ಕಾರ್ಯಕಲಾಪದ ವರದಿಯನ್ನೆಲ್ಲ ಜಯಂತಿಯ ಮೂಲಕ ಪ್ರಕಟಿಗೊಳಿಸಲು ಬಯಸಿದರು. ಸಮ್ಮೇಳನದಲ್ಲಿ ನಡೆದ ಭಾಷಣ-ವಿಚಾರಸಂಕಿರಣಗಳು ಮಹತ್ತ್ವದುವಾಗಿ ಕಂಡುದರಿಂದ, ಜಯಂತಿಯ ವಾಚಕವರ್ಗಕ್ಕೆ ಅವು ಪ್ರಯೋಜನಕಾರಿಯೆನಿಸಬಹುದೆಂಬ ನಂಬುಗೆಯಿಂದ, ಈ ಸಂಚಿಕೆಯಲ್ಲಿ ಅವುಗಳನ್ನು ಸಂಗ್ರಹಿಸಿಕೊಡಲಾಗಿದೆ. ಒನೆಯ ವಿಚಾರ ಸಂಕಿರಣದಲ್ಲಿಯ ಮೂರು ಭಾಷಣಗಳನ್ನು ಮಾತ್ರ ಸ್ಥಳಾಭಾವದ ಮೂಲಕ ಈ ಸಂಚಿಕೆಯಲ್ಲಿ ಪ್ರಕಟಿಸಲಿಕ್ಕೆ ಸಾಧ್ಯವಾಗಲಿಲ್ಲ. ಅವುಗಳನ್ನು ಮುಂದೆ ಯಥಾವಕಾಶವಾಗಿ ಜಯಂತಿಯಲ್ಲಿ ಪ್ರಕಟಿಸಬಹುದು.

ಇದರಲ್ಲಿ ಪ್ರಕಟವಾದ ಬೇರೆ ಬೇರೆ ಭಾಷಣಕಾರರ ಭಾಷಣಗಳಲ್ಲಿಯ ವಿಚಾರಗಳನ್ನು ನೋಡಿದರೆ, ಆಧುನಿಕ ಸಾಹಿತ್ಯ ಯಾವ ಯಾವ ಸ್ವರೂಪದಿಂದ—ಯಾವ ಯಾವ ಮಾರ್ಗದಲ್ಲಿ—ನಡೆದಿದೆಯೆಂಬುದೂ, ನಮ್ಮ ನಾಡಿನ ಆಧುನಿಕ ಸಾಹಿತ್ಯ ಯಾವ ಮಟ್ಟದಲ್ಲಿ ಇದೆಯೆಂಬುದೂ ಗೊತ್ತಾಗುವುದು. ಸಮ್ಮೇಳನದ ವರದಿಯು ಜಯಂತಿಯ ಮೂಲಕ ಪ್ರಕಟವಾಗಲು ಅವಕಾಶವನ್ನು ಕಲ್ಪಿಸಿಕೊಟ್ಟುದಕ್ಕಾಗಿ, ಸ್ವಾಗತ ಮಂಡಲಿಯ ಸನ್ಮಾನ್ಯ ಸದಸ್ಯರಿಗೆಲ್ಲ ಜಯಂತಿ ಋಣಿಯಾಗಿದೆ.

ಸಂಚಿಕೆ ಹೊರಡಲು ವಿಲಂಬವಾಯಿತು

ಸಮ್ಮೇಳನದ ವರದಿಯೆಲ್ಲ ಸಂಗ್ರಹಗೊಳ್ಳಲು ಸ್ವಲ್ಪ ಅವಧಿ ಬೇಕಾಯಿತು. ಅಲ್ಲದೆ ಸಂಪಾದಕರ ಅನಾರೋಗ್ಯದ ಕಾರಣವು ಮೂಲಕ, ಮುದ್ರಣದ ಕಾರ್ಯ ನಿಧಾನವಾಗಿ ಸಾಗಿತು. ಈ ಸಲದ ಅಚ್ಚಿನ ಕರಡುಕಾಗದಗಳನ್ನು ಕೂಡ ಸಂಪಾದಕರಿಗೆ ನೋಡಲು ಸಾಧ್ಯವಾಗಿಲ್ಲ. ಸಾಲ್ಯಾರು ದಿನ ವಿಲಂಬವಾದರೂ ಸಂಚಿಕೆ ಹೊರಹೊರಟಿತಲ್ಲ ಎಂಬುದೇ ಒಂದು ಸಮಾಧಾನದ ಸಂಗತಿ. ಒಂದೇ ವ್ಯಕ್ತಿಯ ಮೇಲೆ ಅವಲಂಬಿಸಿದ ಕಾರ್ಯಗಳ ಹಣೆಬರಹವೇ ಇಷ್ಟು; ಹೊಣೆ ಹೊತ್ತ ವ್ಯಕ್ತಿ ಕ್ಷೇಮದಿಂದ ಇದ್ದನೊ, ಅವನ ಕಾರ್ಯ ಸುಗಮವಾಗಿ ನಡೆಯುವುದು; ಅಥವಾ ಕೊರತೆ ಬಂದಿತೊ, ಕಾರ್ಯಕ್ಕೆ ಅಡೆ-ತಡೆಯುಂಟಾಗುವುದು. ಕೆಲವು ಒನ ತರುಣಮಿತ್ರರ ಸಹಾಯವಿಲ್ಲದೆ ಹೋಗಿದ್ದರೆ, ಈ ಸಂಚಿಕೆಗೆ ಇನ್ನೂ ವಿಲಂಬನಾಗಬಹುದಾಗಿತ್ತು. ಶಕಾಲದಲ್ಲಿ ಸಹಕರಿಸಿದ ತರುಣ ಮಿತ್ರರಿಗೆಲ್ಲ ಹೃತ್ಪೂರ್ವಕ ಅಭಿನಂದನೆಗಳು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಸಮ್ಮೇಳನದ ಕಾರ್ಯಕ್ರಮಗಳಿಗೆಲ್ಲ ಅವಕಾಶಕೊಡಬೇಕಾಗಿ ಬಂದುದರಿಂದ, ಈ ತಿಂಗಳಲ್ಲಿಯೂ ವಿಮರ್ಶೆಯ ಶಿಕ್ಷಣರಂಗಕ್ಕೆ ಎಡೆದೊರೆಯದೆ ಹೋಯಿತು. ಆ ವಿಭಾಗವನ್ನು ಕುತೂಹಲದಿಂದ ಅಪೇಕ್ಷಿಸುವ ವಾಚಕರೂ ಹಲವರಿದ್ದಾರೆ; ಅವರನ್ನು ಎರಡು ತಿಂಗಳು ನಿರಾಶೆಗೊಳಿಸಿದಂತಾಗಿದೆ. ಮುಂದಿನ ಸಂಚಿಕೆಯಲ್ಲಿ ಆ ವಿಭಾಗವನ್ನು ತಪ್ಪದೆ ಪ್ರಕಟಿಸಲಾಗುವುದು.

ಜಯಂತಿಯ ಸಹಾಯಕರು

ಜಯಂತಿ ಆರ್ಥಿಕದೃಷ್ಟಿಯಿಂದ ವಿರೋಧಕ ಪರಿಸ್ಥಿತಿಯನ್ನು ಎದುರಿಸುತ್ತಲೇ ಹೊರಟಿದೆಯೆಂಬುದನ್ನು ಎಲ್ಲರೂ ಬಲ್ಲರು. ಮರುಭೂಮಿಯಲ್ಲಿಯ ನೀರೊರೆತಂತೆ ಅಲ್ಲಲ್ಲಿ

ಕೆಲವೊಂದು ವ್ಯಕ್ತಿಗಳ ಹೃದಯದಲ್ಲಿ ಜಯಂತಿಯ ಬಗೆಗೆ ಔದಾರ್ಯ ಉದಯಿಸುತ್ತಿರುವುದು ಸಂತೋಷದಸಂಗತಿ. ಮುಂಬಯಿಯಲ್ಲಿ ವಾಸಿಸುತ್ತಿರುವ ಶ್ರೀಮಾನ್ ಎಂ. ಎನ್. ಕಾಂಚನ ಅವರು, ೧೦ ರೂ. ಗಳನ್ನು ಕಳುಹಿಸಿರುವರು. ಹೈದರಾಬಾದಿನ ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಅವರು ಸಹಾಯಧನವೆಂದು ೫ ರೂ. ಗಳನ್ನು ಕಳುಹುತ್ತ ಹೀಗೆಂದು ತಮ್ಮ ಸದಾಶಯವನ್ನು ತಿಳುಹಿಸಿರುವರು :

" ಸಂಪಾದಕ ಮಹಾಶಯರಿ,

ಸವ್ರೇಮವಂನೆಗಳು. ಈ ಮೊದಲು ತಿಳುಹಿದಂತೆ ಜಯಂತಿಗಾಗಿ ೫ ರೂ. ಗಳನ್ನು ಸಹಾಯಧನವಾಗಿ ಕಳುಹಿದ್ದೇನೆ. ಸ್ವೀಕರಿಸಬೇಕು. ಜಯಂತಿಯಂತಹ ಪತ್ರಿಕೆಗಳಿಗೆ ನಾಡಿನ ಹಿರಿಯರಿಂದ, ಧನಿಕರಿಂದ, ಸಾಹಿತ್ಯಕರಿಂದ, ವಿದ್ಯಾರ್ಥಿಗಳಿಂದ ಮತ್ತು ರಸಿಕ ವಾಚಕರಿಂದ ಹಣಕಾಸಿನ ಬೆಂಬಲವು ದೊರೆಯುಬೇಕು. ಅಂತಹ ಬೆಂಬಲ ದೊರೆತು ಜಯಂತಿ ಬಹುಕಾಲ ಜೀವಿಸುವಂತೆ ನಾಡದೈವತವು ಅನುಗ್ರಹಿಸಬೇಕು. "

ಇಂತಹ ಅಭಿಮಾನಿಗಳ ವಿಶ್ವಾಸಕ್ಕಾಗಿಯೆ ಜಯಂತಿ ಬದುಕಿ ಕಾರ್ಯಮಾಡಬೇಕೆನ್ನುತ್ತಿದೆ. ಸಹಾನುಭೂತಿಯಿಂದ ನೆರವಿತ್ತ ಈ ಇಬ್ಬರು ಮಹನೀಯರಿಗೂ ವಂದನೆಗಳು.

ಸಹಾಯದ ಒಂದು ರುದ್ರರೂಪ

ಜಯಂತಿಯು, ಚಂದಾದಾರರಾಗಿರೆಂದು ಎಲ್ಲರಿಗೂ ಬಿನ್ನವಿಸಿಕೊಳ್ಳುವುದೇ ಹೊರತು, ಯಾವ ವ್ಯಕ್ತಿಯ ಮೇಲೂ ಒತ್ತಾಯ ಮಾಡುತ್ತಿಲ್ಲ. ಜಯಂತಿಯ ಕಷ್ಟನಷ್ಟಗಳ ಕಥೆ ಕೇಳಿದ ಸ್ನೇಹಿತರು ಕೊಬ್ಬರು, ಜಯಂತಿಗೆ ಸಹಾಯಮಾಡಬೇಕೆಂಬ ಸದುದ್ದೇಶದಿಂದಲೇ ೭ ಜನರನ್ನು ಚಂದಾದಾರರಾಗಲು ಒಪ್ಪಿಸಿ ಅವರ ವಿಳಾಸಗಳನ್ನು ನಮಗೆ ಕಳುಹಿಸಿದರು. ಕಳೆದ ಅಕ್ಟೋಬರ್ ತಿಂಗಳಿಂದ ಎಲ್ಲರಿಗೂ ಸಂಚಿಕೆಗಳನ್ನು ಕಳುಹುತ್ತ ಬಂದೆವು ಹೆಸರುಗಳೆಲ್ಲ ದೊಡ್ಡ ಜನರು ವೆ. ಡಾಕ್ಟರು, ತಹಸಿಲದಾರರು, ಸಂಸ್ಥೆಯ ಸೆಕ್ರೆಟರಿಗಳು ಇಂತಹವೇ ಇದ್ದರು ಆ ಪಟ್ಟಿಯಲ್ಲಿ. ಹಣ ಕಳುಹಲು ಪತ್ರಬರೆದರೆ ಯಾರಿಂದಲೂ ಹಣ ಬರಲಿಲ್ಲ. ನಮ್ಮ ಸ್ನೇಹಿತರು ಎಲ್ಲರಿಗೂ ವ್ಹಿ. ಪಿ. ಕಳುಹಲು ತಿಳುಹಿದರು. ಜನವರಿ ಸಂಚಿಕೆಯನ್ನು ಹಾಗೆ ಕಳುಹಿದರೆ, ಎಲ್ಲರಿಂದಲೂ V.P. ಗಳು ನಿರಾಕೃತವಾಗಿ ಬಂದುವು. ಈ ವ್ಯವಹಾರದಲ್ಲಿ ಜಯಂತಿ ೨೦-೨೨ ರೂ. ಗಳ ಹಾನಿಯನ್ನು ಸಹಿಸಬೇಕಾಯಿತು. ಪಾಪ, ಜಯಂತಿಗೆ ಸ್ವಲ್ಪ ಸಹಾಯ ಮಾಡಬೇಕೆಂದು ಮನಸ್ಸು ಮಾಡಿದ ಹತ್ತು ಸ್ನೇಹಿತರಿಗೆ ತುಂಬ ನಿರಾಶೆಯಾಗಿರಬಹುದು. ಅವರು ವಿಷಾದ ಪಟ್ಟುಕೊಳ್ಳದಿರಲಿ. ಇಂತಹ ಸಂದರ್ಭಗಳನ್ನು ಜಯಂತಿ ಹಲವು ಸಲ ಕಂಡಿದೆ. ಸಮಾಜದಲ್ಲಿ ದೊಡ್ಡವರೆಂದು ಸ್ಥಾನ ಹಿಡಿದು ಕುಳಿತ ನಮ್ಮ ನಾಡಿನ ಬಹಳ ಜನರಿಗೆ ಸಂಸ್ಕೃತಿಯೂ ಕಲ್ಪನೆಯೂ ಇಲ್ಲ. ಕರ್ತವ್ಯದ ಕಲ್ಪನೆಯೂ ಇಲ್ಲ. ಕನ್ನಡ ದಾಸಯ್ಯರಾಗಿ ಭಿಕ್ಷೆಗೆ ಹೊರಟಿದ್ದ ಸ್ವರ್ಗೀಯ ಶಾಂತ ಕವಿಗಳು ತಮಗೆ ಬಂದ ಅನುಭವವನ್ನು ಈ ಪದ್ಯದಲ್ಲಿ, ತುಂಬ ಅಚ್ಚೊತ್ತುವಂತೆ ಹೇಳಿದ್ದಾರೆ:

" ಚನ್ನದ ಕಡಗದ ಕೈ ಕಾಸನಿತ್ತಿತು,
ಕನ್ನದುಂಗುರದ ಕೈ ಇಲ್ಲೆಂದಿತು–
ಹೊನ್ನಿನೊಂಕೆಯ ಕೈ ಸುಮ್ಮನೆ ಕುಳಿತಿತು,
ಇನ್ನೊಂದು ಬಡಗೈ ಹಣಕೊಟ್ಟಿತು ! "

ಜಯಂತಿ ಇದುವರೆಗೆ ಬದುಕಿಬಂದುದು ಇಂತಹ ಬಡಗೈಗಳ ಹಣದಿಂದಲೆ. ಆಶೆಯಿಂದ ಹಣವಂತರ ಬಳಿಗೆ ಹೋದಾಗ, ಮುಖದ ಮೇಲೆ ಹೊಡೆಯುವಿಕೆಯೊಂದೇ ಹೆಚ್ಚುಸಲ.

ಕನ್ನಡ ಸಾಹಿತ್ಯಸಮ್ಮೇಳನ

ಈ ಸಲದ ಕನ್ನಡ ಸಾಹಿತ್ಯ ಸಮ್ಮೇಳನ ಕಳೆದ ಡಿಸೆಂಬರಿನಲ್ಲಿ ಕೂಡಬೇಕಾದುದು ಕೂಡಲಿಲ್ಲವಾದರೂ, ಅವನ್ನೇ ಮುಂಬರುವ ಮೇ ತಿಂಗಳಲ್ಲಿ ಧಾರವಾಡದಲ್ಲಿ ನೆರೆಯಿಸಬೇಕೆಂದು, ಕರ್ನಾಟಕ ವಿಶ್ವವಿದ್ಯಾನಿಲಯವು ನಿರ್ಣಯಿಸಿ ಕಾರ್ಯವನ್ನು ಪ್ರಾರಂಭಿಸಿರುವುದು. ಈಗಾಗಲೇ ಸ್ಥಳೀಯಸಮಿತಿಯೊಂದನ್ನು ನಿರ್ಮಿಸಿ, ಅನೇಕ ಜನ ಹೊರಗಿನ ಜನರನ್ನೂ ಅದರಲ್ಲಿ ಸೇರಿಸಿಕೊಂಡಿದೆ.

ವಿಶ್ವವಿದ್ಯಾನಿಲಯವು ಕೈಕೊಂಡು ಕೂಡಿಸಲಿರುವ ಸಾಹಿತ್ಯ ಸಮ್ಮೇಳನ, ಧಾರವಾಡದಂತಹ ಸಾಂಸ್ಕೃತಿಕ ಕೇಂದ್ರದಲ್ಲಿ ನೆರೆಯಲಿದೆ ಈ ಸಮ್ಮೇಳನವು ಕೇವಲ ಪರಂಪರೆಯ ಸಮ್ಮೇಳನದ ಪಾತ್ರೆ, ಯಾಗದೆ, ಹಲವು ಬಗೆಯ ವಿಧಾಯಕ ಕಾರ್ಯಕ್ರಮಗಳಿಂದ ಇದೊಂದು ವೈಶಿಷ್ಟ್ಯಪೂರ್ಣ ಸಮ್ಮೇಳನವಾಗುವುದೆಂದು ಜನರು ನಿರೀಕ್ಷಿಸಿದರೆ, ಅದರಲ್ಲಿ ಅಸ್ವಾಭಾವಿಕತೆಯೇನೂ ಇಲ್ಲ. ಸದ್ಯ ರೂಪುಗೊಂಡಿರುವ ಸ್ಥಳೀಯ ಸಮಿತಿ, ಆ ಬಗೆಯ ದೃಷ್ಟಿಯಿಂದ ತನ್ನ ಕಾರ್ಯವನ್ನು ಮುಂದುವರಿಸಬೇಕೆಂದು ನಮ್ಮ ವಿನ್ನಹ

ಸ್ಪಷ್ಟೀಕರಣ

ಸಂಪಾದಕರಿಗೆ ಬಂದಿರುವ ಹಲವು ಮುಖ್ಯತ್ವದ ಪತ್ರಗಳಿಗೆ ಅವರ ಅಸ್ವಾಸ್ಥ್ಯದ ಮೂಲಕ ಉತ್ತರ ಬರೆಯುಲಿಕ್ಕೆ ವಿಲಂಬವಾಗಿದೆ. ಅದಕ್ಕಾಗಿ ಯಾರೂ ವಿಪರೀತ ಭಾವಿಸಬಾರದು. ಉತ್ತರಕ್ಕಾಗಿ ದಾರಿ ಕಾಯಲು ಹಚ್ಚಿದುದನ್ನು ದಯೆಯಿಟ್ಟು ಕ್ಷಮಿಸಬೇಕು.

—ಸಂಪಾದಕರು

ಗೇಯನಾಟಕ [ಆಪೇರಾ]

ಒಂದು ಜನಪ್ರಿಯ ಕಲಾಪ್ರಕಾರ*

ಶ್ರೀ ಜಯದೇವಸಿಂಗ್, ಮುಖ್ಯ ನಿರ್ದೇಶಕರು: (ಆಕಾಶವಾಣಿ ಬೆಂಗಳೂರು)

"ಆಪೇರ" ಎಂಬ ಶಬ್ದವು ಲ್ಯಾಟಿನ್ ಮತ್ತು ಇಟಾಲಿಯನ್ ಭಾಷೆಗಳೆರಡರಲ್ಲೂ ದೊರೆಯುತ್ತದೆ. ಆಪೆರಾ ಅಂದರೆ, "ಕೃತಿ, ರಚನೆ" ಎಂದರ್ಥ. ಸಂಗೀತ ಮತ್ತು ನಾಟಕಗಳ ಸಂಬಂಧದಲ್ಲಿ ಇದನ್ನು ಪಾರಿಭಾಷಿಕ ಅರ್ಥದಲ್ಲಿ ಬಳಸಲಾಗುತ್ತದೆ. ಸಂಗೀತ ಪ್ರಧಾನಪಾತ್ರವನ್ನು ಗಳಿಸಿರುವಂತಹ ನಾಟಕಮನರಂಜನೆಗೆ 'ಗೇಯ' ಎಂದು ಕರೆಯಲಾಗುವುದು.

ಗೇಯ ನಾಟಕದಲ್ಲಿ ಹಲವು ರೀತಿಗಳಿವೆ. ಇಡೀ ದೃಶ್ಯದಲ್ಲಿ ನಿರಂತರವಾದ ಸಂಗೀತವಿರಬಹುದು; ಅಥವಾ ಸಂಗೀತಕಥನ, ಹಾಡುಗಳು, ಸಾನುರೂಹಿಕ ಗೀತೆಯೂಗಿರಬಹುದು; ಇಲ್ಲವೆ ಸಂಭಾಷಣೆಯಾದರೂ ಇರಬಹುದು. ಗೇಯನಾಟಕದಲ್ಲಿ ಬಹುಭಾಗ ಸಂಗೀತಕಥನವಾಗಿರುವುದು.

'ಕಥನ' ಎಂಬುದೂ ಪಾರಿಭಾಷಿಕ ಶಬ್ದವೇ. ಅದು ಸಂಗೀತಮಯ ಭಾಷಣ. ಯಾವುದೇ ನಿರ್ದುಷ್ಟವಾದ ಪ್ರಾಸ, ನಿಯಮವೂ ನಿರ್ಬಂಧವೂ ಅದಕ್ಕಿರುವುದಿಲ್ಲ.

ಯುರೋಪಿನಲ್ಲಿ, ಗೇಯನಾಟಕವು ಆರಂಭವಾದದ್ದು ೧೬ನೆಯ ಶತಮಾನದಲ್ಲಿ, ಫ್ಲೋರಾನ್ಸ್‌ನಲ್ಲಿ. ಪ್ರಥಮತಃ, ಇದನ್ನು ಉಸ್ತಾನಗಳಲ್ಲಿ ಪ್ರದರ್ಶಿಸಲಾಗುತ್ತಿತ್ತು. ಅನಂತರ ಸಾರ್ವಜನಿಕ ಪ್ರದರ್ಶನಕ್ಕಾಗಿ ಬೇಡಿಕೆ ಬಂದಿತು. ೧೬೩೭ರಲ್ಲಿ ವೆನಿಸ್‌ನಲ್ಲಿ ಮೊದಲನೆಯ ಗೇಯನಾಟಕಭವನವನ್ನು ನಿರ್ಮಿಸಲಾಯಿತು. ಅನಂತರ ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಗೀತನಾಟಕಗಳ ಪ್ರಚಾರವು ಆರಂಭವಾಯಿತು. ಅವು ಬುಖ್ಯವಾಗಿ ರಾಷ್ಟ್ರೀಯ ಭಾವನೆಯನ್ನು ಹೊಂದಿದ್ದುವು. ಜರ್ಮನಿಯಲ್ಲಿ ಮಧ್ಯಯುಗದ ಜಾತ್ಯತೀತ ಹಾಗೂ ಧಾರ್ಮಿಕ ವಿಷಯಗಳ ಮೇಲೆ ರಚಿಸಿದ ನಾಟಕ ನಾಟಕದ ಬೆಳೆವಣಿಗೆಗೆ ಸಹಾಯ ನೀಡಿದುವು ಇಂಗ್ಲೆಂಡಿನಲ್ಲಿ ಗೇಯನಾಟಕವು ಮೂಕ ನಾಟಕದಿಂದ ಬೆಳೆದು ಬಂದಿದೆಯೆಂದು ಹೇಳಲಾಗಿದೆ.

ಮೊದಲು ಗೇಯನಾಟಕಗಳಲ್ಲಿ ಸರಳವಾದ ಸಂಗೀತಕಥನಗಳಿರುತ್ತಿದ್ದುವು. 'ಹಾರ್ಪ್' ತಂತೀವಾದ್ಯ ಮಾತ್ರ ಪಕ್ಕವಾದ್ಯದಲ್ಲಿರುತ್ತಿತ್ತು. ಅನಂತರ ಅದರಲ್ಲಿ ವಿವಿಧ ರೀತಿಯ ಸಂಗೀತಕಥನಗಳು ಸೇರಿಕೊಂಡವು. ಪಕ್ಕವಾದ್ಯದಲ್ಲಿ ಬಳಸುವ ಸಂಗೀತೋಪಕರಣ ಸಂಖ್ಯೆಯೂ ಹೆಚ್ಚಾಯಿತು. ವೃಂದಗೀತೆಗಳು ಅದರಲ್ಲಿ ಸೇರಿಕೊಂಡುವು.

ಇಂದು ಗೇಯನಾಟಕವು ಹಲವು ಒಡಂಬಡಿಕೆಗಳಿಗೊಳಪಟ್ಟಿರುವುದು. ಅದರಲ್ಲಿ ಅತ್ಯಂತ ಮುಖ್ಯವಾದ ಒಡಂಬಡಿಕೆಯೆಂದರೆ, ಈ ನಾಟಕದ ಪಾತ್ರಧಾರಿಗಳು ತಮ್ಮ ಪಾಲಿನ ಸಂಭಾಷಣೆಗಳನ್ನು ಆಡುವುದಿಲ್ಲ; ಹಾಡುವರು. ಭಾವನಾಪ್ರಧಾನವಾದ ಭಾಗಗಳಲ್ಲಿ ವೃಂದಗೀತೆಗಳಿರುವುವು. ಇಂದಿನ ಗೇಯನಾಟಕದಲ್ಲಿ ವಾದ್ಯ ಸಂಗೀತದ ಪ್ರಮಾಣ ಹೆಚ್ಚಾಗಿರುವುದು.

ಭಾರತದಲ್ಲಿ ಗೇಯನಾಟಕಕ್ಕೆ ದೀರ್ಘವಾದ ಪರಂಪರೆಯಿದೆ. ಗೇಯನಾಟಕವು ಭಾರತದಲ್ಲಿ ಜನಪ್ರಿಯ ಕಲಾಪ್ರಕಾರವಾಗಿದೆ. ಗೇಯನಾಟಕಗಳಲ್ಲಿ ಅತ್ಯಂತ ಪ್ರಾಚೀನವಾದುದೆಂದರೆ, ಜಯದೇವ ಕವಿಯ 'ಗೀತಗೋವಿಂದ'. ಅದನ್ನು ಬೇರೆಬೇರೆಯ ವಿಮರ್ಶಕರು ಬೇರೆ ಬೇರೆ ರೀತಿಯಲ್ಲಿ ವಿವರಿಸಿರುವರು.

ಸರ್ ವಿಲಿಯಂ ಜೋನ್ಸ್‌ರವರು ಅದನ್ನು ಗ್ರಾಮ್ಯನಾಟಕವೆಂದು ಕರೆದಿರುವರು. ಲಾಸೆನ್‌ರವರು ಅದನ್ನು ಗೀತನಾಟಕವೆಂದು ಕರೆದಿರುವರು ವಾನ್ ಶ್ರೋಯೆಡರ್‌ರವರು ಅದು ಶುದ್ಧ ಯಾತ್ರಾವೆಂದು ಹೇಳಿರುವರು. ಗೀತನಾಟಕ ಅಥವಾ ಬಂಗಾಳ ಯಾತ್ರಾಸಂಗೀತ ನಾಟಕದ ಜಾತಿಗೆ ಸೇರಿದೆ. 'ಗೀತಗೋವಿಂದ' ವು ಪ್ರಥಮ ದರ್ಜೆಯ ಸಂಗೀತನಾಟಕ.

ಗೀತಗೋವಿಂದವು ಅಚ್ಚ ಭಾರತೀಯ ಸಂಗೀತನಾಟಕ. ಭಾರತೀಯ ಗೇಯನಾಟಕದಲ್ಲಿ ನೃತ್ಯವು ಸಾಮಾನ್ಯವಾಗಿ ಸಮಗ್ರ ಭಾಗವಾಗುತ್ತದೆ. ಸಂಗೀತವನ್ನು ವಿವಿಧ ಛಂದಸ್ಸು, ರಾಗ ಮತ್ತು ತಾಳಗಳಲ್ಲಿ ರಚಿಸಲಾಗುವುದು. ಬಂಗಾಳಿಯಲ್ಲಿ ಯಾತ್ರಾ, ವ್ರಜ ಭಾಷೆಯಲ್ಲಿ ರಾಸಲೀಲೆ, ಬಿಹಾರಿನಲ್ಲಿ ಮೈಥಿಲಿ ನಾಟಕಗಳು ಗುಜರಾತಿನಲ್ಲಿ ಭಾನೈನೇಶಗಳು, ಉತ್ತರ ಪ್ರದೇಶದಲ್ಲಿ ನವಟಂಕಿ– ಇವೆಲ್ಲ ಗೇಯನಾಟಕದ ಹಲವು ರೂಪಗಳು. ಅವುಗಳಲ್ಲಿ, ಯಾತ್ರಾ ರಾಸಲೀಲೆ, ಮತ್ತು ನವಟಂಕಿ ಇವಿನ್ನೂ ಜೀವಂತವಾಗಿರುವ ಶಲೆ, ಮೈಥಿಲೀ ನಾಟಕಗಳು ಕಣ್ಮರೆಯಾಗಿವೆ. ಇತ್ತೀಚೆಗೆ ಆಕಾಶವಾಣಿಯ ಡೈರೆಕ್ಟರ್ ಜನರಲ್ಲಾದ ಶ್ರೀ. ಜೆ. ಸಿ. ಮಾಥುರ್ ಮತ್ತು ಆಕಾಶವಾಣಿಯ ಸಂಗೀತವಿಭಾಗದ ಮುಖ್ಯ ನಿರ್ದೇಶಕರಾದ ಡಾ|| ಸುಮತಿ ಮುಟಾತ್ಕರ್‌ರವರು, ಬಿಹಾರದಿಂದ ಮೈಥಿಲೀ ನಾಟಕದ ಕೆಲವುಹಸ್ತಪ್ರತಿಗಳನ್ನು ಸಂಗ್ರಹಿಸಿರುವರು. ಅವು ನಿಶ್ಚಿತ ರಾಗಗಳಲ್ಲಿ ಮತ್ತು ತಾಳಗಳಲ್ಲಿ ರಚಿಸಲಾದ ಹಾಡುಗಳಾಗಿವೆ. ಈ ರೀತಿಯ ನಾಟಕಗಳನ್ನೂ ಯಾರೂ ಈಗ ಅಭಿನಯಿಸುತ್ತಿಲ್ಲ.

ಕಳೆದ ಕೆಲವು ವರ್ಷಗಳಿಂದ ಭಾರತದ ಹಲವು ಪ್ರಮುಖ ಆಧುನಿಕಭಾಷೆಗಳಲ್ಲಿ ಗೇಯನಾಟಕಗಳನ್ನು ರಚಿಸಿ ಪ್ರಯೋಗಿಸ-

*ಬೆಂಗಳೂರಿನ ಭಾರತ ಸರಕಾರದ ಆಕಾಶವಾಣಿಯ ಕೃಪೆಯಿಂದ.

ಲಾಗುತ್ತಿದೆ. ಅವುಗಳನ್ನು ಮುಖ್ಯವಾಗಿ ಪಾಶ್ಚಿಮಾತ್ಯ ಮಾದರಿಯಲ್ಲಿ ರಚಿಸಲಾಗಿದೆ.

ಇಂದು ನಮ್ಮ ರಾಷ್ಟ್ರೀಯ ಗೇಯನಾಟಕಗಳನ್ನು ಏರೋಪ್ಯ ಗೇಯನಾಟಕಗಳನ್ನು ಏರೋಪ್ಯ ಗೇಯ ನಾಟಕಗಳ ಮಾದರಿಯಲ್ಲಿ ರಚಿಸಬೇಕೆ ? ಅಥವಾ ನಮ್ಮ ಪ್ರಾಚೀನ ಗೀತನಾಟಕದ ಮಾದರಿಯಲ್ಲಿ ರಾಗ ವತ್ತು ತಾಳಬದ್ಧವಾಗಿ ರಚಿಸಬೇಕೆ ? ಎಂಬುದು ಇಂದಿನ ಸಮಸ್ಯೆಯಾಗಿದೆ.

ನಮ್ಮ ರಾಸಲೀಲೆ ಮತ್ತು ನವಟಂಕಿ ಇತ್ಯಾದಿಗಳ ಮಾದರಿಯಲ್ಲಿ ರಚಿಸಬೇಕೆಂದು ನನಗೆ ತೋರುತ್ತದೆ. ಪಾಶ್ಚಾತ್ಯ ಮಾದರಿಯು ಭಾರತೀಯ ಶ್ರೋತೃಗಳಿಗೆ ಅಷ್ಟಾಗಿ ಸರಿಹೋಗುವುದಿಲ್ಲ. ಆಧುನಿಕ ಗೇಯನಾಟಕದಲ್ಲಿ ಪ್ರಾಚೀನ ಪರಂಪರೆಗಳಿಗನುಗುಣವಾಗಿ ನೃತ್ಯವನ್ನು ಸುಲಭವಾಗಿ ಅಳವಡಿಸಿಕೊಳ್ಳಬಹುದು. ಗದ್ಯಸಂಭಾಷಣೆ ಅಥವಾ ಗದ್ಯಭಾಗಗಳು ಕನಿಷ್ಠ ಮಿತಿಯಲ್ಲಿರಬೇಕು ವಿವಿಧ ಗೀತೆಗಳ ನಡುವೆ ಅಗತ್ಯ ಸಂಬಂಧವನ್ನು ಕಲ್ಪಿಸುವುದಕ್ಕೆ ಮಾತ್ರ ಗದ್ಯಭಾಗವನ್ನು ಬಳಸಿಕೊಳ್ಳಬೇಕು.

ನಮ್ಮ ಗೇಯನಾಟಕಗಳು ಧಾರ್ಮಿಕವಾಗಿಯೂ, ಜಾತ್ಯತೀತವಾಗಿಯೂ ಇವೆ. ಗೀತಗೋವಿಂದ ಹಾಗೂ ರಾಸಲೀಲಾ ನಾಟಕಗಳು ಧಾರ್ಮಿಕವಾಗಿದ್ದರೆ, 'ನವಟಂಕಿ' ಜಾತ್ಯತೀತವಾಗಿರುವುದು.

ಕಥಾವಸ್ತುಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ಧಾರ್ಮಿಕ ಸಾಮಾಜಿಕ, ಐತಿಹಾಸಿಕ ಜೀವನಚರಿತ್ರೆ ಹಾಗೂ ಇತರ ವಿಷಯಗಳಿಗೆ ಸಂಬಂಧಿಸಿದಂತೆ, ವಿಪುಲವಾದ ಕಥಾವಸ್ತುಗಳನ್ನು ಬಳಸಿಕೊಂಡು ಗೇಯನಾಟಕಗಳನ್ನು ಬರೆಯಬಹುದು. ನಮ್ಮ ಪ್ರತಿಭೆ ಮತ್ತು ಅಭಿರುಚಿಗೆ ಅನುಗುಣವಾದ ಗೇಯನಾಟಕದ ರಾಷ್ಟ್ರೀಯ ರೂಪವು ಆದಷ್ಟು ಬೇಗ ಉದಯವಾಗುವುದೆಂದು ಆಶಿಸೋಣ.

೫ನೆಯ ಸಣ್ಣ ಕತೆಗಾರರ ಹಾಗೂ ಲಲಿತ ಪ್ರಬಂಧಕಾರರ ಸಮ್ಮೇಲನ, ಧಾರವಾಡ

ಮೊದಲ ದಿನದ ಕಾರ್ಯಕ್ರಮಗಳು

೧೨-೧-೧೯೫೭

ಹೊಸ ಕನ್ನಡ ರಾಜ್ಯದ ರಚನೆಯ ನಂತರ ಮೊದಲ ಸಭೆ ಧಾರವಾಡದಲ್ಲಿ ಈ ಸಾಹಿತ್ಯಸಮ್ಮೇಲನ ನೆರವೇರಿತು. ಮೊದಲಿನ ನಾಲ್ಕು ಸಮ್ಮೇಲನಗಳು ಬೆಂಗಳೂರಿನಲ್ಲಿಯೇ ಜರುಗಿದ್ದವು.

೧೨-೧-೧೯೫೭ನೆಯ ದಿನಾಂಕ ಸಂಜೆ ೬ ಗಂಟೆಗೆ ಸಮ್ಮೇಲನದ ಪ್ರಾರಂಭೋತ್ಸವವು ವಿಜೃಂಭಣೆಯಿಂದ ನಡೆಯಿತು. ಧಾರವಾಡ ನಗರಸಭಾಭವನವು ಸಾಹಿತಿಗಳಿಂದ, ಪ್ರಮುಖ ಜನರಿಂದ ತುಂಬಿದ್ದಿತು. ಸರ್ವಶ್ರೀ. ಆಲೂರ ವೆಂಕಟರಾಯರು, ಹುಯಿಲಗೋಳ ನಾರಾಯಣರಾಯರು, ಸ. ಸ. ಮಾಳವಾಡ, ಬುರ್ಲಿ ಬಂದುಮಾಧವ, ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿ ಮುಂತಾದವರು ಆಗಮಿಸಿದ್ದರು.

ಕುಮಾರಿ ಹರಟಿಲಕರ ಅವರು ಉದಯವಾಗಲಿ ಗೀತೆ ಹಾಡಿದ ನಂತರ ಸ್ವಾಗತಾಧ್ಯಕ್ಷರಾದ ಕವಿಭೂಷಣ ಬೆಟಗೇರಿ ಕೃಷ್ಣಶರ್ಮ ಅವರು ಎಲ್ಲರನ್ನು ಸ್ವಾಗತಿಸಿ ಭಾಷಣಮಾಡಿದರು. ಅವರು ತಮ್ಮ ಭಾಷಣದಲ್ಲಿ ವಾಸ್ತವವಾದ ಹಾಗೂ ವಾಸ್ತವವಾದಿ ಸಾಹಿತ್ಯಗಳ ಔಚಿತ್ಯಗಳನ್ನು ಪ್ರಸ್ತಾಪಿಸಿ ಹೇಳಿದರು. ತರುವಾಯ ಶ್ರೀಮಾನ್ ಕೆ. ಎಫ್. ಪಾಟೀಲರು ಉದ್ಘಾಟನಾ ಭಾಷಣ ಮಾಡಿದರು. "ಜೀವನವನ್ನು ಇದ್ದಂತೆ ಚಿತ್ರಿಸುವುದಲ್ಲದೆ ಜೀವನ ಹೇಗೆ ಇರಬೇಕೆಂಬುದನ್ನು ಚಿತ್ರಿಸುವುದು ಸಾಹಿತಿಯಾದವನ ಹೊಣೆ" ಎಂಬ ಮುಖ್ಯ ಮಾತನ್ನು ಹೇಳಿದರು. ಶ್ರೀ. ಬೆಟಗೇರಿ ಕೃಷ್ಣಶರ್ಮ ಅವರು ಸಮ್ಮೇಲನದ ಉದ್ಘಾಟಕರಾದ ಶ್ರೀ. ಕೆ. ಎಫ್. ಪಾಟೀಲ ಅವರಿಗೆ ಹಾರ ತುರಾಯಿ ಅರ್ಪಿಸಿ ಸನ್ಮಾನಿಸಿದರು.

ಶ್ರೀ. ದ. ಬಾ. ಕುಲಕರ್ಣಿ ಅವರು ಸಮ್ಮೇಲನದ ಅಧ್ಯಕ್ಷರಾಗಲು ಶ್ರೀ. ಕೃಷ್ಣಕುಮಾರ ಕಲ್ಲೂರ ಅವರನ್ನು ಸೂಚಿಸಿ ಅವರ ಪರಿಚಯ ಮಾಡಿಕೊಟ್ಟರು. ಬೆಂಗಳೂರಿನ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ. ಕೆ. ಗೋಪಾಲಕೃಷ್ಣರಾಯರು ಸೂಚನೆಯನ್ನು ಅನುಮೋದಿಸಿದರು.

ಶ್ರೀ. ಕೃಷ್ಣಕುಮಾರ ಕಲ್ಲೂರ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ ನಂತರ, ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ. ವರದರಾಜ ಹುಯಿಲಗೋಳ ಅವರು ಸಮ್ಮೇಲನಕ್ಕೆ ಯುಕಕೋರಿ ಬಂದ ಶುಭ ಸಂದೇಶಗಳನ್ನು ಓದಿದರು. ಶ್ರೀ. ಶಿವಮೂರ್ತಿಶಾಸ್ತ್ರಿ, ದ. ರಾ. ಬೇಂದ್ರೆ, ಎಸ್. ವ್ಹಿ. ರಂಗಣ್ಣ, ಗೊರೂರ, ಇದಿನಬ್ಬ ಮುಂತಾದವರಿಂದ ಶುಭಸಂದೇಶಗಳು ಬಂದಿದ್ದವು.

ನಂತರ ಶ್ರೀ. ಕೃಷ್ಣಕುಮಾರ ಕಲ್ಲೂರ ಅವರು ಅಧ್ಯಕ್ಷಭಾಷಣವನ್ನು ಮಾಡಿದರು. ಕೊನೆಗೆ ಶ್ರೀ. ಬೆಟಗೇರಿ ಕೃಷ್ಣಶರ್ಮ ಅವರು ಸಮಾರೋಪ ಮಾತನಾಡಿದರು.

ಶಿಕಾರಿ

(ಸಣ್ಣಕಥೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮಿ, ಕರಗಡ

ಬೆಕ್ಕಿನದನ್ನಿ ಮುಳ್ಳಿಗೆ ಹಾಕಿದ ಹೆದರಿಕೆ, ಜೀವಿಸಿರುವವರೆಗೂ ದೇಹಾಳದಂತೆ ಅವರನ್ನು ಬೆಸ್ತುಹತ್ತಿ ಕಾಡುವುದು. ಹುಲಿಯನ್ನು ಎದುರಿಸಬಲ್ಲ ಗಂಡೆದೆಯ ಚಂದ್ರಿ, ಬೆಕ್ಕುಗಳನ್ನು ಕಂಡಾಗ ಬೆದರಿಸಾಯುವಂತೆ ಆಗುವುದರ ಕಾರಣವೇನು ?

ಮಲ್ಲೇಶ ಚಂದ್ರಿಯನ್ನು ನೋಡಲು ಹೋಗಿದ್ದಾಗಲೇ, ಚಂದ್ರಿಯ ತಂದೆ ಅವಳ ಗುಣವರ್ಣನೆ ಮಾಡುತ್ತ ಹೇಳಿದ್ದರು:—

"ನಮ್ಮ ಚಂದ್ರಿ ತುಂಬಾ ಧೈರ್ಯವಂತೆ. ಅಟ್ಟಡವಿಯ ಮಧ್ಯದಲ್ಲಾದರೂ ಭಯವಿಲ್ಲದೆ ಸಂಸಾರ ಮಾಡ್ತಾಳೆ....ಅವಳ ನಾತಿಯಲ್ಲಿ ಹರಿಯುತ್ತಿರೋದು ಹೆಸರಾದ ಶಿಕಾರಿವಂಶದ ರಕ್ತ. ಏನು ಮಾಡೋದು ? ಚಂದ್ರಿ ಗಂಡಾಗಿದ್ದಿದ್ದರೆ..." ಎಂದು ನಿಡುಸುಯ್ದರು.

ಚಂದ್ರಿಯ ತಾಯಿಯೂ ದನಿಗೂಡಿಸಿದರು :

"ಹೌದು, ಅವಳಿಗೆ ಭಯವೇ ಇಲ್ಲ. ಮೊನ್ನೆ ಗೌಡರ ಮನೆಯ ಹಾಯುವ ಹೋರಿ ಅಟ್ಟಿಸಿಕೊಂಡು ಬಂದಾಗ, ಅದರ ಎರಡು ಕೊಂಬುಗಳನ್ನೂ ಗಟ್ಟಿಯಾಗಿ ಹಿಡಿದು ನಿಲ್ಲಿಸಿಬಿಟ್ಟಳು! ನಮ್ಮಂತವರಾಗಿದ್ದರೆ ಅಲ್ಲೇ ಹೆದರಿ ಪ್ರಾಣಬಿಡ್ತಿದ್ದೆವು! ಊರಾಚೆ ಹಾಳುಗುಡಿ ಇಲ್ಲವೇ—ಅಲ್ಲಿ ದೆವ್ವ ಭೂತ ಇವೆ ಅಂತ ಜನ ಬೆದರ್ತಾರೆ. ಗುಡಿಯ ಸುತ್ತಲೂ ಒಳ್ಳೆದು ಮೇವಿದ್ದರೂ ದನ ಮೇಯಿಸುವುದಕ್ಕೆ ಅಲ್ಲಿಗೆ ಹೋಗಲು ಹೆದರುತ್ತಾರೆ. ನಮ್ಮ ಚಂದ್ರಿ ಏಷ್ಟು ಹೇಳಿದರೂ ಕೇಳದೆ, ಅಲ್ಲಿಗೇ ದನ ಹೊಡೆದುಕೊಂಡು ಹೋಗೋಳು. ಅವಳು ಹುಟ್ಟಿರುವ ಯೋಗನೇ ಹಾಗಿದೆಯಂತೆ. ಅವಳ ಜಾತಕ ನೋಡಿ ಅಯ್ಯನೆವರು ಹೇಳಿದ್ದರು:—ಹುಟ್ಟಿದ್ದು ಗಂಡಾಗಿದ್ದರೆ, ಹುಲಿ ಶಿಕಾರಿ ಮಾಡಿ ದೊಡ್ಡ ಹೆಸರು ಗಳಿಸುವ ಯೋಗವಿತ್ತು—ಅಂತ."

"ಏನು ಮಾಡೋದು ಚಂದ್ರಿ ಹೆಣ್ಣಾಗಿಬಿಟ್ಟಳು—ಇನ್ನೊಬ್ಬರ ಒಡವೆ ಎಷ್ಟಾದರೂ! ನನ್ನ ಅನಂತರ ನಮ್ಮ ವಂಶದವರು ಎಂತಹ ಶಿಕಾರಿಗಳು, ಎಷ್ಟು ಸಾಹಸವಂತರು ಎಂಬೋದನ್ನ ಜನಕ್ಕೆ ತಿಳಿಸುವರು ಒಬ್ಬರಿಲ್ಲದೆ ಹೋಗ್ತಾರಲ್ಲಾ ಅಂತ ನನ್ನ ಚಿಂತೆ. ಶಿವನಿಚ್ಛೆ—ಏನು ಮಾಡೋಕೆ ಸಾಧ್ಯ ?" ಎಂದು ಸುಯ್ದರು, ಚಂದ್ರಿಯ ತಂದೆ.

ಮಲ್ಲೇಶ ಈ ಗುಣವರ್ಣನೆಗಿಂತಲೂ ಅವಳ ರೂಪಿಗೆ ಮರುಳಾಗಿ ಒಪ್ಪಿಗೆ ಕೊಟ್ಟ. ತಂದೆ-ತಾಯಿಯರಿಗೆ ಅವಳೊಬ್ಬಳೇ ಮಗಳು. ಆ ರೀತಿ ಮೆಚ್ಚುನುಡಿಯಾಡುವುದು ಬಹಳ ಸಹಜವೆಂದು ಭಾವಿಸಿದ.

ಚಂದ್ರಿ ಒಳ್ಳೆಯ ಚೆಲುವೆ. ದಿಟ್ಟೆಯೂ ನಿಜ. ತಂದೆ-ತಾಯಿಯರು ಅವಳ ದಿಟ್ಟತನವನ್ನು ಉತ್ಪ್ರೇಕ್ಷೆ ಮಾಡಿರಲಿಲ್ಲ. ಆದರೆ ಅವಳ ದುರ್ಬಲತೆಯೊಂದನ್ನು ಹೇಳಿರಲಿಲ್ಲ.

ಚಂದ್ರಿ ದೆವ್ವ-ಭೂತಗಳಿಗಾಗಲಿ, ಸಿಂಹ-ಹುಲಿಗಳಿಗಾಗಲಿ ಹೆದರುತ್ತಿರಲಿಲ್ಲ; ಆದರೆ ಅವಳಿಗೆ ಬೆಕ್ಕನ್ನು ಕಂಡರೆ ತುಂಬಾ ಭಯ. ರಾತ್ರಿ ಬೆಕ್ಕುಗಳು ಜಗಳವಾಡಿ ಅಳುವುದು ಕೇಳಿಸಿದರೆ, ಚಂದ್ರಿ ಭೀತಿಯಿಂದ ಎಳೆಯ ಮಗುವಿನಂತೆ ತಾಯ ಸೆರಗಿನಲ್ಲಿ ಬಚ್ಚಿಟ್ಟುಕೊಳ್ಳುವಳು! ಹೊರಗಡೆ ಎಲ್ಲಾದರೂ ಬೆಕ್ಕನ್ನು ಕಂಡರೆ, ಬೆಚ್ಚಿ ಕಿಟಾರನೆ ಕಿರುಚಿಕೊಳ್ಳುವಳು.

ಚಂದ್ರಿಯ ಈ ಭೀತಿಯನ್ನು ನೋಡಿ ಎಲ್ಲರಿಗೂ ಜೋಕ್ಯ. ಈ ಬಗ್ಗೆ ಅಪಹಾಸ್ಯ ಮಾಡಿದರೆ, ಚಂದ್ರಿ ವಿವರಣೆ ಕೊಡುವಳು :—

"ಬೆಕ್ಕು ಹೊಂಚುಹಾಕಿ ಹಾರಿಬಿಡುತ್ತೆ. ಅದರ ಈ ಕಳ್ಳತನ ಕಂಡೇ ನನಗೆ ಹೆದರಿಕೆ. ಎದುರಿಗೆ ನಿಂತು ಕಾದಾಡುವುದಾದರೆ ಹುಲಿಗೂ ಸಹ ನಾನು ಹೆದರುವುದಿಲ್ಲ."

× × × ×

ಮಲ್ಲೇಶ ಚಂದ್ರಿಯನ್ನು ಲಗ್ನವಾದ. ಚಂದ್ರಿ ಗಂಡನ ಮನೆಗೆ ಹೋದ ಮೊದಲ ದಿನ. ಲಜ್ಜೆಯೇ ಮೂರ್ತೀಭವಿಸಿದಂತಿದ್ದಳು ಚಂದ್ರಿ. ಮಲ್ಲೇಶ ಅವಳ ಬಾಯಬಿಡಿಸಲು ಯತ್ನಿಸಿ ವಿಫಲನಾದ.

ಸರಿರಾತ್ರಿ. ಚಂದ್ರಿಗೆ ನಿದ್ರೆಹತ್ತಿ ಎಚ್ಚರವಾಯ್ತು. ಕಣ್ಬಿಟ್ಟು ನೋಡಿದಳು—ಕಿಟಕಿಯಲ್ಲಿ ಎರಡು ಉರಿಯುವ ದೀಪಗಳೋ, ಹೊಳೆಯುವ ಮಣಿಗಳೋ! ಚಂದ್ರಿ ದೆವ್ವನೆ ಬೆವತಳು—ಹೊಸಸ್ಥಳ, ಇಲ್ಲಿ ಏನೇನಿದೆಯೋ ಮಲ್ಲೇಶನನ್ನೆಬ್ಬಿಸಲೂ ಸಂಕೋಚ. ಆದರೂ ಮನಸ್ಸಿಗೆ ಧೈರ್ಯ ತಂದುಕೊಂಡು ಕಣ್ಮುಚ್ಚಿ ದೇವರನ್ನು ನೆನೆದಳು.

ಕಿಟಕಿಯಿಂದ ಏನೋ ನೆಗೆದ ಸದ್ದು ಕೇಳಿಸಿತು. ಚಂದ್ರಿ ದಿಗ್ಗನೆ ಎದ್ದು ಕೂತಳು. ಮುಚ್ಚಿದ ಕಣ್ಣಿಳನ್ನು ತೆರೆಯಲಿಲ್ಲ.

"ಮಿಯಾವ್" ಎಂದಿತು ಬೆಕ್ಕು ಕೋಣೆಯೊಳಗೆ. ತಕ್ಷಣ ಚಂದ್ರಿ ಕಿಟಾರನೆ ಕಿರುಚಿಕೊಂಡುಬಿಟ್ಟಳು.

ಮಲ್ಲೇಶ ಗಾಬರಿಯಿಂದ ಎದ್ದು ಕೂತ. "ಏನಾಯಿತು ಚಂದ್ರಿ ? ಕೆಟ್ಟ ಕನಸುಬಿತ್ತಾ ?"

ಚಂದ್ರಿಗೆ ಭಯದಿಂದ ಮಾತೇ ಹೊರಡಲಿಲ್ಲ. ಅವಳ ಮೈ ನಡುಗುತ್ತಿತ್ತು.

ಮಲ್ಲೇಶ ತುಂಬಿಬಂದ ಕರುಣೆಯಿಂದ ಅವಳನ್ನು ಹತ್ತಿರಕ್ಕೆ ಸೆಳೆದುಕೊಂಡು ಮತ್ತೆ ಕೇಳಿದ.

ನಸುಗತ್ತಲಲ್ಲೇ ಅವಳ ಕಣ್ಣುಗಳು ಕೋಣೆಯ ಮೂಲೆಮೂಲೆಯನ್ನೆಲ್ಲಾ ಹುಡುಕುತ್ತಿದ್ದುವು.

"ಬೆಕ್ಕು!" ಎಂದಳು ಭೀತಿಯಿಂದ.

ಬೆಳ್ಳಿ ಮತ್ತೆ ಕಿಟಕಿಗೆ ಹಾರಿ ಅಜಿಗೆ ನೆಗೆಯಿತು.

ಮಲ್ಲೇಶ ಸ್ಮಿತನಾದ. ಚಂದ್ರಿಯ ಧೈರ್ಯದ ವರ್ಣನೆ ಅವನಿಗೆ ನೆನಪಾಯಿತು.

"ಒಳ್ಳೆಯ ಧೈರ್ಯಸ್ಥೆ ನೀನು! ನಿನ್ನ ಪೂರ್ವಕರಿಲ್ಲಾ ದೊಡ್ಡ ಸಿಪಾಯಿಗಳು—ನಿನಗಿಷ್ಟು ಭಯ! ಹುಲಿಯಲ್ಲ, ಚಿರತೆಯಲ್ಲ-ಬೆಳ್ಳಿ! ಅದೂ ಮನೇಲಿ ಸಾಕಿದ್ದು! ನಿನ್ನ ಕೂಗು ಕೇಳಿ ಪಡಸಾಲೇಲಿ ಮಲಗಿರೋರು ಏನೆಂದುಕೊಂಡಾರು, ಯೋಚಿಸು—ನಾನು ನಿನ ಜಾಲಿಗೆ ಹುಲಿಯಾಗಿರುವೆನೇನೋ ಅಂದುಕೋತಾರೆ!"

ಅವನ ಹಾಸ್ಯದ ಮಾತಿಗೆ ಚಂದ್ರಿ ನಾಚಿದಳು. ನಾಚಿಕೆಯನ್ನೂ ಮೆಟ್ಟಿ, ಭೀತಿ ಮತ್ತೆ ಅವಳ ಬಾಯಿಬಿಡಿಸಿತು.

"ಬೆಳ್ಳಿನ್ನ ಸಾಕಿದೀರಾ?"

"ಹೂಂ. ಈ ಕರೀ ಬೆಳ್ಳಿನ್ನ ನಾನೇ ತಂದುಸಾಕಿದೆ. ಈಗ ನಾಲ್ಕು ಮರಿ ಹಾಕಿದೆ—ಕೊಟ್ಟಿಗೆಯ ಹತ್ತಿರ."

"ನಾಲ್ಕು ಮರೀನೇ?"—ಚಂದ್ರಿ ದುಗುಡದಿಂದ ಕೇಳಿದಳು.

"ಹೂಂ. ನಾಳೆ ನೋಡುವೆಯಂತೆ. ಕಿಟಕೀ ಮುಚ್ಚಲೇನು? ನಿರ್ಭಯವಾಗಿ ಮಲಗುವಿಯಂತೆ!"

ಚಂದ್ರಿಯನ್ನು ಮಲ್ಲೇಶ ತುಂಬಾ ಪ್ರೀತಿ-ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದ. ಅತ್ತೆ-ಮಾವಂದಿರು ಅದರದಿಂದ ನಡೆಸಿಕೊಳ್ಳುತ್ತಿದ್ದರು. ಆದರೂ ಅವಳಿಗೆ ನೆಮ್ಮದಿಯಿರಲಿಲ್ಲ. ಸದಾ ಭೀತಿ, ಸದಾ ಆತಂಕ-ಎಲ್ಲಾ ಆ ಹಾಳು ಬೆಳ್ಳಿಗಳಿಂದ.

ಕತ್ತಲಾಯಿತೆಂದರೆ ಅವಳ ಕುತ್ತಿಗೆಗೆ ಉರುಲು ಹಾಕಿದಂತಾಗುತ್ತಿತ್ತು. ಬೆಳ್ಳಿಗಳು ಮನೆಯಲ್ಲಿ ಸರ್ವಸ್ವಾಮ್ಯ ಪಡೆದಿದ್ದುವು. ಉಗ್ರಾಣಕ್ಕೆ ಹೋದರೆ ಅಲ್ಲಿಯೂ "ಮಿಯಾವ್" ಎನ್ನುವುದು ಅಡಿಗೆಮನೆಗೆ ಹೋದರೆ ಅಲ್ಲಿಯೂ "ಮಿಯಾವ್" ಶಬ್ದ!

ಚಂದ್ರಿ ಮನಸ್ಸನ್ನು ಬಿಗಿಹಿಡಿದು, ಬೆಳ್ಳಿನ್ನು ಕಂಡೊಡನೇ ಕಿರುಚುವುದನ್ನು ನಿಲ್ಲಿಸಿದ್ದಳು. ಆದರೆ ಆ ಭೀತಿ, ಆತಂಕಗಳು ಮಾತ್ರ ಅವಳೆದೆಯನ್ನೂ, ಮೈಯನ್ನೂ ನಡುಗಿಸಿಬಿಡುವುವು ರಾತ್ರಿ ಮಲಗಲೂ ಭಯ— ಕಿಟಕಿಯಲ್ಲಿ ಬೆಳ್ಳು ಬಂದೀತೆಂದು. ಕಿಟಕಿಯನ್ನು ಮುಚ್ಚುವ ಎಂದರೆ ಮಲ್ಲೇಶ ಸೆಕೆಯೆಂದು ಅಡ್ಡಿಪಡಿಸುವನು. ಚಂದ್ರಿ ಉಪಾಯವಂತೆ. ಕಿಟಕಿಗೆ ಕಸೂತಿಯ ಸರದೆ ಹಾಕಿ, ಆ ಸಮಸ್ಯೆಯನ್ನು ಬಗೆಹರಿಸಿದಳು.

ಚಂದ್ರಿ ಗಂಡನ ಮನೆಗೆ ಬಂದು ತಿಂಗಳಾಗಿತ್ತು. ಸಲಿಗೆಯಿಂದ ಮಲ್ಲೇಶನೊಡನೆ ಮಾತನಾಡುತ್ತಿದ್ದಳು:

"ನೋಡಿ, ಒಂದು ಬೆಳ್ಳು ಇದ್ದುದು ಈಗ ಐದಾಗಿವೆ. ಅವುಗಳ ಕಾಟ ವಿಪರೀತವಾಗಿದೆ. ಅವನ್ನ ಎಲ್ಲಿಗಾದರೂ ಬಿಟು ಬನ್ನಿ. ಅಲ್ಲದೆ ಬೆಳ್ಳು ಸಾಕುವುದು ಒಳ್ಳೇದಲ್ಲ ಸತ್ತಮೇಲೆ ಸ್ವರ್ಗಕ್ಕೆ ಏರುವಾಗ, ಸಾಕಿದ ಬೆಳ್ಳು ಏಣಿ ಹಗ್ಗಾನ ಕಡಿದು ಕೆಳಗುರುಳಿಸುವುದಂತೆ. ಅದೇ ಪಾಪಾನ ಸಾಕಿದ್ದರೆ, ಪಾಪಾಯ ಮಾಡುವುದಂತೆ!" ಅಂದಳು.

ಮಲ್ಲೇಶ ನಕ್ಕ:

"ಛೇ, ಛೇ! ಪರದೂಷಣೆ ಮಹಾಪಾಪ. ಬೆಳ್ಳು ಪವಿತ್ರವಾದ ಪ್ರಾಣಿ. ಅಡಿಗೆಮನೆಗೆ, ದೇವರಮನೆಗೆ ಬೆಳ್ಳು ನುಗ್ಗಿದರೆ, ಸುಮ್ಮನಿರ್ತೀರಿ. ನಾಯಿ ನುಗ್ಗಿದರೆ ಒಡಿದು ಓಡಿಸುತ್ತೀರಿ. ಪದ್ಮ, ಬೆಕ್ಕಿನಿಂದ ನಮ್ಮನೆಗೇನೋ ಉಪಕಾರ ಆಗಿದೆ; ನನಗಂತೂ ತುಂಬಾ ಉಪಕಾರ ಆಗಿದೆ....ಇಲಿ ಹೆಗ್ಗಣಗಳ ಕಾಟ ತಪ್ಪಿತು. ಅದಕ್ಕೂ ಹೆಚ್ಚಾಗಿ ನೀನು ಮೌನಮುದ್ರೆಯನ್ನು ಬಿಟ್ಟು, ನನ್ನ ಸಂಗಡ ಮಾತಾಡುವಂತೆ ಮಾಡಿದ್ದು ಈ ಬೆಕ್ಕೇನೇ—ಆ ಉಪಕಾರ ಸ್ಮರಿಸಿಯಾದರೂ ನಾನು ಅದರ ಸಂಸಾರಾನ ಸಾಕಬೇಕು!" ಎಂದು ಹಾಸ್ಯಮಾಡಿ ಅವಳ ಬಾಯಿಕಟ್ಟಿದ.

ಬೆಳ್ಳು ಮನೆಯುದಾದಕ್ಷಣ ಅದರ ಹುಟ್ಟುಗುಣ ಹೋದೀತೇ! ಒಂದು ದಿನ, ಚಂದ್ರಿ ತಂಬಿಗೆಯಲ್ಲಿದ್ದ ಸ್ವಲ್ಪ ಹಾಲನ್ನು ಬಿಸಿಯಾಗಿಸಿ ಒಂದು ಒಲೆಯ ಮುಂದೆ ಇಟ್ಟಿದ್ದಳು. ಯಾವುದೋ ಕೆಲಸಕ್ಕೆ ಹೊರಗೆ ಹೋದಳು ತಾಯಿಬೆಳ್ಳು ಸದ್ಭಾಗವಂತೆ ಬಂದು, ತಂಬಿಗೆಯೊಳಕ್ಕೆ ತಲೆ ಹಾಕಿತು ಯಾರೂ ಕಾಣದಿರಲೆಂದು ಕಣ್ಮುಚ್ಚಿ ಬೇಗ ಬೇಗ ಹಾಲು ಕುಡಿಯಿತು ಅನಂತರ ತಲೆಯನ್ನು ಎಳೆದುಕೊಳ್ಳಲು ನೋಡಿತು—ಸಾಧ್ಯವಾಗಲಿಲ್ಲ. ಬೆಳ್ಳು ಬೆದರಿ ತಕತಕ ಕುಣಿಯಿತು.

ಈ ಶಬ್ದ ಕೇಳಿ ಮೊದಲು ಬಂದವಳು ಚಂದ್ರಿಯೇ.

ಪಿಚ್ಚಿಯ ಸದ್ದು ಕೇಳಿ ಯಾರೋ ಬಂದರೆಂದು ಗ್ರಹಿಸಿ ಮತ್ತೂ ಭಯದಿಂದ ಕುಣಿಯಿತು ಬೆಳ್ಳು.

ಯಾರಿಗಾದರೂ ನಗುಬರುವ, ಮರುಳ ಉಳ್ಳವ ನೋಟ ಅದು ಅದರೆ ತಲೆ ಕಾಣದ ಅದರ ಮೈಸಿರ ಕಂಡು ಚಂದ್ರಿ ಬೆಚ್ಚಿದಳು. ಅವಳ ಸಂಯಮಹಾರಿತು. ಹಿಂದಿನಂತೆ ಕಿಟಾರನೆ ಕಿರುಚಿಕೊಂಡಳು. ಅವಳ ಅತ್ತೆ, ಮಲ್ಲೇಶ ಓಡಿಬಂದರು.

ಚಂದ್ರಿಯ ಭೀತಿ, ಬೆಕ್ಕಿನ ದುರವಸ್ಥೆ ನೋಡಿ ಮಲ್ಲೇಶ ನಕ್ಕ:

"ನಿನ್ನ ಶಾಪಶಬ್ದ ಬೆಕ್ಕಿನ ಬುದ್ಧಿ ಮಂಕಾಗಿದೆ, ಚಂದ್ರಿ ಇಲ್ಲದಿದ್ದರೆ ಈ ದುಸ್ಸಾಹಸ ಮಾಡ್ತಿರಲಿಲ್ಲ. ಬೆಕ್ಕಿಗೆ ತುಂಬಾ ಮುಂಜಾಗರೂಕತೆ. ಮಾಸಿಗೆ ತಾಕಿ ಅಡ್ಡಿಯಾದರೆ ಮುನ್ನುಗ್ಗೋದಿಲ್ಲವಂತೆ. ಅಂತಹುದು ತಲೆ ಸಿಕ್ಕಿಸಿಕೊಂಡಿದೆ ನೋಡು. ನಿನ್ನ ಶಾಪದಿಂದಾನೇ ಇರ್ಬೇಕು ಹೀಗೆ ಮಾಡಿರೋದು!" ಎಂದ.

ಬೆಳ್ಳನ್ನು ಬಿಡಿಸಲು ಹೋದ ಅದು ಬೆದರಿ ಕೈ ತಪ್ಪಿಸಿಕೊಂಡು ಕುಣಿಯಿತು.

"ಏನಾದರೂ ಮಾಡೋ ಮಗು. ಉಸಿರು ಕಟ್ಟಿ ಸತ್ತು ಹೋಗ್ತದೆ—ತಡ ಮಾಡಬೇಡ." ಎಂದು ಮರುಗಿದಳು ಪದ್ಮಮ್ಮ.

"ಹೌದು ಚಂದ್ರಿ. ಕಂಬಳಿ ಗುಪ್ಪೆಹಾಕಿ ನೀನು ಅದ್ನ ಹಿಡಿದುಕೋ. ನಾ ತಂಬಿಗೇನ ಎಳೀತೇನೆ. ಬೇಗ, ಹೂಂ!"

ಚಂದ್ರಿ ಕಂಬಳಿಯನ್ನು ತಂದಳು.

"ಇಗೋ ಕಂಬಳಿ! ಅದೇನಾರೂ ಮಾಡಿಕೊಳ್ಳಿ. ನಾ ಸತ್ತರೂ ಅದರ ಹತ್ತಿರಕ್ಕೆ ಬರೊಲ್ಲೆ." ಎಂದು ಹೆದರಿ ಹಿಂದಕ್ಕೆ ಹೋದಳು

ಅವಳ ಅಧೈರ್ಯ ಕಂಡು ತಾಯಿ-ಮಗ ನಕ್ಕರು. ಭದ್ರಮ್ಮ ಬಂಕ್ಕೊ ಗುಬ್ಬೆಹಾಕಿ ಬೆಕ್ಕನ್ನು ಹಿಡಿದುಕೊಂಡಳು. ಮಲ್ಲೇಶ ತಂಬಿಗೆಯನ್ನು ಹಿಡಿದೆಳೆದ. ಬಿಗಿಯಾದ ಬಳೆಯನ್ನು ಕೈಗೆ ಹತ್ತಿಸುವಂತೆ, ಪ್ರಯಾಸದಿಂದ ಹತ್ತು ನಿಮಿಷ ಹೆಣಗಾಡಿ ತಂಬಿಗೆಯನ್ನು ಬೇರ್ಪಡಿಸಿದ. ಬೆಕ್ಕು ಒಂದೇ ಜಿಗಿತಕ್ಕೆ ನೆಗೆದು ಹೊರಟುಹೋಯಿತು.

ಅದರೂ ಅದಕ್ಕೆ ತುಂಬಾ ಫಾಸಿಯಾಗಿತ್ತು; ಕುತ್ತಿಗೆಗೆ ತುಂಬಾ ಪೆಟ್ಟಾಗಿತ್ತು. ಮೂರು ದಿನ ಹುಲ್ಲುಪೆಡೆಯ ಬಳಿ ನರಳಿ ಅಸು ತೊರೆಯಿತು.

"ಚಂದ್ರಿ, ಈ ದಿನ ಹೊಟ್ಟೆಯ ತುಂಬಾ ಹಾಲು ಕುಡಿ. ನಿನ್ನ ಶತ್ರು ನಾಶವಾದ." ಎಂದ ಮಲ್ಲೇಶ, ಅಕ್ಷೇಪದ ಧ್ವನಿಯಲ್ಲಿ.

"ಶತ್ರು ನಾಶವಾದರೂ ಶತ್ರುಶೇಷ ಉಳಿದಿದೆಯಲ್ಲಾ?" ಎಂದು ನಕ್ಕಳು ಚಂದ್ರಿ.

ಅವಳ ಮಾತು ನಿಜವಾಗಿತ್ತು. ಒಂದು ಮರಿಯಾದರೂ ನಾಲ್ಕೂ ಬೆಕ್ಕುಗಳಿದ್ದುವು ಅವಳನ್ನು ಕಾಡಲು. ರಾತ್ರಿ ಅವುಗಳ ರೋದನಧ್ವನಿ ಕೇಳಿ ಚಂದ್ರಿ ಭೀತಿಯಿಂದ ತಲ್ಲಣಿಸುವಳು. ಬೆಕ್ಕು ನೆಗೆದ ಶಬ್ದಕೇಳಿ. ಅವಳೆವೆ ಜಗ್ ಎನ್ನುವುದು. ಅವುಗಳ 'ಮಿಯಾವ್' ಶಬ್ದ ಕೇಳಿ ಅವಳ ಮೈ ನಡುಗುವುದು.

ಕೊಟ್ಟಿಗೆಯಲ್ಲಿ ಹಾಲು ತುಂಬಿದ ತಂಬಿಗೆಯನ್ನು ಕೈಬಿಟ್ಟಿದ್ದಳು, ಬೆಕ್ಕು ನೆಗೆದ ಶಬ್ದಕೇಳಿ. ತಲೆ ಬಾಚಿಕೊಳ್ಳುತ್ತಿದ್ದಾಗ ಕನ್ನಡಿಯನ್ನು ಕೈಬಿಟ್ಟಿದ್ದಳು—ಅದರ 'ಮಿಯಾವ್' ಶಬ್ದ ಕೇಳಿ—ಆದರೂ ಮಲ್ಲೇಶ ಮನಸ್ಸಿಗೆ ತೆಗೆದುಕೊಂಡಿರಲಿಲ್ಲ, ಲಘುವಾಗಿ ಹಾಸ್ಯಮಾಡಿ ನಕ್ಕುಬಿಟ್ಟಿದ್ದ.

ನಾಲ್ಕು ಮರಿಗಳು—ಎರಡು ಕರಿಯವು, ಒಂದು ಅಚ್ಚಬಿಳಿದು, ಇನ್ನೊಂದು ಮಿಶ್ರಬಣ್ಣದ್ದು—ಮಲ್ಲೇಶನ ಪ್ರೀತಿಯ ಮರಿಗಳು ಅವುಗಳನ್ನೆತ್ತಿ ಮುದ್ದಾಡುವನು, ಚಂದ್ರಿಯನ್ನು ರೇಗಿಸಲು ಬೇಕೆಂದೇ ಅವಳ ಕೈಗೂ ಕೊಡಲು ಬರುವನು. ಒಮ್ಮೊಮ್ಮೆ ಈ ಹಾಸ್ಯ ವಿಪರೀತಕ್ಕೆ ಹೋಗಿ, ಗಂಡ-ಹೆಂಡಿರಲ್ಲಿ ಕಲಹವಾದುದೂ ಉಂಟು.

ಚಂದ್ರಿ ರಾತ್ರಿ ಗಂಗಳ ತೊಳೆಯಲು ಹೋದಳು. ತಂಗಳ ಬೇಕು ಹಾಲುಚಿಲ್ಲಿದಂತೆ ಹರಡಿತ್ತು. ಆದ್ದರಿಂದ ಲಾಟೀನು ತೆಗೆದುಕೊಂಡು ಹೋಗಲಿಲ್ಲ. ಚಂದ್ರಿ ಹೊರಗಡೆಗೆ ಹೋದೊಡನೆ, ಕಂಚಿನ ಮೇಲಿನಿಂದ ಥಟ್ಟನೆ ನೆಗೆಯಿತು ದೊಡ್ಡ ಕರಿಯ ಬೆಕ್ಕು! ಈ ಹೊಸ ಬೆಕ್ಕನ್ನು ಕಂಡೊಡನೆ ಚಂದ್ರಿ ಕಿರುಚಿಕೊಂಡುಬಿಟ್ಟಳು.

ಮಲ್ಲೇಶ ನಗುತ್ತಾ ಬಂದ—

"ನೋಡಿ, ಹೊಸದಾಗಿ ಈ ಭೂತ ಬಂದಿದೆ. ನಾಲ್ಕರ ಜೊತೆಗೆ ಐದನೆಯದು! ಇದೇ ಮೊದಲು ನಾನೋಡ್ತಾ ಇರೋದು ಇಷ್ಟು ದೊಡ್ಡ ಬೆಕ್ಕನ್ನು! ಎಷ್ಟು ತಡೆದುಕೊಂಡರೂ ನನಗರಿವಿಲ್ಲದಂತೆಯೇ ಕೂಗು ಹೊರಬಿತ್ತು." ಎಂದಳು.

"ಇದು ವನಾಳಬೆಕ್ಕು. ಆಗಾಗ ಬರುತ್ತೆ. ಬಹುಕ್ಯೂರಿ. ಸಾಕಿದ ಬೆಕ್ಕಿನ ಹಾಗಲ್ಲ; ಹುಷಾರ್! ಇನ್ನು ನೀನು ಅರುಬೋದು ಸಾಮಾನ್ಯವಾಗಿ ಬಿಡುತ್ತೆ! ನನ್ನ ಮರಿಗಳನ್ನು ಮುದ್ದಿಸಿ ನಿನ್ನೆ ಭಯಾನ ಹೋಗಲಾಡಿಸಿಕೋ...." ಎಂದು ನಕ್ಕ.

"ನಿಮ್ಮ ನಾಲ್ಕು ಮರಿಗಳು ತೊಲಗಿದರೆ ಈ ಭೂತವೂ ತೊಲಗಿ ಹೋಗುತ್ತೆ." ಎಂದಳು ಮುಖ ಗಂಟಿಕ್ಕಿ.

ಚಂದ್ರಿಯ ಮನೆಯ ಪಕ್ಕದ್ದೇ ಭದ್ರಮ್ಮನ ಮನೆ. ಅವಳ ಮನೆಯಲ್ಲಿ ತುಂಬಾ ಕರಾವು, ಗಡಿಗೆಗಳಲ್ಲಿ ಜೇನ್ನೆ ತುಂಬಿ ನೆಲುವಿನ ಮೇಲಿಡುತ್ತಿದ್ದಳು. ಮಲ್ಲೇಶನ ನಾಳುಮರಿಗಳು ತಮ್ಮ ಜಾತಿವೃತ್ತಿ ನಡೆಸಲು ಎಲ್ಲರ ಮನೆಗೂ ನುಗ್ಗಿ ಲೂಟಿ ಮಾಡುತ್ತಿದ್ದುವು. ಒಮ್ಮೆ ನೆಲುವಿನ ಮೇಲಿನ ಗಡಿಗೆಯನ್ನು ಕೆಡವಿಕೊಂಡು ಎರಡು ಬೆಕ್ಕುಗಳು ಕಾದಾಡುತ್ತಿದ್ದುವು. ಭದ್ರಮ್ಮ ಏಟ್ಟನಿಂದ ಅವುಗಳನ್ನು ಅಟ್ಟಲು ಬಂದಳು. ಬೆಕ್ಕುಗಳು ನೆಗೆದು ಓಡುವಾಗ, ಅವಳ ಕೈಗೆ ಒಂದು ಬೆಕ್ಕು ಪರಚಿ ಓಡಿತು.

ಕಡ್ಡಿಯಲ್ಲಿ ಗೀರಿದಂತಾಗಿದೆಯೆಂದು ಭದ್ರಮ್ಮ ಅದಕ್ಕೆ ಹೆಚ್ಚು ಗಮನ ಕೊಡಲಿಲ್ಲ. ಎರಡು ಮೂರು ದಿನಗಳಲ್ಲೇ ಕೈ ಊದಿಕೊಂಡಿತು. ಸಣ್ಣ ಜ್ವರ ಹತ್ತಿತು. ಮೊದ ಮೊದಲು ಅಸ್ಟು ಗಮನ ಕೊಡದೆ ಕಂಡು ಕೇಳಿದ ಔಷಧಿ ಮಾಡಿದಳು. ಜ್ವರ ಜಗ್ಗಲಿಲ್ಲ. ದಿನದಿನಕ್ಕೆ ಹಚ್ಚಾಗಿ ಭದ್ರಮ್ಮನಿಗೆ ಪ್ರಜ್ಞೆ ತಪ್ಪಿತು. ಮೈ ಕೈ ಎಲ್ಲಾ ಊದಿಕೊಂಡಿತು. ಆಗ, ಗಾಡಿ ಕಟ್ಟಿಸಿಕೊಂಡು ಆಸ್ಪತ್ರೆಗೆ ಕರೆದೊಯ್ದರು. ಒಂದು ತಿಂಗಳು ಆಸ್ಪತ್ರೆಯಲ್ಲೇ ಇದ್ದಳು. ಬೇಕಾದಷ್ಟು ಇಂಜಕ್ಷನ್ ಔಷಧಿಗಳಾದುವು. ಆದರೂ ಭದ್ರಮ್ಮ ಗುಣಮುಖಳಾಗಲಿಲ್ಲ. ಜ್ವರ ಬಟ್ಟೆಬಿಚ್ಚದಂತೆ ಅವಳನ್ನು ಕಾಡಿತು. ಕಡೆಗೂ ಭದ್ರಮ್ಮ ಹೋಗಿಯೇಬಿಟ್ಟಳು.

ಬೆಕ್ಕು ಪರಚಿದುದನ್ನು ಲಘುವಾಗಿ ಕಂಡಿದ್ದೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ. ಅದೇ ನಂಜಾಗಿ, ರಕ್ತ ಕಟ್ಟು ಭದ್ರಮ್ಮನನ್ನು ಬಲಿ ತೆಗೆದುಕೊಂಡಿತು—ಎಂದರು ಡಾಕ್ಟರ್.

ಭದ್ರಮ್ಮನ ಗಂಡ ದುಃಖದಿಂದ ಏಟ್ಟಾದ. ಏಟ್ಟನಿಂದ ಹುಚ್ಚಾದ. ಜೊಂಚಿ, ಕಾಮು ಒಂದು ಕರಿಯ ಬೆಕ್ಕನ್ನು ಕೊಂದ.

ಚಂದ್ರಿ, ಈ ಘಟನೆಯಾದರೂ ಮಲ್ಲೇಶನ ಕಣ್ತೆರೆಸುವುದೆಂದು ಬಗೆದಳು.

"ಬೆಕ್ಕಿನ ಸಹವಾಸ ಬೇಡ ಅಂತ ನಾ ಏಕೆ ಹೇಳ್ತಿದ್ದೆ ಗೊತ್ತಾಯ್ತೇ? ನೋಡಿ, ಎಷ್ಟು ನಷ್ಟ ಮಾಡಿವೆ ಅಂತ!—ಭದ್ರಮ್ಮನ ಮಕ್ಕಳು ತಬ್ಬಲಿಯಾದುವು, ಆತನ ಬಾಳು ಕೆಟ್ಟಿತು, ಆಸ್ಪತ್ರೆಗೆ ಮುನ್ನೂರು ರೂಪಾಯಿ ದಂಡ ತೆರುವಂತಾಯ್ತು. ಇನ್ನಾದರೂ ಈ ಮೋಹ ಬಿಟ್ಟು ಈ ಬೆಕ್ಕುಗಳನ್ನು ದೂರ ಬಿಟ್ಟುಬನ್ನಿ" ಎಂದಳು. ಮಲ್ಲೇಶ ಲಘುವಾಗಿ ನಕ್ಕ.

"ನಿನ್ನಂತೆ ಅಕೇನೂ ಬೆಕ್ಕನ್ನು ದ್ವೇಷಿಸೋಳು. ನಮ್ಮಂತೆ ಬೆಕ್ಕು ಸಾಕಿದ್ದರೆ ಅವರಿಗೆ ಯಾವ ತೊಂದರೇನೂ ಆಗ್ತಾ ಇರಲಿಲ್ಲ. ನಮ್ಮನೆಯ ಬೆಕ್ಕು ನಮಗೇನು ಅಪಚಾರಾನೂ ಮಾಡೋದಿಲ್ಲ."

"ನಾವು ಹೊತ್ತಿಸಿದ ಬೆಂಕಿ ಅಂತ ಕೈಯಲ್ಲಿ ಹಿಡಿಯಿರಿ—ಸುಡುತ್ತೋ ತಲ್ಲಣೋ ಗೊತ್ತಾಗುತ್ತೆ! ನಿಮಗೆ ಅವುಗಳ ಮೇಲೆ

ಅದೇಕು ಹೋಹವೋ ನಾ ಕಾಣೆ.'' ಎಂದು ಬೇಸರದಿಂದ ಮುಖ ತಿರುಗಿಸಿಕೊಂಡಳು. ಮಲ್ಲೇಶ ಮತ್ತೆ ನಕ್ಕ.

ಒಮ್ಮೊಮ್ಮೆ ಚಂದ್ರಿಗೆ ಅವುಗಳನ್ನು ಕೊಂದುಬಿಡುವಷ್ಟು ಸಿಟ್ಟು ಬರುವುದು; ಆದರೆ ಚಿಕ್ಕಂದಿನಿಂದಲೂ ಕೇಳಿದ ಮಾತು:—ಬೆಕ್ಕನ್ನು ಕೊಂದರೆ ಏಳೇಳು ಜನ್ಮಕ್ಕೂ ಆ ಪಾಪ ಹೋಗುವುದಿಲ್ಲ; ಚೆನ್ನದಲ್ಲಿ ಬೆಕ್ಕನ್ನು ಮಾಡಿಸಿ ದಾನಕೊಟ್ಟರೆ ಸ್ವಲ್ಪ ದೋಷಪರಿಹಾರವಾಗುತ್ತೆ—ಎಂಬ ಹಿರಿಯರ ಮಾತು ನೆನಪಾಗಿ, ಅವಳ ಕೈ ತಡೆಯುವುದು. ತನ್ನ ಸಿಟ್ಟನ್ನು ಹಾಗೇ ಶಕ್ತಿ ಕ್ಕಕೊಳ್ಳುವಳು.

ಚಂದ್ರಿಯ ತಾಯಿ ಮಗಳನ್ನು ನೋಡಿಹೋಗಲು ಬಂದರು. ಚಂದ್ರಿಯೊಡನೆ ನೀರುತರಲು ಬಾವಿಗೆ ಹೋದರು. ತುಂಬಿದ ಕೊಡ ಹೊತ್ತು ತಾವೇ ಮುಂದೆ ಬಂದರು —

ಇನ್ನೇನು ಕೂಡ ಕೆಳಗಿಡಬೇಕು—ಅಳಿಯಾತ್ ನೋಡುತ್ತಾರೆ ಕಡೆಗೋಲಿನ ಮೇಲೆ ನಾಗರಹಾವು!

ಕೊಡವನ್ನು ಹಾಗೇ ಕುಕ್ಕರಿಸಿ "ಚಂದ್ರೀ..." ಎಂದರು ಗಾಬರಿಯಿಂದ. ಚಂದ್ರಿ ಸ್ವಲ್ಪವೂ ಹೆದರಲಿಲ್ಲ. ಕೂಗಬೇಡಿರೆಂದು ಸೂಚಿಸಿ, ಒಳಗೆ ಹೋಗಿ ದೇವರ ಮುಂದೆ ದೀಪ ಹೊತ್ತಿಸಿಟ್ಟು ಧೂಪ ಹಾಕಿದಳು.

"ನಾಗಪ್ಪಾ, ನರಮನುಷ್ಯರ ಕಣ್ಣಿಗೆ ಬೀಳದಂತೆ ಹೋಗಪ್ಪಾ" ಎಂದು ಕೈಮುಗಿದಳು. ಅವಳ ಭಾಷೆ ಅರ್ಥವಾದಂತೆ ಹಾವು ಸರಸರನೆ ಸೂರಿನ ಮೇಲಕ್ಕೆ ಹತ್ತಿ ಹೊರಟುಹೋಯಿತು.

ಚಂದ್ರಿಯ ಅನುದ್ವೇಗ, ನಿರ್ಭೀತಿಯನ್ನು ಕಂಡು ಅವಳ ತಾಯಿ, ಹಾಗೂ ಬಸಮ್ಮ ಹಿಗ್ಗಿದರು.

"ನಮ್ಮ ಚಂದ್ರಿ ಮನೇಲಿದ್ದರೆ ನಾಲ್ಕು ಭುಜ ಇದ್ದಂತೆ' ಯಾವುದಕ್ಕೂ ಹೆದರುವ ಹೆಣ್ಣಲ್ಲ ಇವಳು." ಎಂದರು ಅವಳ ತಾಯಿ.

ಮಲ್ಲೇಶ ಆ ಮಾತು ಕೇಳಿ ಒಳಕ್ಕೆ ಬಂದ.

"ನೀವು ಹೊಗಳೋದನ್ನ ನೋಡಿ, ನಾನು ಈಕೆ ಬಹು ಧೈರ್ಯಸ್ಥೆ ಅಂದುಕೊಂಡಿದ್ದೆ. ಇಪ್ಪು ಅಳ್ಕೆದೆಯವಳನ್ನ ನಾ ಎಲ್ಲೂ ನೋಡಿಲ್ಲ! 'ಮಿಯಾವ್' ಅಂತ ನಾನು ಅಂದರೂ ಸಹ ಮೂಲೇಲಿ ಬಿತುಕೊಳ್ತಾಳೆ! ಚೀಲಿನ ಕಂಡರೆ, ಏಳು ಮೈಲಿಗೆ ಕೇಳ್ಬೇಕು. ಹಾಗೆ ಕೂಗ್ತಾಳೆ!" ಎಂದು ನಗೆಯಾಡಿದ.

"ನಾನೂ ಆ ಭದ್ರಮ್ಮನಂತಾಗಿ ಹೋಗಲಿ ಅಂತ ನಿಮ್ಮಿಷ್ಟ. ವೇನೋ-ಆದಕ್ಕೇ ನೀವೂ ಬೆಕ್ಕಿನಂತೆ ಕೂಗಿ ನನ್ನ ಅಂಜಿಸೋದು." ಎಂದು ಚಂದ್ರಿ ಮುಖ ದುಮ್ಮಿಸಿಕೊಂಡಳು.

"ಅವಳ್ನೇಕೆ ಸದಾ ಕಾಡ್ತೀಯೋ ಮಗೂ? ಈಗ ನಾಗಪ್ಪ ಬಂದಾಗ ನೋಡಲಿಲ್ಲವೇ? ನೀನಾಗಿದ್ದರೆ ಬಾಗಿಲು ಹಾಕಿಬಿಟ್ಟು ಯಾರನ್ನಾದರೂ ಕರೆತರ್ತೀನಿ ಅಂತ ಓಡುತ್ತಿದ್ದೆ. ನಿನ್ನ ಧೈರ್ಯನೂ ನಾ ಕಂಡಿದೀನಿ!"—ಎಂದಳು ಬಸಮ್ಮ, ಸೊಸೆಗೆ ಹಿತವಾಗುವಂತೆ. ಚಂದ್ರಿಯ ತಾಯಿ ಯೋಚಿಸುತ್ತಾ ಹೇಳಿದರು:—

"ಚಂದ್ರೀನ ದೂಸಿಸಿ ಏನು ಪ್ರಯೋಜನ? ಚಿಕ್ಕಂದಿನಿಂದ ಅವಳಿಗೆ ಬೆಕ್ಕನ್ನ ಕಂಡರೆ ಹೀಗೇ ಭಯ—ಚಂದ್ರಿಯ ಅಜ್ಜಿ ಇದ್ದರು, ಅವರು ಯಾವಾಗಲೂ 'ಬೆಕ್ಕು ಬರುತ್ತೆ' ಅಂತಾ ಹೆದರಿಸೋರು. ಚಂದ್ರಿ ಎಷ್ಟು ಅಳ್ತಾ ಇರಲಿ, ಹುಟುಮಾಡ್ತಾ ಇರಲಿ. "ಬೆಕ್ಕು ಬಂತು" ಅಂದರೆ ಗಪ್ಪಾಗಿ ಬಿಡೋಳು. ರಾತ್ರಿತೊಕ್ಕು ರಚ್ಚೆ ಹಿಡಿದರೆ, ಅವಳಜ್ಜಿ ಬೆಕ್ಕಿನಂತೇನೇ 'ಮಿಯಾವ್-ವಿಯಾವ್' ಅನ್ನೋರು. ಚಂದ್ರಿ ಹೆದರಿ ನಡುಗುತ್ತಾ ನನ್ನ ಶಬ್ದ ಮಲಗಿಬಿಡೋಳು. ಆ ಹೆದರಿಕೆ ಇನ್ನೂ ಅವಳಿಗೆ ಹೋಗಿಲ್ಲ"

"ಅದೇಕೆ ಹಾಗೆ ಹೆದರಿಸಬೇಕಾಗಿತ್ತು? ಈಗ ಎಲ್ಲರೂ ನನ್ನ ಅಪಹಾಸ್ಯಮಾಡುವಂತೆ ಮಾಡ್ಬಿಟ್ಟಿದೀಯ. ನಾನೆಷ್ಟು ಧೈರ್ಯವಾಗಿದ್ದರೂ, ಆ ಸಮಯದಲ್ಲಿ ನನ್ನ ಮನಸ್ಸೇ ನನ್ನ ಹತೋಟೇಲಿ ಇರೋದಿಲ್ಲ."

"ಬಿಡು ಚಂದ್ರಿ. ನಿಮ್ಮ ಅಜ್ಜಿಯ ಶಿಕ್ಷೆಗೆ ಅಮ್ಮನ್ನೇ ಅಕ್ಷೇಪಿಸುತ್ತೀಯಾ? ಹೋಗಲಿ, ಇನ್ನು ಮೇಲೆ ನಾ ನಿನ್ನ ಹಾಸ್ಯ ಮಾಡೋದಿಲ್ಲ. ನಿನಗೊಂದು ರಬ್ಬರ್ ಬೆಕ್ಕು ತಂದುಕೊಡ್ತೀನಿ ಮಗುವಿನಂತೆ ಅದರ ಜೊತೆ ಆಡಿ ನಿನ್ನ ಭಯಾನ ಬಿಡು. ಮಗುವಾದಾಗಿನಿಂದ ಬೇರುಬಿಟ್ಟ ಭಯವಂತೆ ಇದು! ಇನ್ನೊಂದು ನಾಲಾನು ಕಳಿ—ಮುಂದೆ ನಿಮ್ಮಮ್ಮ ಕಾಡವ ಮೊಮ್ಮಕ್ಕಳನ್ನ ಯಾವ ರೀತಿಯಲ್ಲೂ ಹೆದರಿಸಬೇಡ. ತಿಳೀತೇನೋ?" ಎಂದು ನಸುನಕ್ಕ.

"ಛೀ, ಛೀ! ಎಲ್ಲರೆದುರಿಗೂ ನಿಮಗೆ ಹೀಗೇ ಹಾಸ್ಯ" ಎಂದು ನಾಚಿ, ಹುಸಿ ಮುನಿಸಿನಿಂದ ಹೊರಗೆ ಹೋದಳು ಚಂದ್ರಿ.

ಮೂರನೆಯ ದಿನ ಚಂದ್ರಿ ಹಾಸಿಗೆಯಿಂದ ಏಳುವ ಹೊತ್ತಿಗೆ ಸರಿಯಾಗಿ 'ಮಿಯಾವ್' ಎಂದು ಬೆಕ್ಕು ಆಚೆಗೆ ಹಾರಿತು.

"ಥೂ, ಹಾಳು ಅಪಶಕುನ. ಎದ್ದಕೂಡಲೆ ಇದರ ಮುಖ ಕಂಡೆ. ಇನ್ನೇನು ಕಾಣಬೇಕೋ" ಎಂದು ಗೊಣಗಿಕೊಂಡಳು.

ಎಚ್ಚೆತ್ತು ಸುಮ್ಮನೆ ಮಲಗಿದ್ದ ಮಲ್ಲೇಶನಿಗೆ ಆ ಮಾತು ಕೇಳಿಸಿತು.

"ಏನೇ ಚಂದ್ರಿ ಅದು? ನನ್ನ ಮುಖ ಕಂಡು ಅಪಶಕುನ ಅಂತಿದಿಯಾ? ಅಂ?" ಎಂದ, ಧ್ವನಿಯಲ್ಲಿ ಗಡುಸು ತೋರಿಸುತ್ತಾ.

ಚಂದ್ರಿ ಬೆಚ್ಚಿ ಅವನತ್ತ ನೋಡಿದಳು. ಅವನ ಕಣ್ಣಲ್ಲಿ ಹಾಸ್ಯ ಮಿನುಗುತ್ತಿತ್ತು.

"ನಿಮ್ಮ ಮುದ್ದುಮರಿಯ ಮುಖ ಕಂಡೆ ನೋಡಿ, ಆಗಲೇ ನಿನ್ನಿಂದ ಅಪವಾದ! ಇನ್ನು ಈ ದಿನ ಏನೇನು ಕಾಣಬೇಕೋ!" ಎಂದು ಮುಖ ಜೋಲುಹಾಕಿದಳು.

"ಸಾಕಿದ ಬೆಕ್ಕನ್ನು ನೋಡಿದರೆ ದೋಷವಿಲ್ಲ. ಧೈರ್ಯವಾಗಿರು ಏನು ದೋಷವಿದ್ದರೂ ಈಗ ನನ್ನ ನೋಡಿದೀಯಲ್ಲಾ, ಅದ್ದರಿಂದ ಪರಿಹಾರವಾಯಿತು ಅಂದುಕೋ" ಎಂದು ನಕ್ಕ.

ಆ ದಿನ ಸಂತೆಯ ಹರಾಜಿತ್ತು. ಮಲ್ಲೇಶ ತಾನೂ 'ಬಿಡ್' ಮಾಡಬೇಕೆಂದು ಹಣ ಒದಗಿಸಿಕೊಂಡಿದ್ದ. ಹತ್ತು ಗಂಟೆಯ ವೇಳೆಗೆ ಕೊಡಬೇಕೆಂದಿದ್ದ.

ಬೆಳಗ್ಗೆ ಶ್ಯಾಮಿಗೆ, ರಾಯಿದೋಸೆ ಮಾಡಿದ್ದರು. ಎಲ್ಲರೂ ತಿಂದಾಯಿತು. ಚಂದ್ರಿ ತಿಂದ ತಟ್ಟೆಗಳನ್ನೆಲ್ಲಾ ಬಚ್ಚಲು ಮನೆಯಲ್ಲಿಟ್ಟು, ತಾಯಿ ಆಡುತ್ತಿದ್ದ ಮಾತನ್ನು ಕೇಳಲು ಬಂದಳು.

ತಾಯಿ ಮಲ್ಲೇಶನನ್ನು ಕೇಳುತ್ತಿದ್ದಳು: ಚಂದ್ರಿಯನ್ನು ನಾಲ್ಕು ದಿನ ತೌರಿಗೆ ಕಳುಹಿಸಿಕೊಡಿ – ಎಂದು. ಮುಂದಿನ ವಾರ ತಾನೇ ಕರೆದುಕೊಂಡು ಬರುವುದಾಗಿ ಮಲ್ಲೇಶ ಹೇಳಿದ.

ಚಂದ್ರಿ ಶೃಪ್ತಳಾಗಿ ತಟ್ಟೆ ತೊಳೆಯಲು ಬಚ್ಚಲುಮನೆಗೆ ಹೋದಳು. ಹಾಗೆಯೇ ಕದವನ್ನು ಮುಂದಕ್ಕೆ ಮಾಡಿಕೊಂಡು ಹೋದಳು.

ಅಲ್ಲಿ ಬಚ್ಚಲಲ್ಲಿ, ಆ ಕರಿಯ ಮಾಳಜೆಕ್ಕು, ಬಿಳಿಯಬೆಕ್ಕು ಕಾದಾಡುತ್ತಿವೆ .... !

ಚಂದ್ರಿ ಕಿಟಾರನೆ ಕಿರುಚಿಬಿಟ್ಟಳು !

ಆಗೊಂದು ಅನಾಹುತವಾಯಿತು ರೋಷೋನ್ಮತ್ತವಾಗಿದ್ದ ಮಾಳಜೆಕ್ಕು ಮೇಲೆ ಹಾರಿ, ಚಂದ್ರಿಯ ಕೈಯನ್ನು ಗಟ್ಟಿಯಾಗಿ ಕಚ್ಚಿತು. ಅವಳ ಹಟಾತ್ತಾದ ಕೂಗು, ಮುಚ್ಚಿದ ಬಾಗಿಲು— ಅದಕ್ಕೆ ತಿಗ್ಪ್ರಮೆ ಹಿಡಿಸಿತ್ತು.

"ಅಯ್ಯೋ....." ಎಂದು ಕಿರುಚಿ ಹಾಗೇ ಜ್ಞಾನತಪ್ಪಿ ಉರುಳಿದಳು.

ಬೆಕ್ಕು ಎಷ್ಟು ಬಲವಾಗಿ ಕಚ್ಚಿತ್ತೋ—ಅದಕ್ಕೆ ತನ್ನ ಹಲ್ಲುಗಳನ್ನು ಹೊರತೆಗೆಯುವುದೇ ಪ್ರಯಾಸವಾಯಿತು.

ಅವಳ ಆ ವಿಕಾರವಾದ ಕೂಗು ಕೇಳಿ, ಅವಳ ತಾಯಿ ಓಡಿ ಬಂದರು. ಆಕೆ ಬಾಗಿಲು ನೂಕಿದೊಡನೆ ಆ ಕರಿಯಬೆಕ್ಕು ಹಾರಿ ಸರ್ರನೆ ಹೊರಟುಹೋಯಿತು.

"ಅಯ್ಯೋ ಚಂದ್ರಿ.....ಏನಾಯ್ತಮ್ಮ ನಿನಗೆ....." ಎಂದು ಆಕೆ ಅವಳ ಬಳಿಗೆ ಧಾವಿಸಿದರು.

ಮಲ್ಲೇಶ ಹೊರಗಡೆ ಜೋರಾಗಿ ನಕ್ಕ "ಏಕೆ ಅಷ್ಟು ಭಯ ಬೀಳ್ತೀರಿ ? ಹುಲಿಗೆ ಹೆದರದ ಹುಡುಗಿ ಬೆಕ್ಕಿಗೆ ಬೆದರ್ತಾಳೆ !"

ಆದರೆ ಚಂದ್ರಿ ಬಿದ್ದಿರುವುದನ್ನು ಕಂಡು ಅವನ ಮಾತು ನಿಂತಿತು. ಎದೆ ಬೆಚ್ಚಿತು.

ಅವಳ ಕೈಯಿಂದ ರಕ್ತ ಹರಿಯುತ್ತಿತ್ತು. ಅವಳಿಗೆ ಪ್ರಜ್ಞೆ ತಪ್ಪಿ ಹೋಗಿತ್ತು.

"ಇದೇನಾಯ್ತು ? ಏನು ಈ ರಕ್ತ ?" ಎಂದು ಭೀತನಾಗಿ ಕೇಳಿದ.

"ಆ ಕರೀಬೆಕ್ಕು ನಾ ಬಂದಾಗ ಓಡ್ತು. ಅದೇ ಕಚ್ಚಿರಬೇಕು. ಮಲ್ಲೇಶನ ಕಣ್ಣಲ್ಲಿ ನೀರೂರಿತು. "ಅವಳು ಬೆಳಿಗ್ಗೆ ಎದ್ದ

ಪ್ರಿಯ ಓದುಗರಿಗೆ,

ಒಂದು ನಿಮಿಷ !

ಪ್ರಿ. ವಿ. ಕೃ. ಗೋಕಾಕ ಅವರ

ಅದ್ಭುತರಸಮ್ಯ-ಪ್ರದೀರ್ಘಕಾವ್ಯಕೃತಿ

ನೀರದ

ಚಿತ್ತಾಕರ್ಷಕವಾಗಿ ಚಿತ್ರಮಯವಾಗಿ

ಪ್ರಕಟವಾಗಲಿದೆ.

ವಿವರಗಳಿಗೆ

ಪರಾಗ ಪ್ರಕಾಶನ, ಧಾರವಾಡ

ಇವರಿಗೆ ಬರೆಯುವದು.

ಗಳಿಗೇನೇ ಚೆನ್ನಾಗಿಲ್ಲ ಬೆಕ್ಕು ಪರಚಕ್ಕೆ ಅಂತಾ ಕೇಳಿದ್ದೆ. ನಮ್ಮ ಗ್ರಹಚಾರಕ್ಕೆ ಹೀಗೆ ಕಚ್ಚಿ ಹೋಗಿದೆ." ಎಂದು ನಿಡುಸುಯ್ದ.

ಈ ಗಲಾಟೆ ಕೇಳಿ ಜನರೆಲ್ಲ ನೆರೆದರು. ಭದ್ರಮ್ಮನ ಬಲಿಯಿಂದ ಎಲ್ಲರೂ ಬುದ್ಧಿಕಲಿತಿದ್ದರು. ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯುವಂತೆ ಸಲಹೆ ಮಾಡಿದರು. ಆಸ್ಪತ್ರೆಗೆ ಬಂದ ಎಷ್ಟೋ ಹೊತ್ತಿನ ಮೇಲೆ ಚಂದ್ರಿಗೆ ಪ್ರಜ್ಞೆ ಬಂದಿತು. ಎಲ್ಲಿದ್ದೇನೆ, ಏಕೆ, ಏನಾಯಿತು ? - ಎಂದು ನೆನಪಿಸಿಕೊಂಡಳು. ಬ್ಯಾಂಡೇಜ್ ಕಟ್ಟಿದ್ದ ತನ್ನ ಕೈಯನ್ನು ನೋಡಿಕೊಂಡಳು ಎಲ್ಲವೂ ತಿಳಿದಂತಾಯಿತು ಅವಳಿಗೆ.

"ಅವರೆಲ್ಲಿ ?" ಎಂದು ಮಲ್ಲೇಶನನ್ನು ಉದ್ವೇಗದಿಂದ ಕೇಳಿದಳು. ಮಲ್ಲೇಶ ಬಂದ. ಚಂದ್ರಿ ಅವನ ವೇದನೆ ತುಂಬಿದ ಮುಖ ನೋಡಿದಳು.

"ನೋಡಿದ್ಯಾ, ನಿನಗೆಷ್ಟು ತೊಂದರೆ, ಎಷ್ಟು ಖರ್ಚು ? ಹರಾಜಿಗೂ ಹೋಗಲಿಲ್ಲವಾ ?"

"ಖರ್ಚುಗಿರ್ಚು ಅಂತಾ ಯೋಚಿಸ್ಬೇಡ, ಚಂದ್ರಿ. ಹರಾಜಲ್ಲಿ ಇದ್ದರೆ ಅನಿಸ್ಕಳೀತು. ಬೇಗ ನೀನು ಹುಷಾರಾಗಿ ಬಂದ್ಬಿಡು. ಅಷ್ಟೇ ನಾಕು. " ಎಂದ ಮೃದುವಾಗಿ, ಉಕ್ಕಿಬಂದ ಕರುಣೆಯಿಂದ.

"ನಾನೇನು ಮಾಡ್ಲಿ ? ಬಚ್ಚಲಲ್ಲಿವೆ ಅಂತಾ ತಿಳೀಲಿಲ್ಲ. ಆ ಹಾಳು ಬೆಕ್ಕುಗಳನ್ನು ಓಡಿಸಿ ಅಂದ್ರೆ ನೀವು ಕೇಳಲಿಲ್ಲ. ಇಷ್ಟೆಲ್ಲಾ ಆಗ್ಬಾರ್ದಾಂತ ಆಯ್ತು. "

ಮಲ್ಲೇಶನ ಕಣ್ಣು ಮಂಜಾಯಿತು. ನಿತ್ಯದಂತೆ ಹಾಸ್ಯ ಮಾಡುವ ಸ್ಥಿತಿಯಲ್ಲಿರಲಿಲ್ಲ ಅವನು,

" ಯೋಚನೆಮಾಡ್ಬೇಡ ಚಂದ್ರಿ. ಈ ಸಲ ಹೊಳೆಯಾಚೆಗೆ ಅವನ್ನೆಲ್ಲಾ ಸಾಗಿಸಿಬಿಡ್ತೇನೆ. " ಎಂದು ಸಮಾಧಾನ ಮಾಡಿದ.

ಚಂದ್ರಿಗೆ ಗುಣವಾಯಿತು. ಮನೆಗೆ ಬಂದಳು. ಮಲ್ಲೇಶ ಬೆಕ್ಕುಗಳನ್ನು ಸಾಗಹಾಕಲಿಲ್ಲ. ಚಂದ್ರಿ ಅವನಿಗೆ ನೆನಪಿಸಿದಾಗ, ನಕ್ಕು ಹೇಳಿದ:

" ಬೆಕ್ಕುಗಳಿಲ್ಲದಿದ್ದರೆ ಇಲ್ಲಿ ಇಲಿಷಿಕಾರಿ ಮಾಡೋರು ಯಾರು? ನೀನು ಹುಲಿಷಿಕಾರಿ ಮಾಡೋಳು! ಇಲಿಗಳ ನಾಶ ನಿನ್ನಿಂದ ಸಾಧ್ಯ ವಿಲ್ಲವಲ್ಲಾ.... "

" ಅದೆಲ್ಲಾ ನನಗೆ ತಿಳೀದು. ನೀವು ಅಡಿವಂತೆ ಮಾಡಬೇಕು. ನಾನು ತವರುಮನೆಗೆ ಹೋಗಿ ಬರುವುದರೊಳಗೆ ಒಂದು ಬೆಕ್ಕೂ ಇರ ಕೂಡದು; ಇಲ್ಲದಿದ್ದರೆ ನಾನೇ ಅವನ್ನ ಕೊಂದುಬಿಡ್ತೀನಿ!"

" ನಿಧಾನ, ನಿಧಾನ, ಕೊಂದುಬಿಡ್ತೀನಿ ಎನ್ನುವಷ್ಟು ಧೈರ್ಯ ಬಂತಲ್ಲಾ ಈಗ? ಒಮ್ಮೆ ಹೋರಾಡಿದ ಮೇಲೆ? ಎಷ್ಟಾದರೂ ಷಿಕಾರಿಗಳ ವಂಶದವಳಲ್ಲವೇ? ಒಮ್ಮೆ ಸೋಲು, ಒಮ್ಮೆ ಗೆಲುವು!" ಎಂದು ಹಾಸ್ಯಮಾಡಿದ.

ಚಂದ್ರಿ ತವರುಮನೆಗೆ ಹೋಗಿ ತಿಂಗಳಿದ್ದು ಹಿಂತಿರುಗಿ ಬಂದಳು. ಅವಳಿಗೆ ಆಶ್ಚರ್ಯವಾಯಿತು. ಒಂದೂ ಬೆಕ್ಕು ಮನೆಯಲ್ಲಿರಲಿಲ್ಲ.

" ಬೆಕ್ಕುಗಳನ್ನೆಲ್ಲಾ ಹೊಳೆಯಾಚೆ ಬಿಟ್ಟು ಬಂದಿರಾ?" ಎಂದು ಕೇಳಿದಳು.

" ಛೀ, ಅಂತಹ ಪಾಪಕೆಲಸ ನಾ ಎಂದೂ ಮಾಡಿಲ್ಲ! ಎಲ್ಲಾ ನಿನ್ನ ಶಾಪದ ಫಲ! ನಿನ್ನಂತಹ ಪತಿವ್ರತೆಯ ಶಾಪ ತಟ್ಟದೆ ಇರುವುದೇ? ಒಂದೊಂದಾಗಿ ಎಲ್ಲವೂ ಸತ್ತುಹೋದುವು. ಇನ್ನಾದರೂ ಧೈರ್ಯವಾಗಿರು."

" ಪತಿವ್ರತೆಯ ಮಾತನ್ನು ಕೇಳದ ನಿಮ್ಮಂತಹ ಪತಿ ಇದ್ದರೆ ಶಾಪದಿಂದಲೇ ಸುಡಬೇಕಾಗುತ್ತೆ. ಇನ್ನೇನು ಮಾಡೋದು?" ಎಂದಳು, ಹೆಮ್ಮೆದಿಂದ.

ಮಲ್ಲೇಶನ ಮಾತಿನಲ್ಲಿ ಪೂರ್ಣ ನಂಬಿಗೆಯಾಗದೆ ಬಸಮ್ಮ ತನ್ನೂ ವಿಚಾರಿಸಿದಳು:—ಬೆಕ್ಕುಗಳೇನಾದುವು?—ಎಂದು.

" ಓ, ಅದೇನು ಕೇಳ್ತೀಯ — ಪಾಷಾಣಹಾಕಿ ಇಲೀನ ಸಾಯಿಸೋರು, ಸತ್ತ ಇಲಿಗಳನ್ನು ಹೊರಕ್ಕೆ ಎಸೆಯೋರು. ಈ ಬೆಕ್ಕುಗಳು ಆ ವಿಷದ ಇಲಿಗಳನ್ನು ತಿಂದು ತಾವೂ ಸತ್ತವು. ಈಗ ಹೆಸರಿಗೆ ಬೇಕು ಅಂದರೂ ಒಂದು ಬೆಕ್ಕು ಇಲ್ಲ" ಅಂದರು.

ಚಂದ್ರಿಯನ್ನು ಬಿಟ್ಟುಹೋಗಲು ಅವಳ ತಂದೆ ಬಂದಿದ್ದರು.



ಬೆಕ್ಕು ಚಂದ್ರಿಯನ್ನು ಬೆದರಿಸಿ ಕಚ್ಚಿದ ಕಂಗಳಿಯನ್ನು ಪರಿಶೀಲಿಸುತ್ತಾ ಅವರು ಹೇಳಿದರು:

" ಅವಳ ಜಾತಕದಲ್ಲಿ ದೊಡ್ಡ ಗಂಡಾಂತರ ಇತ್ತಂತೆ. ಗಂಡಾಗಿದ್ದರೆ ಹುಲೀ ಕೈಲಿ ಗುದ್ದಾಡೋ ಬೋಗ. ಹೆಣ್ಣಾದ್ದರಿಂದ ಬೆಕ್ಕಿನ ಸಂಗಡ ಸೆಣಸಾಡಿದಾಳೆ! ಒಂದು ದೊಡ್ಡ ಗಂಡಾಂತರದಿಂದ ಪಾರಾದಂತಾಯ್ತು. ಎಲ್ಲಾ ಶಿವನ ದಯೆ. "

ಮಲ್ಲೇಶ ಅವಳತ್ತ ನೋಡಿ ತುಂಟನಗೆ ಬೀರಿದ—

" ಈ ಊರಲ್ಲಿ ಹುಲಿಯೂ ಇಲ್ಲ; ಹುಲೀ ಜಾತಿಗೆ ಸೇರಿದ ಬೆಕ್ಕೂ ಇಲ್ಲ. ಇನ್ನು ಚಿಂದಿ ಇಲಿಗಳ ಸಂಗತಿ ಸೆಣಸಾಡಬೇಕು, ಅಷ್ಟೇ. ಎಷ್ಟಾದರೂ ಷಿಕಾರಿಗಳ ವಂಶದವಳು. ಗಂಡಾಗಿದ್ದರೆ ಹುಲಿಷಿಕಾರಿ ಮಾಡೋಳು. ಈಗ ಹೆಣ್ಣಾಗಿರೋದರಿಂದ ಇಲಿಷಿಕಾರಿ ಮಾಡ್ತಾಳೆ! "

ಚಂದ್ರಿಗೆ ನಗು ಬಂದಿತು, ಅಪಮಾನದಿಂದ ಬಿಟ್ಟೂಬಂದಿತು.

" ಇಲಿ ಒಂದೇ ಏಕೆ, ಹುಲಿಯಾಗಿ ನೀವೂ ಇದೀರಲ್ಲಾ.... " ಎಂದಳು ಹುಸಿಕೋಪದಿಂದ.

ಎಲ್ಲರೂ ಫೊಳ್ಳನೆ ನಕ್ಕರು.

" ಹೋ! ಈ ಬಾರಿ ಹುಲೀನ ಬೋನಿನಲ್ಲಿ ಕೂಡಿಟ್ಟುಕೊಂಡಿದೀಯೆಲ್ಲಾ.... ! " ಎಂದು ಬಸಮ್ಮ ನಕ್ಕರು.

" ಆದರೆ ನಾನು ಕಚ್ಚಿ ಪರಚಿ ಹೆದರಿಸುವ ಹುಲಿ ಅಲ್ಲ! ನನ್ನ ನೋಡಿ ಕೊಗಿಕೊಳ್ಳೋದಿಲ್ಲ. ಸಡುರಾತ್ರೀಲಿ ಕೂಗಿಕೊಂಡು ನನ್ನ ಮಾನ ಕಳೆಯುವಂತಿಲ್ಲ. ಅದೇ ನನ್ನ ಪುಣ್ಯ." ಎಂದು ಅವಳತ್ತ ಸೂಚ್ಯವಾಗಿ ನೋಡಿದ.

ತಾನು ಹೊಸದಾಗಿ ಅಲ್ಲಿಗೆ ಬಂದಾಗ, ಕಿಟಕಿಯಲ್ಲಿ ಬೆಳ್ಳನ್ನು ಕಂಡು ಕೂಗಿದ್ದು ನೆನಪಾಗಿ, ಎಲ್ಲಿ ಆ ಸಂಗತಿ ಹೇಳುವನೋ ಎಂದು ಚಂದ್ರಿ ನಾಚಿ, ಅಲ್ಲಿ ನಿಲ್ಲದೆ ಹೊರಗಡೆಗೆ ನಡೆದಳು.

" ಒಳ್ಳೆಯ ಮಾರ್ಜಾಲನಾಶಕತ್ವ " ಎಂದು ನಸುನಕ್ಕ ಮಲ್ಲೇಶ—ಅದೇ ನೆನಪಿನ ಗುಂಗಿನಲ್ಲಿ.

ಸ್ವಾಗತಾಧ್ಯಕ್ಷರ ಭಾಷಣ

●

(ತಾ. ೧೫-೧೧-೫೭ ರಂದು ಧಾರವಾಡದಲ್ಲಿ ನೇರಿದ ೩ನೆಯ ಸಣ್ಣ ಕಥೆಗಾರರ ಮತ್ತು ಲಲಿತಪ್ರಬಂಧಕಾರರ ಸಮ್ಮೇಳನದ ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರು ಮಾಡಿದ ಪ್ರಾರಂಭ ಭಾಷಣವಿದು.)

●

ಶ್ರೀಮಾನ್ ಜಾಟೀಲ ಕಲ್ಲಸಗೌಡರೆ,
ಶ್ರೀಮಾನ್ ಕಲ್ಲೂರ ಕೃಷ್ಣಕುಮಾರರೆ,
ಪ್ರಿಯ ಸದಸ್ಯ ಸೋದರ-ಸೋದರಿಯರೆ!

ಈ ಸಮ್ಮೇಳನದ ಸ್ವಾಗತಮಂಡಲಿಯ ಸದಸ್ಯರೆಲ್ಲರೂ, ಪ್ರಾರಂಭದ ಒಂದು ಸಾಂಪ್ರದಾಯಿಕ ಕಾರ್ಯದ ಹೊಣೆಯನ್ನು — ಒಂದು ಬಗೆಯ ಪ್ರೀತಿ-ವಿಶ್ವಾಸಗಳಿಂದ—ನನ್ನ ಕಡೆಗೆ ಒಪ್ಪಿಸಿಕೊಟ್ಟಿದ್ದಾರೆ ನಾನೀಗ ಮಾತನಾಡುವುದು ಸ್ವಾಗತಮಂಡಲದ ಸದಸ್ಯರ ಒಬ್ಬ ಪ್ರತಿನಿಧಿಯಾಗಿ!

ನಮ್ಮ ಕರೆಯನ್ನು ಮನ್ನಿಸಿ ಇಂದಿನ ಸಭೆಗೆ ದಯೆಮಾಡಿಸಿದ ತಮ್ಮೆಲ್ಲರಿಗೂ ಹೃತ್‌ಪೂರ್ವಕವಾದ ಸ್ವಾಗತವು. ಅನನುಭವದಿಂದಲೋ, ಅನನುಕೂಲತೆಯಿಂದಲೋ, ತಮ್ಮ ಸ್ವಾಗತಕ್ಕೆ ಅವಶ್ಯಕವಿರುವ ಅನುಕೂಲತೆಗಳನ್ನು ಒದಗಿಸುವುದಕ್ಕೆ ನಮ್ಮಿಂದ ಸಾಧ್ಯವಾಗಿರುವುದಿಲ್ಲವೆಂಬ ಅರಿವು ನಮಗೆ ಸಾಕಷ್ಟು ಇದೆ. ಅದರಂತೆಯೆ, ಕಾರ್ಯಗೌರವದ ಕಡೆಗೆ ದೃಷ್ಟಿಯಿರಿಸಿಬಂದ ತಾವು, ನಮ್ಮ ಲೋಪದೋಷಗಳನ್ನು ಕ್ಷಮಿಸುವಿರೆಂಬ ನಂಬುಗೆಯೂ ಇದೆ.

ಇಂತಹದೊಂದು ಸಮ್ಮೇಳನವನ್ನು ಧಾರವಾಡದಲ್ಲಿ ನೆರೆಯಿಸಬೇಕೆಂದು, ಇಲ್ಲಿಯ ಕೆಲವು ಹಿರಿಯ ತರುಣ ಸಾಹಿತ್ಯಕರ ಮನಸ್ಸಿನಲ್ಲಿ ವಿಚಾರ ಮೂಲೆಯಿತು. ಅವರು ಧಾರವಾಡದ ಸಾಹಿತ್ಯಕರದೊಂದು ಸಭೆಯನ್ನು ಕರೆದು, ತಮ್ಮ ವಿಚಾರವನ್ನು ಅಲ್ಲಿ ಮಂಡಿಸಿ ಸಭೆಯ ಒಪ್ಪಿಗೆ ಪಡೆದು ಕಾರ್ಯವನ್ನು ಪ್ರಾರಂಭಿಸಿಯೇ ಬಿಟ್ಟರು. ಮೊದಮೊದಲು ಉತ್ತರಕರ್ನಾಟಕವನ್ನಷ್ಟು ಮಾತ್ರ ಸಮ್ಮೇಳನದ ಕ್ಷೇತ್ರವನ್ನಾಗಿರಿಸಿಕೊಳ್ಳಬೇಕೆಂದಿದ್ದ ಅವರ ವಿಚಾರ, ಬೇರೆ ಬೇರೆ ಕಾರಣಗಳ ಪರಿಣಾಮವಾಗಿ, ಅಖಿಲಕರ್ನಾಟಕವನ್ನೇ ತನ್ನ ಕ್ಷೇತ್ರವನ್ನಾಗಿಸಿಕೊಂಡಿತು.

ಒಂದು ಬಗೆಯಿಂದ ನೋಡಿದರೆ ಇದು ಮೊದಲನೆಯ ಸಮ್ಮೇಳನ; ಇನ್ನೊಂದು ಬಗೆಯಿಂದ ನೋಡಿದರೆ ಇದು ಐದನೆಯ ಸಮ್ಮೇಳನ. ಸಣ್ಣಕಥೆಗಾರರು ಮತ್ತು ಕಾದಂಬರಿಕಾರರ ಸಮ್ಮೇಳನಗಳು ಮೈಸೂರು-ಕರ್ನಾಟಕದಲ್ಲಿ, ಈಗಾಗಲೇ ನಾಲ್ಕು ಸಲ ಜರುಗಿವೆ. ಇದು ಸಣ್ಣಕಥೆಗಾರರು ಮತ್ತು ಲಲಿತಪ್ರಬಂಧಕಾರರ ಸಮ್ಮೇಳನ. ಸಣ್ಣಕಥೆಗಾರರು ಅಲ್ಲಿಯೂ ಇಲ್ಲಿಯೂ ಸಾಮಾನ್ಯರಾದುದರಿಂದ, ಈ ಮೊದಲು ನಡೆದ ನಾಲ್ಕು ಸಮ್ಮೇಳನಗಳನ್ನು ಸೇರಿಸಿ ಇದು ಐದನೆಯದೆನಿಸಿಕೊಂಡಿರುವುದು.

ಧಾರವಾಡವು ಕರ್ನಾಟಕದ ಸಾಂಸ್ಕೃತಿಕ ಪ್ರಪಂಚದಲ್ಲಿ, ತನ್ನದೇ ಆದ ಒಂದು ಸ್ಥಾನ ಪಡೆದು ನಿಂತುದನ್ನು ಎಲ್ಲರೂ ಒಪ್ಪುವರು. ಕರ್ನಾಟಕದ ಆಧುನಿಕ ಪುನರುಜ್ಜೀವನದ ವಿಚಾರಧಾರೆಗಳಿಗೆ ಇದು ಉಗಮಪ್ರದೇಶವಾಗಿದೆ. ಕರ್ನಾಟಕದ ಏಕೀಕರಣದ ವಿಚಾರ ತರಂಗಿಣಿಯು, ಧಾರವಾಡದ ನಮ್ಮ ಹಿರಿಯ ಧುರೀಣರ ಮನಸ್ಸು-ಹೃದ್ರಿಯಿಂದ ಇಳಿದು ನಾಡಿನಲ್ಲಿ ಹರಿಯದೆ ಹೋಗಿದ್ದರೆ, ಕನ್ನಡಿಗರಿಲ್ಲ ಒಂದೆ ರಾಜ್ಯದಲ್ಲಿ ಒಟ್ಟುಗೂಡುವಂತಹ ಇಂದಿನ ಸುಯೋಗ ನಮಗೆ ಒದಗುತ್ತಲೇ ಇರಲಿಲ್ಲವೆಂದು ಹೇಳಬಹುದು. ಇಲ್ಲಿಯೆ ಸ್ಥಾಪನೆಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘವು, ಉತ್ತರ ಕರ್ನಾಟಕಸ್ಫೂರ್ತಿ ಶೂನ್ಯಹೃದಯದಲ್ಲಿ ಕನ್ನಡದೇವಿಯನ್ನು ಪ್ರತಿಷ್ಠಾಪಿಸಲು ಅವಿಚ್ಛಿನ್ನವಾಗಿ ಕಾರ್ಯಮಾಡಿತು. ಇಷ್ಟೇ ಅಲ್ಲ; ಕರ್ನಾಟಕತ್ವದ ಭಾವನೆಯು ಇಲ್ಲದ ದೇಶಕತೆಯ ಕನ್ನಡಿಗರನ್ನೂ ಧಾರವಾಡಕ್ಕೆ ಬರಮಾಡಿಕೊಂಡು, ಬಂಧುತ್ವವನ್ನು ಬೆಳೆಸಿತು. ಧುರೀಣರಲ್ಲಿಯ ಮುಕ್ತಭಿನ್ನತೆಯ ಮೂಲಕ, ರಾಜಕೀಯ ಪ್ರಪಂಚದಲ್ಲಿ ಧಾರವಾಡವು ತನ್ನ ನೊದಲಿನ ಸ್ಥಾನವನ್ನು ಕಳೆದುಕೊಂಡಿದ್ದರೂ, ಸಾಂಸ್ಕೃತಿಕ ಪ್ರಪಂಚದಲ್ಲಿ ಇದುವ ಇದರ ಉನ್ನತಸ್ಥಾನವು ತನ್ನಾ ನೇಲು-ನೇಲಕ್ಕೆ ಏರುತ್ತಿದೆ. ಇಲ್ಲಿಯ ಹಲವಾರು ಉಚ್ಚ ವಿದ್ಯಾಲಯಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಕನ್ನಡ ಸಂಶೋಧನ ಸಂಸ್ಥೆ, ಅಖಿಲಭಾರತ ಆಕಾಶವಾಣಿಯ ಕೇಂದ್ರ—ಇವೆಲ್ಲ ಧಾರವಾಡದ ಸಾಂಸ್ಕೃತಿಕ ಮಟ್ಟವನ್ನು ಮೊದಲಿಗಿಂತ ನೇಲಕ್ಕೆ ಏರಿಸಿಬಿಟ್ಟಿವೆ.

ಸಾಂಸ್ಕೃತಿಕಕೇಂದ್ರವಾದ ಧಾರವಾಡವು ವಿದ್ಯಾವಂತರ ಆಗರವಾಗಿದೆ. ವಿದ್ಯಾವಂತರಿರುವಲ್ಲಿ ಸಾಹಿತ್ಯನಿರ್ಮಿತಿಯ ಕಾರ್ಯವು ನಡೆಯುವುದು ಸಹಜವಿಷಯವಾಗಿದೆ. ಧಾರವಾಡದಲ್ಲಿ ಸಾಹಿತ್ಯಕರ ಸಂಖ್ಯೆ ಸಾಕಷ್ಟಿದೆಯೆಂದಿಷ್ಟೇ ಅಲ್ಲ; ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಉಚ್ಚಶ್ರೇಣಿಯಲ್ಲಿ ನಿಂತ ಸಾಹಿತ್ಯಕರೂ ಇಲ್ಲಿ ಇದ್ದಾರೆ. ಕಾವ್ಯ, ಕಾದಂಬರಿ, ಸಣ್ಣಕಥೆ, ನಾಟಕ, ಲಲಿತಪ್ರಬಂಧ, ವಿಮರ್ಶೆ, ಸಂಶೋಧನ ಮೊದಲಾದ ಸಾಹಿತ್ಯದ ವಿವಿಧವಿಭಾಗಗಳಲ್ಲಿ ದುಡಿದು

ಕೆಸಗುಗಳಿಸಿದ ಜನರು ಧಾರವಾಡದಲ್ಲಿ ಬೇಕಾದಷ್ಟು ಜನರಿದ್ದಾರೆ. 'ಧಾರವಾಡದಲ್ಲಿ ಮನೆಗೆ ನೂರು ಜನ ಲೇಖಕರಿದ್ದಾರೆ!' ಎಂದು, ಹೊರಗಿನವರು ನಗೆಮಾತಿನಲ್ಲಿ ಹೇಳುತ್ತಿರುವುದೂ ಉಂಟು. ಈ ಕೆಗೆಮಾತಿನಲ್ಲಿ ಸತ್ಯವೂ ಇಲ್ಲದೆ ಇಲ್ಲ. ಧಾರವಾಡದ ನಿಸರ್ಗ ಮನೋರಮಣೀಯತೆ, ಇಲ್ಲಿಯ ವಿದ್ಯಾಸ್ಪ್ರಶಾರಕವಾತಾವರಣ ಇಲ್ಲಿ ನಡೆಯುವ ಸಾಂಸ್ಕೃತಿಕ ಚಟುವಟಿಕೆಗಳು, ಸಾಹಿತ್ಯಿಕ ವ್ಯಕ್ತಿಗಳ ಸಹವಾಸ ಇವುಗಳ ಮೂಲಕ, ಇಲ್ಲಿಯ ಪ್ರತಿಯೊಬ್ಬ ತರುಣನಿಗೂ ಏನಾದರೂ ಬರೆಯಬೇಕೆಂಬ ಬಯಕೆ ತಲೆದೋರುವುದು ಸಹಜವಾಗಿದೆ. ಎಂತಲೇ ಇಂದು ಹಲವು ಜನ ತರುಣ ಲೇಖಕರು ಧಾರವಾಡದಲ್ಲಿ ಕಾಣುತ್ತಿದ್ದಾರೆ.

ವಿಜ್ಞಾನದ ಪ್ರಭಾವಕ್ಕೆ ಒಳಗಾದ ಇಂದಿನ ನಮ್ಮ ಜೀವನವು, ಒಂದು ಸುಟ್ಟುರೆಗಾಳಿಯ ಸುಳಿಯಲ್ಲಿ ಸಿಕ್ಕಂತಾಗಿದೆ. ಹಳೆಯ ವಿಚಾರ, ಹೊಸವಿಚಾರಗಳ ಕಲಬೆರಕೆ, ನಮ್ಮ ಜೀವನದಲ್ಲಿ ಕಲಹ ಬಗೆಯ ಸಮಸ್ಯೆಗಳನ್ನು ನಿರ್ಮಾಣಮಾಡಿರುವುದು. ಇಂದು ನಾವು ಅನುಭವಿಸುತ್ತಿರುವ ಪ್ರಜಾಪ್ರಭುತ್ವವೂ, ಪರದೇಶಗಳಿಂದ ಪ್ರವೇಶಿಸಿರುವ ವಿವಿಧರಾಜಕೀಯವಾದಗಳೂ ನಮ್ಮ ಸಾಂಪ್ರದಾಯಿಕ ಭಾವನೆಯ ಜನರ ಬುದ್ಧಿ-ಮನಸ್ಸುಗಳನ್ನ ಕಂಗೆಡಿಸಿಬಿಟ್ಟಿರುವುದು. ಸುಖಜೀವನದ ಉತ್ಕಟೇಚ್ಛೆಯಿಂದ, ಒಮ್ಮೆಲೆ ಸಾಮಾಜಿಕಕ್ರಾಂತಿಯನ್ನು ಮಾಡಬೇಕೆಂಬ ತರುಣರ ದುಡುಕ್ಕು, ಸಂಯಮದ ವೇರೆಯನ್ನು ವಿಸರುತ್ತಲಿದೆಯೆಂದು, ಪ್ರಾಮಾಣಿಕರಾದ ಸಮಾಜ ವಿಜ್ಞಾನಿಗಳು ಹೇಳುತ್ತಲಿದ್ದಾರೆ. ಇಂತಹ ಕಾಲದಲ್ಲಿ ಲೇಖಕರೆನಿಸಿಕೊಳ್ಳುವವರ ಮೇಲೆ ಭಾರವಾದ ಹೊಣೆ ಬೀಳುವುದು. ಇಂತಹ ಹೊಣೆಗಾರಿಕೆಯನ್ನು ಅರಿತುಕೊಂಡೇ ಇಲ್ಲಿಯ ತರುಣ ಸಾಹಿತ್ಯಿಕರು ವಿಚಾರವಿನಿಮಯಕ್ಕಾಗಿ ತನ್ಮೆಲ್ಲರನ್ನೂ ಇಲ್ಲಿಗೆ ಬರಮಾಡಿಕೊಂಡಿದ್ದಾರೆ. ಇಲ್ಲಿ ನಾನೆಲ್ಲರೂ ಕೂಡಿ, ಸಾಹಿತ್ಯಿಕವರ್ಗವನ್ನು ಎದುರಿಸಿದ ಎಲ್ಲ ಸಮಸ್ಯೆಗಳನ್ನೂ, ಕೂಲಂಕಷವಾಗಿ ಚರ್ಚಿಸಿ ತೊಡಕುಗಳನ್ನು ಬಿಡಿಸಿ, ನಮ್ಮ ದಾರಿಯನ್ನು ಸುಗಮಗೊಳಿಸಿಕೊಳ್ಳಬೇಕಾಗಿದೆ.

ಇಂದು ಲೋಕದಲ್ಲೆಲ್ಲ ಸಾಹಿತ್ಯವು ವಾಸ್ತವದ ದಾರಿಯನ್ನು ಅನುಸರಿಸಿ ಹೊರಟಿದೆ. ಎಲ್ಲ ಕಡೆಗಳಲ್ಲಿಯಂತೆ ನಮ್ಮ ನಾಡಿನ ಆಧುನಿಕ ಸಾಹಿತ್ಯವೂ ವಾಸ್ತವದ ದಾರಿಯಿಂದ ಹೊರಟಿರಿ, ಅದಕ್ಕಾಗಿ ಆಶ್ಚರ್ಯಪಡುವ ಕಾರಣವೂ ಇಲ್ಲ; ವ್ಯಸನಪಡುವ ಕಾರಣವೂ ಇಲ್ಲ. ಆದರೆ ಈ ಮಾರ್ಗದ ಸಾಹಿತ್ಯ ನಮ್ಮ ಜೀವನಕ್ಕೆ ಹೇಗೆ ಒಳ್ಳೆಯದನ್ನು ಉಂಟುಮಾಡಬಹುದೆಂಬುದನ್ನು ವಿಚಾರಿಸುವುದು, ಎಲ್ಲ ಬುದ್ಧಿವಂತರ ಕರ್ತವ್ಯವಾಗಿದೆ. ಆದರ್ಶವಾದಿ ಸಾಹಿತ್ಯಕನಿಗಿಂತ ವಾಸ್ತವವಾದಿ ಸಾಹಿತ್ಯಿಕನ ಹೊಣೆಗಾರಿಕೆ ದೊಡ್ಡದೆಂಬುದನ್ನು ನಾವು ಮರೆಯತಕ್ಕದಲ್ಲ ಏಕೆಂದರೆ, ಆದರ್ಶವಾದಿ ಪರಂಪರಾಗತ ಸಂಯಮ ಮಾರ್ಗದಲ್ಲಿ ನಡೆದು, ಅಲ್ಲಿಯ ಸೌಂದರ್ಯವನ್ನು ಮಾತ್ರ ತನ್ನ ವ್ಯಕ್ತಿತ್ವದಿಂದ ಚಿತ್ರಿಸುವವನಾಗಿರುವನು. ಅವನ ಸಾಹಿತ್ಯ ಒಂದು ಸಾಂಪ್ರದಾಯಿಕ ನಿಯಮಕ್ಕೆ ಒಳಗಾಗಿರುವುದು. ಆ ನಿಯಮವನ್ನು ತಂತೆ ನಡೆದುಕೊಂಡು ಬಂದ ಹಿಂದಿನವರ ಜೀವನಸೌಂದರ್ಯವೂ ಯೋಗ ಕ್ಷೇಮಗಳೂ, ಪ್ರತ್ಯಕ್ಷಪ್ರಮಾಣಗಳಾಗಿ ಜನತೆಯ ಮನಸ್ಸನ್ನು ಆಕರ್ಷಿಸುವುವು. ಕಾಲಾನುಗುಣ ಮಾರ್ಪಾಡನ್ನು ಅವನು ಬಗೆಯದೆ ಹೋದರೂ, ಸಾಂಪ್ರದಾಯಿಕ ಬುದ್ಧಿಯ ಸಾಮಾನ್ಯ ಜನರ ಅಡೆಂದೊಡ್ಡ ಕೊರತೆಯೆಂದು ಕಾಣಲಿಕ್ಕಿಲ್ಲ. ತಮಗೆ ಬೇಕಾದ ಮನೋರಂಜನೆ, ನೀತಿಯ ಉಪದೇಶ, ಸೌಂದರ್ಯದರ್ಶನ ಇವುಗಳಿಂದ ಅವರು ತೃಪ್ತಿಯನ್ನು ಪಡೆಯಬಹುದು.

ವಾಸ್ತವವಾದಿ ಸಾಹಿತ್ಯಿಕನ ಸ್ಥಿತಿ ಹೀಗಲ್ಲ. ಅವನು ನವ ಸಾಮಾಜಿಕ ಜೀವನದಲ್ಲಿ ಸರ್ವತೋಮುಖವಾದ ಬದಲಾವಣೆಯನ್ನು ಅಪೇಕ್ಷಿಸುತ್ತಾನೆ. ಆದರೆ ಸರ್ವಮಾನ್ಯವೆನಿಸುವಂತಹ ಬದಲಾವಣೆಗಳನ್ನು ಮಾತ್ರ ಇನ್ನೂ ಕಂಡುಹಿಡಿದಿಲ್ಲ. ಇನ್ನುಮುಂದೆ ಕಂಡುಹಿಡಿಯಬೇಕಾಗಿದೆ. ಸದ್ಯದ ಜೀವನವ್ಯವಸ್ಥೆಯಿಂದ ಅತೃಪ್ತರಾದ ನಮ್ಮ ತರುಣಸಾಹಿತ್ಯಕರು, ವೈಯಕ್ತಿಕವಾಗಿ ವಿಚಾರಮಾಡಿ ಯಾವುಯಾವುದೋ ಬದಲಾವಣೆಗಳನ್ನು, ತಮ್ಮ ಸಾಹಿತ್ಯದ ಮೂಲಕ ಹೊರಗೆ ಹಾಕುತ್ತಲಿದ್ದಾರೆ. ಆ ಬದಲಾವಣೆಗಳು ಸಾಂಪ್ರದಾಯಿಕ ಭಾವನೆಯವರಿಗೆ ಅಶ್ಲೀಲವಾಗಿ ಕಂಡರೆ, ಸಮಾ ವಿಜ್ಞಾನಿಗಳ ಅಪರಿಪೂರ್ಣವಾಗಿ ಕಾಣುತ್ತಲಿವೆ. ಆದುದರಿಂದಲೇ ನಮ್ಮ ವಾಸ್ತವವಾದಿ ಸಾಹಿತ್ಯಿಕರು, ಸಾಹಿತ್ಯನಿರ್ಮಿತಿಗಿಂತ ಮೊದಲು ತಮ್ಮ ಲೋಕಾನುಭವ, ಬಹುಶ್ರುತತೆಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ತಾವು ಮಂಡಿಸುವ ವಿಧಾನಗಳು ಯೋಗಕ್ಷೇಮಕಾರಕವಾಗಿವೆಯೆಂಬುದನ್ನು ಸಿದ್ಧಗೊಳಿಸುವಂತಹ ಸಪ್ರಮಾಣ ತಾರ್ಕಿಕಬುದ್ಧಿ ಅನ್ಯರಲ್ಲಿ ಬೆಳೆಯಬೇಕಾಗಿದೆ. ಸಮಾಜಶಾಸ್ತ್ರ, ಮನಶ್ಶಾಸ್ತ್ರ, ರಾಜಕಾರಣ, ಅರ್ಥಶಾಸ್ತ್ರ ವಿಜ್ಞಾನ ಇವುಗಳ ಪರಿಣತಿಯಿಲ್ಲದೆ ಸಾಹಿತ್ಯಿಕ ವಾಸ್ತವಮಾರ್ಗದಲ್ಲಿ ಮುಂದಡಿಯಿಡಲಾಗದು. ಇಷ್ಟರೆ ಅದರಿಂದ ಅತ ಯಶಸ್ಸನ್ನೂ ಪಡೆಯಲಾರ.

ವಾಸ್ತವಮಾರ್ಗದ ಸಾಹಿತ್ಯಿಕರು ಇಂದಿನ ವರ್ತಮಾನಕಾಲದಲ್ಲಿ ಯಂತೂ ಕೇವಲ ಒಂದು ವಿಚಾರದ ಪ್ರಚಾರಕರಾಗಿರುವರು. ವಿಚಾರ ಪ್ರಚಾರವೂ ಸಾಹಿತ್ಯದ ಒಂದು ಮುಖ್ಯ ಗುರಿಯೇ ಆಹುದು; ಆದರೆ ಆ ವಿಚಾರ ಬಹುಜನರ ಸುಖ-ಶಾಂತಿಗಾಗಿ ಇರಬೇಕೆಂಬುದನ್ನು ಮರೆತು ನಡೆಯಲಾಗದು. ಸದ್ಯ ಅನೇಕ ತರುಣ ಸಾಹಿತ್ಯಿಕರು ಅರ್ಥ-ಕಾಮಸಮಸ್ಯೆಗಳನ್ನು ಬಿಡಿಸಬೇಕೆಂಬ ಉದ್ದೇಶದಿಂದ ಪ್ರಕಟಪಡಿಸುತ್ತಿರುವ ವಿಚಾರಗಳನ್ನು ನೋಡಿದರೆ, ಅವು ಬಹುಜನರ ಸುಖ ಶಾಂತಿಗಳಿಗಿಂತ ವೈಯಕ್ತಿಕ ಅತೃಪ್ತಿ-ಅಸಂತುಷ್ಟಿಗಳ ದ್ಯೋತಕವಾಗಿರುವಂತೆ ಕಾಣುವುವು. ಏಕೆಂದರೆ ಅವರ ವಿಚಾರದಂತೆ ನಡೆಯತೊಡಗಿದರೆ, ಸಮಾಜದಲ್ಲಿ ಅನವಸ್ಥೆಯುಂಟಾಗಿ ಹುಚ್ಚುಕೊಂಡಲಕ್ಕೆ ತಿಳಿಬಹುದಾಗಿದೆ. ವ್ಯಕ್ತಿಸ್ವಾತಂತ್ರ್ಯವೆಂದರೆ ವ್ಯಕ್ತಿಯ ಸ್ವೈರವೃತ್ತಿಯಲ್ಲ ಸಮಾಜಸ್ವಾತಂತ್ರ್ಯವೆಂದರೆ ಸಾಮಾಜಿಕ ಸ್ವೈರವೃತ್ತಿಯೂ ಅಲ್ಲ. ಎಂತಹ ಹೊಸಕಾಲವೇ ಬರಲಿ, ವ್ಯಕ್ತಿಯು ಸಮಾಜವೂ ಸುಖ-ಶಾಂತಿಸಾಧಕವಾದ ಕೆಲವು ನಿಯಮಗಳಿಗೆ ಒಳಗಾಗಿಯೇ ನಡೆಯಬೇಕಾಗುವುದು. ಅಂತಹ ನಿಯಮಗಳನ್ನು

ಒಬ್ಬನೇ ವಿಚಾರಿಸಿ ನಿರ್ಣಯಿಸುವುದಕ್ಕಿಂತ, ಹಲವು ಜನ ವಿಚಾರಿಗಳು ಒಂದೆಡೆ ಸೇರಿ, ಅವುಗಳನ್ನು ಸಾಧಕ-ಬಾಧಕ ದೃಷ್ಟಿಯಿಂದ ನೋಡಿ ನಿರ್ಣಯಿಸುವುದು ಹೆಚ್ಚು ಒಳ್ಳೆಯದು. ಇಂದಿನ ಈ ಸಮ್ಮೇಳನ ಅಂತಹ ವಿಚಾರಚರ್ಚೆಯು ರಂಗವಾಗಬೇಕೆಂದು ನಮ್ಮ ಸ್ವಾಗತಮಂಡಲಿಯು ಅಪೇಕ್ಷೆಯಾಗಿದೆ.

ನಮ್ಮ ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ದೊರೆತಿರುವ ಶ್ರೀ. ಕಲ್ಲೂರ ಕೃಷ್ಣಕುಮಾರರು ನಮ್ಮ ನಾಡಿಗೆಲ್ಲ ಸಾಕಷ್ಟು ಪರಿಚಿತರು. ಇವರು ರಾಷ್ಟ್ರೀಯ ಮನೋವೃತ್ತಿಯ ಸಹೃದಯ ಸಾಹಿತ್ಯಿಕರು. ಕವಿಗಳು, ಕತೆಗಾರರು, ನಾಟಕಕಾರರು, ಸಂವಾದಕರು; ಅಲ್ಲದೆ ಕನ್ನಡ ನಾಡನ್ನೆಲ್ಲ ಸುತ್ತಿ ಅದರ ಮೂಲೆ-ಮೂಲೆಯ ಪರಿಚಯವನ್ನು ಇವರ ವಿವರವಾಗಿ ಮಾಡಿಕೊಂಡವರು. ಕರ್ನಾಟಕದ ನಿಸ್ಸೀಮ ಅಭಿಮಾನಿಗಳು ಪದ್ಯದ ನಮ್ಮ ರಾಜ್ಯ 'ಕರ್ನಾಟಕ' ಎಂಬ ಹೆಸರನ್ನು ಕಳೆದುಕೊಂಡುದಕ್ಕಾಗಿ ಹಗಲಿರುಳು ಮಿಡುಕುವವರು. ಇವರು ಸಮಾಜಶಾಸ್ತ್ರವನ್ನು ಅಭ್ಯಸಿಸಿ ವಿಶ್ವವಿದ್ಯಾಲಯದ ಉಚ್ಚ ಪದವಿ ಪಡೆದವರಲ್ಲದೆ, ಅರ್ಥಶಾಸ್ತ್ರವನ್ನೂ ಪ್ರೀತಿಯಿಂದ ಓದಿದವರು. ಇಂತಹರು ನಮಗೆ ಅಧ್ಯಕ್ಷರಾಗಿ ದೊರೆತುದು ನಮ್ಮೆಲ್ಲರ ಸುದೈವ. ಇವರ ಅಭ್ಯಾಸ-ಅನುಭವಪೂರ್ಣ ನೇತೃತ್ವದಲ್ಲಿ, ನಮ್ಮ ತರುಣ ಸಾಹಿತಿಕರು, ತಮ್ಮನ್ನೆದುರಿಸಿದ ಅನೇಕ ಸಮಸ್ಯೆಗಳನ್ನು ಬಿಡಿಸಿಕೊಳ್ಳಬಹುದಾಗಿದೆ.

ಇನ್ನು ಸಮ್ಮೇಲನದ ಉದ್ಘಾಟನೆಯ ಸಮಾರಂಭ ನಡೆಯಲಿದೆ. ಉದ್ಘಾಟಕರಾಗಿ ದಯೆಮಾಡಿಸಿದ ಶ್ರೀಮಾನ್ ಕೆ. ಎಫ್. ಪಾಟೇಲ ಅವರು ರಾಜಕಾರಣಿಗಳಾದರೂ ಶುಷ್ಕರಾಜಕಾರಣಿಗಳಲ್ಲ. ಇವರು ಸಹೃದಯ ಸಾಹಿತ್ಯಿಕರೂ ಆಹುದು. ಲಲಿತ ಸಾಹಿತ್ಯಕ್ಕಿಂತಲೂ ಸಮಾಜಜೀವನ ಪ್ರಯೋಜನಕಾರಿಯಾದ ವೈಚಾರಿಕ ಸಾಹಿತ್ಯದ ಕಡೆಗೆ ಇವರ ಒಲವು ಹೆಚ್ಚಾಗಿದೆ. ಶ್ರೀಮಾನ್ ಕೆ. ಎಫ್. ಪಾಟೇಲ ಅವರನ್ನು ಕನ್ನಡ ಜನತೆಗೆ ಹೊಸತಾಗಿ ಪರಿಚಯಮಾಡಿಕೊಡಬೇಕಾದುದೇನೂ ಇಲ್ಲ. ಕಾಂಗ್ರೆಸಿನ ಅಸಹಕಾರ ಚಳವಳಿ, ಸತ್ಯಾಗ್ರಹ, ಸ್ವಾತಂತ್ರ್ಯದ ಹೋರಾಟ ಎಲ್ಲದರಲ್ಲಿಯೂ ಪ್ರತ್ಯಕ್ಷವಾಗಿ ಭಾಗವಹಿಸಿದವರಿವರು. ಮುಂಬಯಿ ವಿಧಾನಸಭೆಯ ಸದಸ್ಯರಾಗಿ, ಉಪ ಮಂತ್ರಿಗಳಾಗಿ ಜನಸೇವೆಯನ್ನು ಪ್ರಾಮಾಣಿಕವಾಗಿ ಮಾಡಿರುವರು. ಇದೀಗ ಹಳ್ಳಿಯ ವಿಶ್ವವಿದ್ಯಾಲಯದ ನಿರ್ಮಿತಿಯ ವಿಚಾರವನ್ನು ತಲೆಯಲ್ಲಿ ಇಟ್ಟುಕೊಂಡು, ಅದರ ಬಗೆಗೆ ಪ್ರಾರಂಭ ಸಿದ್ಧತೆಯ ಕಾರ್ಯವನ್ನು ಕೈಕೊಂಡಿರುವರು. ತಮ್ಮ ಅನೇಕ ಕಾರ್ಯಗಳಲ್ಲಿ ಜಿಡುವುಮಾಡಿಕೊಂಡು, ಇಲ್ಲಿಯವರೆಗೆ ದಯೆಮಾಡಿಸಿ ಅವರು ನಮ್ಮನ್ನು ಉಪಕೃತರನ್ನಾಗಿಸಿದ್ದಾರೆ. ನಾನೀಗ ಅವರಿಗೆ ಸಮ್ಮೇಳನವನ್ನು ಪ್ರಾರಂಭಮಾಡಿಕೊಡಲು ಬಿನ್ನವಿಸಿಕೊಳ್ಳುತ್ತೇನೆ. ಮತ್ತೊಮ್ಮೆ ತಮ್ಮೆಲ್ಲರಿಗೂ ಸುಸ್ವಾಗತ!

ಅಧ್ಯಕ್ಷ ಶ್ರೀ. ಕೃಷ್ಣಕುಮಾರರು

ಪರಿಚಯಕಾರರು ಶ್ರೀ. ಜ. ಚಾ. ನಂಜಯ್ಯ

ಶ್ರೀಕೃಷ್ಣಕುಮಾರರು ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ನಿಯೋಜಿತರಾಗಿದ್ದಾರೆ. ನಮ್ಮ ಸ್ವಾಗತಾಧ್ಯಕ್ಷರು ಅವರ ಬಗ್ಗೆ ಅಭಿಮಾನದ ಮಾತುಗಳನ್ನು ಹೇಳಿದ್ದಾರೆ ಸಭೆಯ ಸಂಪ್ರದಾಯದಂತೆ ಪರಿಚಯದ ನಾಲ್ಕು ಮಾತುಗಳನ್ನು ನಾನು ಹೇಳುತ್ತೇನೆ.

ಶ್ರೀಯುತರು ಕನ್ನಡ ಕಥಾಕ್ಷೇತ್ರದಲ್ಲಿ ಕಾಲುಶತಮಾನಕ್ಕೂ ಮುಂಚೆ ಸಮರ್ಥ ರೀತಿಯಿಂದ ಕೃಷಿಮಾಡಿ ಹೆಸರಾದವರು. ಅವರ 'ಬಿಸಿಲುಗುದುರೆ', 'ಜೀವನ' ಎಂಬೆರಡು ಸಂಗ್ರಹಗಳು ಅದಕ್ಕೆ ಸಾಕ್ಷಿ ನುಡಿಯುತ್ತವೆ. ಆಧುನಿಕ ಕನ್ನಡ ಸಣ್ಣಕತೆಯ ಸ್ವರ್ಣಯುಗವದು ಎಂದು ಉತ್ತರಕರ್ನಾಟಕದಲ್ಲಿ ಕತೆಗಾರರೆಂದು ಹೆಸರಾದವರು, ಸಣ್ಣಕತೆಯನ್ನು ಸಾಹಿತ್ಯದ ವಿಶಿಷ್ಟ ಪ್ರಭಾವೀ ಪ್ರಕಾರವಾಗಿ ರೂಪಗೊಳಿಸಿದವರೂ ಆದವರು ಇಂದಿನ ಸ್ವಾಗತಾಧ್ಯಕ್ಷರು ಮತ್ತು ಇಂದಿನ ಸಮ್ಮೇಳನಾಧ್ಯಕ್ಷರು.

ಜಯಕರ್ನಾಟಕ ಪತ್ರಿಕೆ ಕನ್ನಡದ 'ಮಾಡರ್ನ್ ರಿವ್ಯೂ' ಎನಿಸಿಕೊಂಡ ಕಾಲವದು. ಹಾಗದನ್ನು ಹೆಸರಿಸಲು ಕಾರಣರಾದ ಕೆಲವೇ ಲೇಖಕರಲ್ಲಿ ಇಂದಿನ ಸಮ್ಮೇಳನಾಧ್ಯಕ್ಷರೂ ಒಬ್ಬರು; ಪ್ರಮುಖರಾದ ಒಬ್ಬರು. ಮುಂದೆ ಜಯಕರ್ನಾಟಕ ಗ್ರಂಥಮಾಲೆಯನ್ನು ಪ್ರಾರಂಭಿಸಿದವರೂ ಇಂದಿನ ಈ ಇಬ್ಬರು ಮಹನೀಯರೇ. ಆ ಮಾಲೆಯ ಮೊದಲ ಕುಡಿಯಾಗಿ ಬೆಳಗಿದ 'ಮಂಗನ ಮೆರವಣಿಗೆ' ಎಂಬ ಇವರ ಕತೆ, ತನ್ನ ವಸ್ತು ವಿಶೇಷದಿಂದ, ಸರಿಗೆಯ ಶೈಲಿಯಿಂದ ಕಥೆಯೂ ಆಯಿತು; ಲಲಿತ ಪ್ರಬಂಧವೂ ಆಯಿತು. ಇವರ ಗುಬ್ಬಿಗಳ ಸಂಸಾರ, ಜೀವನ ಮುಂತಾದ ಕಥೆಗಳು ಕನ್ನಡ ಸಣ್ಣಕತೆಯ ಸ್ವರ್ಣರೇಖೆಗಳಾಗಿ ಇಂದಿಗೂ ಥಳಥಳಿಸುತ್ತಿವೆ.

ಇವರು ಮುಂದೆ ಕಥೆಗಳನ್ನು ಅಷ್ಟಾಗಿ ಬರೆಯಲಿಲ್ಲ. ಆದರೆ ಕನ್ನಡ ಕಥಾವಾಚನಕ್ಕೆ ಒಂದು ಮಹದುಪಕಾರವನ್ನು ಮಾಡಿದರು. 'ಭಾರತೀ' ಎಂಬ ಭಾರತೀಯ ಭಾಷೆಗಳ ಕಥಾಸಂಗಮವನ್ನು (ಡಾಯಜೆಸ್ಟ್) ಇವರು ತುಂಬ ವಿಚಕ್ಷಣತೆಯಿಂದ ವೈವಿಧ್ಯಪೂರ್ಣವಾಗಿ, ವ್ಯಾಪಕವಾಗಿ ನಡೆಸಿಕೊಂಡು ಬಂದರು. ಕನ್ನಡ ವಾಚಕರಿಗೆ ಅದೊಂದು ಕಸ್ತೂರಿಯಾಗಿತ್ತು. ವಿವಿಧಭಾಷೆಯ ಕಥಾಪ್ರಪಂಚದ

ಜ್ಞಾನವನ್ನು ನೀಡಿದ ಆ ಪತ್ರಿಕೆ ಈ ಮಧ್ಯೆ ನಿಂತಿದೆ. ಮತ್ತೆ ಹೊರ ಡಿಸುವ ಸನ್ನಾಹವೂ ಇದೆಯೆಂದು ಕೇಳುತ್ತೇವೆ. ನಮ್ಮ ದೃಷ್ಟಿ ವೈಶಾಲ್ಯಕ್ಕೆ ಅಂಥ ಯತ್ನಗಳು ಎಂದಿಗೂ ಬೇಕಾದ-ಥವು.

ಇಂಥ ಒಂದು ವೃಷ್ಟಿಯನ್ನು ನೀಡಿದ ಈ ಮಹನೀಯರು ಇಂಥ ಸಮ್ಮೇಳನಕ್ಕೆ ಸರ್ವಥಾ ಯೋಗ್ಯರಾದ ಅಧ್ಯಕ್ಷರಲ್ಲವೇ?

ಶ್ರೀಯುತರು ನಾಟಕಗಳನ್ನು ಬರೆದಿದ್ದಾರೆ. ಇವರ 'ಏಂಚಿನ ಹುಡಿ' ಸಂಗ್ರಹದಲ್ಲಿಯ ನಾಟಕಗಳನ್ನು ಪ್ರಯೋಗಿಸದ ಶಾಲೆಗಳೇ ಈ ಭಾಗದಲ್ಲಿಲ್ಲವೆಂದರೆ ಅತಿಶಯೋಕ್ತಿಯೇನಲ್ಲ.

ಈ ರಚನೆಯ ಬಗೆಗೆ ಇವರಿಗೆ ಕನ್ನಡನಾಡಿನ ಬಗ್ಗೆ ಅತ್ಯಂತ ಕಳಕಳಿ ಇದೆ. ನಾಡಿನಿಂದ ನಾಡಿನ ನಿಲ್ಲಬೇಕಾಗಿ ಬಂದ ಇವರ ಬಾಳು ಸದಾ ತಾಯ್ನಾಡಿನ ಮೇಲ್ಮೈಗಾಗಿ ಪರಿತಪಿಸುತ್ತಿದೆ. ಕರ್ನಾಟಕ ಬಂದರವ ಸಮಿತಿಯಲ್ಲಿದ್ದು ಇವರು ಕಾರವಾರದ ಬಗ್ಗೆ ಯಥಾರ್ಥವಾದ ಪುಸ್ತಕ ಬರೆದರು. ಸರ್ವ ನಾಡಿನ ಭೌಗೋಲಿಕ ಜ್ಞಾನ ಇವರಿಗಿರುವಷ್ಟು ವಿಶದವಾಗಿ ಇನ್ನಾರಿಗಿದೆಯೋ ನಮಗೆ ತಿಳಿಯದು. ಏಕೀಕರಣದ ಬಗ್ಗೆ ಸಮಿತಿಗಳೆದುರು ಸಾಕ್ಷಿ ನುಡಿಯುವಾಗ ಶ್ರೀ. ಕುಮಾರರ ನಕಾಶೆಯ ಪುಟಗಳಿ ಮಾಡಿದ ಪ್ರಭಾವ ತಿಳ್ಳಷ್ಟಲ್ಲ. ನಾಡಿನ ಒಂದಿಂಚು ನೆಲವೂ ಪರರಾಷ್ಟ್ರಾಂತರ ಕೈಸೇರಕೂಡದೆಂದು ಇವರು ಕೂಡಿಸಿದ ವಿಷಯಸಂಗ್ರಹ ಇಂದಿ ಡಾಕ್ಯುಮೆಂಟ್ ಪದವಿಗೆ ಸಾಕಷ್ಟಿದೆ.

ಅಯಿತು, ನಾಡು ಒಂದಾಯಿತು. ನಮ್ಮ ಭೂಪಟದ ಪ್ರತಿಗೆ ಬೇರೆ ಪ್ರಾಂತದ ಬಣ್ಣ ಬಿದ್ದಿದೆ. ಅದರೂ ನಾವು ಒಂದಾಯಿತು. ಈ ನಾಡಿನ ಕನಸನ್ನು ಕಂಡವರು, ತೋರಿದವರು ಕರ್ನಾಟಕದ ಕವಿ ಪುರೋಹಿತರಾದ ಶ್ರೀ. ಆಲೂರ ವೆಂಕಟರಾಯರು. ನಾಡಿನ ಉದಯದ ಪ್ರಭಾತಾರಂಭ ಬೆಂಗಳೂರಿನಲ್ಲಿ ನಿನದಿಸುತ್ತಿದ್ದಾಗ, ಈ ಪುಣ್ಯ ಯನ್ನು ಆ ವಿದ್ಯಾರಣ್ಯಾಚಿಸಿಯ ಕತ್ತೋಳೂವಿನಲ್ಲಿ—ಪಂಪೆಯ ಕರೆಮ ಗೌರವಿಸಿದ ಶ್ರೀಯುತರ ಕನ್ನಡದ ಕರ್ನಾಟಕದ ಅಭಿವಾಸ್ಯ ಅನುತಾಪ ಇಂದಿನ ನೀಳಿಗೆಗೆ ಚೀತೋಹಾರಿಯಲ್ಲವೇ?

ಶ್ರೀಯುತರು ಶಾಂತಿನಿಕೇತನದ ವಿದ್ಯಾರ್ಥಿಗಳು. ಮುಂಬಯಿ ವಿಶ್ವವಿದ್ಯಾಲಯದ ಪದವೀಧರರು. ಬಡೋದೆ, ಜಳಗಾವಿಗಳಲ್ಲಿ ಹೈಸ್ಕೂಲುಗಳನ್ನು ತೆರೆದು ನಡೆಸಿದವರು. ಸದ್ಯಕ್ಕೆ ಮುಂಬಯಿಯಲ್ಲಿ ವಾಟುಕ ಕೈಗಾರಿಕಾ ಪ್ರೌಢಶಾಲೆಯ ವ್ಯವಸ್ಥಾಪಕರಾಗಿದ್ದಾರೆ.

ಇಂಥ ಗುಣ ವಿಶೇಷಗಳಿಂದ ಕೂಡಿದ ಈ ಮಹನೀಯರನ್ನು ಇಂದು ಕನ್ನಡ ಕಥಾಪರಮ್ಪರೆಯು ಪೂಜೆಗೆ ಪ್ರಥಮ ಪೂಜಾರಿಯೆಂದು ಅರಿಸಿದ ನಮ್ಮ ಆಯ್ಕೆಯನ್ನು ನೀವೆಲ್ಲ ಒಪ್ಪುವಿರೆಂದು ಆಶಿಸುತ್ತೇನೆ.

(ಶ್ರೀ. ದ ಬಾ. ಕುಲಕರ್ಣಿಯವರ ಈ ಸೂಚನೆಗೆ ಅನುಮತಿ ಕೊಡುತ್ತ ಶ್ರೀ. ಕೆ. ಗೋಪಾಲಕೃಷ್ಣರಾಯರು ಹಿಂದಿನ ನಾಲ್ಕು ಸಮ್ಮೇಳನಗಳ ಇತಿಹಾಸವನ್ನು ವಿವರಿಸಿದರು.)

ಸಮ್ಮೇಳನಾಧ್ಯಕ್ಷರ ಮೊದಲಮಾತು

(ಶ್ರೀಮಾನ್ ಕಲ್ಲೂರ ಕೃಷ್ಣಕುಮಾರರು ಪ್ರಾರಂಭದಲ್ಲಿ ಮಾಡಿದ ಭಾಷಣಾಂಶವಿದು.)

ಮಾನ್ಯರಾದ ಶ್ರೀ. ಕಲ್ಲನಗೌಡರೇ, ಕವಿಭೂಷಣರೇ,

ಹಿರಿ-ಕಿರಿಯ ಗೆಳೆಯ-ಸಾಹಿತಿಗಳೇ,

ಕನ್ನಡ ಸಂಜೆ ಕತೆಗಾರ ಪಾಗು ಲಲಿತಪ್ರಬಂಧಕಾರರ ಈ ಏದನೆಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ದು 'ಇತಿಹಾಸ'ವನ್ನುಂಟುಮಾಡಿದ ನಿಮ್ಮೆಲ್ಲರಿಗೂ ಕ.ವಿ.ವ. ಸಂಘಕ್ಕೂ ಮೊತ್ತಮೊದಲು ಅಭಾರಪೂರ್ವಕವಾಗಿ ವಂದಿಸುತ್ತೇನೆ.

ನನ್ನ ಹುಟ್ಟೂರು, ಬೆಳೆದೂರು ಅಗಿ ಪಾಗು ನನ್ನ ಹಲವು ಕತೆಗಳಿಗೂ ಹಿನ್ನೆಲೆಯಾದ ಈ ಧಾರವಾಡ ನಗರದಲ್ಲಿಯೆ, ಕತೆಗಾರರ ಸಮ್ಮೇಳನಕ್ಕೆ ನಾನು ಅಧ್ಯಕ್ಷನಾಗಬೇಕಾಗಿರುವಲ್ಲಿಯೂ ಒಂದು ಇತಿಹಾಸದ ಅಂಶ ಇಲ್ಲದಿಲ್ಲ. ಅದಕ್ಕೂ ಹೆಚ್ಚಾದ ಮಾತೆಂದರೆ, ನನ್ನಂತಹ ಅಪ್ರಸಿದ್ಧ ಕತೆಗಾರನನ್ನು ಇಂತಹ ಸಮ್ಮೇಳನಕ್ಕೆ ಅಧ್ಯಕ್ಷನನ್ನಾಗಿಸಿದ್ದು ಯಾವುದೊಂದು ಕ್ಷೇತ್ರದಲ್ಲಿ ನನ್ನನ್ನು ಅಪ್ರಸಿದ್ಧನಾಗಿಯೂ ವ್ಯಕ್ತಿ ಇಂತಹ ಉಚ್ಚ ಪದವಿಗೇರುವುದು ಅಸಂಭಾವ್ಯನೇ ಸರಿ. ಇನ್ನು ಮುಂದೆ ಸಮ್ಮೇಳನಗಳ ಅಧ್ಯಕ್ಷರುಗಳಿಗೆ ಪ್ರಸಿದ್ಧಿ ಎಂಬುದು ಅನ್ವೇನು ಅವಶ್ಯಕ ವಸ್ತುವಲ್ಲ ಎಂಬುದನ್ನು ತಾವೆಲ್ಲಾ ಪ್ರಸ್ಥಾಪಿಸಿ, ಇವರಿಂದ ನನ್ನಂತಹ ಮಿಕ್ಕ ಅಪ್ರಸಿದ್ಧ ಸಾಹಿತಿಗಳಿಗೆಲ್ಲಾ ಆಸೆ ಹುಟ್ಟಿಸಿದ್ದೀರಿ. ಅಧ್ಯಕ್ಷಸ್ಥಾನಕ್ಕೆ ಮಬ್ಬು ಬೇಕಾದ ವ್ಯಕ್ತಿಯು ಯಾವಾವ ಪೂರ್ವಪೀಠಿಕೆಗಳನ್ನು ಹಾಕಿಕೊಳ್ಳುತ್ತಾನೋ, ಯಾವಾವ ಪೂರ್ವತಯಾರಿಗಳನ್ನು ಮಾಡಿಕೊಳ್ಳುತ್ತಾನೋ, ಎಂಬುದು ನನಗೆ ತಿಳಿಯದ ಮಾತಾಗಿತ್ತು. ಕನಸು-ಮನಸಿನಲ್ಲೂ ಇಲ್ಲದೆ, 'ಕರಿಯ ಕೈಗೆ ಕೆಂಪಟ್ಟ ಕುಸುಮವೋ' ಎಂಬಂತಾಗಿ ಕೊರಳಿಗೆ ಬಿದ್ದಂತೆ ಈ ಅಧ್ಯಕ್ಷಸ್ಥಾನ ನನಗೆ ಹೊರಕಿದುದರಿಂದ—ಅಧ್ಯಕ್ಷಪದವಿಗೆ ಪೂರ್ವತಯಾರಿಗಳು ಎಷ್ಟೂ ಬೇಕಾಗುವುದಿಲ್ಲ ಎಂದು ನನಗೀಗ ಪ್ರತೀತಿಯಾಗಿದೆ.

× × ×

ಕತೆಗಾರಿಕೆಯು ಕವಿಯಲ್ಲಿ ನನ್ನ ಮನ ಸೆಳೆನುಬು—ಮನೆಯ ವಿಶ್ಲೇಷಣದ ವಿಶಿಷ್ಟ ರೀತಿ ಪಾಗು ಪ್ರಾಣಿಗಳಲ್ಲೂ ಒಂದು ಮಾನ

ವೀಯತೆಯ ಅಂಶವನ್ನು ಕಂಡುಕೊಳ್ಳುವ ಬಗೆ. ನಾನು ಕತೆಗಳನ್ನು ಬರೆಯುತ್ತಿದ್ದ ಆ ಹಳೆಯ ಕಾಲವಲ್ಲಿ, ಇನ್ನೆಂದೂ ಅಂಶಗಳಿಗೆ ಬೇರೆ. ಯವರು ವಿಶೇಷ ಗಮನ ಕೊಟ್ಟರಲ್ಲಿಲ್ಲವೆಂತ 'ವಿಶುಡೊಣಪಿ-ಮೈನೂಯಾತೆ' ಅಡುವು ಆ ಕತೆಗಳು ಇಂಚೆಗೆ ಕನ್ನಡದಲ್ಲಿ ಕಥನ ಕಲೆ ಎಷ್ಟಮಟ್ಟಿಗೆ ಬೆಳೆದುಬಂದಿದೆ ಎಂಬುದನ್ನು ನಾನು ಅಳವಾಗಿ ಅಭ್ಯಸಿಸಿದವನಲ್ಲ. ಕಾರಣ ನಾನು ತಾರತಮ್ಯಗಳನ್ನು ಅಷ್ಟಾಗಿ ಹೇಳಲಾರೆ. ಅದರೆ 'ಭಾರತಿ'ಯನ್ನು ನಡೆಯಿಸುತ್ತಿರುವಾಗ ಅನೇಕ ಭಾಷೆಗಳ ಕತೆಗಳೊಂದಿಗೆ ಕನ್ನಡಕತೆಗಳನ್ನು ತೂಗಬೇಕಾಗಿ ಬಂದಾಗ, ಕನ್ನಡಕತೆಗಳಲ್ಲಿ ದೃಷ್ಟಿವೈಶಾಲ್ಯದ ಕೊರತೆಯಿದೆಯೆಂದು ಕಂಡುಬಂದುದುಂಟು. ಆ ವಿಷಯವನ್ನು ಮುಂದೆ ಎತ್ತಿಹೇಳುತ್ತೇನೆ.

ಸಂಣಕತೆಗಳ ಕ್ಷೇತ್ರಕ್ಕೆನಾನು ಮತ್ತೆ ಹಿಂದಿರುಗುವ ಸಂಧವ. ವಿದೆ. ಇದೀಗ ಕರ್ನಾಟಕರಾಜ್ಯ ಸ್ಥಾಪಿತವಾದುದರಿಂದ, ಇವರಿಗಿನ್ನೆ ಕರ್ನಾಟಕದ ಆರ್ಥಿಕಅಭ್ಯಸನಸನ ರಭಸ ಇನ್ನು ಮುಂದೆ ಉಳಿಯು-ಲಾರದು. ಆ ದಿಸೆಯಲ್ಲಿ ಒಂದೇ ಒಂದು ಪುಸ್ತಕ ತಯಾರಿಕೆಯಲ್ಲಿ ಇರುವುದರಿಂದ ಅದು ಮುಗಿದ ನಂತರ— ಮತ್ತೆ ಆ ದಿಶೆಯಲ್ಲಿ ನನಗೆ ಕೆಲಸವಿಲ್ಲ. ಕಾರಣ ನಾನು ಕತೆಗಾರಿಕೆಗೇ ಬೇಗನೇ ಮರಳುವ ಆಶೆಯಿದೆ. ಇಂದು ಇಲ್ಲಿ ದೊರೆತಿರುವ ಈ ಸ್ಥಾನ ಮರಳುವಿಕೆಯ ಮುಂಗುರುತೇ ಆಗಬಹುದು. ಅಲ್ಲದೆ, ನಮ್ಮ ಈ ರಾಜ್ಯಕ್ಕೆ ಮೈಸೂರೆಂಬ ವೈಲಿಗೆ ಜೆಸರು ಹೋಗಿ ಕರ್ನಾಟಕವೆಂದೇ ಜೆಸರಾಗ. ದಿದ್ದರೆ, ನಾನು ಈ ರಾಜ್ಯಕ್ಕೆ ಸಂಬಂಧಿಸಿದ ಯಾವ ಕೆಲಸವನ್ನೂ ಮಾಡುವದಿಲ್ಲವೆಂದು ಪಣತೊಟ್ಟಿದ್ದೇನೆ. ಆ ಪಣ ಪೂರೈಸದಿದ್ದ-ರಂತೂ, ಕತೆಗಾರಿಕೆಯೇ ಕೊನೆಯ ಶರಣು. ಏಕೆಂದರೆ, ಯಾವ ಕಲ್ಪನೆಯನ್ನು ಈ ದ್ವಾರವಾಡವೂ, ಗೆಳೆಯರ ಗುಂಪೂ ನನ್ನಲ್ಲಿ ಬಿತ್ತಿರುವುವೋ, ಆ ಶಕ್ತಿ ಸುಮ್ಮನೆ ಕುಳ್ಳಿರುವುದು ಶಕ್ಯವಿಲ್ಲ. ನಾನು ಸಾಹಿತ್ಯಕ್ಕೆ ಶರಣಾ ಹೊಡೆದಾಗ—Life begins at forty—ಎಂದುಕೊಂಡಿದ್ದೆ. ಆ ದೃಷ್ಟಿಯಿಂದಲೂ, ನಾನು ಸಾಹಿ-ತ್ಯಕ್ಕೆ ಎರಳಲು ಇನ್ನಾಗಲೇ ಸಾಕಷ್ಟು ವಿಲಂಬವಾಗಿದೆಯೆನ್ನ. ಬಹುದು. ಈ ನಂತರವೂ ಆಯುಷ್ಯ ಸಾಕಷ್ಟಿದ್ದರೆ, ಇದ್ದಷ್ಟೆಲ್ಲಾ ಸಾಹಿತ್ಯಕ್ಕೆ —ಎಂದರೆ ಅರ್ಥಾತ್ ಸಂಣಕತೆಗೆ ಮೀಸಲಾದೀತೆಂದು ಹಾರೈಸಿ ಈ ಪ್ರಕರಣವನ್ನು ಇಲ್ಲಿಗೆ ಮುಗಿಸುತ್ತೇನೆ.

× × ×

ಸಾಹಿತ್ಯದಲ್ಲಿ ಸಮನ್ವಯತೆ

ಸಂಣಕತೆ ಸಾಹಿತ್ಯದ ಒಂದು ಅವಿಭಾಜ್ಯವಾದ ಅಂಗವಾದು-ದರಿಂದ, ಕತೆಗಾರರ ಸಮ್ಮೇಲನ ಸಾಹಿತ್ಯಸಮ್ಮೇಲನದಿಂದ ವಿಲಗಡಿಸ-ಲ್ಪಡುವುದು ತರವಲ್ಲ. ಸಾಹಿತಿಗಳಲ್ಲಿ ಕತೆಗಾರರದೇ ಒಂದು ಜಾತಿ ಎಂಬಂತೇನಿಲ್ಲ. ಆ ತರದ ಭಾವನೆಯನ್ನೂ ನಾವು ಇತರರಿಗೆ ಉಂಟು ಮಾಡಿಕೊಡಬಾರದು. ಕೇವಲ ಅನುಷಂಗಿಕ ಅಥವಾ ಆರ್ಥಿಕ ಕಾರಣಗಳಿಂದಾಗಿ ಈ ಸಮ್ಮೇಲನ ಪ್ರತ್ಯೇಕಿಸಲ್ಪಟ್ಟಿದ್ದರೆ, ಏಮಾತ್ರ ಬೇರೆ. ಕತೆಗಾರರಲ್ಲದ ಸಾಹಿತಿಗಳು ಇದರ ಬಗೆಗೆ ತಪ್ಪುತಿಳಿವಳಿಕೆ ಮಾಡಿಕೊಳ್ಳದಿರಲಿ. ಸಾಹಿತ್ಯದಲ್ಲಿ ಎಲ್ಲಕ್ಕೂ ಹೆಚ್ಚು ಅವಶ್ಯ ವಾದುದು ಸಮೀಕರಣ ಅಥವ ಸಮನ್ವಯದ ತತ್ತ್ವ. ಜೀವನಕ್ಕೂ ಅವಶ್ಯಕವಾದುದು ಅದೇ! ಆ ತತ್ತ್ವವನ್ನು ಸಾಹಿತಿಗಳು ಮೊದಲು ತಮ್ಮ ಸಾಹಿತ್ಯಸಿದ್ಧಿಯಲ್ಲೇ ಕಾಣುಕೊಳ್ಳಬೇಕು. ಕಾರಣ ಇಲ್ಲಿ ಕೂಡಿರುವ ಸಂಣಕತೆಗಾರರೂ, ಲಲಿತಪ್ರಬಂಧಕಾರರೂ, ತಾವು ಅವರವರ ಕಾರ್ಯವಾಗಿ ಪ್ರತ್ಯೇಕವಾಗಿ ಕೂಡಿದ್ದರೂ, ಸಾಹಿತ್ಯಸಮೀಕರ-ಣದ ದೃಷ್ಟಿಯಿಂದಲೇ ಕೂಡಿದವರು ಎಂದು ಮನದಟ್ಟುಗಿಸಿಕೊಂಡ-ರಾಯ್ತು ಸಾಹಿತ್ಯಸಮ್ಮೇಲನದಲ್ಲಿಯೂ, ಒಂದು ಸಂಣಕತೆಗಳ ಗೋಷ್ಠಿಯನ್ನು ನಡೆಸಿದರೆ ಅದು ಕೇವಲ ತಾಂತ್ರಿಕವಾಗಿ ಸಂದಿ-ಯಲ್ಲಿಯ ಏನಾಗಾಧನೆಯಾಂತಾಗುವುದೂ ನಿಜ. ನಮ್ಮಲ್ಲಿಯು ಅನೇಕ ಸಾಹಿತಿಗಳು, ಇತ್ತ ಕತೆಗಾರರೂ, ಇತ್ತ ಕವಿಗಳೂ, ಮಗು-ದತ್ತ ನಾಟಕಕಾರರೂ ಇರಬಹುದಾದುದರಿಂದ, ಸಾಹಿತ್ಯಕ್ಕೆ ಅವಶ್ಯಕ. ವಾದ ಆ ಸಮೀಕರಣಕಾರ್ಯ ಬಹುಮಟ್ಟಿಗೆ ಸಾಧಿಸುತ್ತದೆ ಎನ್ನ-ಬಹುದು. ಇದನ್ನೆಲ್ಲ ಬಗೆದು ಸಾಹಿತಿಗಳು ರಾಜಕಾರಣಿಗಳಂತೆ ಬಣಗಳನ್ನೂ ಸಂಗಡಗಳನ್ನೂ ಉಂಟುಮಾಡಿಕೊಳ್ಳದಿದ್ದರಾಯಿತು. ಹೀಗೆಂದಾಕ್ಷಣಕ್ಕೆ ಸಂಣಕತೆಗಾರರು ಪ್ರತ್ಯೇಕವಾಗಿ ಸಮ್ಮೇಲನ ನಡೆಯಿಸಲೇಕು ಎಂತಲೂ ಅಲ್ಲ. ಪ್ರತ್ಯೇಕ ಸಮ್ಮೇಲನದ ಅವಶ್ಯಕತೆಯ ಬಂಟ್ಟಾಗುವಷ್ಟು ಸ್ಪಷ್ಟಗಲ್ಪಸ್ಥಿತಿಗೆ ನಮ್ಮ ಸಂಣಕತೆ ಇನ್ನೂ ಬಂದು ಮುಟ್ಟಿಲ್ಲ. ಸಂಣಕತೆಗಾರರ ಸಮಸ್ಯೆಗಳೂ ಪ್ರಮೇಯಗಳೂ ವಿಶೇಷವಾಗಿ ಸಾಹಿತ್ಯಸಮಸ್ಯೆ—ಪ್ರಮೇಯಗಳಂತೇ ಇವೆ. ಎಂದ ಮೇಲೆ ನಾವು ವಿಶೇಷ ವಿಶೇಷಗಳನ್ನೂ ಪ್ರತ್ಯೇ-ಕಗಳನ್ನೂ ಚರ್ಚಿಸಲು ವಿವೇಚಿಸಲು ಇಲ್ಲಿ ಸೇರಿದ್ದೇನೆ ಎಂದರೆ ಇತ್ಯರ್ಥವೂ ಆಗಬೇಕು. ಲಲಿತಪ್ರಬಂಧಕಾರರ ಸಮಸ್ಯೆಗಳು ಸಹ ಸಾಕಷ್ಟುಬೆಳೆದು ನಂತಿವೆ ಎನ್ನಲೂ ಬಾರದು. ಅಥವಾ ಲಲಿತಪ್ರಬಂಧ ಕನ್ನಡದಲ್ಲಿ ಸಾಕಷ್ಟು ಬೆಳೆದಿಲ್ಲವಲ್ಲ ಎಂಬುದೇ ಸಮಸ್ಯೆ ಎಂದರೂ ಎನ್ನಬಹುದು. ಅದರೆ ಇದು ಯಾರ ಸಮಸ್ಯೆ? ಲಲಿತಪ್ರಬಂಧ-ಕಾರರದೋ? ಓದುಗರದೋ? ಕಣಕೊಟ್ಟು ಓದುವವರ ಸಂಖ್ಯೆ ಹೆಚ್ಚುವವರೆಗೆ—ಓದುಗರ ಸಮಸ್ಯೆಗೇ ಉಂಟಾಗುವುದಿಲ್ಲ. ಕಾರಣ ಇದೂ ಒಂದು ಬರೆಹಗಾರರ ಸಮಸ್ಯೆಯೇ ಸರಿ. ಇದೂ ಸಾಹಿತ್ಯ-ಕ್ಕೆಲ್ಲಾ ಸಾಮಾನ್ಯವಾದ ಸಮಸ್ಯೆಯೇ! ಕಾರಣ ಇದನ್ನೂ ಸಾಮಾನ್ಯ ವಾದ ರೀತಿಯಲ್ಲೇ ಬಿಡಿಸಬೇಕು. ಇನ್ನು ಲಲಿತಪ್ರಬಂಧಕಾರರು ತಮ್ಮ ಕಲೆಯನ್ನು ಕಲೆಯೆಂದೇ ಬೆಳೆಯಿಸುವುದಾದರೆ, ನಮ್ಮ ಪತ್ರಿಕೆಗಳು ಅಂತವರಿಗೆ ಹೆಂಬಾ ಅವಕಾಶವನ್ನುಂಟು ಮಾಡಬಲ್ಲವು ಎಂತ ಕಾಣುತ್ತದೆ.

ಸಂಣಕತೆಯ ಸಮಸ್ಯೆಗಳು—

ಸಂಣಕತೆ ಒಂದು ಹೆಜ್ಜೆ ಮುಂದುವರಿದಂತಿದೆ. ನಮ್ಮ ಸಾಹಿತ್ಯದಲ್ಲಿ ಅದಕ್ಕೊಂದು ಸ್ಥಿರೀಕೃತ ಸ್ಥಾನವುಂಟಾಗಿದೆ. ಸಂಣ ಕತೆಗಳಿಗೆ ಮೀಸಲಿದ ಒಂದು ನಾಚಿಕವರ್ಗವೂ ಉಂಟಾಗಿದೆ; ಬೆಳೆ-ಯುತ್ತಿದೆ. ಅವರೆ, ಒಟ್ಟಾರೆ ನಮ್ಮ ಸಾಹಿತ್ಯಕ್ಕೇ ಒಂದು ಆರ್ಥಿಕ

ಸ್ವಾಸ್ಥ್ಯವುಂಟಾಗದ್ದರಿಂದ ಅಂತಹ ಸ್ವಾಸ್ಥ್ಯ ಸಂಜಾತೆಗಳಿಗೂ ಲಲಿತಪ್ರಬಂಧಕ್ಕೂ ಉಂಟಾಗಿಲ್ಲವೆಂಬುದು ಸ್ವಾಭಾವಿಕವೇ!

ಕನ್ನಡದಲ್ಲಿ, ಸಂಜಾತೆ ಒಂದು ದೊಡ್ಡಿಸ್ತಿತಿಯನ್ನು ಪಡೆದಿದೆಯೇ? ಹಾಗಿಲ್ಲವಾದರ ಅದಕ್ಕೇನು ಉಪಾಯ? ಎಂಬುದೂ—ಒಂದು ಪ್ರಶ್ನೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಾರ್ವತ್ರಿಕವಾಗಿ ಮೊದಿ ಸ್ತಿತಿಯನ್ನು ಪಡೆದುವು, ಕವನ, ಆ ನಂತರ ಸಂಜಾತೆ, ಆ ನಂತರ ಕಾದಂಬರಿ, ಆ ನಂತರ ನಾಟಕ. ಮಿಕ್ಕ ಸಾಹಿತ್ಯರೂಪಗಳಲ್ಲಿ ಕನ್ನಡಿಗರು ಮಾಡಬೇಕಾದ ಪ್ರಗತಿಯನ್ನು ಇನ್ನೂ ಮಾಡಿಲ್ಲ. ಇಷ್ಟೇ ಅಲ್ಲ; ಕೇವಲ ಸಾಹಿತ್ಯಕ್ಕೆ ಕಟ್ಟುಬಿದ್ದ ನಾವು ವಾಙ್ಮಯದ ವಿಶಾಲ ಕ್ಷೇತ್ರವನ್ನು ಮರೆತೇ ಬಿಟ್ಟಿದ್ದೇವೆ. ತತ್ತ್ವಜ್ಞಾನ, ಚರಿತ್ರೆ, ರಾಜಕಾರಣ, ಅರ್ಥಶಾಸ್ತ್ರ, ಕಲೆಗಳು, ವಿಜ್ಞಾನ, ಯಂತ್ರಶಾಸ್ತ್ರ ಮುಂತಾದ ಅನೇಕ ವಾಙ್ಮಯ ಕ್ಷೇತ್ರಗಳಲ್ಲಿ ಮರಾಠಿ ತೆಲುಗು ತಮಿಳರಿಗಿಂತ ನಾವು ಹಿಂದುಳಿದಿದ್ದೇವೆ. ನಾವು ಕೇವಲ ಸಾಹಿತ್ಯದ ಕ್ಲುಪ್ತ ಕ್ಷೇತ್ರಕ್ಕೇ ಕಟ್ಟುಬಿದ್ದಿರುವುದೂ ತಪ್ಪು. ಸಾಹಿತಿಗಳು ಎಂದು ನಮ್ಮನ್ನೇ ನಾವು ಪ್ರತ್ಯೇಕಿಸಿಕೊಳ್ಳುವುದೂ ತಪ್ಪು. ನಾಡಿನ ಸರ್ವಾಂಗೀಣತೆಗಾಗಿ ನಾವು ನವ್ಯೊಡನೆ ರಾಜಕಾರಣಿಗಳನ್ನೂ, ಅರ್ಥಶಾಸ್ತ್ರಜ್ಞರನ್ನೂ, ತತ್ತ್ವಜ್ಞಾನಿಗಳನ್ನೂ ಒಟ್ಟಾರೆ ಎಲ್ಲ ಬರೆಹಗಾರರನ್ನೂ ಜತೆಗೆ ಸೇರಿಸಿಕೊಳ್ಳಬೇಕು. ನಾವು ಸಂಜಾತೆಗಾರರು' ಕಾದಂಬರಿಕಾರರು ಅಥವ ಸಾಹಿತಿಗಳು ಎಂದೆನಿಸಿಕೊಳ್ಳುವುದಕ್ಕಿಂತ ನಾವೆಲ್ಲರೂ ಬರೆಹಗಾರರು ಎಂಬ ವಿಶಾಲ ಛತ್ರವೊಂದನ್ನು ಕಲ್ಪಿಸುವುದು ಇದರರ್ಥ, ಸಾಹಿತಿಗಳು ಕೇವಲ ಸಾಹಿತ್ಯಕ್ಕೇ ಸ್ತಿಮಿತಗಾದೆ, ವಾಙ್ಮಯದ ವಿಶಾಲ ಕ್ಷೇತ್ರವನ್ನೆಲ್ಲಾ ವ್ಯಾಪಿಸಬೇಕು ಎಂದ ಅರ್ಥ. ವಾಙ್ಮಯಸೃಷ್ಟಿಗೂ ಸಾಹಿತಿಯ ಕಲ್ಪಕತೆ ಹಾಗು ಶಕ್ತಿ ಅಗತ್ಯ. ಅವೆರಡರ ಅಂಶವಿಲ್ಲದ ಬರೆಹ ನಿರ್ಜೀವ ಹೊಟ್ಟನಂತೇ ಸರಿ. ಈ ದೃಷ್ಟಿಯಿಂದ ಸಾಹಿತಿಯು ತನ್ನ ಕ್ಷೇತ್ರವನ್ನು ವಿಸ್ತರಿಸಿ ವಾಙ್ಮಯದ ಮೂಲೆಮೂಲೆಗಳನ್ನೂ ವ್ಯಾಪಿಸಿಕೊಳ್ಳಬೇಕು. ನಿರ್ದುಷ್ಟವಾದ, ಶುದ್ಧವಾದ, ಬಾಳಬಲ್ಲ ಬರೆಹ ಸಾಹಿತಿಯಿಂದಲೇ ಉದಯಿಸಬಲ್ಲುದುದೆ ಅನ್ಯರಿಂದಲ್ಲ. ಸಾಹಿತಿಗೆ ದೃಷ್ಟಿಯೇ ಜೀವಾಳ. ದೃಷ್ಟಿಯಿಲ್ಲದ ಬರೆಹ ಬಾಳುವಂತಹದಲ್ಲ.

ವಾಙ್ಮಯದ ವ್ಯಾಪಕತೆ

ಸಾಹಿತ್ಯ—ವಾಙ್ಮಯಗಳ ಕ್ಷಿತಿಜಗಳು ಒಂದುಗೂಡಿದರೆ—ಈ ಕ್ಷೇತ್ರಗಳೆಲ್ಲಾ ಒಂದು ಯೋಜನೆ ಅವಶ್ಯ. ಇದೀಗ ಜೀವನದ ಪ್ರತಿ ಅಂಶವನ್ನೂ ಪಂಚವಾರ್ಷಿಕ ಯೋಜನೆಗಳು ಆವರಿಸುತ್ತಿವೆ. ಸಾಹಿತ್ಯ-ವಾಙ್ಮಯಗಳಿಗೂ ಒಂದೊಂದು ಅಂತಹ ಯೋಜನೆಯೇಕೆ ಬೇಡ! ನಮ್ಮ ಯೋಜಕರು ಸಾಕ್ಷರತೆಯ ಅಂಜನವರೆಗೂ ಬಂದವರು, ಸಾಹಿತ್ಯದ ಮೆಟ್ಟಿಲೇರುವುದಿಲ್ಲ! ಸಾಹಿತ್ಯಕ್ಕೂ ಒಂದು ಆರ್ಥಿಕ ಸ್ವಾಸ್ಥ್ಯ ಅವಶ್ಯ ಎಂದು ಅವರಿಗೆನ್ನಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ, ಸಾಹಿತಿಗಳೆಂಬವರು ಒಂದು ಮಡಿಯ ಜಾತಿಯವರಾಗಿ ಪ್ರತ್ಯೇಕವಾಗಿ ತ್ಯಳಿದಿರುವುದೇ! ನಮ್ಮ ಯೋಜಕರಲ್ಲಿ, ರಾಜಕಾರಣಿಗಳಲ್ಲಿ, ಅರ್ಥಶಾಸ್ತ್ರಜ್ಞರಲ್ಲಿ—ಇಂಥ ಅನೇಕರಲ್ಲಿ ಸಾಹಿತ್ಯದ ಗಂಧವೇ ಇರುವುದಿಲ್ಲ. ಅಂತಹರು ಅಧಿಕಾರಸ್ಥಾನಗಳಲ್ಲಿ ಬಂದು ಸಾಹಿತಿಗಳನ್ನು ಕೀಳ್ಗಣಿಸುವುದುಂಟು. ಸಾಹಿತಿಗಳು ಬಡಪಾಯಿಗಳಾಗಿ ಬೆಲ್ಲು ಕಿರಿಯುವುದುಂಟು. ಇದಕ್ಕೆ ಮುಖ್ಯ ಕಾರಣವೆಂದರೆ ಸಾಹಿತಿಗಳು ಸಾಹಿತ್ಯದಿಂದಲೇ ಹೊಟ್ಟೆಹೊರೆಯಲು ಪ್ರಯತ್ನಿಸುವುದು. ಇದು ಒಬ್ಬಿಬ್ಬರುಮಾಡಬಹುದಾದ ವಿಷಯವೇಹೊರತು, ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ಸಾಹಿತಿಗಳೂ ಮಾಡಬೇಕಾದ ವಿಷಯವಲ್ಲ. ಕಾರಣ ಸಾಹಿತಿಗಳಾದವರು ಕೇವಲ ಸಾಹಿತ್ಯಕ್ಕೆ ಕಟ್ಟುಬೀಳದೆ, ಆದರೂ ಸಾಹಿತ್ಯವನ್ನು ಬಿಡದೆ, ದುಡ್ಡಿದ್ದವರೂ ಸ್ಥಿತಿವಂತರೂ ಆಗುವಂತೆ ಯೋಜಿಸಿಕೊಳ್ಳಬೇಕು. ಸಾಹಿತ್ಯವೇ ಅವರನ್ನು ಅವಲಂಬಿಸುವಂತಾಗಬೇಕೆ ವಿನಾ ಸಾಹಿತಿಗಳೇ ಸಾಹಿತ್ಯವನ್ನ ವಲಂಬಿಸಿ ಕುಳ್ಳಿರಬಾರದು. ಸಾಹಿತಿಗಳಿಗಿಂತ ಒಂದು ಲಕ್ಷಪಟ್ಟು ಹೆಚ್ಚು ಓದುಗಸಾಹಿತಿಗಳುಂಟಾದಾಗ, ಒಬ್ಬ ಲೇಖಕ-ಸಾಹಿತ್ಯವನ್ನೇ ಸಾಹಿತಿ ತನ್ನ ಉದ್ಯೋಗವಾಗಿಸಬಹುದು.

ವಾಙ್ಮಯ ಯೋಜನೆ

ಈ ದೃಷ್ಟಿಯಿಂದ ಎರಡು ನಿಟ್ಟಿನಲ್ಲಿ ಯೋಜನೆ ಅವಶ್ಯ:—ಒಂದು ಸಾಹಿತಿಗಳೆನ್ನುವವರು ಸಾಹಿತ್ಯದ ಬೆನ್ನುಬಿಡದೆ, ತಾವೇ ಎಂಜನಿಯರರಾಗಬೇಕು; ಡಾಕ್ಟರರಾಗಬೇಕು; ಜಡ್ಜಿಗಳಾಗಬೇಕು; ಶಿಲ್ಪಿಗಳಾಗಬೇಕು; ಸೇನಾನಿಗಳಾಗಬೇಕು; ಸೇನಾಧಿಪತಿಗಳಾಗಬೇಕು; ಕರ್ಮಕುಶಲರಾಗಬೇಕು. ಸಾಹಿತಿಗೆ ಒಂದು ವಿಶಿಷ್ಟವಾದ ದೃಷ್ಟಿ ಅವಶ್ಯ ಎಂದು ಮೇಲೆ ಹೇಳಿದೆ. ಅಂತಹ ವಿಶಿಷ್ಟದೃಷ್ಟಿಯುಳ್ಳ ಒಂದು ವರ್ಗ ಹೀಗೆ ಜೀವನದ ವಿವಿಧಕ್ಷೇತ್ರಗಳನ್ನು ವ್ಯಾಪಿಸಿಕೊಂಡರೆ ನಾಡಜೀವನದ ಮಟ್ಟ ಎಷ್ಟು ಉಚ್ಚವಾಗಬಲ್ಲದು? ಸಾಹಿತ್ಯದ ಯೋಗ್ಯತೆ ಎಷ್ಟು ಹೆಚ್ಚಬಲ್ಲುದು ಇಂತಹ ಒಂದು ವರ್ಗ ಸಿದ್ಧವಾದಾಗ ಮಾತ್ರ ಸಾಮಾನ್ಯ ಜನರು ಸಹ 'ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್' ಆಗುವುದು ಸಾಧ್ಯ. ಇದನ್ನು ಬಿಟ್ಟು ಬರಡುಹಸುವಿನ ಮೊಲೆ ಜಗ್ಗಿದಂತೆ ಸಾಹಿತ್ಯವನ್ನು ಜಗ್ಗಿ, ಅದರಿಂದ ತಾವೂ ಬಡವಾಗಿ ಸಾಹಿತ್ಯವೂ ಬಡವಾಗಿ, ಆಮೇಲೆ ಸಾಹಿತ್ಯಕ್ಕೇ ದೋಷ ಕೊಡುವಲ್ಲ ಯಾವ ಜಾಣತನವಿದೆ! ಮೇಲಿನ ಮಾತಿನಲ್ಲಿ ಒಂದು ವಿಶೇಷ ಔಚಿತ್ಯವಿದೆ. ಇದೀಗ ನಾವು ಸುತ್ತಲೂ ಕಣ್ಣುಹಾಕಿ ನೋಡಿದರೆ, ಸಾಹಿತ್ಯದ ಗಂಧವೇ ಇಲ್ಲದ ಅಸಂಖ್ಯ ವಕೀಲರನ್ನೂ, ವ್ಯಾಪಾರಿಗಳನ್ನೂ, ಡಾಕ್ಟರರನ್ನೂ, ಇಂಜಿನಿಯರನ್ನೂ ಕಾಣುತ್ತೇವೆ. ಇವರೇ ನಮ್ಮ ಸಮೃದ್ಧಜದ ಶಿಷ್ಟರು ಹಾಗು ದುಡ್ಡುಳ್ಳವರು. ಇಂತಹರಿಗೆ ಸಾಹಿತ್ಯ ಎರವಾಗಿರುವವರೆಗೆ ಸಾಹಿತ್ಯಕ್ಕೆ ಆರ್ಥಿಕ ಸ್ವಾಸ್ಥ್ಯ ದೊರೆಯುವುದು ದೂರತೋಪಾಸ್ತವೇ! ಈ ವರ್ಗದ ಜನರಿಗೆಲ್ಲಾ ಸಾಹಿತ್ಯಸಂಸ್ಕಾರವನ್ನು ಸೋಂಕಿಸುವುದು ಇನ್ನು ಪುನರ್ಜನ್ಮದಲ್ಲೇ ಸರಿ. ಕಾರಣ ಈ ಸಾಯುವ ಮೂಳರನ್ನು ಸಾಲಿಗೆ ಹಾಕುವ ಪರಿಶ್ರಮ ಬೇಡ. ಅದಕ್ಕಿಂತಲೂ ಸುಲಭವಾದುದೆಂದರೆ, ಸಾಹಿತಿಗಳೇ ವಕೀಲರು,

ವ್ಯಾಪಾರಿಗಳು, ಡಾಕ್ಟರರು, ಎಂಜಿನಿಯರರು ಆಗುವುದು. ಇಲ್ಲಿ ಕುಳಿತ ಅನೇಕ ತರುಣಸಾಹಿತಿಗಳಿಗೆ ಈ ಜನ್ಮದಲ್ಲೇ ಇದು ಅತ್ಯಂತ ಸಾಧ್ಯವಿದೆ. ಕಾರಣ ೪೦ ವರ್ಷದ ಕೆಳಗಿನ ಎಲ್ಲ ಕಿರಿ ತರುಣರಲ್ಲಿ ನನ್ನ ವಿನ್ನಹವೆಂದರೆ, ನೀವು ಇಂಗಲೂ ಪ್ರಯತ್ನಮಾಡಿ, ದುಡ್ಡುಳ್ಳ ಯಾವುದೊಂದು ಉದ್ದಿಮೆಗೆ ಅಂಟಿಕೊಳ್ಳಿ. ನಿಮ್ಮಲ್ಲಿಯ ಸಾಹಿತ್ಯದ ಸಂಸ್ಕಾರವನ್ನು ಜೀವಂತವಾಗಿರಿಸಿಕೊಳ್ಳಿ. ಆ ಸಂಸ್ಕಾರ ಹಾಗು ಸಾಹಿತಿಯ ದೃಷ್ಟಿಗಳು. ನಿಮ್ಮಲ್ಲಿರುವವರೆಗೆ ಸಾಹಿತ್ಯಕ್ಕೆ ಸಾವಿಲ್ಲವಷ್ಟೇ ಅಲ್ಲ, ನೀವು ಸೇರಿದ ಉದ್ದಿಮೆಯು ಮಟ್ಟವೂ ಉನ್ನತವಾಗುವಲ್ಲಿ ಸಂದೇಹವಿಲ್ಲ. ಸಾಹಿತಿಯಲ್ಲದ ಒಬ್ಬ ವಕೀಲನೇ ಆಗಲಿ, ವ್ಯಾಪಾರಿಯೇ ಆಗಲಿ ಎಷ್ಟು ಕೇಳ್ಮಟ್ಟಕ್ಕಿಳಿಯಬಲ್ಲನೋ, ಸಾಹಿತಿಯಾದ ವಕೀಲ—ಅಥವಾ—ವ್ಯಾಪಾರಿ ಅಷ್ಟು ಕೇಳ್ಮಟ್ಟಕ್ಕಿಳಿಯುಲಾರ ಎಂದು ನನ್ನ ನಂಬಿಕೆ.

ಓದುಗೆ—ಸಾಹಿತಿಗಳು ಹೆಚ್ಚಲಿ

ಇದರಿಂದ ಇತ್ಯರ್ಥವಾಗುವ ಮತ್ತೊಂದು ಮಾತೆಂದರೆ, ಇಂಗಿನ ತಲೆಮಾರುಗಳಲ್ಲಿದ್ದರೂ, ಮುಂದಿನ ತಲೆಮಾರುಗಳಲ್ಲಾದರೂ ಸಾಹಿತ್ಯಸಂಸ್ಕಾರ ಹೆಚ್ಚಾಗಿರುವ ತರುಣರ ಸಂಖ್ಯೆ ಅಧಿಕವಾಗುವಂತೆ ನಾವು ಯೋಜಿಸಬೇಕು. ಇ ಮಾತನ್ನು ನಾನು ಒಂದು ಟೆಕ್ನಿಕಲ್ ಸಂಸ್ಥೆಯ ಪ್ರಾಧ್ಯಾಪಕ ಎಂಬಂಶದಿಂದ ಹೇಳುತ್ತೇನೆ. ತೀರ ಋಕ್ಷವೆನ್ನಿಸಬಹುದಾದ ಟೆಕ್ನಿಕಲ್ ಹಾಯಸ್ಕೂಲಿನ ವಿದ್ಯಾರ್ಥಿಯೂ ಸಾಹಿತ್ಯದ ಸಂಸ್ಕಾರದ ವಿಷಯದಲ್ಲಿ ಯಾರಿಗಿಂತಲೂ ಹಿಂದುಳಿಯದಂತೆ ಯೋಜಿಸಬೇಕು. ಅಭ್ಯಾಸಕ್ರಮವೂ ಹಾಗೆ ಯೋಜಿತವಾಗಬೇಕಲ್ಲದೆ, ಅಧ್ಯಾಪಕರೂ ಆ ದೃಷ್ಟಿಯಲ್ಲಿ ತರಬೇತು ಕೊಡುವುದವಶ್ಯ. ಅದೊಂದು ರಾಷ್ಟ್ರೀಯಕಾರ್ಯ ಎಂತಲೇ ಮಾಡಬೇಕು. ಹೀಗೆ ಇನ್ನು ಹತ್ತು ಹದಿನೈದು ವರ್ಷಗಳ ನಂತರದ ನಮ್ಮ ಓದುಗರು, ಸಾಹಿತ್ಯಪ್ರೇಮಿಗಳೂ ದುಡ್ಡುಳ್ಳ ವರ್ಗದವರೂ ಆಗುವಂತಾಗಬೇಕು. ಇಂಗಿನ ದುಡ್ಡುಳ್ಳವರು ಓದುಗರಾಗದೆ ಹೋಗಲೊಲ್ಲರೇಕೆ! ಆದರೆ ಮುಂದಿನ ಓದುಗರಾದರೂ ದುಡ್ಡುಳ್ಳವರಾಗಬೇಕು. ಇದನ್ನು ಬಗೆದೇ, ಹಿಂದೆ ಓದುಗ–ಸಾಹಿತಿ ಹಾಗು ಲೇಖಕ–ಸಾಹಿತಿ ಎಂದು ಉಲ್ಲೇಖಿಸಲಾಗಿತ್ತು. ಓದುಗ-ಸಾಹಿತಿಯಲ್ಲಿ ಮೂಲಭೂತ ಅವಶ್ಯಕತೆಗಳಿಗೆ ಸಾಕಾಗಿ ಉಳಿಯುವಷ್ಟು ದುಡ್ಡು ಇದ್ದರೇ, ಲೇಖಕ-ಸಾಹಿತಿಯ ಹೊಟ್ಟೆ ತುಂಬಬಲ್ಲುದು! ಲೇಖಕ-ಸಾಹಿತಿಯೂ ಸ್ವತಂತ್ರ ಉದ್ದಿಮೆಗಾರನಾಗಿ ದುಡ್ಡುಳ್ಳವನೇ ಆಗಿದ್ದರಂತೂ ಒಳ್ಳೆಯದೆ. ಒಟ್ಟಾರೆ ಸಂತೃಪ್ತಸಾಹಿತಿಯ ಸೃಷ್ಟಿ ಎಷ್ಟುಸುಂದರ, ಸುಭಗ, ಹಾಗು ಶಾಶ್ವತವಾಗಬಲ್ಲುದೋ, ಅಸಂತೃಪ್ತ ಸಾಹಿತಿಯದು ಆಗಲಾರದು. ಅಸಂತೃಪ್ತ ಸಾಹಿತಿಯ ಶಕ್ತಿ ಬೇಗನೇ ಕುಸಿಬೀಳುವುದು. ಆತನ ಕಲೆ ಕುಂಠಿತವಾಗಿ ಅದರಲ್ಲಿ ದ್ವಿರುಕ್ತಿ, ಪುನರುಕ್ತಿ, ಚರ್ವಿತಚರ್ವಣ ಆರಂಭವಾಗಿ ಆವನತಿಯ ಹೆಗ್ಗುರುತುಗಳಾಗುವುವು. ಆತ ತನ್ನ ಕಲೆಯನ್ನು ಮಾರಹೊಡುವನು; ಪ್ರಕಾಶಕರ ಕೈಕೊತ್ತಾಗಿಸುವನು.

ಸಾಹಿತಿಯ ರೋಗ

ಸಾಹಿತಿಗೆ ಅಂಟಿದ ರೋಗಗಳಲ್ಲಿ ಮತ್ತೊಂದು ಹಿರಿರೋಗವೆಂದರೆ, ಸಾಹಿತ್ಯವನ್ನು ಸ್ವಪ್ರಸಿದ್ಧಿಯ ಸಾಧನವಾಗಿಸುವುದು. ಈ ಪ್ರಯತ್ನಕ್ಕೆ ಸಣ್ಣಕತೆಯಂತೂ ಬಲು ಬೇಗ ಬಲಿಬೀಳುವುದು. ಸಾಹಿತ್ಯದ ಪ್ರಯತ್ನಕ್ಕೆ ಹುಡುಗತನದಿಂದಲೂ ಬೀಳಬಹುದಾದರೂ, ಪ್ರಕಟನೆಗಳನ್ನು ಹೊರತರುವುದಕ್ಕೆ, ಹಾಗೆಯೇ ಆ ಮೂಲಕ ಬೇಗನೇ ಪ್ರಸಿದ್ಧಿಗೆ ಬರುವುದಕ್ಕೆ ತಾವಾಗಿಯೇ ಯತ್ನಿಸಕೂಡದು. ಸಾಮಾನ್ಯತಃ ವಯಸ್ಸಿನ ಮೂವತ್ತನೆಯ ವರ್ಷದ ವರೆಗೂ ಈ ಸಂಯಮವನ್ನು ಪಾಲಿಸಬಹುದು. ಈ ಸಂಯಮದಿಂದ ನಿಜವಾದ ಸಾಹಿತಿ ೨–೩ ಗಂಡಾಂತರಗಳಿಂದ ಪಾರಾಗುತ್ತಾನೆ. ಒಂದನೆಯದಾಗಿ ಅಲ್ಪಸಿದ್ಧಿಯ ಪ್ರಸಿದ್ಧಿ ಅಕಾಲ ಮೃತ್ಯುವಿಗೀಡಾಗಬಹುದು. ಅಪಕ್ವ ಬರೆಹಗಳು ಕಟುಟೀಕೆಗಳಿಗೀಡಾಗಿ ನಮ್ಮ ಸಾಹಿತ್ಯಶಕ್ತಿಯನ್ನೇ ಬಲಿಗೊಳ್ಳಬಹುದು; ಎಳವಯಸ್ಸಿನ ನಮ್ಮಲ್ಲಿ ಆ ಆಘಾತಗಳನ್ನು ತಾಳುವ ಶಕ್ತಿಯಿಲ್ಲದಿರಬಹುದು. ಇದಲ್ಲದೆ, ಇದರಿಂದ ಸಾಹಿತ್ಯಕ್ಕೇ ಅಂಟಿಕೊಂಡು ನಾವು ಬೇರೆ ಹೆಚ್ಚು ದೃಢವಾದ ಉದ್ದಿಮೆಗಳಿಗೆ ಎರವಾಗಬಹುದು. ಅದರಿಂದ ಕೊನೆಗೂ ಅತೃಪ್ತಿಯಲ್ಲುಳಿಯಬಹುದು. ಒಂದೇ ಮಾತಿನಲ್ಲಿ ಹೇಳುವುದಾದರೆ, ನಮ್ಮ ದೃಷ್ಟಿ ಯಾವಾಗಲೂ ಸಾಹಿತ್ಯಕ್ಕೆ ಸೇವೆ ಸಲ್ಲಿಸುವಂತಿರಬೇಕೇ ಹೊರತು ಸಾಹಿತ್ಯ ನಮ್ಮನ್ನು ಸೇವಿಸುವಂತಿರಬಾರದು. ಇದು ಸದ್ಯದ ಪರಿಸ್ಥಿತಿಯಲ್ಲೆಂತೂ ಸಾಮಾನ್ಯ ನಿಯಮವಾಗಿರಬೇಕು. ಅಪವಾದಗಳ ಮಾತು ಬೇರೆ.

ವಿವಿಧಮುಖಸಾಹಿತ್ಯ

ಮೇಲೆ ಸಾಹಿತಿಗಳು ಜೀವನದ ವಿವಿಧಕ್ಷೇತ್ರಗಳನ್ನು ವ್ಯಾಪಿಸಿಕೊಳ್ಳಬೇಕು ಎಂದು ಹೇಳಿದುದರಲ್ಲಿ ಇನ್ನೂ ಒಂದು ವಿಶೇಷ ಅಂಶವಿದೆ. ಅದರಿಂದ, ಸಾಹಿತ್ಯದ ವಿವಿಧಮುಖತೆಯೂ ಹೆಚ್ಚುವುದು. ಸಾಹಿತಿಗಳು ಸಾಹಿತ್ಯವನ್ನೋ ಪತ್ರಿಕಾವ್ಯವಸಾಯವನ್ನೋ ಅಂಟಿಕೊಳ್ಳದಿದ್ದರೆ, ಅವರಂಟಿಕೊಳ್ಳುವ ಇನ್ನೊಂದು ವೃತ್ತಿ ಶಿಕ್ಷಕ ಅಥವಾ ಪ್ರಾಧ್ಯಾಪನ ವೃತ್ತಿ. ಇದರಿಂದ ಸಾಹಿತಿಯ ಅನುಭವಕ್ಷೇತ್ರ ಎಷ್ಟು ಕಿರಿಯದಾಗುವುದೆಂಬುದಕ್ಕೆ ಬೇರೆ ನಿದರ್ಶನನೇ ಬೇಡ. ಆದೇ, ಸಾಹಿತಿಯು ಡಾಕ್ಟರನಾಗಿದ್ದರೆ, ಸೇನಾನಾಯಕನಾಗಿದ್ದರೆ, ವಕೀಲ ಅಥವಾ ಜಡ್ಜಿಯಾಗಿದ್ದರೆ, ಎಷ್ಟು ವಿವಿಧವಾದ, ವಿಪುಲವಾದ, ವಾಸ್ತವವಾದ ಅನುಭವಸಂಪತ್ತಿಯನ್ನು ನಮ್ಮ ಸಾಹಿತ್ಯದ ಕಣಜಕ್ಕೆ ಸೇರಿಸಬಹುದು? ಮರಾಟಿಯ ಡಾ. ಎ. ಡಬ್ಲ್ಯು ವರ್ಟಿಯಂತಹರು, ರಾಜಾಜಿಯಂತಹರು, ಬಂಗಾಲದ 'ಬೊನೊಫೂಲ್' ಅಂತಹರು (ವಕೀಲರು, ಡಾಕ್ಟರರು)—ಒಬ್ಬರಾದರೂ ಕನ್ನಡದಲ್ಲಿದ್ದಾರೆಯೆ? ಇದರಿಂದಾಗಿ ನಮ್ಮಲ್ಲಿಯ ಸಾಹಿತ್ಯದಲ್ಲಿ ವಾಸ್ತವತೆಯೂ ಕಾಲ್ಪನಿಕ ವಾಸ್ತವತೆಯಾಗಿರುವುದುಂಟು.

ಸಣ್ಣಕತೆಯ ಗಂಡಾಂತರಗಳು

ಇನ್ನು ಕೊನೆಯದಾಗಿ—ಸಣ್ಣಕತೆಯ ಕೆಲವು ಸಮಸ್ಯೆಗಳನ್ನು ವಿವೇಚಿಸುವಾ! ಕವನದ ನಂತರ ಸಣ್ಣಕತೆಯೇ ಕನ್ನಡದಲ್ಲಿ ಹೆಚ್ಚು

ಸಂಪನ್ನವಾಗಿ ಬೆಳೆದಿದೆ. ಅದರೂ ಕವನದ ಮಟ್ಟಕ್ಕೂ ಕತೆಯ ಮಟ್ಟಕ್ಕೂ, ಇರಬೇಕಾದುದಕ್ಕಿಂತ ಹೆಚ್ಚು ಅಂತರವಿದೆ. ಎಂದರೆ ಕಳೆದ ೫೦-೪೦ ವರ್ಷಗಳಲ್ಲಿ ಕನ್ನಡ ಕವನ ಎಷ್ಟರಮಟ್ಟಿಗೆ ಮುಂದು ಪರಿಯಿತೋ ಅಷ್ಟರ ಮಟ್ಟಿಗೆ ಕತೆ ಮುಂದುವರಿದಂತಿಲ್ಲ. ಇಂದಿಗೂ ಅದೇ ಮಾಸ್ತಿಯವರು ಅದೇ ಆನಂದಕಂದರು ಹಿರಿಯಾಳುಗಳೂ ಹುರಿಯಾಳುಗಳೂ ಆಗಿದ್ದಾರೆ. ಒಂದು ಪರಂಪರೆ ನುತ್ತೊಂದು ತಲೆಮಾರು ಎಂಬುದು ಉಂಟಾಗಿಲ್ಲ. ಇದಕ್ಕೆ ಕಾರಣೀಭೂತವಾದ ಕೆಲ ಅಂಶಗಳೆಂದರೆ—೧. ತರುಣ ಸಾಹಿತಿಗಳು ಎಳೆಯದರಲ್ಲಿಯೇ ಅದನ್ನು ಬಳಸಿಕೊಂಡು ಹರಿಗೆಡಿಸಿಬಿಡುವುದು. ಈ ವಿಚಾರವನ್ನು ಹಿಂದೆ ಹೇಳಿಯಾಗಿದೆ. ೨. ಎರಡನೆಯದೆಂದರೆ, ವಾಂತ ಕತೆಗಳು ರೇಡಿಯೋ ಕತೆಗಳು ಇತ್ಯಾದಿ ಬೆಳೆದುಕೊಂಡು, ನಿಜವಾದ ಸಣ್ಣ ಕತೆಯನ್ನು ವಿರೋಧಿಸುತ್ತಿರುವುದು. ವಾದದ ಕತೆಗಳು ಪ್ರಕಾಶಕರ ಹಂಗಿನಂತೆ—ಮುಖ್ಯತಃ ಮನರಂಜನೆಯ ಉದ್ದಿಶ್ಯದಿಂದ ಬರೆದಂತಹವು. ಈ 'ವೇಡ್-ಟು-ಆರ್ಡರ್' ಕತೆಗಳಿಗೆ ಕಾಸೆರಡು ಕಾಸು ಹುಟ್ಟಲಾರಂಭಿಸಿದುದರಿಂದ, ಕತೆಯ ಮಟ್ಟ ಕೆಳಗಿಳಿಯುತ್ತಲ್ಲದೆ ಭಾವೀ ಕತೆಗಾರರಿನ್ನುವರೆಲ್ಲಾ ಇದರ ಮೋಹಕ್ಕೆ ಬಿದ್ದುಬಿಟ್ಟರು. ೩. ಪ್ರಸಿದ್ಧಿಯ ಎಳೆತವಂತೂ ಸರಿಯೇ! ೪. ಮೂರನೆಯದಾಗಿ, ಕಾದಂಬರಿಗಳಿಗೆ ಇಂಜೆಗೆ ಸ್ವಲ್ಪ ಪೇಟೆಯ ಧಾರಣೆ ಹೆಚ್ಚಿದುದರಿಂದ, ಸಣ್ಣ ಕತೆಗಾರರಾಗಬೇಕಾದವರೂ ಕಾದಂಬರಿಯತ್ತ ಹೊರಳಿದರು. ಪೇಟೆಯ ಧಾರಣೆಯ ಕಾದಂಬರಿಯೆಂದರೆ—ಸರಿ—ಅದರ ಮಟ್ಟ ತಿಳಿದೇ ಇದೆ. ಅಲ್ಲಿಯೂ ಪ್ರಕಾಶಕರ ಹಂಗೇ ಮುಖ್ಯ. 'ತ.ರಾ.ಸು' ರಂಥ ಸಾಹಿತಿಗಳು ಸ್ಪಷ್ಟವಾಗಿ ಹೇಳಿದ್ದಾರೆ—ಒಪ್ಪಿದ್ದಾರೆ—'ನಾವು ಬರೆಯುವುದು ಪೇಟೆಗಾಗಿ; ನಾಲ್ಕು ಕಾಸಿಗಾಗಿ; ಪ್ರಕಾಶಕರ ಮನದಿಚ್ಛೆಗಾಗಿ;—ಅದರಲ್ಲಿ ಕಲೆಯೆಲ್ಲಿಂದ ಬಂತು?' ಎಂದು.

ಸಣ್ಣ ಕತೆಯು ಸಾಹಿತ್ಯದ ಪ್ರಬಲ ಅಂಗ

ಈ ಕೆಲವು ಕುತ್ತುಗಳಿಂದ ಸಣ್ಣ ಕತೆಯನ್ನು ಪಾರುಮಾಡಿ ಅದು ಸ್ವಾಭಾವಿಕವಾದ ನಿಸ್ಪೃಲಂಕವಾದ ರೀತಿಯಲ್ಲಿ ಬೆಳೆಯುವಂತಾಗಬೇಕು. ಸಣ್ಣ ಕತೆ ಸಾಹಿತ್ಯದ ಒಂದು ಪ್ರಬಲ ಶಕ್ತಿಯ ಅಂಗ. ಈ ಸಾಹಿತ್ಯಸ್ವರೂಪ ಬೆಳೆದಷ್ಟೂ ಸಾಹಿತ್ಯ ಹೆಚ್ಚು ಪುಷ್ಟವಾಗಬಲ್ಲುದು. ಇದರ ಮುಖ್ಯ ಗುಣವೆಂದರೆ, ಇದು ಮಿಕ್ಕೆಲ್ಲ ಸಾಹಿತ್ಯರೂಪಗಳಿಗಿಂತ ಹೆಚ್ಚಾಗಿ ಜನಮನವನ್ನು ಹೊಗಬಲ್ಲುದು; ತಾಗಬಲ್ಲುದು. ಒಳ್ಳೆಯ ಸಣ್ಣ ಕತೆಯ ಪರಂಪರೆ ನಾಡಿಜೀವನವನ್ನು ಮಿಕ್ಕೆಲ್ಲ ಸಾಹಿತ್ಯರೂಪಗಳಿಗಿಂತಲೂ ಹೆಚ್ಚು ಆಳವಾಗಿ ವ್ಯಾಪಿಸಬಲ್ಲುದು; ರೂಪಿಸಬಲ್ಲುದು. ಮಾರ್ಮಿಕವಾದ ಒಂದು ಸಣ್ಣ ಕತೆ ರಾಮಬಾಣದಂತೆ; ನೆಬ್ಬೆರಿ ಹುಸಿಹೋಗದಂತಹದು. ಸಣ್ಣ ಕತೆ ಅಭೇಕರು ಹೇಳುವಂತೆ ಅಧುನಿಕ ಜೀವನದ ಗಡಬಡಿಯ ಅವಸರದ ಅನುಕೂಲತೆಗಾಗಿ ಬಂದುದಲ್ಲ; ಸಾಹಿತ್ಯವಿಕಾಸದ ನೈಸರ್ಗಿಕವಾಗಿ ಜಾಗು ಅನಿವಾರ್ಯವಾಗಿ ಚಿಗುರೊಡೆದು ಬಂದ ಹೊಸ ಹೊಳಕೆ ಅದು. ಅದರ ಕ್ಷೇತ್ರ ಉದ್ದಿಶ್ಯಗಳೇ ವಿಶಿಷ್ಟವಾದುವು. ನಾಟಕ ದೃಶ್ಯ; ಕಾವ್ಯ ಶ್ರಾವ್ಯ, ಕಾದಂಬರಿ ಅಲಿತಪ್ರಬಂಧಗಳ ಮನೋರಂಜಕ. ಆದರೆ ಸಣ್ಣ ಕತೆ 'ಹೃದಯಂ-ಗಮ'. ನೇರವಾಗಿ ಎದೆ-ಕರುಳುಗಳನ್ನು ತಟ್ಟುವ ಶಕ್ತಿ ಅದಕ್ಕಿದೆ. ಗಾಳಿಯಲ್ಲಿ ನೂಲು ತೆಗೆಯುವ ಕಲೆ, ನೆಲದಲ್ಲಿ ಬೆರಳೂರಿ ಚಿಕ್ಕೆಗಳಿಗೆ ಕೈತಾಕಿಸುವ ಕಲೆ, ಕನಸುಗಳನ್ನು ಬಣ್ಣಬಣ್ಣದ ನನಸುಗಳನ್ನಾಗಿಸುವ ಕಲೆ—ಸಣ್ಣ ಕತೆಯಲ್ಲಿ ಹೆಚ್ಚು ಸುಸಾಧ್ಯ. ಕವಿಯು ತನ್ನ ಕಾಲವನ್ನೂ ಮೀರಿ ಇರಬಲ್ಲ. ಸಣ್ಣ ಕತೆಗಾರ ತನ್ನ ಕಾಲದೊಂದಿಗೆ ಸಮನ್ವಯಿತವಾಗಿ ನಡೆಯುವುದವಶ್ಯ. ಜೀವನಕ್ಕೂ ಅತನಿಗೂ ಮಿಕ್ಕ ಸಾಹಿತಿಗಳಿಗಿಂತ ಹೆಚ್ಚಿನ ಹತ್ತುಗಡಿಯಿರುವುದವಶ್ಯ. ನಾನು ತಿಳಿದ ಮಟ್ಟಿಗೆ ಈ ಸಣ್ಣ ಕತೆ ಪಾಶ್ಚಾತ್ಯರ ಅನುಕರಣವೂ ಅಥವಾ ಅಲ್ಲಿಂದ ಬಂದ ಸಖಿಯೂ ಕಲಮೂ ಅಲ್ಲ. ಅಧುನಿಕ ಯುಗದ ಗಾಳಿಗೆ ಅಲ್ಲಲ್ಲೇ ಹೊಂಪುಳಿಯೆದ್ದ ಸಾಹಿತ್ಯದ ಚಿಗುರುಗಳಲ್ಲಿ ಅದೊಂದು. ಈ ಮಾತುಗಳನ್ನು ನಾನು ಸಣ್ಣ ಕತೆಗಳ ಬಗೆಗೆ ತನಗಿರುವ ಪಕ್ಷಪಾತದಿಂದ ಹೇಳುತ್ತಿರಬಹುದು. ನನಗೆ ಪಕ್ಷಪಾತವಿರುವುದು ನಿಜ. ಆದರೆ ಪಕ್ಷಪಾತದ ಮಾತುಗಳೂ ಸತ್ಯವಾಗಿರಲು ಸಾಧ್ಯ. ನಿಮ್ಮ ದೃಷ್ಟಿಯಲ್ಲಿ ಎಷ್ಟು ಸತ್ಯವೋ ಅಷ್ಟನ್ನೇ ಸ್ವೀಕರಿಸಿ.

ಸಾರಾಂಶ:—

ಸಣ್ಣ ಕತೆಯ ಉನ್ನತಿಯು ಒಟ್ಟಾರೆ ಸಾಹಿತ್ಯದ ಉನ್ನತಿಯನ್ನೇ ಅವಲಂಬಿಸಿದೆ. ಅದು ಸಾಹಿತಿಗಳ ಉನ್ನತಿಯನ್ನೂ ಅವಲಂಬಿಸಿದೆ. ಕಾರಣ ಸಾಹಿತಿಗಳು—ಸಾಹಿತ್ಯವನ್ನೇ ಮುಖ್ಯವಾಗಿ ಅವಲಂಬಿಸದೆ ಅದು ತಮ್ಮನ್ನೇ ಅವಲಂಬಿಸಿದೆ ಎಂಬುದರ ಜವಾಬುದಾರಿಯನ್ನು ಅರಿತುಕೊಳ್ಳಬೇಕು. ಅಲ್ಲದೆ ಸಾಹಿತಿಯು ಸಾಹಿತ್ಯದ ಕ್ಲುಪ್ತಕ್ಷೇತ್ರಕ್ಕೇ ಕಟ್ಟುಬೀಳದೆ ವಾಙ್ಮಯವೆಲ್ಲಾ ತನ್ನದು ಎಂದು ಭಾವಿಸಿಕೊಳ್ಳಬೇಕು. ಹಾಗೆಯೆ ವೃತ್ತಿಯಲ್ಲೂ ಜೀವನದ ಶುದ್ಧವೃತ್ತಿಗಳೆಲ್ಲಾ ತನ್ನವು ಎಂದು ಬಗೆಯಬೇಕು. 'ಯೋಗಃ ಕರ್ಮಸು ಕೌಶಲಂ' ಎಂದು ಮಂತ್ರದಲ್ಲಿ ಹೇಳುವುದಕ್ಕಿಂತ ತನ್ನ ಸಂಸ್ಕಾರಮಯ ದೃಷ್ಟಿಯೊಡನೆ ಕರ್ಮಕೌಶಲ್ಯವನ್ನು ಪಡೆಯಬೇಕು. ಕರ್ಮಕುಶಲರಿಗೆ ಸಂಕಲ್ಪವಿರುತ್ತೆ; ದೃಷ್ಟಿಕಡಮೆ; ಸಾಹಿತಿಗೆ ದೃಷ್ಟಿಯಿರುತ್ತೆ; ಸಂಕಲ್ಪ ಕಡಿಮೆ. ದೃಷ್ಟಿ-ಸಂಕಲ್ಪಗಳೆರಡೂ ಸೇರಿದ ಕರ್ಮಕುಶಲಸಿದ್ಧ ಸಾಹಿತಿ—ಓದುಗ—ಸಾಹಿತ್ಯ ಲೇಖಕ—ಸಾಹಿತಿ ಇವರೇ ನಮಗೆ ಬೇಕಾದ ಸಾಹಿತಿಗಳು. ಸಂತನಂಥ ಕವಿಯೂ ಕವಿಯೂ ಆದ ಸಾಹಿತಿಗಳು ಹುಟ್ಟಲಿ ಇಂಥ ಸಾಹಿತಿಗಳಿಗೆ ಗೆಲುವಾಗಲಿ!

ಎರಡನೆಯ ದಿನದ ಕಾರ್ಯಕಲಾಪಗಳು

ದಿನಾಂಕ ೧೩ರಂದು ಬೆಳಿಗ್ಗೆ ೯ ಘಂಟೆಗೆ ನಗರಸಭಾಭವನದಲ್ಲಿ ವಿಚಾರಸಂಕೀರ್ಣಗಳು ಪ್ರಾರಂಭವಾದುವು. 'ಸಣ್ಣಕತೆ'ಗಳ ಬಗೆಗಿನ ಮೊದಲನೆಯ ಸಂಕೀರ್ಣವು ಬೆಂಗಳೂರಿನ ಸಾಹಿತ್ಯಪರಿ. ಪತ್ರಿಕೆಯ ಕಾರ್ಯದರ್ಶಿಗಳಾದ ಶ್ರೀ. ಕೆ. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ, ಅದರಲ್ಲಿ ಸಾಂಗ್ಲಿ ವಿಲಿಂಗಡನ್ ಕಾಲೇಜಿನ ವ್ಹಾಯಿಸ್ ಪ್ರಿನ್ಸಿಪಾಲರಾದ ಡಾ|| ರಂ. ಶ್ರೀ. ಮುಗಳಿಯವರು 'ಸಣ್ಣಕತೆಗಳ ದರ್ಶನ,' ಬಳ್ಳಾರಿಯ ರೈತಸಹಕಾರಿ ಪತ್ರಿಕೆಯ ಸಂಪಾದಕರಾದ, ಶ್ರೀ. ಕೊ. ಚೆನ್ನಬಸಪ್ಪನವರು 'ಪ್ರಗತಿಶೀಲ ಕತೆಗಳು,' ಧಾರವಾಡದ ಕತೆಗಾರ್ತಿ ಶ್ರೀಮತಿ ಶಾಂತಾದೇವಿ ಮಾಳವಾಡರು 'ಮಹಿಳೆಯರು ಬರೆದ ಸಣ್ಣಕತೆಗಳು' ತರುಣ ಕತೆಗಾರರಾದ ಶ್ರೀ. ನೆಂ. ಮು. ಜೋಶಿಯವರು 'ನವ್ಯಕಥೆ-ಅವುಗಳ ತಂತ್ರ ಮತ್ತು ಮಂತ್ರ' ಕೊಡಗಿನ ಕತೆಗಾರರಾದ ಭಾರತೀಸುತರ 'ಸಣ್ಣಕತೆಗಳ ಭವಿತವ್ಯ' ಹಾಗೂ ಶ್ರೀ. ಶ್ರೀನಿವಾಸ ಹಾವನೂರರು 'ಹನಿಗತೆಗಳು' ಎಂಬ ವಿಷಯಗಳ ಬಗೆಗೆ ಚರ್ಚೆ ನಡೆಯಿಸಿದರು. ಅಧ್ಯಕ್ಷರು ಪ್ರಾರಂಭದಲ್ಲಿ ಮೊದಲಿನ ಸಣ್ಣಕತೆಗಾರ ಬಗೆಗೆ ಹೇಳಿ ಅದು ಬೆಳೆದು ಬಂದ ರೀತಿಯನ್ನು ನಿರೂಪಿಸಿ, ಕೊನೆಯಲ್ಲಿ ಸಣ್ಣಕತೆ ವಾಸ್ತವತೆ ಹಾಗೂ ಆದರ್ಶಗಳನ್ನು ಮೇಳವಿಸಿಕೊಂಡು ಬೆಳೆಯಬೇಕೆಂದು ಪ್ರಾರೈಸಿದರು. ಮಧ್ಯಂತರದಲ್ಲಿ ಶ್ರೀಮತಿ ಉಷಾ ಖಾಡಿಲಕರರವರು ಸುಶ್ರಾವ್ಯ ಗೀತಗಳನ್ನು ಹಾಡಿದರು.

ಎರಡನೆಯ ಸಂಕೀರ್ಣವು ಕರ್ನಾಟಕ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ. ಸ. ಸ. ಮಾಳವಾಡರ ಅಧ್ಯಕ್ಷತೆಯಲ್ಲಿ ೧೨ ಘಂಟೆಗೆ ಪ್ರಾರಂಭವಾಗಿ, ಅದರಲ್ಲಿ ಧಾರವಾಡದ ಬಾನುಲಿಕೇಂದ್ರದ ಶ್ರೀ. ಎನ್. ಕೆ. ಕುಲಕರ್ಣಿಯವರು 'ಕನ್ನಡ ಲಲಿತಪ್ರಬಂಧಗಳ ಸಮಾಲೋಚನೆ,' ಬೆಳಗಾಂವಿಯ ಪ್ರಾಧ್ಯಾಪಕ ಶ್ರೀ. ಎ. ಕೆ. ರಾಮಾನುಜನ್‌ರವರು 'ಲಲಿತಪ್ರಬಂಧಗಳ ಕೆಲವು ವಿಶೇಷ ಲಕ್ಷಣ,' ಹುಬ್ಬಳ್ಳಿಯ ಶ್ರೀ. ಪಿ. ವೆಂಕಟರಮಣಾಚಾರ್ಯರು ವಿಜ್ಞಾನವಿಚಾರದ ಲಲಿತ ಪ್ರಬಂಧಗಳು,' ಧಾರವಾಡದ ಪ್ರೊ. ಸರೋಜಿನಿ ಮಹಿಷಿಯವರು ಸಾಹಿತ್ಯದಲ್ಲಿ ಲಲಿತಪ್ರಬಂಧಗಳ ಸ್ಥಾನ ಮತ್ತು ಅವುಗಳು ಬೆಳೆಯುವ ಅವಶ್ಯಕತೆ' ಹಾಗೂ ಬಳ್ಳಾರಿಯ ಹಾಸ್ಯಲೇಖಕ, ಹಾಸ್ಯಗಟ್ಟು ಶ್ರೀ. ಬೀಚಿ ಯವರು 'ಹರಟೆಗಳಲ್ಲಿಯ ಹಾಸ್ಯ' ಎಂಬ ಬಗೆಗೆ ಮಾತನಾಡಿದರು. ಅಧ್ಯಕ್ಷರು ಪ್ರಾರಂಭದಲ್ಲಿ ಮಾತನಾಡುತ್ತ ಇಂಥ ಸಂಕೀರ್ಣಗಳಲ್ಲಿ ಭಾಷಣಗಳಿಗಿಂತ ಬರೆದ ಪ್ರಬಂಧಗಳನ್ನು ಓದುವುದು ಯುಕ್ತವೆಂದು ಹೇಳಿ, ಲಲಿತಪ್ರಬಂಧಗಳ ಬಗೆಗೆ ಪ್ರಾಸ್ತಾವಿಕ ಮಾತುಗಳನ್ನು ಹೇಳಿ, ಕೊನೆಯಲ್ಲಿ ಶ್ರೇಷ್ಠ ಪ್ರಬಂಧಗಳು ಕನ್ನಡದಲ್ಲಿ ಹೆಚ್ಚಾಗಿ ಬರಬೇಕೆಂದು ಅಭಿಪ್ರಾಯಪಟ್ಟರು. ಸಂಕೀರ್ಣ ಮುಗಿದಾಗ ಮಧ್ಯಾಹ್ನ ೧॥ ಘಂಟೆಯಾಗಿತ್ತಾದರೂ ಸಭಾಭವನವು ಕಿಕ್ಕಿರಿದು ತುಂಬಿದ್ದು, ತುಂಬಿದಂತೆಯೇ ಇತ್ತು. ಒಳ್ಳೆಯ ಸ್ವಾರಸ್ಯಮಯ, ಹಾಸ್ಯಪೂರಿತ ಚರ್ಚೆಯಲ್ಲಿ ಶ್ರೋತೃಗಳು ಮೈಮರೆತಿದ್ದರು.

ಮಧ್ಯಾಹ್ನ 'ವಿದ್ಯಾವರ್ಧಕಸಂಘ'ದ ಅಟ್ಟದ ಮೇಲೆ ಸಮ್ಮೇಲನಕ್ಕೆ ಬಂದ ಪ್ರತಿನಿಧಿಗಳೆಲ್ಲರ ಪರಿಚಯ ಕಾರ್ಯಕ್ರಮ ನಡೆಯಿತು. ಆಗ ಡಾ. ರಂ. ಶ್ರೀ. ಮುಗಳಿಯವರು ರಾಮಾಶ್ರಯ ಪುಸ್ತಕಾಲಯದವರು ಪ್ರಸಿದ್ಧಿಸಿದ 'ಮೈಸೂರು ರಾಜ್ಯ'ದ ಸುಂದರ ನಕಾಶೆಯ ಉದ್ಘಾಟನೆಯನ್ನು ನೆರವೇರಿಸಿದರು.

ಸಾಯಂಕಾಲ ೫॥ ಘಂಟೆಗೆ ಮೂರನೆಯದಾಗಿ "ವಿವಿಧ ಸಾಹಿತ್ಯಗಳ ಸಣ್ಣಕತೆ ಹಾಗೂ ಲಲಿತಪ್ರಬಂಧಗಳಲ್ಲಿ ಕಂಡುಬರುವ ಹೊಸ ಹಾದಿಗಳು' ಎಂಬ ವಿಷಯದ ಬಗೆಗಿನ ವಿಚಾರ ಸಂಕೀರ್ಣವು ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲ ಶ್ರೀ. ವ್ಹಿ. ಕೆ. ಗೋಕಾಕರ ಅಧ್ಯಕ್ಷತೆಯಲ್ಲಿ ಸೇರಿ, ಧಾರವಾಡದ ಹಿಂದೀ ಪ್ರಚಾರಸಭೆಯ ಶ್ರೀ. ಪಿ. ಎನ್. ಭಟ್ಟಾಚಾರ್ಯರವರು 'ಮಲೆಯಾಳ ಸಾಹಿತ್ಯ' ಶ್ರೀ. ಗುರುನಾಥ ಜೋಶಿಯವರು 'ಹಿಂದೀಸಾಹಿತ್ಯ' ಹಾಗು ಕರ್ನಾಟಕ ಕಾಲೇಜಿನ ಪ್ರಾಧ್ಯಾಪಕ ಶ್ರೀ. ಅವಳೀಕರರು 'ಮರಾಠೀ ಸಾಹಿತ್ಯ'ಗಳಲ್ಲಿಯ ಸಣ್ಣಕತೆ ಹಾಗೂ ಲಲಿತ ಪ್ರಬಂಧಗಳ ಬಗೆಗೆ ಮಾತನಾಡಿದರು. ಅಧ್ಯಕ್ಷರು ಸಂಕೀರ್ಣವನ್ನು ಉದ್ಘಾಟಿಸುತ್ತ ಈ ಬಗೆಯ ವಿವಿಧ ಭಾಷೆಗಳ ಅರಿವು ಪರಸ್ಪರ ತಿಳುವಳಿಕೆ ಹೆಚ್ಚಿಸಲು ಹಾಗೂ ಸಾಹಿತ್ಯ ಸಂಪುಷ್ಟಿಗೊಳಿಸಲು ಸಹಾಯಕವಾಗುವುದೆಂದು ಹೇಳಿ, ಸಣ್ಣಕತೆ ಹಾಗೂ ಲಲಿತಪ್ರಬಂಧಗಳ ಬಗೆಗೆ ಸಾಲ್ಯು ಮಾತು ಹೇಳಿದರು. ಕೊನೆಯಲ್ಲಿ ಸಮಾರೋಪ ಮಾಡುತ್ತ ಮಲೆಯಾಳ ಸಾಹಿತ್ಯದಲ್ಲಿಯ ಪ್ರಜ್ಞತೆ, ಹಿಂದೀಸಾಹಿತ್ಯದಲ್ಲಿಯ ವೈವಿಧ್ಯ, ಮರಾಠೀ ಸಾಹಿತ್ಯದಲ್ಲಿಯ ಹೊಸ ಪ್ರಯೋಗಗಳು ಕನ್ನಡದಲ್ಲಿಯೂ ನಡೆಯಬೇಕೆಂದು ಅಪ್ಪಣೆ ಕೊಡಿಸಿದರು.

ಶ್ರೀ. ಗೋವಿಂದಮೂರ್ತಿ ದೇಸಾಯಿಯವರ 'ಪ್ರಬಂಧಕಾರನ ಪಲಾಯನ' ಎಂಬ ಸಣ್ಣಕತೆ ಹಾಗೂ ಪ್ರೊ. ಸಿ. ಎಸ್. ಕುಲಕರ್ಣಿಯವರ 'ಸಣ್ಣಕತೆಗಾರನ ಸಣ್ಣತನ' ಎಂಬ ಲಲಿತಪ್ರಬಂಧ, ಈ ಅಶ್ರಬರಿಹಗಳ ವಾಚನವು ನಡೆದು, ಶ್ರೋತೃಗಳು ಹಾಸ್ಯದಲ್ಲಿ ನಲಿದಾಡಿದರು.

ಬಹಿರಂಗ ಅಧಿವೇಶನವು ಸಮ್ಮೇಲನಾಧ್ಯಕ್ಷರಾದ ಶ್ರೀ. ಕಲ್ಲೂರ ಕೃಷ್ಣಕುಮಾರರ ಅಧ್ಯಕ್ಷತೆಯಲ್ಲಿ ನಡೆದು, ಕೆಳಗಿನ ಠರಾವುಗಳು ಪಾಸಾದವು.

೧. ನಮ್ಮ ರಾಜ್ಯಕ್ಕೆ ಕರ್ನಾಟಕವೆಂದೇ ಹೆಸರಿರಬೇಕು.

೨. ಮುಂಬಯಿ ಸರಕಾರದವರು ಏರ್ಪಡಿಸುತ್ತಿದ್ದಂತೆ, ನಮ್ಮ ಸರಕಾರದವರೂ ಒಳ್ಳೆಯ ಪುಸ್ತಕಗಳಿಗೆ ಬಹುಮಾನ ಹಾಗೂ ಪ್ರೋತ್ಸಾಹಕ ಪ್ರತಿಫಲವನ್ನು ಕೊಡಬೇಕು.

೩. ನಾಟಕ ಸ್ಪರ್ಧೆ, ಸಣ್ಣಕತೆಗಳ ಸ್ಪರ್ಧೆ, ಪ್ರಬಂಧ ಸ್ಪರ್ಧೆ ಮೊದಲಾದ ಸ್ಪರ್ಧೆಗಳನ್ನು ನಡೆಯಿಸಿಕೊಂಡು, ನಮ್ಮ ಸರಕಾರ ಮುಂದುವರಿಯಬೇಕು.

೪. ಪ್ರತಿವರುಷವೂ ಇಂಥ ಸಮ್ಮೇಲನ ನಡೆಯುವಲಿಕ್ಕೆ ಒಂದು ಪ್ರತ್ಯೇಕ ಸ್ಥಾಯೀ ಸಂಸ್ಥೆಯಿರಬೇಕು. (ಒಂದು ತಾತ್ಪೂರ್ತಿಕ ಸಮಿತಿಯೂ ನಿಯಮಿಸಲ್ಪಟ್ಟಿತು.)

೫. ಇಂಥ ಸಮ್ಮೇಲನಗಳಿಗೆ ಸರಕಾರವು ಹಣ ಸಹಾಯ ಮಾಡಬೇಕು.

೬. ಧಾರವಾಡ ಆಕಾಶವಾಣಿಯವರು ಕವಿಸಮ್ಮೇಲನ, ಸಂದರ್ಶನ ನಡೆಯಿಸುವಂತೆ ಸಣ್ಣಕತೆಗಾರರ ಸಮ್ಮೇಲನ–ಸಂದರ್ಶನಗಳನ್ನೇರ್ಪಡಿಸಬೇಕು.

೭. ವಿಶ್ವವಿದ್ಯಾನಿಲಯದ ಪದವೀಪರೀಕ್ಷೆಗಳಿಗೆ ಸಣ್ಣಕತೆಗಳ ತಂತ್ರದ ಅಭ್ಯಾಸವಿರಬೇಕು.

ಕೊನೆಯಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರು ಸಮ್ಮೇಲನ ಹಾಗೂ ವಿವಿಧಗೋಷ್ಠಿಗಳ ಅಧ್ಯಕ್ಷರ ಆಭಾರವನ್ನಿಸಿ ಪೂಮಾಲೆಗಳನ್ನರ್ಪಿಸಿದರು. ಕಾರ್ಯದರ್ಶಿಗಳಲ್ಲಿ ಒಬ್ಬರಾದ ಶ್ರೀ. ವೀ ಚ ಹಿತ್ತಲಮನಿಯವರು ಎಲ್ಲರ ಆಭಾರವನ್ನಿತ್ತರು. ಕು. ಶಾರದಾ ಮಡಿವಾಳರ ವಂದೇಮಾತರಂ ಗೀತೆಯ ನಂತರ, ಎರಡು ದಿನಗಳಿಂದ ಧಾರವಾಡದ ರಸಿಕ ಸಾಹಿತ್ಯಪ್ರೇಮಿಗಳಿಗೂ, ಬೇರೆ ಬೇರೆ ನಗರಗಳಿಂದ ಬಂದ ಸಣ್ಣಕತೆಗಾರ ಹಾಗೂ ಲಲಿತಪ್ರಬಂಧಕಾರರಿಗೂ ಸಾಹಿತ್ಯದ ಹಬ್ಬದೂಟ ಉಣಬಡಿಸಿದ ಕಾರ್ಯಕ್ರಮವು ಮುಕ್ತಾಯಗೊಂಡಿತು.

ಸಣ್ಣಕತೆಗಾರನ ದರ್ಶನ

ಶ್ರೀ. ರಂ. ಶ್ರೀ. ಮುಗಳಿ ಭಾಷಣ

ಅಧ್ಯಕ್ಷರೆ, ಸೋದರ-ಸೋದರಿಯರೆ,

ತಮ್ಮೆಲ್ಲರೆದುರಿಗೆ ಸಣ್ಣಕತೆಗಾರನ ದರ್ಶನದ ಬಗೆಗೆ ನನ್ನ ನಾಲ್ಕು ವಿಚಾರಗಳನ್ನು ಮಂಡಿಸಲು ಅವಕಾಶವಿತ್ತ ಈ ಸಮ್ಮೇಲನದ ಸಂಚಾಲಕರಿಗೆ ಮೊದಲು ನನ್ನ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಮತ್ತು ನನಗಿತ್ತ ಹದಿನೈದು ನಿಮಿಷಗಳ ಅಲ್ಪಾವಕಾಶದಲ್ಲಿಯೇ ನನಗೆ ಶಕ್ಯವಿದ್ದಷ್ಟು ಹೆಚ್ಚಾಗಿ ಹೇಳಲು ಪ್ರಯತ್ನಿಸುವೆ. ಯಾಕೆಂದರೆ ಸಣ್ಣಕತೆಯ ಮುಖ್ಯ ಲಕ್ಷಣವೇ ಸ್ವಲ್ಪದರಲ್ಲಿ ಸೊಗಸನು ತುಂಬುವುದಾಗಿದೆ. ಆದರೆ ನಾನಿಲ್ಲಿ ಸಣ್ಣಕತೆಯ ಸ್ವರೂಪ ಇಲ್ಲವೆ ಚರಿತ್ರೆಯನ್ನು ಕುರಿತು ಮಾತನಾಡುವುದಿಲ್ಲ. ನನ್ನ ವಿಷಯ "ಸಣ್ಣಕತೆಗಾರನ ದರ್ಶನ".

ಈ 'ದರ್ಶನ'ವೆಂದರೇನು? ಅದರಲ್ಲಿಯೂ ಸಣ್ಣಕತೆಗಾರನಿಗೂ ಒಂದು ದರ್ಶನವುಂಟೆ? ಇದ್ದರೆ ಅದು ಯಾವುದು? — ಎಂಬುದನ್ನು ಕಾಣಬೇಕಾಗಿದೆ. "ದರ್ಶನ"ವೆಂಬ ಶಬ್ದವು ಅನೇಕರಿಗೆ ಅರ್ಥವಾಗದೆ ಹೋಗಬಹುದು. ಅದರ ಸಾಮಾನ್ಯ ಅರ್ಥ: 'ನೋಟ' 'ಕಾಣ್ಕೆ' ಎಂದಾಗಿದೆ. ಅದರ ಅತ್ಯಂತ ಎತ್ತರದ ಅರ್ಥದಲ್ಲಿ ತತ್ತ್ವಜ್ಞಾನವೆಂಬ ಅರ್ಥವೂ ಉಂಟು. ನಮ್ಮಲ್ಲಿ ಷಡ್ದರ್ಶನಗಳಿರುವುದನ್ನು ಇಲ್ಲಿ ನೆನೆಯಬಹುದು.

ಯಾವುದು ಕಣ್ಣಿಗೆ ಕಾಣುವುದೋ ಅದರ ಒಳಗಿನದನ್ನು ಕಾಣುವುದೇ ದರ್ಶನ. ಈ ಅರ್ಥದಲ್ಲಿ ಅದನ್ನು ಇಲ್ಲಿ ಬಳಸಲಾಗಿದೆ. "ಜೀವನ ದರ್ಶನ" ಪಡೆಯಬೇಕಾದರೆ ಎಲ್ಲರೂ ತತ್ತ್ವಜ್ಞಾನಿಗಳೇ ಆಗಬೇಕಾಗಿಲ್ಲ. ಜೀವನದ ಇಂದಿನ ಸ್ವರೂಪವನ್ನು ನೋಡಿ, ಹಿಂದಿನ ಬಗೆಗೆ ವಿಚಾರಿಸಿ, ಮುಂದಿನ ಕನಸು ಕಾಣುವವನು ಇಂಥ ದರ್ಶನ ಪಡೆಯಬಲ್ಲ. ಕಣ್ಣಿಗೆ ಕಾಣುವುದರ ಹಿಂದೆ ಒಂದು ದೊಡ್ಡ ಕಾಲವೇ ಅಡಗಿರುತ್ತದೆ. ಯಾವಾಗ ಮನುಷ್ಯನು ಮೂರೂ ಕಾಲಗಳನ್ನು ಕಾಣಬಲ್ಲನೋ ಆಗ ಅವನೂ ದೊಡ್ಡವನಾಗುತ್ತಾನೆ. ಪ್ರತಿಯೊಂದರಲ್ಲಿಯೂ ತ್ರಿಕಾಲವು ಅಡಗಿರುವುದು ಅದರ ಹಿಂದೆ ನಮ್ಮ ಕಣ್ಣಿಗೆ ಕಾಣದ ಗೂಢವಿರುವುದು. ಅದನ್ನರಿಯಲು ಒಳಗಣ್ಣು ಬೇಕಾಗುತ್ತದೆ. ವಿಜ್ಞಾನಿಯಾದವನು ತನ್ನ ದೂರದರ್ಶಕಯಂತ್ರದ ಸಹಾಯದಿಂದ ನಮ್ಮ ಹೊರಗಣ್ಣಿಗೆ ಕಾಣದುದನ್ನು ಅರಿಯುತ್ತಾನೆ. ಹೀಗೆ ಹೊರಗಿನಿಂದ ಒಳಗಡೆ ತಿರುಗುವುದೇ ದರ್ಶನವಾಗಿದೆ. ದರ್ಶನವು ಕೇವಲ ಗ್ರಂಥಗಳನ್ನೋದಿದರೆ ಬರುವುದಲ್ಲ. ಕಾರ್ಲ್‌ಮಾರ್ಕ್ಸ್–ಗಾಂಧೀಜಿಯವರ ವಿಚಾರಗಳನ್ನು ಒಪ್ಪಿಕೊಂಡರೆ ದರ್ಶನವಾಗಲಿಲ್ಲ. ನಮ್ಮ ಬುದ್ಧಿಗೆ ಒಪ್ಪಿತವಾದಾಕ್ಷಣ ಯಾವುದೂ ದರ್ಶನವಾಗಲಾರದು. ನನ್ನ ನಿತ್ಯಜೀವನ, ಸಮಗ್ರಜೀವನಕ್ಕೆ ಸಂಬಂಧಿಸಿದ್ದೇ ದರ್ಶನ. ಇನ್ನ ದರ್ಶನ ಅಪೂರ್ಣವಾಗಿರಬಹುದಾದರೂ ಅದು ನನ್ನದೇ. ಮತ್ತು ಬಹು ಮುಖ್ಯವಾದುದು.

ಈ ದೃಷ್ಟಿಯಿಂದ ಎಲ್ಲರಿಗೂ ದರ್ಶನವಿರುವಂತೆ ಕತೆಗಾರರಿಗೂ ಸಣ್ಣಕತೆಗಾರರಿಗೂ ದರ್ಶನ ಉಂಟು. ಕಿರಿದರಲ್ಲಿ ಹಿರಿದನ್ನು ಸಾಮಾನ್ಯದಲ್ಲಿ ಅಸಾಮಾನ್ಯವಾದುದನ್ನು ಕಾಣಬೇಕೆಂದು ಹೇಳುತ್ತಾ ಹೀಗೆ ಸಣ್ಣಕತೆಗಾರರಿಗೂ ಅವರ ವ್ಯಕ್ತಿವಿಶಿಷ್ಟವಾದ ದರ್ಶನವಿರುತ್ತದೆ.

ಸಣ್ಣಕತೆ ಪಾಶ್ಚಾತ್ಯರಿಂದ ಬಂದುದು ನಿಜ. ಅವರ ಪ್ರಭಾವ ದಿಂದ ಕೂಡಿದ್ದೂ ನಿಜ. ಆದರೆ ಸಣ್ಣಕತೆಗಾರನ ದರ್ಶನವು ಮಾತ್ರ ಆತನದೇ ಆಗಿರುತ್ತದೆ. ಅದರ ರೂಪ ಹೊರಗಿನಿಂದ ಬಂದಿರಬಹುದು ಪರಕೀಯವಾದುದನ್ನೆ ನಮ್ಮದನ್ನಾಗಿ ಮಾಡಿಕೊಂಡು ಬಹಳದಿನ ಬಾಳಲಾರೆವು. ನಮ್ಮ ಅನುಭವ, ನಮ್ಮ ತಿಳಿವಳಿಕೆಯೆಂಬುದೊಂದು ಇರಲೇಬೇಕು.

ಇಂದಿನ ಸಣ್ಣಕತೆಯು ಹಿಂದಿನ—ರಾಮಾಯಣ ಮಹಾ. ಭಾರತ ಕಾಲದಲ್ಲಿಯಕಿಂತ ಬಹಳಮಟ್ಟಿಗೆ ಭಿನ್ನವಾದ ದೃಷ್ಟಿಯನ್ನು ಪಡೆದಿದೆ. ರಾಮಾಯಣ, ಭಾರತಗಳಿಂದ ಕತೆಗಳನ್ನಾಯ್ದುಕೊಂಡು ಅಲ್ಲಿಯ ಪಾತ್ರ—ಅಲ್ಲಿಯ ಸನ್ನಿವೇಶಗಳ ಮುಖಾಂತರ ತಮ ವೈಶಿಷ್ಟ್ಯವನ್ನು ವ್ಯಕ್ತಗೊಳಿಸುತ್ತಿದ್ದರು. ಆದರೆ ಇಂದಿನ ಸ್ಥಿತಿಯು ಬೇರೆಯಾಗಿದೆ. ಕತೆಗಾರನು ತನ್ನ ವೈಶಿಷ್ಟ್ಯವನ್ನು ತನ್ನದೇ ಆದ ರೀತಿಯಲ್ಲಿ ಹೇಳಬಯಸುತ್ತಾನೆ. ಆತನು ಒಬ್ಬ ಹುಚ್ಚನ ಹೆಸ್ಸನ್ನು ಹತ್ತಿ ಹೋಗಿ ಅವನಂತೆಯೇ ವರ್ತಿಸಿ ಅವನನ್ನು ಅರಿಯಬಯಸುತ್ತಾನೆ. ಆತನು ವ್ಯಕ್ತಿಜೀವನದ ನಿಗೂಢರಹಸ್ಯವನ್ನು ಅಭೇದ್ಯಾರ್ಥವನ್ನು ಸ್ವತಃ ಅರಿಯಲು ಪ್ರಯತ್ನಿಸುತ್ತಾನೆ.

ಒಬ್ಬ ಮನುಷ್ಯ ಸ್ಮಶಾನದಲ್ಲಿ ಮಲಗುತ್ತಾನೆಂದು ಇಟ್ಟು ಕೊಳ್ಳಿರಿ. ಪರರ ದೃಷ್ಟಿಯಲ್ಲಿ ಆತ ಮೂರ್ಖನಾಗಿರಬಹುದು. ಆದರೆ ಯಾವ ಸ್ಥಳದಲ್ಲಿ ಇತರರು ಮಧ್ಯರಾತ್ರಿಯಲ್ಲಿ ಸುಳಿಯಲೂ ಅಂಜುತ್ತಾರೆಯೋ ಅಂಥಲ್ಲಿ ಈ ಮನುಷ್ಯ ನಿರ್ಭೀತನಾಗಿ ಮಲಗುತ್ತಿದ್ದನಲ್ಲ ಇದರ ಅರ್ಥವನು? ಈ ಶಕ್ತಿ ಆತನಿಗೆ ಬಂದುದು ಹೇಗೆ? ಇದನು ಸಣ್ಣಕತೆಗಾರ ವಿಚಾರಿಸುತ್ತಾನೆ. ಪ್ರತಿಯೊಂದು ವ್ಯಕ್ತಿಯಲ್ಲಿಯೂ ಅವನದೇ ಆದ ವಿಶ್ವವು ತುಂಬಿದ್ದು ಅದನ್ನು ಕತೆಗಾರನು ಹತ್ತೂ ಕಡೆಯಿಂದ ನೋಡಿಕೊಂಡು ಜೀವನಾನುಭವವನ್ನು ವಿಸ್ತಾರಮಾಡಿಕೊಳ್ಳುತ್ತಾನೆ. ಆಳವಾಗಿಸುತ್ತಾನೆ.

ಇಂದಿನ ಸಣ್ಣಕತೆಗಾರರ ವಿರುದ್ಧ ಆರೋಪನೆಂದರೆ, ಅವರು ಬರಿ ಪ್ರಣಯದ ಕತೆಗಳನ್ನು ಬರೆಯುತ್ತಾರೆಂಬುದು. ಪ್ರಣಯ—ಪ್ರಣಯಭಂಗ, ಭಾವೀಬೀಳುವುದು ಇವಿಷ್ಟರಾಚೆಗೆ ಹೋಗುವುದಿಲ್ಲ ಆದರೆ ಇದು ಸಂಪೂರ್ಣ ಸತ್ಯವಲ್ಲ. ಅನೇಕ ತರದ ನವೀನ ಪ್ರಶ್ನೆ ಕಂಡುಬರುತ್ತಿದೆ. ಆದರೂ ಅದಿನ್ನೂ ಬೆಳೆಯಬೇಕಾಗಿದೆ.

ಕತೆ ಬರೆಯುವುದೇಕೆ? ಬರಿಹೆಸರಿಗಾಗಿಯಲ್ಲ; ನಾಕಾರು ಪುಸ್ತಕ ಬರೆದವರು "ಇತ್ತೀಚೆಗೆ ಮತ್ತೇನು ಬರೆದಿಲ್ಲನಲ್ಲ" ಎಂದು ಅನ್ನಿಸಿ. ಕೊಳ್ಳಬೇಕಾಗುವುದೆಂದು ಬರೆಯುತ್ತಾರೆ. ಅಂದರೆ ತಲೆಯಲ್ಲಿ ಏನೂ ತುರಿದಿದ್ದರೂ ಸರ್ವಸ್ವವುಂಟೆಂದು ಭಾವಿಸುವ ಸ್ಥಿತಿಗೆ ಬಂದುತ್ತಾರೆ. ಈ ಸ್ಥಿತಿ ಹಿತಕರವಲ್ಲ. ಅಧ್ಯಾಸ, ಸಂಶೋಧನೆ-ಅನುಭವ ವಿಸ್ತಾರ. ಗಳು ಅತ್ಯಾವಶ್ಯಕವಾಗಿವೆ. ಆಳವಾದ ಅನುಭವ, ಆ ಅನುಭವಕ್ಕಾಗಿ ಪದುವ ಪಾಡನ್ನು ಕಾಣಬೇಕಾದರೆ ಶ್ರೀ. ಜಿ. ಪಿ. ರಾಜರತ್ನಂ ಅವರ ಉಪ್ಪುಡಕ ರತ್ನನ ಪದಗಳನ್ನು ನೋಡಬೇಕು ಹೆಂಡಕುಡುಕರ ಸಹವಾಸದಲ್ಲಿ ಅವರಿಂದ ಏಟು ತಿಂದು ಈ ಪದ್ಯಗಳನ್ನು ರಾಜರತ್ನಂ ಬರೆದಿದ್ದಾರೆ. ಹೀಗೆ ಸಂಕಟಗಳನ್ನು ಎದುರಿಸಲು ಸಿದ್ಧರಾಗಿ ಜೀವನದ ವಿವಿಧ, ಗೂಢ ಪರಿಗಳನ್ನು ಅರಿವ ಸಾಹಸವನ್ನು ಕತೆಗಾರನು ಕೈಕೊಳ್ಳಬೇಕಾಗುತ್ತದೆ. ಅನಂತರ ಆತ ತನ್ನ ಕೃತಿರಚನೆಗೆ ಕೈಹಾಕಬೇಕು.

ನಮ್ಮ ಸಾಹಿತ್ಯದಲ್ಲಿ ಇಲ್ಲದ ವಿಷಯಗಳ ಬಗೆಗೆ ಬರೆಯ-ಬೇಕೆಂದಾಗ ಆ ವಿಷಯಗಳ ಬಗೆಗೆ ಸರಿಯಾಗಿ ವಿಚಾರಿಸಬೇಕು. ಆ ವಿಷಯದ ಕಡೆಗೆ ನಮ್ಮ ಮನಸ್ಸು ಹರಿದಿದೆಯೆ? ತಿಳಿಯಬೇಕು. ದೀನ ದಲಿತರ ಬಗೆಗೆ ಬರೆಯಬೇಕೆಂದಾಗ ಅವರ ಬಗೆಗೆ ನಮ್ಮ ಅಂತಃಕರಣ ಕರಗುತ್ತಿದೆಯೆ?—ಎಂದು ವಿಚಾರಿಸಬೇಕು. ನಮಗಿಂದು ಒಂದು ಹೊಸ ಮಾನವತಾದೃಷ್ಟಿ ಬರಬೇಕಾಗಿದೆ. ಅದಕ್ಕೊಂದು ತಪಸ್ಸು ಬೇಕು. ಈ ವಾಙ್ಮಯತಪಸ್ಸು ಮೂಲೆಯಲ್ಲಿ ಕುಳಿತು ಮಾಡುವದಲ್ಲ; ಜೀವನದ ಮೂಲೆ ಮೂಲೆಯಲ್ಲಿ ಹೋಗಿ ನೋಡ ಬೇಕು. ರಾಡಿಯಲ್ಲಿಯೂ ಮುಳುಗಿ ಕಾಣಬೇಕು. ಈ ಅನುಭವ-ವನ್ನೂ ಸಂಗ್ರಹವಾಗಿ ಸಜೀವವಾಗಿ ಹೇಳಬೇಕು. ಸೂಚ್ಯವಾಗಿ ಹೇಳ-ಬೇಕು. ಆದರೆ ಗೂಢವಾಗಿಯೆಂದು ಅರ್ಥವಲ್ಲ. ಕೋಲಂಬಸನಂತೆ ಕತೆಗಾರರೂ ತನ್ನ ಕಣ್ಣಮುಂದಿರುವ—ತನ್ನ ಮನೆಯಲ್ಲಿಯ ಜನ ಮನವನ್ನೂ ಅರಿಯಬೇಕಾಗುತ್ತದೆ. ಅದನ್ನು ಸಾಧಿಸುವುದು ಹೇಗೆ? ಹತ್ತಿರವಿದ್ದ ಮಾತ್ರಕ್ಕೆ ಏನೂ ತಿಳಿಯಲಾರದು. ಗಂಡ-ಹೆಂಡರಿಗೇ ಪರಸ್ಪರ ಮನಸ್ಸು ಅರ್ಥವಾಗಿರುವುದಿಲ್ಲ.

ಅದಕ್ಕೆ ಹಾದಿಗಳು ಉಂಟು. ಬುದ್ಧಿ-ದೈವಿಕ ಶಕ್ತಿ, ಹಾಗೂ ವಿವೇಕದಿಂದ ತಿಳಿದುಕೊಳ್ಳಬೇಕಾಗುತ್ತದೆ. ಬಿಡಿಬಿಡಿಯಾಗಿರುವು-ದರಲ್ಲಿ ಸೂಕ್ಷ್ಮದರ್ಶಿಯಾಗಿ ವಿಚಾರಿಸಬೇಕು. ರವಿ ಕಾಣದುದನ್ನು ಕವಿ ಕಾಣುವನೆಂದು ಹೇಳುತ್ತಾರೆ. ಅಂದರೆ ಕೆಲವರು ಜೇಷ್ಟೆಗಾಗಿ ಕತ್ತಲನ್ನು ಕಾಣುವನೆಂದೂ ಹೇಳುವರು. ಅದೂ ನಿಜ. ಕತ್ತಲನ್ನೂ ಕಂಡು ಅರಿಯಬೇಕಾಗಿದೆ. ಕತ್ತಲಲ್ಲಿಯೂ ನಕ್ಷತ್ರ ಪುಂಜಗಳಿರುತ್ತವೆ. ಆ ಕತ್ತಲನ್ನೂ, ಆತ ಅರಿಯಬೇಕು ಕತ್ತಲಿನ ಸತ್ಯವನ್ನು ಅದರ ಅಸಾಮಾನ್ಯತೆಯನ್ನು ಆತ ಅರ್ಥ ಮಾಡಿಕೊಳ್ಳಬೇಕು.

ಇನ್ನೊಂದು ಸಮಸ್ಯೆಯೆಂದರೆ ಜೀವನದ ಸಂಪೂರ್ಣ ಸತ್ಯ-ವನ್ನು ಕಾಣುವುದು ಸಾಧ್ಯವೇ ಎಂಬುದು. ಬಾಳು ಬಹಳ ಗೂಢ-ವಾಗಿದೆ. ಆದರೂ ಪ್ರಯತ್ನಪಟ್ಟರೆ—ಪ್ರತಿನಿತ್ಯ ಹೊಸಗಣ್ಣಿನಿಂದ ಜೀವನವನ್ನು ನೋಡಬಲ್ಲೆನಾದರೆ ಹೊಸದನ್ನು ಕಡೇಕಾಣಲು ಸಾಧ್ಯವಿದೆ. ಈ ಧೈರ್ಯದಿಂದ ಸಣ್ಣ ಕತೆಗಾರರು ಮುನ್ನುಗ್ಗಬೇಕು.

ನಾನು ಸಣ್ಣಕತೆಗಾರನಾಗಬಯಸಿದರೆ ನಾನೇನು ಮಾಡ-ಬೇಕೆಂದು ಬಯಸುವೆನು ಅದನ್ನಿಲ್ಲಿ ಹೇಳಬಯಸುತ್ತೇನೆ:

ಇವರಲ್ಲಿ ಎರಡು ಮಹತ್ವದ ಅಂಶಗಳಿವೆ:

(೧) ಇಂದು ಬರೆಯುವವನಿಗೆ ಬರೆವ ಅಥವಾ ಬಿಡುವ ಸ್ವಾತಂತ್ರ್ಯವಿದೆ.

(೨) ನಾವು ಜೀವನದಲ್ಲಿ ಕಾಣುವುದನ್ನು ಇಂದು ಚಿತ್ರಿಸ-ಬಹುದು. ಬಾಳಿನ ಕೊಳಚೆಯನ್ನು ಚಿತ್ರಿಸಬಹುದು. ಕಂಡಾಲೆ ಚಿತ್ರಿಸುವ ಈ ದೃಷ್ಟಿಯನ್ನು ವಾಸ್ತವತೆಯೆಂದು ಕರೆಯಲಾಗುತ್ತಿದೆ.

ಸ್ವಾತಂತ್ರ್ಯ ಹಾಗೂ ವಾಸ್ತವತೆ ಈ ಎರಡು ತತ್ತ್ವಗಳ ಆಧಾರದ ಮೇಲೆ ಆಧುನಿಕ ಸಾಹಿತ್ಯ ನಿಂತಿದೆ. ಜೀವನದಲ್ಲಿ ಕೊಳಚೆಯುಂಟು. ದುಃಖವುಂಟು. ವಿಕೃತಿಯುಂಟು. ಅಶ್ಲೀಲ-ಅನೀತಿಗಳು ತುಂಬಿವೆ. ಇವನ್ನು ಚಿತ್ರಿಸಬೇಡವೆ? ಎಂದರೆ ಅವನ್ನೂ ಚಿತ್ರಿಸಬಹುದು; ಆದರೆ ಜೀವನ ಹೀಗಿರುವುದರ ಜೊತೆಗೆ, ಇನ್ನು ಮುಂದೆಯೂ ಇದಕ್ಕೂ ಹೆಚ್ಚಿಗೆ ಉಂಟು. ಅದನ್ನೂ ಅರಿಯಬೇಡವೆ? ಬಾಳು ಬರಿ ದುಃಖಮಯವೆ? ಅದರಲ್ಲಿ ಗಟ್ಟಿತನವಿಲ್ಲವೆ? ಒಬ್ಬ ಬಡವನಿದ್ದಾನೆ ನಿಜ. ಅವನಿಗೆ ಸಂಕಟ-ದುಃಖಗಳು ಹೆಚ್ಚು ಎಂಬುದೂ ನಿಜ. ಆದರೆ ಆತ ಅದರಲ್ಲಿಯೇ ಗಟ್ಟಿಯಾಗಿ ನಿಂತ ಬಾಳಲು ಧಡಪಡಿಸುತ್ತಾನಲ್ಲ? ಈ ಸ್ಥೈರ್ಯದ ಮೂಲವೇನು? ಅವನಿಗೆ ಅದೆಲ್ಲಿಂದ ಬರುತ್ತದೆ? ಅದನ್ನು ಕಾಣುವ ಕಣ್ಣು ಸಣ್ಣಕತೆಗಾರರಿಗೆ ಬರಬೇಕಾಗಿದೆ. ವೇಶ್ಯೆಯಲ್ಲಿ ಕೂಡ ಅವಳದೇ ಆದ ಶೀಲದ ಕಲ್ಪನೆ ಇರುತ್ತದೆ. ಅದನ್ನೇಕೆ ಕಾಣಬಾರದು? ಬೆಳೆಯುತ್ತಿರುವ ಹೊಸ ಕರ್ನಾಟಕದ ತರುಣ-ತರುಣಿಯರಲ್ಲಿ ಈ ಆರೋಗ್ಯಕರ ದೃಷ್ಟಿಯೂ ಬೆಳೆದು ಬರಬೇಕಾಗಿದೆ. ನರಕವನ್ನು ಕಾಣುವಾಗ ನರಕದ ಸವಿ ಸವಿಯಲು ಬಯಸಿ ಅಲ್ಲಿಯೇ ಉಳಿಯದೆ, ಅದರಿಂದ ಕಡೆಗಾಣಿ ಸ್ವರ್ಗವನ್ನು ಕಾಣುವ ಕನಸಿನ ಕಣ್ಣು ಬೇಕು ಹೀಗೆ ಅದಕ್ಕೆ—ವಾಸ್ತವತೆಗಳ ಸಂಗಮದ ಕ್ರಾಂತದರ್ಶನ ಸಣ್ಣ ಕತೆಗಾರರಿಗೆ ಬರಲಿ ಎಂದು ಹಾರೈಸುವೆ.

ಮಹಿಳೆಯರು ಬರೆದ ಸಣ್ಣಕತೆಗಳು

ಶಾಂತಾದೇವಿ ಮಾಳವಾಡ, ಧಾರವಾಡ

ಹೊಸಗನ್ನಡ ಸಾಹಿತ್ಯದ ಅರುಣೋದಯದ ಕಾಲದಲ್ಲಿ ಸಣ್ಣಕತೆಗಳು ಹುಲುಸಾಗಿಯೇ ಬೆಳೆದುಬಂದುವು. ಆ ಕತೆಗಳಲ್ಲಿ ಜೀವನದ ನಲಿವು, ನೋವು ಲಘುಸನ್ನಿವೇಶಗಳು, ನಿತ್ಯಜೀವನದ ಸಾಮಾನ್ಯ ತೊಡರುಗಳು, ದಾಂಪತ್ಯ ಜೀವನದ ಸರಸ—ವಿರಸಗಳು ರೂಪುಗೊಂಡವು. ಹೆಣ್ಣಿನ ಜೀವನವನ್ನೂ ಅವರ ಸಮಸ್ಯೆಗಳನ್ನೂ ಪುರುಷರ ದೃಷ್ಟಿಯಿಂದ ವಿವೇಚಿಸುವುದೂ ಆಗ ಅನಿವಾರ್ಯವಾಗಿತ್ತು. ಅನೇಕರು ಹೆಣ್ಣಿನ ಜೀವನವನ್ನು ಸಹಾನುಭೂತಿಯಿಂದ ಚಿತ್ರಿಸಿದ್ದೂ ಉಂಟು.

ಬರುಬರುತ್ತ ಮಹಿಳಾಲೇಖಿಕೆಯರು ಮುಂದೆ ಬರಹತ್ತಿದರು. ಆರಂಭದಲ್ಲಿ ಮಹಿಳೆಯರೆಂಬ ಕಾರಣಕ್ಕಾಗಿ ಅವರ ಕತೆಗಳಿಗೆ ಪ್ರೋತ್ಸಾಹ ದೊರೆಯಿತು. ಆದರೆ ಕೆಲಕಾಲದ ನಂತರ ಶ್ರೇಷ್ಠ ಕತೆಗಾರ್ತಿಯರು ಆಧುನಿಕ ಸಾಹಿತ್ಯದ ಕಣಜವನ್ನು ತುಂಬಹತ್ತಿದರು ಹೆಣ್ಣಿನ ದೃಷ್ಟಿಯಿಂದ, ಅನುಭವದಿಂದ ಬಂದ ಕತೆಗಳಿಗೆ ವಿಶಿಷ್ಟ ಸ್ಥಾನವಿದ್ದೇಯಿದೆ. ಹೆಣ್ಣಿನ ಆತ-ಆಕಾಂಕ್ಷೆ ನಲಿವು-ನೋವು, ಅವರ ವಿಶಿಷ್ಟ ಸಮಸ್ಯೆಗಳು, ಪ್ರಗತಿಪಥದಲ್ಲಿ ಸಾಗಿದ ಸಾಮಾಜಿಕ ಜೀವನದ ಎಡರು-ತೊಡರುಗಳು, ಹೆಣ್ಣಿನ ಹಿರಿಮೆ, ಸ್ಥಾನ-ಮಾನ ಇತ್ಯಾದಿ ವಿಷಯಗಳು ಮಹಿಳೆಯರು ಬರೆದ ಸಣ್ಣಕತೆಗಳಲ್ಲಿ ರೂಪುಗೊಂಡಿವೆ. ಬಾಲ್ಯ ಜೀವನದ ಉತ್ಸಾಹ, ಯುವತಿಯ ಕಲ್ಪನಾಲೋಕದ ಚಿತ್ರಗಳು—ಪತ್ನಿಯ ಮನದಾಸೆ, ತಾಯಿಯ ವಾತ್ಸಲ್ಯ, ಅತ್ತೆಯಾಗಿ ಒಡೆತನ ನಡೆಸುವ ಅಪೇಕ್ಷೆ, ವಿಧವೆಯರ ಗೋಳು, ಪರಿತ್ಯಕ್ತ ಪತ್ನಿಯ ದೌರ್ಭಾಗ್ಯ, ಸಾಮಾಜಿಕ-ಧಾರ್ಮಿಕ ಜೀವನದಲ್ಲಿಯ ಲೋಪದೋಷಗಳಿಗೆ ಮಹಿಳೆಯರು ಆಹುತಿಯಾಗುವ ಸನ್ನಿವೇಶ ಇವುಗಳನ್ನು ಮಹಿಳೆಯರು ಬರೆದ ಸಣ್ಣಕತೆಗಳಲ್ಲಿ ನಿರೂಪಿಸಲಾಗಿದೆ. ಸೂಕ್ಷ್ಮಕತೆಗಳಲ್ಲಿ ಸಹಜ ಚಾತುರ್ಯವನ್ನು ಪಡೆದ ಮಹಿಳೆಯರಿಗೆ ಸಣ್ಣಕತೆಯ ತಂತ್ರ ಹೆಚ್ಚಾಗಿ ಒಗ್ಗುವಂತೆಯೂ ತೋರುತ್ತದೆ.

೧೯೨೯ರಲ್ಲಿ ಆರಂಭವಾದ ಅ. ನ. ಕೃಷ್ಣರಾಯರ ಸಂಪಾದಕತ್ವದಲ್ಲಿ ಹೊರಡುತ್ತಿದ್ದ 'ಕಥಾಂಜಲಿ' ಮಾಸಪತ್ರಿಕೆಯಿಂದ ಸಣ್ಣಕತೆಗಳ ಪ್ರಚಾರ, ಬೆಳವಣಿಗೆ ಹೆಚ್ಚಾಯಿತೆನ್ನಬಹುದು. ೧೯೩೦ರಲ್ಲಿ ಮಾಸ್ತಿಯವರ "ಕೆಲವು ಸಣ್ಣಕತೆಗಳು" ಬೆಳಕಿಗೆ ಬಂದನಂತರ ಸಣ್ಣಕತೆಗಳ ಬೆಳವಣಿಗೆ ವಿಪುಲವಾಗಿಯೇ ನಡೆಯಿತಾದರೂ, ಮಹಿಳೆಯರು ಕಥಾಪ್ರಪಂಚಕ್ಕೆ ಕಾಲಿರಿಸಿದ್ದು ೧೯೩೦ರ ನಂತರ ಎಂದು ತೋರುತ್ತದೆ. "ಕಥಾಂಜಲಿ" ಪತ್ರಿಕೆಯಲ್ಲಿ ಮೊದಲು ಪ್ರಕಟವಾದ ಶ್ರೀಮತಿ ವಾಣಿಯವರ 'ನನ್ಮನೆ ವಾರದ ಹುಡುಗ' ಎಂಬ ಕತೆ ಸುಂದರವಾಗಿದೆ. ಇಂಟರ ಕ್ಲಾಸಿನಲ್ಲಿ ಓದುತ್ತಿದ್ದ ಬಡ ವಿದ್ಯಾರ್ಥಿ ವಾರದ ಮನೆಗಾಗಿ ಕೇಳಲು ಬಂದಾಗ ರುಕ್ಮಿಣಿಯ ತಂದೆ ಕೆಲಸದ ಸಲುವಾಗಿ ಅವಸರದಿಂದ ಹೊರಗೆ ಹೊರಟಿರುತ್ತಾರೆ. ವಾರದ ಹುಡುಗ ಅನಂತನಿಗೆ ಮತ್ತೊಮ್ಮೆ ತಮ್ಮನ್ನು ಕಾಣಲು ಹೇಳುತ್ತಾರೆ. ಪರೀಕ್ಷೆ ಹತ್ತಿರ ಬಂದಿದೆ ಹೇಗಾದರೂ ಮಾಡಿ ವಾರದಲ್ಲಿ ಒಂದು ದಿನ ಕೊಡಬೇಕೆಂದು ಬಹು ದೈನ್ಯದಿಂದ ಕೇಳಿದ. "ಅನಂತನ ಧ್ವನಿಯನ್ನು ಕೇಳಿ ಮನಸ್ಸಿಗೆ ಹೇಗೋ ಆಗುವುದು. ಕತ್ತೆತ್ತಿ ನೋಡಿದೆ. ಹುಡುಗ ಒಳ್ಳೆ ಲಕ್ಷಣವಾಗಿದ್ದ. ಎತ್ತರವಾದ ಹಣೆ, ದೊಡ್ಡದಾದ ಕಣ್ಣುಗಳು ಮುಖದ ದೈನ್ಯವನ್ನು ಕಂಡು ಅಯ್ಯೋ, ಎನ್ನಿಸಿತು. ಒಂದು ಹಿಡಿ ಅನ್ನಕ್ಕಾಗಿ ಅಳುದ್ದ ದೇಹವನ್ನು ಗೇಣುದ್ದ ಮಾಡಿಕೊಂಡು ಕೇಳಬೇಕಾದರೆ, ಎಷ್ಟು ಕಷ್ಟವಿರಬಹುದು" ಎಂದು ಹೇಳುವ ಚಿಕ್ಕ ಬಾಲಿಕೆ, ರುಕ್ಮಿಣಿಯ ಹೃದಯವೈಶಾಲ್ಯ ಹಿರಿದಾಗಿದೆ. ಮುಂದೆ ರುಕ್ಮಿಣಿಯ ಸಹಾನುಭೂತಿಯಿಂದ, ಅವಳ ತಂದೆಯ ಕೃಪೆಯಿಂದ ವಾರದ ಮನೆ ಅನಂತ

ಮನೆ ಹುಡುಗನಂತೇ ಅವರ ಮನೆಯಲ್ಲಿದ್ದು ಕಲಿತು ಡಾಕ್ಟರನಾಗುತ್ತಾನೆ. ರುಕ್ಮಿಣಿಯ ಮಮತೆಯ ಕುರುಡೆಂದು ಅನಂತನು ತನ್ನ ಮಗಳಿಗೆ ರುಕ್ಮಿಯೆಂದೇ ಹೆಸರಿಟ್ಟು, ಅವಳ ಬಗೆಗೆ ತನ್ನ ಕೃತಜ್ಞತೆಯನ್ನು ವ್ಯಕ್ತಪಡಿಸಿದ. ಇದಿಷ್ಟು ಶ್ರೀಮತಿ ವಾಣಿಯವರ ಕತೆಯ ವಸ್ತುವಾಗಿದೆ. ಅದನ್ನು ನಿರೂಪಿಸುವಲ್ಲಿ ಕತೆಯೂ ಮೈವೆತ್ತು ಬಂದಿದೆ. ಈ ರೀತಿಯ ಕತೆಗಳನ್ನು ೪-೬ ಜನ ಮಹಿಳೆಯರು ಕಥಾಂಜಲಿಯಲ್ಲಿ ಬರೆದಿದ್ದಾರೆ. "ಕಾಮನ ಬಿಲ್ಲು" ಎಂಬ ಸಣ್ಣ ಕತೆಗಳ ದೊಡ್ಡ ಸಂಗ್ರಹದಲ್ಲಿ ಮಹಿಳೆಯರ ಕತೆಗಳಿಗೆ ಸ್ಥಾನ ದೊರೆಯದೇ ಹೋಗಿದೆ. "ನವಿಲುಗರಿ" ಯಲ್ಲಿಯೂ ಮಹಿಳೆಯರ ಕತೆಗಳಿಗೆ ಸ್ಥಾನವಿಲ್ಲದಾಗಿದೆ.

ಉತ್ತರ ಕರ್ನಾಟಕದ ಹೆಣ್ಣುಮಕ್ಕಳ ಮೊದಲನೆಯ ಕಥಾಸಂಗ್ರಹವೆಂದರೆ ದಿವಂಗತ ಶ್ಯಾಮಲಾದೇವಿಯವರ "ಹೂಬಿಸಿಲು" ಅದು ೧೯೩೬ರಲ್ಲಿ ಪ್ರಕಟವಾಗಿದೆ. ಈ ಸಂಗ್ರಹದ ಕತೆಗಳನ್ನು "ಜೀವಂತ ಭಾಷೆಯಲ್ಲಿ ಬರೆದಿರುವರು." ಎಂದಿದ್ದಾರೆ ಮುನ್ನುಡಿಕಾರರು. ಈ ಸಂಗ್ರಹದಲ್ಲಿಯ ೧೦ ಕತೆಗಳಲ್ಲಿ ಹೆಣ್ಣಿನ ವಿವಿಧ ಬಗೆಯ ಜೀವನವನ್ನೂ, ಬಾಲ್ಯದ ಹುಡುಗಾಟವನ್ನೂ, ಸಾವಿನ ಕರಾಳಛಾಯೆಯನ್ನೂ ಕಾಣಬಹುದಾಗಿದೆ. "ನಡೆದು ಬಂದ ಲಕ್ಷ್ಮಿ" ಕತೆಯಲ್ಲಿ ಬ್ಯಾಡರ ದ್ಯಾಮಕ್ಕ ತನ್ನ ಮಗನಿಗೆ ಒಲಿದವಳಿಗಾಗಿ ಮಾಡುವ ತ್ಯಾಗ, ತೋರುವ ವಾತ್ಸಲ್ಯ ಹೆಣ್ಣಿನ ಹಿರಿಮೆಯ ಗುರುತಾಗಿ, ಎಂದೆಂದಿಗೂ ಉಳಿಯಬಲ್ಲ ಅಂಶಗಳಾಗಿವೆ.

೧೯೩೮ರಲ್ಲಿ ಕನ್ನಡ ನಾಡಿನ ಎಲ್ಲ ಭಾಗಗಳ ಶ್ರೇಷ್ಠ ಕತೆಗಾರ್ತಿಯರ ಕಥಾಸಂಗ್ರಹ "ರಂಗವಲ್ಲಿ" ಎಂಬುದನ್ನು ಮನೋಹರ ಗ್ರಂಥ ಭಾಂಡಾರದವರು ಪ್ರಕಟಿಸಿದ್ದಾರೆ. ೧೯೩೯ರಲ್ಲಿ ದಿವಂಗತ ಗೌರಮ್ಮನವರ ಕಥಾಸಂಗ್ರಹ "ಕಂಬನಿ" ಪ್ರಕಟವಾಯಿತು. ಗೌರಮ್ಮನವರ "ಎಲ್ಲ ಕತೆಗಳ ನಿಜವಾದ ವೈಲಕ್ಷಣ್ಯವೆಂದರೆ, ಮಾನವ ವ್ಯಾಪಾರಗಳ ಹೇಳಿಕೆ" ಎಂದು ಮುನ್ನುಡಿಕಾರರಾದ ಬೇಂದ್ರೆಯವರು ಹೇಳಿದ್ದಾರೆ. ಈ ಸಂಗ್ರಹದ ೧೨ ಕತೆಗಳಲ್ಲಿ "ಮನುವಿನ ರಾಣಿ" ಹೃದಯಂಗಮವಾಗಿರುವುದನ್ನು ವಿಮರ್ಶಕರೂ ಒಪ್ಪಿದ್ದಾರೆ. ಸೂಳೆಯ ಮಗಳಾದ ರಾಜಮ್ಮ ಅಂಥ ವಾತಾವರಣದಲ್ಲಿ ಬೆಳೆದರೂ, ಸೂಳೆಯರಿಂದ ಹೃದಯವಿಚಾರದೆಂದು ತಾಯಿ ಪಾಠ ಹೇಳಿದರೂ ಕೇಳದೆ, ತನ್ನ ಒಲುಮೆಯ ಮನುವಿಗೆ ತನು, ಮನ, ಧನದಿಂದ ಸೇವೆ ಸಲ್ಲಿಸುತ್ತಾಳೆ. ಅವನಿಗಾಗಿ ಆತ್ಮಾರ್ಪಣೆಯನ್ನು ಮಾಡುತ್ತಾಳೆ. ೧೯೪೧ರಲ್ಲಿ "ಅರತಿ" ಎಂಬ ವಿವಿಧ ಲೇಖಿಕೆಯರ ಕಥಾಸಂಗ್ರಹವೂ ಬೆಳಕಿಗೆ ಬಂದಿತು. ಆ ಸಂಗ್ರಹದಲ್ಲಿಯ "ವೇಣೀಸಂಹಾರ" ಎಂಬ ದೇವಾಂಗನಾ ಶಾಸ್ತ್ರಿಯವರು ಬರೆದ ಕತೆ ಹೃದಯಸ್ಪರ್ಶಿಯಾಗಿದೆ. ಅದರಲ್ಲಿ ಹಿಂದೂ ಸಮಾಜದ ವಿಧವೆಯರ ಬಗೆಗೆ ತೋರುವ ಕ್ರೌರ್ಯವನ್ನು ತೋರಿಸಿದ್ದಾರೆ. ಕತೆಯ ಮುನ್ನೋಟದಲ್ಲಿ "ತಾವು ನುಡಿದುದೇ ಕತೆಯಾಗಿರುವ ಹೆಣ್ಣಿನ ಕೈಗೂ ಈಗಲೀಗ ಬಾಯಿ ಬಂದಿದೆ. ಇದು ನಾಡಿನ ಭಾಗ್ಯವಲ್ಲ ಸಾಹಿತ್ಯವೊಂದು ಹಾಲಕ್ಕಿಯ ನುಡಿ" ಎಂದೂ "ಸಮಾಜವನ್ನೂ ಧಾರ್ಮಿಕ ರೂಢಿಗಳನ್ನೂ, ಸ್ತ್ರೀಯರ ಹೃದಯಭಾವನೆಗಳನ್ನೂ, ಕೌಟುಂಬಿಕ ಸಮಸ್ಯೆಗಳನ್ನೂ ಹೆಣ್ಣಿನ ಕಣ್ಣಿನಿಂದಲೂ ನೋಡಬೇಕು" ಎಂದು ಸಂಪಾದಕರು ನುಡಿದಿದ್ದಾರೆ. ಹೆಣ್ಣಿನ ಕೈಗೆ ಬಾಯಿ ಬಂದುದನ್ನು ೧೯೪೧ರಲ್ಲಿ ಒಪ್ಪಿಕೊಳ್ಳಲಾಗಿದೆ. ಹೀಗೆ ಒಪ್ಪಿಕೊಳ್ಳುವಲ್ಲಿ ಸ್ವಲ್ಪ ತಡವಾಗಿದೆಯೆಂದು ನನಗೆ ಅನಿಸುತ್ತದೆ. ಗೌರಮ್ಮನವರ ಮತ್ತೊಂದು ಕಥಾಸಂಗ್ರಹ "ಚಿಗುರು" ೧೯೪೨ರಲ್ಲಿ ಪ್ರಕಟವಾಗಿದೆ. ಇದರಲ್ಲಿಯ ೯ ಕತೆಗಳಲ್ಲಿ "ಮರದ ಬೊಂಬೆ" ಎಂಬ ಕತೆಯು ಒಳ್ಳೆ ಸ್ವಾರಸ್ಯಕರವಾಗಿದೆ. ಅಲ್ಲಿಯ ಕಥನಕೌಶಲವೂ ಹಿರಿದಾಗಿದೆ. ಮರದಬೊಂಬೆಯಂತೆ ನಿರ್ಜೀವಿಯಾದ ಮೇಷ್ಟರನ್ನು ಮದುವೆಯಾಗಿ ಶೈಲಾ ಅಂತಹನಿಗೂ ವ್ಯವಹಾರ ಜ್ಞಾನವನ್ನು ಕಲಿಸಿಯೇ ತೀರುವೆನೆಂದು ಹಟ ಹಿಡಿದು ಆ ಕಾರ್ಯದಲ್ಲಿ ಯಶಸ್ಸನ್ನು ಪಡೆಯುತ್ತಾಳೆ. ಹೆಣ್ಣು ಮನಸ್ಸು ಮಾಡಿದರೆ ಅಸಾಧ್ಯ ಮಾದುದನ್ನೂ ಸಾಧ್ಯ ಮಾಡಬಲ್ಲಳೆಂಬುದನ್ನು ಸುಂದರವಾಗಿ ಚಿತ್ರಿಸಿದ್ದಾರೆ ಗೌರಮ್ಮ "ಮರದ ಬೊಂಬೆ" ಎಂಬ ಕತೆಯಲ್ಲಿ.

೧೯೪೪ರಲ್ಲಿ ಹೆಣ್ಣುಮಕ್ಕಳ ಸಣ್ಣ ಕತೆಗಳ ಬೆಳೆ ಹುಲುಸಾಗಿರುವಂತೆ ಕಂಡುಬರುತ್ತದೆ. ಶ್ರೀಮತಿ ಆರ್. ಜಯಲಕ್ಷ್ಮಿ ಶ್ರೀನಿವಾಸನ್ ಅವರ "ದೀಪಾವಳಿ ಹಾಗೂ ಇತರ ಕತೆಗಳು" "ಪ್ರತಿಫಲ ಮತ್ತು ಇತರ ಕತೆಗಳು" ಹಾಗೂ ಶ್ರೀಮತಿ ವಾಣಿಯವರ ಕತಾಸಂಗ್ರಹ "ಕಸ್ತೂರಿ" ಪ್ರಕಟವಾಗಿವೆ. ಅಲ್ಲದೆ ಶ್ರೀಮತಿ ಜಯಲಕ್ಷ್ಮಿಯವರ ಹೆಚ್ಚು ಕತೆಗಳು ಕನ್ನಡನಾಡಿನ ಪತ್ರಿಕೆಗಳಲ್ಲೆಲ್ಲ ಬೆಳಕುಕಂಡಿವೆ. ಇವರ ಒಟ್ಟು ೩ ಕಥಾಸಂಗ್ರಹಗಳು ಪ್ರಕಟವಾಗಿವೆ. ಅವರ "ತ್ಯಾಗ" ಎಂಬ ಕತೆ ಉತ್ತಮ ತರಗತಿಯದಾಗಿದೆ. ಸರಳೆಯ ಗೆಳತಿ ಮಣಿ ವಿಧವೆಯಾಗಿದ್ದಳು. ಅವಳು ತಾಯಿಯಿಲ್ಲದ ತನ್ನ ತಬ್ಬಲಿ ತಮ್ಮನನ್ನು ಸಲಹುತ್ತ, ಕಷ್ಟಪಟ್ಟು ಕಾಲೇಜಿನ ವ್ಯಾಸಂಗ ಮಾಡುತ್ತಿದ್ದಳು. ಅವಳ ತಂದೆ ಬೇರೆ ಊರಲ್ಲಿ ಕೆಲಸಮಾಡುತ್ತಿದ್ದರು. ಪರೀಕ್ಷೆಯ ವೇಳೆಗೆ ತಮ್ಮನಿಗೆ ಟಾಯಿಫೈಡ್ ಆಗುತ್ತದೆ. ಮೊದಲನೇ ಸ್ಥಾನದಲ್ಲಿ ಪಾಸಾಗಬಲ್ಲ ಮಣಿ ತಮ್ಮನಿಗಾಗಿ ಪರೀಕ್ಷೆಬಿಡುವ ಪ್ರಸಂಗಬರುತ್ತದೆ. ಆಗ ಅವಳ ಗೆಳತಿ ಸರಳಾ ಹೆಚ್ಚಿನ ತ್ಯಾಗಮಾಡುತ್ತಾಳೆ. ತಾಯಿ ಮಣಿಯ ಮನೆಗೆ ಹೋಗಬೇಡವೆಂದು ಹೇಳಿದರೂ ಕೇಳದೆ ತಾನು ಪರೀಕ್ಷೆಗೆ ಕೂಡುವುದನ್ನು ಬಿಟ್ಟು, ಗೆಳತಿಯ ತಮ್ಮನನ್ನು ನೋಡಿಕೊಳ್ಳುತ್ತಾಳೆ. ಇವರ ತ್ಯಾಗದಿಂದ ಮಣಿ ಪರೀಕ್ಷೆಗೆ ಹೋಗುತ್ತಾಳೆ. ಹೆಣ್ಣಿನ ತ್ಯಾಗದೃಷ್ಟಿಯನ್ನು ಇಲ್ಲಿ ಕಾಣುತ್ತೇವೆ. ಅನೇಕ ಕತಾಸ್ಪರ್ಧೆಗಳಲ್ಲಿ ಬಹುಮಾನ ಪಡೆದ ವಾಣಿಯವರ ಕಥಾಸಂಗ್ರಹ "ಕಸ್ತೂರಿ"ಗೆ ಮುನ್ನುಡಿ ಬರೆಯುವಾಗ ಶ್ರೀಮಾನ ಮಾಸ್ತಿಯವರು "ಇವರ ಕತೆಗಳನ್ನು ನೋಡಿದರೆ ಹೆಣ್ಣುಮಕ್ಕಳ ಲೇಖನ ಒಂದು ಹೆಂತಕ್ಕೆ ಬಂದಿದೆ" ಎಂದಿದ್ದಾರೆ. ೧೯೩೦ರ ಸುಮಾರಿಗೆ ಕತೆಗಳನ್ನು ಬರೆಯಹತ್ತಿದ ಹೆಣ್ಣುಮಕ್ಕಳ ಲೇಖನವು ೧೯೪೪ಕ್ಕೆ ಒಂದು ಹೆಂತವನ್ನು ಮುಟ್ಟಿದ್ದು ಇದರಿಂದ ಸ್ಪಷ್ಟವಾಗುತ್ತದೆ.

ಇದುವರೆಗೆ ಪ್ರಕಟವಾದ ಹೆಣ್ಣುಮಕ್ಕಳ ಕತೆಗಳಲ್ಲಿ ಎಚ್. ವಿ. ಸಾವಿತ್ರಮ್ಮನವರ ಕತೆಗಳು ಮಹತ್ತ್ವದ ಸ್ಥಾನ ಗಳಿಸಿವೆಯೆಂದೇ

ಹೇಳಬಹುದು. ೧೯೪೪ರಲ್ಲಿ ಸಾವಿತ್ರಮ್ಮನವರ "ನಿರಾಶ್ರಿತೆ" ಎಂಬ ೧೨ ಕತೆಗಳ ಸಂಗ್ರಹ ಪ್ರಕಟವಾಗಿದೆ. ಈ ಸಂಗ್ರಹದಲ್ಲಿಯ ಕತೆಗಳು ನೇಲ್ತರಗತಿಯವಾಗಿವೆ. ಭಾರತಕ್ಕೆ ಸ್ವಾತಂತ್ರ್ಯ ದೊರೆತೊಡನೆ ನಡೆದ ಜಾತೀಯ ಗಲಭೆಗೆ ಈಡಾದ ಹಿಂದೂ ಮುಸ್ಲಿಮ್ ಮಹಿಳೆಯರ ದುರಂತ ಜೀವನ ಚಿತ್ರಗಳೂ, ವಿಧವೆ ವೈಚಿತ್ರ್ಯಗಳನ್ನೊಳಗೊಂಡ ಕತೆಗಳು ಈ ಸಂಗ್ರಹದಲ್ಲಿವೆ, "ನಿರಾಶ್ರಿತೆ" ಎಂಬ ಕತೆಯಲ್ಲಿ ತುಳಸಿ, ಜಾತೀಯ ದೊಂಬಿಯಲ್ಲಿ ಪುಂಡರ ಕೈಗೆ ಸಿಕ್ಕು ಒಲುಮೆಯ ದಾಂಪತ್ಯಜೀವನಕ್ಕೆ ದೂರವಾಗುತ್ತಾಳೆ. ಹೆಂಡತಿಯನ್ನೂ ಮಗುವನ್ನೂ ಕಳೆದುಕೊಂಡ ದುಃಖದಲ್ಲಿ ಅವಳ ಪತಿ ತುಳಸಿ ತಿರುಗಿ ದೊರೆತರೆ ಅವಳನ್ನು ಅದರಿಂದ ಬರಮಾಡಿಕೊಳ್ಳುವ ಸಂಕಲ್ಪಮಾಡಿ ಗಾಂಧೀಜಿಯವರ ವಾಣಿಯಂತೆ ನಿರಾಶ್ರಿತೆಯರಿಗೆ ಮನ್ನಣೆ ಕೊಡಬೇಕೆಂದು ಬಯಸಿದಾಗ ತುಳಸಿ ಮತ್ತೊಂದು ಮಗುವಿನ ತಾಯಾಗಿ ಬರುತ್ತಾಳೆ. ಬೇರೆ ಮಗುವಿನ ಸುದ್ದಿಕೇಳಿ ತುಳಸಿಯ ಪತಿ ಚಂದೂ ಅವಳಿಂದ ದೂರಹೋಗುತ್ತಾನೆ. ಇದರಲ್ಲಿ ಪುರುಷರ ಅಭಿಮಾನ, ತಿರಸ್ಕಾರ, ಸಂಕುಚಿತ ಬುದ್ಧಿಯ ಎದುರು ಪ್ರೇಮ ಮಾಯವಾಗಿ ಹೋಗುವುದನ್ನು ಸಾವಿತ್ರಮ್ಮ ಹೃದಯಂಗಮವಾಗಿ ಚಿತ್ರಿಸಿದ್ದಾರೆ.

೧೯೪೫ರಲ್ಲಿ ಶ್ರೀಮತಿ ಶಾರದಾ ಜಡೆಯವರ "ನವರತ್ನದ ಕಡಗ" ಪ್ರಕಟವಾಯಿತು. ಇವರ ಕಥಾಸಂಗ್ರಹದಲ್ಲಿ "ಒಲವೊ ಕುಲವೊ" ಬಹಳ ಚೆನ್ನಾಗಿವೆ ಹಿಂದುಗಳ ಜಾತೀಯ ದುರಭಿಮಾನದಿಂದಾಗಿ, ಸಂಕುಚಿತ ಭಾವನೆಯಿಂತಾಗಿ ಅದೆಷ್ಟು ಜನ ಪರಜಾತೀಯನ್ನೋ, ಮರಣವನ್ನೋ ಅಪ್ಪಬೇಕಾಗುವುದು. ಕೀಳು ಜಾತಿಯವರೇ ಆದರೂ ಒಳ್ಳೆಯ ಸ್ಥಾನದಲ್ಲಿರುವಾಗ ನಮ್ಮ ಜನ ತೋರುವ ಆದರವನ್ನು ಭಾವಪೂರ್ಣವಾಗಿ ಚಿತ್ರಿಸಿದ್ದಾರೆ. ಶ್ರೀಮತಿ ಶಾರದಾ ಜಡೆ. ಅದೇ ವರುಷ ಸೌ. ಲಲಿತಮ್ಮನವರು ಅಮೇರಿಕದ ಪ್ರಸಿದ್ಧ ಕತೆಗಾರ್ತಿ ಪರ್ಲ ಬಕ್ಕರ ೬ ಸಣ್ಣಕತೆಗಳ ಭಾಷಾಂತರವನ್ನು ಮಾಡಿದ್ದಾರೆ. ಬೇರೆ ಭಾಷೆಯ ಒಳ್ಳೆಕತೆಗಳನ್ನು ಕನ್ನಡ ಸಾಹಿತ್ಯದ ಕಣಜಕ್ಕೆ ತುಂಬುವ ಕಾರ್ಯವನ್ನೂ ಮಹಿಳಾ ಕತೆಗಾರ್ತಿಯರು ಮಾಡಿದ್ದಾರೆನ್ನಬಹುದು.

೧೯೪೫ರಲ್ಲಿ ಸೀತಾರತ್ನರ "ಕೆಂಪು ಗುಲಾಬಿ" ಕಥಾಸಂಗ್ರಹ ಪ್ರಕಟವಾಗಿದೆ. ಈ ಸಂಗ್ರಹದಲ್ಲಿಯ ಕೆಂಪು ಗುಲಾಬಿ ಶ್ರೇಷ್ಠ ಕತೆಯಾಗಿದೆ. "ಕುಂಕುಮ ಬಲ" ಎಂಬ ಕಥಾಸಂಗ್ರಹವೂ ೧೯೪೫ರಲ್ಲಿ ಪ್ರಕಟವಾಗಿದೆ.

೧೯೪೫ರಲ್ಲಿ ಶ್ರೀಮತಿ ಆರ್ ಲಲಿತಮ್ಮನವರ "ಬಾಗಿನ" ಎಂಬ ಕಥಾಸಂಗ್ರಹ ಪ್ರಕಟವಾಗಿದೆ.

೧೯೪೬: ಇದೀಗ ಕೊನೆಗೆ ಸೌ. ಗೀತಾದೇವಿ ಕುಲಕರ್ಣಿಯವರ ಕತೆಗಳ ಸಂಗ್ರಹ "ಜೇಲಹೋದ ಮೋಡ" ಪ್ರಕಟವಾಗಿದೆ. ಇದರಲ್ಲಿ ಸಣ್ಣ ಸಣ್ಣ ಮಾತುಗಳೂ ಮಾತ್ಸರ್ಯದಿಂದ ವಿಷಯಾಸಹಿತವಾಗಿ ನಲುಮೆಯ ಗೆಳತನಕ್ಕೆ ಅಡ್ಡಗೋಡೆಯಾಗಬಲ್ಲವೆಂಬ ಮಾತನ್ನು ಹಿತ್ತಾಳೆ ಕಿವಿಯಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಈ ಸಂಗ್ರಹದಲ್ಲಿಯ "ದೂರ ಬಹುದೂರ!" ಎಂಬ ಕತೆಯಲ್ಲಿ ಪತಿಯನ್ನು ಕಳೆದುಕೊಂಡ ಸುಮತಿಯ ಮನದ ಚಿತ್ರ ಓದುಗರ ಮನಕಲಕುವುದು. ಸುತ್ತಲೂ ಮುದ್ದು ಮಕ್ಕಳಿದ್ದರೂ ದೂರದ ಪ್ರಯಾಣಕ್ಕಾಗಿ ರೈಲಿನಲ್ಲಿ ಕುಳಿತ ಸುಮತಿಯ ಮನ, ದೂರ ಬಹುದೂರ ಪತಿಬಾಳಿದಾಗಿನ ಚಿತ್ರಗಳತ್ತ ಹರಿಯುತ್ತದೆ. ಈ ಕತೆಯಲ್ಲಿ ಗೀತಾದೇವಿಯವರು ಹೆಣ್ಣಿನ ಮನದಳಲಿನೊಂದಿಗೆ ಅವಳ ಭಾವನೆಗಳನ್ನು ಎಳೆ ಎಳೆಯಾಗಿ ಬಿಡಿಸಿದ್ದಾರೆ. ಈ ಕತೆಯು, ಕಥನ ಕೌಶಲ ಹಿಂದಾಗಿದೆ. "ಈ ಕಥಾ ಸಂಕಲನದ ಉದ್ದಕ್ಕೂ ಸ್ತ್ರೀಹೃದಯದ ವಿವಿಧ ಭಂಗಿಗಳನ್ನು, ವಿವಿಧ ವಿಕಾರವಿಲಾಸಗಳನ್ನು ಕಾಣುತ್ತೇವೆ" ಎಂದಿವ್ವಾರಿ ಮುನ್ನುಡಿ ಬರೆದ ಬೇಂದ್ರೆಯವರು.

ಇಲ್ಲಿ ಮಹಿಳೆಯರು ಬರೆದ ಎಲ್ಲ ಕತಾ ಸಂಗ್ರಹಗಳನ್ನಾಗಲೀ, ಬರೆಹಗಾರ್ತಿಯರ ಹೆಸರನ್ನಾಗಲಿ ಸೂಚಿಸುವ ಉದ್ದೇಶವಿಲ್ಲ ಹೆಣ್ಣುಮಕ್ಕಳು ಕಥಾಪ್ರಪಂಚಕ್ಕೆ ಕಾಲಿರಿಸಿದಾಗಿನಿಂದ ೧೯೪೬ರ ವರೆಗಿನ ಕತೆಗಳನ್ನು ಕುರಿತು ಕೆಲವು ಮಾತುಗಳನ್ನು ಹೇಳಲಾಗಿದೆ. ಸುಮಾರು ೨೫ ವರುಷಗಳ ಹಿಂದೆ ಆರಂಭವಾದ ಹೆಣ್ಣುಮಕ್ಕಳ ಸಣ್ಣ ಕತೆಗಳಲ್ಲಿ ಇಂದು ಸಾಕಷ್ಟು ಪ್ರಗತಿಯನ್ನು ನಾವು ಗುರುತಿಸಬಲ್ಲೆವು. ಅವರ ಕತೆಗಳಲ್ಲಿ, ಕಥಾವಸ್ತುವಿನಲ್ಲಿ ವೈವಿಧ್ಯ ತಲೆದೋರಿದೆ. ಹೆಣ್ಣಿನ ಕರುಳನ್ನು, ಅವರ ಸಮಸ್ಯೆಗಳನ್ನು ನಮ್ಮ ಬಂಧುಗಳು ಸಹಾನುಭೂತಿಯಿಂದ, ಆತ್ಮೀಯತೆಯಿಂದ ಚಿತ್ರಿಸಿದ ಅನೇಕ ಸಣ್ಣಕತೆಗಳು ನಮ್ಮಲ್ಲಿ ಬಂದಿರುವುದು ನಿಜ; ಅಲ್ಲದೆ ಶ್ರೀನಿವಾಸರ ಕತೆಗಳಲ್ಲಿ ಹೆಣ್ಣಿನ ಹೃದಯವನ್ನು ಹೃದಯಂಗಮವಾಗಿ, ಸಮಂಜಸವಾಗಿ ಚಿತ್ರಿಸಿದ್ದನ್ನು ಕಾಣುತ್ತೇವೆ. ಅದರಿ ಗೌರಮ್ಮ, ಶ್ಯಾಮಲಾದೇವಿ, ಸಾವಿತ್ರಮ್ಮ ಗೀತಾದೇವಿಯರ ಕತೆಗಳನ್ನು ಓದುವಾಗ ಹೆಣ್ಣಿನ ಬಗೆಯನ್ನು ಹೆಣ್ಣುಮಕ್ಕಳೇ ಅದೆಷ್ಟು ಅರ್ಥವತ್ತಾಗಿ ಚಿತ್ರಿಸಬಲ್ಲರೆಂಬದನ್ನು ನಾವು ಅರಿಯಬಲ್ಲೆವು.

ಹೆಣ್ಣುಮಕ್ಕಳು ಬರೆದ ಕತೆಗಳಲ್ಲಿ ಹೆಣ್ಣುಮಕ್ಕಳ ಅಂತಃಕರಣವನ್ನು ಸೂಕ್ಷ್ಮವಾಗಿ ನಿರೂಪಿಸುವ—ಅವರ ಸಮಸ್ಯೆಗಳನ್ನು ವಿಶಿಷ್ಟ ದೃಷ್ಟಿಯಿಂದ ಅರಿಯುವ,—ಹಾಗೂ ಅವುಗಳನ್ನು ಸಮುಚಿತವಾಗಿ ನಿರೂಪಿಸುವ ಕತೆಯು ಬೆಳೆದುಬಂದಿದೆ ಎನ್ನಬಹುದು. ಜೀವನದ ಸಾಮಾನ್ಯ ಸರಸ ವಿರಸಗಳನ್ನು ಚಿತ್ರಿಸುವ ಮೂಲಕ ಆರಂಭವಾದ ಮಹಿಳೆಯರ ಕತೆಗಳು ಇಂದು ಬಗೆಬಗೆಯಾದ ಸೂಕ್ಷ್ಮಪರಿಗಳನ್ನು, ಅರ್ಥವತ್ತಾದ, ಗಂಭೀರ ಮುಖಗಳನ್ನು ಚಿತ್ರಿಸುವಲ್ಲಿ ನಿರೂಪಿಸುವಲ್ಲಿ ಯಶಸ್ಸನ್ನು ಪಡೆದಿವೆ. ಹೊಸ ಸಾಮಾಜಿಕ ವ್ಯವಸ್ಥೆಯಲ್ಲಿಯ ಮಾರ್ಮಾಟುಗಳನ್ನು ಲೇಖಿಕೆಯರು ಸರಿಯಾಗಿಯೇ ಗ್ರಹಿಸಿದರೆಂದೂ ಹೇಳಬಹುದು. ಅಂತೂ ಹೆಣ್ಣುಮಕ್ಕಳು ಬರೆವ ಸಣ್ಣಕತೆಗಳ ಭವಿಷ್ಯ ಉಜ್ವಲವಾಗಿದೆ.

ಸಣ್ಣಕತೆಯ ಬೆಳವಣಿಗೆ*

ಶ್ರೀ. ಕೆ. ನರಸಿಂಹ ಮೂರ್ತಿ, ಬೆಂಗಳೂರು

ಕನ್ನಡ ಸಣ್ಣಕತೆಯ ಸ್ವರ್ಣಯುಗ ಎಂದೋ ಮುಗಿದು-ಹೋಯಿತೆಂದು ಸಾಮಾನ್ಯವಾಗಿ ಜನರ ಅಭಿಪ್ರಾಯ. ಈಗ ಕಾದಂಬರಿಗಳು ಹೆಚ್ಚು ಹೆಚ್ಚಾಗಿ ರಚಿತವಾಗಿ ಜನಪ್ರಿಯವಾಗಿವೆ ನಿಜ. ಆದರೆ ಕಾದಂಬರಿಗಳು ಇಲ್ಲದಿದ್ದಾಗ ಸಣ್ಣ ಕತೆಗಳು ಎಷ್ಟು ಬರುತ್ತಿದ್ದವೋ ಎಷ್ಟು ಜನಪ್ರಿಯವಾಗಿದ್ದವೋ ಕಾದಂಬರಿಗಳು ಬರುತ್ತಿರುವಾಗಲೂ ಅಷ್ಟೇ ಬರುತ್ತಿವೆ; ಜನಪ್ರಿಯವಾಗಿವೆ. ಈ ಮಾತನ್ನು ಈಗ ನಾವು ಒತ್ತಿಹೇಳಬೇಕಾಗಿದೆ. ಸಣ್ಣಕತೆ ಕಾದಂಬರಿ ರಚನೆಗೆ ಪೂರ್ವಭಾವಿಯಾಗಿ ಇಟ್ಟ ಹೆಜ್ಜೆ ಮಾತ್ರವಲ್ಲ. ಕತೆಗಳನ್ನು ಬರೆಯುವುದು ಉತ್ತಮವಾದ ಮೇಲೆ ಉತ್ತಮ ಸ್ವತಂತ್ರ ಕಾದಂಬರಿಗಳ ರಚನೆ ಬಂದಿತು ಎನ್ನುವುದೂ ನಿಜ. ತಿರುಮಲಾಂಬಾ ಅವರ ಕಾದಂಬರಿಗಳನ್ನು ವಿಮರ್ಶಿಸಿ ಮಾಸ್ತಿಯವರು ಕತೆಗಳಲ್ಲಿ ವಾಸ್ತವಿಕ ಸರಳ ಶೈಲಿಯನ್ನು ಬೆಳೆಸಿದರು. ಸಣ್ಣಕತೆಯು ಮೂಲಕ ಈ ಶೈಲಿ ಕಾದಂಬರಿಗೆ ಹಾದು ಕಾರಂತರ ಮೊದಲ ಕೃತಿಗಳಲ್ಲಿ ಸಫಲವಾಯಿತು. ಆದರೆ ಈ ಕಾರ್ಯ ಮಾಡಿದೊಡನೇ ಸಣ್ಣ ಕತೆಯ ಅವಶ್ಯಕತೆ ಹೋಯಿತೆಂದಲ್ಲ. ಮಾಸ್ತಿಯವರೇ ಇಂದು ಸಣ್ಣ ಕತೆಗಳನ್ನು ಅಷ್ಟಾಗಿ ಬರೆಯದೆ ಕಾದಂಬರಿಗಳನ್ನು ಬರೆಯತೊಡಗಿದ್ದಾರೆ, ನಿಜ. ಅಷ್ಟಕ್ಕೆ ಕನ್ನಡ ಸಣ್ಣಕತೆಯ ಸ್ವರ್ಣಯುಗ ಮುಕ್ತಾಯವಾದಂತಿಲ್ಲ. ಸಣ್ಣಕತೆಯ ಅಚ್ಚುಕಟ್ಟು, ಸೊಬಗು ಎಂದಿನಂತೆ ಇಂದೂ ಕತೆಗಾರರನ್ನೂ ಮತ್ತು ಸಹೃದಯರನ್ನೂ ಇಬ್ಬರನ್ನೂ ಸಮನಾಗಿ ಆಕರ್ಷಿಸುತ್ತಲೇ ಇದೆ. ಕಾದಂಬರಿಗಳೂ ಈಗ ಬಂದಿವೆ ಎನ್ನಬೇಕೇ ಹೊರತು ಕಾದಂಬರಿಗಳು ಬಂದುಬಿಟ್ಟವು ಇನ್ನು ಸಣ್ಣಕತೆಗಳು ಹೋದವು ಎಂದು ಎನ್ನಬೇಕಾಗಿಲ್ಲ ಕಾದಂಬರಿಗಳ ಸಣ್ಣಕತೆಗಳ ಸಹಜೀವನಕ್ಕೆ ಯಾವ ಅಡ್ಡಿ ಆಕ್ಷೇಪಗಳೂ ಇಲ್ಲ. ಅಲ್ಲದೆ ಸಣ್ಣಕತೆಯು ರಚನೆ ಸೂಕ್ಷ್ಮತೆಯಲ್ಲಿ ಕಾದಂಬರಿಯ ರಚನೆಗಿಂತ ಒಂದು ಹೆಜ್ಜೆ ಮುಂದೆ ಪ್ರಾಯಶಃ ಇದ್ದೀತು. ಉದಾಹರಣೆಗೆ ನವ್ಯಕತೆ ಇಂದು ಬಂದಿದೆ. ನವ್ಯಕಾದಂಬರಿ ನಾಳೆ ಬಂದೀತು. ನವ್ಯಕತೆಯ ರೂಪದಂತಹ ಹೊಸಕಾಲಿಕ ಮಾಪಾಡು ಆಗುತ್ತಿರುವ ನಮ್ಮ ಸಣ್ಣಕತೆ ನವೀನವಾಗಿ ಯೌವನದ ಸಿರಿಯಿಂದ ಕೂಡಿದೆ ಎಂದು ಹೇಳಬೇಕೇ ಹೊರತು ಮುಮೂರ್ಷುವಾಗಿದೆಯೆಂದು ಹೇಳಲು ಕಾರಣವಿಲ್ಲ. ಶ್ರೀನಿವಾಸರ ಪುಟ್ಟಕ್ಕೆ ವಿರುವಂತಹವರು ಹೊಸಬರು ನಿಜ. ಆದರೆ ಈಗ ಬರೆಯುತ್ತಿರುವ ಸುಮಾರು ಇನ್ನೂರು ತರುಣ ತರುಣಿಯರಲ್ಲಿ ಐವತ್ತು ಜನರಾದರೂ ಒಳ್ಳೆಯ ಬರೆಹಗಾರರಿದ್ದಾರೆ ಅನಗತ್ಯ ಒಬ್ಬಿಬ್ಬರು ಶ್ರೀನಿವಾಸರ ಮಟ್ಟಕ್ಕೆ ಏರಿಯಾರೆಂದು ತೋರುತ್ತದೆ. ಸಂತಸವಾಗಿ ಸಣ್ಣಕತೆ ನಮ್ಮಲ್ಲಿ ಬೆಳೆಯುತ್ತಿರುವಾಗ ಯಾವ ಮುದಿ ಅವನಂಬಿಕೆಗೂ ಕಾರಣವಿಲ್ಲ. ಎರಡನೇ ವಿಶ್ವಯುದ್ಧಕ್ಕೆ ಸ್ವಲ್ಪ ಹಿಂದೆಯೂ ಸ್ವಲ್ಪ ಮುಂದೆಯೂ ಇತರ ಸಾಹಿತ್ಯರೂಪಗಳಂತೆ ಸಣ್ಣಕತೆಯೂ ಸ್ತಬ್ಧ ಸತ್ವಹೀನ ಅದಂತೆ ಕಂಡಿತು ಆಷ್ಟೆ. ಮತ್ತೆ ಅದು ಚೇತರಿಸಿ ಮುಂದೆ ಹೆಜ್ಜೆಹಾಕಿದೆ. ಇನ್ನಷ್ಟು ಶೀಘ್ರವಾಗಿ ಸಣ್ಣಕತೆ ನಮ್ಮಲ್ಲಿ ಬೆಳೆಯಬೇಕಾದರೆ ಪ್ರಕಟಣಕಾರರು ನೆರವಾಗಬೇಕು. ಸದ್ಯದಲ್ಲಿ ಕಾದಂಬರಿಗಳಿಂದ ಮಾರಾಟವನ್ನು ಹೆಚ್ಚಿಸಿ ಲಾಭ ಪಡೆಯಬಹುದೆಂದು ಅವರು ಯೋಚಿಸಿದಂತೆ ಕಾಣುತ್ತದೆ. ಒಳ್ಳೆ ಕತೆಗಳ ಸಂಕಲನಗಳಿಂದಲೂ ಅವಾಯನಿದೆ, ಕತೆಗಳೂ ಮಾರಾಟವಾಗುತ್ತವೆ ಎಂದು ಅವರು ಒಪ್ಪುವವರೆಗೂ ಸಣ್ಣಕತೆ ಕಾದಂಬರಿಯ ಹಿಂದೆ ಬೀಳುವ ಪ್ರಮೇಯ ಇದ್ದೇ ಇರುತ್ತದೆ. ನನಗೆ ತಿಳಿದ ಉತ್ತಮ ಸಣ್ಣ ಕತೆಗಾತಿಯನ್ನು ನಾನೊಮ್ಮೆ ಪ್ರಶ್ನಿಸಿದೆ. "ನಿಮ್ಮ ಸಣ್ಣಕತೆಗಳ ಸಂಕಲನ ಇನ್ನೂ ಏಕೆ ಬೆಳಕು ಕಂಡಿಲ್ಲ?" ಎಂದು. ಅಕೆ ಉತ್ತರ ಕೊಟ್ಟಳು "ನನ್ನ ಕಾದಂಬರಿಗಳನ್ನು ಪ್ರಕಟಿಸಲು ಮುಂದೆ ಬರುವ ಪ್ರಕಟಣಕಾರರು ನನ್ನ ಕತೆಗಳನ್ನು ಕಂಡು ಹೆದರಿ ಹಿಂದೆಗೆಯುತ್ತಾರೆ" ಎಂದು. ಈ ಭಯ ಹೋಗಬೇಕು. ವಿಶ್ವ ದೇಶಗಳಲ್ಲಿ ಸಣ್ಣಕತೆಗಳು ಕಾದಂಬರಿಗಳಂತೆಯೇ ಜನಪ್ರಿಯವಾಗಿಲ್ಲವೇ? ಇನ್ನೊಂದು ವಿಷಯವೆಂದರೆ ಕೆಲವು ಸಹಜ ಕಾರಣಗಳಿಂದ ಅಚ್ಚಾಗಿ ಒಳ್ಳೆಕತೆ ಬರೆಯುವವರ ಸಂಕಲನಗಳು ಪ್ರಕಟವಾಗುತ್ತವೆ. ಉತ್ತಮ ಕಾದ ಕೆಲವರ ಸಂಕಲನಗಳು ವರ್ಷಗಳು ಕಳೆದರೂ ಬರುವುದೇ ಇಲ್ಲ. ಪ್ರಕಟಣಕಾರರು ಉತ್ತಮ ಕತೆಗಾರರನ್ನು ಹುಡುಕಿ ತಿಳಿದುಕೊಂಡು ಒಳ್ಳೆಯ ಕೃತಿಗಳನ್ನು ಪ್ರಕಟಿಸಲು ಮುಂದೆ ಬರಬೇಕು. ಸುಲಭವಾಗಿ ಕೈಗೆ ಬಂದ ಸಂಕಲನಗಳನ್ನು ಮಾತ್ರ ಪ್ರಕಟಿಸಲು ಹಿಂದುಮುಂದೆ ನೋಡದೆ ಅವಸರಪಡತಕ್ಕದ್ದಲ್ಲ. ಸಣ್ಣಕತೆಯ ಬೆಳವಣಿಗೆಗೆ ಪ್ರಕಾಶಕರ ನೆರವು ಅತ್ಯಾವಶ್ಯಕವಾಗಿದೆ

ಆದರೆ, 'ಸಣ್ಣಕತೆಯ ಬೆಳವಣಿಗೆ' ಎಂದು ವಿಷಯವನ್ನು ಕೈಗೆತ್ತಿಕೊಂಡಾಗ ನಾನು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದು ಕನ್ನಡ ಸಣ್ಣಕತೆಯ ಪ್ರಗತಿ ಎಂದಲ್ಲ. ಸಣ್ಣಕತೆಯ ರೂಪವನ್ನು ಚರ್ಚಿಸುವಾಗ ಅದರ ಅಚ್ಚುಕಟ್ಟು ಹೇಗಿರಬೇಕು ಎಂದು ಯೋಚಿಸಬೇಕೆಂದುಕೊಂಡು ಈ ವಿಷಯ ಆರಿಸಿಕೊಂಡೆ. ಅದನ್ನ ಪೂರ್ವಭಾವಿಯಾಗಿ ಕನ್ನಡ ಸಣ್ಣಕತೆಯು ಇಂದಿನ ಪರಿಸ್ಥಿತಿಯು ವಿಷಯವಾಗಿ ಕೆಲವು ಮಾತುಗಳನ್ನು ಆಡಬೇಕೆಂದು ಎನ್ನಿಸಿದುದರಿಂದ ಮೇಲಿನ ಮಾತುಗಳನ್ನು ಆಡಿದ್ದೇನೆ ಅಷ್ಟೆ. ಈಗ ನನ್ನ ವಿಷಯಕ್ಕೆ ಬರುತ್ತೇನೆ.

ಇಂದು ಹೇರಳವಾಗಿ ಪ್ರಕಟವಾಗುತ್ತಿರುವ ಸಣ್ಣಕತೆಗಳಲ್ಲಿ ಬಹುಪಣ್ಣಭಾಗ ಮಾತ್ರ ಉತ್ತಮವಾಗಿವೆ ಎಂದು ಹೇಳಲು ವಿಷಾದಿಸುತ್ತೇನೆ ಹಲವು ಕತೆಗಳಲ್ಲಿ ಸ್ವಾರಸ್ಯವಾದ ವಿಷಯ ಇರುತ್ತದೆ. ಹೃದಯಂಗಮ ಶೈಲಿ ಇರುತ್ತದೆ ಚಿತ್ರವನ್ನ ಕೆರೆಹಿಡಿಯುಬಲ್ಲ ಮಾಯೆ ಇರುತ್ತದೆ. ಆದರೆ ಅವು ಉತ್ತಮ ಸಣ್ಣಕತೆಗಳಾಗಿರುವುದಿಲ್ಲ. ಒಂದೇ ಮಾತಿನಲ್ಲಿ ಇದಕ್ಕೆ ಕಾರಣವನ್ನು ಹೇಳಬಹುದು.

* ಐದನೆಯ ಅಖಿಲಕರ್ನಾಟಕ ಸಣ್ಣಕತೆಗಾರರ ಸಮ್ಮೇಳನದ ವಿಚಾರ ಸಂಕಿರಣದ ಸಭೆಯಲ್ಲಿ ಓದಲು ತಯಾರಿಸಿದ ಪ್ರಬಂಧ.

ಇವುಗಳಲ್ಲಿ ಕಥೆಯ ಕಟ್ಟಡ ಎಲ್ಲೋ ಕಡೆ ಶಿಥಿಲವಾಗಿರುತ್ತದೆ. ಬಿದುಕುಬಿಟ್ಟ ಪಿಂಗಾಣಿ ಪಾತ್ರೆಯಂತೆ ಇವು ದೋಷಯುಕ್ತವಾಗಿವೆ. ನಮ್ಮ ಕತೆಗಾರರು ಕತೆಯ ಕಟ್ಟಡವನ್ನು ಬಿಗಿಯಾಗಿ ಸಮಂಜಸವಾಗಿ ವಿಶ್ವಸನೀಯವಾಗಿ ಕಟ್ಟುವುದನ್ನು ಕಲಿತರೆ ಉತ್ತಮ ಕತೆಗಳ ಸಂಖ್ಯೆ ಬಹಳವಾಗಿ ಹೆಚ್ಚುವುದರಲ್ಲಿ ಸಂದೇಹವಿಲ್ಲ. ಸಾಮಾನ್ಯವಾಗಿ ಕತೆಗಾರರಿದುರಿಗೆ ನಿಮ್ಮ ಈ ಕತೆಯಲ್ಲಿ ಇಂಥ ಕಡೆ ಶಿಥಿಲತೆ ಇದೆ. ಎಂದು ಹೇಳಿದರೆ ಅವರು ಅದನ್ನು ಹೇಗೋ ಸಮರ್ಥಿಸುವದರ ಕಡೆ ಗಮನಕೊಡುತ್ತಾರೆ. ಇದನ್ನು ಅವರು ಬಿಡಬೇಕು. ತಮ್ಮ ಕತೆಯ ವಿಷಯದಲ್ಲಿ ತಾವೇ ನಿಷ್ಕರುಣಿ ನ್ಯಾಯಮೂರ್ತಿಗಳಾಗಬೇಕು. ಆಗ ಅವರ ಕತೆ ಉತ್ತಮವಾಗುತ್ತದೆ.

ಹಲವರು ಸಣ್ಣ ಕತೆಯಲ್ಲಿ ಸಾಕಷ್ಟು ವಿಸ್ತಾರವಾಗಿ ನಿರೂಪಿಸಲು ಆಗದಂತಹ ಹರಿವಾದ ಮತ್ತು ಜಟಿಲವಾದ ವಿಷಯವನ್ನು ಆರಿಸಿಕೊಂಡು ನೋಡಲಿನಲ್ಲಿಯೇ ಮುಗ್ಗರಿಸುತ್ತಾರೆ. ಇಂಥ ಕತೆಗಳನ್ನು ಬರೆಯುವುದು ಸುಲಭವೂ ಹೌದು. ಉದ್ದಕ್ಕೆ ಸನ್ನಿವೇಶಗಳನ್ನು ಚಿತ್ರಿಸುತ್ತಾ ಹೋಗುತ್ತಿದ್ದು ಕೊನೆಯ ಸನ್ನಿವೇಶದೊಡನೆ ನಿಲ್ಲಿಸಬಹುದು. ಇಂಥ ಕತೆಗಳು ಕಾದಂಬರಿಗಳ ಕಾರ್ಯಗಳಂತಿರುತ್ತವೆ. ಇವುಗಳಲ್ಲಿ ಹಲವು ಸನ್ನಿವೇಶಗಳಿರುವುದೊಂದೇ ಅಲ್ಲದೆ ಅಕಸ್ಮಿಕಗಳೂ ನಂಬಲಾರದ ತಿರುವುಮುರಿವುಗಳೂ ಕತೆಯ ಓಘವಳಿಕೆಯಲ್ಲಿ ಕಾಣುತ್ತವೆ. ಇಂತಹವುಗಳನ್ನು ಬರೆಯುವುದು ಎಷ್ಟು ಸುಲಭವೋ ಓದುವುದೂ ಅಷ್ಟೇ ಸರಳ. ಇಂತಹ ಕತೆಗಳು ಮಾಸಪತ್ರಿಕೆಗಳಲ್ಲಿ ಹೆಚ್ಚಾಗಿ ಪ್ರಕಟವಾಗುತ್ತವೆ, ಹೆಚ್ಚಾಗಿ ಜನಪ್ರಿಯವಾಗುತ್ತವೆ. ಆದರೆ ಈ ಕತೆಗಳಲ್ಲಿ ಯಾವ ಒಂದು ಸನ್ನಿವೇಶವೂ ಮನಮುಟ್ಟುವಂತೆ ಆದರ ಅರ್ಥ ಸುರಿಸುವಂತೆ ಆ ಜೀವನ ನಮ್ಮ ಜೀವನವೇ ಎನ್ನಿಸುವಂತೆ ರಸೋದ್ರೇಕವಾಗುವಂತೆ ಚಿತ್ರಿತವಾಗಿರುವುದಿಲ್ಲ. ಯಾರಾದರೂ ಒಬ್ಬರು ಒಂದು ಕೂಟದಲ್ಲಿ ತಮ್ಮ ನೆನಪುಗಳನ್ನೋ ಒಂದು ಪ್ರಸಂಗವನ್ನೋ ಹೇಳಿದಂತೆ ಇರುತ್ತದೆ, ಅಷ್ಟೆ. ಇಂತಹ ಕತೆಗಳು ಉತ್ತಮವೆಂದಾಗಲೀ ಕಲಾಕೃತಿಗಳೆಂದಾಗಲಿ ಒಪ್ಪುವುದು ಕಷ್ಟ. ಒಂದು ದರ್ಜೆಯ ಓದುಗರಿಗೆ ಪ್ರಿಯವಾಗಿರುತ್ತವೆ ಎಂದು ಮಾತ್ರ ಹೇಳಬಹುದು. ಈ ವಿಷಯ ಕೇಳಿದವರು ಸಾಮಾನ್ಯವಾಗಿ ಹೇಳಬಹುದು: 'ಇಂತಹ ಕತೆಗಳು ಉತ್ತಮವಲ್ಲ ವೆಂದು ಗೊತ್ತೇ ಇದೆ' ಎಂದು. ನಿಜ, ಇದನ್ನು ಎಲ್ಲ ವಿಮರ್ಶಕರೂ ಹೇಳುತ್ತಲೇ ಇದ್ದಾರೆ. ಕತೆಗಾರರೂ ಒಪ್ಪಿಯೇ ಇದ್ದಾರೆ. ಆದರೂ ಇಂದು ಬರುತ್ತಿರುವ ಉತ್ತಮವೆಂದು ಒಮ್ಮೊಮ್ಮೆ ಪ್ರಶಂಸಿಸಲ್ಪಡುವ ಎಷ್ಟು ಕತೆಗಳು ಹೀಗೆ ಬರಿಯ ಕುತೂಹಲ ಕೆರಳಿಸಿ ತೃಪ್ತಿಪಡಿಸುವಂತಹ ಪ್ರಸಂಗಪೂರ್ಣ ಕತೆಗಳೇ ಆಗಿವೆ ಎಂಬುದನ್ನು ನೋಡಿದರೆ ಈ ಮಾತು ಮತ್ತೆ ಮತ್ತೆ ಹೇಳಬೇಕೆಂದು ಎನಿಸದಿರದು.

ಈ ಕತೆಗಳಿಗಿಂತ ಒಂದು ಮಟ್ಟಮೇಲಿರುವ ಇನ್ನೊಂದು ಬಗೆಯ ಕತೆಗಳಲ್ಲಿ ಸನ್ನಿವೇಶ ಒಂದೇ ಇರುತ್ತದೆ, ಸುಮಾರಾಗಿ ಚೆನ್ನಾಗಿ ಚಿತ್ರಿತವಾಗಿರುತ್ತದೆ. ಆದರೆ ಕತೆಯ ಕೊನೆ ಬಹಳ ನಾಟಕೀಯವಾಗಿ ಹಠಾತ್ತನೆ ಮೇಲೆರಗುತ್ತದೆ. ಉದಾಹರಣೆ ಕೊಡುವುದಾದರೆ ನಮ್ಮಲ್ಲಿ ಬಂದಿರುವ ಒಂದು ಸುಂದರವಾದ ಸಣ್ಣ ಕತೆಯಲ್ಲಿ ಎರಡನೆ ಮದುವೆಮಾಡಿಕೊಂಡ ದೊಡ್ಡ ಮನುಷ್ಯನ ಜೀವನ ಚಿತ್ರವಿದೆ. ಎರಡನೆ ಹೆಂಡತಿ ಹಳ್ಳಿಯ ಮುಗ್ಧ ಹೆಣ್ಣು. ಅವಳ ಗಂಡನ ಮೊದಲ ಹೆಂಡತಿಯ ಮಗನ ಮೇಲೆ ಕ್ರಮೇಣ ಮನಸ್ಸು ಹರಿಯುತ್ತದೆ. ಇದನ್ನು ಕತೆಗಾತಿ ಬಹಳ ಸೂಕ್ಷ್ಮವಾಗಿ ವರ್ಣಿದ್ದಾರೆ. ಒಂದು ದಿನ ಅವಳು ಕನಸಿನಲ್ಲಿ ಮಲಮಗ ತನ್ನನ್ನು ಅಪ್ಪುತ್ತಿರುವಂತೆ ಭಾವಿಸುತ್ತಾಳೆ. ಕಿರಿಚಿಕೊಳ್ಳುತ್ತಾಳೆ. ಮಲಮಗನೆ ಓಡಿಬರುತ್ತಾನೆ. ಬಳಿಕ ಗಂಡನೂ ಬರುತ್ತಾನೆ. ಅವಳು ಮಾಡುವ ಅಪವಾದವನ್ನು ತಿಳಿದು ಗಂಡ ಮಗನನ್ನು ಮನೆಯಿಂದ ಹೊರದೂಡುತ್ತಾನೆ. ಹೀಗೆ ಕತೆ ಮುಕ್ತಾಯವಾಗುತ್ತದೆ. ಕತೆಯು ಕೊನೆ ಸಾಕಷ್ಟು ಸಮಂಜಸವಾಗುವುದಿಲ್ಲ. ಬರಿಯ ಒಂದು ಕೂಗಿಗೇ ಇಷ್ಟೆಲ್ಲಾ ಅನರ್ಥವಾಗುವುದು ಸಾಧ್ಯವಿಲ್ಲ. ಮಗ ತಕ್ಕ ವಿವರಣೆಕೊಟ್ಟಾಗ ಹೆಂಡತಿಯೊಡನೆ ಮಾತಾಡಿದಾಗ ತಂದೆಯಾದವ ವಿಷಯ ತಿಳಿದಾನು. ಇರುವ ಒಬ್ಬನೇ ಮಗನನ್ನು ಮೊದಲಿಂದ ಚೆನ್ನಾಗಿ ತಿಳಿದ ತಂದೆ ಇದ್ದಕ್ಕಿದ್ದಂತೆ ಓಡಿಸುವುದು ನಂಬಲು ಸಾಧ್ಯವಾಗುವುದಿಲ್ಲ. ಇಂತಹ ಕೊನೆಯಲ್ಲಿ ಮುಗ್ಗರಿಸುವ ಈ-ಒಂದು-ವಿಷಯವನ್ನು-ಬಿಟ್ಟರೆ-ಉತ್ತಮವಾದ ಕತೆಗಳು ಹಲವು ನಮ್ಮಲ್ಲಿ ಬರುತ್ತಿವೆ. ಕೊನೆಯಲ್ಲಿ ಒಂದು ಅದ್ಭುತವಾದ ಮಾರ್ಮಾಟಾಗಬೇಕು. ಒಂದು ಕಣ್ಣಿಗೆ ತಟ್ಟುವಂತಹ ವ್ಯಂಜ್ಯನ ಕಾಣಬೇಕು, ಒಂದು ಕ್ರಿಯಾತ್ಮಕವಾದ ಬದಲಾವಣೆಯಾಗಬೇಕು ಎಂದು ಕತೆಗಾರ ಬಲಾತ್ಕಾರದಿಂದ ಹಾಗೆ ತಿರುವುಕೊಡಲು ಹೋಗಬಾರದು.

ಇಂತಹ ಕತೆಗಳಿಗಿಂತ ಇನ್ನೊಂದು ಮಟ್ಟ ಮೇಲಿರುವ ಕತೆಗಳಲ್ಲಿ ಕತೆಯ ಹೆಣಿಗೆ ಸೂಕ್ತವಾಗಿರುತ್ತದೆ. ಆದರೆ ಯಾವ ಭಾಗ ಎಷ್ಟು ವಿಸ್ತಾರವಾಗಿರಬೇಕೋ ಅಷ್ಟು ವಿಸ್ತಾರವಾಗಿರುವುದಿಲ್ಲ. ಒಟ್ಟಿನಲ್ಲಿ ತಾರತಮ್ಯಜ್ಞಾನ ಸಾಲದೆ ಅನವಶ್ಯಕವಾದ ಕಡೆ ವಿಸ್ತರಣೆ ನಿವರಗಳೂ ಅವಶ್ಯಕವಾದೆಡೆ ವಿವರಗಳ ನ್ಯೂನತೆಯೂ ಕಂಡು ಬರುತ್ತದೆ. ಆರಂಭದಲ್ಲಿ ಸಾಮಾನ್ಯವಾಗಿ ಅನವಶ್ಯಕ ವಿಸ್ತಾರವೂ ಅಂತ್ಯದಲ್ಲಿ ಅನವಶ್ಯಕ ಸಂಕೋಚವೂ ಕಂಡುಬರುತ್ತದೆ. ಕೆಲವರು ಎಲ್ಲಿ ಆರಂಭಿಸಬೇಕೊ ಅದಕ್ಕೆ ಮುಂಚೆ ಆರಂಭಮಾಡಿ ಎಲ್ಲಿ ಮುಗಿಸಬೇಕೋ ಅದಕ್ಕೆ ಅತೆ ನಿಲ್ಲಿಸುತ್ತಾರೆ. ಕತೆಯ ಮುಖ್ಯ ಉದ್ದೇಶವು ಯಾವುದೋ ಅದನ್ನು ಸದಾ ನೆನಪಿನಲ್ಲಿಟ್ಟು ಅದನ್ನು ವ್ಯಕ್ತಪಡಿಸುವ ಅಂಶಗಳಿಗೆ ಪ್ರಾಧಾನ್ಯಕೊಟ್ಟುಕೊಂಡು ಬರೆದರೆ ಕಥೆಯ ಕಟ್ಟಡ ಸುಸಂಬದ್ಧವಾಗುತ್ತದೆ. ಕಥೆಯ ಗುರಿಯನ್ನು ಮರೆಯಲೇಬಾರದು. ಈ ಗುರಿ ಕೊನೆಯಲ್ಲಿ ವ್ಯಕ್ತವಾದರೆ ಸಾಲದು. ವ್ಯಕ್ತವಾಗಿಯೇ ಅವ್ಯಕ್ತವಾಗಿಯೇ ಕತೆಯ ತುಂಬ ಮೊದಲಿಂದ ಕೊನೆಯವರೆಗೂ ಇದು ಪ್ರತ್ಯಕ್ಷವಾಗಿರಬೇಕು. ವ್ಯಾಪ್ತವಾಗಿರಬೇಕು. ಒಂದು ಕತೆಯ ವಾತಾವರಣ, ಒಂದು ಕತೆಯ ವಿಶಿಷ್ಟತೆ, ಒಬ್ಬ ಕತೆಗಾರನ ವ್ಯಕ್ತಿತ್ವದ ಅಭಿವ್ಯಕ್ತಿ, ಒಂದು ಕತೆಯ ಕಾವ್ಯಮಯತೆ ಕಾಣುವುದು ಈ ಬಗೆಯ ಕತೆಯ ನೇರವಾದ ಮೊನಚಾದ ಓಟನಲ್ಲಿ.

ಇಷ್ಟು ಗುಣಗಳೂ ಇರುವ ಕತೆಗಳೂ ನಮ್ಮಲ್ಲಿ ಕೆಲವು ಬರುತ್ತಿರುವುದು ಸಂತೋಷ. ಆದರೆ ಇವುಗಳಿಗಿಂತಲೂ ಒಂದು ಮಟ್ಟ ಮೇಲಿರುವ ಕತೆಗಳೇ ನಿಜವಾಗಿ ಉತ್ತಮ ಕತೆಗಳು. ಈ ಉತ್ತಮ

ಕತೆಗಳಲ್ಲಿ ಸ್ವತಂತ್ರವಾದ ದೃಷ್ಟಿ ಇರುತ್ತದೆ. ನಮ್ಮಲ್ಲಿ ಬರುವ ಕೆಲವು ಇತರ ಅಂಶಗಳಲ್ಲಿ—ಉತ್ತಮವಾದ ಕತೆಗಳಲ್ಲಿ ನಮಗೆ ಚಿರಪರಿಚಿತವಾದ ಭಾವಭಾವನೆಗಳೇ ಸನ್ನಿವೇಶಗಳಲ್ಲಿ ಬಿಂಬಿತವಾಗಿರುತ್ತವೆ. ಉದಾಹರಣೆಗೆ ಒಬ್ಬ ಜಮೀನ್ದಾರ ಒಬ್ಬ ಗಾಯಕಿಯಲ್ಲಿ ಮೋಹಗೊಳ್ಳುತ್ತಾನೆ. ಆದರೆ ಆ ಗಾಯಕಿಯೇ ಅವನಲ್ಲಿ ನಿಲ್ಲದೆ ಅವನಿಗೆ ಬುದ್ಧಿಹೇಳಿ ಹೊರಟುಹೋಗುತ್ತಾಳೆ. ಇಂತಹ ಕತೆಯಲ್ಲಿ ಒಂದು ಹೆಣ್ಣಿನ ಮನೋವೃತ್ತಿಯಲ್ಲಿ ಎದ್ದುಕಾಣಬಲ್ಲ ಉದಾತ್ತತೆಯು ಚಿತ್ರವಿದೆ—ನಿಜ. ಆದರೆ ಈ ಕಾಲದಲ್ಲಿ ಇಂಥ ಉದಾತ್ತತೆಯನ್ನು ಚಿತ್ರಿಸುವಾಗ ಅದಕ್ಕೆ ಎದುರಾಗುವ ದೌರ್ಬಲ್ಯಗಳನ್ನು ಆಶೆ-ಆಕಾಂಕ್ಷೆಗಳನ್ನು ಅಷ್ಟು ಸುಲಭವಾಗಿ ಬಿಟ್ಟುಗೊಟ್ಟರೆ ನಮಗೆ ಚಿತ್ರವು ಸಮಂಜಸವಾಗಿ ನಂಬುವಂತಹುದೆಂದು ಕೋರುವುದಿಲ್ಲ. ನಮ್ಮ ಕಾಲದಲ್ಲಿ ಮಾನಸಿಕ ವ್ಯಾಪಾರಗಳ ಬಗ್ಗೆ ತುಂಬಾ ಸಂಶೋಧನೆಗಳು ಆಗಿವೆ. ಆದುದರಿಂದ ಸರಳವಾದ ಮಾನಸಿಕ ವ್ಯಾಪಾರಗಳ ಚಿತ್ರಣ ಅಷ್ಟಾಗಿ ಹಿಡಿಸುವುದಿಲ್ಲ. ಉದಾತ್ತತೆಯ ಚಿತ್ರ ಈ ಕೆಟ್ಟಕಾಲದಲ್ಲಿ ಅತ್ಯಗತ್ಯವಾಗಿಬೇಕು. ನಮ್ಮ ಕಾಲದ ಜಾರುವ ದಾರಿಯಲ್ಲಿ ಸಾಹಿತ್ಯವೂ ಜನರಂಜನೆಯ ಸಲುವಾಗಿ ಜಾರಬಾರದೆಂದು ನಾನು ಪೂರ್ಣವಾಗಿ ಒಪ್ಪುತ್ತೇನೆ. ಆದರೆ ಈ ಉದಾತ್ತತೆ ಜಟಿಲವಾಗಿ ಅರ್ಥನತ್ತಾಗಿ ಎಲ್ಲ ದೃಷ್ಟಿಗಳಿಂದ ಸಮಂಜಸವಾಗಿ ಕಾಣುವಂತೆ ಚಿತ್ರಿತವಾಗಬೇಕು. ಎಂತಹವರೂ (ರಸಿಕರೂ) ಕತೆಯನ್ನು ಓದುವ ಸ್ವಲ್ಪು ಹೊತ್ತಾದರೂ ಇಂಥ ಉದಾತ್ತತೆ ಇರುವುದು ನಿಜ ಎಂದು ನಂಬುವಂತೆ ಅದು ಚಿತ್ರಿತವಾಗಬೇಕು. ಈ ಕಾಲದ ಅತ್ಯುನ್ನತ ಕರ್ಮಕ್ಕೆ ರೂಪ ಕೊಡಬಲ್ಲವರು ಸಾಹಿತಿ ಮತ್ತು ರಾಜಕೀಯ ಧುರೀಣರು. ಆದರೆ ಈ ಕಾಲದ ಧರ್ಮ ಈ ಕಾಲದ ವಿಜ್ಞಾನತತ್ವ ಶಾಸ್ತ್ರಗಳಿಗೆ ಈಗಿನ ಸೇಥಾವಿಗಳ ಮನೋಧರ್ಮಕ್ಕೂ ಹೊಂದುವಂತಹದಾಗಿರಬೇಕು. ಅರಿಯು ಪ್ರಾಚೀನ ಸರಳ ಧರ್ಮವಾದರೆ ಸಾಲದು. ಇಂದಿನ ಕಾಲದ ಮನೋಧರ್ಮದ ಸಾಣೆಕಲ್ಲಿನ ಮೇಲೆ ಧರ್ಮವನ್ನು ಉರೆಹಚ್ಚಿ ನೋಡಿ ಒಪ್ಪಬೇಕು.

ಆಧುನಿಕ ಆದರ್ಶದ ಆತ್ಮಕ್ಕೆ ಮೈಗೂಡುವಂತೆ ಸನ್ನಿವೇಶವನ್ನು ಮಹಾಸಾಹಿತಿ ಚಿತ್ರಿಸುತ್ತಾನೆ. ಹೊಸನೋಟ, ಅಂತಿಮವಂತನಾಗಿ ಮೂಡುವಿಕೆ—ಇವೇ ಸಾಹಿತ್ಯದ ಮೂಲ ಗುಣಗಳು. ಸಮಗ್ರವಾದ ಸಕಾಲಿಕವಾದ ನೋಟವನ್ನು ಸನ್ನಿವೇಶಗಳ ಸೂಕ್ಷ್ಮಾಂಶದಲ್ಲಿ ಧ್ವನಿಸುವಂತೆ ಸಣ್ಣಕತೆಗಾರನೂ ಸನ್ನಿವೇಶಗಳನ್ನು ಆಯ್ದುಕೊಳ್ಳುತ್ತಾನೆ. ಈ ಗುರಿ ಮುಖ್ಯವೇ ಹೊರತೇ ಸನ್ನಿವೇಶರಚನೆ ಮುಖ್ಯವಲ್ಲ. ಸನ್ನಿವೇಶರಚನೆ ಗೌಣಮಾತ್ರ, ಗುರಿಗೆ ಏಕಮಾತ್ರ ಸಾಧನವಾಗಿ ಮಾತ್ರ ಅದರ ಬೆಲೆ. ಇದನ್ನು ಅರ್ಥಮಾಡಿಕೊಂಡರೆ ಸನ್ನಿವೇಶದ ರಚನೆಯಲ್ಲಿ ಹಿಂದೆ ಹೇಳಿದ ದೋಷಗಳು ತಲೆದೋರುವುದಿಲ್ಲ.

ಈ ದೃಷ್ಟಿಯಿಂದ ನೋಡಿದರೆ ನವ್ಯಕತೆಯ ಹಿಂದಿನ ಸ್ಫೂರ್ತಿ ಸ್ಪಷ್ಟವಾಗುತ್ತದೆ. ನವ್ಯ ಕತೆಗಾರ ತನ್ನ ವೈಯಕ್ತಿಕ ದರ್ಶನಕ್ಕೆ ಹೆಚ್ಚು ಬೆಲೆಕೊಡುತ್ತಾನೆ. ಯಾವುದೇ ಸನ್ನಿವೇಶದ ಹಲವು ಮುಖಗಳ ಜಟಿಲತೆಯ ಮತ್ತು ನಿಗೂಢ ರಹಸ್ಯದ ಕಡೆಗೆ ಧ್ವನಿಪೂರ್ಣವಾಗಿ ಬೊಟ್ಟುಮಾಡಿ ತೋರಿಸುತ್ತಾನೆ. ಹೊರಜೀವನದ ಆದ್ಭುತ ಪ್ರಸಂಗಗಳಿಗಿಂತ ಹೃದಯದ ಮೂಲ ಭಾವನೆಗಳ ಅವಿಷ್ಕಾರಕ್ಕೆ ಸಾಕಾದ ಸಾಮಾನ್ಯ ಆಗುಹೋಗುಗಳನ್ನು ಅವನು ಆಯ್ದುಕೊಳ್ಳುತ್ತಾನೆ. ವಸ್ತುವಿಗಿಂತಲೂ ಧ್ವನಿಗೆ ಹೆಚ್ಚು ಪುರಸ್ಕಾರ ಕೊಡುತ್ತಾನೆ. ಉದಾಹರಣೆಗೆ 'ನಲ್ಲಿಯಲ್ಲಿ ನೀರು ಬಂತು' ಎಂಬ ಒಂದು ನವ್ಯ ಕತೆಯಲ್ಲಿ ನೀರಿಗಾಗಿ ವರಾರದಲ್ಲಿ ಒದ್ದಾಡುವ ಹೆಣ್ಣುಮಕ್ಕಳ ಜೀವನಚಿತ್ರವಿದೆ. ಆದರೆ ಧ್ವನಿಯಿಂದ ಈ ಸಾಮಾನ್ಯ ವಸ್ತು ಅಸಾಧಾರಣವಾಗುತ್ತದೆ. ಬಸರಿ ಹೆಣ್ಣಿನ ಮೇಲೆ ವಯಸ್ಸಾದ ಇನ್ನೊಂದು ಹೆಣ್ಣು ಕಡೆಗೂ ಕನಿಕರ ತೋರಿ ನೀರು ತುಂಬುಕೊಡಲು ಮುಂದಾದಾಗ ನಿಂತುಹೋಗಿದ್ದ ನಲ್ಲಿಯಿಂದ ದಡದಡನೆ ನೀರು ಸುರಿಯತೊಡಗಿ ಚಿಲ್ಲೆಂದು ಎಗರಿ ಅವರಿಬ್ಬರ ಮೇಲೆ ಚುಮುಕಿಸುತ್ತದೆ. ಈ ಕಥಾಂಶವನ್ನು ಓದಿದರೆ ಆ ವಯಸ್ಸಾದ ಹೆಣ್ಣಿನ ಹೃದಯದಲ್ಲಿ ಪ್ರೇಮಜಲ ಮತ್ತೆ ಪುಟಿದಂತೆ ಭಾಸವಾಗುತ್ತದೆ.

ಈ ಮಾತನ್ನು ಹೇಳಿದುದರಿಂದ ನಾನು ನವ್ಯಕತೆಗಾರರ ಕಡೆಯವನೆಂದೂ ಸಾಂಪ್ರದಾಯಿಕ ಕತೆಗಳನ್ನು ಕಂಡರೆ ಇಷ್ಟಪಡದವನೆಂದೂ ದಯವಿಟ್ಟು ತಿಳಿಯಬಾರದು. ಸಾಂಪ್ರದಾಯಿಕ ಶೈಲಿಯಲ್ಲಿಯೂ ಉತ್ತಮ ಕತೆಗಳು ಬಂದಿವೆ, ಬರುತ್ತಿವೆ. ನಮ್ಮ ಸಾಂಪ್ರದಾಯಿಕ ಕತೆಗಾರರೂ ಕೆಲವು ನವ್ಯಕತೆಗಳನ್ನೂ ಬರೆದಿದ್ದಾರೆ. ಮಾಸ್ತಿಯವರ 'ಮಸುಮತ್ತಿ' ಯಿಂದ ವರದರಾಜ ಹುಯಿಲಗೋಳರ 'ಬಾಗಿಲು ತೆರೆದಿತ್ತು' ವರೆಗೆ ಹಲವು ಹಿರಿಯ ಕಿರಿಯ ಲೇಖಕರ ಇಂಥ ಕೃತಿಗಳನ್ನು ಹೆಸರಿಸಬಹುದು. ನಾನು ಮೇಲೆ ಹೇಳಿದುದೇನೆಂದರೆ ನವ್ಯಕತೆಯಲ್ಲಿ ತೀವ್ರವಾದ ರೂಪದಲ್ಲಿ ಇಂದಿನ ಬೆಳವಣಿಗೆಯ ಮಾರ್ಗ ತೋರುತ್ತದೆ ಎಂದು ಮಾತ್ರ. ಸಾಹಿತ್ಯಕ್ಕೆ ಹಲವು ಮುಖಗಳು, ಹಲವು ಮಾರ್ಗಗಳು. ಆದರೆ ಈಗಿನ ನಮ್ಮ ನೋಟಕ್ಕೆ ನವ್ಯಕತೆಯ ಮಾರ್ಗದಲ್ಲಿ ಸಣ್ಣಕತೆ ಮುಂದೆ ಬೆಳೆಯುತ್ತ ಹೋಗುವಂತೆ ಭಾಸವಾಗುತ್ತದೆ. ಈಗ ಬರೆಯುತ್ತಿರುವ ನವ್ಯಕತೆಯ ರೂಪ ಇನ್ನಷ್ಟು ಬದಲಾಯಿಸೀತು, ಸುಧಾರಿಸೀತು. ಇಂದಿನ ಸಾಂಪ್ರದಾಯಿಕ ಮತ್ತು ಇಂದಿನ ನವ್ಯಗಳ ಸುಘರ್ಷಣೆಯಿಂದ ಹಲವು ಬಗೆಯ ಮಿಶ್ರರೂಪಗಳು ಹುಟ್ಟುವುದಂತೂ ಖಂಡಿತ. ಹೀಗೆ ಕನ್ನಡ ಸಣ್ಣಕತೆಯ ಬೆಳವಣಿಗೆಯ ಭವಿಷ್ಯವಿದ್ದಂತೆ ನನಗೆ ತೋರುತ್ತದೆ.

ನನ್ನ ಮುಖ್ಯ ವಿಷಯ ಸಣ್ಣಕತೆಯ ಬೆಳವಣಿಗೆ—ಶಿಲ್ಪ ಎಂಬ ಅರ್ಥದಲ್ಲಿ. ಬೆಳವಣಿಗೆ—ಎಂದು ಏಕೆ ಮತ್ತೆ ನಾನು ಒತ್ತಿ ಹೇಳಬೇಕು! ಸಣ್ಣಕತೆಯ ಒಳಬೆಳವಣಿಗೆ ಚೆನ್ನಾಗಿದ್ದರೆ ತಾನೆ ಸಣ್ಣಕತೆಯ ಪ್ರಗತಿಯೂ ಸಿದ್ಧಿಸುವುದು! ಆದುದರಿಂದ ಈ ಮುಂದಿನ ಹಾರೈಕೆಯನ್ನು ಮಾಡಿ ನಿಲ್ಲಿಸುತ್ತೇನೆ. ವಸ್ತುವಿನ ಸುಸಂಬದ್ಧವಾದ ಬೆಳವಣಿಗೆ, ಸುಭಗವಾದ ಮಹತ್ವಪೂರ್ಣ ಸಣ್ಣಕತೆಗಳು ಈಗ ಬರುತ್ತಿರುವುದಕ್ಕಿಂತಲೂ ಹೆಚ್ಚು ಸಂಖ್ಯೆಯಲ್ಲಿ ಬಂದು ಕನ್ನಡ ಸಣ್ಣಕತೆಯ ಬೆಳವಣಿಗೆ ಅವಿಚ್ಛಿನ್ನವೂ ಶೀಘ್ರವೂ ಯಶಸ್ವಿಯೂ ಆಗಲಿ!

ನವ್ಯಕತೆ—ತಂತ್ರ ಮತ್ತು ಮಂತ್ರ

ಶ್ರೀ. ಎಂ. ಯು. ಜೋಶಿ, ಧಾರವಾಡ

ಅಧ್ಯಕ್ಷರೆ ಮತ್ತು ಸಹೋದರ ಸಹೋದರಿಯರೆ,

ಕನ್ನಡಕಥಾಲೋಕದಲ್ಲಿ ಯಾರಿಗೂ ತಿಳಿಯದಂತೆ ಅಸ್ತಿತ್ವದಲ್ಲಿ ಬರಲಿಚ್ಛಿಸುತ್ತಿರುವ ಅಥವಾ ಈಗಾಗಲೇ ಬಂದು ವ್ಯವಹರಿಸುತ್ತಿರುವ ನವ್ಯಕತೆಗಳ ವಿಷಯವಾಗಿ ಅವುಗಳ ರೂಪ ಲಕ್ಷಣಗಳನ್ನು ತಿಳಿಹಿಸುವ ಕುತೂಹಲದ ಮೂಲಕವಾಗಿ, ಈ ವಿಷಯವನ್ನು ಆರಿಸಿಕೊಂಡಿರುವೆ.

'ನವ್ಯಕಾವ್ಯ' ಕನ್ನಡಸಾಹಿತ್ಯದಲ್ಲಿ ಆಗಮಿಸಿದಾಗ ಮತ್ತು ಅದು ಇಲ್ಲಿ ಸ್ವತಂತ್ರ ಅಸ್ತಿತ್ವವನ್ನು ಪಡೆಯುವ ಪ್ರಯತ್ನದಲ್ಲಿದ್ದಾಗ ಒಂದು ಕೋಲಾಹಲವೇ ನಡೆಯಿತು. ಈ ಕೋಲಾಹಲದ ಮೂಲಕವಾಗಿ ಅದಕ್ಕೆ ಬಹು ಬೇಗ ಪ್ರಚಾರ ಸಿಕ್ಕಿತು. ಆದರೆ ಅದರ ಹಿಂದೆಯೇ ಬಂದ 'ನವ್ಯಕತೆ' ಅಷ್ಟೊಂದು ಪ್ರಚಾರಗೊಂಡಿಲ್ಲ. ನವ್ಯಕಾವ್ಯದ ಗುದ್ದಾಟದಲ್ಲಿ ದಣಿದುಹೋದ ಹೀರೋದಾತ್ತ ಸಾಹಿತಿಗಳು, ನವ್ಯಕತೆಯತ್ತ ತಮ್ಮ ಗಮನವನ್ನು ಕೂಡಲಿಲ್ಲ. ಅವರ ಈ ತಾತ್ಸಾರದೃಷ್ಟಿ ವಾತಾವರಣವನ್ನು ಶಾಂತಿಪೂರ್ಣವಾಗಿರಿಸಿತು. ಇಂಥ ಶಾಂತವಾತಾವರಣದಲ್ಲಿ ನವ್ಯಕತೆಗಳಿಗೆ ಪ್ರಚಾರಸಿಗುವ ಬಗೆಯೆಂತೆ? ಪ್ರತಿಕೂಲ ಟೀಕೆಗಳು ಪ್ರಚಾರದೃಷ್ಟಿಯಿಂದ ಅನುಕೂಲ ನಾಲ್ಕು ಜನರಿಂದ ತೆಗಳಿಸಿಕೊಂಡ ವ್ಯಕ್ತಿ ಬಹುಬೇಗ ಪ್ರಚಾರ ಪಡೆಯುವುದು ಸ್ವಾಭಾವಿಕವಾಗಿದೆ. ಅದಕಾರಣ ಪ್ರಚಾರ ದೃಷ್ಟಿಯಿಂದ ಸಾಹಿತಿಗಳ ಶಾಪ್ದಿಳ ಗುದ್ದಾಟ—ಒಳ್ಳೆಯ ಲಕ್ಷಣ

ನವ್ಯಕತೆ ಎಂದರೆ ಹಳಬರು ಬರೆದ ಹಳೆಯ ಕತೆಗಳಿಗಿಂತಲೂ ತೀರ ಭಿನ್ನ ಘಟನೆಗಳನ್ನು ಬಿಟ್ಟು—ತಂತ್ರವನ್ನು ಬಿಟ್ಟು, ಹೇಗೋ ಪ್ರಾರಂಭಿಸಿ, ಹೇಗೋ ಎಳೆದುಕೊಂಡು ಹೋಗಿ, ಎಲ್ಲಿಯೋ ಮುಗಿಸಿ, ಮುಗಿದುದು ಗೊತ್ತಾಗದೇ ಹೋದಾಗ 'ಮುಗಿಯಿತು' ಎಂದು ಹೇಳಿ ಮುಗಿಯಿಸಿಕೊಳ್ಳುವ ಕತೆಗಳು ನವ್ಯಕತೆ ಎಂದು—ಹಲವಾರು ಜನ ತಿಳಿದಂತಿದೆ.

ಈ ನವೀನ ಕತೆಗಳ ರೂಪ-ಲಕ್ಷಣಗಳನ್ನು ಹೇಳುವ ಮೊದಲು ನವ್ಯಕತೆಗಳಲ್ಲದ—ಹಳೆಯವಾದರಿಯ ಕತೆಗಳತ್ತ ಕೊಂಚ ದೃಷ್ಟಿಯನ್ನು ಬೀರುವುದು ಅವಶ್ಯಕವೆನಿಸುತ್ತದೆ. ಹಳೆಯ ಕತೆಗಳನ್ನು ಸ್ವಲ್ಪ ಕೂಲಂಕಷವಾಗಿ ನೋಡಿರಿ. ಈ ಮೊದಲು ಕತೆಗಾರ ಸಣ್ಣ ಕತೆಗಳಿಗಾಗಿ ಒಂದು ಪಡಿಯಚ್ಚನ್ನು ತಯಾರಿಸಿದ್ದಾನೆ. ಒಂದು ಚೌಕಟ್ಟನ್ನು ನಿರ್ಮಿಸಿದ್ದಾನೆ. ಪ್ರಾರಂಭ, ಮಧ್ಯ, ಅಂತ್ಯ—ಒಂದು ಘಟನೆ, ಪಾತ್ರನಿರೂಪಣೆ. ಒಂದು ಅಥವಾ ಎರಡು ಪಾತ್ರ ಸೃಷ್ಟಿ. ಆ ಪಾತ್ರಗಳಲ್ಲಿ ಒಂದು ಸುಸ್ಯ ಪಾತ್ರ ಮತ್ತೊಂದು ದುಸ್ಯ. ಸುಸ್ಯ ಪಾತ್ರಗಳ ಕೈಯಿಂದ ಯಾವುದೇ ಅನಿಷ್ಟ ಘಟನೆ ಘಟಿಸದಂತೆ ಕತೆಗಾರ ತುಂಬಾ ಜಾಗರೂಕತೆಯನ್ನು ವಹಿಸಿರುತ್ತಾನೆ. ಹಾಗೆಯೆ ದುಷ್ಟಪಾತ್ರದ ಕೈಯಿಂದ ಯಾವುದೇ ಸುಕೃತ್ಯ ಘಟಿಸದಂತೆ ಎಚ್ಚರು ವಹಿಸುತ್ತಾನೆ. ಇದಾದ ಮೇಲೆ—ಒಂದು ಉಪದೇಶ. ಇದು ತಲೆತಲಾಂತರಗಳಿಂದ ನಡೆದುಬಂದ ಸಂಪ್ರದಾಯವಾಗಿದೆ. ಈ ಕತೆಗಾರರಿಗೆ ಮೂಲದ ಆಸ್ತಿಯಾಗಿ ನಿಂತಿರುವ ತೀರ ಹಳೆಯ ಕತೆಗಳಲ್ಲಿ ಇವುಗಳನ್ನೇ ಕಾಣಬಹುದಾಗಿದೆ. ಮೃಚ್ಛಕಟಿಕ ನಾಟಕದ ಕತೆಯನ್ನೇ ಓದಿರಿ. ಅಲ್ಲಿ ಬರುವ ಚಾರುದತ್ತ—ಶಕಾರರ ಪಾತ್ರಗಳ ಈ ಸಂಪ್ರದಾಯದ ಒಳ್ಳೆಯ ನಿದರ್ಶನಗಳಾಗಿವೆ ಚಾರುದತ್ತ ಎಂದಾಕ್ಷಣ ಓದುಗನ ಮುಂದೆ ಒಬ್ಬ ಆದರ್ಶ—ಸದ್ಗುಣಸಂಪನ್ನ ಮನುಷ್ಯ ಕಾಣುತ್ತಾನೆ. ಅವನ ಬಗೆಗೆ ಅನುಕಂಪ ಆದರ ಮಾಡುತ್ತದೆ ಹಾಗೆಯೇ ಶಕಾರನ ವಿಷಯವಾಗಿ ಅಷ್ಟೇ ಅಸಡ್ಡೆ ಅನಾದರ ಉತ್ಪನ್ನವಾಗುತ್ತದೆ. ಕತೆಗಳಲ್ಲಿಯ ಪಾತ್ರಗಳು ವಿಶಿಷ್ಟ ಗುಣಗಳ ಗುತ್ತಿಗೆಯನ್ನು ಹೊತ್ತ ಕೃತ್ರಿಮವ್ಯಕ್ತಿಗಳಾಗಿ ಇಂದು ಗೋಚರಿಸದೇ ಇರಲಾರವು.

ಜಗತ್ತು ಇಂದು ಸಂಕೀರ್ಣವಾಗತೊಡಗಿದೆ. ಮಾನವಕುಲ ಇಂದು ಗೊಂದಲಮಯ ಪರಿಸ್ಥಿತಿಯಲ್ಲಿ ಸಿಲುಕಿದೆ. ವೈಚಾರಿಕ, ನೈತಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮನುಷ್ಯನ ಎದುರು ಹಲವಾರು ಸಮಸ್ಯೆಗಳು ಭೂತಾಕಾರವಾಗಿ ನಿಂತಿವೆ. ಹಳೆಯ ಸಂಪ್ರದಾಯ ಹಳೆಯ ವಿಚಾರಸರಣಿ ಹಿಂದೆ ಬೀಳತೊಡಗಿವೆ. ಅವು ಹಿಂದೆ ಬೀಳತೊಡಗಿವೆಯಾದರೂ—ಅವುಗಳ ಸ್ಥಳದಲ್ಲಿ ಹೊಸ ನಿಚ್ಚಾದ ಹೊಸ—ಸಂಪ್ರದಾಯಗಳೂ ಪೂರ್ಣವಾಗಿ ನೆಲೆಗೆತ್ತು ಮುಂದೆ ಬರುತ್ತಿಲ್ಲ. ವಿಜ್ಞಾನದ ವಿಸ್ತಾರ, ಯುದ್ಧೋತ್ತರ ಪರಿಸ್ಥಿತಿ ಇವು ಹಿಂದು ಮಾನವಕುಲದ—ಸಮಾಜದ ಮುಖವನ್ನೇ ಬದಲುಮಾಡಿವೆ ಇಂದಿನ ಬದಲಾದ ಸಮಾಜಕ್ಕೆ—ಭರವಿಂದ ಮುಂದೆ ಸಾಗಬಯಸುವ ಸಮಾಜಕ್ಕೆ-ಹಳೆಯ ವಿಚಾರ, ಹಳೆಯ ಸಂಪ್ರದಾಯಗಳು ಅಪೂರ್ಣವೆನಿಸತೊಡಗಿವೆ.

ಇಂಥ ಅವಸ್ಥೆಯಲ್ಲಿ ನಿಂತ ನವ್ಯ ಕತೆಗಾರ ತಲೆತುರಿಸಿಕೊಳ್ಳುವುದೇಕಾಗಿದೆ. ಅವನ ಧ್ಯೇಯವೇನು? ಕತೆಗಳ ಉದ್ದೇಶವೇನು? ಉಪದೇಶವೇ—ಮನೋರಂಜನೆಯೇ!

ಸಾಹಿತ್ಯವು ಕಾಲಸಾಪೇಕ್ಷವಾಗಿದೆ. ಸದ್ಯದ ವಿಶಿಷ್ಟ ಪರಿಸ್ಥಿತಿಯಲ್ಲಿ ಅದರ ನಿರ್ಮಾಣವಾಗುತ್ತಿರುತ್ತದೆ. ಹೀಗಾಗಿ ಆಯಾಯ ಪರಿಸ್ಥಿತಿಯ ಗುಣ ಮತ್ತು ದೋಷ ಎರಡನ್ನೂ ಪೈಗೂಡಿಸಿಕೊಂಡೆ

ಆದು ಬೆಳೆಯುತ್ತಿರುತ್ತದೆ. ಆದ್ದರಿಂದ ಸಾಹಿತ್ಯದತ್ತ ಒಂದು ವಿಶಿಷ್ಟ ಪರಿಸ್ಥಿತಿಯಲ್ಲಿದ್ದ ಸಾಮಾಜಿಕ ಘಟನೆ (Social phenomena) ಎಂದು ನೋಡಬೇಕಾಗಿದೆ. ಆ ದೃಷ್ಟಿಯಿಂದ ನವ್ಯಕತೆಯು ಸಾಹಿತ್ಯದ ಬಗೆಗೆ ಸೂಕ್ಷ್ಮದೃಷ್ಟಿಯಿಂದ ವಿಮರ್ಶೆಯಾಗಲೇಬೇಕು. ಅನುಭೂತಿಯ ಸಾಹಾಯ್ಯದಿಂದ ಸಾಹಿತ್ಯನಿರ್ಮಿತಿಯಾಗುತ್ತಿದ್ದುದರಿಂದ ಅನುಭೂತಿ ಎಷ್ಟು ಸಮೃದ್ಧವಾಗಿರುವುದೋ ಅಷ್ಟೇ ಸಾಹಿತ್ಯವೂ ಸಮೃದ್ಧವಾಗಿರಬಲ್ಲದು. ಅನುಭೂತಿ ಸಾಹಿತ್ಯಕ್ಕೆ ಕಚ್ಚಾಮಾಲು. ಹಿಂಜಿದ ಹತ್ತಿಯೊಳಗಿಂದ ದಾರ ನಿರ್ಮಾಣವಾಗುವಂತೆ ಅನುಭೂತಿಯೊಳಗಿಂದ ಸಾಹಿತ್ಯನಿರ್ಮಾಣವಾಗಿರುತ್ತದೆ. ಮನಶ್ಶಾಸ್ತ್ರದ ಉಗಮದೊಡನೆ ಅನುಭೂತಿಯು ಹೆಚ್ಚಿಚ್ಚು ಸಮೃದ್ಧವಾಗತೊಡಗಿದೆ. ಈ ಅನುಭೂತಿಯು ಮೇಲೆ ಕಲೆಯು ಅವಿಷ್ಕಾರವಾದಾಗ ಅದಕ್ಕೊಂದು ರೂಪ ಬರುತ್ತದೆ. ಕಲೆಯು ಕೇವಲ ನಿರ್ಮಿತಿ (creation) ಅಲ್ಲ; ಅದೊಂದು ರಚನೆ (construction) ಎಂದು ತಿಳಿದೆ ನವ್ಯಕತೆಗಾರರ ಕಲಸ ಅಷ್ಟು ಸುಲಭವಾಗಿಲ್ಲ.

ಮನಶ್ಶಾಸ್ತ್ರದ ಸಂಶೋಧನದ ಫಲವಾಗಿ ಕತೆಗಾರನಿಗೆ ಹೊಸಬಗೆಯ ದೃಶ್ಯದ ತಾಜಾ ಸಿಕ್ಕಂತಾಗಿದೆ. ನವ್ಯ ಕತೆಗಾರ ಕ್ಷ ಕಿರಣ ಯಂತ್ರವಾಗಿ ನಿಂತಿದ್ದಾನೆ. ನವ್ಯಕತೆಗಳಲ್ಲಿ—ಪ್ರಸಂಗಕ್ಕಿಂತಲೂ ಸ್ವಭಾವಕ್ಕೆ ಪ್ರಾಮ್ಯ ಬಲಪಡಲನಕ್ಕಿಂತಲೂ ಅಂತರಿಕ ಆಂದೋಲನಗಳಿಗೆ ಜೀವನದಲ್ಲಿ ನಡೆವ ಬಹಿರ್ಮುಖ ಘಟನೆಗಳಿಗಿಂತಲೂ ಸುಪ್ತಾವಸ್ಥೆಯಲ್ಲಿಯ ಜಾಗ್ರತೆಗೆ ಈ ಕತೆಗಳಲ್ಲಿ ಪ್ರಾಮುಖ್ಯತೆ ಇದೆ.

ಮನುಷ್ಯನಿಗೆ ಹೊರಗಿನ ಜಗತ್ತು ಇದ್ದಂತೆ ಅವನದೊಂದು ಒಳಗಿನ ಜಗತ್ತೂ ಇರುತ್ತದೆ. ಆ ಒಳಗಿನ ಜಗತ್ತೇ ತುಂಬಾ ಮಹತ್ವವಿದ್ದಿರುತ್ತದೆ. ಮನುಷ್ಯನ ಜೀವನವು ಅವನ ಬಾಹ್ಯ ಮತ್ತು ಆಂತರಿಕ ಜಗತ್ತಿನಿಂದ ಒಡಗೂಡಿದ್ದಿರುತ್ತದೆ. ಅದರಲ್ಲಿಯು ವಿಶೇಷವಾಗಿ ಅವನ ಆಂತರಿಕ ಜಗತ್ತಿಗೆ ತುಂಬಾ ಮಹತ್ವ ಪ್ರಾಪ್ತವಾಗಿದೆ. ಮನುಷ್ಯನ ಆಂತರಿಕ ಜಗತ್ತಿನ ಚಿತ್ರಣವೇ ಎಂದರೆ ನಿಜವಾದ ಮನುಷ್ಯನ ಚಿತ್ರವೇ ನವ್ಯಕತೆಯೆಂದೆನಿಸಿಕೊಳ್ಳುತ್ತದೆ. ನವ್ಯಕತೆಗಳಲ್ಲಿ Inner life (ಆಂತರಿಕ ಜಗತ್ತು) ಮತ್ತು Unconcious (ಸುಪ್ತಾವಸ್ಥೆ) ಇವುಗಳಿಗೇ ಹೆಚ್ಚಿನ ಪ್ರಾಮುಖ್ಯತೆ ಇದೆ. ನವ್ಯ ಕತೆಗಳು ಮಾನಸಶಾಸ್ತ್ರದತ್ತಲೇ ಹೆಚ್ಚಾಗಿ ಜ್ಞಲಿಯುತ್ತಿವೆ. ಮನುಷ್ಯ ಮೇಲೆ ಕಾಣಿಸಿಕೊಳ್ಳುವಂತೆಯೇ ಒಳಗೂ ಇರುವಾಂ. "ಕೊಡದೊಳಗಿಪ್ಪ ನಿಲ್ಲುದು ಸಮುದ್ರಜಲಂ" ಎಂದು ಕವಿ ರತ್ನಾಕರವರ್ಣಿ ಹೇಳಹಿಳಿದ್ದಾನೆ. ಮನುಷ್ಯನೂ ಒಂದು ಮಹಾಸಾಗರ. ಮಹಾಸಾಗರ ತನ್ನ ಗರ್ಭದಲ್ಲಿ ಮುತ್ತುಗಳಂಥ ಅಮೂಲ್ಯ ವಸ್ತುಗಳನ್ನಿರಿಸಿಕೊಂಡಂತೆ, ಸಹಸ್ರಾರು ಭಯಾನಕ ಭೀಕರ ಪ್ರಾಣಿಗಳನ್ನೂ ಇರಿಸಿಕೊಂಡಿದೆ. ಅದೇ ರೀತಿಯಲ್ಲಿ ಮನುಷ್ಯನ ಮನಸ್ಸಿನ ಮಹಾಸಾಗರದಲ್ಲಿ ವಿನೇನು ಹುದುಗಿದೆಯೋ! ನವ್ಯ ಕತೆಗಾರ ಆ ಮಹಾಸಾಗರದ ಅತಿಯಲ್ಲಿ ಧುಮುಕುವ ಸಾಹಸ ಮಾಡಿ ಅಲ್ಲಿಯ ಮುತ್ತುಗಳನ್ನು ಅಲ್ಲದೆ ಇನ್ನಿತರ ಭಯಾನಕ ಪ್ರಾಣಿಗಳನ್ನೂ ಹಿಡಿದುಕೊಂಡು ಓದುಗರ ಮುಂದೆ ತಂದು ನಿಲ್ಲಿಸುತ್ತಾನೆ. ಅವುಗಳ ಸೌಂದರ್ಯ ಅಥವಾ ಭೀಕರತೆಯನ್ನು ಕಂಡು ಓದುಗ ದಂಗುಬಡಿದು ನಿಲ್ಲಬಹುದು. ಮನುಷ್ಯನ ಅಂತರ್ಮನಸ್ಸಿನಲ್ಲಿ ನಡೆದ ದ್ವಂದ್ವವನ್ನು ಪರಿಸ್ಫುರಿಸಿ—ಆ ಪರಿಸ್ಫುರಣವನ್ನೂ ಕಲೆಯು ಅವರಣದಲ್ಲಿ ನಿಂತು ಆ ಅಂತರ್ಮನಸ್ಸಿನ ದ್ವಂದ್ವದ ಮೇಲೆ ಕಲೆಯು ಅವಿಷ್ಕಾರ ನಡೆಯುವ ಕಾರ್ಯವೇ ನವ್ಯಕತೆ.

ನವ್ಯಕತೆಗಳು ವಾಸ್ತವಜೀವನಕ್ಕೆ ತೀರ ಹತ್ತಿರವಾಗಿ ನಿಲ್ಲುವುದಕ್ಕೆ ಇದೇ ಕಾರಣ—ನಿಸ್ಸಜೀವನ ನಮ್ಮ ಚಿತ್ರಗಳೆಂದು ತೋರುವುದಕ್ಕೆ ಮನುಷ್ಯನ ಒಳಹೋರಾಟದ ಕಲಾತ್ಮಕ ಚಿತ್ರಣವೇ ಕಾರಣ.

ಈ ಚಿತ್ರಣಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕಾಗುವುದರ ಮೂಲಕವಾಗಿ—ಹಳೆಯ ಮಾದರಿಯ ಕತೆಯ ಪಡಿಯಚ್ಚನ್ನೂ ಅಥವಾ ತಂತ್ರದ ನಿರ್ಬಂಧವನ್ನೂ—ನವ್ಯಕತೆ ಉಲ್ಲಂಘಿಸಲೂ ಬಹುದು. ಹಳೆಯ ಕತೆಗಳಿಗಿದ್ದಂತೆ ಅವಕ್ಕೆ ಪ್ರಾರಂಭ ಮಧ್ಯ ಅಂತ್ಯ, ಘಟನೆ ಉದ್ದಿಷ್ಟ ಇವೆಲ್ಲವುಗಳನ್ನು ನವ್ಯಕತೆ ಅನಿವಾರ್ಯವೆನಿಸಿದಾಗ, ತೊಡೆದುಹಾಕಲೂ ಬಹುದು. ತಾನು ಕಂಡುಹಿಡಿದ ನಿಜವಾದ ಮಾನವನ ಚಿತ್ರವನ್ನು ಬಿಚ್ಚಿರಿಸುವ ದಿವ್ಯ ಕತೆಗಾರ, ಆ ಚಿತ್ರವನ್ನು ಕಲಾತ್ಮಕವಾಗಿ ಬಿಚ್ಚಿರಿಸುತ್ತಾನೆ ನವ್ಯಕತೆಗಳಿಗೆ ಇಂಥದೇ ಘಟನೆ ಬೇಕೆಂದಿಲ್ಲ ಅಥವಾ ಘಟನೆಯು ಬೇಕೇ ಎನ್ನುವ ಹುಮ್ಮಸ್ಸೂ ಇಲ್ಲ. O'Henryಯ ಕತೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಘಟನಾಪ್ರಾಮುಖ್ಯತೆ ನವ್ಯಕತೆಗಳಲ್ಲಿ ಕಾಣಲೂ ಸಿಗದು. ನವ್ಯ ಹಳೆಯ ಕತೆಗಳಂತೆ ಅವು ನೇರವಾಗಿ ಉಪದೇಶಉಪದ್ವ್ಯಾಪಕ್ಕೆ ನಿಲ್ಲಲಾರವು. ಉಪದೇಶದ ದಿನಗಳು ಉಡುಳಿವೆ. ಮಾನವನ ಅಂತರ್ಮನಸ್ಸಿನ ಅಂದೋಲನದ — ಪರಿಣಾಮಕಾರಿ ಕಲಾತ್ಮಕ ಚಿತ್ರಣವನ್ನು ಕಂಡು—ಓದುಗ ತನಗೆ ತಿಳಿಯದಂತೆ ಸರಿಯಾದ ಹೆಜ್ಜೆ ಇಡಬಹುದು ಎಂದು ಅತಿಶಯಿಸುದಾಗಿದೆ.

ನಾಳಿನ ಸಮಾಜ—ಬರಲಿರುವ ಸಮಾಜ—ಒಳ್ಳೆಯದಾಗಿರಬೇಕೆನ್ನುವ ಕಳಕಳಿ ಹಳೆಯ ಕತೆಗಾರರಲ್ಲಿದ್ದಂತೆ ಇಂದಿನ ನವ್ಯ ಕತೆಗಾರರಲ್ಲಿಯೂ ಇದ್ದೇ ಇದೆ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಹಾರ್ಮೋನಿಯಂ, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲೀಕರು: ಜಿ. ಜಿ. ಮುತ್ತಗಿ

ಇಷ್ಟೆಲ್ಲ ಕೇಳಿದನೆಲೆ— ಕೆಲವರ ಪ್ರಶ್ನೆ ಇದೆ; 'ಕನ್ನಡದಲ್ಲಿ ಪ್ರತ್ಯೇಕವಾಗಿ ನವ್ಯಕತೆಗಳಿವೆಯೇ?' ಎಂದು. ಬಹುಸಂಖ್ಯೆಯಲ್ಲಿ ನವ್ಯಕತೆಗಳು ಕನ್ನಡದಲ್ಲಿ ದೊರಕದೇ ಹೋದರೂ ಇವೆ ಎನ್ನುವ ಮಾತು ಮಾತ್ರ ಸತ್ಯ ಆದರೆ ಅಂಥ ನವ್ಯಕತೆಗಳು—ಆ ಹೆಸರಿನ ಚೀಟಿಯನ್ನು ಅಂಟಿಸಿಕೊಳ್ಳದೆ ಸಾಹಿತ್ಯಲೋಕದಲ್ಲಿ ಇಳಿದುದರ ಮೂಲಕವಾಗಿ, ಅವು ಓದುಗರ ಗಮನವನ್ನೂ ವಿಶಿಷ್ಟ ದೃಷ್ಟಿಯುಳ್ಳ ಸೆಳೆದಿರಲಿಕ್ಕಿಲ್ಲ ಹೀಗಿದ್ದರೂ ಆ ಕತೆಗಳು ರೂಪದಲ್ಲಿ, ಲಕ್ಷಣದಲ್ಲಿ ನವ್ಯಕತೆಗಳೇ.

ಶ್ರೀ ಆನಂದಕಂದರ 'ಹೆಣ್ಣಿನ ಕಣ್ಣು' 'ಮೂರನೆಯ ವರ್ಷದ ಪ್ರಯಾಣ' ಕೆ. ಎ. ಎನ್. ರಾವ್ ಅವರ 'ಹಸಿರು ದೀಪ' ಇವು ನವ್ಯಕತೆಗಳ ಒಳ್ಳೆಯ ನಿದರ್ಶನ. ಶ್ರೀ ದ. ಬಾ. ಕುಲಕರ್ಣಿಯವರ "ಇವಳು" "ಇವನು" 'ಕಪ್ಪು ಹುಡುಗಿ,' ನಾನು ಬರೆದ 'ಕನಸಿನ ಕನ್ನಡಿ'— '...ಣ್ಣಿಕಾಣದ ಗಾಣ' 'ಇದೂ ಒಂದು ಸ್ವಭಾವ' ಇವುಗಳು ನವ್ಯಕತೆಗಳು. ಮೈಸೂರಿನ ಶ್ರೀಮತಿ ಶ್ರೀವೀಣೆಯವರ ಹಲವಾರು ಕತೆಗಳು ನವ್ಯಕತೆಗಳಾಗಿವೆ. ಶ್ರೀ. ವರದರಾಜ ಹುಯಿಲಗೋಳರ 'ಬಾಗಿಲು ತೆರೆದಿತ್ತು' ಒಂದು ನವ್ಯಕತೆಯೇ ಹೀಗೆ ಇದೆ ಎನ್ನುವ ಮಾತು ಖಂಡಿತ ಎಂದು ಹೇಳಿದರೂ, ನವ್ಯಕತೆಗಳ ಬೆಳೆವಣಿಗೆಗೆ ಮಾತ್ರ ತೀರ ಅಸಮಾಧಾನಕರವಾಗಿದೆ ಯೆಂದು ಅಸಮಾಧಾನ ತಳೆಯುದೇ ಗತ್ಯಂತರವಿಲ್ಲ. ನವ್ಯಕತೆಗಳನ್ನು ಜನಪ್ರಿಯಗೊಳಿಸುವ ಭಾರ ಇಂದಿನ ತರುಣ ಕತೆಗಾರರದಾಗಿದೆ.

ಲಲಿತಪ್ರಬಂಧಗಳು

ಪ್ರೊ. ಸ. ಸ. ಮಾಳವಾಡ ಎಂ. ಎ. ಧಾರವಾಡ

ಲಲಿತಪ್ರಬಂಧನೆಂಬ ಸಾಹಿತ್ಯರೂಪ ಭಾವಗೀತದ ಚಿಕ್ಕಪ್ಪನ ಮಗನಂತೆದೆ. ಸ್ವಚ್ಛಂದವಾದ ಭಾವನಾಲಹರಿ ಎರಡರಲ್ಲಿಯೂ ಹರಿಯುತ್ತಿದೆ.

ಚರ್ಚೆ, ಸಮಸ್ಯಾನಿರ್ವಹಣೆ, ಅಧಿಕೃತವಿಮರ್ಶನೆ ಇವು ಶಾಸ್ತ್ರೀಯ ಪ್ರಬಂಧಗಳ ಗುರಿಯಾಗಬಲ್ಲವು. ಲಲಿತಪ್ರಬಂಧಕ್ಕೆ ಇವಾವುವೂ ಬೇಕಾಗಿಲ್ಲ. ಆತ್ಮನಿರೀಕ್ಷಣೆಯ ಭಾವನಾಲಹರಿ ಇಲ್ಲವೆ ವಿಚಾರ ಲಹರಿ ಇಲ್ಲಿಯ ಮುಖ್ಯ ಬಂಡವಾಳ. ಬುದ್ಧಿ-ಭಾವನೆಗಳ ಸಂಗಮ. ವೆನ್ನೂ ಇಲ್ಲಿ ಕಾಣಬಹುದು ನಿರ್ಮಾಣದಂತೆ ವಿಮರ್ಶಕದೃಷ್ಟಿಯೂ ಇಲ್ಲಿ ಬೇಕಾಗುತ್ತದೆ. ಧ್ಯಾನಾಸಕ್ತನಾಗಿ ಲೇಖಕನು ತನ್ನ ಸೃಷ್ಟಿ ಕ್ರಿಯೆಯನ್ನು ಹೊರಹೊಮ್ಮಿಸುತ್ತ ಸಾಗುವಲ್ಲಿ ಲಲಿತಪ್ರಬಂಧ ರೂಪುಗೊಳ್ಳುತ್ತದೆ.

ಲಲಿತಪ್ರಬಂಧಕಾರ ಅನಾಸಕ್ತ ನಿರೀಕ್ಷಕನಾದಷ್ಟೂ ಒಳ್ಳೆಯದು. ಭಾವನೆಗಳ ಇಲ್ಲವೆ ವಿಚಾರದ ಸರಪಣಿಯನ್ನು ಮುಂದುವರಿಸುತ್ತ, ತನ್ನ ಮನದ ಪ್ರ ಕ್ರಿಯೆಗಳನ್ನು ರಮಣೀಯವಾಗಿ ಪೋಣಿಸುತ್ತ ಸಾಗುವ ಲಲಿತಪ್ರಬಂಧ ಸ್ವಾರಸ್ಯಕರವಾಗುತ್ತದೆ. ಲೋಕದ ಡೊಂಕನ್ನು ತಿದ್ದಬೇಕೆನ್ನುವ ಹಟವನ್ನು, ಚಟವನ್ನು ಇಟ್ಟುಕೊಳ್ಳದ ಲೇಖಕರ ಲಲಿತಪ್ರಬಂಧಗಳು ರಸವತ್ತಾಗಿರುವುದನ್ನೂ ನಾವು ಕಾಣುತ್ತೇವೆ.

ಲಲಿತಪ್ರಬಂಧದ ಬಾಂಧವ್ಯವನ್ನು ನಾವು ಭಾವಗೀತೆಗೆ ಮಾತ್ರ ಪರಿಮಿತಗೊಳಿಸಬೇಕಾಗಿಲ್ಲ. ಪತ್ರಲೇಖನದೊಂದಿಗೂ ಈ ಸಾಹಿತ್ಯರೂಪದ ನಂಟನ್ನು ಗುರುತಿಸಬಹುದು. ಸೊಂಪಿನ ಸಂಭಾಷಣೆಯು ಲಲಿತ ರೂಪವನ್ನು ಪಡೆದು ಲಲಿತಪ್ರಬಂಧವಾಗಬಹುದು. ಕಾದಂಬರಿಗಳಲ್ಲಿ ಲಲಿತಪ್ರಬಂಧಗಳನ್ನು ಅಳವಡಿಸಿಕೊಂಡ ಉದಾಹರಣೆಗಳೂ ಇವೆ. ಹೀಗೆ ಲಲಿತಪ್ರಬಂಧದ ನಂಟು ಹಬ್ಬಿ ಬಲ್ಲದು. ಲಲಿತಪ್ರಬಂಧಕಾರ ನಿರ್ದಿಷ್ಟ ಗುರಿಯನ್ನು ತಲುಪುವ ನಿರ್ಧಾರಕ್ಕೆ ಕಟ್ಟು ಬೀಳಲಾರ. ಅಲೆದಾಟದಲ್ಲಿಯೇ ದೃಷ್ಟಿಗೊಳ್ಳುವ ರಸ ಜೀವಿಯಾತ. ಕೇಂದ್ರದತ್ತ ಮತ್ತೆ ಮತ್ತೆ ಹುಳಿಯುವ ಅಲೆದಾಟದಲ್ಲಿ ತನ್ನದೇ ಆದ ಅನೌಪಚಾರಿಕ ಬಗೆಯಲ್ಲಿ ಸೊಗಸನ್ನು ಕಾಣುವನು. ತೋಯುವನಿಂತ ಕಣ್ಣಿಕತೆಗಾರನಂತೆ ಆಪ್ತವೆನಿಸಿದೊಂದು ವಿಷಯದ ಒಂದು ಮುಖವನ್ನು ಲಲಿತಪ್ರಬಂಧಕಾರ ಚಿತ್ರಿಸಿದರೂ ಸಾಕು ಸಮಗ್ರ ದೃಷ್ಟಿಯನ್ನು ಸಂಪೂರ್ಣ ನಿರೂಪಣೆಯನ್ನು ನಾವು ಅತಿ ನಿಂದ ಅಪೇಕ್ಷಿಸಬೇಕಾಗಿಲ್ಲ. ಸಾಹಿತ್ಯೋದ್ಯಾನವಲ್ಲಿ ಭಾವಗೀತೆ, ಕಣ್ಣಿಕತೆ, ಲಲಿತಪ್ರಬಂಧಗಳು ಗುಲಾಬಿ ಮಲ್ಲಿಗೆ ಜಾಜಿಗಳಂತೆ ಎಂದೂ ತಿಳಿಯಬಹುದಾಗಿದೆ.

ಲಲಿತಪ್ರಬಂಧ ಮುಖ್ಯವಾಗಿ ವ್ಯಕ್ತಿನಿಷ್ಠ ಮಾದರಿಗೆ ಸೇರಿದುದಾಗಿದೆ. ವಸ್ತುನಿಷ್ಠವಾಗಿದ್ದೂ ಪ್ರಬಂಧವನ್ನು ಲಲಿತವನ್ನಾಗಿ ಮಾಡುವುದೂ ಸಾಧ್ಯವಾಗಬಹುದು. ಸಂಯಮವಿಹೀನವಾದ ಭಾವ ಪ್ರಣಾಲಿಯನ್ನು ಮತ್ತು ವಿಚಾರಪ್ರಣಾಲಿಯನ್ನು ಹೊರಹೊಮ್ಮಿಸುವ ಅಂಗ್ಲ ಲಲಿತಪ್ರಬಂಧಗಳ ಸೊಗಸನ್ನು ನಮ್ಮ ಜನ ಅರಿತಿದ್ದಾರೆ. ಕನ್ನಡ ಲಲಿತಪ್ರಬಂಧಗಳ ವ್ಯಾಪ್ತಿ ಅಷ್ಟೆಂದು ಹರಿದಿಲ್ಲವೆಂಬುದೂ ನಿಜ. ಆದರೆ ಅಂತಹ ಸೊಗಸನ್ನು, ಕಲೆಯನ್ನು ಮೈಗೂಡಿಸಿಕೊಂಡ ಲಲಿತಪ್ರಬಂಧಗಳ ಸಂಗ್ರಹಗಳೂ ನಮ್ಮಲ್ಲಿ ಹಲವು ಬಂದಿವೆ. ಮೂರ್ತರಾಯರ ಹಗಲುಗನಸುಗಳು. ಪು. ತಿ. ನರಸಿಂಹಾಚಾರ್ಯರ 'ಈಚಲುಮರದ ಕೆಳಗೆ' ಮಂಜುನಾಥ್ ಅವರ 'ಪುಸ್ತಕವನ್ನು ಬಿಡು' ಎಂಬ ಸಂಗ್ರಹಗಳನ್ನು ಒಳ್ಳೆಯ ಮಾದರಿಯೆಂದು ಸೂಚಿಸಬಹುದು. ಬೇಂದ್ರೆಯವರ ನಿರಾಭರಣ ಸುಂದರಿಯಲ್ಲಿಯ ಹರಟೆಗಳು ರಸವಂತಿಕೆಯೊಂದಿಗೆ ವಿಚಾರ ಪ್ರಚೋದಕವಾಗುವಲ್ಲಿಯೂ ಯಶಸ್ಸು ಗಳಿಸುವಂತವೆ ಈ ಸಂಗ್ರಹಗಳನ್ನು ಉಳಿದೂ ಬಿಡಲಾಗಿ ಬಂದಿರುವ ಕನ್ನಡ ಲಲಿತಪ್ರಬಂಧಗಳು ನಿಯತಕಾಲಿಕ ಪತ್ರಿಕೆಯ ವಿಶಿಷ್ಟ ಬರೆಹಗಳು ಓದುಗರ

* ಲಲಿತಪ್ರಬಂಧಕಾರರ ವಿಚಾರಸಂಕಿರಣದ ಅಧ್ಯಕ್ಷರಾಗಿ ಮಾಡಿದ ಪ್ರಾರಂಭಭಾಷಣವಿದು.

ವಿಮರ್ಶಕರ ಮೆಚ್ಚಿಗೆಯನ್ನು ಗಳಿಸಿವೆ. ಆದರೆ ಈ ವಿಭಾಗ ಕನ್ನಡದಲ್ಲಿ ಇನ್ನೂ ಬೆಳೆಯಬೇಕಾಗಿದೆಯೆಂಬುದೂ ನಿಜ. ಮೇಲೆ ಸೂಚಿಸಿದ ನಾಲ್ಕು ಸಂಗ್ರಹಗಳ ಲೇಖಕರಲ್ಲಿ ಇಬ್ಬರು ಒಳ್ಳೆಯ ಭಾವಗೀತಗಳ ಕವಿಗಳೂ ಆಗಿರುವುದನ್ನು ನೆನೆದಾಗ, ಭಾವಗೀತಕ್ಕೂ ಲಲಿತಪ್ರಬಂಧಕ್ಕೂ ಅಂಟಿದ ನಂಟು ತೀರ ಹತ್ತಿರದ್ದೆಂದೂ ತಿಳಿಯುತ್ತದೆ.

ಲಲಿತಪ್ರಬಂಧಗಳಲ್ಲಿ ನಾವು ತರ್ಕಬದ್ಧ ವಿವೇಚನೆಯನ್ನು ಅಪೇಕ್ಷಿಸಬಾರದು, ನಿಜ. ಆದರೆ ಅಲ್ಲಿಯೂ ವಿವೇಚನೆಯು ಅಸಂಬದ್ಧವೆಂದೂ ಹೇಳಬಾಗದು. ಎಲ್ಲರನ್ನೂ ಹೊಟ್ಟೆಹುಣ್ಣಾಗಿಸುವಂತೆ ನಗಿಸುವ ಅಂತಹ ನಗೆಗೆ ಬಲಿಯಾಗಿ ರೋಷತಪ್ತರಾದವರನ್ನೂ ನಗೆಗೆ ಪ್ರಚೋದಿಸುವ ಬೀಚಿಯ ಮೊಂಚಿನ ಬರಹಗಳೂ ಅವುದೋ ಒಂದು ಸೂಕ್ಷ್ಮ ತರ್ಕವನ್ನು ಗರ್ಭೀಕರಿಸಿಕೊಂಡೇ ಸಾಗುತ್ತವೆ. ಆ ತರ್ಕವು ವಿಚಿತ್ರವೆಂದೂ ಒಪ್ಪಬಹುದು. ಆದರೆ ಅಲ್ಲಿ ಕುತರ್ಕವಿಲ್ಲವೆಂಬುದನ್ನು ನಾವು ಗಮನಿಸಲೇಬೇಕು. ಕುತರ್ಕ ತಲೆದೋರಿದಾಗ ಅವುದೊಂದು ಬರಹವು ಲಲಿತಪ್ರಬಂಧದ ಸೀಮೆಯನ್ನು ದಾಟುವುದೆಂದು ಹೇಳಬೇಕು. ಹುಚ್ಚುತನವೆಂಬ ತೋರುವ ಕ್ರಮಬದ್ಧತೆಯನ್ನು ತಂದು ತೋರಿಸುವ ಕಲೆಯನ್ನು ಲಲಿತಪ್ರಬಂಧ ಮೈಗೂಡಿಸಿಕೊಳ್ಳುತ್ತದೆ. ಬಾಹ್ಯ ಸನ್ನಿವೇಶಗಳನ್ನು ಕಲ್ಪನೆಯ ಬಣ್ಣದ ಗಾಜಿನಲ್ಲಿ ತೋರಿದರೂ ವಸ್ತುಸ್ಥಿತಿಯ ಸೂಕ್ಷ್ಮರೇಖೆಗಳ ಪ್ರಜ್ಞೆಯನ್ನು ತಂದುಕೊಡುವಲ್ಲಿ ಲಲಿತಪ್ರಬಂಧಕಾರ ಹೆಚ್ಚು ಯಶಸ್ವಿಯಾಗಬಲ್ಲ.

ಉದ್ವೀಪನಗೊಂಡ ಚಿತ್ತವೃತ್ತಿ, ಅರ್ಥಗರ್ಭಿತ ಭಾವಪೂರ್ಣ ಚಿತ್ರಣ, ಒನ್ಮೊಮ್ಮೆ ಸಂತಾಪ, ರೋಷ, ಅಸಹನೆ, ಗೊಣಗಾಟಗಳನ್ನು ಚುಚ್ಚುವಂತೆ ಆದರೆ ಗಾಯವಾಗದಂತೆ ನಿರೂಪಿಸುವ ಬಗೆ. ಇವುಗಳ ಮೂಲಕ ಲಲಿತಪ್ರಬಂಧ ರಸವತ್ತಾಗಿ, ಪ್ರಖರವಾಗಿ ಆದರೆ ಉಳಿದ ಸಾಹಿತ್ಯರೂಪಗಳಿಗಿಂತ ಹೆಚ್ಚಿನ ದ್ರುತಗತಿಯಲ್ಲಿ ಆಡಳಕವಾದ ಶೈಲಿಯಲ್ಲಿ ತನ್ನ ಸಫಲತೆಯನ್ನು ಪಡೆಯುತ್ತದೆ.

ಅಂತೆಯೆ ಲಲಿತಪ್ರಬಂಧ ಕನ್ನಡದಲ್ಲಿ ಬೆಳೆದುಬಂದ ಬಗೆ, ಅದರ ವಿಶೇಷಲಕ್ಷಣಗಳು ವಿವಿಧ ಮಾದರಿಗಳು, ಅವುಗಳಲ್ಲಿಯ ಪಾಠ್ಯ, ಕನ್ನಡ ಲಲಿತಪ್ರಬಂಧಗಳ ಭವಿಷ್ಯ—ಇತ್ಯಾದಿ ಅಂಶಗಳನ್ನು ಕುರಿತ ವಾಸಂಗಪೂರ್ಣ ವಿವೇಚನೆ ಒಳ್ಳೆಯ ಉಪಯುಕ್ತತೆಯನ್ನು ಸಾಧಿಸಬಲ್ಲದು.

ನಮ್ಮ ಲಲಿತಪ್ರಬಂಧಗಳ ಒಂದು ಸಂಕ್ಷಿಪ್ತ ಸಮಾಲೋಚನೆ

'ಎನ್ನ'

ಧಾರವಾಡಕ್ಕೆ ಹರಟೆಯೇನು ಹೊಸದಲ್ಲ; ಹರಟೆ ಬರೆಯುವವರು ಕಡಿಮೆ ಇದ್ದರೂ ಹರಟೆಹೊಡೆಯುವವರು ಸಾಕಷ್ಟು ಜನರಿದ್ದಾರೆ. ಹಾಗೆ ನೋಡಿದರೆ ಧಾರವಾಡದಲ್ಲಿ ಹರಟೆಯಿಲ್ಲದ ಜಗಲಿಯೇ ಇಲ್ಲವೆನ್ನಬಹುದು. ಸಂಜೆಯ ಹೊತ್ತು—ವಾಹನ ಸಂಚಾರಕ್ಕೆ ಅತಂಕವಾಗುವಷ್ಟು—ಕೂಟಕೂಟಗಳಿಗೆ ಕಡಲೆಗಿಡ ತಿನ್ನುತ್ತ ಹರಟೆ ಹೊಡೆಯುತ್ತಿರುವ ಕಾಲೇಜ ಯುವಕರು, ದತ್ತಾತ್ರೇಯ ಗುಡಿಯ ಕಟ್ಟೆಗೆ ಕುಳಿತು ಹರಟೆಹೊಡೆಯುತ್ತಿರುವ ನಿವೃತ್ತರೂ ನಿರುದ್ಯೋಗಿಗಳೂ ಆದ ವೃದ್ಧಜನರು, ಹಾಲಗೆರೆಯ ದಂಡೆಗೆ; ಕೆರೆಯ ಕೆಳಗಿನ ಓಣಿಯ ನಳದ ಕಟ್ಟೆಗೆ ಹರಟೆಹೊಡೆಯುವ ಸ್ತ್ರೀಯರು ಇವರಲ್ಲಿ ಅನೇಕರು ಉತ್ತಮ ಹರಟೆಗಾರರಾಗಿ ಹೊರಹೊಮ್ಮಬಹುದು. 'ಹರಟೆಯ ಮಲ್ಲ' ಎಂಬ ಶಬ್ದವೂ ಧಾರವಾಡದಲ್ಲೇ ಉಗಮವಾಗಿರಬೇಕು. ಶಾಸ್ತ್ರೀಯ ಉಗಮವಾದಂತೆ ಧಾರವಾಡ ಅನೇಕ ಸಾಹಿತ್ಯವಾಹಿನಿಗಳಿಗೆ ಉಗಮವಾದರೂ, ಇಲ್ಲಿ ಆ ವಾಹಿನಿಗಳೂ ಪೂರವಾಗಿ ಹರಿದಿಲ್ಲ.

ಉತ್ತರಕರ್ನಾಟಕದ ಮಟ್ಟಿಗೆ ಹೇಳುವುದಾದರೆ 'ಹರಟೆ' ಎಂಬ ಸಾಹಿತ್ಯಪ್ರಕಾರ ಪ್ರಾಧ್ಯಾಪಕ ಮಾ. 'ಗೆಳೆಯರ ಗುಂಪಿನ' ಪ್ರವರ್ತಕರಾದ ಶ್ರೀ. ವೀಂಬ್ರೈಯವರಿಂದ, ಶ್ರೀ. ವೀಂಬ್ರೈಯವರಂತೆ ಗೆಳೆಯರ ಗುಂಪಿನಲ್ಲಿ ಕೆಲವರು ಉತ್ತಮ ಹರಟೆಗಾರರಾಗಿ ಪ್ರಸಿದ್ಧಿಗೆ ಬಂದರು. ಶ್ರೀ. ವೀಂಬ್ರೈಯವರ ಹರಟೆಯ ವಿಷಯ 'ಉಗುಳುವುದೆ'ರಿಂದ 'ಹೆಕ್ಕಪಾಮುದ್ರಿಕದ ಪ್ರಥಮ ಪಾಠ'ದ ವರೆಗೂ ವ್ಯಾಪಿಸಿದೆ. ಹರಟೆಗೆ ಇಂಥ ವಿಷಯವೇ ಬೇಕೆಂಬುದಿಲ್ಲ. 'ಪರಮಾಣ್ವಾದಿಂದ ಪರಮಾನ್ನದ ವರೆಗೆ ಯಾವ ವಿಷಯವೂ ಅಡೀತು. ಪಾಶ್ಚಾತ್ಯರಲ್ಲಿ ಬಹಳ ಕ್ಲಬ್ಬುಗಳಲ್ಲಿ ಜನ್ಮತಾಳಿದ ಲಲಿತಪ್ರಬಂಧಪ್ರಕಾರವನ್ನೂ ಹೊಸ ಸಾಹಿತ್ಯಕ್ಕೆ ಒಂದು ವಿಶೇಷರೂಪ, ಶೈಲಿ ಕೊಟ್ಟು ಪ್ರಚಾರದಲ್ಲಿ ತಂದವರು ವೀಂಬ್ರೈಯವರು; ವ್ಯಕ್ತಿಚಿತ್ರ ಕುಶಲರಾದ ಶ್ರೀ. ನಿವ್ವವ್ವನವರಲ್ಲಿ ಕೃಷ್ಣಶರ್ಮರು.

ವೀಂಬ್ರೈಯವರ ತರುವಾಯ ಶ್ರೀರಂಗರು 'ಹರಟೆ' ರೂಪವನ್ನು ಇನ್ನಷ್ಟು ಹದವಾಗಿಸಿ, ಹದವಾಗಿಸಿ ತಮ್ಮ 'ಮುತುಸಂಹಾರ' ವ್ಯಕ್ತಿಚಿತ್ರಗಳಲ್ಲಿ ಸ್ವಾರಸ್ಯ'ಗಳ ಮೂಲಕ ಹರಟೆಯಲ್ಲಿ ವಿಡಂಬನವನ್ನೂ ವ್ಯಂಗ್ಯವನ್ನೂ ತೋರಿಸಿದರು. ವಿವಿಧ ಸಾಮಾಜಿಕ ವ್ಯಕ್ತಿಗಳು, ರಾಜಕಾರಣಿಗಳು, ಮುತ್ಸದ್ದಿಗಳು ಶ್ರೀರಂಗರ ಹರಿತವಾದ ಹರಟೆಯ, ವಿಡಂಬನೆಗೆ ಪಕ್ಕಾದರು.

ಮನೋಹರ ಗ್ರಂಥಮಾಲೆಯ ಶ್ರೀ. ಜಿ. ಬಿ ಜೋಶಿಯವರು ಸಂಪಾದಿಸಿ ಪ್ರಸಿದ್ಧಿಸಿದ 'ಸುಳುವು ಹೊಳವು' ಇಪ್ಪತ್ತು ವರುಷಗಳ

[redacted] × [redacted]

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅಂಡ್ ಜೋಂಟಿಂಗ್ ವರ್ಕ್ಸ್

ಗಾಂಧಿಬಜಾರ್, ಧಾರವಾಡ

[redacted] × [redacted]

ಹಿಂದೆ ಹರಟೆಯು ಸಾಹಿತ್ಯದ ಒಂದು ಮಾದರಿ ಸಂಗ್ರಹವಾಗಿ ನಿಂತಿದೆ. ಗೆಳೆಯರ ಗುಂಪಿನಿಂದ ಪ್ರಕಟವಾದ 'ಹರಟೆಗಳು' ಒಂದು ಭಿನ್ನವಾದರೆ 'ಸುಳಿವು ಹೊಳವು' ಇನ್ನೊಂದು ಭಿನ್ನ. ಇದರಲ್ಲಿ ವರ್ಣನಪರ, ಚಿಂತನಪರ, ಹರಟೆಗಳು, ಕೇವಲ ಹರಟೆಗಳು, ವ್ಯಂಗ್ಯ ಹರಟೆಗಳು, ವ್ಯಕ್ತಿ ಚಿತ್ರಗಳು, ವಿಡಂಬನೆಗಳು ಎಲ್ಲ ಪ್ರಕಾರಗಳೂ ಸಂಗಮಿತವಾಗಿವೆ.

ಮೈಸೂರು ಕರ್ನಾಟಕದವರಲ್ಲಿ ಶ್ರೀ. ಎ. ಎಸ್. ಮೂರ್ತಿರಾಯರ 'ಹಗಲುಗನಸುಗಳು' ಗದ್ಯಕಾವ್ಯಗಳಿದ್ದಂತೆ. ಇವು ಸರಸ ಸುಂದರ ಪ್ರಬಂಧಗಳು. ಕೇವಲ ಲಲಿತಪ್ರಬಂಧಗಳು. 'ಹೂಗಳು' ಅರಳಿದ ಹಾಗೆ ಅರಳಿ ನಿಂತಿವೆ 'ಹಗಲುಗನಸು'ಗಳಲ್ಲಿ

ಶ್ರೀ. ವಿ. ಸಿ. ಯವರ 'ಪಂಚಾಯಾತ್ರೆ'—ತಿಮಿಯಾಗಿಯೇ ಒಂದು ಸೀಳಹರಟೆಯನ್ನಬಹುದು. ವ್ಯಕ್ತಿಚಿತ್ರಣ, ವರ್ಣನೆ, ವಿನೋದಸ್ವಾರಸ್ಯ, ಮನರಂಜನೆ ಎಲ್ಲಾ ಸಮತೋಲವಾಗಿ ಬೆರೆತು, ಕೊಂತಿವೆ. 'ಪಂಚಾಯಾತ್ರೆ'ಯಲ್ಲಿ ವಿ. ಸಿ. ಯವರ ಬಿಡಿ ಶೈಲಿಯು ಉತ್ತಮ ಉದಾಹರಣೆಗಳಾಗಿ.

ದಕ್ಷಿಣ ಕನ್ನಡಜಿಲ್ಲೆಯು ಕಾರಂತರು ತಾವು ಕಂಡಂತೆ ಹರಟೆಗಳನ್ನೂ ತಮ್ಮ ಮೇಲೆ ಪರಿಣಾಮಮಾಡುವುದು ವಿಡಂಬನಕಾರರೆಂದೇ ಇವರ ಹರಟೆಗಳು 'ಹರಟೆ' ಎಂಬ ಪ್ರಕಾರವಿಂದ ಸ್ವಲ್ಪ ದೂರ ಆಗಿದ್ದರೂ, ತಮ್ಮದೇ ಒಂದು ವಿಶಿಷ್ಟ ಹೊಸ್ತ ರೀತಿಯಿಂದ ಮಾರ್ಮಿಕವಾದ ಶೈಲಿಯಿಂದ ವಿಡಂಬನ ಸಾಹಿತ್ಯಕ್ಕೆ ಒಂದು ನವೀನ ಮಾದರಿಯಾಗಿವೆ. ದೊಡ್ಡವರಲ್ಲಿಯ ಅಲ್ಪತೆಯನ್ನೂ, ಅಲ್ಪರಲ್ಲಿಯ ದೊಡ್ಡತೆಯನ್ನೂ ಚಿತ್ರಿಸುವ 'ಚಿಕ್ಕ–ದೊಡ್ಡವರು' 'ಹುಚ್ಚು ಮನಸ್ಸಿನ ಹತ್ತು ಮುಖಗಳು', 'ಮೈಗಳ್ಳನ ದಿನಚರಿಯಿಂದ' 'ಮೈಲುಕಲ್ಲಿನೊಡನೆ ಮಾತುಕತೆಗಳು' ಇವೆಲ್ಲಾ ಒಂದು ಬಗೆಯಾದ ಲಲಿತಪ್ರಬಂಧಗಳೆ ಕೆಲವು ಅನುಭವ ನಿರೂಪಣೆಯು ರೀತಿಯಲ್ಲಿ 'ದಿನಚರಿ'ಯ ರೂಪ ತಾಳಿರಬಹುದು, ಕೆಲವು ಸಂಗತಿ–ಸನ್ನಿವೇಶಗಳ ನಿರೂಪಣೆಯು ಮೂಲಕ ಕಣ್ಣಳತೆಯ ಅಂಚಿಗೆ ಬಂದು ನಿಲ್ಲಬಹುದು, ಕೆಲವು ವ್ಯಕ್ತಿಚಿತ್ರ ಪ್ರಕಾರವನ್ನು ಹೋಲಬಹುದು.

ವ್ಯಂಗ್ಯ, ವಿಡಂಬನಸಾಹಿತ್ಯಕ್ಕೆ ಮತ್ತೊಂದು ಮೊಗೆಯಿತ್ತವರು ಶ್ರೀ. ಶಾ. ಶಿಮ್ಮೂರಿ ಅವರು; 'ರಾ. ಶಿ.' ಅವರು, ಜಿ. ಪಿ. ರಾಜರತ್ನಂ ಅವರು. ಮೂವರೂ ಮೂರು ಬಗೆಯ ಮುಖಗಳನ್ನು ಹರಟೆಯು ಸಾಹಿತ್ಯಕ್ಕೆ ಕೊಟ್ಟಿದ್ದಾರೆ.

ಇತ್ತೀಚಿನ ಮೂವರು ಹರಟೆಗಾರರ ಮೂರು ವಿಧದ ಹರಟೆಗಳನ್ನು 'ಬೀಚಿ' ಅವರು ಸಂಪಾದಿಸಿ ಪ್ರಕಟಿಸಿದ 'ತ್ರಿಶೂಲಿಗಳು' ಎತ್ತಿ ತೋರಿಸುತ್ತವೆ.

ಶ್ರೀ. ಗೊರೂರ ರಾಮಸ್ವಾಮಿಯವರ ಹಳ್ಳಿಯ ಚಿತ್ರಗಳು, ಶ್ರೀ. ಕೆ. ವಿ. ಪುಟ್ಟಪ್ಪನವರ 'ಮಲೆನಾಡಿನ ಚಿತ್ರಗಳು' ಶ್ರೀ. ವಾಮನಭಟ್ಟರ 'ಕೋದಂಡಪಳು ಉಪನ್ಯಾಸಗಳು' ಮತ್ತೆ ಮೂರು ವಿಧವ ವರ್ಣನ ಪರಪ್ರಭಾವಗಳಿಗೆ ನಿದರ್ಶನಗಳಾಗಿವೆ.

ಇತ್ತೀಚಿನ ವಿಡಂಬನಾತ್ಮಕ ಪ್ರಬಂಧಕಾರರಲ್ಲಿ 'ಬೀಚಿ' ಕಾಡಿಗೇರ ಕೃಷ್ಣರಾಯರು, ಜಿ. ಪಿ. ಸುಬ್ಬರಾವ್ ಅವರೂ ವಿನೋದ ವರ್ಣನೆಗಳ ಸರಿದೆರೆಕೆಯ ಪ್ರಬಂಧಕಾರರಲ್ಲಿ ಎಸ್. ಮಂಜುನಾಥ್, ಎನ್. ಎಸ್. ಗದಗಕರ, ಬಿ. ಆರ್. ವಾಡಪ್ಪಿ. ಎನ್ನೆ ಅವರೂ ಗ್ರಂಥರೂಪದಲ್ಲಿ ಸಾಹಿತ್ಯವನ್ನು ಒದಗಿಸಿದವರಲ್ಲಿ ಕೆಲವರಾಗಿದ್ದಾರೆ.

ಪತ್ರಿಕಾಸಾಹಿತ್ಯದ 'ಅಪ್ಪಾಭಟ್ಟನ ಹೊತ್ತಿಗೆ', 'ಮಂಗಳೆಲ್ಲಿಣಾಥನ' 'ಲಾಂಗೂಲಾಚಾರ್ಯರ ಓದುಗರೊಡನೆ ಹರಟೆ'ಗಳು ವಾಚಕಪ್ರಿಯವಾಗಿವೆ.

ಒಟ್ಟಿನ ನಮ್ಮಲ್ಲಿ ಹರಟೆಯು ಸಾಹಿತ್ಯ ಕಡಿಮೆ. ಪ್ರಬಂಧಗಳು, ಲಲಿತಪ್ರಬಂಧಗಳೂ, ಪತ್ರಿಕಾಸಾಹಿತ್ಯ ಪ್ರಬಂಧಗಳೂ, ವ್ಯಂಗ್ಯ ಚಿತ್ರಣಗಳೂ, ವ್ಯಕ್ತಿಚಿತ್ರಣಗಳೂ, ಸ್ವಾತಂತ್ರ್ಯೋತ್ತರದ ದ್ವಿತೀಯ ದಶಕದಲ್ಲಿಯಾದರೂ ಒಳ್ಳೆಯ ಗಾತ್ರದಲ್ಲಿ ಹುಟ್ಟಿ ಬೆಳೆದರೆ ನಮಗೆ ಸಂತೋಷ.

ಲಲಿತಪ್ರಬಂಧಗಳ ಕೆಲವು ವಿಶೇಷ ಲಕ್ಷಣಗಳು

ಶ್ರೀ. ಎ. ಕೆ. ರಾಮಾನುಜಂ.

[ಸಂಗ್ರಾಹಕರು: ಜಿ. ಎನ್. ಕುಂದರಗಿ].

ಫ್ರೆಂಚ್ ಮಹನೀಯನೋರ್ವ ಎಂಟು ಪುಟದ ಸುದೀರ್ಘ ಪತ್ರ ಬರೆದು ಕೊನೆಗೆ 'Post Script' ನಲ್ಲಿ 'ನನಗೆ ಬರೆಯುವ ಪೂರ್ವದಲ್ಲಿ ಕಾಲಾವಕಾಶವಿರದ್ದರಿಂದ ಪತ್ರ ಬಹಳ ಬೆಳೆಯಿತು. ಕಾಲಾವಕಾಶ ದೊರೆತಿದ್ದರೆ ಸಂಗ್ರಹವಾಗಿ ಸೂಕ್ಷ್ಮವಾಗಿ ಪತ್ರ ಬರೆಯುತ್ತಿದ್ದೆ' ಎಂದು ಬರೆದಿದ್ದನಂತೆ. ನಿಜಕ್ಕೂ ವಿಸ್ತಾರವಾಗಿ–ಸುದೀರ್ಘವಾಗಿ ಬರೆಯುವುದಕ್ಕಿಂತ ಸೂಕ್ಷ್ಮವಾಗಿ ಸೂಚ್ಯವಾಗಿ, ಸಂಗ್ರಹವಾಗಿ ಬರೆಯುವುದರಲ್ಲಿ ಹೆಚ್ಚಿನ ಚಾಣಕ್ಷತನವಿದೆ. ಅದಕ್ಕೆ ಬುದ್ಧಿಯ ಪೊನೆಬೇಕು. ಮನಸ್ಸಿನ ನಿಗ್ರಹ ಬೇಕು. ಇದು ಲಘು ಪ್ರಬಂಧದ ಮುಖ್ಯ ವಿಶಿಷ್ಟ ಲಕ್ಷಣ.

ಸನ್ಮಾನ್ಯ ಅಧ್ಯಕ್ಷರು ಈಗಾಗಲೇ ಲಲಿತಪ್ರಬಂಧದ ಭಿನ್ನ ಭಿನ್ನ ಲಕ್ಷಣಗಳನ್ನು ಎತ್ತಿ ತೋರಿಸಿದ್ದರಿಂದ ನನ್ನ ಮನಸ್ಸನ್ನು ಮುಖ್ಯವಾಗಿ ಲಘುಪ್ರಬಂಧದೆಡೆಗೇ ಇಡುವೆ. ಆಗಲೇ ಹೇಳಿದಂತೆ ಸೂಚ್ಯತೆ, ವ್ಯಕ್ತಿತ್ವದ ವಿಶಿಷ್ಟ ನಿರೂಪಣೆಯೆ ಈ ಲಘುಪ್ರಬಂಧದ ಮುಖ್ಯ ಗುರಿ. ಈ ಲಘುಪ್ರಬಂಧದಲ್ಲಿ ಜೀವನದ ರಾಗದ್ವೇಷಗಳಾಗಲಿ, ನೋವು ನಲಿವುಗಳಾಗಲಿ, ನಮಗೆ ಕಾಣದೆ ಹೋಗಬಹುದು. ಆದರೆ ಮುಖ್ಯ ಕೇಂದ್ರಕ್ಕಿಂತ ಸುತ್ತು ಮುತ್ತು ಅಲೆದಾಡುವುದರಲ್ಲಿಯೇ ಈ ಲಘುಪ್ರಬಂಧದ ಜೀವವಿದೆ. 'ಮೃಚ್ಛಕಟಿಕ' ದಲ್ಲಿ ಬರುವ ಚಾರುದತ್ತ ಕಳ್ಳನು ಕದ್ದ ಸಾಮಾನಿನೆಡೆಗೆ ಅಷ್ಟೊಂದು ಲಕ್ಷ್ಯವನ್ನೀಯದೆ 'ಕಳ್ಳ' ಅದೆಷ್ಟು ಅಂದವಾಗಿ ಕನ್ನವನ್ನು ಕೊರೆದಿದ್ದಾನಲ್ಲ! ಎಂದು ಹೇಳುವುದರಲ್ಲಿ,— 'ಆಂಡಿಯವ' ನ ಕತೆಯಲ್ಲಿ ಆ ಮುಕ್ಕಳು ಪೋಷ್ಟಮನ್ ಹೇಳುವ ಕತೆಗಿಂತ ಅತನು ತಾನೆ ಹೇಳುವಾಗ ಅತನ ವಿಷಾದ ನುಣುಪನ್ನೂ–ಏರಿಳಿತವನ್ನೂ ಹೆಚ್ಚು ಧ್ಯಾನಪೂರ್ವಕವಾಗಿ ನೋಡುವುದರಲ್ಲಿ,—ಕೇಂದ್ರ ಬಿಂದುವಿಗಿಂತ ಸುತ್ತು ಮುತ್ತಲು ಅಲೆದಾಡುವುದರಲ್ಲಿ ಲಘುಪ್ರಬಂಧದ ಮೇಲ್ಮೈಯುಂಟು.

ಇಂಥ ಲಘುಸ್ವಬಂಧದ ಜನಕ Montague. Hiller Bellock ನ 'On Nothing', 'On everything' 'On'; Lamb ನ 'Compasions of a drunkard' ಮೊದಲಾದವು ಲಘುಪ್ರಬಂಧದ ಲಲಿತಪ್ರಬಂಧದ ಉತ್ತಮ ಉದಾಹರಣೆಗಳು.

ಈ ಲಘುಪ್ರಬಂಧವನ್ನು ಬರೆಯಬೇಕಾದರೂ ಒಂದು ವಿಶಿಷ್ಟ ಮಾನವ ದೃಷ್ಟಿಕೋನಬೇಕು. ಎ. ಎನ್. ಮೂರ್ತಿರಾಯರ ಆ ದೃಷ್ಟಿ—ನೇರನೋಟಕ್ಕಿಂತ ಕಡೆಗಣ್ಣಿನ ನೋಟ–ಓರೆನೋಟ–ಈ ಲಘುಪ್ರಬಂಧದಲ್ಲಿ ಅವಶ್ಯ. ಏಕೆಂದರೆ ನಾವೆಲ್ಲ ಸಾಮಾನ್ಯವೆಂದು ತಿಳಿದು ಅಲಕ್ಷ್ಯ–ಅಸಡ್ಡೆ ಮಾಡುವ ಸನ್ನಿವೇಶ–ಚಿತ್ರಗಳನ್ನೇ, ಲಘುಪ್ರಬಂಧಕಾರ ವಿಶಿಷ್ಟ ದೃಷ್ಟಿಕೋಣದಿಂದ ಕಂಡುಕೊಂಡು ಅದರಲ್ಲಿ ಜೀವವನ್ನು–ರಸವಂತಿಕೆಯನ್ನು ತುಂಬುತ್ತಾನೆ; ತನ್ನ ಅಸಾಮಾನ್ಯತೆಯ ಕೈಚಳಕವನ್ನು–ಕೌಶಲ್ಯವನ್ನು ತೋರಿಸುತ್ತಾನೆ.

ಲಘುಪ್ರಬಂಧ ಬುದ್ಧಿಯ ಚಮತ್ಕಾರವಲ್ಲ; ನೀತಿಯ ಪಾಠವಲ್ಲ; ಅದು ನಲಿಯುವ ಪೆಪ್ಪರಮೆಂಟು. ಕಾಲಿನಡಿಯಿಂದ–ವಿಶ್ವರೂಪದ ವರೆಗೆ ಅದಕ್ಕೆ ವಸ್ತುವಾಗಬಹುದು.

ಇಂಥ ಪ್ರಬಂಧಗಳನ್ನು ಬರೆಯುವ ಶೈಲಿಯಲ್ಲಿಯೂ ಒಂದು ವೈಶಿಷ್ಟ್ಯವಿದೆ. ಜೀವನವನ್ನು ಬಳಸಿದವನಿಗಿಂತ ಅನುಭವಿಸಿದವನಲ್ಲಿ ಈ ಶೈಲಿಯ ಹರಿತ ಹೆಚ್ಚು ಸುಲಭವಾಗಿ–ಸರಾಗವಾಗಿ ಕಲೆದೋರಬಲ್ಲದು. ಕಲ್ಲಿನ ಮೂರ್ತಿಗಳನ್ನು ಕತ್ತಿಯಿಂದ ಒಡೆಯುವುದಕ್ಕಿಂತ ತೆಳ್ಳಗಿನ ರೇಶಿಮೆಯ ವಸ್ತ್ರಗಳನ್ನು ಚೂರು ಚೂರು ಮಾಡುವುದರಲ್ಲಿ ಯಾವ ಕಾಶಲ್ಯವಿದೆಯೋ, ದೊಡ್ಡ ದೊಡ್ಡ ಗುಡ್ಡಗಳನ್ನು ಉರುಳಿಸುವುದಕ್ಕಿಂತ ಗಟ್ಟಿಯಾಗಿ ಕುಳಿತ ಫೌಂಟನ್‌ಪೆನ್ನಿನ ಮುಚ್ಚಳಿಕೆಯನ್ನು ಫೌಂಟನ್‌ಪೆನ್ ಕೆಡದಂತೆ ತೆಗೆಯುವುದರಲ್ಲಿ ಯಾವ ಜಾಣತನವಿದೆಯೋ–ಆ ಕೌಶಲ್ಯ–ಆ ಜಾಣತನ ಲಘುಪ್ರಬಂಧಕಾರನ ಶೈಲಿಯಲ್ಲಿದೆ.

ಲಲಿತಪ್ರಬಂಧಗಳ ಸ್ಥಾನ ಮತ್ತು ಅವುಗಳು ಬೆಳೆಯುವ ಆವಶ್ಯಕತೆ

ಪ್ರೋ., ಸರೋಜಿನಿ ಮಹಿಷಿ

(ಸಂಗ್ರಾಹಕರು: ಜಿ. ಎನ್. ಕುಂದರಗಿ)

ಇಂದಿನ ಯುಗ ಹರಟೆಗಳ ಯುಗ. ಸಮಾಜದ ಸ್ಥಿತಿ ಬದಲಾಗದಂತೆ ಸಾಹಿತ್ಯದ ರೂಪದಲ್ಲಿಯೂ ಬದಲಾವಣೆಯುಂಟಾಗುವುದು ಸ್ವಾಭಾವಿಕ. ಇಂಗ್ಲಂಡಿನ ಪುನರುಜ್ಜೀವನ ಕಾಲದಲ್ಲಿ ಈ ಹರಟೆಗಳು–ಲಲಿತಪ್ರಬಂಧಗಳು ಕಾಣಿಸಿಕೊಂಡು ಸಾಹಿತ್ಯದಲ್ಲಿ ವ್ಯಕಾರ ಕೆಲಸ ಮಾತ್ರವಲ್ಲ ಇವು ಕಾರ್ಯಮಾಡಿದುವು. ಹೊಸ ದೃಷ್ಟಿಕೋನದಿಂದ ಕೂಡಿದ ಈ ಲಲಿತಪ್ರಬಂಧ ಸಾಹಿತ್ಯದಲ್ಲಿ ತನ್ನದೇ ಆದ ಒಂದು ಭದ್ರವಾದ ಸ್ಥಾನ ಕಲ್ಪಿಸಿಕೊಂಡಿತು.

೧೬ನೆಯ ಶತಮಾನದ 'Montueag'ನ ಹರಟೆಗಳು ಉಚ್ಚತರಗತಿಯ ಲಲಿತಪ್ರಬಂಧಗಳು. ಅವನ ಪ್ರಬಂಧಗಳಲ್ಲಿ ಕಾಣಿಸಿಕೊಳ್ಳುವ ಈ ಬಾಲಿತ್ಯ ಮನೋಹರವಾದುದು. ಇದನ್ನೇ ಹೆಚ್ಚು ವಿಸ್ತಾರವಾಗಿ ವಿವಿಧಮುಖವಾಗಿ ಬೆಳೆಸಿಕೊಂಡು ಬಂದ ಶ್ರೇಯಸ್ಸು A. G. Gardener, H. G. Wells Charls Lamb — ಮೊದಲಾದ ಶ್ರೇಷ್ಠ ಸಾಹಿತಿಗಳಿಗೆ ಸಲ್ಲುತ್ತದೆ. Lamb ನ Dream Children ಅಂತೂ ಪರಮೋಚ್ಚ ಲಲಿತಪ್ರಬಂಧ-ಹರಟೆ-Personel essay. ಮಕ್ಕಳಿಲ್ಲದಿದ್ದವರು ಕೂಡ ಮಕ್ಕಳಿಲ್ಲದೆ ಬರೆದ ಈ Lamb ನ 'ಕಣಸಿನ ಮಕ್ಕಳು' (Dream children) ಓದಿ ಮೂಗಿನ ಮೇಲೆ ಬೆರಳಿಡಬೇಕು. 'H G. Wells'ನ ಪ್ರಬಂಧಗಳಲ್ಲಿ ಚುಚ್ಚುಮಾತು ಅಣಕ ಕಂಡುಬರುವುದುಂಟು.

ಕನ್ನಡ ಸಾಹಿತ್ಯದಲ್ಲಿಯೂ 'ರಾಮಾಚಾರಿಯ ನೆನಪು', 'ಕೋದಂಡನ ಉಪನ್ಯಾಸ' ಮೊದಲಾದ ಹರಟೆಗಳು—ಹರಟೆಯ ಶಂಗ್ರಹಗಳು—ಉಚ್ಚ ತರಗತಿಯವು. ಏ. ಎನ್. ಮೂರ್ತಿರಾಯರ 'ಗಾಡಿಯ ಪ್ರಯಾಣ' ಎಲ್ಲರ ಮನಸೆಳೆಯುವಂತಹದು ಬೆಳುದಿಂಗಳ ತಂಪಿನಲ್ಲಿ, ಗಿಡಗಳ ಪೂಗಳ ಕಂಪಿನಲ್ಲಿ ಮನೆಯು ಸಂಸಾರದೊಂದಿಗೆ ಎತ್ತಿನ ಕೊರಳುಗಂಟೆಯ ನಿನಾದದ ಸಂಗೀತ ಕೇಳುತ್ತ, ಬಂಡಿ ಹೊಡೆಯುವವನ ಹಂತಿ ಹಾಡು ಕೇಳುತ್ತ ನಿಶ್ಚಿಂತವಾಗಿ ಪ್ರಯಾಣಮಾಡುವುದರಲ್ಲಿ ಅದೆಷ್ಟು ಆನಂದ! ಗಾಡಿಯು ನಿಲ್ದಾಣ ಮುಟ್ಟಿದರೂ ಅಷ್ಟೇ—ಮುಟ್ಟದಿದ್ದರೂ ಅಷ್ಟೇ ತಾನೆ! ಅದೇ ರೀತಿಯಾಗಿ ಲಲಿತಪ್ರಬಂಧ ತನ್ನ ಗುರಿಯನ್ನು ಮುಟ್ಟಿದರೂ ಅಷ್ಟೇ, ಮುಟ್ಟದಿದ್ದರೂ ಅಷ್ಟೇ! ಓದುಗನನ್ನು ರಸಲೋಕದಲ್ಲಿ ಲಲಿತೋದ್ಯಾನದಲ್ಲಿ ತರಿದುಕೊಂಡುಹೋದರೆ ಸಾಕು!

'ಬೇಂದ್ರೆ'ಯವರ 'ನಿರಾಭರಣ ಸುಂದರಿ'ಯಲ್ಲಿ ಬರುವ ಹರಟೆಗಳಲ್ಲಿ ತುಂಬಾ ಹಾಸ್ಯವಿದೆ. ವ್ಯಂಗ್ಯವಿದೆ. ಅನ್ಯೋಕ್ತಿಯಿದೆ. ಸಮಾಜದ ಚಿತ್ರಣವಿದೆ. 'ಮಾನಪತ್ರ ಸಮಾರಂಭ'ದಲ್ಲಿ ಬರುವ 'ಪತ್ರಂ ಪುಷ್ಪಂ ಫಲಂ ತೋಯಂ' ಎಂಬ ಮಾತು ಅದೆಷ್ಟು ಮಾರ್ಮಿಕವಾಗಿದೆ! ತೋಯಂ ಎಂದರೆ ಮತ್ತೇನೂ ಅಲ್ಲ. ಎರಡು ಪಾಲು ನೀರು ಅರ್ಧಪಾಲು ಚಹದಪುಡಿ, ಅರ್ಧಪಾಲು ಸಕ್ಕರೆ-ಹಾಲು ಬೆರೆತ ಚಹ.

ಒಟ್ಟಿನಲ್ಲಿ ವಿಟ, ವಿದೂಷಕ, ಕವಿ ಮೊದಲಾದವರ ಮುಖಾಂತರವಾಗಿ ಹೊಂಟಿದ್ದ ಈ ಹಾಸ್ಯ-ಹರಟೆ-ಇಂದು ಲಲಿತಪ್ರಬಂಧಕಾರರ ಮುಖಾಂತರವಾಗಿ ಕಾಣಿಸಿಕೊಳ್ಳುತ್ತಲಿದೆ.

ಕನ್ನಡದಲ್ಲಿ ಕ್ರಮಬದ್ಧವಾದ ಹರಟೆಗಳು ಹೆಚ್ಚಾಗಬೇಕಾಗಿದೆ. ಸಾಹಿತ್ಯದ ಸುಂದರ ವಿಭಾಗದ ಲಲಿತಪ್ರಬಂಧ ನಮ್ಮನ್ನೆಲ್ಲ ತಣಿಸಬೇಕಾಗಿದೆ!

ಹರಟೆಗಳಲ್ಲಿಯ ಹಾಸ್ಯ

ಶ್ರೀ. 'ಬೀchi'

ಸಂಗ್ರಾಹಕರು: ಜಿ. ಎನ್. ಕುಂದರಗಿ

ಮಾ ಮೂ, ಅಧ್ಯಕ್ಷರೆ—ಎಂದು ಪ್ರಾರಂಭಿಸಿದ ಶ್ರೀ ಬಳ್ಳಾರಿ ಬೀಚಿಯವರು ಅರ್ಧಗಂಟೆಯ ವರೆಗೆ ತನ್ನ ಹಾಸ್ಯದ ಹೊನಲನ್ನು ಹರಿಸಿ ಸಭಿಕರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸಿದರು. ಅವರು ಸೃಷ್ಟಿಸಿದ ಹಾಸ್ಯದ ಚುಟಕಗಳು ಎಂದೆಂದೂ ನೆನಪಿನಲ್ಲಿ ಉಳಿಯುವಂತಹವು.

ಸಾಹಿತಿಯ 'ಸುಪ್ರಸಿದ್ಧ' ಬಿರುದಿನ ಬಗ್ಗೆಯೂ 'ಅತಿಶಯೋಕ್ತಿ exaggeration' ಬಗ್ಗೆಯೂ ವಿವರಿಸುತ್ತ ಲಗ್ನವಾದ-ಇದೀಗ ಹೊಸದಾಗಿ ಲಗ್ನವಾದ-ಮೊದಲನೆಯವಳೊಡನೆ ಲಗ್ನವಾದ ಅಳಿಯ ಪ್ರಥಮ ಸಲ ಮಾವನ ಮನೆಯಿಂದ ತನ್ನೂರಿಗೆ ಮಂಳಿದಾಗ, ಶಸ್ತ್ರಸ್ನೇಹಿತನೊಡನೆ ಜಂಭ ಕೊಚ್ಚುವ ರೀತಿಯನ್ನು—'ಮಾವನ ಮನೆಯಲ್ಲಿಯ ಅಳಿಯಕರು ಅನೆಯಷ್ಟಿತ್ತು; ಅವರು ಹಾಕಿದ ತಾಟು ಬಟ್ಟಲಗಳ ಉದ್ದಳತೆ ೫೫ ಗಜದಷ್ಟಿತ್ತು—'ಎಂದು ನುಡಿಯುತ್ತಿರುವ ಅತಿಶಯೋಕ್ತಿಯನ್ನು ಪರಿಣಾಮಕಾರಿಯಾಗಿ ಬಣ್ಣಿಸಿದರು.

ಭಕ್ತರ ಜಾತಿಯಿಂದ ದೇವರ ಯೋಗ್ಯತೆಯನ್ನು ನಿರ್ಣಯಿಸುವ ನಮ್ಮ ಸಮಾಜದ ಜನತೆಯ 'ದೇವರ ಹಣೆಬರಹ'ದ ವಿಷಯದ ವಿಹಂಗಮ ನೋಟವೊಂದನ್ನು ಮಾಡಿಸಿದರು. 'ಸಂಚಿಕೆ ಹೊರಡುತ್ತಿರುವುದೇ ವಿಶೇಷ ಸಂಚಿಕೆ' 'ಕಾದಂಬರಿಕಾರರೆಲ್ಲ ಕ-ಕಾ- (ಕಾರಂತ, ಕೃಷ್ಣರಾಯ ಕಟ್ಟೀಮನಿ) ದವರೇ'—ಎಂದು ನುಡಿದು ಸಭಿಕರನ್ನು ನಗಿಸಿದರು. 'ಮಂತ್ರಿಯಾಗುವುದಕ್ಕಿಂತ ನಾನು ಮಂತ್ರಿಯ ಅಳಿಯನಾಗುತ್ತೇನೆ,' ಎಂಬ ಮನಃಪ್ರವೃತ್ತಿಯುಳ್ಳ ಇಂದಿನ ಜನತೆಯನ್ನು ಮಾರ್ಮಿಕವಾಗಿ ಟೀಕಿಸಿದರು.

"ದೇವರು ಪ್ರತ್ಯಕ್ಷನಾದರೆ ನೀನೇನು ಬೇಡುತ್ತಿಯಪ್ಪಾ?" ಎಂದು ಒಬ್ಬರು ಕೇಳಿದಾಗ, ಇನ್ನೊಬ್ಬ 'ನನಗೇನೂ ಬೇಡಪ್ಪಾ, ೫೦,೦೦೦ ರೂ. ಮಾತ್ರ ಕೊಟ್ಟುಬಿಡು' ಎಂದು ದೇವರನ್ನು ಪ್ರಾರ್ಥಿಸುತ್ತೇನೆ.' ಎಂದು ಉತ್ತರವಿತ್ತ.

ಅದಕ್ಕೆ ಮೊದಲನೆಯವ 'ಹುಚ್ಚಾ, ದೇವರು ಭಿಟ್ಟಿಯಾಡಾಗ ರೂಪಾಯಿ—ಗೀಪಾಯಿ—ಬೇಡುತ್ತಾರೇನೋ?'

ಅದಕ್ಕೆ ಎರಡನೆಯವ 'ಹಾಗಾದರೆ ಮತ್ತೇನು ಬೇಡಬೇಕಪ್ಪ?'

'ದೇವರು ಪ್ರತ್ಯಕ್ಷನಾದಾಗ ಬುದ್ಧಿ, ವಿವೇಕ, ಕೇಳಿಕೊಳ್ಳಬೇಕು.'

'ಯಾರಿಗೆ ಯಾವುದು ಇಲ್ಲ ಅದನ್ನು ಬೇಡುತ್ತಾರಪ್ಪಾ.'

ಹೀಗೆ ಹಾಸ್ಯದ ಮೇಲೆ ಹಾಸ್ಯದ ಚಟಾಕಿಯನ್ನು ಹಾರಿಸಿ ಇಂದಿನ ಚುನಾವಣೆಗಳು ಕಾಂಗ್ರೆಸ್—ದೇ-ಭ-ರ ಸಮಾಲೋಚನೆಗಳನ್ನೂ ಮಾಡಿತವು ಭಾಷಣ ಮುಗಿಸಿದರು.

ವೈಜ್ಞಾನಿಕ ಲಲಿತ ಪ್ರಬಂಧಗಳು

ಶ್ರೀ. ಪಿ. ವೆಂಕಟರಮಣಾಚಾರ್ಯರು, ಹುಬ್ಬಳ್ಳಿ

ಅಧ್ಯಕ್ಷರೇ ಮತ್ತು ಸಭಿಕರೇ,

ಇವೊತ್ತು ನಾನು ವೈಜ್ಞಾನಿಕಸಾಹಿತ್ಯದ ಬಗ್ಗೆ ಹೇಳಲು ಒಪ್ಪಿಕೊಂಡ ನಾಲ್ಕು ಮಾತುಗಳನ್ನು ನಿಮ್ಮ ಮುಂದೆ ಓದಲು ಅನುಮತಿ ಕೋರುತ್ತೇನೆ. ಸಭೆಗಳಲ್ಲಿ ಭಾಷಣ ಮಾಡುವ ಅಭ್ಯಾಸ ನನಗಿಲ್ಲ. ನಾನು ಆಜೀವನ ಲೇಖನಿ ಸವೆಸಿದವನು. ಆಶುಭಾಷಣದಲ್ಲಿ ಪಳಗಿದವರ ಮುಂದೆ ನನ್ನ ಲಿಖಿತಭಾಷಣ ಓದುತ್ತೇನೆ, ಕ್ಷಮಿಸಿರಿ.

ನಾವಿಂದು ವಿಜ್ಞಾನಯುಗದಲ್ಲಿದ್ದೇವೆ—ಅಂದರೆ ಅದೊಂದು ಗಳಪಾಶವೆನಿಸೀತು. ಅದು ನಿಜ; ನಮಗೆ ಬೇಡವೆಂದರೂ ವಿಜ್ಞಾನ ನಮ್ಮ ಜೀವನದಲ್ಲಿ ಹೆಚ್ಚುಹೆಚ್ಚು ಸ್ಥಳ ಆಕ್ರಮಿಸುತ್ತಿದೆ. ಅದು ನಮ್ಮ ಮೇಲೆ ಅಣುಬಾಂಬಿನ ಅನರ್ಥವನ್ನು ತಂದಿಡಿಯಾದರೂ ಅವನ್ನು ಬಿಟ್ಟರೆ ಗತಿಯಿಲ್ಲ. ಅದರ ಮುಕಾಜ್ಜೆತ್ರದಲ್ಲಿ ಸೇರಿಕೊಂಡು ನಾವೂ ಹೆಜ್ಜೆಹಾಕಬೇಕಾಗಿದೆ. ಅದು ಅಶುಭವನ್ನು ತಾರದೆ ಶುಭವನ್ನೇ ತರಬೇಕೆಂದಾದರೂ ನಾವು ಅದರ ಸಂಗಡ ಸಾಗಬೇಕಾಗಿದೆ. ಈ ಯಾತ್ರೆಯಲ್ಲಿ ಹಿಂದುಳಿದರೆ ನಾವೆಂದೂ ಒಂದು ರಾಷ್ಟ್ರವಾಗಿ ತಲೆಯೆತ್ತಿ ನಿಲ್ಲಲಾರೆವು.

ಈ ದಿಶೆಯಲ್ಲಿ ಪ್ರಯತ್ನಗಳೂ ಪ್ರಾರಂಭವಾಗಿವೆ. ನಮ್ಮಲ್ಲಿ ಅನೇಕ ಪ್ರಥಮವರ್ಗದ ವಿಜ್ಞಾನಿಗಳಿದ್ದಾರೆ. ನಮ್ಮ ಸಂಪ್ರದಾಯ ವಿಚಾರಸ್ವಾತಂತ್ರ್ಯವನ್ನೊಪ್ಪುವುದರಿಂದ, ವೈಜ್ಞಾನಿಕ ಮನೋಭಾವಕ್ಕೆ ಆತಂಕವೂ ಇಲ್ಲ. ನಮ್ಮ ಪ್ರಧಾನಮಂತ್ರಿಗಳು ಪ್ರಯತ್ನಿಸಿ ಹಲವು ವಿಜ್ಞಾನಸಂಶೋಧನ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ವಿಜ್ಞಾನ ಕಲಿತರೆ ನೌಕರಿ ಸಿಗುತ್ತದೆಂದೇ ಇರಲೊಲ್ಲದೇಕೆ, ವಿದ್ಯಾರ್ಥಿಗಳು ಕಾಲೇಜುಗಳ ವಿಜ್ಞಾನವಿಭಾಗಕ್ಕೆ ಮುತ್ತಿಗೆಯನ್ನೇ ಹಾಕುತ್ತಿದ್ದಾರೆ.

ಆದರೆ ನಿಜವಾಗಿ ನಮ್ಮಲ್ಲಿ ವಿಜ್ಞಾನದೃಷ್ಟಿ ಬೆಳೆದಿದೆಯೆ? ನೌಕರಿಯ ಹಾದಿಯೆಂಬುದನ್ನು ಬಿಟ್ಟರೆ ವಿಜ್ಞಾನದಲ್ಲಿ ನಿಜವಾದ ಆಸಕ್ತಿ ಎಷ್ಟು ಜನರಿಗಿದೆ? ನಮ್ಮ ಸಂಶೋಧನ ಸಂಸ್ಥೆಗಳಲ್ಲಿ ಆಗುವ ಶೋಧಗಳ ಪ್ರಯೋಜನವನ್ನು ಎಷ್ಟು ಜನ ಪಡೆಯುತ್ತಾರೆ? ಈ ಪ್ರಶ್ನೆಗಳಿಗೆ ಬರುವ ಉತ್ತರ ಉತ್ಸಾಹಕರವಾಗಿಲ್ಲ. ಒಂದೇ ಉದಾಹರಣೆ ಕೊಡುತ್ತೇನೆ: ಅರ್ಧ ಶತಮಾನದಿಂದ ಭಾರತದಲ್ಲಿ ಹಲವು ಕೃಷಿಸಂಶೋಧನ ಸಂಸ್ಥೆಗಳು ಕೆಲಸ ಮಾಡುತ್ತಿವೆ. ಸಮರ್ಥ ವಿಜ್ಞಾನಿಗಳು ರೈತರಿಗೆ ಉಪಯೋಗಬೀಳುವ ಎಷ್ಟೋ ಶೋಧ ಮಾಡಿದ್ದಾರೆ. ಆದರೆ ಇದರಿಂದೆಷ್ಟು ಪ್ರಯೋಜನವಾಗಿದೆ? ನಮ್ಮ ಕೃಷಿಸಂಶೋಧನ ಸಂಸ್ಥೆಗಳ ಉಪಯುಕ್ತಶೋಧಗಳ ಲಾಭವನ್ನು ರೈತರು ಬಹುತರವಾಗಿ ಮಾಡಿಕೊಂಡಿಲ್ಲ. ಇದನ್ನು ಅಧಿಕಾರಿಗಳೇ ಒಪ್ಪಿದ್ದಾರೆ.

ಇದಕ್ಕೇನು ಕಾರಣ? ನಮ್ಮ ರೈತ ಗತಾನುಗತಿಕ, ಹೊಸ ಸಾಹಸಕ್ಕೆ ಹೆದರುತ್ತಾನೆ ಇದು ಆರ್ಧಾಂಶ ಮಾತ್ರ. ಇನ್ನರ್ಧ ಕಾರಣ ಬೇರೆಯೇ ಇದೆ. ಈ ಶೋಧಗಳು ಜನತೆಯ ವರೆಗೆ ಮುಟ್ಟಿಯೇ ಇಲ್ಲ ಕೃಷಿ ಇರಲಿ, ಸಾಪೇಕ್ಷ ಸಿದ್ಧಾಂತವಿರಲಿ. ವಿಜ್ಞಾನಿಗಳ ಶೋಧಗಳು ಅವರವರ ವಿಶಿಷ್ಟ ಶಾಸ್ತ್ರೀಯ ಪತ್ರಿಕೆಗಳಲ್ಲಿ ಬೆಳಕು ಕಾಣುತ್ತವೆ. ಆ ಪತ್ರಿಕೆಗಳ ರಾಜ್ಯ ಜನರಿಗೆ ಕತ್ತಲ ರಾಜ್ಯ. ಅವುಗಳ ಭಾಷೆ ಇಂಗ್ಲೀಷು; ಶೈಲಿ ಪೆಡಸು, ಶಬ್ದಗಳು ತಾಂತ್ರಿಕ. ತಿನ್ನುವ ಉಪ್ಪನ್ನು Sodium Chloride ಎನ್ನುವುದು ಅವರ ಪದ್ಧತಿ. ವಿಷಯದ ಶಾಸ್ತ್ರೀಯ ಚರ್ಚೆಗೆ ನಿರೂಪಣೆಗೆ ಇದು ಅವಶ್ಯ. ಆದರೆ ಸಾಧಾರಣ ಇಂಗ್ಲೀಷು ಬಲ್ಲವರಿಗೇ ಅದು ಕಗ್ಗಂಟಾಗಿರುವಾಗ ಉಳಿದವರ ಪಾಡೇನು? ಹೀಗೆ ಶೋಧಗಳು ಪುಸ್ತಕಗಳಲ್ಲೇ ಕೊಳೆಯುತ್ತವೆ. Applied Scienceನ ಗತಿಯೇ ಹೀಗೆ; ಉಳಿದ ತಾತ್ತ್ವಿಕ ವಿಜ್ಞಾನಗಳ ಮಾತು ಬೇರೆ ಹೇಳಬೇಕೆ?

ಭಾರತದಲ್ಲಿ ನುತ್ತು ಕನ್ನಡಿಗರಲ್ಲಿ ವಿಜ್ಞಾನದೃಷ್ಟಿ ಬೆಳೆಯದಿದ್ದರೆ, ವಿಜ್ಞಾನ ಅವರ ಬಾಗಿಲ ವರೆಗೆ ಬಾರದ್ದು ಅವಕ್ಕೊಂದು ಕಾರಣ. ಯಾರೂ ಹೆದನ್ನು ಅವರಿಗೆ ತಲಪಿಸಿಲ್ಲ. ಅಮೇರಿಕನ್ನರ ರೀತಿಯಲ್ಲಿ ಹೇಳಬೇಕೆಂದರೆ, Nobody has tried to sell it to them—ಯಾರೂ ಜನರಿಗೆ ವಿಜ್ಞಾನವನ್ನು ಮಾರುವ ಯತ್ನ ಮಾಡಿಲ್ಲ.

ವಿಜ್ಞಾನವನ್ನು "ಮಾರು"ವುದೂ ಒಂದು ಅಗತ್ಯ ರಾಷ್ಟ್ರ ನಿರ್ಮಾಣ ಕಾರ್ಯವೇ. ಜನರಿಗೆ ತಿಳಿಯುವ ಭಾಷೆಯಲ್ಲಿ, ರೀತಿಯಲ್ಲಿ, ಅವರಿಗೆ ರುಚಿಸುವ ಹಾಗೆ, ವಿಜ್ಞಾನದ ಜಟಿಲ ಪರಿಭಾಷೆಯನ್ನು ಅಪಮ್ಮ ತಪ್ಪಿಸಿ, ವಿಜ್ಞಾನದ ನವೋನವ ಶೋಧಗಳನ್ನು ತಿಳಿಯಹಡಿಸಬೇಕಾಗಿದೆ. ನಮ್ಮ ಕೃಷಿಸಂಶೋಧನ ಸಂಸ್ಥೆ ಒಂದು ಹೊಸ ಮಾದರಿಯ ಪುಳುಹತ್ತದ ಗೋದಿಯ ಜಾತಿಯನ್ನು ಬೆಳೆಸಿದ್ದರೆ, ಆ ಸಂಗತಿ ಜನರಿಗೆ, ಇಡೀ ದೇಶಕ್ಕೆ ತಿಳಿಯಬೇಕು. ಆ ಬರೆವಣಿಗೆ ಕೇವಲ ವಿಷಯಗಳ ನೀರಸ ನಿರೂಪಣೆಯಾಗಿರದೆ. ಜನರಿಗೆ ಕೌತುಕ ತರುವಂತಿರಬೇಕು ರೈತರಿಗೆ ಉತ್ಸಾಹ ಕುದುರಿಸುವಂತಿರಬೇಕು, ಸಂಶೋಧನ ಮಾಡಿದ ವಿಜ್ಞಾನಿಗಳಿಗೆ ಮೈಯುಬ್ಬಿಸುವಂತಿರಬೇಕು. ಡಾ. ರಾಮನ್ನರೋ ಭಾಭಾರೋ ಒಂದು ಭೌತಶಾಸ್ತ್ರೀಯ ಶೋಧ ಮಾಡಿದರೆ, ಆ ಸುದ್ದಿ ಮಾತ್ರ ನಾವೀಗ ಕೇಳುತ್ತೇವೆ. ಅದು ಸಾಲದು. ಅದರ ಬಗ್ಗೆ ಜನರಿಗೆ ಅಷ್ಟಿಷ್ಟಾದರೂ ಕಲ್ಪನೆ ಬರುವ ಹಾಗೆ ತಿಳಿಭಾಷೆಯ ವಿವರಣೆ ಬರಬೇಕು.

ಇದನ್ನೇ ನಾನು 'ವೈಜ್ಞಾನಿಕ ಲಲಿತ ಪ್ರಬಂಧ,' ಅಥವಾ ಜನಪ್ರಿಯ ವೈಜ್ಞಾನಿಕ ಸಾಹಿತ್ಯ ಎನ್ನುತ್ತೇನೆ. ನಾನು ವಿಜ್ಞಾನವನ್ನು

ಅಭ್ಯಾಸಮಾಡಿದವನಲ್ಲ; ಆದರೆ ಕನ್ನಡ ಪತ್ರಿಕೋದ್ಯಮದಲ್ಲಿ ಹಲವು ವರ್ಷಗಳಿಂದ ದುಡಿಯುತ್ತಿರುವ ನನಗೆ, ಕನ್ನಡದಲ್ಲಿ ಈ ಬಗೆಯ ಸಾಹಿತ್ಯದ ಕೊರತೆ ಬಹಳ ಎನಿಸಿದೆ. ವಿದೇಶೀ ಪತ್ರಿಕೆಗಳಲ್ಲಿ ನೋಡಿದರೆ, ಪ್ರತಿಯೊಂದರಲ್ಲಿಯೂ ವಿಜ್ಞಾನದ ಒಂದಲ್ಲ ಒಂದು ಶಾಖೆಯ ಬಗ್ಗೆ ಲೆಕ್ಕವಿಲ್ಲದಷ್ಟು ಸುರಸ ಲೇಖನಗಳು ಇವ್ವೇ ಇರುತ್ತವೆ. ಸಾಮಾನ್ಯ ಅಭಿರುಚಿಯ ಸಾಮಾನ್ಯ ಓದುಗನಿಗಾಗಿ ಪ್ರಕಟವಾಗುವ ಡೈಜೆಸ್ಟ್‌ಮಾಸಿಕಗಳಲ್ಲಿ, ಪ್ರತಿಸಂಚಿಕೆಗಳಲ್ಲೂ ತಪ್ಪದೆ ಆರೇಳು ವೈಜ್ಞಾನಿಕ ಲೇಖನಗಳನ್ನು ಕಾಣುತ್ತೇವೆ. ಇವಲ್ಲದೆ ಜನಸಾಮಾನ್ಯರಿಗಾಗಿ ವೈಜ್ಞಾನಿಕ ಲೇಖನಗಳನ್ನೂ ಕಥೆಗಳನ್ನೂ ಮಾತ್ರ ಪ್ರಕಟಿಸುವ ಅನೇಕಾನೇಕ ಪತ್ರಿಕೆಗಳು ಹೊರಡುತ್ತವೆ. ಸಮಾಜವಿಜ್ಞಾನದಿಂದ ಪರಮಾಣು ವಿಜ್ಞಾನದ ವರೆಗೆ ಎಲ್ಲ ವಿಷಯಗಳನ್ನೂ ಅಲ್ಲಿ ಚರ್ಚಿಸಲಾಗುತ್ತದೆ. ಅವುಗಳ ಶೈಲಿ ಮತ್ತು ಭಾಷೆ ಸಾಮಾನ್ಯ ಹೈಸ್ಕೂಲು ಕಲಿತವರಿಗೆ ತಿಳಿಯುವಷ್ಟು ಲಲಿತವಾಗಿವೆ. ಭಾರತೀಯ ಪತ್ರಿಕೆಗಳಲ್ಲಿ, ಕನ್ನಡದ ಪತ್ರಿಕೆಗಳಲ್ಲಿ ಇಂಥ ಲೇಖನಗಳು ತೀರವಿರಳ. ಇದ್ದ ಬಿದ್ದವುಗಳು ಕೂಡ ಕೆಚ್ಚಾಗಿ ವಿದೇಶೀ ಮೂಲದವು.

ಲಲಿತ ವೈಜ್ಞಾನಿಕ ಪ್ರಬಂಧದ ಬರವಣಿಗೆ ಹೇಗಿರಬೇಕು? ಒಂದು ಮಾತಂತೂ ಖಂಡಿತ: ಅದನ್ನು ಬರೆಯುವವನು ಸಾಹಿತ್ಯವನ್ನು ಅಭ್ಯಾಸಮಾಡಿದವನಿರಬೇಕು. ಅವನಿಗೆ ವಿಜ್ಞಾನದಲ್ಲಿ ಪರಿಣತಿಯೂ ಬೇಕು. ಶುದ್ಧ ವೈಜ್ಞಾನಿಕ ಲೇಖನಗಳಿಗೂ ಲಲಿತ ವೈಜ್ಞಾನಿಕ ಲೇಖನಗಳಿಗೂ ಮಹದಂತರವಿದೆ. ಶುದ್ಧ ವೈಜ್ಞಾನಿಕ ಲೇಖನಗಳು ಶಾಂತ್ರಿಕ, ತಾರ್ಕಿಕ, ಪೆಡಸು ಭಾಷೆಯಲ್ಲಿರುತ್ತವೆ. ಜನರಿಗಾಗಿ ಬರೆಯುವುದು ಹಾಗಿದ್ದರೆ ನಡೆಯದು. ಅವುಗಳಲ್ಲಿ ಭಾವನೆಗಳಿಗೆ ಸ್ಥಾನವಿದೆ. ಅದು ಬಿಗಿಯಾದ ವೈಜ್ಞಾನಿಕ ಒಳಪಟ್ಟುಗಳನ್ನು ಅತ್ಯಾಗಿ ಚರ್ಚಿಸದೇಇಲ್ಲ. ಕುತೂಹಲ ಕೆರಳಿಸುವುದು, ಕಲ್ಪನಾಶಕ್ತಿಯನ್ನು ಪ್ರಚೋದಿಸುವುದು ಅದರ ಮುಖ್ಯ ಉದ್ದೇಶ. ಅವುಗಳಲ್ಲಿ ನಾಟಕೀಯತೆಗೆ ಮಹತ್ವವಿದೆ.

Today's Health ಪತ್ರಿಕೆಯಲ್ಲಿ ಮನುಷ್ಯನ ಸ್ನಾಯುಗಳ ಬಗ್ಗೆ ಬಂದ ಒಂದು ಲೇಖನದ ಪ್ರಾರಂಭವನ್ನು ನೋಡಿರಿ: "ನಾಯಿ ಬಾಲ ಅಡಿಸುವಾಗ, ಹಸುಗೂಸು ಡೊಗ್ಗಾಲು ಹಾಕುವಾಗ, ಅಥವಾ ನೀವು ಮೂಗು ತುರಿಸಿಕೊಳ್ಳುವಾಗ ನಡೆಯುವ ಘಟನೆಗಳ ಜಟಿಲತೆಯ ಮುಂದೆ ಹೈಡ್ರೋಜನ್ ಬಾಂಬುಗಳ ಪ್ರಕ್ರಿಯೆ ಒಣಪ್ಪೇನೆ ಎನಿಸಬಹುದು! "—ಹೀಗೆ ಪ್ರಾರಂಭವಾದ ಲೇಖನಕ್ಕೆ "ಸ್ನಾಯುಗಳ ಪವಾಡ" ಎಂಬ ಆಕರ್ಷಕ ತಲೆಬರಹ.

ಸತ್ಯಪ್ರಿಯ ಬೆನರ್ಜಿಯವರು ಪರಮಾಣುವಿನ ಬಗ್ಗೆ ಬರೆದ ಒಂದು ಲೇಖನದ ಪ್ರಾರಂಭ ಹೀಗಿದೆ: "ನೀವು ಬೆಳಗ್ಗೆ ಕುಡಿಯುವ ಒಂದು ಚಮಚೆ ಚಹಾದಲ್ಲಿರುವ ಪರಮಾಣುಗಳನ್ನು ಒಂದೊಂದಾಗಿ ಎಣಿಸುವುದಾದರೆ ಆ ಕೆಲಸ ಮುಗಿಸಲು ನಿಮ್ಮ ಆಯುಷ್ಯ ಸಾಲದು. ಅದಕ್ಕೆ ೫,೦೦೦ ಕೋಟಿ ದರ್ಷ ಬೇಕು."

ಹೀಗೆ ನಾಟಕೀಯವಾಗಿ ಪ್ರಾರಂಭವಾದ ಲೇಖನ ಓದುಗನನ್ನು



ಆಕರ್ಷಿಸಿ ಓದಹಚ್ಚುತ್ತದೆ. ಅವನಿಗೆ ಅದರಲ್ಲಿ ಮನೋರಂಜನೆಯೂ ಸಿಗುತ್ತದೆ.

ವೈಜ್ಞಾನಿಕ ಲಲಿತಪ್ರಬಂಧ ಬರೆಯುವಾತನು ಸಾಹಿತ್ಯದ ಎಲ್ಲ ಆಯುಧಗಳನ್ನೂ ಉಪಯೋಗಿಸುತ್ತಾನೆ. ಉಪಮೆ, ರೂಪಕ, ಲೋಕಕಥೆ, ಪುರಾಣ ಎಲ್ಲವನ್ನೂ ಅವನು ಉಪಯೋಗಿಸಿಕೊಳ್ಳುತ್ತಾನೆ. ಲೈಫ್ ಪತ್ರಿಕೆಯಲ್ಲಿ Expanding Universe ಬಗ್ಗೆ ಬಂದ ಒಂದು ಮನೋಹರ ಲೇಖನದಲ್ಲಿ, ವಿಶ್ವದ ವಿಕಾಸ-ಆಕುಂಚನಗಳನ್ನು ಭಾರತದ ಬ್ರಹ್ಮನ ಉಸಿರಾಟಕ್ಕೆ ಹೋಲಿಸಿದೆ. ಖ್ಯಾತ ನರಸಿಂಹಯ್ಯನವರು ವಿಶ್ವದಲ್ಲಿ ಕಾಲ-ದೇಶಗಳ ಸಂಬಂಧವನ್ನು ತ್ರಿವಿಕ್ರಮನ ಹೆಜ್ಜೆಗಳಿಗೆ ಹೋಲಿಸಿದ್ದಾರೆ. ಇಂಥ ಅಲಂಕಾರಭಾಷೆ ವಿಷಯಪ್ರವೇಶವನ್ನು ಸುಲಭಗೊಳಿಸುತ್ತದೆ. ವಿಜ್ಞಾನದ ಒರಟು ತನ ಹೋಗಿ ಸಾಹಿತ್ಯದ ಮಂತ್ರಸ್ಪರ್ಶ ಅದಕ್ಕೆ ಬರುತ್ತದೆ.

ಎಲ್ಲ ವೈಜ್ಞಾನಿಕ ಲಲಿತ ಲೇಖನಗಳ ಮೂಲ ಉದ್ದೇಶ ಕುತೂಹಲ ಕೆರಳಿಸುವುದು. ವಿಜ್ಞಾನಕ್ಕೆ ಕುತೂಹಲವೇ ಮೂಲ. ಕುತೂಹಲ ಕೆರಳಿದರೆ ಸಾಮಾನ್ಯನೂ ವಿಜ್ಞಾನದಲ್ಲಿ ಆಸ್ಥೆ ತಾಳುತ್ತಾನೆ. ಹುಡುಗರು ಅಂಥ ಲೇಖನಗಳನ್ನೋದಿದರೆ ಅವರಲ್ಲಿ ಪ್ರಯೋಗಬುದ್ಧಿ ಹುಟ್ಟುತ್ತದೆ, ವಿಜ್ಞಾನ ಆಕರ್ಷಕವೆನಿಸುತ್ತದೆ. ಅವರಲ್ಲಿ ಸಾವಿರಕ್ಕೊಬ್ಬ ನಿಜವಾದ ವಿಜ್ಞಾನ ಭಕ್ತನಾದರೆ ಸಾಕು. ದೇಶಕ್ಕೆ ಎಂದೆಂದಿಗೂ ವಿಜ್ಞಾನಿಗಳ ಕೊರತೆ ಆಗದು.

ವೈಜ್ಞಾನಿಕ ಲಲಿತಪ್ರಬಂಧಗಳು ವಿಜ್ಞಾನವನ್ನು ಬಾಜಾರು ವಸ್ತುವಾಗಿ ಮಾಡುತ್ತವೆ ಎಂದು ಕೆಲವರು ಆಕ್ಷೇಪಿಸುತ್ತಾರೆ. ಇದು ತಪ್ಪು. ಈ ಪ್ರಬಂಧಗಳಿಂದ ಅನೇಕರಿಗೆ ಅಪರಿಮಿತ ಪ್ರಯೋಜನವಾಗಿದೆ. ೫೦ ವರ್ಷಗಳ ಹಿಂದೆ ಅಲ್ಲಿ ಸುದ್ದಿ, ಜ್ಞಾನ, ವಿಜ್ಞಾನಗಳನ್ನು ಜನಸಾಮಾನ್ಯರಿಗೆ ಒಗ್ಗುವ ಶೈಲಿಯಲ್ಲಿ ಬರೆಯುವ ರೂಢಿ Saturday Evening Post, ಮೊದಲಾದ ಪತ್ರಿಕೆಗಳಿಂದ ಪ್ರಾರಂಭವಾಯಿತು. ಲಕ್ಷಗಟ್ಟಲೆಯಲ್ಲಿ ಅವು ಮಾರಾಟವಾಗಹತ್ತಿದವು. ವಿಜ್ಞಾನ ಲೇಖನಗಳನ್ನು ಜನರಿಗೆ ಒಗ್ಗುವಂತೆ ಬರೆಯುವ ಲೇಖಕರಂಡೇ ಸಿದ್ಧವಾಯಿತು. ಇದರ ಪರಿಣಾಮವಾಗಿ ಇಡೀ ರಾಷ್ಟ್ರ ವೈಜ್ಞಾನಿಕ ಭಾವನೆಯಿಂದ ಪುಲಕಿತವಾಯಿತು. Frederi

Lewisರು ತಮ್ಮ ಪುಸ್ತಕದಲ್ಲಿ ತಿಳಿಸಿರುವಂತೆ ವಿಜ್ಞಾನಕ್ಕಾಗಿ ವಿಜ್ಞಾನದ ಸ್ಥಾನವನ್ನು ನಾಟಕೀಯವಾಗಿ ಬಣ್ಣಿಸಿದ್ದಾರೆ.

ಕನ್ನಡದಲ್ಲಿ ಇಂಥ ಬರವಣಿಗೆ ಬಂದೇ ಇಲ್ಲವೆಂದು ನಾನು ಹೇಳುವುದಿಲ್ಲ. ಶಿವರಾಮ ಕಾರಂತರು "ಬಾಲಪ್ರಪಂಚ"ದಲ್ಲಿ ಟಿ. ಎಂ. ಪಾಟೀಲರು "ಆಕಾಶದಲ್ಲಿಯ ಅದ್ಭುತ ಚಮತ್ಕಾರಗಳು" ಎಂಬುದರಲ್ಲಿ ಪದ್ಮನಾಭ ಪುರಾಣಿಕರು ವಿಜ್ಞಾನೋಪಾಸನೆಯಲ್ಲಿ ಇಂಥ ಶೈಲಿಯನ್ನು ರೂಪಿಸಲು ಯತ್ನಿಸಿದ್ದಾರೆ. ಆನಂತರ ಬಂದ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಮಾಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದ ಪುಟ್ಟ ಉಪನ್ಯಾಸಗಳಲ್ಲಿ ಹಲವು ಉತ್ತಮ ಉದಾಹರಣೆಗಳು ದೊರೆಯುತ್ತವೆ. ಪ್ರೊ. ನರಸಿಂಹಯ್ಯನವರ 'ಜಗತ್ತುಗಳ ಹುಟ್ಟು ಸಾವು' ತುಂಬ ಒಳ್ಳೆಯ ಪುಸ್ತಕ. ಪ್ರೊ. ಸವಣೂರು ಪ್ರೊ. ಗುಂಜೀಕರ, ರಾಘವೇಂದ್ರಾಚಾರ್ಯ, ಪ್ರೊ. ಅಪ್ಪಪುತ್ರಿ ಮೊದಲಾದ ಮಹನೀಯರು ಉತ್ತಮ ಲೇಖನಗಳನ್ನು ಬರೆಯುತ್ತಿದ್ದಾರೆ. ಆದರೆ ಬಹುತರನಾಗಿ ಇಂದಿಗೂ ಈ ಬಗೆಯ ಸ್ವತಂತ್ರ ಬರವಣಿಗೆಗಳು ಪುಸ್ತಕರೂಪದಲ್ಲಿವೆ. ಅವು ಎಲ್ಲರ ಗಮನಕ್ಕೆ ಬರುವುದಿಲ್ಲ. ಹೈಸ್ಕೂಲು ವಿದ್ಯಾರ್ಥಿಗಳಲ್ಲಿ ಮತ್ತು ಆ ಮಟ್ಟದವರಲ್ಲಿ ಆಸ್ತಿ ಕುದುರಿಸಲು ಅವು ಏನೇನೂ ಸಾಲವು. ಮೇಲಾಗಿ ಮನಶ್ಶಾಸ್ತ್ರ, ಭೌತಶಾಸ್ತ್ರ ಖಗೋಲ ಇತ್ಯಾದಿ ಕೆಲ ಶಾಸ್ತ್ರಗಳನ್ನಷ್ಟೆ ಅವು ಮುಟ್ಟುವೆ. ಉಳಿದ ಅಸಂಖ್ಯ ವಿಜ್ಞಾನ ವಿಭಾಗಗಳನ್ನು ಮುಟ್ಟಿಯೇ ಇಲ್ಲ. ವಿಜ್ಞಾನ ವಿಚಾರಗಳು ನಿಜವಾಗಿ ಜನಸ್ಪರ್ಶಿಯಾಗಬೇಕಾದರೆ ಪತ್ರಿಕೆಗಳೇ ಸಾಧನವಾಗಬೇಕು. ಈಗ ಕನ್ನಡ ಪತ್ರಿಕೆಗಳಲ್ಲಿ ಬರುವ ವಿರಳವಾದ ವಿಜ್ಞಾನ ಲೇಖನಗಳು ಕೂಡ ಹೆಚ್ಚಾಗಿ ಸಾಹಿತ್ಯಗಂಧವಿಲ್ಲದ ಜನರಿಂದ ಬರೆಯಲ್ಪಟ್ಟ ಸರಕಾರಿ Hand outಗಳು. ಇಲ್ಲವೆ ವಿಜ್ಞಾನವರಿಯದವರಿಂದ ಬರೆಯಲ್ಪಟ್ಟ ವಿದೇಶೀ ಲೇಖನಗಳ ರೂಪಾಂತರ. ಇವೆರಡೂ ನಮ್ಮ ಕೆಲಸ ಸಾಧಿಸಲಾರವು.

ವಿದೇಶಿ ಮೂಲಗಳಿಂದ ಪರಿವರ್ತಿಸಿದ ಲೇಖಗಳೂ ಅಷ್ಟು ಫಲಕಾರಿಯಾಗಲಾರವು. ನಮಗೆ ಬೇಕಾದ್ದು ಭಾರತೀಯ ವಾತಾವರಣಕ್ಕೆ ಒಪ್ಪುವ Local colour ಉಳ್ಳ ವೈಜ್ಞಾನಿಕ ಲಲಿತ ಪ್ರಬಂಧಗಳು. ನಮ್ಮಲ್ಲಿ ವಿಜ್ಞಾನ ಪದವೀಧರರು ಅನೇಕರಿದ್ದಾರೆ. ಅವರಿಗೆ ಸಾಹಿತ್ಯಾಭಿರುಚಿಯೂ ಇರುವುದು ವಿರಳವಲ್ಲ. ಅವರು ಈ ಕೆಲಸ ಕೈಕೊಳ್ಳಬೇಕು. ಸಾಹಿತ್ಯತಂತ್ರಗಳನ್ನುಪಯೋಗಿಸಿ ವೈಜ್ಞಾನಿಕ ಲೇಖ ಬರೆದು ಪ್ರಕಟಿಸಲು ಯತ್ನಿಸಿದರೆ, ಅವರಿಗೆ ಅಖಂಡ ಅವಕಾಶಗಳಿವೆ. ಅವರು ಕನ್ನಡದ ಈ ಪರಿಯ ಸೇವೆಗೆ ಸನ್ನದ್ಧರಾಗಲೆಂದು ಹಾರೈಸುತ್ತೇನೆ.

ವಿವಿಧ ಸಾಹಿತ್ಯಗಳ ಸಣ್ಣಕತೆ ಹಾಗೂ ಲಲಿತಪ್ರಬಂಧಗಳಲ್ಲಿ ಕಂಡುಬರುವ ಹೊಸ ಹಾದಿಗಳು

ಪ್ರೊ. ವಿ. ಕೃ. ಗೋಕಾಕರ ಅಧ್ಯಕ್ಷೀಯ ಭಾಷಣ

ಅಧ್ಯಕ್ಷ ಪೀಠದಿಂದ ಪ್ರಾರಂಭದ ಉಪೋದ್ಘಾತ ಉಪನ್ಯಾಸ ಮಾಡುತ್ತ ಪ್ರೊ. ಗೋಕಾಕರು ಇಂತು ನುಡಿದರು:

"ಪ್ರೊ. ಕುಮಾರಿ ಮಹಿಷಿಯವರು ನನ್ನ ಬಗ್ಗೆ ಕೆಲವೊಂದು ಗೌರವದ, ವಿಶ್ವಾಸದ ಮಾತುಗಳನ್ನು ಹೇಳಿದ್ದಕ್ಕಾಗಿ ನಾನು ತುಂಬಾ ಕೃತಜ್ಞನಾಗಿದ್ದೇನೆ. ಈ ವಿಚಾರ ಸಂಕಿರಣಕ್ಕೆ ಅಧ್ಯಕ್ಷನನ್ನಾಗಿ ಆಯ್ಕೆಮಾಡಿ ಈ ಗೌರವಸ್ಥಾನ ಪಲ್ಲಿಸಿದ್ದಕ್ಕಾಗಿ ಕರ್ನಾಟಕ ವಿದ್ಯಾವರ್ಧಕ ಸಂಘದವರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಕನ್ನಡ ಸಾಹಿತ್ಯದ ಸಣ್ಣಕತೆಯ ಸಣ್ಣಪ್ರಾಂತದಿಂದ, ಭಾರತದ ಭಿನ್ನ ಭಿನ್ನ ಭಾಷಾಸಾಹಿತ್ಯದ ಸಣ್ಣಕತೆಯ ಪ್ರಾಂತವನ್ನು ನಾವೀಗ ಪ್ರವೇಶಿಸಲಿದ್ದೇವೆ. ಆ ಮೊದಲು, ಸಣ್ಣಕತೆಯ ಆದರ್ಶ, ಗುರಿ, ಪ್ರಾಂತಪ್ರಾಂತದಿಂದ ಹೆಚ್ಚುಕಡಿಮೆಯಾಗಲಾರದು ಏಂಬ ಮಾತನ್ನು ನಾವು ಮರೆಯುವಂತಿಲ್ಲ. ಸಾಹಿತ್ಯದ ಗೊತ್ತು-ಗುರಿಗಳಿಗೆ ಅನುಸರಿಸಿ ಸಣ್ಣಕತೆಯ ರೂಪದಲ್ಲಿ ಪ್ರಾಂತ-ಪ್ರಾಂತದಲ್ಲಿ ಭಾಷೆ ಭಾಷೆಯಲ್ಲಿ—ಸ್ವಲ್ಪ ಭಿನ್ನತೆ ಕಂಡು ಬಂದರೂ ಅದರ ಅಂತರಂಗ-ಜೀವಾಳ ಎಲ್ಲ ಭಾಷೆಗಳಲ್ಲಿಯೂ ಎಲ್ಲ ಪ್ರಾಂತಗಳಲ್ಲಿಯೂ ಒಂದೇ ಯಾಗಿರುವುದುಂಟು. ಸಾಹಿತ್ಯನೇನಿ-ಪ್ರತಿಭಾರಾಣಿ- ನವನವೋನ್ಮೇಷಶಾಲಿನಿಯಾದರೂ ಅವಳ ಹೃದಯಾಂತರಂಗದ ಭಾಂಡಾರ ಎಂದೆಂದೂ ಒಂದೇ ಅಲ್ಲವೆ?

ಸಾಹಿತ್ಯದಲ್ಲಿ ಆದರ್ಶ ವಾಸ್ತವಿಕತೆಗಳ ಸ್ಥಾನಮಾನವನ್ನು ಅವಲೋಕಿಸುತ್ತ ಶ್ರೀ. ಬೆಟಗೇರಿಯವರು ತಮ್ಮ ಸ್ವಾಗತಾಧ್ಯಕ್ಷ ಭಾಷಣದಲ್ಲಿ ಒಂದೆರಡು ಮಹತ್ತ್ವದ ಸರಿಯಾದ ಮಾತುಗಳನ್ನೇ ಎತ್ತಿ ತೋರಿಸಿದರು. ನಮ್ಮ ಸಾಹಿತ್ಯ ಬಹುಕಾಲ ಬಾಳಬೇಕಾದರೆ, ಅರ್ಥಪೂರ್ಣವಾಗಿ ಚಿರಂಜೀವಿಯಾಗಬೇಕಾದರೆ, ಆದರ್ಶ ವಾಸ್ತವಿಕತೆಗಳ ಸರಿಯಾದ ಬೆರಕೆ ಅದರಲ್ಲಿರಬೇಕು. ಕೇವಲ ಆದರ್ಶದ ಬೆನ್ನುಹತ್ತಿ ಗಂಧರ್ವಲೋಕದಲ್ಲಿ ವಿಹರಿಸುವ ಲೇಖಕಿಗಾರ ಜನಜೀವನಕ್ಕೆ ಉಪಯೋಗಬೀಳದೆ ಹೋಗಬಹುದು. ಇನ್ನು ವಾಸ್ತವದ ಬಣ್ಣವನ್ನೇ ಹೆಚ್ಚಿಸಿ ಆದರ್ಶವನ್ನು ಮರೆತು ಬರಿಯ ಕೊಳಚೆಯನ್ನೇ ಚಿತ್ರಿಸಿದರೆ ಆ ಸಾಹಿತ್ಯ ಯತ್ನವೂ ನಿರರ್ಥಕ. ಯಾವ ಸಾಹಿತ್ಯದಲ್ಲಿ ಆದರ್ಶ-ವಾಸ್ತವಿಕತೆಗಳ ಸುಂದರ ಸುಮಧುರ ಸಮ್ಮಿಲನವಿದೆಯೋ ಆ ಸಾಹಿತ್ಯ ಉಚ್ಚತರಗತಿಯ ಸಾಹಿತ್ಯ. ಅಂಥ ಸಾಹಿತಿ ಸಮಾಜದ ಕೊಳಚೆ.

ಯಲ್ಲಿಯೂ ಅಮೃತತ್ವದ ಕಿರಣವನ್ನು ತೂರಬಲ್ಲ. ಜನತೆಯ ಉದ್ಧಾರವನ್ನು ಸಾಧಿಸಬಲ್ಲ.

ಸಣ್ಣಕತೆಗಾರ ರಸನಿರ್ಮಿಷಜೀವಿ. ಕಾದಂಬರಿಕಾರನ ಮನೋಭೂಮಿಕೆ ವಿಶಾಲ ದುನೋಭೂಮಿಕೆ. ನೂರಾರು ಜನರ ಚಿತ್ರಣವನ್ನು ಒಕ್ಕಟ್ಟಿನ ಸನ್ನಿವೇಶಗಳನ್ನು ನೆರಿಗಿನ ಮಾತಿನಿಂದ ಬಲು ಜಾಣ್ಮೆಯಿಂದ—ಸ್ವಲ್ಪದರಲ್ಲಿ ಬಹಳವನ್ನು ಹೇಳುವ ಕಲೆಯಿಂದ—ಕೊಡಬೇಕಾಗುತ್ತದೆ. ಕಿರಿದರಲ್ಲಿ ಪಿರಿದನ್ನು ಹೇಳುವ ಕೌಶಲ ಸಣ್ಣಕತೆಗಾರನಿಗೆ ಬೇಕು. ಈ ಮಾತು ಕನ್ನಡ ಸಾಹಿತ್ಯದ ಸಣ್ಣಕತೆಗಳಿಗಷ್ಟೇ ಅಲ್ಲ; ಭಿನ್ನ ಭಿನ್ನ ಭಾಷೆಗಳ ಸಣ್ಣಕಥಾಪ್ರಸಂಚಕ್ಕೂ ಅನ್ವಯಿಸುವ ಮಾತು.

"ನನ್ನ ಅಧ್ಯಕ್ಷರು ತಮ್ಮ ಭಾಷಣದಲ್ಲಿ 'ಸಾಹಿತಿಗಳೆನ್ನುವವರು ಸಾಹಿತ್ಯದ ಬೆನ್ನು ಬಡಿದೆ, ತಾವೇ ಎಂಜನಿಯರಾಗಬೇಕು; ಡಾಕ್ಟರುಗಳಾಗಬೇಕು; ಶಿಲ್ಪಿಗಳಾಗಬೇಕು; ಸೇನಾನಿಗಳಾಗಬೇಕು; ಸೇನಾಧಿಪತಿಗಳಾಗಬೇಕು; ಕರ್ಮಕುಶಲರಾಗಬೇಕು.' ಎಂಬ ಮಾತನ್ನು ಹೇಳಿದರು. ಈ ಮಾತು ನಿಜಕ್ಕೂ ಸತ್ಯವಾದುದ್ದು. ಜೀವನದ ಭಿನ್ನ ಭಿನ್ನ ಕಾರ್ಯಕ್ಷೇತ್ರಗಳಲ್ಲಿ ಆಸ್ಥೆವಹಿಸಿ ಭಾಗತೆಗೆದುಕೊಳ್ಳುವುದರಲ್ಲಿ ಅನುಭವ ವೈಶಿಷ್ಟ್ಯದ ಮಾತಿಗಿಂತ ಉಪಜೀವನದ ಮಾತು ಅತಿಶಯವಾಗಿದೆಯೆಂದು ನನಗೆನಿಸುತ್ತದೆ. ಏಕೆಂದರೆ ಕೇವಲ ತನ್ನ ಅನುಭವ ಶಕ್ತಿಯ ವಿಕಾಸಕ್ಕಾಗಿ ಸಾಹಿತಿ ಡಾಕ್ಟರವೃತ್ತಿಯನ್ನು—ವಕೀಲಿವೃತ್ತಿಯನ್ನು ನೌಕಾದಳದ ಅಧಿಕಾರವೃತ್ತಿಯನ್ನು ಕೈಕೊಳ್ಳುವುದು ಅಷ್ಟು ಸಮಂಜಸವಾಗದು. ರೋಗಿಯಾಗಿಯೇ ಡಾಕ್ಟರ ವೃತ್ತಿಯ ಅನುಭವವನ್ನು, ಪಕ್ಷಗಾರನಾಗಿಯೇ ವಕೀಲಿವೃತ್ತಿಯ ರೀತಿನೀತಿಗಳನ್ನು, ನೌಕಾ ಪ್ರಯಾಣಿಕನಾಗಿಯೇ ನೌಕಾದಳದ ಅನುಭವ ವಿಸ್ತಾರವನ್ನು ಸೂಕ್ಷ್ಮದರ್ಶಿಯಾದ ಸಾಹಿತಿ ಗ್ರಹಿಸಬಲ್ಲ. ಅನುಭವದ ಸಲುವಾಗಿ ಆಯಾ ಪ್ರಾಂತಸೇವೆ ಸ್ವೀಕರಿಸಿ ನಿಲ್ಲುವುದು ಅವಶ್ಯಕ ಮಾತು.

ಇದರಲ್ಲಿ ಗಣ್ಯವಾದ ಮಾತು ನಮ್ಮ ಉಪಜೀವನದ ಮಾತು. ಸಾಹಿತಿಯಾದ ಮಾತ್ರಕ್ಕೆ ಒಬ್ಬ ಶಿಕ್ಷಕನಾಗಿಯೋ, ಪ್ರಾಧ್ಯಾಪಕನಾಗಿಯೋ, ಪತ್ರಿಕಾವ್ಯವಸಾಯಿಯಾಗಿಯೋ ತನ್ನ ಜೀವನಮಾನವನ್ನು ಕೊನೆಯವರೆಗೆ ಆ ವೃತ್ತಿಯಲ್ಲಿಯೇ ಆರ್ಥಿಕ ಅನಾನುಕೂಲತೆಯ ಮಾರ್ಗದಲ್ಲಿಯೇ—ಕಳೆಯಬೇಕು—ಎನ್ನುವದು ತಪ್ಪು. ಆ ಶಿಕ್ಷಕ ವೃತ್ತಿ-ಪತ್ರಿಕಾವ್ಯವಸಾಯವೃತ್ತಿ ದೊರೆಯದೇ ಹೋದಾಗ-ನಿರಾಶನಾಗುವದೂ ತಪ್ಪು. ನಮ್ಮ ಜೀವನ ಅಜ್ಞೇಯಶಕ್ತಿಗಳ ಅಂತಃಪುರವಾಗಿದೆ. ಜೀವನ ವಿವಿಧಕಾರ್ಯಕ್ಷೇತ್ರಗಳ ರಂಗವಾಗಿದೆ. ತನ್ನ ಉಪಜೀವನಕ್ಕಾಗಿ ಸಾಹಿತಿ ಜೀವನದ ಭಿನ್ನ ಭಿನ್ನ ಕಾರ್ಯಕ್ಷೇತ್ರವನ್ನು ಹೊಕ್ಕು ತನ್ನ ಸಾಹಿತ್ಯ ಶಕ್ತಿಯನ್ನು ಬೆಳಸಿಕೊಳ್ಳಬಹುದು. ಸಾಹಿತ್ಯದ ಕಡಿ ಹುಟ್ಟಿದ ವ್ಯಕ್ತಿ ಯಾವ ಕ್ಷೇತ್ರದಲ್ಲಿದ್ದರೇನು—ಸಾಹಿತ್ಯಸೇವೆ ಸಲ್ಲಿಸದೆ ಇರಲಾರ. ಹೊಸ ಕಾರ್ಯಕ್ಷೇತ್ರದಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸುವಂತಿದ್ದರೆ, ಜೀವನಕ್ಕೆ ಹೊಸ ಅನುಭವದ ಮೆರಗು ಬರುವಂತಿದ್ದರೆ ಅದೇಕೆ ಬೇಡ? ಸಾಹಿತಿಗೆ ಎಲ್ಲಿಹೋದರೂ ಆಳವಾದ ಅಧ್ಯಾಸ, ಸೂಕ್ಷ್ಮದೃಷ್ಟಿ, ವಿಮರ್ಶಶಕ್ತಿ ಇವು ಅವಶ್ಯವಾದುವೇ!

"ಇನ್ನು ನಾವು ಭಿನ್ನ ಭಿನ್ನ ಪ್ರಾಂತಗಳ ಸಣ್ಣಕತೆಯ ವೈಶಿಷ್ಟ್ಯ, ವೈವಿಧ್ಯ, ನವ್ಯಪ್ರಯೋಗ ಇವುಗಳನ್ನು ಕೇಳುವವರಾಗಿದ್ದೇವೆ. ಅದಕ್ಕೂ ಪೂರ್ವದಲ್ಲಿ ಈ 'ಪ್ರಗತಿಶೀಲಸಾಹಿತ್ಯ' 'ಸಾಹಿತ್ಯದಲ್ಲಿ ನವ್ಯತೆ' ಈ ಪದಪ್ರಯೋಗಗಳ ವಿಶಿಷ್ಟಾರ್ಥವನ್ನು ತಿಳಿದುಕೊಳ್ಳುವುದು ಅವಶ್ಯವಿದೆ. 'ಪ್ರಗತಿಶೀಲತೆ'ಯೆನ್ನುವುದು ಸಾಹಿತ್ಯದ, ಸಣ್ಣಕತೆಯ ವಸ್ತುಲಕ್ಷಣ. ಅದು ಒಳತಿರುಳಿಗೆ ಸಂಬಂಧಪಟ್ಟುದು. ಒಂದು ಸಾಮಾಜಿಕ ಪ್ರಜ್ಞೆ. ಔದ್ಯೋಗಿಕ ಸಮಸ್ಯೆ, ಶಾಂತಿಮಯ ಪರಿವರ್ತನೆ- ಇದು ಪ್ರಾಗತಿಕ ಅಂಶ.

"ನವ್ಯತೆಯೆನ್ನುವುದು ಸಾಹಿತ್ಯದ-ಸಣ್ಣಕತೆಯ ಒಳತಿರುಳಿಗೆ ಸಂಬಂಧಿಸಿರದೆ ಅದರ ತಂತ್ರಕ್ಕೆ ಸಂಬಂಧಪಟ್ಟ ವಿಷಯ. ಏರೋಪ್ಯ ಭಾಷೆಗಳಿಂದಲೇ ಆಗಲಿ, ಭಾರತದ ಇನ್ನಿತರ ಭಾಷೆಗಳಿಂದಲೇ ಆಗಲಿ ಪ್ರಭಾವಿತವಾದ ಕನ್ನಡ ಸಾಹಿತ್ಯ-ಇಲ್ಲವೆ ಮತ್ತಾವಭಾಷೆಯ ಸಾಹಿತ್ಯ—ತನ್ನ ತಂತ್ರದಲ್ಲಿ ಹೊಸ ಹೊಸ ಬದಲಾವಣೆಗಳನ್ನು ಕಾಲಕ್ಕೆ, ವಸ್ತುವಿಗೆ ತಕ್ಕಂತೆ ಮಾಡಿಕೊಂಡದ್ದು, ಮಾಡಿಕೊಳ್ಳಬೇಕಾದುದು ಅವಶ್ಯವೇ.

"ಇನ್ನು ಭಿನ್ನ ಭಿನ್ನ ಪ್ರಾಂತಗಳೂ ಭಿನ್ನ ಭಿನ್ನ ಭಾಷೆಗಳ ಸಣ್ಣಕತೆ ಲಲಿತಪ್ರಬಂಧಗಳನ್ನು ತುಲನಾತ್ಮಕವಾಗಿ ಅಧ್ಯಸಿಸುವುದರಿಂದ ಉಳಿದ ಭಾಷಾಸಾಹಿತ್ಯದ ಪರಿಚಯವಾಗುವುದಲ್ಲದೆ, ದೃಷ್ಟಿವೈಶಾಲ್ಯ, ವಸ್ತುವಿಸ್ತಾರ, ತಂತ್ರನಾವೀನ್ಯ-ಇವುಗಳ ಬಗೆಗಿರುವ ಹೊಸ ಪ್ರಯೋಗಗಳನ್ನು ಅರಿತುಕೊಳ್ಳುವಲಾಭವೂ ದೊರೆಯುವುದು. ಸಹಾನುಭೂತಿಯಿಂದ ಅಭ್ಯಸಿಸಿ ನಮ್ಮ ಕುಂದು ಕೊರತೆಗಳನ್ನು ತುಂಬಿಕೊಳ್ಳಲೂ ಅವ್ಕಾಶ ದೊರೆಯುವುದು."

ಕೊನೆಗೆ ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ ಮೂವರು ಭಾಷಣಕಾರರ-ಮೂರು ವಿಧದ ಸಾಹಿತ್ಯದ – ಮುಖ್ಯ ಮುಖ್ಯ ಮಾತನ್ನು ಆಯ್ದುಕೊಂಡು-ಕನ್ನಡ ಸಾಹಿತ್ಯದಲ್ಲಿಯ ಸಣ್ಣಕತೆಗಳು. ಹಿಂದೀ ಸಣ್ಣಕತೆಗಳು, ಮಲೆಯಾಳಿ ಸಣ್ಣಕತೆಗಳು, ಮರಾಠಿ ಸಣ್ಣಕತೆಗಳು, ಇವುಗಳನ್ನು ತುಲನಾತ್ಮಕವಾಗಿ ವಿಮರ್ಶಾತ್ಮಕ ದೃಷ್ಟಿಯಿಂದ ಅಳೆದರು. ಮಲೆಯಾಳೀ ಸಾಹಿತ್ಯದಲ್ಲಿ ವಿಶೇಷವಾಗಿ ಕಾಣಿಸಿಗುವ ಸಾಮಾಜಿಕ ಪ್ರಜ್ಞೆ, ಹಿಂದೀ ಸಾಹಿತ್ಯದ ವೈವಿಧ್ಯ, ಮರಾಠಿಸಾಹಿತ್ಯದ ಹೊಸ ಹೊಸ ಪ್ರಯೋಗಗಳು ನಮಗಿಂದು ಬೇಕಾಗಿವೆ. ಕನ್ನಡ ಸಾಹಿತ್ಯದ ಸಣ್ಣಕತೆಗಳಲ್ಲಿ ಹರಿದುಬಂದಿರುವ ಪರಂಪರೆಯ ಜೊತೆಗೆ ಈ ಹೊಸದೃಷ್ಟಿಕೋಣವನ್ನು, ಸಾಮಾಜಿಕ ಪ್ರಜ್ಞೆಯನ್ನು, ವೈವಿಧ್ಯವನ್ನು, ಹೊಸ ಹೊಸ ಪ್ರಯೋಗಗಳನ್ನು ಸಾಧಿಸಬೇಕಾಗಿದೆಯೆಂದು, ಮಾರ್ಮಿಕವಾಗಿ ನುಡಿದರು. Problematic store ಸಮಸ್ಯಾತ್ಮಕ ಕತೆಗಳೂ ನಮ್ಮಲ್ಲಿ ಹೆಚ್ಚಾಗಿ ಹೊಸಸಾದಿಯಲ್ಲಿ ಮುಂದುವರೆಯಬೇಕಾಗಿದೆ—ಎಂದೂ ಹೇಳಿದರು.

ಮಲಯಾಳಿ ಕಥೆಗಳು

ಶ್ರೀ. ಪಿ. ಎಸ್. ಭಟ್ಟಾಚಾರಿ

ಮಲೆಯಾಳಿ ಕತೆಗಳು ೨೦-೨೫ ವರ್ಷಗಳಿಂದ ಪ್ರಗತಿಪಥದಲ್ಲಿ ಗ್ರಸ್ಥರವಾಗಿದೆ. ಅದರ ಕೃತ್ರಿಮವಾದ ಆವರಣ ಬದಲಾಯಿಸಿತು, ಹೊಸ ಚೈತನ್ಯ ತಲೆ ದೋರೀತು; ಮಾನವ-ಮನದ ಜಟಿಲ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಸಮರ್ಥವಾಸತ್ತಾ ಬಂತು. ಅದರ ಅನುಭವ ಗುತ್ತು ಕ್ಷೇತ್ರ ವ್ಯಾಪಕವಾಗುತ್ತಾ ಬಂತು ಸಮಾಜದ ಬಹುಮುಖ ಚಿತ್ರವನ್ನು ಚಿತ್ರಿಸಿ ತನ್ನ ಐತಿಹಾಸಿಕ ಧರ್ಮವನ್ನು ನಡೆಸಿಕೊಂಡು ಹೋಗುವುದೇ ಯೋಗ್ಯವಾದ ಸೇವೆ ಎಂದು ತಿಳಿದುಕೊಂಡಿತು. ಇದು ಂದು ಸಾಮಾನ್ಯದ ಮಾತಲ್ಲ. ಏತಕೆಂದರೆ ಈ ಹಿಂದೆ ಕತೆಗಳ ರಿಭಾಷೆಯೇ ಬೇರೆಯಾಗಿತ್ತು. ಭಾಷೆ ಉತ್ತೇಜಕವಾಗಿರುತಿತ್ತು, ಾತ್ರಗಳು ಕಲ್ಪನಾತೀತವಾಗಿರುತಿದ್ದುವು. 'ಗುಪ್ತಪರಿಣಾಮ' ತೆಯ ಜೀವಾಳವಾಗಿರುತಿತ್ತು. ಕತೆಯ ಪರಿಣಾಮವನ್ನು ಎಷ್ಟು ಎಚ್ಚರಿಕೆಯಿಂದ ಗುಪ್ತವಾಗಿಡುತಿದ್ದರೊ, ಪಾಠಕರ ಉತ್ಸುಕತೆಯನ್ನು ಎಷ್ಟು ಕೆರಳಿಸಲು ಸಾಧ್ಯವಾಗುತ್ತಿತ್ತೋ, ಕತೆ ಅಷ್ಟೇ ಉತ್ತಮ. ವಾದುದೆಂದು ತಿಳಿಯಲಾಗುತ್ತಿತ್ತು. ಈ ಏಕಾಂಗೀ ಮತ್ತು ಕೃತ್ರಿಮ ಫಾರ್ಮುಲವನ್ನು ಬಿಟ್ಟು, ಒಂದು ಹೊಸ ಕ್ರಾಂತಿಕಾರಿ ಧರಾತಳಕ್ಕೆ ಇಳಿದು ಬಂತು. ಇದು ಬರೆ ಕಥಾಸಾಹಿತ್ಯಕ್ಕಲ್ಲದೆ, ಮಲೆಯಾಳಿ ಸಾಹಿತ್ಯಕ್ಕೆಲ್ಲ ಒಂದು ಹೊಸ ದಾರಿಯನ್ನು ತೋರಿಸಿಕೊಟ್ಟಿತು.

ಆದರೆ ಕತೆ ಈ ಹೊಸ ರೂಪವನ್ನು ಹೇಗೆ ಕಳೆಯಿತು ? ಒಂದು ಪ್ರಭಾತದಲ್ಲಿ ತನ್ನಷ್ಟಕ್ಕೆ ತಾನೆ ಎಲ್ಲಾ ಬದಲಾವಣೆಯಾಯಿತೆ ? ಹಾಗಾಗಲಿಲ್ಲ; ಹಾಗೆ ಕೇಳಿದರೆ ತಪ್ಪಾಗುವುದು. ತತ್ಕಾಲೀನ ಸಾಮೂಹಿಕ ವಾತಾವರಣದ ಪ್ರಭಾವ ಸಾಹಿತ್ಯದ ಮೇಲೆ ಅಂಶಿಕ ರೂಪದಲ್ಲಾದರೂ ಬಿದ್ದೇಬೀಳುತ್ತದೆ. ೧೯೩೦-೩೫ರಲ್ಲಿ ಪ್ರಥಮ ಮಹಾಯುದ್ಧದ ನಂತರ ಒದಗಿದ ವಿಶ್ವವ್ಯಾಪೀ ಆರ್ಥಿಕ ಮುಗ್ಗಟ್ಟಿನ ಪ್ರಭಾವ ತೀರಳದ ಭೌತಿಕ ಜೀವನದ ಮೇಲೂ ಬೀಳದೆ ಇರಲಿಲ್ಲ. ಒಂದು ಕಡೆ ಬರಗಾಲ ಕಿತ್ತು ತಿನ್ನುತ್ತಿದ್ದರೆ ಇನ್ನೊಂದು ಕಡೆ ಸಮತಾವಾದಿಗಳ ಧಮನಚಕ್ರ ಅತಿವೇಗದಿಂದ ಮರ್ದನ ಮಾಡುತ್ತಿತ್ತು. ಜನರ ಮನಸ್ಸಿನಲ್ಲಿ ನಿರಾಶೆಯ ಬೆಂಕಿ ಉರಿಯುತ್ತಿತ್ತು. ಜನರು ಹೇಗಾದರೂ ತತ್ಕಾಲೀನ ಪರಿಸ್ಥಿಯಿ ಬದಲಾಯಿಸಿ ಒಂದು ಸ್ವರ್ಣಪ್ರಭಾತವನ್ನು ನೋಡಲು ಹಾತೊರೆಯುತ್ತಿದ್ದರು. ಇಂತಹ ಪರಿಸ್ಥಿತಿಯಿಂದ ಹೆಚ್ಚಿಗೆ ಪ್ರಭಾವಿತರಾದವರು ತರುಣ ಲೇಖಕರೆಂದು ಬೇರೆ ಹೇಳಬೇಕಾಗಿಲ್ಲ. ಇವರಲ್ಲಿ ಶ್ರೀ. ಪಿ. ಕೇಶವದೇವ ಮಖ್ಯರಾಗಿದ್ದರು. ಇವರನ್ನು ಹೊಸ ಕತೆಗಳ ಜನಕನೆಂದು ಕರೆದರೆ ಅತಿಶಯೋಕ್ತಿಯಾಗಲಾರದು. ದೀನ-ದಲಿತರ ಕೂಗನ್ನು ಕೇಳಿದವರಲ್ಲಿ ಇವರು ಮೊದಲಿಗರು. ಸಾಹಿತ್ಯಕ ಅಸ್ಪೃಶ್ಯರನ್ನು ಇವರು ಅಮರರನ್ನಾಗಿ ಮಾಡಿದರು. ಕಥಾಕಥಿತ ಅನೆದಂತದ ಗೋಪುರದ ಸೃಜನೆಯಲ್ಲಿ ತಲ್ಲೀನರಾದ ಸಾಹಿತ್ಯಾಚಾರ್ಯರು ಇಂತಹವನ್ನು ನೋಡಿ ಮೂಗುಮುರಿದರೆ ಆಶ್ಚರ್ಯವಾದರೂ ಏನು ? ಹೊಟ್ಟೆಪಾಡಿಗಾಗಿ ಬೀದಿ ಬೀದಿಯಲ್ಲಿ ಜಲ್ಲಿಯನ್ನು ಒಡೆಯುವವಳ ಹೃದಯದಲ್ಲಿ ಪ್ರೇಮಾಂಕುರಿಸಲು ಸಾಧ್ಯವೆ ? ಜಿಂದಿಯನ್ನು ಹೊದೆದು ತೆಂಗಿನ ಜುಂಗಿನ ನಾರ ಮಾಡುವವಳು ಸಾಹಿತ್ಯದ ವಸ್ತುವಾಗಬಲ್ಲಳೆ ? ಬಡ ರಿತ ತಾನು ಸ್ವಾಮಿಗಳ ಬೊಕ್ಕಸವನ್ನು ತುಂಬಲು ತನ್ನ ಪ್ರಾಣವನ್ನು ತೀಯದೆ ಇನ್ನೇನು ಮಾಡಬೇಕು ? ಇದಕ್ಕೂ ಮುಖ್ಯ ವಿಷಯವೆಂದರೆ ನಾವು ಮನೆಯಲ್ಲಿ, ಸ್ನೇಹಿತರೊಡನೆ ಮಾತಾಡುವ ಭಾಷೆಯಲ್ಲಿ ಸಾಹಿತ್ಯರಚನೆಯಾಗಲಾರದೆ ? ಇಂತಹ ಅನೇಕ ಆಂತರಿಕ ದ್ವಂದ್ವಗಳ ಪರಿಣಾಮವಾಗಿ ಸಾಹಿತ್ಯಸಮಾಜದ ದರ್ಪಣವಾಗಿ ಪರಿಣಮಿಸಿತು.

ಈ ಮಧ್ಯೆ ಕೆಲವು ಬೇರೆ ಬೇರೆ ರೀತಿಯ ಪ್ರವೃತ್ತಿಗಳು ಕಾಣಿಸಿಕೊಂಡುವು. ಶಿವಶಂಕರ ಪಿಳ್ಳೆಯವರ ನೇತೃತ್ವದಲ್ಲಿ ಮುಂದೆ ಬಂದವರ ಮೇಲೆ 'ಮಾಸಸಾ'ನ ಪ್ರಭಾವ ಹೆಚ್ಚಾಗಿತ್ತು. ಕೇವಲ ಮುಖಂಡರನ್ನು ತೆಗೆಡುಕೊಂಡರೆ, ಅವರು ತಮ್ಮ ದಾರಿಯಲ್ಲಿ ಸರಿಯಾಗಿಯೇ ಇದ್ದರು. ಆದರೆ ಅನುಯಾಯಿಗಳು ಬಹಳ ಮುಂದುವರಿದರು; ಅವರಿಗೆ ವಿಕೃತ 'ಸೆಕ್ಸ್'ನ ಘೃಣಿತ ಚಿತ್ರಣದಿಂದಲೂ ತೃಪ್ತಿಯಾಗುತ್ತಿರಲಿಲ್ಲ. ಜನರಲ್ಲಿ ಕೀಳುಮಟ್ಟದ ಕಾಮವಾಸನೆಯ ಪ್ರಚಾರ ಮಾಡತೊಡಗಿದರು. ಈ ಪರಿಸ್ಥಿಯೂ ಕೂಡ ಹೆಚ್ಚು ದಿನ ಉಳಿಯಲಿಲ್ಲ. ಏತಕ್ಕೆಂದರು ಇವರ ಮುಖಂಡರೇ ಈ ವಿಚಾರ ಸರಣಿಯನ್ನು ಬಿಟ್ಟು ಪ್ರಗತಿಶೀಲ ಸಾಹಿತ್ಯರಚನೆಯಲ್ಲಿ ತೊಡಗಿದರು; ಕತೆ ಇವರ ಕೈಯಲ್ಲಿ ಒಂದು ಶಕ್ತಿಯುತವಾದ ಆಯುಧವಾಗಿ ಪರಿಣಮಿಸಿತು. ಇಲ್ಲಿ ಕೂಡ ಅನುಯಾಯಿಗಳು ತಪ್ಪುದಾರಿಯನ್ನು ತುಳಿದರು !

ಅವರು ಹುಚ್ಚು ಜಯಕಾರವನ್ನು ರಾಜಘೀತಿ ಎಂದು ನಂಬಿಕೊಂಡರು.

ಈ ಸ್ರಸಂಗದಲ್ಲಿ ಇನ್ನೂ ಒಂದೆರಡು ವಿಚಾರಸರಣಿಯನ್ನು ಉಲ್ಲೇಖಿಸುವುದು ಯೋಗ್ಯವೆನಿಸುತ್ತವೆ. ದಕ್ಷಿಣ ಕೇರಳದಲ್ಲಿ ಕ್ರೈಸ್ತ-ಧರ್ಮ ತುಂಬಾ ಪ್ರಚಾರದಲ್ಲಿದೆ. ಪೊನ್ನಾಕುನ ಮಂ ವರ್ಕಿ ಎನ್ನುವ ಒಬ್ಬ ಕ್ರೈಸ್ತ ಕತೆಗಾರರು ಏಸುವಿನ ಹೆಸರಿನಲ್ಲಿ ಜನರಿಗೆ ಮೋಸ ಮಾಡುತ್ತಿರುವ ಪಾದರಿಗಳ ವಾಸ್ತವಕೃತ್ಯಗಳನ್ನು ಬಿಚ್ಚಿತೋರಿಸಿದರು. ಅಹಿಂಸಕರಾದ ಪಾದ್ರಿಗಳು ಅವರ ಕೊಲೆಯ ಪ್ರಯತ್ನವನ್ನು ಕೂಡ ನಡೆಸಿದರು. ಈಗಲೂ ಅವರು ಪ್ರಗತಿಶೀಲ ಕತೆಗಳನ್ನೆ ಬರೆಯುತ್ತಾರೆ ಮತ್ತು ಕೇರಳ ಪ್ರಗತಿಶೀಲ ಸಾಹಿತ್ಯಸಂಘದ ಪ್ರಧಾನಕಾರ್ಯದರ್ಶಿಗಳೂ ಆಗಿದ್ದಾರೆ. ಮುಸಲ್ಮಾನ ಸಮಾಜ ಅವರ ಗೋಷ್ಠಾ-

ಹೆಗಡರಂತೆಯೇ ನನ್ನ ದೃಷ್ಟಿಪಥಕ್ಕೆ ಅಗೋಚರವಾಗಿತ್ತು. ಶ್ರೀ. ವೈಕಂ ಮುಹಮ್ಮದ್ ಬಶೀರ್‌ರವರು ಈ ಸಮಾಜದ ಪ್ರತಿನಿಧಿಗಳಾಗಿ ಬಂದರು. ಇವರು ಕ್ರೈಸ್ತ ಹುಡುಗಿ ಮತ್ತು ಹಿಂದೂ ಹುಡುಗನ ಅಂತರ್ಧಾರ್ಮಿಕ ವಿವಾಹವನ್ನು ಚಿತ್ರಿಸಿದರು. ಅವರ ಈ ನೀರೆ ತತ್ಕಾಲೀನ ಸರಕಾರಕ್ಕೆ ಸರಿಬೀಳಲಿಲ್ಲ. ಆದುದರಿಂದ ಅವರ ಕತೆಗೆ ಮುಟ್ಟುಗೋಲು ಹಾಕಿ ಅವರನ್ನು ಗಡಿಪಾರು ಮಾಡಿತು.

ಪ್ರೈಮರಿ ಅಧ್ಯಾಪಕರ ದಯನೀಯ ಸ್ಥಿತಿಯ ಬಗ್ಗೆ ನಾವು ಸಾಮಾನ್ಯವಾಗಿ ಯೋಚಿಸುವುದೇ ಇಲ್ಲ. ಈ ಪ್ರಾಥಮಿಕ ಶಿಕ್ಷಕರ ಸಜೀವ ಚಿತ್ರವನ್ನು ಶ್ರೀ ಕಾರೂರ್ ನೀಲಕಂಠ ಪಿಳ್ಳೈಯವರು ತಮ್ಮ ಕತೆಗಳಲ್ಲಿ ಚಿತ್ರಿಸಿದ್ದಾರೆ. ಅವರು ಮೂವತ್ತೈದು ವರ್ಷಗಳ ಕಾಲ ಪ್ರಾಥಮಿಕ ಶಿಕ್ಷಕರಾಗಿದ್ದರು. ಆದುದರಿಂದ ಅವರ ಕತೆಗಳು ಅನುಭವದ ಬೇವು-ಬೆಲ್ಲಗಳಿಂದ ಕೂಡಿರುತ್ತವೆ.

ಇಲ್ಲಿ ನಾನು ಅನೇಕ ಲೇಖಕರ ಹೆಸರನ್ನು ಬಿಟ್ಟುಬಿಟ್ಟಿದ್ದೇನೆ. ಇಂತಹ ಅನೇಕ ಲೇಖಕರು ಮಲಯಾಳಿ ಸಾಹಿತ್ಯದಲ್ಲಿದ್ದಾರೆ. ಇನ್ನೂ ಕೆಲವು ರೀತಿಯ ಕತೆಗಾರರೂ ಇದ್ದಾರೆ. ಅವರ ಸಾಹಿತ್ಯದಲ್ಲಿ ಯಾವ ಒಂದು ರೀತಿಯ ವಿಶೇಷವಾದದ್ದೂ ಕಟ್ಟುಬಿದ್ದವರಲ್ಲ. ಅವರ ದೃಷ್ಟಿಯಲ್ಲಿ ಗುಣ-ಅವಗುಣಗಳು ವ್ಯಕ್ತಿಯನ್ನು ಅವಲಂಬಿಸಿರುತ್ತದೆಯೇ ವಿನಃ ವರ್ಗ ಅಥವಾ ಜಾತಿವಿಶೇಷ ಅಲ್ಲ. ಅವರಲ್ಲಿ ಶ್ರೀ. ಎನ್. ಕೆ. ಪೊಟ್ಟೆಕಾಟ್ಟು ಮತ್ತು ಶ್ರೀ 'ಉರೂಬ್' (ಪಿ. ಪಿ. ಕುಟ್ಟಿಕೃಷ್ಣನ್) ಮುಖ್ಯರು. ಈಗ ಉರೂಬ್‌ರವರು ಒಂದು ಹೊಸ ಪ್ರಯೋಗ ನಡೆಸುತ್ತಿದ್ದಾರೆ ಆದರೆ ಇಂಗ್ಲೀಷ್ ಶೈಲಿಯ Saga ಶೈಲಿಯನ್ನು ತಮ್ಮ ಕತೆಗಳಲ್ಲಿ ಅಳವಡಿಸುತ್ತಿದ್ದಾರೆ. ಈ ಶೈಲಿಯಲ್ಲಿ ಅವರು ಬರೆದು ಮೂರು ಸಂಗ್ರಹಗಳು ಆಗಲೇ ಪ್ರಕಾಶಿತವಾಗಿವೆ.

ಗಂಡಸರೇ ಹೆಂಗಸರ ವಿಷಯವಾಗಿಯೂ, ಗಂಡಸರ ವಿಷಯವಾಗಿಯೂ ಬರೆದಿದ್ದಾರೆ. ಆದರೆ ಹೆಂಗಸರ ದೃಷ್ಟಿಯಲ್ಲಿ ಗಂಡಸರ ಹೇಗಿರುತ್ತಾರೆನ್ನುವುದನ್ನು ತಿಳಿಯಬೇಡವೆ? ಹಾಗಿದ್ದರೆ ಸರಸ್ವತಿ ಅಮ್ಮನವರ ಕತೆಗಳನ್ನು ಓದಿ. ಇವರಂತೆ ಗಂಡಸರ ದಂಭ-ದರ್ಪಾಳಿಕೆಗಳನ್ನು ಕಥಾ-ವಸ್ತುವನ್ನಾಗಿಟ್ಟುಕೊಂಡು ಬೇರೆ ಯಾರೂ ಈ ರೀತಿ ಕತೆಗಳನ್ನು ಬರೆದಿಲ್ಲ.

ಎರಡನೇ ಮಹಾಯುದ್ಧದ ಕಾಲದಲ್ಲಿ ಸಾವಿರಾರು ಕೇರಳದ ತರುಣರು ಸೈನ್ಯವನ್ನು ಸೇರಿಕೊಂಡರು. ಬಂದೂಕನ್ನು ಹಿಡಿದ ಕೈ ಲೇಖನಿಯನ್ನೂ ಹಿಡಿಯಬಹುದೆಂದೂ ಯಾರೂ ಕಲ್ಪಿಸಿರಲಿಕ್ಕಿಲ್ಲ. ಇವರಲ್ಲಿ ಅನೇಕರು ಸೈನಿಕರ ಜೀವನದ ಹಲವಾರು ಸುಂದರ ಕತೆಗಳನ್ನು ಬರೆದಿದ್ದಾರೆ.

ಅನೇಕ ಉದಯಮಾನ ತರುಣ ಲೇಖಕರು ಕಥಾ-ಕ್ಷೇತ್ರಕ್ಕೆ ಬರುತ್ತಿದ್ದಾರೆ. ಇವರಿಂದ ಮಲೆಯಾಳಿ ಕತಾಸಾಹಿತ್ಯ ಸಮೃದ್ಧವಾಗಬಹುದೆಂದು ನಂಬಬಹುದು.

ಕನ್ನಡದಲ್ಲಿಯು ಲಘುಕಥಾ ಸಾಹಿತ್ಯದ ಕಡೆಗೆ ಇನ್ನೂ ಯಾವ ಮಲೆಯಾಳಿ ಕತೆಗಾರನ ಗಮನವೂ ಹೋಗಲಿಲ್ಲ. ಪತ್ತೇದಾರಿ ಕತೆಗಳ ವಿಷಯವಾಗಿಯೂ ಹಾಗೆ ಹೇಳಬಹುದು.

ಇದುವರೆ ನಾನು ನಿಮ್ಮ ಮುಂದೆ ಒಂದು ದೊಡ್ಡ ಕಥಾ-ಪ್ರಪಂಚವನ್ನು ಇಡುತ್ತಿದ್ದೆ. ಆದರೆ ನಮ್ಮ ಲಲಿತ ನಿಬಂಧ ಸಾಹಿತ್ಯ ಕಥಾಸಾಹಿತ್ಯದಂತೆ ಬೆಳೆದುಬಂದಿಲ್ಲ. ನಿಬಂಧ ಬರೆಯುವವರು ಇಲ್ಲವೆನ್ನುವಂತಿಲ್ಲ. ಮೇಧಾವಿಗಳ ನ್ಯೂನತೆಯೂ ಇಲ್ಲ. ಹಾಗಾದರೆ ಲಲಿತ ನಿಬಂಧಗಳು ಏಕೆ ಬೆಳೆಯಲಿಲ್ಲ?

ಬಾಲಾಸ್ತಾವತ್ ಕ್ರೀಡಾಸಕ್ತಃ
ತರುಣಸ್ತಾವತ್ ತರುಣೀಸಕ್ತಃ
ವೃದ್ಧಸ್ತಾವತ್ ಚಿಂತಾಸಕ್ತಃ
ಪರೇ ಬ್ರಹ್ಮಾಣಿ ಕೋಽಪಿ ನ ಸಕ್ತಃ

ಒಂದು ರೀತಿಯಾಗಿ ಇದರ ಕಾರಣ ಇದೇ ಆಗಿದೆ. ಕೆಲವರು ಸಾಮಯಿಕ ರಾಜನೈತಿಕ ಲೇಖನಗಳನ್ನು ಬರೆಯುವುದರಲ್ಲೇ ತಮ್ಮ ಸಮಯವನ್ನೆಲ್ಲಾ ವ್ಯಯಮಾಡಿದರೆ ಇನ್ನು ಕೆಲವರು ಸಾಹಿತ್ಯಕ ವಾದ-ವಿವಾದಗಳಲ್ಲೇ ತಮ್ಮ ಎಲ್ಲಾ ಸಮಯವನ್ನು ಕಳೆದು ಬಿಡುತ್ತಾರೆ. ಇನ್ನು ಲಲಿತ ನಿಬಂಧ ಬರೆಯಲು ಸಮಯವಾದರೂ ಎಲ್ಲಿ ಸಿಗಬೇಕು? ಶ್ರೀ. ಪಿ. ರಾಮನ್ ಮೆನೋನ್‌ರವರು ಕಸ, ಬಾಳೆಹಣ್ಣು-ಕಿತ್ತಳೆಹಣ್ಣಿನ ಸಿಪ್ಪೆ, ಒಂದರಿಂದ ಹತ್ತರ ವರೆಗೆ ಎಣಿಕೆ ಮುಂತಾದ ಸಾಮಾನ್ಯ ವಿಷಯಗಳ ಮೇಲೆ ಹಲವು ಸುಂದರವಾದ ನಿಬಂಧಗಳನ್ನು ಬರೆದಿದ್ದಾರೆ. ಬಸ್ ಕಂಡಕ್ಟರ್, ಬಸ್ ಡ್ರೈವರ್, ಜರ್ನಲಿಸ್ಟ್, ಇನ್‌ಶೂರೆನ್ಸ್ ಏಜೆಂಟ್, ಲೇಖಕರನ್ನು ವಿಷಯವಾಗಿಟ್ಟುಕೊಂಡು ಈ. ಎ. ಕೃಷ್ಣಪಿಳ್ಳೈಯವರು ಕೆಲವು ನಿಬಂಧಗಳನ್ನು ಬರೆದಿದ್ದಾರೆ. ಶ್ರೀ. ವಿಕ್ರಮನ್ ಈಗ ಕೆಲವು ಚಿಕ್ಕ ಚಿಕ್ಕ ನಿಬಂಧಗಳನ್ನು ಬರೆಯುತ್ತಿದ್ದಾರೆ. ಇವುಗಳಲ್ಲದೆ ರಾಜನೀತಿ, ವಿಜ್ಞಾನ ಮುಂತಾದ ವಿಷಯಗಳ ಮೇಲೂ ಸಾಮಾನ್ಯ ಜನರ ಮನಸ್ಸಿಗೆ ನಾಟುವಂತೆ ನಿಬಂಧಗಳನ್ನು ಬರೆಯಲು ಪ್ರಾರಂಭಿಸಿದ್ದಾರೆ. ಆದರೂ ಕೂಡ ತರುಣ ಲೇಖಕರು ಈ ಕಡೆ ಹೆಚ್ಚಿನ ಆಸಕ್ತಿ ವಹಿಸುತ್ತಾ ಇಲ್ಲ.

ಈಗ ಮಲೆಯಾಳಿ ಸಾಹಿತ್ಯದಲ್ಲಿ ಒಂದು ರೀತಿಯ ಗತ್ಯಾವರೋಧನೆ ನಡೆಯುತ್ತಿದೆ. ಹೊಸ ಹೊಸ ಲೇಖಕರು ಸಾಹಿತ್ಯಕ್ಷೇತ್ರಕ್ಕೆ ಬರುತ್ತಿದ್ದಾರೆ. ಹೊಸ ಹೊಸ ಪುಸ್ತಕಗಳು ಪ್ರಕಾಶನಕ್ಕೆ ಬರುತ್ತಿವೆ. ನವೀನತಮ ಎಣಿಕೆಯ ಪ್ರಕಾರ ಪ್ರತಿ ದಿನ ಮೂರು ಹೊಸ ಪುಸ್ತಕ ಪ್ರಕಾಶವಾಗುತ್ತಿದೆ. ಇಷ್ಟಾದರೂ ಗತ್ಯಾವರೋಧನೆ ಏತಕೆ? ಕಾರಣ ಇಷ್ಟೆ. ತರುಣ ಲೇಖಕರು ಸಮುದ್ರದಲ್ಲಿ ಮುಳುಗೆದ್ದೇನೊ ಹಾಕುತ್ತಿರೆ. ಆದರೆ ಮುತ್ತನ್ನು ಅರಿಸಿ ತರುವ ಬದಲು ಮೀನು, ಕ್ರಿಮಿ ಕೀಟಕಗಳಿಂದಲೇ ತೃಪ್ತರಾಗುತ್ತಾರೆ.

ಸಾದರ ಸ್ವೀಕಾರ

೯೭ **ಪ್ರಸಾದ** (ವಾರ್ಷಿಕ ಸಂಪುಟ) ಕರ್ನಾಟಕ ರಾಜ್ಯೋ-ಯ ದಿನದಂದು ಪ್ರಕಟವಾಗಿದೆ. ಸಂಪಾದಕರು ಶ್ರೀ. ಬಸವರಾಜ ಡ್ಡಿಯವರು ಪ್ರಕಾಶಕರು:- ವೀರಶೈವ ಪ್ರಸಾದನಿಲಯ, ಮನಬೀದಿ, ಬೆಳಗಾಂವಿ. ಕ್ರೌ. ೧೦೮ ಪುಟಗಳು.

೯೮ **ಗೀತಗೋವಿಂದ** (ಮೂಲ ಸಂಸ್ಕೃತ ಕಾವ್ಯದ ಕನ್ನಡ ಅನುವಾದ.) ಸುಪ್ರಸಿದ್ಧ ಸಂಸ್ಕೃತ ಕವಿ ಜಯದೇವನ ಕೃತಿಯನ್ನು ಶ್ರೀ. ಕುಲಮರ್ವ ಬಾಲಕೃಷ್ಣ ಅವರು ಕನ್ನಡದಲ್ಲಿ ಅನುವಾದಿಸಿ ಮೂಲದೊಂದಿಗೆ ಪ್ರಕಟಿಸಿದ್ದಾರೆ. ಪ್ರಕಾಶಕರು ಸಮಾಜ ಪುಸ್ತ-ಾಲಯ, ಧಾರವಾಡ. ಕ್ರೌ. ಅ. ೧೦೦ ಪುಟಗಳು. ಬೆಲೆ ೧-೦-೦.

೯೯ **ಕರ್ನಾಟಕ ದರ್ಶನ** (ಕವನ ಸಂಕಲನ) ಬೇರೆ ಬೇರೆ ವಿಗಳ ಕವನಗಳನ್ನು ಶ್ರೀಮಾನ್ ಎಸ್. ಡಿ. ಇಂಚಲ ಅವರು ಸಂಪಾದಿಸಿದ್ದಾರೆ. ಪ್ರಕಾಶಕರು ಚೇತನ ಪ್ರಕಾಶನ, ಬೆಳಗಾಂವಿ. ಕ್ರೌ. ಅ. ೬೨ ಪುಟಗಳು. ಬೆಲೆ ೧-೦-೦.

೧೦೦ **ವಿಜಯ ದುಂದುಭಿ** (ಕವನ ಸಂಕಲನ) ಸಂಪಾದಕರು ಶ್ರೀ. ಬಿ. ಎ. ಸನದಿ ಅವರು ಪ್ರಕಾಶಕರು: ಚೇತನ ಪ್ರಕಾಶನ, ಬೆಳಗಾಂವಿ. ಕ್ರೌ. ಅ. ೮೦ ಪುಟಗಳು. ಬೆಲೆ ೦-೧೫-೦.

೧೦೧ **ಉದಯ** (ಗದ್ಯ-ಪದ್ಯ ಸಂಕಲನ) ಸಂಪಾದಕರು ಶ್ರೀಮಾನ್ ಬಾಳೇಶ ಲಕ್ಷೆಟ್ಟಿಯವರು. ಪ್ರಕಾಶಕರು ಉದಯ ಪ್ರಕಾಶನ, ಗೋಕಾಕ. ಕ್ರೌ. ೪. ೪೨ ಪುಟಗಳು ಬೆಲೆ ೦-೮-೦.

೧೦೨ **ಹೋಮಿಯೊಪತಿ** (ವೈದ್ಯಕ ಪದ್ಧತಿಯ ವಿಧಿ ನಿಯಮಗಳು) ಬರೆದವರು ಡಾ. ಎಚ್. ವಿ. ಮೂರ್ತಿಯವರು. ಪ್ರಕಾಶಕರು ಮೂರ್ತಿ ಹೋಮಿಯೋಕ್ಲಿನಿಕ್, ದಾವಣಗೇರಿ. ಕ್ರೌ. ಅ. ೧೫೮ ಪುಟಗಳು. ಬೆಲೆ ೫-೦-೦.

೧೦೩ **ವಿವೇಕಕುಂಜ** (ದೊಡ್ಡವರ ಉಕ್ತಿಗಳ ಸಂಗ್ರಹ) ಸಂಗ್ರಹಕಾರರು ಶ್ರೀ. ಗಣಪತರಾವ ಕನ್ನೂರ, ಬಿ. ಎಸ್ಸಿ. ಇಂಚ-ರಿ. ಪ್ರಕಾಶಕರು: ಅಧ್ಯಾತ್ಮಭಾಂಡಾರ, ಶ್ರೀಪದ್ಮನ್ನರು ಭಾವು-ಚೆಟ್ಟಿ ವಹಾರಾಜರ ಮಠ, ಹಿಂಚಗೇರಿ, ಜಿಲ್ಲಾ ವಿಜಾಪೂರ. ಕ್ರೌ. ಅ. ೬೦ ಪುಟಗಳು. ಬೆಲೆ ೧-೪-೦.

೧೦೪ **ತವರುಮನೆ** (ಕಿರುಕಾದಂಬರಿ) ಬರೆದವರು ಶ್ರೀಮಾನ್ ಹೂಗಣ್ಣ ಹುಂಡೇಕಾರ. ಪ್ರಕಾಶಕರು ಶ್ರೀ ಜಯಲಕ್ಷ್ಮಿ ಪ್ರಕಾಶ-ಾಲಯ, ಯಾದಗಿರಿ ಕ್ರೌ. ಅ. ೫೪ ಪುಟಗಳು. ಬೆಲೆ ೦-೪-೦.

೧೦೫ **True Facts on events in Hungary** ಹಂಗ್ಲೀಷಿನಲ್ಲಿ ಪರಿಚಯಾತ್ಮಕ ಪುಸ್ತಕ) ಪ್ರಕಾಶಕರು ಹಿಂದು ಸ್ತಾನದಲ್ಲಿರುವ ಟಾರ್ ಸಂಸ್ಥೆಯ ಪ್ರತಿನಿಧಿಗಳು, ನ್ಯೂದಿಲ್ಲಿ. ಡಿ. ಆ ೬೪ ಪುಟಗಳು. ಬೆಲೆ ೦-೧-೦.

೧೦೬ **ಕಂಬನಿಯ ಜುಂಬನ** (ಕಥಾಸಂಕಲನ) ಲೇಖಕರು ಶ್ರೀಮಾನ್ ಹರಿಯಪ್ಪ ಹರ್ಕೇರ ಬಿ. ಎ. 'ಸಾಹಿತ್ಯವಿಶಾರದ' ಮುಂಬಯಿ. ಪ್ರಕಾಶಕರು ಯಂಗ್‌ಮೆನ್ಸ್ ಎಜ್ಯುಕೇಶನಲ್ ಸೊಸೈಟಿ ೧೬೯, ಬಝಾರ್‌ಗೇಟ್ ರಸ್ತೆ, ಮುಂಬಯಿ. ಕ್ರೌ. ಅ. ೯೨ ಪುಟಗಳು. ಬೆಲೆ ೧-೦-೦.

೧೦೭ **ಮಕ್ಕಳ ಶಿಕ್ಷಣ** (ಪರಿಚಯಾತ್ಮಕ ಕಿರುಹೊತ್ತಿಗೆ) ಲೇಖಕರು ಡಾ. ಡಿ. ಎಸ್. ಕರ್ಕಿ ಎಂ. ಎ., ಪಿ ಎಚ್. ಡಿ. ಅವರು ಪ್ರಕಾಶಕರು ಕರ್ನಾಟಕವಿಶ್ವವಿದ್ಯಾಲಯ, ಧಾರವಾಡ. ಪೂ. ಕ್ರಾ. ಅ. ೬೪ ಪುಟಗಳು. ಬೆಲೆ ೧-೪-೦.

೧೦೮ **ಅಧ್ಯಾತ್ಮಸಂಗ್ರಹ** (ಸೂಕ್ತಿ ಸಂಕಲನ) ಲೇಖಕರು ಶ್ರೀಮಾನ್ ವೆಂಕಪ್ಪ ವಾಸಪ್ಪ ಸಕ್ಕರಿ, ಬಾಗಲಕೋಟೆ. ಪ್ರಕಾಶಕರು ಬ್ರಹ್ಮಶ್ರೀ ಮುಕುಂದನಾಥಸ್ವಾಮಿಗಳವರು, ಬ್ರಹ್ಮನಿಷ್ಠಾಶ್ರಮ, ಬೆಂಗಳೂರು. ಡಿ. ಗ್ಲೈದ ೧೦೦ ಪುಟಗಳು.

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುದ್ರಣ!!!

ಶಿಕ್ಷಣ - ಶಿಕ್ಷಕದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಂತಹ, ಅನೇಕ ವಿದ್ವನ್ಮಣಿಗಳ ಸದಭಿಪ್ರಾಯವನ್ನು ಪಡೆದಂತಹ ಶೈಕ್ಷಣಿಕ ಉದ್ಗ್ರಂಥ.

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ವಾನಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳಿವೆ! ೪೭೫ ಪುಟಗಳು.

ಸಾದಾಪ್ರತಿಗೆ ೬-೦-೦. ಸುಂದರ ಪ್ರತಿಗೆ ೪-೦-೦.
ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ:

ನಿಂಬಾಳ ಕಲ್ಯಾಣಪ್ಪ, ಪೋ. ತಿಕೋಟಿ, ಜಿ. ವಿಜಾಪುರ
೨. ಆಶಾ ಸಾಹಿತ್ಯಮಂದಿರ, ವಿಜಾಪುರ

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು

ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?

ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ

'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದಿನ ಮಾತು (ಶಿಶುಭಾವದ ಗೀತಗಳು)	೦—೧೨—೦
ಒಡನಾಡಿ (ನಲ್ವಾಡುಗಳು)	೧—೮—೦
ವಿರಹಿಣಿ (ತತ್ತ್ವರೂಪಕ ಗೀತಗಳು)	೧—೪—೦
ಕಾರಹುಣ್ಣಿಮೆ (ವಿವಿಧಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.

ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Betgeri at the Jayanti Office, Dharwar

ಜಯಂತಿ

ಸಂಪುಟ
೧೯

ಕಾಮನ ಹುಣ್ಣಿವೆ

ಸಂಚಿಕೆ
೧೦

೧

ಪಡುಗಡಿದುದು ಬಾನ ಪಡುವಣದಿ ಫಾಲ್ಗುಣದ
ಬಿದಿಗೆಯ ಚಂದ್ರನ ಕೋರೆ—
ನೋಡಿದರು ಹಿರಿ-ಕಿರಿಯರೆಲ್ಲ ಹಿಗ್ಗಿದರು
ಗೊಂದಣ ವಿಸಾರಿತು ಮೇರೆ

೨

ಅದೊ ಕೊರಡು-ಕುರುಳುಗಳ ರಾತಿಕಾಣುತಿದೆ
ಕಾಮನಗಸೆಬಯಲಲ್ಲಿ—
ರತಿದೇವಿಯೊಡನೆ ಕಾಮಣ್ಣ ಕುಳಿತಿಹನು
ಬಿಡಗಿನ ಮಂಟಪದಲ್ಲಿ.

೩

ಬಂತಿಂದು ಹೋಳಿಹುಣ್ಣಿವೆಯು ಕೇಳಿ ಕಾ-
ಮಣ್ಣನದಾಯಿತು ದಹನ—
ಳಲವಿಂದ ತಂದ ಕಟ್ಟಿಗೆಯ್ಕುರುಳುಗಳ
ಉರಿಗೆ ಉರಿದ ಕಾಮಣ್ಣ

೪

ಉರಿದಳಿದ ಕಾಮನವ ಕಾಮನವ ಅರಿಗಳಿಗೆಯೊಳೇ
ಮೂಡಿನಿಂತ ಮನ-ಮನದಿ—
ನೆರೆ-ನೆರೆದು ಜನವು ಕಾಮನಗುಡಿ ನೆರೆಸಿತು,
ಒಳುಳಿ ನನೆಸಿತು ಬೀದಿ!

JAYANTI

ಈ ಸಂಚಿಕೆಯಲ್ಲಿ :

ಇಂದಿನ ಚುನಾವಣೆಯಲ್ಲಿ ಕಂಡುದೇನು ? (ಸಂಪಾದಕೀಯ)
ಸಂಪಾದಕರು ೩೬೧

ಪುಸ್ತಕ ವಿಮರ್ಶೆ (ಹೋಮಿಯೊಪಥಿ)
ಶ್ರೀ. ಬಿ. ಪಿ. ಎಸ್. ರಾವ್ ೩೬೩

ಕಾಶಿಯ ಭಾರತಕಲಾ ಭವನ
ಭಾರತ ಸರಕಾರದ ವಾರ್ತಾಶಾಖೆಯಿಂದ ೩೬೪

ಆಕಾಶವಾಣಿಯ ಸಂಗೀತ ವಿಷಯಕ ಧೋರಣೆ (ಒಂದು ನೋಟ)
ಶ್ರೀ. ಬಿ. ಎನ್. ಲೋಣಕಡಿ, ಧಾರವಾಡ ೩೬೫

ಆತ್ಮಪರೀಕ್ಷೆ (ಸಣ್ಣಕಥೆ)
ಕುಮಾರಿ ಚಂದ್ರಿಕಾ ಕೊಪ್ಪರ, ರಾ. ಭಾ. ಪ್ರವೀಣೆ, ಧಾರವಾಡ ೩೬೮

ಸಿರಿಯ ಕೃಪೆ (ಕವನ)
ಶ್ರೀ. ಗುರುಲಿಂಗ ಕಾಪಸೆ, ಜಮಖಂಡಿ ೩೭೨

ಹಿಂದೀ ಕಥಾಸಾಹಿತ್ಯದಲ್ಲಿ ಹೊಸ ಹಾದಿಗಳು (ಪರಿಚಯ)
ಶ್ರೀ. ಗುರುನಾಥ ಜೋಶಿ, ಧಾರವಾಡ ೩೭೩

ಅಳಬೇಡ (ಕವನ)
ಶ್ರೀ. ಜಿ. ವ್ಹಿ. ಕುಲಕರ್ಣಿ ಬಿ. ಎ. (ಆನರ್ಸ್), ಧಾರವಾಡ ೩೭೬

ಬಗೆಹರಿಯದ ಬಾಯಿಲೆಕ್ಕ (ಸಣ್ಣಕಥೆ)
ಶ್ರೀ. ವೆಂ. ಮು. ಜೋಶಿ, ಧಾರವಾಡ ೩೭೭

ಬನ್‌ಸನ್ (ವಿಜ್ಞಾನಿಯ ಜೀವನ)
ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ. ಎಸ್‌ಸಿ. ಹೈದರಾಬಾದ್ ೩೮೧

ಅಕ್ಕುಂಡಿ (ಸಾಂಸ್ಕೃತಿಕ ಕ್ಷೇತ್ರದರ್ಶನ)
ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) ಬಿ. [illegible] (ಆನರ್ಸ್), ಧಾರವಾಡ ೩೮೪

ಸೋಲ್ಮಿಂಚು (ಕವನ)
ಪಂಡಿತ ಪಂಥೋನಾಥಾಚಾರ್ಯ ಗಲಗಲಿ, ಗದಗು ೩೮೮

ಹಿಂದೂ ಸಂಸ್ಕೃತಿ....ಆಚಾರಗಳು (೩ನೆಯ ಲೇಖಾಂಕ)
ಶ್ರೀ. ಲಕ್ಷ್ಮಣ ಜೋಶಿ ಬಿ. ಎಸ್‌ಸಿ. ಬಿ. ಟಿ. ಕೂಡ್ಲಿಗಿ ೩೯೦

ಶಿವರಾತ್ರಿ (ಕಾಲ್ಪನಿಕ ಏಕಾಂಕ)
ಶ್ರೀ. ಜಿ. ಆರ್. ಪಾಂಡೇಶ್ವರ, ಮದ್ರಾಸ್ ೩೯೪

ಸಾಹಿತ್ಯವಿಮರ್ಶೆ ಶಿಕ್ಷಣರಂಗ
ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೩೯೫

ಜಯಂತಿ

ಸಂಪುಟ ೧೯ ಸಂಚಿಕೆ ೧೦

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ವಿಜ್ಞಾನವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

::

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

●

ಇಂದಿನ ಚುನಾವಣೆಯಲ್ಲಿ ಕಂಡುದೇನು?

ಭಾರತದಲ್ಲಿ ಇಂದು ಚುನಾವಣೆಯ ನುಹಾಸತ್ರ ನಡೆದು ಸಮಾಪ್ತಿಯಾಗುವುದರಲ್ಲಿದೆ. ಕರ್ನಾಟಕದಲ್ಲಿ ಚುನಾವಣೆಯ ಭಾಗವೆಲ್ಲ ಮುಗಿದಿದ್ದು ಅದರ ಪರಿಣಾಮವನ್ನು ತಿಳಿಸುವ ಕೆಲಸದ ಕೆಲವು ಭಾಗ ಮಾತ್ರ ಉಳಿದಿದೆ.

ಚುನಾವಣೆಗೆ ನೊದಲು ಕರ್ನಾಟಕದ ವಿವಿಧಭಾಗಗಳಲ್ಲಿ ತಿರುಗಾಡುವ ಸಂದರ್ಭ ಬಂದವರಿಗೆ, ಎಲ್ಲ ಭಾಗಗಳಲ್ಲಿಯೂ ಕಾಂಗ್ರೆಸಿಗರನ್ನೂ ಅವರ ಆಡಳಿತದ ಪದ್ಧತಿಯನ್ನೂ ವೈಯುವವರ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತಿತ್ತು. ಅಂತಹದರಲ್ಲಿಯೆ ಕಮ್ಯುನಿಸ್ಟ್, ಪ್ರ. ಸ. ವಾ., ಭಾರತೀಯ ಜನಸಂಘ ಮೊದಲಾದ ರಾಜಕೀಯ ಪಕ್ಷಗಳವರು ಕಾಂಗ್ರೆಸ್ಸಿಗರ ಮೇಲೆ ನಡೆಸಿದ್ದ ಅಭಿಯೋಗಗಳು ಬೇರೆ. ಇಷ್ಟೆಲ್ಲವನ್ನೂ ನೋಡಿದವರಿಗೆ ಕರ್ನಾಟಕದಲ್ಲಿ ಕಾಂಗ್ರೆಸಿನ ಹುರಿಯಾಳುಗಳು, ಈ ಸಲ ಜಯಶಾಲಿಗಳಾಗಬಹುದೆ?— ಎಂಬ ಸಂದೇಹದ ಪ್ರಶ್ನೆ ಯಾರ ಮನಪ ಮುಂದೆಯೂ ಮೂಡಿ ನಿಂತುಕೊಳ್ಳಬಹುದಾಗಿತ್ತು.

ಇನ್ನು ಕಾಂಗ್ರೆಸಿನ ಜನರಲ್ಲಾದರೂ ಪರಿಯಾದ ಹೊಂದಿಕೆಯಿದ್ದಿತೆನ್ನಬೇಕೆ? ಹುರಿಯಾಳುಗಳಿಗೆ ಟಿಕೀಟು ಕೊಡುವ—ಕೊಡಿಸುವ— ವಿಷಮಸಂದರ್ಭದ ಮೂಲಕ, ಉತ್ತರ ಕರ್ನಾಟಕದಲ್ಲಿನ್ನಿ, ದಕ್ಷಿಣ ಕರ್ನಾಟಕದಲ್ಲಿನ್ನಿ— ಅಸಂತುಷ್ಟಿಯ ಹೊಗೆಯೆದ್ದು, ಮುಂದಾಳುಗಳಲ್ಲಿ ಪಕ್ಷ-ಪಂಗಡಗಳಾದುವು. ಕೆಲವು ಜನವಂತೂ ಕಾಂಗ್ರೆಸಿನಿಂದ ಹೊರಬಿದ್ದವು. ಬಂಡುಗಾರರಾಗಿ ನಿಂತರು. ಟಿಕೀಟು ಕೊಟ್ಟು ಮುಂದಾಳುಗಳಲ್ಲಿ ಬಹುಜನರು, ಜನತೆಯ ಆಕೃಪ್ತಿಗೆ ಪಾತ್ರರಾಗಿದ್ದವರೆಂಬುದು ಇನ್ನೂ ಒಂದು ವಿಶೇಷ.

ಒಂದು ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಎದುರಿಸಿ, ಚುನಾವಣೆಯಲ್ಲಿ ಗೆಲ್ಲುವೆನೆಂಬ ಧೈರ್ಯ ಯಾವ ರಾಜಕೀಯ ಸಂಸ್ಥೆಗೂ ಇರಲಿಲ್ಲ; ವ್ಯಕ್ತಿಗಳಿಗೂ ಇರಲಿಲ್ಲ ಅದರೆ ಈ ಸಲ ಕಾಂಗ್ರೆಸಿಗರನ್ನು ಎದುರಿಸಿ ನಿಂತ ರಾಜಕೀಯ ಸಂಸ್ಥೆಗಳೆಷ್ಟು, ಸ್ವತಂತ್ರ ವ್ಯಕ್ತಿಗಳೆಷ್ಟು? ಅವರಲ್ಲಿ ಕಾಂಗ್ರೆಸ್ಸನ್ನು ಎದುರಿಸುವ ಧೈರ್ಯ ಉಂಟಾಗಲು, ಕಾಂಗ್ರೆಸಿನ ವಿಷಯದಲ್ಲಿ ನಮ್ಮ ಜನಸಾಮಾನ್ಯರು ಆಡುವ ಅಸಂತುಷ್ಟಿ-ಅತೃಪ್ತಿಗಳ ಹರಟೆಗಳೇ ಕಾರಣವಾಗಿರಬಹುದು. ಎಂತಲೇ ಪ್ರತಿಯೊಂದು ಮತಕ್ಷೇತ್ರದಲ್ಲಿಯೂ ಹುರುಡಿನ ವೇಲಾಟ ನಡೆಯಿತು.

ಚುನಾವಣೆಗೆ ನಿಂತ ಹುರಿಯಾಳು ಹಣ ವೆಚ್ಚ ಮಾಡದೆ ಅರಿಬರುವ ಸತ್ಯಯುಗ ನಮ್ಮ ನಾಡಿನಲ್ಲಿ ಮುದು ಬರುವದೋ ಏನೋ! ಸ್ವತಂತ್ರ ಹುರಿಯಾಳು ಹಣದ ಹೊಳೆಯನ್ನು ಹರಿಸುವುದು ಅಸ್ವಾಭಾವಿಕವಲ್ಲ; ಆನರೆ ಹೊಣೆಗಾರ ರಾಜಕೀಯ ಸಂಸ್ಥೆಗಳಿಂದ ನಿಂತ ಹುರಿಯಾಳುಗಳೂ ಈ ಸಲ ವೈಯಕ್ತಿಕವಾಗಿ ಹಣದ ಹೊಳೆಯನ್ನು ಹರಿಸಬೇಕಾದ್ದು ಒಂದು ವಿಶೇಷ— ಹೀಗೆ ಹಣದ ವೆಚ್ಚದ ಪ್ರಮಾಣದ ಮೇಲೆ ಗೆಲವು ನಿಲ್ಲಬೇಕಾಗುವುದೆಂದರೆ, ಇಂತಹ ಚುನಾವಣೆಗಳಲ್ಲಿ ಸಾಮಾನ್ಯ ಜನತೆಯ ಅಭಿಪ್ರಾಯವೇನೆಂಬುದು ಗೊತ್ತಾಗುವುದೀತೆ?

ಹಳ್ಳಿಯ ಅಶಿಕ್ಷಿತ ಮತದಾರರು ಯಾವಾಗಲೂ ಹುರಿಯಾಳಿನ ಪರಿಚಯ-ಪ್ರಭಾವಗಳ ಮೇಲೆಯೇ ಅವಲಂಬಿಸಿ ನಿಂತವರು. ವ್ಯಕ್ತಿಯ ಜಾತಿ-ನೀತಿಗಳೂ ಅವರ ಮನಸ್ಸನ್ನು ಎಳೆದುಕೊಳ್ಳುವುದು ಸಹಜ. ಆನರೆ ನಾಗರಿಕರೆನಿಸಿಕೊಳ್ಳುವ ಸುಶಿಕ್ಷಿತರೂ ಈ ಸಲದ ಮತದಾನ ಸಂದರ್ಭದಲ್ಲಿ, ಸಂಸ್ಥಾನಿಷ್ಠೆಗಿಂತ ವ್ಯಕ್ತಿನಿಷ್ಠೆಯನ್ನು ತೋರಿಸಿದುದು ಉಂಟು. ಒಬ್ಬನೇ ಮತದಾರ ವ್ಯಕ್ತಿನಿಷ್ಠೆಯ ಮೂಲಕ, ಪರಸ್ಪರ ವಿರೋಧವಾರ್ಗಿಗಳಾದ ಎರಡು

ಸಂಸ್ಥೆಗಳ ಹುರಿಯಾಳುಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ಮತ ಸನ್ನು ಕೊಟ್ಟು ಉದಾಹರಣೆಗಳು ಹಲವಾರು. ಕಾಂಗ್ರೆಸ್ಸಿಗರಿಸಿಕೊಳ್ಳು-ವವರು ವ್ಯಕ್ತಿನಿಷ್ಠರಾಗಿ ಬೇರೆಯ ವ್ಯಕ್ತಿಗೆ ಮತ ಕೊಟ್ಟುದುಂಟು ಕಾಂಗ್ರೆಸ್ಸಿಗರಲ್ಲದವರೂ ಅದೇ ಕಾರಣಕ್ಕಾಗಿ ಕಾಂಗ್ರೆಸಿನ ಹುರಿಯಾಳಿಗೆ ಮತ ಕೊಟ್ಟುದುಂಟು ಆದುದರಿಂದ, ಈ ಸಲದ ಚುನಾವಣೆಯಿಂದ ನಾವು ಜನಸಾಮಾನ್ಯರ ಸಂಸ್ಥಾನಿಷ್ಠೆಯ ಪ್ರಮಾಣವನ್ನು ಗುರುತಿಸುವುದು ಅನಾಧ್ಯಕಾರ್ಯವಾಗಿದೆ.

ಕರ್ನಾಟಕದ ಗಡಿಪ್ರದೇಶಗಳಲ್ಲಿ ಕಾಂಗ್ರೆಸನ್ನು ವಿರೋಧಿಸುವ ವರ್ತೊಂದು ದುಸ್ಯಕ್ಕೆ ನಿರ್ಮಾಣವಾಗಿದೆ. ಬೆಳಗಾಂವಿ, ಕಾರವಾರ, ಬಳ್ಳಾರಿ ಜಿಲ್ಲೆಗಳ ಕೆಲವು ಮತದಾರ ಕ್ಷೇತ್ರದಲ್ಲಿ ಕನ್ನಡದ ವಿರೋಧಿಗಳು ತಮ್ಮ ಹುರಿಯಾಳುಗಳನ್ನು ಚುನಾವಣೆಯ ಕಣಕ್ಕೆ ಇಳಿಸಿದ್ದಾರೆ. ಈ ಕನ್ನಡ ವಿರೋಧಿ ಮುಂದಾಳುಗಳು ತಮ್ಮ ತಮ್ಮ ಮತಕ್ಷೇತ್ರಗಳಲ್ಲಿ ಪುಂಡಾಟ-ನೊಂಡಾಟಗಳನ್ನು ನಡೆಸಿದ್ದಾರೆ ಈ ಕ್ಷೇತ್ರಗಳಲ್ಲಿ ಕನ್ನಡಿಗರೆಲ್ಲ ಪಕ್ಷ-ಪಕ್ಷೇತರ ಭಾವನೆಯನ್ನು ಬಿಟ್ಟು ಒಬ್ಬ ಹುರಿಯಾಳನ್ನೇ ನಿಲ್ಲಿಸಿದ್ದರೆ, ಅಲ್ಲಿ ಕನ್ನಡಿಗರಿಗೆ ಖಂಡಿತ ಜಯದ್ದೊರೆಯಬಹುದಾಗಿತ್ತು. ಆದರೆ ಆ ಆ ಭಾಗದ ಕನ್ನಡಿಗರು ಬೇರೆ ಬೇರೆ ಪಕ್ಷ ಪಂಗಡಗಳಲ್ಲಿ ಜಂಜಿಹೋಗಿದ್ದರೆ, ಕನ್ನಡ ವಿರೋಧಿಗಳಿಗೆ ಗೆಲವು ಕಟ್ಟಿಟ್ಟ ಬಾತು.

ಇನ್ನುವರೆಗಿನ ಪರಿಣಾಮವನ್ನು ನೋಡಿದರೆ— ನಮ್ಮ ನಾಡಿನಲ್ಲಿ ಒಬ್ಬರ ಹಿಂದೊಬ್ಬರು ಕಾಂಗ್ರೆಸಿನ ಹುರಿಯಾಳುಗಳೇ ಚುನಾವಣೆಯಲ್ಲಿ ಆರಿಸಿ ಬರುವುದನ್ನು ನೋಡಿದರೆ— ಯಾರಿಗೂ ಆಶ್ಚರ್ಯವೆನಿಸುವಂತಿದೆ. ಕಾಂಗ್ರೆಸನ್ನು ಏಕಕಂಠದಿಂದ ಬೈಯುವವರೇ ಮತ್ತೆ ಕಾಂಗ್ರೆಸನ್ನು ಎತ್ತಿಹಿಡಿಯುವುದು ಆಶ್ಚರ್ಯದ ಸಂಗತಿಯಲ್ಲವೆ? ಚುನಾವಣೆಗೆ ಮೊದಲಿದ್ದ ಪರಿಸ್ಥಿತಿಯಿಂದ ಪ್ರಭಾವಿತರಾಗಿ ಕಾಂಗ್ರೆಸನ್ನು ಎದುರಿಸಿ ನಿಂತ ಹಲವು ಜನ ಹುರಿಯಾಳುಗಳ ಪರಿಸ್ಥಿತಿಯು 'ಇದು ಹಣವೂ ಹೋಯಿತು; ಗುಣವೂ ಹೋಯಿತು' ಎಂದು ಕಳವಳಪಡುವಂತಾಗಿದೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮೀಟಿಯ ಈಗಿನ ಅಧ್ಯಕ್ಷರಾದ ಶ್ರೀ. ಸಾವುಕಾರ ಚೆನ್ನಯ್ಯನವರ ಪರಾಭವ, ಕರ್ನಾಟಕ ರಾಜ್ಯದ ಆಡಳಿತದ ಮೇಲೆ ಯಾವ ಬಗೆಯ ಪರಿಣಾಮವನ್ನು ಮಾಡುವದೋ ನೋಡಬೇಕಾಗಿದೆ. ನಿಪುಣರಾಜಕಾರಣಿಗಳವರು. ಇಂದು ಅವರ ಪಕ್ಷ ಮದುಮಗನನ್ನು ಕಳೆದುಕೊಂಡ ನಿಬ್ಬಣಿಗರಂತಾಗಿದೆ, ಶ್ರೀ. ಚೆನ್ನಯ್ಯನವರ ಪರಾಭವ ನಮ್ಮ ಹಲವು ಜನ ಕಾಂಗ್ರೆಸ್ ಧುರೀಣರಿಗೆ ಹಾಲು-ಸಕ್ಕರೆ ಕುಡಿಸಿರಬಹುದು. ಆದರೆ ಜೊತೆಗೆ ಏಟು ತಿಂದ ಈ ಹಾವು, ಯಾರ ಯಾರ ಹಾಲು-ಸಕ್ಕರೆಯಲ್ಲಿ ಎಂತೆಂತಹ ವಿಷವನ್ನು ಸುರಿಸುವುದೋ ನೋಡಬೇಕು.

ಶ್ರೀ. ಎ. ಜಿ. ರಾಮಚಂದ್ರರಾಯರು ಕಾಂಗ್ರೆಸ್ ಹುರಿಯಾಳಾಗಿ ನಿಂತು ಸೋತುದು ವಿಷಾದ ಪಡಬೇಕಾದ ಸಂಗತಿಯೇನಲ್ಲ. ಮುಂಧೋರಣೆಯಿಲ್ಲದ ಅಂತಹ ಪರಾವಲಂಬಿ ವ್ಯಕ್ತಿಗಳು, ನಮ್ಮ ಹೊಸ ರಾಜ್ಯದ ವಿಧಾನಸಭೆಯಲ್ಲಿ ಬಂದು ಮಾಡುವುದಾದರೂ ಏನು? ಮುಂದಾಳು ಎನಿಸಿಕೊಳ್ಳುವವನು ಸಂದರ್ಭ ಬಂದಾಗ ಸ್ವಂತದ ಕಾಲುಗಳಿಂದ ನಡೆಯುವ ಸಾಮರ್ಥ್ಯವುಳ್ಳವನಾಗಿ ಬೇಕಲ್ಲವೆ?

ಅಂತೂ ಈ ಸಲದ ಚುನಾವಣೆಯು ನಮ್ಮ ಜನತೆಯು ಮುನ್ನಡೆಸಿನ ಹಲವಾರು ಹುಳುಕುಗಳನ್ನು ಹೊರಗೆ ಹಾಕಿತು; ಹಾಕುತ್ತಲಿದೆ. ಪ್ರಜಾಪ್ರಭುತ್ವದ ಅಭ್ಯಾಸವನ್ನು ನಡೆಸಿರುವ ನಮ್ಮ ಜನಕ್ಕೆ ಇದೆಲ್ಲವೂ ಒಂದು ತಿಳಿವಳಿಕೆಯನ್ನು ಕೊಡುವ ಒಂದು ಪಾಠ.

ಜಯಂತಿಗೆ ಸಹಾಯಧನ

ಜಯಂತಿಯ ವಿಷಯಕವಾದ ಪ್ರೀತಿಯಿಂದ ಈ ಮಹನೀಯರು ಸಹಾಯಧನವನ್ನು ಕಳುಹಿಸಿದ್ದಾರೆ:

ಡಾ. ರಂ. ಶ್ರೀ. ಮುಗಳಿ, ಸಾಂಗಲಿ ೧೦-೦-೦
ಶ್ರೀ. ಎಚ್. ಜಿ. ಲೋಕೂರ ಬಿ. ಎ. ೫-೦-೦
ಶ್ರೀ. ಜೆ. ಎಂ. ಚೌದರಿ, ಜಮಖಂಡಿ ೧-೦-೦

ಈ ಹಿತಾಭಿಲಾಷಿಗಳಿಗೆಲ್ಲ ಆದರದ ವಂದನೆಗಳು

—ಸಂಪಾದಕ

ಪುಸ್ತಕವಿಮರ್ಶೆ

ಹೋಮಿಯೋಪತಿ

(ವಿಧಿನಿಯಮಗಳು)

ಲೇಖಕರು ಡಾ. ಎಚ್. ವಿ. ಮೂರ್ತಿ, ಮೂರ್ತಿ ಹೋಮಿಯೊ ಕ್ಲಿನಿಕ್, ಡಾವಣಗೆರೆ. ಕ್ರೌ. ೪ ಗಾ೦ ಪುಟಗಳು. ಬೆಲೆ ೫-೦-೦.

ಇಂದಿನ ವಿವಿಧವೈದ್ಯಕ ಪದ್ಧತಿಗಳಲ್ಲಿ ಹೋಮಿಯೋಪಥಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದುದಾಗಿದೆ. ಈ ಪದ್ಧತಿ ಶ೦ಖ ಪ್ರಯೋಜನಕಾರಿಯೆಂದು ಹೆಸರನ್ನು ಪಡೆದಿದ್ದರೂ, ಇಪ್ಪುವರೆಗಿನ ನಮ್ಮ ಸರಕಾರಿದ ಸಾಧೀನಜೀವನದ ಮೂಲಕ, ಭಾರತದಲ್ಲಿ ಇದಕ್ಕೆ ಸರಕಾರದ ಮನ್ನಣೆ ದೊರೆತಿರಲಿಲ್ಲ. ಈಗಿನ ನಮ್ಮ ಪ್ರಜಾ ಸರಕಾರ ಕೂಡ, ಮಿಕ್ಕೆಲ್ಲಪ ದ್ಧತಿಗಳಿಗಿಂತ ಅಲೋಪಥಿ ಪದ್ಧತಿಯನ್ನೆ ಹೆಚ್ಚಿಗೆ ಪುರಸ್ಕರಿಸುತ್ತಲಿವೆ. ಅಲೋಪಥಿ ಪದ್ಧತಿಯಲ್ಲಿಯ ಕೆಲವು ಶೀಘ್ರನಿರೋಧಕ-ಔಷಧಿಗಳು, ಚುಚ್ಚುಮದ್ದುಗಳು, ಶಸ್ತ್ರಚಿಕಿತ್ಸೆ. ಆಡಂಬರದ ಉಪಕರಣಗಳು ಇವೆಲ್ಲ ನಮ್ಮ ಜನರ ಮನಸ್ಸನ್ನು ಸೆಳೆದು ಬಿಟ್ಟುದರಿಂದ, ಮಿಕ್ಕ ವೈದ್ಯಕಪದ್ಧತಿಗಳ ಗುಣ-ಪ್ರಯೋಜನಗಳ ಕಡೆಗೆ ಅವರ ಲಕ್ಷ್ಯವೇ ಹರಿಯದಂತಹ ಪರಿಸ್ಥಿತಿ ನಮ್ಮ ನಾಡಿನಲ್ಲಿದೆ. ಕೇವಲ ಜೀವನೋದ್ಯಮವೃತ್ತಿಯೆಂದು ಡಾಕ್ಟರುಗಳಾದವರಿಗೆ, ಅಲೋಪಥಿ ಪದ್ಧತಿಯೇ ಹೆಚ್ಚು ಲಾಭಕಾರಿಯಾಗಿ ಪರಿಣಮಿಸುವುದರಿಂದ, ಮಿಕ್ಕ ಪದ್ಧತಿಗಳ ಹೆಚ್ಚಿನ ಪ್ರಯೋಜನವನ್ನು ಒಪ್ಪಲು—ಅಥವಾ ಅವುಗಳ ಪರಿಚಯ ಮಾಡಿಕೊಳ್ಳಲು—ನಮ್ಮ ಡಾಕ್ಟರರಲ್ಲಿ ಬಹಳ ಜನರು ಸಿದ್ಧರಿಲ್ಲ.

ಅವರೂ ಮಿಕ್ಕ ವ್ಯವಸಾಯಬಾಧ್ಯಗಳಿಂದ ವಿಮುಕ್ತವೃತ್ತಿಯವರೆಂದು ಕರೆಯಿಸಿಕೊಳ್ಳುವ ಕೆಲವು ಜನ—ಸೇರಕಡಿಮೆ ಜನ—ಹೋಮಿಯೋಪಥಿ ಪದ್ಧತಿಯನ್ನು ಸ್ವೀಕರಿಸಿವುದುಂಟು. ಅವರುಅಭಿಪ್ರಾಯ ಪಡುವದೇನೆಂದರೆ, ಅಲೋಪಥಿಗಿಂತ ಹೋಮಿಯೋಪಥಿ ಪದ್ಧತಿ—ಹೆಚ್ಚು ಪರಿಶುದ್ಧವಾದುದೆಂದು; ಗುಣಕಾರಿ—ನಿರಪಾಯಕಾರಿ—ಎಂದು. ಅಲ್ಲದೆ ಹೋಮಿಯೋಪಥಿಯಲ್ಲಿ ತಜ್ಞರಾದ ಡಾಕ್ಟರರು ರೋಗಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿ, ಒಂದೆರಡೇ ದಿನದ ಚಿಕಿತ್ಸೆಯಿಂದ ಎಂತೆಂತಹ ತೀಕ್ಷ್ಣರೋಗಗಳನ್ನೂ ಕಳೆಯುತ್ತಿರುವರೆಂಬುದು, ದಿನದಿನಕ್ಕೆ-ಜನರ ಪ್ರತೀತಿಗೆ ಬರುತ್ತಾಡಗಿದೆ. ಆದುದರಿಂದಲೇ ಇಂದು ನಮ್ಮ ನಾಡಿನಲ್ಲಿಯೂ ಇದು ಮೆಲ್ಲ ಮೆಲ್ಲಗೆ ಪ್ರಚಾರದಲ್ಲಿ ಬರಲುತೊಡಗಿದೆ.

ಹೋಮಿಯೋಪಥಿಯಲ್ಲಿ ಔಷಧಿಗಳ ಸಂಖ್ಯೆ ಕಡಿಮೆ. ಅಲ್ಲದೆ ಅವುಗಳ ಬೆಲೆಯೂ ಸುಲಭ ಸರಿಯಾಗಿ ನಿದಾನಮಾಡಿ ಔಷಧಿ ಕೊಟ್ಟರೆ. ಗುಣ ಖಂಡಿತ; ಅವರೆ ನಿದಾನ ಸರಿಯಾಗದೆ ತಪ್ಪು ಔಷಧಿಯನ್ನು ಕೊಟ್ಟರೆ ಅಪಾಯವೇನೂ ಇರುವುದಿಲ್ಲ. ಆದುದರಿಂದ ಎಷ್ಟೋ ಕುಟುಂಬಗಳಲ್ಲಿ ಈ ಔಷಧಿಗಳು ಗೃಹವೈದ್ಯಕದ ಸಾಧನಗಳಾಗಿ ಕುಳಿತಿವೆ. ಇಂತಹ ಕಾಲದಲ್ಲಿ—ಎಲ್ಲರಿಗೂ ತಿಳಿಯುವಂತಹ ಸರಲ ಸುಲಭ ಭಾಷೆಯಲ್ಲಿ-ಡಾ. ಮೂರ್ತಿಯವರು ಈ ಪದ್ಧತಿಯ ವಿಧಿನಿಯಮಗಳನ್ನು ಕುರಿತು ಉಪಯುಕ್ತವಾದ ಗ್ರಂಥವನ್ನು ಬರೆದು ಪ್ರಕಟಿಸಿ, ಒಂದು ಮಹತ್ತ್ವದ ಕೆಲಸವನ್ನು ಮಾಡಿದ್ದಾರೆ.

ಈ ಗ್ರಂಥದಲ್ಲಿ ೧೮ ವಿಭಾಗಗಳಿದ್ದು, ಮೊದಲನೆಯ ವಿಭಾಗದಲ್ಲಿ ಈ ಪದ್ಧತಿಯ ಮೂಲ ಸಂಶೋಧಕ-ಹನ್ನಿಮನ್ನರ ಜೀವನ ಚರಿತ್ರೆಯಿದೆ. ಮುಂದೆ ಈ ಪದ್ಧತಿಯ ಮೂಲತತ್ತ್ವಗಳನೂ ಔಷಧಿಗಳನ್ನೂ ಪರಿಚಯ ಮಾಡಿಕೊಟ್ಟು, ರೋಗಗಳ ಮೂಲ-ಜಾತಿಗಳನ್ನು ವಿವರಿಸಲಾಗಿದೆ ಬಳಿಕ ರೋಗಿಯನ್ನು ಪರೀಕ್ಷಿಸುವ ಕ್ರಮಗಳನ್ನು ಹೇಳಿ, ಅಮೇಲೆ ಔಷಧಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಬೇರೆ ಬೇರೆ ವಿಭಾಗಗಳಲ್ಲಿ ಕೊಡಲಾಗಿದೆ, ಹೋಮಿಯೊಪತಿಗೆ ಸಂಬಂಧಿಸಿದ ಗ್ರಂಥಗಳು ನಮ್ಮಲ್ಲಿ ಅಪೂರ್ವ, ಒಂದೆರಡು ಇದ್ದರೂ ಅವು ಔಷಧಿಗಳ ಕಟಲಾಗಿನಂತೆ ಇವೆ. ಹೋಮಿಯೊಪಥಿಯನ್ನು ಕುರಿತು ತಾತ್ತ್ವಿಕ ವಿವರಣೆಯ ಗ್ರಂಥವೆಂದರೆ, ಕನ್ನಡದಲ್ಲಿ ಇದೇ ಮೊಲನೆಯದೆಂದು ಹೇಳಬಹುದು. ಹೋಮಿಯೋಪಥಿ ಔಷಧಿಗಳನ್ನು ಬಳಸುತ್ತಿರುವ—ಬಳಸಬೇಕೆನ್ನುವ—ಕುಟುಂಬಿಗಳಿಗೆಲ್ಲ ಈ ಗ್ರಂಥವು ಹೆಚ್ಚು ಪ್ರಯೋಜನಕಾರಿಯಾಗಿದೆಯೆಂದು ನಮ್ಮ ಅಭಿಪ್ರಾಯ.

ಡಾ. ಮೂರ್ತಿಯವರು ಹೆಚ್ಚಿನ ಹೋಮಿಯೋಪಥಿ ಅಭ್ಯಾಸಕ್ಕಾಗಿ, ವಿದೇಶಕ್ಕೆ ಹೋಗಲಿರುವರಂತೆ, ಉತ್ಸಾಹಿಗಳೂ ಸಮರ್ಥ ಸೇವಾಪ್ರಿಯರೂ ಆದ ಅವರಿಂದ, ಅವರ ಹೆಚ್ಚಿನ ವಿದ್ಯಾಭ್ಯಾಸದ ಮಟ್ಟಿಗೆ ನಮ್ಮ ನಾಡಿಗೆ, ಹೆಚ್ಚಿನ ಪ್ರಯೋಜನವನ್ನು ಒದಗಿಸಿಕೊಡುವುದರಲ್ಲಿ ಸಂದೇಹವಿಲ್ಲ.

ಕಾಶಿಯ ಭಾರತ ಕಲಾಭವನ

(ಭಾರತ ಸರಕಾರದ ವಾರ್ತಾಶಾಖೆ, ಬೆಂಗಳೂರಿನ ಉಪಕಾರ್ಯಾಲಯ)

೧೯೨೦ರಲ್ಲಿ ಕಾಶೀನಗರದಲ್ಲಿ ಭಾರತ ಕಲಾಭವನವನ್ನು ವಿಶ್ವಕವಿ ರವೀಂದ್ರನಾಥ ಠಾಕೂರರ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಯಿತು. ಈ ಕಲಾಭವನದ ಸ್ಥಾಪನೆಯಿಂದ ಭಾರತೀಯ ಕಲೆ ಹಾಗೂ ಪ್ರಾಕ್ತನವಸ್ತು ಸಂಶೋಧನಾ ಅಧ್ಯಯನವನ್ನು ಒಂದೇ ಸ್ಥಳದಲ್ಲಿ ಕೈಕೊಳ್ಳಲು ಸಾಧ್ಯವಾಗಿದೆ. ೧೯೨೯ರಿಂದ ೧೯೫೦ರ ವರೆಗೂ ಈ ಕಲಾಭವನವು ಕಾಶಿಯಲ್ಲಿರುವ ಕಾಶೀನಾಗರೀ ಪ್ರಚಾರಿಣೀಸಭೆಯ ಅಧೀನದಲ್ಲಿ ಅಭಿವೃದ್ಧಿ ಹೊಂದಿತು. ೧೯೫೦ರಲ್ಲಿ ಇದನ್ನು ಕಾಶೀ ವಿಶ್ವವಿದ್ಯಾನಿಲಯದವರು ವಹಿಸಿಕೊಂಡರು.

ಈ ಹುಟ್ಟಿದಲ್ಲಿ, ೧,೫೦,೦೦೦ ಚದುರು ಅಡಿಗಳ ವಿಸ್ತೀರ್ಣದಲ್ಲಿ ಎರಡು ಅಂತಸ್ತಿನ ವಿಶಾಲಭವನವನ್ನು ನಿರ್ಮಿಸುವ ಯೋಜನೆಯೊಂದನ್ನು ಸಿದ್ಧಗೊಳಿಸಲಾಯಿತು. ವಿಶ್ವವಿದ್ಯಾನಿಲಯ ಕ್ಷೇತ್ರದಲ್ಲಿ ೭೬೦೦ ಚದುರು ಅಡಿಗಳ ವಿಸ್ತೀರ್ಣದಲ್ಲಿ ಕಲಾಭವನದ ಒಂದು ಭಾಗವನ್ನು ಈಗಾಗಲೇ ನಿರ್ಮಿಸಲಾಗಿದೆ. ಈ ನೂತನ ಭವನವು ಭಾರತೀಯ ಪ್ರಾಚೀನ ವಾಸ್ತುಶಿಲ್ಪದ ಒಂದು ಆಕರ್ಷಕ ನಮೂನೆಯಾಗಿದೆ.

ಈ ಕಲಾಭವನವು ಭಾರತದಲ್ಲಿರುವ ಪ್ರಮುಖ ವಸ್ತುಸಂಗ್ರಹಾಲಯಗಳಲ್ಲಿ ಒಂದಾಗಿದೆ. ಈ ಸಂಗ್ರಹಾಲಯದಲ್ಲಿ ಅಪೂರ್ವಕಲಾವಸ್ತುಗಳನ್ನು ಸಂಗ್ರಹಿಸಿಡಲಾಗಿದೆ.

ಈ ಸಂಗ್ರಹಾಲಯದಲ್ಲಿ ಚಿತ್ರಕಲಾವಿಭಾಗವೇ ಅತ್ಯುತ್ತಮವಾದದ್ದು. ಭಾರತೀಯ ಇತಿಹಾಸದ ಅಯಾಯ ಕಾಲದ ಸರ್ವೋತ್ತಮ ಚಿತ್ರಗಳನ್ನು ಈ ವಿಭಾಗದಲ್ಲಿ ಪ್ರದರ್ಶಿಸಲಾಗಿದೆ. ಕಲಾಭವನವು ವಾಸ್ತವಿಕವಾಗಿಯೂ ರಾಷ್ಟ್ರೀಯ ಚಿತ್ರಶಾಲೆ (ಆರ್ಟ್ ಗ್ಯಾಲರಿ) ಯಾಗಿ ಪರಿಣಮಿಸುವುದು. ಇಲ್ಲಿ ಭಾರತೀಯ ಚಿತ್ರಕಲೆಯ ಸಮಸ್ತವನ್ನೂ ಅಧ್ಯಯನ ಮಾಡಲು ಸಾಧ್ಯವಾಗುವುದು.

ಶಿಲ್ಪಕಲಾ ವಿಭಾಗದ ನಿರ್ಮಾಣವೂ ಇದೇ ರೀತಿಯಲ್ಲಿ ನಡೆದಿದೆ. ಅನೇಕ ಉಚ್ಚತಮ ಪ್ರತಿಮೆಗಳನ್ನು ಸಂಗ್ರಹಿಸಿಡಲಾಗಿದೆ. ಹೀಗೆ ಸಂಗ್ರಹಿಸಲಾದ ಪ್ರತಿಮೆಗಳಲ್ಲಿ ಪ್ರಸಾಧಿಕಾ, ಕಾರ್ತಿಕೇಯ ಹಾಗೂ ನಟರಾಜ (ತಿರುಚಿನಾಪಳ್ಳಿಯಲ್ಲಿ ದೊರೆತ ೧೫ನೆಯ ಶತಮಾನದ ಕಂಚಿನ ಪ್ರತಿಮೆ) ಇವು ಅತ್ಯಂತ ಮುಖ್ಯವಾದುವು. ಗಟ್ಟಿಮಣ್ಣಿನ ಪ್ರತಿಮೆಗಳ ವಿಭಾಗದಲ್ಲಿ ರಾಜಘಾಟ್ (ಕಾಶಿ) ಮತ್ತು ಕೋಸಾಂಬಿ (ಅಲಹಾಬಾದ್) ಗಳ ಉತ್ಕೃಷ್ಟ ಪ್ರತಿಕೃತಿಗಳಿವೆ.

ನಾಣ್ಯಗಳ ವಿಭಾಗವು ಹೊಸದು. ಇಲ್ಲಿ ಕುಶಾನರು ಮತ್ತು ಗುಪ್ತರ ಕಾಲದ ಚಿನ್ನದ ನಾಣ್ಯಗಳು, ಮೊಗಲರ ಕಾಲದ ಚಿನ್ನದ ಹಾಗೂ ಬೆಳ್ಳಿಯ ನಾಣ್ಯಗಳು ಮತ್ತು ದೆಹಲಿಯ ಸುಲ್ತಾನರ ಕಾಲದ ನಾಣ್ಯಗಳು ಇವೆಲ್ಲವನ್ನೂ ಅತ್ಯುತ್ತಮ ರೀತಿಯಲ್ಲಿ ಸಂಗ್ರಹಿಸಿಡಲಾಗಿದೆ.

ಗೃಹ ಉದ್ಯಮಗಳು ಮತ್ತು ಕಸಬುಗಳ ವಿಭಾಗವು ಕಲಾಭವನದ ಒಂದು ಅಂಗವಾಗಿದೆ. ಈ ವಿಭಾಗದಲ್ಲಿ ಎನಾಮಲ್ ವಸ್ತುಗಳು, ಆಭರಣಗಳು, ಅತ್ಯಮೂಲ್ಯ ವಸ್ತುಗಳು, ರತ್ನಖಚಿತ ವಸ್ತುಗಳು ಇತ್ಯಾದಿ ಅತ್ಯುತ್ತಮ ಸಂಗ್ರಹವಿದೆ. ಈ ವಿಭಾಗದಲ್ಲಿ ಶಾಲುಗಳು, ಕಿಂಕಾಪು, 'ಕ್ಯಾಲಿಕೋ' ವಸ್ತ್ರಗಳು, ಕಸೂತಿ ಕೆಲಸದ ವಸ್ತ್ರಗಳು ಮುಂತಾದ ಭಾರತೀಯ ವಸ್ತ್ರ ತಯಾರಿಕೆ ಕಲೆಯ ನಮೂನೆಗಳನ್ನು ಇಡಲಾಗಿದೆ.

ಇತಿಹಾಸ ಪೂರ್ವದ (ಪ್ರಿಹಿಸ್ಟಾರಿಕ್) ಮತ್ತು ಇತಿಹಾಸ ಪ್ರಾರಂಭದ (ಪ್ರೋಟೋ ಹಿಸ್ಟರಿ) ವಿಭಾಗದಲ್ಲಿ ಮೊಹಂಜೋದಾರೋವಿನ ಕಲಾವಸ್ತುಗಳನ್ನು ತಾಮ್ರದ ಪಲಕರಣಿಗಳನ್ನು ಇಡಲಾಗಿದೆ.

ಪ್ರಾಚೀನ ವಸ್ತುವಿಭಾಗದಲ್ಲಿ ರಾಜಘಾಟಿಗೆ (ಕಾಶಿ) ಸೇರಿದ ತಾಮ್ರದ ಫಲಕಗಳನ್ನೂ ಶಿಲಾಶಾಸನಗಳನ್ನೂ ಮತ್ತು ಮಣ್ಣಿನ ಮೊಹರುಗಳನ್ನೂ ಸನದ್ ಮತ್ತು ಮೊಗಲ್ ಚಕ್ರವರ್ತಿಗಳಿಗೆ ಸೇರಿದ ಅವಶೇಷ ವಸ್ತುಗಳನ್ನೂ ಪ್ರದರ್ಶಿಸಲಾಗಿದೆ.

ಸಾಹಿತ್ಯ ವಿಭಾಗ

ಕಲಾಭವನದ ಸಾಹಿತ್ಯವಿಭಾಗವು ಅಸಾಧಾರಣವಾದದ್ದು. ಇಲ್ಲಿ ಹಿಂದೀ ಹಾಗೂ ಉರ್ದೂ ಸಾಹಿತಿಗಳ ಹಸ್ತಾಕ್ಷರಗಳ, ಭಾವಚಿತ್ರಗಳು ಮತ್ತಿತರ ವಸ್ತುಗಳು, ಹಿಂದೀ ಪುಸ್ತಕಗಳ ಪ್ರಥಮ ಸಂಚಿಕೆಗಳೂ ಸಂಗ್ರಹಿತವಾಗಿವೆ. ಗಾಂಧೀ ವಿಭಾಗದಲ್ಲಿ ಮಹಾತ್ಮಾ ಗಾಂಧಿಯವರ ಕೆಲವು ಹಸ್ತಾಕ್ಷರಗಳೂ ಮತ್ತು ಸ್ಮರಣಾರ್ಥ ವಸ್ತುಗಳೂ ಇರುವುವು.

ಕಲಾಭವನದ ಪುಸ್ತಕಾಲಯದಲ್ಲಿ ಭಾರತೀಯ ಕಲೆ ಹಾಗೂ ಅದಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ರಚಿತವಾದ ಪುಸ್ತಕಗಳ ಉತ್ತಮ ಸಂಗ್ರಹವಿರುವುದು. ಕಲಾಭವನವು ಹಿಂದೀ ಭಾಷೆಯ 'ಕಲಾನಿಧಿ' ಎಂಬ ಸಚಿತ್ರ ಕಲಾಪತ್ರಿಕೆಯನ್ನು ಪ್ರಕಟಿಸುತ್ತಿದೆ.

ಆಕಾಶವಾಣಿಯಲ್ಲಿ ಸಂಗೀತವಿಷಯಕ ಧೋರಣೆ

ಶ್ರೀ. ಜಿ. ಎಸ್. ಜೋಷಿಕಡಿ, ಧಾರವಾಡ

ಸಂಗೀತಗಾರರು ಬದುಕಬೇಕಾದುದು ರಾಜಾಶ್ರಯದಿಂದ ಇಂದು ರಾಜರಿಲ್ಲದೆ ಹೋದರೂ ರಾಜ್ಯಗಳು ಇವೆ. ಅವು ಕಲಾಕಾರರಿಗೆ ಕೊಡುವ ಪ್ರೋತ್ಸಾಹನದ ರೀತಿಯೆಂತಹದು ?

ಆಕಾಶವಾಣಿಯಲ್ಲಿ ಶಾಸ್ತ್ರೀಯ ಸಂಗೀತಕ್ಕೆತನ್ನದೇ ಆದ ಸ್ಥಾನವನ್ನು ಗಳಿಸಿಕೊಟ್ಟವರಲ್ಲಿ, ಮುಂಬೈ ಆಕಾಶವಾಣಿಯಲ್ಲಿ ಕೇಂದ್ರದ ಹಿಂದೆ ನಿರ್ದೇಶಕರಾಗಿದ್ದ ಶ್ರೀ. ಬೋಖಾರಿಯವರಿಗೆ ಹೆಚ್ಚಿನ ಶ್ರೇಯವು ಸಲ್ಲುವುದು. ಅವರ ಗರಡಿಯಲ್ಲಿಯೇ ಸಲವು ಕಾರ್ಯಕ್ರಮಾಧಿಕಾರಿಗಳೂ ಸಿದ್ಧರಾದರು. ಶ್ರೀ. ಬೋಖಾರಿಯವರು ಈಗ ಪಾಕಿಸ್ತಾನದಲ್ಲಿ ಸೇವೆ ಸಲ್ಲಿಸುತ್ತಿದ್ದು, ಅವರ ಗರಡಿಯಲ್ಲಿ ತಯಾರಾದ ಹಲವು ಕಾರ್ಯಕ್ರಮಾಧಿಕಾರಿಗಳು ಈಗ ಭಾರತದಲ್ಲಿಯ ಬೇರೆ ಬೇರೆ ಕೇಂದ್ರಗಳಲ್ಲಿ ಕೆಲಸಮಾಡುತ್ತಿರುವರು. ಮುಂಬೈ ಕೇಂದ್ರವೆಂದರೆ ಸಂಗೀತದ ಮಟ್ಟಿಗೆ ಒಂದು ಮಟ್ಟವನ್ನು ಮುಟ್ಟಿತ್ತು. ಮುಂಬೈ ಕೇಂದ್ರದಿಂದ ಬಿತ್ತರಿಸುತ್ತಿದ್ದ ಪ್ರತಿಭಾವಂತ ಕಲಾಕಾರರನ್ನೆಲ್ಲ ದಿಲ್ಲಿ, ಲಖನೌ, ಕಲಕತ್ತಾ ಮೊದಲಾದ ಕೇಂದ್ರಗಳಿಂದ ಬಿತ್ತರಿಸಲು ಬೇಡಿಕೆ ಬರುತ್ತಿತ್ತು.

ಸ್ವಾತಂತ್ರ್ಯಪ್ರಾಪ್ತಿಯ ನಂತರ, ಇನ್ನಿತರ ಕ್ಷೇತ್ರಗಳಲ್ಲಿಯಂತೆ ಆಕಾಶವಾಣಿ ರಂಗದಲ್ಲಿಯೂ ಬದಲಾವಣೆಗಳು ಪ್ರಾರಂಭವಾದವು. ಕೇಂದ್ರಗಳು ಬೆಳೆದಂತೆ ಕಾರ್ಯಕ್ರಮಗಳು ಹೆಚ್ಚಾಗಿದೆ. ಅಧಿಕಾರಿಗಳು ಬೆಳೆದ್ದಾರೆ. ಜೊತೆಗೆ ಹೆಚ್ಚಾಗಿದೆ ಕಲಾವಿದರು ಹೆಚ್ಚಾಗಿದ್ದಾರೆ. ಸಮಿತಿಗಳೇರ್ಪಟ್ಟವು. ಪ್ರತಿ ಕೇಂದ್ರಕ್ಕೂ ಸ್ಥಳೀಯ ಸ್ವರಪರೀಕ್ಷಾ ಮಂಡಲವೆಂಬುದೊಂದಿರುತ್ತದೆ. ಕಾರ್ಯಕ್ರಮಗಳ ಸಂಗೀತವನ್ನು ಬಿತ್ತರಿಸಬೇಕೆನ್ನುವವರು ಸ್ಥಳೀಯ ಪರೀಕ್ಷೆಯಲ್ಲಿ ಗೆದ್ದಲು ಉತ್ತೀರ್ಣರಾಗಬೇಕಾಗುವುದು. ಅನಂತರ ಕೇಂದ್ರಸ್ವರಪರೀಕ್ಷಾ ಮಂಡಲದಲ್ಲಿ ಉತ್ತೀರ್ಣರಾದರೆ ಮುಂದೊಮ್ಮೆ ಬಿತ್ತರಣೆಗಾಗಿ ಬೇಡಿಕೆ ಬರಲಾರಂಭಿಸುತ್ತದೆ. ಈ ಕೇಂದ್ರಸ್ವರಪರೀಕ್ಷಾ ಮಂಡಲದ ಅಧ್ಯಕ್ಷರು ಶ್ರೀ. ಎಸ್. ಎನ್. ರಾತಂಜನಕರಜಿ— ಪದ್ಮವಿಭೂಷಣ ರಾತಂಜನಕರರು. ಇವರ ವಿದ್ವತ್ತೆಯನ್ನು ಯಾರೂ ಈಗ ಪ್ರಶ್ನಿಸರು.

ಇವರಿಂದ ಲಿಖಿತವಾದ ಗ್ರಂಥಗಳು ಸಂಗೀತಾಭ್ಯಾಸಿಗಳಿಗೆ ತುಂಬ ಉಪಯುಕ್ತವಾದುವುಗಳು. ಉತ್ತರ ದಕ್ಷಿಣ ಸಂಗೀತಪದ್ಧತಿಗಳೆರಡನ್ನೂ ಅಭ್ಯಸಿಸಿದವರು. ಇದೆಲ್ಲದರ ಜೊತೆಯಲ್ಲಿ ವಿಶ್ವವಿದ್ಯಾನಿಲಯ ಪದವೀಧರರು. ಇವರ ಧುರೀಣತ್ವದಲ್ಲಿ ಕೇಂದ್ರ ಹಿಂದುಸ್ತಾನೀ ಸ್ವರಪರೀಕ್ಷಾ ಮಂಡಲವು ಕಾರ್ಯಮಾಡುತ್ತಿದೆ. ಮಂಡಲದ ಬಹುಜನ ಸದಸ್ಯರು ಸಂಗೀತಪರಿಣತರಿದ್ದರೂ, ಕೆಲವರು ಅಕ್ಷರ ವಿದ್ಯೆಯಲ್ಲಿ ಅಷ್ಟಕಷ್ಟವೇ ಇರುವರು. ಅಂತೆಯೇ ಕಲಾವಿದರ ಹಣೆಯ ಬರಹವನ್ನು ಬರೆಯುವ ಲೇಖನಿ ಶ್ರೀ. ರಾತಂಜನಕರರ ಕೈಯಲ್ಲಿಯೇ ಇರುತ್ತದೆ. ಸ್ವರಪರೀಕ್ಷಾಮಂಡಲವು ಮೊಟ್ಟಮೊದಲು ಕಾರ್ಯಾರಂಭ ಮಾಡಿದಾಗ, ಕಲಾವಿದರಲ್ಲಿ ತೀವ್ರ ಅಸಂತೋಷ ಹಬ್ಬಿ, ಜೇನುಹುಟ್ಟುಬಿಡಿಸಿದಂತಾಗಿ, ಬಲವಾದ ಪ್ರತಿಭಟನೆಗೆ ಗುರಿಯಾಯಿತು. ಅಖಿಲಭಾರತದಲ್ಲಿ ಖ್ಯಾತಿವೆತ್ತ ಕಲಾವಿದರಾದ ಉಸ್ತಾದ್ ವಿಲಾಯತ ಹುಸೇನಖಾನ, ಮಾ. ಕೃಷ್ಣರಾವ, ಶ್ರೀಮತಿ ಮೋಘೂಬಾಯಿ ಕುರ್ಡೀಕರ, ಶ್ರೀಮತಿ ಗಂಗೂಬಾಯಿ ಹಾನಗಲ್, ಶ್ರೀ. ಮಲ್ಲಿಕಾರ್ಜುನ ಮನಸೂರರಂತಹರು, ಮುಂಬೈ ಹಾಗೂ ಧಾರವಾಡ ಕೇಂದ್ರಗಳ ಸಂಮುಖದಲ್ಲಿ ಪಿಕೆಟಿಂಗ್ ಮಾಡಿದರು. ಭಾರತೀಯ ಕಲಾಕಾರ ಮಂಡಲವೆಂಬ ಸಂಸ್ಥೆಯು ಜನ್ಮತಾಳಿತು. ಸ್ವರಪರೀಕ್ಷಾ ಮಂಡಲದ ರಚನೆ ಹಾಗೂ ಪರೀಕ್ಷಾಪದ್ಧತಿಯಲ್ಲಿಯ ವಿಕಲ್ಪತೀಯಕ್ತಿಯಲ್ಲದೆ ಇನ್ನಿತರ ದೋಷಗಳನ್ನೂ ಎತ್ತಿತೋರಿಸಿ, ಯೋಜಕರ ಮೂಲೋದ್ದೇಶವೇ ಹೇಗೆ ಸಫಲವಾಗಲಾರದೆಂಬುದನ್ನು ಸರಕಾರದ ಗಮನಕ್ಕೆ ತರಲಾಯಿತು. ಸರಕಾರವು ತೀರ 'ಸರಕಾರೀ' ರೀತಿಯಲ್ಲಿ ವರ್ತಿಸಿತಲ್ಲದೆ, ಕಲಾಕಾರರಲ್ಲಿಯೂ ಕೆಲ ಕಲಾಕಾರರು "ಕರಿ ಕುರಿ"ಗಳಂತೆ ವರ್ತಿಸಿದ ಮೂಲಕ, ಸಮಸ್ಯೆಯು ಎಳೆದಾಟಕ್ಕೆ ಸಿಕ್ಕಿಬಿದ್ದು, ಕಲಾಕಾರರು ಪೂರ್ತಿ ಗಿ (ಒಂದೂಕಾಲು) ವರ್ಷ ಬಾನುಲಿ ಬಿತ್ತರಣೆಯಿಂದ ದೂರ ಉಳಿಯಬೇಕಾಯಿತು. ಕೊನೆಯಲ್ಲಿ 'ಇಪ್ಪೆಲ್ಲದರ ಫಲಶ್ರುತಿಯೇನು ?' ಎಂಬ ಪ್ರಶ್ನೆಯನ್ನು ಉತ್ತರಿಸುವುದು ಸುಲಭದ ಮಾತಾಗಲಿಲ್ಲ. ಸರಕಾರ ಹಾಗೂ ಕಲಾಕಾರ ಈ ಉಭಯತರೂ ಗೊಂದಲದಲ್ಲಿ ಬಿದ್ದದ್ದೊಂದು ನಿಜವಾಗಿ, ಯಾರ ಉದ್ದೇಶ ಎಷ್ಟು ಫಲಿಸಿತೆಂಬುದು ಇಂದಿಗೂ ಸ್ಪಷ್ಟವಿಲ್ಲ. ಈಗ ನಡೆದುದನ್ನು ನೋಡಿದರೆ ಎಲ್ಲವೂ ಯಥಾಸ್ಥಿತಿ! ಮುಂಚಿನವರೇ ಈಗಲೂ ಮುಂಚೂಣಿಯಲ್ಲಿ. ಈಗ ಮಂಚೂಣಿಯಲ್ಲಿರುವ ಕಲಾಕಾರ

ಕನ್ನು ಸ್ವರಪರೀಕ್ಷೆಗೆ ಗುರಿಪಡಿಸಿದ್ದೇ ಆದರೆ, ಯಾರ ಅಂತಸ್ತು ಎಷ್ಟು ಹೊಯ್ದಾಡೀತೆಂಬುದನ್ನು ನೋಡುವುದು ಮನೋರಂಜಕ ವಿಷಯವಾದೀತು! ಯೋಜನೆಯನ್ನು ಟೀಕಿಸುವುದೇ ಇಲ್ಲಿಯ ಉದ್ದೇಶವಲ್ಲ. ಟೀಕೆಗಳಾಗುತ್ತವೆಂದು ಅಥವಾ ತೊಡಕುಗಳಿರುವುವೆಂದು ಯಾವ ಯೋಜನೆಯನ್ನೂ ಕೈಕೊಳ್ಳದಿರುವುದೂ ಜೀವಂತತನದ ಲಕ್ಷಣವಾಗಲಿಕ್ಕಿಲ್ಲ. ಮಂತ್ರಿವರ್ಯ ಡಾ. ಕೇಸಕರ ಹಾಗೂ ಪದ್ಮವಿಭೂಷಣ ರಾತಂಜನಕರರ ಈ ಯೋಜನೆಯಿಂದ, ಕಲಾಲೋಕದಲ್ಲಿ ಜೀವ ಸಂಚರಿಸಿತೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಯೋಜನೆಯು ಕಾರ್ಯಾಚರಣೆಯಾಗಿ ನಾಲ್ಕೈದು ವರುಷಗಳು ಸಂದುಹೋದರೂ, ಯೋಜನೆಯಿಂದಾವ ಇಷ್ಟಾನಿಷ್ಟಗಳನ್ನೂ ಪ್ರಗತಿವಿಗತಿಗಳನ್ನೂ ಪರಾಮರ್ಶಿಸಿ ನೋಡುವುದು ಸಂಬಂಧಿಸಿದವರೆಲ್ಲರ ಕರ್ತವ್ಯವಾಗುವುದು.

ಈ ಯೋಜನೆಯ ಪ್ರಯೋಗದಲ್ಲಾದ ಒಂದು ದುಷ್ಪರಿಣಾಮವೆಂದರೆ, ಎಷ್ಟೋ ಗುಣೀ ಕಲಾಕಾರರು ಅನಪೇಕ್ಷಿತವಾಗಿ, ಅಸಿರೀಕ್ಷಿತವಾಗಿ, ಕಡಿಮೆ ಗುಣವುಳ್ಳವರೆಂದು ತೀರ್ಮಾನಿಸಲ್ಪಟ್ಟಿದ್ದು. ಎಲ್ಲ ಕೇಂದ್ರಗಳಲ್ಲಿಯೂ ಈ ಬಗೆಯ ಹಲವು ಪ್ರಕರಣಗಳು ದೃಷ್ಟಾಂತಕ್ಕೆ ಬಂದಿವೆ. ಅಂಥವರಿಗೆ ಇದೊಂದು ಆಘಾತವಲ್ಲವೇ? ಇದನ್ನು ಸರಿಪಡಿಸಬೇಡವೇ?

ಎರಡನೆಯ ದುಷ್ಪರಿಣಾಮವೆಂದರೆ, ಅಧಿಕಾರದ ಕೇಂದ್ರೀಕರಣದ ಮೂಲಕವಾಗುವ ವಿಲಂಬ.

ಸ್ವರಪರೀಕ್ಷಣೆಗಾಗಿ ಕರೆ ಬಾರದೆ ತಿಂಗಳುಗಳು—ಕೆಲವು ಸಲ ವರುಷಗಳು—ಉರುಳುವುವು. ಏಕೋ ಕಲಾಕಾರರು ದಾರೀ ಕಾಯ್ದು ಕಾಯ್ದು ವಿಹ್ವಲರಾಗಿ, ತಂಬೂರಿಯನ್ನು ಸುರಕ್ಷಿತವಾಗಿ ಗೂಟಕ್ಕೆ ತೂಗುಬಿಡುವುದುಂಟು. ಪ್ರೋತ್ಸಾಹನೆ ಹಾಗೂ ಪ್ರತಿಫಲವಿಲ್ಲದೆಯೂ, ಇದ್ದರೂ ಎಂದೊ ಏನೊ—ಅದೂ ಅತ್ಯಲ್ಪಫಲವೆಂಬ ಕಾರಣಕ್ಕಾಗಿಯೂ, ಅನೇಕ ಸಂಗೀತಜೀವಿಗಳು ಬೇರೆ ವೃತ್ತಿಗಳನ್ನು ಮನಸ್ಸಿಲ್ಲದ ಮನಸ್ಸಿನಿಂದ ಕೈಕೊಳ್ಳಲೇಬೇಕಾಗುವುದು. ತೀರ ವಿರೋಧವಾದ ವೃತ್ತಿಯಲ್ಲಿ (ಉದ್ಯೋಗ-ಧಂದೆ) ಏಲುಕೆಕೊಂಡು ಅನೇಕರು ತೊಳಲುತ್ತಿರುವುದು ಯಾರಿಗೂ ಕಾಣುವ ಸಂಗತಿ. ಕಲಾಸ್ವರ್ಪಂಚಕ್ಕೆ ಇದು ತುಂಬ ಹಾನಿಕರ. ಅಂತೂ ಕೊನೆಗೊಮ್ಮೆ, ೩-೪ ದಿನಗಳ ಅಲ್ಪಾವಧಿಯ ಅಂತರವಿಟ್ಟು, ಅವಸರದ ಕರೆಯೊಂದು, ಕೇಂದ್ರದಿಂದ ಬರುತ್ತದೆ. ಯಾವ ಪರಿಸ್ಥಿತಿಯಲ್ಲಿದ್ದರೂ ಕಲಾಕಾರನು ಆಗ ಪರೀಕ್ಷೆ ಕೊಟ್ಟರೆ ಸರಿ; ಇಲ್ಲವಾದರೆ, ಇನ್ನೆಂದೋ ಏನೋ ಎಂಬ ಚಿಂತೆ. ಹೀಗಾಗುವುದನ್ನು ತಪ್ಪಿಸುವುದು ಸಾಧ್ಯವಿಲ್ಲವೇ?

ಅಧಿಕಾರದ ಕೇಂದ್ರೀಕರಣದಿಂದಾದ ಮತ್ತೊಂದು ದುಷ್ಪರಿಣಾಮವೆಂದರೆ, ಅಧಿಕಾರವು ತಮಗಿಲ್ಲವಾದ್ದರಿಂದ ಸ್ಥಳೀಯ ಅಧಿಕಾರಿಗಳಲ್ಲಿ ಕಂಡುಬರುತ್ತಿರುವ ಅಸಹಾಯತೆ ಹಾಗೂ ಔದಾಸೀನ್ಯ. ಇದಲ್ಲದೆ ಕೇಂದ್ರಗಳಲ್ಲಿ ಮತ್ತೊಂದು ಮನೋರಂಜಕ ವಿಷಯ ಕಂಡು ಬರುವುದು. ಅದೆಂದರೆ, ಸಾಹಿತ್ಯಾಧಿಕಾರಿಯು ಸಂಗೀತಜ್ಞನು ಪತ್ರವ್ಯವಹಾರವನ್ನೂ, ಪತ್ರವ್ಯವಹಾರ ಪರಿಣತನು ಕಲಾದಿಗ್ದರ್ಶನವನ್ನೂ ಮಾಡುತ್ತಿರುವುದು ಕಂಡು ಬರುತ್ತದೆ. ವಸ್ತುತಃ ನಿಶಿಷ್ಟವಿಷಯದಲ್ಲಿ ಸಿದ್ಧಿಯುಳ್ಳವರನ್ನು ಕೇಂದ್ರಗಳಲ್ಲಿ ನಿಯಮಿಸಿಕೊಂಡನಂತರ, ಕಾರ್ಯಕ್ರಮಗಳ ಮಟ್ಟದಲ್ಲಿ ಅಪೂರ್ವ ಸುಧಾರಣೆಯಾಗಬೇಕಿತ್ತು. ಆದರೆ ಅವರಿಗೆ ಕುರ್ಚಿ ಕೊಟ್ಟು 'ಟೇಬಲ್ ವರ್ಕ್' ಹಚ್ಚಿದರೆ, ಅವರಾದರೂ ಏನು ಮಾಡಿಯಾರು? ಕುರ್ಚಿಯ ಮಾಯೆ ಸಾಧಾರಣವಾದುದಲ್ಲ.

'ಕುಳಿತ ಕುರ್ಚಿ ನಿರಂತರವಾಗಿ ನನ್ನದಾಗಿರಲಿ' ಎಂಬುದರ ಕಡೆಗೇನೇ ಹೆಚ್ಚಿನ ಲಕ್ಷ್ಯವು ಕೇಂದ್ರಿಕೃತವಾಗುತ್ತದೆ. ಇದಕ್ಕೆ ಅಪವಾದಗಳೂ ಇಲ್ಲದಿಲ್ಲ.

ಸಾವಿರುವ ಕೇಂದ್ರದಿಂದ ನಿತ್ಯರಿಸುತ್ತಿರುವ ಯಾವ ಕಲಾವಿದನ ಮಟ್ಟವೇನು? ಯಾವ ಕಲಾವಿದನು ಪ್ರಗತಿಪಥದಲ್ಲಿರುವನು? ಯಾರ ಪ್ರಗತಿ ಕುಂಠಿತವಾಗುತ್ತಿದೆ? ಯಾರ ಬಲಾಬಲಗಳೇನು? ಯಾರು ಹೆಚ್ಚಿನ ಪ್ರೋತ್ಸಾಹನೆಗೆ ಯೋಗ್ಯರು? ಇದನ್ನು ಕಂಡು ಹಿಡಿಯಬೇಡವೇ? ಪ್ರಾದೇಶಿಕ ಕೇಂದ್ರದಲ್ಲಿಯ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯಗಳಲ್ಲಿ ಇದೂ ಒಂದಲ್ಲವೇ? ಮುಖಸಾಕ್ಷಾತ್ಕಾರವೋ, ಎರಡು ಮುಖಸಾಕ್ಷಾತ್ಕಾರವೋ, ಕೇಂದ್ರಮಂಡಲಿಯ ಸುರಿನಲ್ಲಿ ಹಲವು ನಿಮಿಷಗಳ ಪರೀಕ್ಷೆಗೆ ಗುರಿಯಾದಾಗ ಕಲಾವಿದನ ಹಣೆಯಬರೆಹವು ನಿರ್ಣಯಿಸಲ್ಪಡುವುದಾದರೆ, ಮತ್ತು ಇದೊಂದೇ ನಿರ್ಣಯಸಾಧನೆಯಾದರೆ, ಅದೆಂತು ಈಗಿನ ಸಾಧಕಕಲಾವಿದರು ಮೇಲ್ಮಟ್ಟಕ್ಕೇರುವ ಆಶೆಯನ್ನು ಹುಡಿಯಬಹುದು?

ಆಕಾಶವಾಣಿಯಲ್ಲಿ "ಲೋಕಪ್ರಿಯತೆ" ಎಂಬ ಮೂನದಂಡವೊಂದಿದೆ. ಈಗಿರುವ "ಲೋಕಪ್ರಿಯ" ಕಲಾವಿದರು ಹೇಗೆ "ಲೋಕಪ್ರಿಯ"ರಾದರು? ಅವರನ್ನು "ಲೋಕಪ್ರಿಯ" ರಾಗಿಸಲು ಕಾರಣರಾದವರು ಯಾರು? ವಸ್ತುತಃ ಈ "ಲೋಕಪ್ರಿಯ" ಎಂಬ ಮುದ್ರೆ ಬೀಳುವುದು ಆಕಾಶವಾಣಿಯಲ್ಲಿಯೇ! ಶ್ರೋತೃಗಳ ಬಾಯಿಂದ ಬರುತ್ತಿರುವ ಮುಂದಿನ ಮಾತುಗಳಲ್ಲಿ ಕಂಡು ಬರುತ್ತಿರುವ ಮನಃಶಾಸ್ತ್ರದ ಅಂಶವು ಗಮನಿಸುವಂತಹದಾಗಿದೆ:

"ಏನ್ರೀ, ನಿಮ್ಮ ಅ....ರು ಬಹಳ ತಯಾರಿ ಆದ್ಹಂಗ ಕಾಣಿಸ್ತಪ್ಪ; ಈಗ ಮೇಲಿಂದಮೇಲೆ ಅವರ ಕಾರ್ಯಕ್ರಮವಿರುತ್ತದೆ" ಬಾನುಲಿಯಲ್ಲಿ ಹೆಚ್ಚಿನ ಅವಕಾಶ ಹಾಗೂ ಪ್ರಾಶಸ್ತ್ಯಗಳು ದೊರೆಯಲು ಗುಣವು ಒಂದು ಪ್ರಮುಖ ಅಂಶವೆಂದು ಕಂಡು ಬಂದರೂ, ಸೂಕ್ಷ್ಮದರ್ಶಿಗಳಿಗೆ ಗುಣವೊಂದಲ್ಲದೆ ಇನ್ನೂ ಏನೇನೋ ಅಂಶಗಳು ಕಾರಣವಿರುತ್ತವೆಂಬುದು ಹೊಳೆಯದಿರಲಾರದು. ಯಾವ ಯೋಗದಿಂದಲಾದರೂ ಹೆಚ್ಚಿನ ಸಂಧಿಗಳು ಸಿಕ್ಕು ತನ್ಮೂಲಕ ಪ್ರೋತ್ಸಾಹನೆ ವ್ಯಕ್ತಿಗೆ ಲಭಿಸಿದರೆ, "ಲೋಕಪ್ರಿಯತೆ" ತಂತಾನೇ ಉದ್ಭವಿಸಲಾರಂಭಿಸುತ್ತದೆ. ಈ "ಲೋಕಪ್ರಿಯ" ಬಿರುದಾಂಕಿತ ಕಲಾವಿದರಿಗೆ ಯಾವ ಕೊರತೆಯೂ ಇಲ್ಲ. "ಲೋಕಪ್ರಿಯ" ರಲ್ಲದವರಿಗೆ ಅವಶ್ಯವಾಗಿ ಅನ್ವಯಿಸುವ ಎಷ್ಟೋ ಕಾಯ್ದೆಗಳು

ಇವರಿಗೆ ಬಂಧಕವಾಗಿಲ್ಲ. ಅವರು ತಪ್ಪಲಾರರು–ತಪ್ಪಿದರೂ ಅವನ್ನು ಗಮನಿಸಬಾರದು. ಅವರು ಹಾಡಿದ್ದನ್ನೇ ಹಾಡಬಹುದು; ಬಾರಿಸಿದ್ದನ್ನೇ ಬಾರಿಸಬಹುದು. ಜೋಯಿಸರ ಹತ್ತಿರ ವರ-ಕನ್ಯೆಯರ ಯಾದಿಯಿದ್ದಂತೆ "ಲೋಕಪ್ರಿಯ" ಕಲಾವಿದರ ಯಾದಿಯೊಂದು ಸಿದ್ಧವಿದ್ದು, ಎಲ್ಲ ಬಗೆಯ ಸರಕಾರೀ ಸಂಗೀತೋತ್ಸವಗಳಲ್ಲಿಯೂ ಯಾಂತ್ರಿಕವಾಗಿ ಇವರಿಗೇ ಕರೆ ಹೋಗುವುದುಂಟು. ಕೆಲವು ತೀರಾ ಪ್ರಸಿದ್ಧ ಕಲಾವಿದರ ಹೆಸರು ಇಂಥ ಯಾದಿಯಲ್ಲಿಲ್ಲ ಎಲ್ಲವೆ ಇಷ್ಟು ಪ್ರಸಿದ್ಧರಾದ ಕಾಲದಲ್ಲಿ ಬೇರೆ ಯಾರೂ ತಯಾರಾಗಿಲ್ಲವೇ? ಅಂತಹವರನ್ನು ಗುರುತಿಸುವ ಕೆಲಸವಾಗಿಲ್ಲವಿಷ್ಟೇ!

ಇದೆಲ್ಲದರ ಜೊತೆಯಲ್ಲಿ ಪರಿಸ್ಥಿತಿಯಲ್ಲಿಯ ಬದಲಾವಣೆಯನ್ನು ಗಮನಿಸುವುದು ಅವಶ್ಯಕವಾಗಿದೆ. ಒಂದೆರಡು ದಶಕಗಳ ಹಿಂದೆ ಆಕಾಶವಾಣಿಯ ಹೊರತು "ಲೋಕಪ್ರಿಯತೆ" ಯನ್ನು ಗಳಿಸಲು ಬೇರೆ ಮಾರ್ಗಗಳಿದ್ದುವು. ಸಮಾಜದಲ್ಲಿ ಮದುವೆ-ಮುಂಜಿ, ಹಬ್ಬ-ಹರಿದಿನಗಳಿದ್ದಾಗ, ಸಂಗೀತ ಕಾರ್ಯಕ್ರಮವೂ ಒಂದು ವಿಧಿಯಾಗಿ ಬಿಟ್ಟಿತ್ತು. ಸಂಗೀತವು ರಾಜಾಶ್ರಯದಲ್ಲಿದ್ದಾಗಿನ ಪ್ರಸಂಗಗಳನ್ನು ತೀಡುವಾಗ, ಅವನ್ನು ಅನುಭವಿಸಿದ ಕೆಲವರಿಗೆ, ವಿಧವೆ ಮುತ್ತೈದೆತನದಲ್ಲಿಯ ಹುರುಬನ್ನು ನೆನೆಸಿಕೊಂಡಂತಾಗುತ್ತದೆ. ಊರಲ್ಲಿಯ 'ಆರ್ಟ್ ಸರ್ಕಲ್'ಗಳ ಈಗಿನ ಸ್ಥಿತಿಯನ್ನು ನೋಡಿದರೆ, ಮೇಲಿನ ಉಪಮೆಯನ್ನೇ ಪುನರುಚ್ಚರಿಸಬೇಕಾಗುತ್ತದೆ. 'ಜಲಸಾ ಪರಂಪರೆ' 'ನಾಟಕ ಕಂಪನಿ' 'ಗ್ರಾಮಫೋನ್ ಕಂಪನಿ'ಗಳು ಲೋಕಪ್ರಿಯತೆಯನ್ನು ಕಂದುಕೊಡುವ ಇನ್ನಿತರ ಸಾಧನಗಳಾಗಿದ್ದುವು ನಮ್ಮ ಫೋಟೋ ಬೇಕಾದರೆ ನಾವು ಹಣ ಕೊಟ್ಟೇಕಾಗುವಂತೆ, ಈಗ ತಮ್ಮ ಸಂಗೀತ ರಿಕಾರ್ಡ್ ಬೇಕಾದವರು ತಾವೇ ಹಣ ತೆರಬೇಕಾಗಿದೆ. ಒಟ್ಟಿನಲ್ಲಿ ಈಗಿನ ಬದಲಾಯಿಸಿದ ಪರಿಸ್ಥಿತಿಯಲ್ಲಿ ಹೊಣೆಯೆಲ್ಲವೂ ಸರಕಾರದ ಶಾಖೆಗಳಾದ ಆಕಾಶವಾಣಿ ಹಾಗೂ 'ಆಲ್ಯಾಡೆಮಿ'ಗಳ ಮೇಲೆಯೇ ಬಿದ್ದಿದ್ದು, ಅದೃಷ್ಟವಿಲ್ಲದವರಿಗೆ ಸಂಧಿಗಳುಯುದ್ಧಕಾಲದಲ್ಲಿಯ ರೇಷನ್‌ನಂತೆ ಯಾತಕ್ಕೂ ಸಾಲದಷ್ಟು ಮಾತ್ರ ದೊರೆಯುತ್ತವೆ. ಆಕಾಶವಾಣಿಯಲ್ಲಿ ಬಿತ್ತರಿಸದೆಯೂ "ಲೋಕಪ್ರಿಯ"ರಿಂದ ಶ್ರೀಮತಿ ಕೇಸರಬಾಯಿ ಕೇರಕರ, ಪಂ. ಓಂಕಾರನಾಥ ಠಾಕೂರ, ಶ್ರೀ. ಮಲ್ಲಿಕಾರ್ಜುನ ಮನ್ಸೂರರಂತಹ ಅಸಾಧಾರಣ ಪ್ರತಿಭೆಯುಳ್ಳ ಅತಹ ಅಸವಾದಾತ್ಮಕ ಕಲಾಕಾರರ ಮಾತೇ ಬೇರೆ.

ಇಷ್ಟೆ ಅಲ್ಲದೆ, ಆಕಾಶವಾಣಿಯನ್ನು ಜನಪ್ರಿಯಗೊಳಿಸುವ ಸರದಲ್ಲಿ ಎಲ್ಲ ಬಗೆಯ ಕಾರ್ಯಕ್ರಮಗಳ ಸಂತೆಯೇ ನೆರೆದು, ಮಟ್ಟವನ್ನು ಕಾಯ್ದುಕೊಳ್ಳುವುದು ಕಠಿಣವಾಗಿಹತ್ತಿದೆ. ಜನರಾಡಿಕೊಳ್ಳುವ ಈ ಮುಂದಿನ ಮಾತು ಗಮನೀಯವಾಗಿದೆ: "ಏನ್ರೆಪಾ, ಯಾವಲ್ಲರೂ ಹಾಡುವವರೇ! ಮೊನ್ನೆ ನಮ್ಮ ಆ..... ಕೂಡಾ ಹಾಡಿದ್ರು. ನಿಮ್ಮ ಹನ್ನೆರಡು ವರುಷಗಳ ಗುರುಸೇವೆ, ತಪಸ್ಸು ಇಲ್ಲಿ ತೋಳಿದ ಹುಣಿಸೆಯಲ್ಲನೇ?" ಈ ಮಾತಿನಲ್ಲಿ ವಿನೋದವಿದ್ದರೂ ವಿಮರ್ಶೆಯೂ ಇಲ್ಲದಿಲ್ಲ.

ಈಗ ನಡೆದುದೆಲ್ಲವೂ ಸರಿಯಲ್ಲವೆಂದು ತೋರಿಸಿಕೊಟ್ಟಮೇಲೆ, ಉಪಾಯವನ್ನೂ ಸೂಚಿಸದೆ ಹೋದರೆ ಈ ಬರೆವಣಿಗೆಯು ಪರಿಪೂರ್ಣವಾಗದೆ ಇರಲಾರದು—ಅಧಿಕಾರದ ವಿಕೇಂದ್ರೀಕರಣವಾಗಬೇಕೆಂಬುದು ಸ್ಪಷ್ಟ. ಕೇಂದ್ರವು ಮೇಲ್ವಿಚಾರಣಾ (Supervisory) ಅಧಿಕಾರಗಳನ್ನು ತನ್ನೆಡೆಗೆ ಇರಿಸಿಕೊಂಡು, ಪ್ರಾದೇಶಿಕಪರೀಕ್ಷಾಮಂಡಲಗಳಲ್ಲಿ ಸ್ವರ-ಲಯಗಳ ಸುಖದುಃಖ ಬಲ್ಲ ಸಂಗೀತಗಾರರನ್ನೇ ಸೂಕ್ತ ಅಧಿಕಾರಗಳೊಂದಿಗೆ ನಿಯಮಿಸಬೇಕು. ಹೀಗೆ ಮಾಡುವುದರಿಂದ, ಅಭ್ಯರ್ಥಿಗಳಿಗೆ ಅಪಾರ ಕಾಲ ಕಾಯುವ ತಲೆನೋವು ತಪ್ಪುವುದು

ಎರಡನೆಯದಾಗಿ ಈಗ ಬಿತ್ತರಿಸುತ್ತಿರುವ ಕಲಾಕಾರರಿಗೆ, ಆಕಾಶವಾಣಿಯ ದೃಷ್ಟಿಯಲ್ಲಿ ತಾವೆಲ್ಲಿದ್ದೇವೆ ಎಂಬುದು ಯಾರಿಗೂ ಗೊತ್ತಾಗುವಂತಿಲ್ಲ. ಇದು ಸ್ವಲ್ಪ ಮಾಡಲ್ಪಟ್ಟು, ಅದರ ಮುಂದಿನ ಗ್ರೇಡ್ ಪಡೆಯಲೆಳಸುವವರಿಗೆ ಯಾವ ಯಾವ ಅಂಶಗಳು ಅವಶ್ಯಕವಾಗಿವೆ ಎಂಬುದು ಗೊತ್ತಾಗಬೇಕು. ಈಗಿನ ಅನಿಶ್ಚಿತತೆಯ ಜೊತೆಗೆ ನಿಶ್ಚಿತಸ್ವರೂಪವು ಬರುವುದು ಅವಶ್ಯವಿದೆ. ಸಂಗೀತದಲ್ಲಿ ಶಿಕ್ಷಕನೆನಿಸುವ ಯೋಗ್ಯತೆ ಪಡೆಯುವುದು ಬೇರೆ; ಹಾಗೂ ಸ್ವರ-ಸಾಧನೆಯಿಂದ ಕಂಠದಲ್ಲಿ ಮಂತ್ರಶಕ್ತಿಯನ್ನು ತಂದುಕೊಂಡು, ಶ್ರೋತೃಗಳಿಗೆ ಕಲೆಯ ಸಫಲತೆಯಾದ ದೈವಿಕತೆಯ ಆರಿವನ್ನುಂಟು ಮಾಡಿಸುವ ಯೋಗ್ಯತೆಯನ್ನು ಸಾಧಿಸುವುದು ಬೇರೆ. ಇದನ್ನು ಗಮನಿಸದೇ ಗ್ರೇಡೇಶನ್ ಮಾಡಿದರೆ, ಏನೂ ಮಾಡಿದಂತಾಗುವುದಿಲ್ಲ.

ಕೇಂದ್ರ ಸ್ವರಪರೀಕ್ಷಾಮಂಡಲದ ಯೋಜನೆಯ ಯಶಾಪಯಶಸ್ಸುಗಳೇನೇ ಇರಲಿ; ಅದೊಂದು ಪ್ರಾಮಾಣಿಕ ಪ್ರಯತ್ನವೆಂಬುದನ್ನು ಅಲ್ಲಗಳೆಯುವಂತಿಲ್ಲ ಅದರ ಅದರ ಕಾರ್ಯಾಚರಣೆಯಲ್ಲಿ ಬಂದ ಅನುಭವಗಳನ್ನು ಗಮನಿಸಿ, ಕಳೆದುಳಿದ ನ್ಯೂನತೆ ಹಾಗೂ ದೋಷಗಳನ್ನು ನಿವಾರಿಸುವುದು ಅತ್ಯವಶ್ಯವಾಗಿದೆ. ಇದಾಗಬೇಕಾದರೆ, ಸರಕಾರದಲ್ಲಿ ಹಾಗೂ ಪಲಹಾಸಮಿತಿಗಳಲ್ಲಿ ಸೂಕ್ಷ್ಮದೃಷ್ಟಿ, ಅನುಭವ ಹಾಗೂ ಕಾರ್ಯೋತ್ಸಾಹವುಳ್ಳ ಕಲಾವಂತರನ್ನು ಸೇರಿಸಿಕೊಂಡು, ಅಂತಹರ ಮಾರ್ಗದರ್ಶನದಿಂದ ಮುನ್ನಡೆದರೆ, ಯೋಜನೆಯ ಉದ್ದೇಶ ಸಫಲವಾಗದಿರದು. ಪರೀಕ್ಷೆಗಿಂತ ಪ್ರೋತ್ಸಾಹನೆಯ ಭಾವನೆಯನ್ನು ಕಲೆಯ ವಿಷಯದಲ್ಲಿ ತಳೆಯಬೇಕು. ಈಗಿನಂತೆ ಕಲಾವಿದರನ್ನು ಅವರ ಗುಣದೋಷ ಹಾಗೂ ಸ್ಥಾನಮಾನಗಳ ಬಗ್ಗೆ ಕತ್ತಲೆಯಲ್ಲಿಡದೆ, ಅವರ ಪ್ರಗತಿಯನ್ನು ಗಮನಿಸಿ, ಅವಶ್ಯಕ ಪಲಪೂಚನೆಗಳನ್ನು ಕೊಡುವುದವಶ್ಯವಿದೆ. ಶ್ರೋತೃಗಳ ವಿಮರ್ಶೆಯನ್ನು ದೊರಕಿಸಿಯೂ ಆಕಾಶವಾಣಿಯವರು ಕಲಾವಿದನಿಗೇ ಅವುಗೊತ್ತಾಗದಂತೆ ಮಾಡಿದರೇನು ಬಂತು? ಸ್ವಲ್ಪದರಲ್ಲಿ ಹೇಳುವುದಾದರೆ, ಪ್ರೋತ್ಸಾಹನೆಯಿಲ್ಲದೆ ಕಲೆಯು ಬೆಳೆಯುವಾರದು. ವಿದೇಶಗಳಲ್ಲಿ ಕಲೆಗೆ ಹಾಗೂ ಕಲಾಕಾರರಿಗಿರುವ ಗೌರವದ ಬಗ್ಗೆ ತುಂಬ ಮಾತು ಕೇಳಬರುವುವು. ತನ್ನ ದೇಶದಲ್ಲಿಯೂ ಹಾಗೆ ಆಗಲೆಂಬ ಸದಭಿಲಾಷೆಯೇ ಈ ಲೇಖನವನ್ನು ಪ್ರೇರಿಸಿತು.

ಆತ್ಮಪರೀಕ್ಷೆ

ಶ್ರೀ. ಕು. ಇಂದ್ರಿಕಾ ಅನಂತರಾವ ಕೊಪ್ಪರ, (ರಾ. ಭಾ. ಪ್ರವೀಣ) ಧಾರವಾಡ

ತನ್ನಿಂದಾದ ಅನ್ಯಾಯವನ್ನು ಅನ್ಯಾಯವೆಂದು ಒಪ್ಪಿಕೊಳ್ಳಲು ಮಾನವನಿಗೆ ಒಂದು ಹೃದಯಸಂಸ್ಕಾರ ಬೇಕಾಗುವುದು. ಹೀಗೆ ನ್ಯಾಯಾನ್ಯಾಯಗಳನ್ನು ಸರಿಯಾಗಿ ಗುರುತಿಸಲಿಕ್ಕೆ ಆತ್ಮಪರೀಕ್ಷೆಯನ್ನು ನಡೆಸಬೇಕಾಗುವುದು. ಬಾಬೂ ಅಶೋಕರ ಆತ್ಮಪರೀಕ್ಷೆ ಎಂತಹದು?

"ಸಾಹಿತ್ಯದ ಮೇಲೆ ದೇಶದ ಭವಿಷ್ಯ ನಿಂತಿದೆ. ಮುಂದಿನ ಪೀಳಿಗೆಯ ಏಳಿಗೆ ಅವಲಂಬಿಸಿದೆ. ಪೂರ್ವಕಾಲದ ನಮ್ಮ ಉಜ್ಜ್ವಲ ಸಂಸ್ಕೃತಿಯನ್ನು ಇಂದಿನ ವರೆಗೆ ಜೋಪಾನವಾಗಿ ಹೊತ್ತು ತಂದ ಗೌರವ ಸಾಹಿತ್ಯಕ್ಕೇ ಸಲ್ಲುವುದು. ಅದಕ್ಕಾಗಿ ಸಾಹಿತಿಯ ಪ್ರಥಮ ಕರ್ತವ್ಯವೆಂದರೆ ನಿರ್ಭೀತವೃತ್ತಿ ಮತ್ತು ಸಮಾಜದಲ್ಲಿಯ ಕುಂದು. ಕೊರತೆಗಳನ್ನು ಮನದಟ್ಟಾಗುವಂತೆ ಚಿತ್ರಿಸುವ ಸಾಹಸ. ಜನ ಭಯಕ್ಕಾಗಿ ತನ್ನ ಅಭಿಪ್ರಾಯವನ್ನು ಪ್ರಕಟಿಸದಿರುವ ಸಾಹಿತಿ ಸಾಹಿತಿಯೇ ಅಲ್ಲ. ಸಾಹಿತಿಯ ಎರಡನೆಯ ಗುಣವೆಂದರೆ ಸಹೃದಯತೆ. ಅವನು ಕೇವಲ ಬಿಳಿಯ ಕಾಗದದ ಮೇಲೆ ಕಪ್ಪುಗೆರೆಯನ್ನೆಳೆಯದೆ ಅದರಂತೆಯೇ ಆಚರಿಸಲು ತೊಡಗಬೇಕು. ಕೇವಲ ಪ್ರಶಂಸೆಗೋಸ್ಕರ ಉಪದೇಶವನ್ನೀಯುವ ಸಾಹಿತಿಯೆಂದರೆ ದೇಶದ ಕಲಂಕದಂತೆ. ಜನಗಳ ಮನಸ್ಸನ್ನು ನೀತಿಯೆಡೆಗೊಯ್ಯುವ ಹೊದಲು ತನ್ನ ಸತ್ವಸ್ವರಕ್ಷಣೆಗಾಗಿ ಯತ್ನಿಸಬೇಕು ತನ್ನಲ್ಲಿಯ ಕುಂದುಕೊರತೆಗಳನ್ನು ಪರೀಕ್ಷಿಸಿ ತಿದ್ದಿಕೊಳ್ಳಲು ಯತ್ನಿಸಬೇಕು. ಏಕೆಂದರೆ ಪರರ ಕುಂದನ್ನು ಶೋಧಿಸುವುದಕ್ಕಿಂತ ತನ್ನ ಕುಂದನ್ನು ತೋಧಿಸುವುದು ಬಹಳ ಕಷ್ಟ. ಕೇವಲ ನುಡಿಯಿಂದ ನೀತಿವಂತನಾಗದೆ ನಡೆಯಿಂದ ಪವಿತ್ರನಾಗಲುಯತ್ನಿಸಬೇಕು. ಜನತೆಯ ಅಜ್ಞಾನ, ವರ್ಣಭೇದ, ಜಾತಿಭೇದ, ಬಡವ ಶ್ರೀಮಂತರೆಂಬ ವರ್ಗಭೇದ ಇವುಗಳ ನಿರ್ಮೂಲನಕ್ಕೋಸುಗ ಕೇವಲ ಕಾಗದದ ಮೇಲೆ ಪೆನ್ನಿನಿಂದ ವಿಶ್ವಬಾಂಧವ್ಯವನ್ನು ಚಿತ್ರಿಸದೆ, ಮೊದಲು ಸ್ವತಃ ಅದರಂತೆ ಆಚರಿಸಲು ತೊಡಗಬೇಕು....."

ಸೂಜಿ ಬಿದ್ದರೆ ಕೂಡ ಕೇಳಿಸುವ ಶಾಂತತೆ ಆ ಸಭೆಯಲ್ಲಿ ಪಸರಿಸಿತ್ತು. ಜನರೆಲ್ಲ ತಾವು ಎಲ್ಲಿರುವೆವೆಂಬ ಪರಿವೆಯಿಲ್ಲದೆ ಕೇಳುತ್ತಿದ್ದರು. ಬಹುದಿನಗಳಿಂದ ಹಾರೈಸುತ್ತಿದ್ದ ಅವರ ಇಚ್ಛೆ ಇಂದು ಫಲಿಸಿತ್ತು. ನಾಡಿನ 'ಗೌರವನಿಧಿ' 'ಸಾಹಿತ್ಯಸಮ್ರಾಟ' 'ಉದಾರ ಚರಿತ' ಎಂದು ಹೆಸರುಪಡೆದ ಬಾಬೂ ಅಶೋಕರು ಇಂದು ಭಾಷಣಕ್ಕಾಗಿ ಆಗಮಿಸಿದ್ದರು. ಜನ ತನ್ಮಯತೆಯಿಂದ ಕೇಳುವುದರಲ್ಲಿ ಮಗ್ನವಾಗಿದ್ದಿತು. ಆದರೆ ಎಲ್ಲಿಯೋ ನೋಡುತ್ತಿದ್ದಾಗ ಜನಾತ್ತನೆ ಮೈಮೇಲೆ ಹಾವು ಬಿದ್ದಂತೆ ಅವರು ಭಾಷಣ ನಿಲ್ಲಿಸಿದೊಡನೆ ಜನ ಎಚ್ಚತ್ತರು. ಮರುಕ್ಷಣವೇ ಚಪ್ಪಾಳೆಯ ಶಬ್ದದಿಂದ ಆ ಭವ್ಯಮಂಟಪವು ನಡುಗಿತು. ಆದರೆ ಅದರಲ್ಲಿ ತಮ್ಮ ಅಮೋಘ ಭಾಷಣದಿಂದ ಬಾಬುಗಳು ಸಹಸ್ರಾರು ಜನರ ಮನಸ್ಸನ್ನು ಸೂರೆಗೊಂಡಿದ್ದರು. ಅವರ ನೀತಿಯ ಮಾತುಗಳು ಚಾವಟಿಯ ಏಟಿನಂತೆ ಕಠೋರವಾಗಿರದೆ ತಪ್ಪಿದ ಮಗುವನ್ನು ಪ್ರೀತಿಯಿಂದ ತಿದ್ದುವ ತಾಯಿಯ ಮಮತೆಯ ನುಡಿಗಳಂತಿದ್ದುವು.

ಆದರೆ ಬಾಬುಗಳು ಅಲ್ಲಿಯೇ ತಡೆದರು. ಅವರಿಗರಿವಿಲ್ಲದೆಯೇ ಅವರ ಕಂಠ ಗದ್ಗದವಾಯಿತು. ತಲೆತಗ್ಗಿಸಿ ಮುಖದ ಮೇಲಿನ ಲಜ್ಜೆಯನ್ನು ಮರೆಮಾಡಲು ಯತ್ನಿಸಿದರು. ಕಠೋರ ಮಾತುಗಳನ್ನಾಡಿಸಿಕೊಂಡವರ ಮುಖಮುದ್ರೆ ಖಿನ್ನನಾಗುವಂತೆ ಅವರ ಮನಸ್ಸು ಮುದುಡಿತು. ಮುಖ ಅಪರಾಧಿಯಂತೆ ಕಳೆಗೆಟ್ಟಿತು. ಬಹು ಶ್ರಮದಿಂದ ದುಃಖವನ್ನು ತಡೆದುಕೊಂಡರು. 'ಉಣ್ಣೆ ಕೆಚ್ಚಲೊಳಿರ್ದು ಉಣ್ಣದದು ನೊರೆಹಾಲು' ಎಂಬಂತೆ ತಮ್ಮ ಉಜ್ವಲ ಸಾಹಿತ್ಯದಿಂದ ಜನತೆಯ ಮಾರ್ಗದರ್ಶಕರಾಗಿರುವ ಅವರ ಮನಸ್ಸಿಗೆ ಮಾತ್ರ ಒಂದು ಕ್ಷಣವೂ ಸಮಾಧಾನವಿದ್ದಿಲ್ಲ. ಜನತೆಯಿದುರು ನಿಂತ ಕಠಿಣ ಸಮಸ್ಯೆಗಳನ್ನು ಕೌಶಲ್ಯದಿಂದ ಬಿಡಿಸುವುದೇ ಅವರಿಗೆ ತಮ್ಮ ಸಮಸ್ಯೆಯಿಂದರೆ ಒಡೆಯಲಾರದ ಒಗಟಿದಂತಾಗಿತ್ತು. ಯಾವ ಘಟನೆ ಅವರ ಇಷ್ಟು ದಿನದ ಉದಾಸೀನತೆಗೆ ಕಾರಣವಾಗಿತ್ತೋ, ಅದೇ ಈ ಮಾತಿನಿಂದ ಕಣ್ಣೆದುರು ಮೂಡಿತು. ಗಾಯ ಇನ್ನೂ ವಾಯದಿರುವಾಗಲೇ ಪೆಟ್ಟಾದರೆ ಪುನಃ ಮೊದಲಿನ ಸ್ಮೃತಿ ಮರಳುವಂತೆ ಇಂದು ಆಡಬಾರದ ಮಾತು ಆಡಿದಾಗ ಆಗಬಾರದ ನೆನಪು ಆಯಿತು ಜನ ತಮ್ಮ ಮಾತು ಕೇಳಲು ಆತುರಪಡುತ್ತಿರುವರೆಂದು ತಿಳಿದರೂ ಮುಂಗೆ ಅವರಿಂದ ಮಾತಾಡಲಾಗಲಿಲ್ಲ. ಎಷ್ಟು ಪ್ರಯತ್ನಪಟ್ಟರೂ ನಿಲ್ಲಲು ಸಾಧ್ಯವಾಗಲಿಲ್ಲ.

ಬಾಯಾರಿಕೆಯಾಗಿರಬಹುದೇನೋ—ಎಂದು ಕಾರ್ಯದರ್ಶಿಗಳ

ಬೇಗನೆ ತರಬತ್ತನ್ನು ತಂದಿಟ್ಟರು. ಅವರೆ ಬಾಬುಗಳು ಅದನ್ನು ಮುಟ್ಟಲಿಲ್ಲ. ಆ ಶೀತಲಜಲವನ್ನು ಕುಡಿದಿದ್ದರೆ, ಅವರ ಬಾಯಾರಿಕೆ. ಕಡಿಮೆಯಾಗುತ್ತಿದ್ದರೂ ಹೃದಯದ ತಾಪ ಇನ್ನೂ ಹೆಚ್ಚಾಗುತ್ತಿತ್ತು. ಅತಿ ಕಷ್ಟದಿಂದ ಎದ್ದು ನಿಂತು ಹೇಳಿದರು: " ನಿಮ್ಮೆದುರು ಮಾತಾಡು. ವಾಗ ಅತ್ಯೋಚರಿದರು ಸುಖ-ದುಃಖಗಳನ್ನು ತೋಡಿಕೊಂಡ ತೆ ಮನಸ್ಸಿಗೆ ಸಮಾಧಾನವೆನಿಸುತ್ತದೆ. ಆದರೆ ಇಂದು ನನಗೆ ಜೇಹಾ. ಲಸ್ಯವಾದ್ದರಿಂದ ಇನ್ನು ಮಾತಾಡಲಾಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು ಕೊನೆಯದಾಗಿ ಒಂದು ಮಾತು ಹೇಳಬಯಸುತ್ತೇನೆ; ಪರರ ನಿಂದೆಮಾಡುವ ಮೊದಲು ನಮ್ಮ ಅಂತರಂಗ ಶೋಧಿಸಬೇಕು. ಯಾಕೆಂದರೆ ಮನಸ್ಸಿನಂಥ ಮಹಾವೈರಿ ಇನ್ನೊಂದಿಲ್ಲ. ಪರರ ಗುಣಾವಗುಣಗಳ ವಿಮರ್ಶೆಮಾಡುವ ಮೊದಲು ನಮ್ಮ ಹೃದಯ. ನನ್ನು ಪರೀಕ್ಷಿಸಿದರೆ, ನಮ್ಮಲ್ಲಿಯೇ ಮಾನವನ ಎಲ್ಲ ತರದ ದುರ್ಗುಣ. ಗಳು ಇರುವುದು ಕಂಡುಬರುವುದು. ನಿಷ್ಪಕ್ಷಪಾತಿಯಾಗಿ ತನ್ನ ಆತ್ಮ. ಪರೀಕ್ಷೆಮಾಡಿದಾಗಲೇ ಮನುಷ್ಯ ನಿಜವಾದ ಜ್ಞಾನಿಯಾಗುವನು.."

ಚಪ್ಪಾಳೆಯ ಸದ್ದಿನಿಂದ ಮಂಟಪ ಅಲುಗುತ್ತಿರುವಂತೆಕಂಡಿತು. ತಮ್ಮ ಉಜ್ವಲ ಲೇಖನಗಳಿಂದ ಜನತೆಯನ್ನು ಸನ್ಮಾರ್ಗಕ್ಕೆ ಹಚ್ಚುವ ಸಾಮರ್ಥ್ಯ ಪಡೆದಿದ್ದರೂ, ಅವರ ಈ ನಿರಹಂಕಾರದ ನುಡಿಗಳನ್ನು ಕೇಳಿ ಜನರಿಗೆ ಅವರಲ್ಲಿದ್ದ ಅದರ ಇಮ್ಮಡಿಸಿತು. ಆದರೆ ಅವರಿಗೆ ಮಾತ್ರ ಇನ್ನು ಎಲ್ಲಿರೆದುರು ನಿಲ್ಲುವುದು ಸಾಧ್ಯವಾಗಲಿಲ್ಲ. ಆದಷ್ಟು ಬೇಗ ಜನಗಳ ಕಣ್ಣಿನಿಂದ ಮರೆಯಾಗಬೇಕೆಂದು, ಯಾವಾಗಲೋ ತಮ್ಮ ಸ್ಥಾನದಿಂದೆದ್ದು ಹೊರಗೆ ಹೋಗಿಬಿಟ್ಟಿದ್ದರು.

" ಹೊರಗೆ ಬಂದಾಗ ಅವರಿಗೆ ಕೊಂಚ ಸಮಾಧಾನವೆನಿಸಿತು. ಆದರೆ ತಾವು ಎಲ್ಲಿಗೆ ಹೋಗುತ್ತಿರುವೆವೆಂಬ ಪರಿವೆಯೇ ಇದ್ದಂತೆ ಕಾಣ. ಲಿಲ್ಲ. ಕಾಲುಗಳು ಮಾತ್ರ ನಿರುಪಾಯವಾಗಿ ಎಳೆದೊಯ್ಯುತ್ತಿದ್ದುವು. ಕಾದು ಭಾಷಣಕ್ಕಾಗಿ ಇಲ್ಲಿ ಆಗಮಿಸಿದಾಗ ತಮ್ಮ ಸ್ಥಿತಿ ಹೀಗಾಗ ಬಹುದೆಂದು ಅವರಿಗೆ ಕನಸಿನಲ್ಲಿಯೂ ಎನಿಸಿರಲಿಲ್ಲ. ಹೂಸಿಗೆ ಪೃಂಗಗಳು ಮುತ್ತುವಂತೆ ಬಂದಾಗಿನಿಂದ ಜನ ಅವರ ಸುತ್ತಲೂ ಸೇರಿದ್ದರು; ಆದರೆ ಅವರ ಮನಸ್ಸು ಯಾವಾಗ ವಿಕಾಂತವನ್ನು ಹಾಣುವೆನೋ ಎಂದು ತವಕಿಸುತ್ತಿತ್ತು.

ಸಮುದ್ರದ ದಂಡೆಗೆ ಬಂದಾಗ ಮನಸ್ಸು ಕೊಂಚ ಶಾಂತ ವಾಯಿತು. ತಂಗಾಳಿಯಿಂದ ಮತ್ತವಾದ ತೆಂಗಿನಗರಿಗಳು ಇಂದವರಿಗೆಲ್ಲ ಸ್ವಾಗತ ನೀಡುವಂತೆ ಅಲ್ಲಾಡುತ್ತಿದ್ದುವು. ಒಂದರ ಹಿಂದೊಂದು ಬಂದು ದಂಡೆಗೆ ಅಪ್ಪಳಿಸುತ್ತಿದ್ದ ತೆರೆಗಳನ್ನು ನೋಡುತ್ತ ನೋಡುತ್ತ ಅವರ ಮನಸ್ಸು ಅಂತರ್ಮುಖಿಯಾಯಿತು. ಅವರು ನೆನಿಸಿತು--ಮನುಷ್ಯನ ಮನಸ್ಸಿನ ಕೀರ್ತಿತೃಷ್ಣೆಯಂತೆ ಒಂದು ತೆರೆ ಇನ್ನೊಂದಕ್ಕಿಂತ ಮುಂದೆ ಹೋಗಲು ಬಯಸುತ್ತಿದೆ. ಇದರ ಗುರಿ ಎಲ್ಲಿದೆಯೋ ಬಲ್ಲವರಾರು ? ಅನಂತಕಾಲದಿಂದ ತನ್ನ ಗುರಿಗಾಗಿ ಹೋಗುತ್ತಿದೆ. ಅನಂತಕಾಲದಿಂದ ಅಪಯಶವೇ ಅದರ ಪಾಲಿಗೆ ಬಂದಿದೆ. ಆದರೆ ಅನಂತಕಾಲದಿಂದ ತನ್ನ ಪ್ರಯತ್ನವನ್ನು ಕೊಂಚವೂ ನಿಲ್ಲಿಸಿಮಾಡಿಲ್ಲ. ಇದಕ್ಕೂ ನೋವು, ತಾಪ, ನಿರಾಶೆಗಳಿಲ್ಲವೇ ? ಎಲ್ಲವೂ ಇವೆ. ಇದರ ಹೃದಯದಲ್ಲಿ ಸತತ ವಡವಾಗ್ನಿಯು ಧಗ ಧಗಿಸುತ್ತಿದೆ. ದುರ್ಗುಣಗಳು ಮನಸ್ಸನ್ನು ಪೀಡಿಸುವಂತೆ, ಇದರಲ್ಲಿಯ ಜಲಚರಗಳು ಇದಕ್ಕೆ ಪೀಡೆಕೊಡುತ್ತವೆ ಮನುಷ್ಯನ ಮೇಲೆ ಆಪತ್ತುಗಳು ವೃಷ್ಟಿಗರೆದಂತೆ ಇವರ ಮೇಲೆಯೂ ಪ್ರತಿವರ್ಷ ಜಲ. ವೃಷ್ಟಿಯಾಗುತ್ತದೆ. ವರ್ಷಾಧಾರೆ, ಝಂಝಾವಾತ ಇವುಗಳಿಂದ ಕ್ಷಣಕಾಲ ಕ್ರೋಧಗೊಂಡು ಅಬ್ಬರಿಸಿದರೂ,ಮರುಕ್ಷಣವೇ ಸಂಯಮ. ದಿಂದ ತನ್ನನ್ನು ಸಾವರಿಸಿಕೊಳ್ಳುತ್ತದೆ. ಬಡವರ ಜನರಿಗೆಲ್ಲ ಚಿರಾ. ವಾದದ ಪಾಠ ಕಲಿಸುತ್ತದೆ. ಜಗತ್ತಿನ ಕಲ್ಯಾಣಕ್ಕಾಗಿ ಹೆಣಗುವ ಮಹಾತ್ಮನಂತೆ ತನ್ನ ನೋವು, ತಾಪ, ನಿರಾಶೆ ಎಲ್ಲವನ್ನೂ ಅಡಗಿಸಿಟ್ಟುಕೊಂಡು ಪುನಃ ಎಂದಿನಂತೆ ಶಾಂತಿಯ ನಗು ಬೀರುತ್ತದೆ. ಎಂಥ ಜನುತ್ಕಾರ !

ಬಾಬುಗಳು ಸುತ್ತಲೂ ನೋಡಿದರು. ಮಲಗಿದ ಮಗುವಿಗೆ ತಾಯಿ ನಿಧಾನವಾಗಿ ಹೊದ್ದಿಕೆ ಹೊದ್ದಿಸುವಂತೆ ಕತ್ತಲೆಯಾಗು. ತ್ತಿತ್ತು. ಎಲ್ಲಿಂದಲೋ ಎಂಟುಗಂಟೆ ಹೊಡೆಯಿತು. ತಾವು ಬಂದು ಒಂದು ಗಂಟೆಯಾಯಿತೆಂದು ತಿಳಿದಾಗ ಅವರಿಗೆ ಆಶ್ಚರ್ಯವಾಯಿತು. ಜನರೆಲ್ಲ ನಗುತ್ತ ಮಾತಾಡುತ್ತ ಮನೆಗೆ ಹೋಗುತ್ತಿದ್ದರು ಅಸಂ. ಭವಘಟನೆ ಸಂಭವಿಸಿದಂತೆ ಬೆಚ್ಚಿ ಸುತ್ತಲೂ ನೋಡಿದರು. ಅವರಿಗೆ ಕೊಂಚ ಸಮಾಧಾನವೆನಿಸಿತು ದೇವರು ಕರುಣಾಳು. ಜಗತ್ತಿನಲ್ಲಿ ಕೆಲವರಾದರೂ ಸುಖಿಗಳಿದ್ದಾರೆ ಹಾಗಾವರೆ. ಎಲ್ಲರೂ ನನ್ನಂತೆಯೇ ಇರುವರೆಂದು ನನ್ನ ಭ್ರಮೆಯಾಗಿತ್ತು. ಆದರೆ ಪುನಃ ಸಮುದ್ರವನ್ನು ನೋಡಿದಾಗ ವಿಚಾರದ ಗತಿ ಬದಲಿಸಿತು—ಛೇ ! ಇತ್ತೀಚೆಗೆ ಅದೇಕೋ ನನ್ನ ಬುದ್ಧಿ ಮಂಕಾಗಿದೆ ಎಷ್ಟೋ ಜನ ನನ್ನಂತೆ ಕೇವಲ ಸುಖಿಯಾಗಿರುವೆನೆಂದು ಶೋರಿಸುತ್ತಿರಬಹುದು. ನಾನು ಈ ನಗೆ ಆನಂದಸೂಚಕವೆಂದು ತಿಳಿದಿದ್ದೆ. ಆದರೆ ಈ ನಗೆಯಲ್ಲಿ ಎಷ್ಟು ನೋವು, ನಿರಾಶೆ, ವ್ಯಂಗ್ಯ, ಪರಪೀಡನೆಯ ತೃಪ್ತಿ, ಧನತುದ ನಿರಾಲೋಚನೆ ಅಡಗಿರಬಹುದು! ಅತ್ಯಾನಂದದಿಂದ ಕಣ್ಣೀರುದುರಿ. ಸುವುದೂ ಅತಿ ದುಃಖದಿಂದ ನಗುವುದೂ ಮಾನವನ ಸಹಜ ಗುಣ. ಗಳೇಂದು ತಿಳಿದೂ ನೋಪ ಹೋಗಲ್ಪಿದ್ದೇನೆ.

ಆಗ ನಾನೇಕೆ ಹಾಗೆ ಮಾತಾಡಿದೆ? ಛೇ! ಇನ್ನೂ ನನ್ನ ಬುದ್ಧಿ ಹೀಗೆ ಮಣ್ಣು ತಿನ್ನುತ್ತಿದೆಯಲ್ಲ ! ಸಹಾನುಭೂತಿ, ದಯೆ. ಗಳಿಲ್ಲದ ನನ್ನನ್ನು ಯಾರು ಸಾಹಿತಿ ಎನ್ನುವರೋ ಕಾಣೆ. ಯಾವ ಮೂರ್ಸುಶಿರೋಮಣಿ ನನ್ನನ್ನು ಸಾಹಿತ್ಯಸಮ್ರಾಟನ ಪದವಿಗೇರಿ. ಸಿದನೋ ! ಯಾವ ಮಾನಹೀನನು ನನ್ನನ್ನು ' ಗೌರವನಿಧಿ ' ಎಂದು ಕರೆದನೋ! ಯಾವ ಜಿಪುಣ ನನಗೆ ' ಉದಾರಚರಿತ ' ನೆಂಬ ಬಿರುದು ದಯೆಪಾಲಿಸಿದನೋ ! ಅಬ್ಬ. ನಾನೆಂಥ ನೀಚ ! ತಿಳಿದು ತಿಳಿದೂ ಅಜ್ಞಜನತೆಯ ವನಸ್ಸನ್ನು ಸೂರೆಗೊಳ್ಳುತ್ತಿರುವೆನಲ್ಲ ! ನನ್ನನ್ನು ಮುಕ್ತಕಂಠದಿಂದ ಹೊಗಳಿ ಸಾಮಾನ್ಯರಿಗಿಂತ ಉನ್ನತಮಟ್ಟದವ ನೆಂದು ತಿಳಿಯುವ, ಅವರು ಒಮ್ಮೆ ನನ್ನ ಹೃದಯದಲ್ಲಿ ಹಣಕಿ ನೋಡಿದರೆ ಅಂಜಿ ತಿರಸ್ಕಾರದಿಂದ ನನ್ನ ನೆರಳಿಗಾದರೂ ಹಾಯಲಿ. ಕ್ಕಿಲ್ಲ. ಬೇಡ. ಯಾರೂ ನನ್ನ ದುಃಖದಲ್ಲಿ ಪಾಲುಗಾರರಾಗುವುದು

ಬೇಡ! ನನ್ನ ಜಾಪವೇ ನನ್ನನ್ನು ಪಡ್ಡಗೊಳಿಸಬೇಕು. ಕೊರಗಿ ಕೊರಗಿ ಕೊನೆಗಾಲಕ್ಕೆ ಎಲ್ಲರೂ ತಿರಸ್ಕಾರದಿಂದ ಮುಖ ತಿರುವಿದಾಗ ಮೃತ್ಯುವಿನ ಪಾಶ ನನ್ನನ್ನಾವರಿಸಬೇಕು ಜನರೆಲ್ಲ 'ನಿನ್ನ ಮರಣದಿಂದ ಬಹಳ ಸಂತೋಷವಾಗಿದೆ. ಭೂಭಾರ ತೊಲಗಿತು' ಎಂದೆನ್ನಬೇಕು....."

ಬಾಬುಗಳು ಸುತ್ತಲೂ ನೋಡಿದರು. ಜನರೆಲ್ಲ ಹೊರಟು ಹೋಗಿದ್ದರು. ನಸುಗತ್ತಲೆಯಲ್ಲಿ ದೂರ ಯಾರದೋ ಆಕೃತಿ ಕಂಡಿತು. ಕಣ್ಣಿಜ್ಜಿ ನೋಡಿದರು. ನಿಜ, ಯಾರೋ ತೆರಿಗಳ ಸಂಗಡ ಆಟವಾಡುತ್ತ ನೀರಿನಲ್ಲಿ ಹೋಗುತ್ತಿದ್ದರು. ಇವರ ಎದೆ ಧಸ್ಸೆಂದಿತು. ಎದ್ದು ಸಂಕಟಪಟ್ಟು ಓಡಿದರು; ಆದರೆ ಹೋದಷ್ಟೂ ಆ ಮೂರ್ತಿ ಹತ್ತಿರ ಬರದೆ ದೂರ ದೂರ ಹೋಗುತ್ತಿತ್ತು. ಓಡಿ ಓಡಿ ಸಾಕಾಗಿ ಮರಳಿನಲ್ಲಿಯೇ ಕುಸಿದು ಕುಳಿತರು. ಆದರೆ ಆ ಮೂರ್ತಿ ಮಾತ್ರ ಮುಂಚಿನಂತೆಯೇ ಹೊಡ್ಡ ದೊಡ್ಡ ತೆರಿಗಳನ್ನು ಲೀಲೆಯಿಂದ ಎದುರಿಸುತ್ತ ಆಟವಾಡುತ್ತಿತ್ತು. ಅದನ್ನು ನೋಡುತ್ತಿದ್ದಂತೆಯೇ ಅವರಿಗೆ ಯಾರೋ ಪರದೆಯನ್ನೆತ್ತಿ ಭೂತಕಾಲದ ಚಿತ್ರಗಳನ್ನು ತೋರಿಸಿದಂತೆ ಭಾಸವಾಯಿತು.....

ನಿಜ, ಗೋಪುವೇ ಅವನು! ಎಂಥ ಆಶ್ಚರ್ಯ! ನನ್ನ ಮನಸ್ಸಿಗೆ ಕೊಂಚ ದುಃಖವಾದರೆ ಈಗಲೂ ಅವನಿಗೆ ಸಹಿಸುವದಿಲ್ಲವಲ್ಲ! ಆದರೆ ನಾನು ಮಾತ್ರ ಒರಿಗೆಲ್ಲ ಪಾಠ ಕಲಿಸಲು ಹೊರಟಿದ್ದೇನೆ. ಆ ದಿನದ ಅವನ ಕರುಣಮುಖವನ್ನು ನೋಡಿಯೂ ನನ್ನ ಮನಸ್ಸು ವಿಚಲಿತವಾಗಲಿಲ್ಲ. ಯಾವ ಪ್ರಸಿದ್ಧ ಚಿತ್ರಕಾರನಿಗೂ ಅವನ ಆಗಿನ ಮುಖಭಾವ ಮೂಡಿಸಲು ಸಾಧ್ಯವಾಗಲಿಕ್ಕಿಲ್ಲ. ಹದಿನಾಲ್ಕುವರ್ಷದ ಅಶಿಕ್ಷಿತ, ಅಸಂಸ್ಕೃತ ಹುಡುಗನ ಹೃದಯ ಎಷ್ಟು ವಿಶಾಲವಾಗಿತ್ತು! ಲೀಲೆಯಿಂದ ಚಂಡನ್ನು ಒಗೆಯುವಂತೆ ನಗುನಗುತ್ತ ತನ್ನ ಪ್ರಾಣವನ್ನು ಈಡಾಡುತ್ತ ಅವನು ಹೇಳಿದ: "ಇದೇನು ಅಣ್ಣಾ, ನೀವೂ ಎಲ್ಲರಂತೆಯೇ ಶೋಕಿಸುತ್ತೀರಿ. ಛೇ! ನನಗೆಷ್ಟು ಸಂತೋಷವಾಗಿದೆಯೆಂದು ನಿಮಗೆ ತಿಳಿದಿಲ್ಲವೆ ಹೀಗೆ ಮಾತುಬಿಡಿರಿ. ಅನಾಥನಂತೆ ಬೀದಿಯ ಕೆಣಮಾಗಬೇಕಾಗಿದ್ದವನನ್ನು ಬದುಕಿಸಿದಿರಿ. ಅಂದಿನಿಂದಲೇ ಈ ಪ್ರಾಣ ನಿಮ್ಮದು. ಇಂದು ನಿಮ್ಮ ಸೇವೆಗಾಗಿಯೇ ಖರ್ಚಾಗುತ್ತಿದೆ. ಇದಕ್ಕಿಂತ ಹೆಚ್ಚಿಗೆ ನನಗೇನು ಬೇಕು? ನನಗೆ ಗೊತ್ತಿದೆ—ನೀವೆಂದೂ ಮನಸ್ಸಿನಿಂದ ನನ್ನ ತಿರಸ್ಕಾರಮಾಡಲಿಲ್ಲ ಬಂಧುಬಳಗಗಳಿದ್ದರೂ ಅನಾಥನಂತೆ ಬೆಳೆದ ನನಗೆ ಬಂಧುಪ್ರೇಮದ ಪಾಠವನ್ನು ಕಲಿಸಿದಿರಿ. ನನ್ನಿಂದ ನಿಮ್ಮ ಘನತೆಗೆ ಕುಂದು ಬಂದಿರಬಹುದು. ತಮ್ಮಂಥವರ ನೆರಳಿನಲ್ಲಿರಲು ಕೂಡ ನಾನು ಯೋಗ್ಯನಲ್ಲ. ಆದರೆ ಏನಾಶ್ಚರ್ಯ! ನೀವು ಎದುರಿನಲ್ಲಿದ್ದಾಗ, ತಾಯಿಯ ತೊಡೆಯ ಮೇಲೆ ಮಲಗಿದಂತೆ ಸಮಾಧಾನವೆನಿಸಿದೆ. ಈಗ ನನಗೆಷ್ಟು ಆನಂದವಾಗಿದೆ ಗೊತ್ತೆ? ಇಷ್ಟು ದಿನ ಬದುಕಿ ಸತ್ತಂತಾಗಿದ್ದೆ, ಇಂದು ಸತ್ತು ಬದುಕಿದಂತಾಗುತ್ತೇನೆ! ಇನ್ನು ಈ ಜಗತ್ತಿನ ಮೇಲುಕೀಳು ಭಾವನೆಗಳಿಲ್ಲ. ಭವಿಷ್ಯದ ಚಿಂತೆಯಿಲ್ಲ. ವ್ಯಂಗ್ಯ ಪರಿಹಾಸವಿಲ್ಲ. ಕುಟ್ಸಿತ ನುಡಿಗಳಿಲ್ಲ. ತಿರಸ್ಕಾರದ ಉಪೇಕ್ಷೆಯಿಲ್ಲ. ಆದರೆ ಅಣ್ಣಾ, ನಿಮ್ಮಂಥವರಿರುವವರೆಗೆ ಹೀಗೆನ್ನಲು ನನಗೆ ಅಧಿಕಾರವಿಲ್ಲ. ನನ್ನಂಥ ಎಷ್ಟು ಕಂಗಾಲರ ಜನ್ಮ ಹೀಗೆಯೇ ನಿಮ್ಮ ಉದಾರಾಶ್ರಯದಿಂದ ಸಾರ್ಥಕವಾಗಿವೆಯೋ ಬಲ್ಲವರಾರು! ಆದರೂ ಮನಸ್ಸಿಗೆ ಏನೋ ಒಂದು ಬಗೆಯ ಕಳವಳವೆನಿಸುತ್ತಿದೆ. ಕೊನೆಗಾಲದಲ್ಲಿ ನನಗೆ ಯಾರೂ ಇಲ್ಲ! ಆದರೇನು? ಎಲ್ಲರಿಗಿಂತ ತಾನೇ ನನಗೆ ಮೇಲು. ಇನ್ನು ಒಂದೇ ಮಾತು ಹೇಳುತ್ತೇನೆ. ನನ್ನನ್ನು ಮರೆಯಬೇಡಿ. ತಮ್ಮಂಥವರ ಉದಾರಮನಸ್ಸಿನ ಒಂದು ಮೂಲೆಯಲ್ಲಿ ಸ್ಥಳ ಸಿಕ್ಕರೆ ಸಾಕು....."

ಬಾಬುಗಳ ಕಣ್ಣಿಂದ ನೀರು ಧಾರೆಗಟ್ಟಿ ಹರಿಯುತ್ತಿತ್ತು. ಸುತ್ತಲಿನ ಪರಿವೆಯಿಲ್ಲದೆ ಬಿಕ್ಕಿ ಬಿಕ್ಕಿ ಅಳತೊಡಗಿದರು. ಹದಿನಾಲ್ಕು ವರ್ಷದ ಪುಟ್ಟಗೋಪುವಿನ ಮೂರ್ತಿ ಎದುರಿಗೆ ನಿಂತಂತಾಯಿತು. ಆ ತೇಜಸ್ವಿ ಕಣ್ಣುಗಳು ಅಪಾರ ಕೃತಜ್ಞತೆಯಿಂದ ಅವರನ್ನು ದಿಟ್ಟಿಸುತ್ತಿದ್ದುವು ಅರ್ಧತಾಸಿನನಂತರ ಅವರ ಹೃದಯ ಕೊಂಚ ಶಾಂತವಾಯಿತು ತಮ್ಮ ಮನಸ್ಸಿನಂತೆಯೇ ಸುತ್ತಲೂ ಅಂಧಕಾರ ಕವಿದಂತೆ ಕಂಡಿತು. ಪುನಃ ಗೋಪು ನಗುತ್ತ ಬಂದಂತೆನಿಸಿತು.....

ಬಳಿಯಲ್ಲಿಯೇ ಸಾಗರವಿದ್ದೂ ತೃಷಿತನಂತಾಗಿದೆ ನನ್ನ ಸ್ಥಿತಿ! ಜ್ಞಾನ ಹೆಚ್ಚಾದಷ್ಟೂ ಚಿಂತೆ ಹೆಚ್ಚುತ್ತವೆಯೋ ಏನೋ! ಕೈಯಲ್ಲಿಯ ರತ್ನವನ್ನು ಸಮುದ್ರದಲ್ಲಿ ಸೆದ ಮೇಲೆ ಹುಡುಕಿದಂತಾಯಿತು. ಎಂಥ ಮೂರ್ಖ ನಾನು! ಆ ಹುಡುಗನಿಗಿರುವ ಬುದ್ಧಿಯು ಒಂದು ಅಂಶ ಕೂಡ ನನಗಿಲ್ಲ ಎಂಥ ಅಲಭ್ಯಲಾಭವಾಗಿತ್ತು ಗೋಪುವಿನ ಭೆಟ್ಟಿಯಾದ ಘಟನೆ ಕೂಡ ಎಷ್ಟು ಅಕಲ್ಪಿತ! ಅಂದೂ ಹೀಗೆಯೇ ಕುಳಿತಿದ್ದೆ. ಮನಸ್ಸಿನಲ್ಲಿ ಒಂದು ಕತೆಯ ವಿಚಾರ ಸುಳಿದಿತ್ತು. ಆದರೆ ಅದನ್ನು ಹೇಗೆ ಮುಂದುವರಿಸಬೇಕೆಂದು ತಿಳಿಯದೆ ಯೋಚಿಸುತ್ತಿದ್ದೆ. ಆದರೆ ನಿಜವಾಗಿ ಆಗ ನಾನು ಬರೆಯುತ್ತಿದ್ದುದು ಸಾಹಿತ್ಯವಾಗಿರಲಿಲ್ಲ. ಸಾಹಿತ್ಯದ ಅನುಕರಣೆ ಮಾತ್ರವಾಗಿತ್ತು. ನನ್ನ ರಚನೆಗಳನ್ನು ಜನ ಮೆಚ್ಚುತ್ತಿದ್ದರೂ, ನನ್ನ ಕತೆಗಳಲ್ಲಿ ಪಾತ್ರರಚನೆ ಸಜೀವವಾಗಿಲ್ಲವೆಂದು ವಿಮರ್ಶಕರು ಅಭಿಪ್ರಾಯಪಡುತ್ತಿದ್ದರು. ಆಗ ನಾನು ನನ್ನ ಸುತ್ತುಮುತ್ತಲಿನ ಜನಜೀವನವನ್ನು ನೋಡದೆ, ಕೇವಲ ಕಲ್ಪನಾರಾಜ್ಯದಲ್ಲಿಯೇ ವಿಹರಿಸುತ್ತಿದ್ದೆ. ಆದರೆ ಅಂದಿನ ಘಟನೆಯೇ ನನ್ನನ್ನು ಎಚ್ಚರಗೊಳಿಸಿತು. ಆಗಲೂ ಹೀಗೆಯೇ ಯಾರೋ ಸಮುದ್ರದ ತೆರಿಗಳ ಗುಂಟ ಆಟವಾಡುತ್ತಿದ್ದಂತೆ ನಟಿಸಿ ನೀರಿನಲ್ಲಿ ಹೋಗುತ್ತಿದ್ದುದು ಕಂಡಿತು. ಹೀಗೆಯೇ ಓಡಿಹೋಗಿ ನೋಡಿದಾಗ, ಹುಡುಗನೊಬ್ಬ ಬೆದರುಗಣ್ಣುಗಳಿಂದ ನೋಡುತ್ತಿದ್ದ. ತನ್ನ ಯೋಜನೆ ಅಸಫಲವಾಯಿತೆಂಬ ಅಸಂತುಷ್ಟಿಯ ಜತೆಗೆ ಕೋಪವೂ ಬೆರೆತಂತೆ ಅವನ ಮುಖಭಾವದಿಂದ ವ್ಯಕ್ತವಾಗುತ್ತಿತ್ತು. ಆದರೆ ನಾನು ಕುತೂಹಲದಿಂದ ಸಹಜವಾಗಿ ಮಾತಾಡಿಸಿದಾಗ, ಅವನ ಕಣ್ಣುಗಳಿಂದ ನೀರು ಹರಿಯುತ್ತಿತ್ತು. ಬಿಕ್ಕಿ ಬಿಕ್ಕಿ ಅಳತೊಡಗಿದ. ಅಬ್ಬಾ ಅವನ ಸ್ಥಿತಿಯಲ್ಲಿದ್ದವರಾರಾದರೂ ಅವನಂತೆಯೇ ಮಾಡುತ್ತಿದ್ದರು. ಅದೆಂಥ ಕರುಣಕತೆ! ತಂದೆ ಕಟ್ಟಿಗೆ ತರಲು ಅಡವಿಗೆ ಹೋದಾಗ ಮರದ ಮೇಲಿಂದ ಬಿದ್ದು ಮರಣಹೊಂದಿದರು. ತಾಯಿ ದುಃಖದಿಂದ

ಎರಡೇ ತಿಂಗಳಲ್ಲಿ ಹೊರಟುಬಿಟ್ಟಳು. ಅಣ್ಣನೂಬ್ಬನ ಪತ್ತಿಯೇ ಇಲ್ಲ ಇವನ ಉಡುಪು ಕಂಡು ಭಿಕ್ಷುಕನೆಂದು ತಿಳಿದು ಯಾರೂ ಕೆಲಸಕ್ಕಿಟ್ಟುಕೊಳ್ಳಲು ಒಪ್ಪಲಿಲ್ಲ. ಕೊನೆಗೆ ನಿರಾಶೆಯಿಂದ ಆತ್ಮ-ಹತ್ಯೆಗಾಗಿ ಅಲ್ಲಿಗೆ ಬಂದಿದ್ದ. ಅದೇಕೋ ಅವನನ್ನು ಕಂಡು ನನಗೆ ಸಹಾನುಭೂತಿಯೆನಿಸಿತು. ನಮ್ಮ ಮನೆಗೆ ಬರಹೇಳಿದಾಗ ಅವನಿಗೆ ಎಷ್ಟು ಆನಂದವಾಯಿತು! ಅವನ ಒಂದೊಂದು ಗುಣವನ್ನು ನೆನಸಿ-ದರೆ, ಮನಸ್ಸು ಮಂಕಾಗುತ್ತದೆ. ಎಷ್ಟು ಕೃತಜ್ಞತೆ ಅವನಿಗೆ! ನನ್ನ ಜೀವನದಲ್ಲಿ ಯಾರೂ ಹಾಗೆ ನನ್ನ ಮೇಲೆ ಪ್ರೀತಿ ವಿಶ್ವಾಸಗಳ-ನ್ನಿಡಲಿಲ್ಲ ನೊದಮೊದಲು ಚಿಕ್ಕ-ಪುಟ್ಟ ಕೆಲಸ ಮಾಡುತ್ತ ಕೊನೆಗೆ ಮನೆಗೆಲಸಗಳನ್ನೆಲ್ಲ ತಾನೇ ವಹಿಸಿಕೊಂಡ. ಆದರೆ ಅವನಿಗೆ ಕಲಿಯಬೇಕೆಂದು ಮನಸ್ಸಿತ್ತೆಂದು ಕಾಣುತ್ತದೆ. ಬಿಡುವು ದೊರೆ-ತಾಗಲೆಲ್ಲ ಓದುವ ಪ್ರಯತ್ನ ಮಾಡುತ್ತಿದ್ದ.

ಆದರೆ ಬಂದ ಆರು ತಿಂಗಳಲ್ಲಿಯೇ ಅವನಿಗೆ ಹೋಗುವ ಪ್ರಸಂಗವೊದಗಿತು. ಅದಕ್ಕೆ ನಾನೇ ಕಾರಣನಾದೆ. ಅಣ್ಣನಳ್ಳಿ-ನಾದರೆ ಅದರಲ್ಲಿ ಅವನ ತಪ್ಪಿಲ್ಲವೆಂಬ ಮಾತು ಕೂಡ ನನಗೆ ತಿಳಿಯು-ಲಿಲ್ಲ. ಮಿತ್ರರ ಮಾತುಗಳು ನನ್ನನ್ನು ವೇಷಗೊಳಿಸಿದುವು. ನನಗೆ ಕೇವಲ ನನ್ನ ಘನತೆಯನ್ನುಳಿಸುವ ಚಿಂತೆಯಾಗಿತ್ತು ಆದರೆ ಗೋಪುವಿನ ಪ್ರಾಣ ಅದರ ಲಕ್ಷಪಟ್ಟ ಬೆಲೆ ಯುಳ್ಳದ್ದೆಂದು ನನಗೆ ತಿಳಿಯಲಿಲ್ಲ. 'ಸತ್ತ ಎಮ್ಮೆಗೆ ಹತ್ತು ಸೇರು ಹಾಲು' ಎಂಬಾತಾ-ತಾಯಿತು ನನ್ನ ವಿಚಾರ. ನಾನು ಬುದ್ಧಿವಂತನೆಂದು ನನಗೆ ಬಹಳ ಹೆಮ್ಮೆಯಿತ್ತು. ಆದರೆ ಗೋಪುವಿನಂಥ ತರಿಕ್ಷಿತ ಹುಡುಗನೊಡನೆ ನನ್ನ ತುಲನೆ ಮಾಡಿದಾಗ, ನನ್ನ ಜ್ಞಾನದ ವಿಷಯವಾಗಿ ಕನಿಕರ-ವೆನಿಸುತ್ತದೆ. ಕಳವಿನ ಆಪಾದನೆಯಿಂದಾಗಿ ತನ್ನ ಅಣ್ಣನಿಗೆ ಒಂದ ವರ್ಷ ತಿಕ್ಷೆಯಾಯಿತೆಂದು ತಿಳಿದಾಗ, ಗೋಪುವಿನ ಮುಖ ಹೇಗೆ ಅಸಾಧಾ-ಯಂತೆ ನಿಸ್ತೇಜವಾಗಿತ್ತು. ಆದರೆ ಅವಳನ್ನು ಸಮಾಧಾನಗೊಳಿಸುವ ಬದಲು ಕಠೋರ ಮಾತುಗಳಿಂದ ನೋಯಿಸಿದೆ. ಗೆಳೆಯರ ವ್ಯಂಗ್ಯ ಮಾತುಗಳು ನನ್ನನ್ನು ಅವಮಾನಗೊಳಿಸಿದ್ದುವು. ಆ ಕೋಪದಲ್ಲಿಯೇ ಗೋಪುವಿಗೆ ಮನೆಬಿಟ್ಟು ಹೊರಡಲು ಹೇಳಿದೆ. ನನ್ನ ಮಾತಿನಿಂದ ಅವನಿಗೆಷ್ಟು ಆಘಾತವಾಯಿತು! ತಾನು ನಿಂತುದು ಹೂವಿನ ಮೇಲಲ್ಲದೆ ಹಾವಿನ ಮೇಲೆ—ಎಂಬುದು ಆಗಲೇ ಅವನಿಗೆ ತಿಳಿಯಿತ್ತು. ಆತ್ಮಹತ್ಯೆಗಾಗಿ ನಿದ್ಧನಾದಾಗ ಕೂಡ ಅವನ ಮುಖದ ಮೇಲೆ ಹಾಗೆ ವಿಷಾದದ ಛಾಯೆ ಇರಲಿಲ್ಲ. ನನ್ನ ಮಾತನ್ನು ಕೇಳಿದೊಡನೆ ನಿರಾಶೆಯಿಂದ ಕಾಲುಹಿಡಿದು ಅಳುತ್ತ ಬೇಡಿಕೊಂಡ. ಆದರೆ ಅವನ ಮೂಕನೋವಿನಿಂದ ನನ್ನ ಪಾಷಾಣ ಹೃದಯ ಕರಗಲಿಲ್ಲ. ಅಂದು ಅವನನ್ನು ರಕ್ಷಿಸಿದ ಕೈಯೇ ಇಂದು ಅವನನ್ನು ಮನೆಯ ಹೊರಗೆ ತಳ್ಳಿತು. ನನ್ನಿಂದ ಒದೆಯಿಸಿಕೊಂಡಾಗ ಹಣೆಗೆ ಗಾಯವಾದರೂ ಅವನ ಮುಖಭಾವ ಕೊಂಚವೂ ಬದಲಾಗಲಿಲ್ಲ. ಕರು ತಾಯಿ-ಯನ್ನು ನಿಂತು ನಿಂತು ದಿಟ್ಟಿಸುವಂತೆ, ಮೂಕನೋಟದಿಂದ ನೋಡುತ್ತ ಹೊರಟುಬಿಟ್ಟ.....

ಬಾಲುಗಳ ಕಣ್ಣೀರು ತಡೆದರೂ ತಡೆಯದೆ ಧಾರೆಗಟ್ಟಿ ಪರಿ-ಯಿತು. ಒರೆಸಿಕೊಳ್ಳಲೂ ಅವಂಗೆ ಮನಸ್ಸಾಗಲಿಲ್ಲ. ಶಕ್ತಿಯಿಲ್ಲದಂತೆ ಸುಸ್ತಾಗಿ ಪುನಃ ಸ್ವಪ್ನದರ್ಶನದಲ್ಲಿ ತಲ್ಲೀನರಾದರು.....

ಅವನು ಹೋದ ದಿನವೇ ನಾನಂತೂ ಎಲ್ಲ ಮರೆತು ಪುನಃ ನೊದಲಿನಂತಾದೆ. ಆದರೆ ಅವನು ನನ್ನನ್ನು ಮರೆತಿರಲಿಲ್ಲವೆಂದು ಅಂದಿನ ಅವನ ವರ್ತನೆಯಿಂದ ತಿಳಿಯುತ್ತಿತ್ತು. ನನಗೆ ಕಾಫಿಲೆಯಾದ ಸುದ್ದಿ ತಿಳಿದು ಎಷ್ಟೊ ದಿನದಿಂದ ಓಡಿಬಂದ; ಅವನ ಆ ಸೊರಗಿದ ಮೈಯನ್ನು ಕಂಡಾಗ ಗುರುತಿಸಲಾಗಲಿಲ್ಲ. ಕೇಳಿದಾಗ ಎಲ್ಲವನ್ನೂ ಹೇಳುವಂತೆ ನಕ್ಕುಬಿಟ್ಟ. ಬಂಧುಬಳಗ, ಮಿತ್ರರಿಲ್ಲರಿಗಿಂತ ಹೆಚ್ಚಾಗಿ ಉಪಚರಿಸಿದ. ಮನೆಯವರೆಲ್ಲ ಪುಕ್ಕಟೆ ಅಳು ಸಿಕ್ಕಿತೆಂದು ಸುಮ್ಮ-ನಾದರು.

ಆದರೆ ಕಾಫಿಲೆ ಕಡಿಮೆಯಾದ್ದರಿಂದ ಅಂದು ನನಗೆ ಚೆನ್ನಾಗಿ ನಿದ್ದೆ ಬಂದಿತ್ತು. ಮಧ್ಯರಾತ್ರಿ ಎಚ್ಚತ್ತಾಗ ಎಂಥ ಭಯಂಕರ ದೃಶ್ಯ ಕಂಡಿತು! ನಿತ್ಯ ಉಪಚರಿಸುವ ಗೋಪು ಅಂದು ಮಲಗಿದ್ದ. ಮನೆಯವರೆಲ್ಲ ಗಾಬರಿಯಿಂದ ನೋಡುತ್ತಿದ್ದರು. ಸೋಮು ಉಪ-ಚರಿಸುತ್ತಿದ್ದ. ದೂರದಲ್ಲಿ ನಾಗರಹಾವೊಂದು ಸತ್ತುಬಿದ್ದಿತ್ತು. ಗೋಪುವಿನ ಮೈ ನೀಲಿಯಾಗಿದ್ದುದನ್ನು ನೋಡಿದಾಗ, ಮುಂದಿನ ಘಟನೆ ಊಹಿಸುವುದು ಕಠಿಣವಾಗಲಿಲ್ಲ ನನ್ನ ರೂಮಿನಲ್ಲಿ ಹಾವು ಪ್ರವೇಶಿಸಿ ಹಾಸಿಗೆಯ ಬಳಿ ಬರತೊಡಗಿದ್ದನ್ನು ಕಂಡು ಗೋಪು, ಅಂಜಿ ಅದನ್ನು ಕೊಲ್ಲುವ ಸಾಹಸ ಮಾಡಿದ್ದ. ಕೋಪಗೊಂಡ ಸರ್ಪ ಅವನನ್ನು ಕಚ್ಚಿದ ಮೇಲೆಯೇ ಪ್ರಾಣ ಬಿಟ್ಟಿತ್ತು. ಆದರೆ ಅವನಿಗೆ ಮಾತ್ರ ಕೊಂಚವೂ ದುಃಖವಾದಂತಿರಲಿಲ್ಲ. ಕೆಲ ಹೊತ್ತಿನಲ್ಲಿಯೇ ಸಾಯುವೆನೆಂದು ತಿಳಿದಿದ್ದರೂ ಎಷ್ಟು ಸಮಾಧಾನದಿಂದ ಮಾತಾ-ಡಿದ: "ಕೊನೆಗಾಲಕ್ಕೆ ನನಗೆ ಯಾರೂ ಇಲ್ಲವೆಂದು ತಿಳಿದಿದ್ದೆ; ಆದರೆ ನೀವಿರುವಾಗ ಏನೂ ದುಃಖವಿಲ್ಲ ನೀವು ಬದುಕಿಸಿದ ಪ್ರಾಣ ನಿಮ್ಮ ಸೇವೆಗೆ ಖರ್ಚಾಗುತ್ತದೆ. ಇದಕ್ಕಿಂತ ಹೆಚ್ಚಿನ ಸೌಭಾಗ್ಯವೇನಿದೆ? ಆದರೆ ಕೊನೆಯ ಮಾತು ಹೇಳುತ್ತೇನೆ. ನನ್ನನ್ನು ಮರೆಯು-ಬೇಡಿ....."

ಬಾಬುಗಳು ಬೆಚ್ಚಿ ಎದುರಿಗೆ ನೋಡಿದರು. ಆಗಿನಿಂದ ಕಾಣು-ತ್ತಿದ್ದ ಮೂರ್ತಿ ಈಗ ಒಮ್ಮೆಲೆ ನೀರಿನಲ್ಲಿ ಹೋಗುತ್ತ ಕಾಣದಾಯಿತು. ಎಲ್ಲಿಂದಲೋ ಪಹತ್ತುಗಂಟೆ ಹೊಡೆಯಿತು. ಸಮುದುಃಖಿ ಸಾಗರ-ದೆದುರು ದುಃಖ ತೋಡಿಕೊಂಡುದಕ್ಕೆ ಕೊಂಚ ಸಮಾಧಾನವಾಗಿತ್ತು. ಎಂದಿನಂತೆಯೇ ಉತ್ಸಾಹದಿಂದ ದಂಡೆಗೆ ಬಂದು ಹೋಗುತ್ತಿದ್ದ. ತೆರೆಗಳು ನಗುನಗುತ್ತ ಹೇಳುತ್ತಿದ್ದುವು. "ವಿಷವನ್ನು ನುಂಗಿ ಅಮೃತ-ವನ್ನು ಹಂಚುವುದು ಮನುಷ್ಯನ ಕರ್ತವ್ಯ. ನನ್ನಂತೆಯೇ ಆಶಾ-ವಾದಿಯಾಗು." ಸುಖಕಾರಕ ಮಂದವಾಯು ಸುಳಿಯುತ್ತ ಸಂದೇಶ ಬೀರುತ್ತಿತ್ತು: "ಎಂಥ ಮುರ್ಖ ನೀನು! ನನ್ನಂತೆ ಆನಂದದಿಂದಿರಲು ಸಾಧ್ಯವಿಲ್ಲವೇ?" ಚಂದ್ರ ತನ್ನ ಶೀತಲ ಕಿರಣಗಳನ್ನು ಎರಚುತ್ತ ರಾಜನಂತೆ ಕುಳಿತು ಪಗಡೆಯಾಡುತ್ತಿದ್ದ. ಶುಭ್ರ ಚಂದ್ರಿಕೆಯಲ್ಲಿ ವಿಂದು ಪವಿತ್ರವಾದ ಕಲ್ಪವೃಕ್ಷಗಳು ಭಕ್ತಿಯಿಂದ ಪರಮಾತ್ಮನಿಗೆ ತಲೆಬಾಗುತ್ತಿದ್ದುವು.

ಸಿರಿಯು ಕೃಪೆ

ಶ್ರೀ. ಗುರುಲಿಂಗ ಕಾಪಸೆ, ಜಮಖಂಡಿ

೧

ಹೆಸರು ಹೆಸರೇ ಹೆಸರು; ಹೆಸರಾದರೇನಂತೆ?
ಸಿರಿಯ ಹೆಸರಿನ ಮುಂದೆ ಎಲ್ಲ ಶೂನ್ಯ?
ಲೋಕ ಪೀಠವನೇರಿ, ಕೀರ್ತಿಕಳಸದ ಮೇಲೆ
ಸಿರಿಯು ನೆರವಿಲ್ಲದಲೆ ಇಹನೆ ಪೂರ್ಣ?

೨

ಎಂಥ ತ್ಯಾಗಿಗು ಒಮ್ಮೆ ಹುಚ್ಚು ಹಿಡಿಸಲು ಶಕ್ತಿ
ಭೋಗ-ಭಾಗ್ಯದ ವಧುವು ಹರಿಣ ಅಕ್ಷಿ-
ನಡಿಗೆ ಝಣ್-ಝಣ್‌ನಾದ ಬೆಳ್ಪುಗೊಳಿಪುದು ಸತ್ಯ
ಮೈಯು ಮರೆವುದು ನಿತ್ಯ ಮನದ ಪಕ್ಷಿ!

೩

ಸಿರಿದೇವಿ ಕೈ ಹಿಡಿಯೆ ಕೊರತೆಯೆನ್ನುವುದಿಲ್ಲ
ಸರ್ವಮಂಗಳವಹುದು ಬಾಳು ತಾನು
ಅವಳೊಲವು ಬಂಗಾರ ಸಿಂಗಾರದಾಗರವು
ಉದಯದರುಣನ ಕಾಂತಿ ಹೊಂಬೆಳಗುವಾನು!

೪

ಸತ್ಯ-ಮಿಥ್ಯದ ಕಟ್ಟು ಸಡಿಲು ವಹಿಸುವ ಜಾಣೆ
ಅವಳ ಜೀವನದರ್ಥ ಇದಕು ಮಿಗಿಲು
"ಇರುವ ದಿನಗಳು ನಾಲ್ಕು ಆಕೆ ಮುಂದಿನ ಎಣಿಕೆ
ಹಾಯಾಗಿ ಇರಬೇಕು ಇರುಳು ಹಗಲು!"

೫

ಮನದ ಆಸೆಯನೆಲ್ಲ ಪೂರ್ಣಮಾಡುವ ದೇವಿ,
'ಕಾಮಧೇನುವೆ' ಅವಳು ಬೇರೆಯೇನು?
ವ್ಯವಸಾಯ, ಪಾಂಡಿತ್ಯ, ರಾಜಕಾರಣವೆಲ್ಲ
ಸಿರಿಯ ಸೂತ್ರದ ಗೊಂಬೆ ಅಲ್ಲವೇನು?

೬

"ಕಾಂಚಾಣದಿಂ ಕಾರ್ಯಸಿದ್ಧಿ" ಎನ್ನುವ ಮಾತು
ಮನುಕುಲೋದ್ಧಾರಕ್ಕೆ ಬೀಜಮಂತ್ರ
ಇದಕು ಮಿಗಿಲಾಗಿನ್ನು ಬೇರಾವುದಿದೆ ಶಾಸ್ತ್ರ?
'ಅರ್ಥಶಾಸ್ತ್ರ' ವದೊ ಚಾಣಕ್ಯತಂತ್ರ

೭

ಸಿರಿದೇವಿಯಾ ಸ್ನೇಹ ಬಯಸದವರಾರುಂಟು
ಅವಳ ಮಾಯಾಪಾಶದಿಂದ ಸ್ವತಂತ್ರ?
ಜಗದಲ್ಲಿ ನಡೆಯುತಿಹ ಹಿರಿ-ಕಿರಿಯ ವಾಜ್ಯಗಳು
ಅವಳ ಲೀಲೆಯ ಮಹಿಮೆ, ನೋಡಿಮಂತ್ರ!

೮

ಎಂದಿನಿಂದಲೊ ದೇವಿ; ಹೂಡಿರುವೆ ಈ ಆಟ!
ಬೇಸರಿಟ್ಟಿದೆ ಜಗದಿ ಮುಗಿಸು ಬೇಗ,
ಪಕ್ಷಪಾತವ ಬಿಟ್ಟು, ಎಲ್ಲರೊಂದನೆ ಬಗೆದು
ಹೊಸದೊಂದು ಆಟವನೆ ಹೂಡು ಈಗ!

ಹಿಂದೀ ಕಥಾಸಾಹಿತ್ಯದಲ್ಲಿ ಹೊಸ ಹಾದಿಗಳು

ಶ್ರೀ ಗುರುನಾಥ ಜೋಶಿ, ಧಾರವಾಡ

卐

ಮಾನ್ಯ ಶ್ರೀ. ಗೋಕಾಕರೇ, ಕಥಾಪ್ರೇಮಿಗಳೇ,

'ಸಖೀ ಮುಂದೇನೇ' ಎಂದು ಮೊದಲಾಗುವ ಹಾಡಿನಲ್ಲಿ ಕವಿವರ್ಯ ಅಂಬಿಕಾತನಯದತ್ತರು ಮಾನವನ ಜೀವನದಲ್ಲಿ ಎಂದಿನಿಂದಲೂ ಬಂದ 'ಮುಂದೇನು?' ಎಂಬ ಅವಿನಾಶಿ ಪ್ರವೃತ್ತಿಯ ಕಡೆಗೆ ಸಂಕೇತವಾಗಿದ್ದಾರೆ. ಈ ಪ್ರವೃತ್ತಿಯ ತೃಪ್ತಿಗಾಗಿಯೇ ಮಾನವನು ಯಾವಾಗಲೂ ಕಥೆಗೆ ಮೊರೆಹೊಕ್ಕಿದ್ದಾನೆ. ಅವನು ಈ ಭೂಮಿಯ ಮೇಲೆ ಬಂದಾಗಿನಿಂದ—ಕತೆಯನ್ನು ಹೇಳುವ ಮತ್ತು ಆಲಿಸುವ ಪ್ರವೃತ್ತಿಯು—ಇಂದಿನವರೆಗೂ ನಡೆದುಬಂದಿದೆ. ಅಡುಗಜ್ಜಿಯ ಕಥೆಗಳಿಂದ ಮೊದಲುಗೊಂಡು ಪ್ರೇಮದ, ಇಂದ್ರಜಾಲ—ಮಹೇಂದ್ರಜಾಲದ—ಪತ್ತೇದಾರಿಯ ಕಥೆಗಳನ್ನು ನಾವು ಕೇಳುತ್ತ ಮತ್ತು ಹೇಳುತ್ತ ಬಂದುದು ಈ ಪ್ರವೃತ್ತಿಯಿಂದಲೇ. ಇದರಿಂದಾಗಿ ಜಗತ್ತಿನಲ್ಲಿ ದಿನಾಲು ಹೊಸ ಹೊಸ ಕತೆಗಳು ಹುಟ್ಟುತ್ತ ಬಂದಿವೆ. ಇದು ಹೀಗೆಯೆ ನಡೆಯುತಿರಬೇಕು. ಕತೆಗಳಿಗೆ ಅಂತ್ಯವೂ ಇಲ್ಲ, ಆದ್ಯವೂ ಇಲ್ಲ. ಮಾನವನ ಜೀವನದ ಪ್ರವಾಹವೇ ಒಂದು ಕಥೆ. ಈ ಮಾನವನನ್ನು ರವೀಂದ್ರನಾಥ ಠಾಕೂರರು ಹೀಗೆ ಹೇಳಿದ್ದಾರೆ:—'ನದಿಯೂ ಹೇಗೆ ಜಲಸ್ರೋತದ ಧಾರೆಯೋ ಹಾಗೆಯೇ ಮಾನವನೂ ಕಥೆಯ ಪ್ರವಾಹ' ಎಂದು.

ಈ ಕಥೆಗಳ ಹುಟ್ಟು ಮೊಟ್ಟಮೊದಲು ಎಲ್ಲಿ ಆಯಿತೆಂಬುದನ್ನು ಹೇಳುವುದು ಕಷ್ಟಸಾಧ್ಯವಾದ ಮಾತು. ಹಿಂದೀ ವಿದ್ವಾಂಸರಲ್ಲಿ ಕೆಲವರು ಇಜಿಪ್ತದ ಒಂದನೆಯ ರಾಜವಂಶದ ಕಾಲದಲ್ಲಿ ಬರೆಯಲ್ಪಟ್ಟ 'ಅನಪೂ ಮತ್ತು ಬಾಟಾ' ಎಂಬ ಕಥೆಯಿಂದ ಆಧುನಿಕ ಕತೆಗಳ ಹುಟ್ಟು ಆಯಿತೆಂದು ಒಪ್ಪುತ್ತಾರೆ. ಏಕೆಂದರೆ ಆ ಕಥೆಯಲ್ಲಿ ಒಬ್ಬ ರಾಣಿಯನ್ನು ಇಬ್ಬರು ಯುವಕರು ಪ್ರೀತಿಸಿದ ಘಟನೆಯು ವರ್ಣಿತವಾಗಿದೆ. ಶಮಸಾನದಿಯು ಫಲವತ್ತಾದ ಭೂಮಿಯೇ ಆಧುನಿಕ ಕತೆಗಳ ಜನ್ಮಭೂಮಿ ಎಂದು ಕೆಲವರು ವಿದ್ವಾಂಸರ ಅಭಿಪ್ರಾಯ. ಆದರೆ ಕ್ರಿದ ೩೦-೪೦ ವರುಷಗಳಲ್ಲಿ, ಉರ್ದೂಕ್ಷೇತ್ರದಿಂದ ಹಿಂದೀಕ್ಷೇತ್ರಕ್ಕೆ ಪ್ರೇಮಚಂದರು ಬಂದನಂತರ ಆಧುನಿಕ ಕಲಾಪೂರ್ಣ ಕತೆಗಳ ಹುಟ್ಟು ಮತ್ತು ಬೆಳೆವಣಿಗೆ ಆಯಿತೆಂದು ಆಧುನಿಕ ಕತೆಗಾರರ ಅಭಿಪ್ರಾಯ. ಅಸ್ತು.

ಹಿಂದೀಯ ಆಧುನಿಕ ಕತೆಗಳಿಗೆ ರಾಜಸ್ಥಾನದ ಶೂರ-ವೀರರ ಕಥೆಗಳು, 'ಸಹಸ್ರರಜನೀಕಥೆ,' 'ಸೂಫೀಸಂಥದ ಕುತುಬನ್' ಅವರ 'ಮೃಗಾವತೀ', ಮಂಝನ್ ಅವರ 'ಮಧುಮಾಲತೀ', ಜಾಯಸೀ ಅವರ 'ಪದ್ಮಾವತ' ಎಂಬ ಪ್ರೇಮಕಥೆಗಳೂ 'ಗುಲಬಕಾವಲೀ,' 'ಗೋರಾಬಾದಲ್' ಕಥೆ' ಮುಂತಾವವೂ ಜೋಗ್ಯ ಹಿನ್ನೆಲೆಯನ್ನು ಒದಗಿಸಿದುವು. ಆನಂತರ ಇಂದಿನ ಕಥೆಯು ಕಕ್ಷೆಯಲ್ಲಿ ಬರಬಹುದಾದ ಇನ್ಷಾ ಅಲ್ಲಾಖಾನ್ ಅವರ 'ರಾನೀ ಕೇತಕೀ ಕೀ ಕಹಾನೀ' ಹಿಂದಿಯಲ್ಲಿ ಬಂದಿತು. ಇದರಿಂದ ಆಧುನಿಕ ಹಿಂದೀಕತೆಯು ಹೊಂಬೆಳಗು ಮೂಡಿತೆಂದು ಹೇಳಬಹುದು.

ಇಸವಿ ಸನ್ ೧೯೦೦ರಿಂದ ಆಧುನಿಕ ಹಿಂದೀ ಕತೆಗಳು ಜನ್ಮತಾಳಿ ಬೆಳೆಯುತೊಡಗಿದುವು. ಅವು ಹೊಸ ಹೊಸ ಹಾದಿಗಳನ್ನು ಹುಡುಕಿಕೊಂಡವು. ಇದಕ್ಕೆ 'ಸರಸ್ವತೀ' ಮತ್ತು 'ಸುದರ್ಶನ' ಎಂಬ ಪತ್ರಿಕೆಗಳು ಇಂಬು ಮಾಡಿ ಕೊಟ್ಟುವು. ಅವುಗಳಲ್ಲಿ ಮೊದಲು 'ಪಂಬಲೀನ್' 'ಎಫೆಂಡವಾಸಿ ಟ್ರಾಮಿಮನ್' 'ಪೆರಿಕ್ಲೀಜ್' 'ಕೌತುಕಮಯಮಿಲನ' ಎಂಬ ಕಥೆಗಳು ಶೇಕ್ಸಪಿಯರಿನ ನಾಟಕಗಳಿಂದ ಅನತರಿಸಿ ಬಂದುವು ಮತ್ತು 'ರತ್ನಾವಲೀ,' 'ಮಾಲವಿಕಾಗ್ನಿಮಿತ್ರ,' 'ಕಾದಂಬರಿ' ಮುಂತಾದುವುಗಳ ಕಥೆಗಳೂ ಬಂದುವು. ಕಿಶೋರೀಲಾಲ್ ಗೋಸ್ವಾಮಿಯವರ 'ಇಂದುಮತಿ' ಎಂಬ ಕತೆಯು ೧೯೦೦ರಲ್ಲಿ 'ಸರಸ್ವತಿ'ಯಲ್ಲಿ ಪ್ರಕಟವಾಯಿತು. ಇದೇ ಹಿಂದೀಯ ಸ್ವತಂತ್ರ ಸರ್ವಪ್ರಥಮ ಕಥೆ—ಎಂದು ಗಣಿತವಾಗಿದೆ. ಆದರೆ ೧೯೦೭ರಲ್ಲಿ ಅದೇ 'ಸರಸ್ವತಿ'ಯಲ್ಲಿ ಪ್ರಕಟವಾದ ವಂಗಮಹಿಳೆಯ 'ದುಲಾಯಿವಾಲಿ' ಎಂಬ ಕಥೆಯು ಹಿಂದಿಯ ಸರ್ವಪ್ರಥಮ ಕತೆಯೆಂದು ಕೆಲವರ ಅಭಿಪ್ರಾಯವಾಗಿದೆ. ಅದರಲ್ಲಿ ಜೀವನದ ಒಂದು ತೀರ ಚಿಕ್ಕ ಘಟನೆಯನ್ನು ತೆಗೆದುಕೊಂಡು ವಾಸ್ತವವಾದಿ ನೆರುಗನ್ನು ಕೊಟ್ಟು ಕಥೆಯನ್ನು ಹೆಣೆಯಲಾಗಿದೆ ಎಂಬುದೆ ಇದಕ್ಕೆ ಕಾರಣವಾಗಿರಬಹುದು. ಇರಲಿ, ೧೯೦೫ರಿಂದ ೧೯೩೫ರವರೆಗಿನ ಕಾಲವು ಆಧುನಿಕ ಹಿಂದೀ ಕಥಾಸಾಹಿತ್ಯದ ಸುವರ್ಣಯುಗವೆಂದು ತಿಳಿಯಲಾಗಿದೆ. ಹಿಂದಿಯ ಆಧುನಿಕ ಕಥೆಯು ಸುಮಾರು ಒಂಬತ್ತು ಹೊಸಪಾಯಿಗಳಲ್ಲಿ ಮುಂದುವರೆದಿದೆ ಎಂದು ನಾವು ಹೇಳಬಹುದು. ಅದರ ಸೂಕ್ಷ್ಮವಿಚಾರ ಮಾಡಿಕೊಡುವುದು ಮಾತ್ರ ನನ್ನ ಉದ್ದೇಶ.

ಒಂದನೆಯದಾಗಿ, ಚರಿತ್ರಪ್ರಧಾನವಾದ ಕತೆಗಳು ನಾಲ್ಕು ಹಾದಿಗಳಲ್ಲಿ ಮುಂದುವರೆದಿವೆ. ಮುಖ್ಯ ಚರಿತ್ರವನ್ನು ನಾನಾ ಘಟನೆ ಹಾಗೂ ಕಾರ್ಯಗಳ ಮುಖೇನದಲ್ಲಿ ಬಿಚ್ಚಿ, ಚರಿತ್ರದ ಮುಖ್ಯ ಗುಣವನ್ನು ಎತ್ತಿ ತೋರಿಸುವದು ಒಂದು ಹಾದಿ. ಪ್ರೇಮಚಂದ್ರರ 'ದಶ್ಹರೀ' ಎಂಬ ಕಥೆಯು ಈ ವರ್ಗಕ್ಕೆ ಸೇರಿದುದು. ಮುಖ್ಯ ಚರಿತ್ರದ ವಿಶಿಷ್ಟಪಕ್ಷದ ಚಿತ್ರಣ ಮಾಡುವುದು ಎರಡನೆಯ ಹಾದಿ. ಗುಲೇರಿಯವರ 'ಉಸನೇ ಕಹಾ ಥಾ,' ಪ್ರೇಮಚಂದ್ರರ 'ಬೂಢೀ

ಕಾಕೀ,' ಜಯಶಂಕರ ಪ್ರಸಾದರ 'ಭಿಖಾರಿನ್' ಎಂಬ ಕಥೆಗಳು ಈ ಹಾದಿಯ ಉತ್ತಮ ದೃಷ್ಟಾಂತಗಳು. ಮುಖ್ಯ ಚಾರಿತ್ರ್ಯದ ಸ್ವಭಾವದಲ್ಲಿ ಆಕಸ್ಮಿಕ ಬದಲಾವಣೆಯನ್ನು ತೋರಿಸುವ ಕತೆಯು ನೂರನೆಯ ಹಾದಿಯದು. ಕೌಶಿಕರ 'ತಾಯೀ' ಪ್ರೇಮಚಂದರ 'ಇತ್ಯಾರಾಮ,' 'ದೀಕ್ಷಾ,' 'ಶಂಖನಾದ' ಮುಂತಾದುವು ಈ ಹಾದಿಗೆ ಸೇರಿದ ಕಥೆಗಳು. ಮುಖ್ಯ ಚರಿತ್ರದ ಮನೋವೈಜ್ಞಾನಿಕ ಚಿತ್ರಣವನ್ನು ತೋರಿಸುವ ಕತೆಯು ನಾಲ್ಕನೆಯ ಹಾದಿಯದು. ಜೈನೇಂದ್ರಕುಮಾರರ 'ಜಾನ್ಹವೀ' ಭಗವತೀಪ್ರಸಾದ ವಾಜಪೇಯಿ ಅವರ 'ಮಿಶಾಯಿವಾಲಾ,' ವಿನೋದಶಂಕರವ್ಯಾಸರ 'ಅಪರಾಧ' ಮುಂತಾದ ಕತೆಗಳು ಈ ಮಾರ್ಗಕ್ಕೆ ಸೇರಿದುವು

ಎರಡನೆಯದಾಗಿ, ಚರಿತ್ರದ ವಿಕಾಸಕ್ಕಿಂತ ಘಟನೆಗಳನ್ನು ಮೋಹಕವಾಗಿ ಬಣ್ಣಿಸಿ ಪಾಠಕರ ಮನರಂಜನೆಯನ್ನು ಉದ್ದೇಶವಾಗಿಟ್ಟುಕೊಂಡು ಬರೆದ ಘಟನಾಪ್ರಧಾನ ಕಥೆಗಳು ಹಿಂದೀ ಕಥಾ-ಸಾಹಿತ್ಯದ ಪ್ರಾರಂಭಿಕ ಅವಸ್ಥೆಯಲ್ಲಿ ಹೆಚ್ಚಾಗಿ ಬೆಳಕು ಕಂಡುವು. ಪತ್ತೇದಾರಿಯ ಕಥೆಗಳೂ ಇದೇ ವರ್ಗಕ್ಕೆ ಸೇರಿದುವು ಎನ್ನಬಹುದು. ಕೌಶಿಕರ 'ಪಾವನಪತಿತ', ಚತುರಸೇನಶಾಸ್ತ್ರಿಯವರ 'ದುಃಖವಾ-ವ್ಯೈಕಾಸೆ ಕಹೂಂ ಮೋರಿ ಸಜನಿ' ಎಂಬ ಕತೆಗಳು ಈ ಹಾದಿಯ ಕಾಗೆ ಉತ್ತಮ ದೃಷ್ಟಾಂತಗಳಾಗಿವೆ. ಜ್ವಾಲಾದತ್ತಶರ್ಮಾ, ಪದುಮಲಾಲ ಪನ್ನಾಲಾಲ ಬಖ್ಶಿ ಮುಂತಾದವರು ಈ ಹಾದಿಯನ್ನು ತುಳಿದವರಲ್ಲಿ ಖ್ಯಾತನೆತ್ತವರು.

ಮೂರನೆಯದಾಗಿ, ಪಾತ್ರ ಮತ್ತು ಘಟನೆಗಳ ಕಡೆಗೆ ಮಹತ್ತ್ವ ಕೊಡದೆ ಅವುಗಳ ಕಾರ್ಯಕ್ಕೆ ಹೆಚ್ಚು ಮಹತ್ತ್ವ ಕೊಡುವ ಕತೆಗಳೂ ನಾಟಕೀಯ ಪ್ರಸಂಗಗಳನ್ನು ತೆಗೆದುಕೊಂಡು ನಗೆಯ ಹೊನಲನ್ನು ಹರಿಸುವ ಕತೆಗಳೂ ಕಾರ್ಯಪ್ರಧಾನಕತೆಗಳು. ಈ ಒಗೆಯ ಕಥೆಗಳಲ್ಲಿ ಸಾಹಸಿಕ, ರಹಸ್ಯಮಯ, ವಿಚಿತ್ರ ಹಾಗು ಅದ್ಭುತಕಾರ್ಯಗಳು ಚಿತ್ರಿತವಾಗುತ್ತವೆ ಈ ಹಾದಿಗೂ ಪತ್ತೇದಾರಿ ಕತೆಗಳೂ ಸೇರುತ್ತವೆ. ಈ ಹಾದಿಯಲ್ಲಿ ಬರೆದ ಗೋಪಾಲರಾಮ ಗಹಮರಿ ಅವರ 'ಬಡಾಭಾಯಿ', ಜಿ. ಪಿ. ಶ್ರೀವಾಸ್ತವರ 'ಲಕ್ಷ-ಖೋರೀಲಾಲ', ಆರಸೀಪ್ರಸಾದ ಸಿಂಹರ 'ಪಿಸ್ತೌಲಕಾ ನಿಶಾನೆ', ಶ್ರೀರಾಮಶರ್ಮಾ ಅವರ 'ಬನಲತಾ', ಮುಂತಾದ ಕತೆಗಳು ಉತ್ತಮ ನಿದರ್ಶನಗಳಾಗಿವೆ.

ನಾಲ್ಕನೆಯದಾಗಿ, ಒಂದು ಮುಖ್ಯ ಭಾವನೆಯನ್ನು ತೆಗೆದು-ಕೊಂಡು, ಬಾಹ್ಯ ವಾತಾವರಣವನ್ನು ಕಲ್ಪಿಸಿ ಲಾಕ್ಷಣಿಕ ಸೌಂದರ್ಯ-ವನ್ನು ತುಂಬಿ, ವಾಸ್ತವವಾದಿ, ಆದರ್ಶವಾದಿ, ಭಾವನಾವಾದೀ ವಾತಾವರಣದ ಮೆರುಗನ್ನು ಕೊಟ್ಟು ಬರೆದ ಕತೆಗಳು ವಾತಾವರಣದ ಪ್ರಧಾನ ಕತೆಗಳು. ಈ ಹಾದಿಯಲ್ಲಿ ಜಯಶಂಕರಪ್ರಸಾದರು 'ಆಕಾಶದೀಪ', ಪ್ರೇಮಚಂದರು 'ಶತರಂಜಕೇ ಖಿಲಾಡಿ', ಅಜ್ಞೇಯರು 'ವಿಪಥಗಾ', ಯಶಪಾಲರು 'ಪರಾಯಾ ಸುಖ', ಮುಂತಾದ ಕತೆಗಳನ್ನು ಬರೆದು ಕೀರ್ತಿಪಡೆದಿದ್ದಾರೆ. ಈ ಹಾದಿ-ಯಲ್ಲಿ ನಾವು ಪಂಡಿತ ಸುದರ್ಶನರನ್ನೂ ನೆನೆಯಬೇಕು.

ಐದನೆಯದಾಗಿ, ಘಟನೆ, ಚರಿತ್ರ ಹಾಗು ಕಥಾನಕದ ತತ್ತ್ವ-ಗಳಿಗೆ ಮಹತ್ತ್ವ ಕೊಡದೆ, ಬೇಕಾದ ಪ್ರಸಂಗಗಳಿಂದ ವಸ್ತುವನ್ನು ಆಯ್ದು ಒಂದು ಸ್ಥಾಯೀ ಪ್ರಭಾವವನ್ನು ಪಾಠಕನ ಮನಸ್ಸಿನ ಮೇಲೆ ಮೂಡಿಸುವ ಕಲಾತ್ಮಕ ನಿರೂಪಣೆಯುಳ್ಳ ಕತೆಗಳು-ಪ್ರಭಾವಪ್ರಧಾನ ಕತೆಗಳು. ಈ ಹಾದಿಯ ಕತೆಗಳು ಹಿಂದೀಯಲ್ಲಿ ಇತ್ತೀಚೆಗೆ ಬರ-ತೊಡಗಿವೆ. ಚಂದ್ರಗುಪ್ತ ವಿದ್ಯಾಲಂಕಾರರ 'ಕ.ಖ.ಗ', ಮೋಹನ-ಲಾಲ ಮಹತೋ 'ವಿಯೋಗೀ' ಅವರ 'ಕವಿ', ಸುದರ್ಶನರ 'ಎಥೆನ್ಸಕಾ ಸತ್ಯಾರ್ಥಿ', 'ಕಮಲಕೇ ಬೇಟೇ', 'ಸಂನ್ಯಾಸೀಕೇ ಕಬಸೆ ಬಡೀ ಕಹಾನಿ', ಬೇಚನಶರ್ಮಾ ಉಗ್ರ' ಅವರ ದೇಶಭಕ್ತ', ಅಜ್ಞೇಯರ 'ರೋಜ', ಭಗವತೀ ಚರಣ ವರ್ಮಾ ಅವರ 'ಪ್ರಾಯಶ್ಚಿತ್ತ', ಕಮಲಾಕಾಂತವರ್ಮಾ ಅವರ 'ಖಂಡಹರ' 'ಶಕಲೀ', 'ಪಗಡಂಡೀ', ಮತ್ತು ವಿನೋದಶಂಕರ ವ್ಯಾಸ ಅವರ 'ತೂಲಿಕಾ' ಮುಂತಾದ ಕತೆಗಳು ಈ ಹಾದಿಯ ಉತ್ತಮ ಕತೆಗಳು.

ಆರನೆಯದಾಗಿ, ಶಿಷ್ಟಹಾಸ್ಯವನ್ನೊಳಗೊಂಡ ಹಾಸ್ಯಪ್ರಧಾನ ಕತೆಗಳು ಹಿಂದಿಯಲ್ಲಿ ಕಡಮೆ. ದುಃಖ ಮತ್ತು ಬಡತನದ ಭಾರತ-ದಲ್ಲಿ ನಗುವುದಕ್ಕೂ ಅವಕಾಶ ಇಲ್ಲವೆಂದೋ ಏನೋ. ಆದಾಗ್ಯೂ ಕೆಲವರು ದುಃಖವನ್ನು ಮರೆಯುವುದಕ್ಕಾಗಿ ಮತ್ತು ಮರೆಸುವುದಕ್ಕಾಗಿ ಹಾಸ್ಯಪೂರ್ಣ ಕತೆಗಳನ್ನು ಬರೆದಿದ್ದಾರೆ. ಉರ್ದುವಿಂದ ಇವು ಹೆಚ್ಚಾಗಿ ಬಂದಿವೆಯಾದರೂ ಜಿ. ಪಿ. ಶ್ರೀವಾಸ್ತವರ 'ಪಿಕ್‌ನಿಕ್', 'ಗುದಗುದಿ', ಅನ್ನಪೂರ್ಣಾನಂದರ 'ಅಕಬರೀ ಲೋಟಾ', ಬೇಧಬ್ ಬನಾರಸಿಯವರ 'ಬನಾರಸೀ ಎಕ್ಕಾ', ಅಜೀಮಬೇಗ ಚಗತಾಯಿ ಅವರ 'ಶೀರಬೀಬಿ', 'ಕೋಲಕಾರ', 'ಕುತ್ತೇಕೀ ಕಹಾನೀ', 'ಅಂಗೂರಕೀ ಮುಸೀಬತ್', ಪ್ರಭಾಕರ ಮಾಚವೇ ಅವರ 'ಖರಗೋಶಕೇ ಸಿಂಗ', ಇಂದು ಅತ್ಯಂತ ಪ್ರಸಿದ್ಧಿಯನ್ನು ಪಡೆದಿರುವ ಅಮೃತಲಾಲ ನಾಗರ ಅವರ 'ಗಿರ್ ಟ್', ಜಯನಾಥ 'ನಲಿನ' ಅವರ 'ಶತರಂಜಕೆ ಮೋಹರೇ' ಕತೆಗಳು ಸುಹಾಸ್ಯ ಪ್ರಧಾನ ಕತೆಗಳ ಹಾದಿಯನ್ನು ವಿಶಾಲಗೊಳಿಸತೊಡಗಿವೆ ಜಯ-ನಾಥ 'ನಲಿನ' ಅವರು ಮಹಾತ್ಮಾಗಾಂಧಿಯವರನ್ನೂ ಬರ್ನಾಡ್ ಶಾ ಅವರನ್ನೂ ಹಾಸ್ಯಕ್ಕೆ ಗುರಿಮಾಡಿದ್ದಾರೆ

ಏಳನೆಯದಾಗಿ, ಐತಿಹಾಸಿಕ ವ್ಯಕ್ತಿಗಳನ್ನು ನಾಯಕ-ನಾಯಕಿಯರನ್ನಾಗಿ ಮಾಡಿಕೊಂಡು ಅವರ ಜೀವನವನ್ನು ಕಲ್ಪನೆಯ ಎರಕದಲ್ಲಿ ಹೊಯ್ದು ಬರೆದಂಥ ಐತಿಹಾಸಿಕ ಕಥೆಗಳು ಹಿಂದಿಯಲ್ಲಿ ಕಡಮೆ. ಜಯಶಂಕರ ಪ್ರಸಾದರ 'ಮಮತಾ', ಸುದರ್ಶನರ 'ನ್ಯಾಯಮಂತ್ರಿ', ಪ್ರೇಮಚಂದರ 'ವಜ್ರಪಾತ' ಮತ್ತು 'ರಾಣೀಸಾರಂಧಾ', ಚತುರಸೇನ ಶಾಸ್ತ್ರಿಯವರ 'ಭಿಕ್ಷುಕರಾಜ', ವೃಂದಾವನಲಾಲ ವರ್ಮಾ ಅವರ 'ಕಲಾಕಾರಕಾ ದಂಡ' ಎಂಬ ಕಥಾಸಂಗ್ರಹದಲ್ಲಿಯ ಕಥೆಗಳು ಹಿಂದೀ ಐತಿಹಾಸಿಕ ಕತೆಗಳ ಉಜ್ವಲಭವಿಷ್ಯವನ್ನು ಸೂಚಿಸುತ್ತವೆ. ಇಂದಿನ ರಾಜಕೀಯರಂಗದ ಚಿತ್ರಣವನ್ನು ಕೊಡುವವರಲ್ಲಿ ಕಿಶನಚಂದರು ಶ್ರೇಷ್ಠರು.

ಎಂಟನೆಯದಾಗಿ, ನಾಚಿಕೆ-ತಿರಸ್ಕಾರದಿಂದ ತುಂಬಿದ ಮಾನವ ಜೀವನದ ಘಟನೆಯೊಂದನ್ನು ಆಯ್ದುಕೊಂಡು ಸಮಾಜಸುಧಾರಣೆಯ ಧ್ಯೇಯವನ್ನಿಟ್ಟುಕೊಂಡು ಕಲಾತ್ಮಕವಾಗಿ ಬರೆದ ಕತೆಗಳು ವೈಕೃತವಾದೀ ಅಥವಾ ವಾಸ್ತವವಾದಿ ಕತೆಗಳು. ಈ ವಾಸ್ತವವಾದೀ ಕತೆಗಳ ಬರೆಹಗಾರರು ವಿಶೇಷವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಧರ್ಮ, ಸಮಾಜಸುಧಾರಣೆ, ವ್ಯಾಪಾರ, ಸರಕಾರೀ ಕೆಲಸ, ಹೊಸ ಸಂಸ್ಕೃತಿ–ಸಭ್ಯತೆ ಮುಂತಾದುವುಗಳ ತೆರೆಯ ಮರೆಯಲ್ಲಿ ನಡೆಯುವ ಅನಾಚಾರಗಳ ಹುರಿಗಾಳುಗಳ ಚಿತ್ರವನ್ನು ನಗ್ನವಾಗಿ ಚಿತ್ರಿಸುವುದರಿಂದ, ಅವರ ಕತೆಗಳು ಸತ್ಯಾಂಶವನ್ನು ಒಳಗೊಂಡಿದ್ದರೂ ಚರಿತ್ರಕ್ಷಣದ ದೃಷ್ಟಿಯಿಂದ ಮತ್ತು ಶೈಲಿಯ ದೃಷ್ಟಿಯಿಂದ ಉತ್ತಮವಾಗಿದ್ದರೂ ಕುರುಚಿಪೂರ್ಣವಾಗಿತ್ತವೆಂದು ಅನೇಕ ಹಿಂದೀ ಕಥಾವಿಮರ್ಶಕರು ಹೇಳುತ್ತಾರೆ. ಈ ಹಾದಿಯನ್ನು ತುಳಿವ ಕಥಾಲೇಖಕರಲ್ಲಿ ಬೇಚನಶರ್ಮಾ ಪಾಂಡೇಯ 'ಉಗ್ರ' ಮತ್ತು ಚತುರಸೇನ ಶಾಸ್ತ್ರಿಯವರು ಪ್ರಮುಖರು. ಉಗ್ರರ 'ಚಾಂದನೀ' ಎಂಬ ಕತೆಯೂ ಚತುರಸೇನ ಶಾಸ್ತ್ರಿಯವರ 'ಅಕ್ಷತ' ಎಂಬ ಕಥಾಸಂಗ್ರಹದ ಕತೆಗಳೂ ಈ ಹಾದಿಗೆ ಉದಾಹರಣೆಯಾಗಿವೆ. ಆದರೆ ಇದೇ ಕ್ಷೇತ್ರದಲ್ಲಿ ಸಾಮಾಜಿಕ ಹಾಗು ಆರ್ಥಿಕ ವ್ಯವಸ್ಥೆಯು ಸಮಾನತೆಯನ್ನು ಎತ್ತಿ ತೋರಿಸಲು ಸುರುಚಿಪೂರ್ಣವಾದ ಕಥೆಗಳನ್ನು ಜೈನೇಂದ್ರಕುಮಾರರೂ ಭಗವತಿಪ್ರಸಾದ ವಾಜಪೇಯಿಯವರೂ ಬರೆದಿದ್ದಾರೆ. ಜೈನೇಂದ್ರರ 'ಅಪನಾ ಅಪನಾ ಭಾಗ್ಯ' ಮತ್ತು ವಾಜಪೇಯಿ ಅವರ 'ನಿಂದಿಯಾಲಾಗೀ' ಹಾಗು 'ಹೃದ್ಗತಿ' ಕತೆಗಳು ಉತ್ಕೃಷ್ಟ ನಮೂನೆಗಳಾಗಿವೆ.

ಒಂಬತ್ತನೆಯದಾಗಿ ಅಥವಾ ಒಂಬತ್ತನೆಯದಾಗಿ ಅಮಾನವ ವಸ್ತುವನ್ನು ಎತ್ತಿಕೊಂಡು ಅದಕ್ಕೆ ಮಾನವೀ ರೂಪಕೊಟ್ಟು ಬರೆದ ಕತೆಗಳು—ಪ್ರತೀಕನಾದಿ ಅಥವಾ ಲಾಕ್ಷಣಿಕವಾದೀ ಕತೆಗಳು. ಈ ವರ್ಗದ ಕತೆಯ ಕತೆಗಾರರು ಹಿಂದಿಯಲ್ಲಿ ಕಡಮೆ; ಬಹಳ ಕಡಿಮೆ. ಮರುಳುಗಾಡಿನಲ್ಲಿ ಅಲ್ಲಲ್ಲಿ ಜಲಾಶಯಗಳು ಗೋಚರಿಸಿ ಮನಸೆಳೆಯುವಂತೆ ವೀರೇಂದ್ರನಶರ್ಮಾ ಪಾಂಡೆಯ 'ಉಗ್ರ' ಅವರ 'ಭುನಗಾ,' 'ಜಯಶಂಕರಪ್ರಸಾದರ 'ಕಲಾ,' ರಾಮಕೃಷ್ಣರ 'ಕಲಾ ಔರ ಕೃತ್ರಿಮತಾ' ಎಂಬ ಕತೆಗಳು ಕಂಗೊಳಿಸಿ ಓದುಗರ ಬಾಯಾರಿಕೆಯನ್ನು ತಣಿಸುತ್ತವೆ.

ಇನ್ನು ಮುಂದೇನು? ಎಂದು ಕೇಳುವ ಸೋದರಿಯರ ತೃಪ್ತಿಗಾಗಿ ಒಂದೆರಡು ಮಾತುಗಳನ್ನು ಹೇಳುವೆ. ಹಿಂದೀ ಕತೆಗಾರ್ತಿಯರ ಸಂಖ್ಯೆಯು ದಿನದಿನಕ್ಕೂ ಬೆಳೆಯುತ್ತಲಿದೆ. ಮೊತ್ತಮೊದಲು ಉನ್ನೂ ನೆಹರೂ ಅವರು ಹಿಂದಿಯಲ್ಲಿ ಕತೆಯನ್ನು ಬರೆಯತೊಡಗಿದರು. ಅವರ ತರುವಾಯ ಪ್ರೇಮಚಂದರ ಪತ್ನಿಯವರಾದ ಶಿವರಾಣೀ ದೇವಿಯವರು ಈ ಕ್ಷೇತ್ರದಲ್ಲಿ ತಮ್ಮ ಸೇವೆ ಸಲ್ಲಿಸತೊಡಗಿದರು. ಅನಂತರ ಹಿಂದಿಯ ಸುಪ್ರಸಿದ್ಧ ಕವಯಿತ್ರಿಯರಾದ ಶ್ರೀಮತಿ ಸುಭದ್ರಾಕುಮಾರಿ ಚೌಹಾಣ ಅವರು 'ಉನ್ಮಾದಿನೀ,' 'ಬಿಖರೇ ಮೋತೀ' ಎಂಬ ಕಥಾಸಂಕಲನಗಳಿಂದ ಮಹಿಳಾ ಕಥಾಸಾಹಿತ್ಯವನ್ನು ಉಜ್ವಲಗೊಳಿಸಿದರು. ಇವರ ನಂತರ ತೇರಜಾನಿ ಪಾಠಕ, ಉಷಾದೇವಿ ಮಿತ್ರಾ, ಸತ್ಯವತೀ ಮಲ್ಲಿಕ, ತಾರಾ ಪಾಂಡೇಯ, ಸುಶೀಲಾ ಅಗಾ, ಚುದ್ರಕಿರಣ ಸೌನದಿಕ್ಯಾ (ಇವರ ಪರಿಚಯ ಇಂದಿನ ಅಧ್ಯಕ್ಷರಿಗೆ ಚೆನ್ನಾಗಿ ಇದೆ) ರಾಜೇಶ್ವರೀ ಶರ್ಮಾ, ಕವಯಿತ್ರಿ ಮಹಾದೇವಿ ವರ್ಮಾ ಮುಂತಾದವರು ಹಿಂದೀ ಕಥಾಸಾಹಿತ್ಯದ ಶ್ರೀವೃದ್ಧಿಯ ಕಾರ್ಯದಲ್ಲಿ ತಮ್ಮ ಪಾಲನ್ನು ಸಲ್ಲಿಸುತ್ತಿದ್ದಾರೆ.

ಆಧುನಿಕ ಹಿಂದೀ ಕಥಾಸಾಹಿತ್ಯವು ಭಾರತದ ಬೇರೆ ಬೇರೆ ಭಾಷೆಗಳಿಂದಲೂ ಉತ್ತಮ ಕಥೆಗಳನ್ನು ಆಯ್ದುಕೊಂಡು, ಅನುವಾದಿಸಿಕೊಂತು ಸಮೃದ್ಧವಾಗುತ್ತಿದೆ. ನನಗೆ ತಿಳಿದ ಮಟ್ಟಿಗೆ ಹೇಳುವುದಾದರೆ, ಗುಲೇರಿ–ಗುಲೇರಿಂದಲೇ ಕನ್ನಡದ ಸುಂದರ ಉತ್ತಮ ಕಥೆಗಳು ಹಿಂದೀಗೆ ಹೋಗಿವೆ; ಗಲ್ಪಸಂಸಾರ ಮಾಲೆಯ ಒಂದೆನೆಯ ಭಾಗದಲ್ಲಿ, ರಾಷ್ಟ್ರಭಾರತೀ, ದೇವನಾಗರ, ಆಜಕಲ್, ಹಂಸ, ಸರಸ್ವತಿ, ವಿಶಾಲಭಾರತ ಮುಂತಾದ ಹಿಂದೀಪತ್ರಿಕೆಗಳಲ್ಲಿ ಆಗಾಗ ಪ್ರಕಟವಾಗುತ್ತಿವೆ. ಅನಂದಕಂದರು, ಅನಂತರು, ವಾಸ್ತಿಯವರು, ಅ ನ ಕೃ, ಮುಗಳಿ ಅವರು ಹಿಂದೀ ಕಥಾಪ್ರಪಂಚಕ್ಕೆ ಹೆಚ್ಚು ಪರಿಚಿತರಾಗಿದ್ದಾರೆ.

ಹಿಂದಿಯಲ್ಲಿ ಪಣ್ಣಕತೆಗಳಿಗೆ ಮೀಸಲಾಗಿರುವ 'ಕಹಾನೀ' 'ಮನೋಹರ ಕಹಾನಿಯಾಂ' ಮುಂತಾದ ಪತ್ರಿಕೆಗಳು ಹಿಂದೀ ಕಥಾಸಾಹಿತ್ಯವನ್ನು ಬೆಳೆಸುತ್ತಲಿವೆ. 'ಜಯಕರ್ನಾಟಕ' ದ ಪ್ರಕಾರದಲ್ಲಿ ೩೦೦-೪೦೦ ಪುಟಗಳಿಗೂ ಮಿಕ್ಕಿ 'ಕಹಾನಿ' ಯ ವಾರ್ಷಿಕ ಸಂಚಿಕೆಗಳು ಹೊರಡುತ್ತಿವೆ, ಸುಮಾರು ಒಂದು ಲಕ್ಷಕ್ಕೂ ಮಿಕ್ಕಿ ಅವನ್ನು ಹಿಂದೀಬಲ್ಲವರು ಓದುತ್ತಾರೆ. ಈ ರೀತಿಯಲ್ಲಿ, ಈ ಹಾದಿಗಳಲ್ಲಿ ಬೆಳೆಯುತ್ತಿರುವ ಹಿಂದೀ ಕಥಾಸಾಹಿತ್ಯವು ಉಜ್ವಲ ಭವಿಷ್ಯದ ಗುರುತಾಗಿದೆ. ತೀರ ಕೊನೆಯ ಮಾತಾಗಿ;—

ನನಗೆ ಈ ಭಾಷಣ ಓದಲು ಅವಕಾಶ ಕೊಟ್ಟ ಈ ಸಮ್ಮೇಲನದ ಸಂಚಾಲಕರಿಗೂ ಶಾಂತಚಿತ್ತದಿಂದ ಕೇಳಿದ ತಮಗೂ ನಾನು ಉಪಕೃತ ಎಂದು ನಿವೇದಿಸುವೆ.

ಅಳಬೇಡ

ಶ್ರೀ. ಜಿ. ಪ್ಪಿ. ಕುಲಕರ್ಣಿ, ಬಿ. ಎ., (ಆನರ್ಸ್) ಧಾರವಾಡ

ಅಳಬೇಡ ಅಳಬೇಡ ಅಳಬೇಡ ತಂಗಿ
ನೆಲವ ನನೆಸುತಿದೆ ಕಣ್ಣೀರು ಇಂಗಿ।

೧

ನೀ ಹುಟ್ಟಿದಾಗಲೆ ಬಂದುವೀ ಅಳುವು
ನಲುಮೆಯು ನಾಶಕೆ ಇವೆ ಈಗ ಕೆಲವು;
ನಂಬಿಕೆ ಬಿತ್ತದಿರು, ನಿಜವ ನೀನರಿಯೆ,
ದೇವನ ನೆನೆಯುತ ಎಲ್ಲವ ಮರೆಯೆ!

೨

ಬಾವಿ-ಕೆರೆಗಳ ಮಾತೇ ? ಹುರುಳೇನು ಇಲ್ಲಾ
ಜೀವ ದೋಗಾಡಿಸೆ ಸಮಯಬೇಕೆಲ್ಲಾ;
ಇರುವುದಕಾಗಿಯೆ ಜೀವನವಿಹುದು,
ಇದ್ದು ಗೆದ್ದರೆ ನಾವು ಮನುಜರೆ ಅಹುದು.

೩

ಬಿಸಿಲಿನ ತಾಪಕೆ ಕಲ್ಲಾಗಿ ನಿಲ್ಲು,
ನೀರಿನ ಹೊಡೆತಕೆ ಬೆಂಡಾಗಿ ತೇಲು,
ಗಾಳಿಯ ರಭಸಕೆ ಪಟವಾಗಿ ಹಾರು,
ವಿಷವನು ಕುಡಿದರು ನಗೆಯನ್ನೆ ಬೀರು.

೪

ದುಃಖವ ಕೊಡುವುದು ದೇವರ ಲೀಲೆ
ಅವನ ಕೊರಳಲಿದೆ ಜೀವನಮಾಲೆ,
ಹುಚ್ಚುವ ಜನಗಳಿಗೆ ಅವನಿಚ್ಛೆ ಸಾಕು,
ಅಟಕೆ ನಿಲ್ಲಲು ಶಕ್ತಿಯು ಬೇಕು.

೫

ಉಪ್ಪು ನೀರುಣ್ಣುತ ಬಡಕಾಗಿ ಬೆಳೆದು
ಗಾಳಿಯ ಹೊಡೆತದ ಬಡಿತವ ತಡೆದು—
ಮುಗಿಲ ಮುಟ್ಟಿದೆ ನೋಡು ತೆಂಗಿನ ಮರವು
ದೇವನಿಗೆ ಫಲವಾಯ್ತು ಅವನದೆ ನೆರವು!

೬

ನೆಲ್ಲಿಯ ತಿಂದಾಗ ಬಾಯಿ ಮೊದಲೊಗರು,
ನೀರನು ಕುಡಿಯಲು ಅನ್ಯಾಶವೊಂದೊಸರು—
ಈ ನಿನ್ನ ಬಾಳುವೆ ಒಗರಾಗಿ ಬೆಳೆದು
ಅಮೃತವ ಕೊಡುವುದು ಯಶದ ವೈಖರಿದು

೭

ಚಿನ್ನವ ಕಾಸುವರು ಗುಣವನು ನೋಡಿ
ಚಂದನವ ತೇಯುವರು ಕಂಪನ್ನು ತೀಡಿ—
ಜೀವನ ಸವೆಸುವುದು ಪಾವನ ಗೈಯಿ
ಅವನ ಅಭಿಷೇಕಕ್ಕೆ ಮಧುವನ ಹೊಯ್ಯೆ.

೮

ಚುಚ್ಚುಮುದ್ದಿನ ಇರಿತ ನಡೆದಿದೆ ಸತತ
ಅದಕಾಗಿ ನೀ ಗಟ್ಟಿಯಾಗುವದು ಉಚಿತ;
ಎದೆಗೊಟ್ಟು ತಡೆದಿರು ಈ ಜೀವನೋವ—
ತಡೆದವ ಬಾಳ್ಯಾನು ಆಳ್ಯಾನು ಜೀವ.

೯

ಅವರೂ ನೋಯುವರೊಮ್ಮೆ ನಿನ್ನ ಇರಿದವರು
ನಿನ್ನ ಕಣ್ಣೀರನ್ನು ನೋಡಿ ನಕ್ಕವರು:—
ನಿನ್ನ ಕರುಳಿನ ಕೊರೆಯ ತಳಮಳ ತಾಪ
ಹುಸಿ ಹೋಗುವುದಿಲ್ಲ ಕಣ್ಣೀರ ಶಾಪ.

೧೦

ತಬ್ಬಲಿಯೇ ನೀನು ? ಅಲ್ಲೊಬ್ಬನಿಹನು,
ಎಲ್ಲ ಜೀವಗಳನು ತುಂಬಿಕೊಂಡವನು—
ಅವನಿಗೆ ಕೇಳ್ವುದು ಈ ಕರುಳನುಸಿರು
ಈ ಪೊರೆಯ ಕರೆಯನ್ನು ಕೇಳದವರಾರು ?

ಬಗೆಹರಿಯದ ಬಾಯಿಲೆಕ್ಕ

(ಪಣ್ಣ ಕತೆ)

ಶ್ರೀ. ಎಂ. ಯು. ಜೋಶಿ, ಧಾರವಾಡ

ಮನಸ್ಸಿನ ಉದ್ರೇಕ ಮನುಷ್ಯನನ್ನು ಪಿಶಾಚಿಯನ್ನಾಗಿ ಮಾಡುವುದು; ಆದರೆ ಹೃದಯದ ಜಾಗೃತಿಯಿರುವಲ್ಲಿ ಆ ಉದ್ರೇಕದ ಆಟಸಾಗಲಾರದು. ಶಾರದಕ್ಕನು ಕೇವಲ ಉದ್ರೇಕದವಳಾಗಿದ್ದರೆ, ಸುಮತಿ ಎಂತಹ ಆಪತ್ತಿಗೆ ಗುರಿಯಾಗಬೇಕಾಗುತ್ತಿತ್ತು ?

ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ. ಒಂದು ಕೈಯಿಂದ ಬಾಗಿಲ ಚೌಕಟ್ಟನ್ನು ಹಿಡಿದುಕೊಂಡಿದ್ದಾಳೆ; ಇನ್ನೊಂದು ಕೈ ಹಾಗೆಯೇ ಇದ್ದಿತು. ಕೈ ಹಾಗೆಯೆ ಇದ್ದಿ ಕಾದರೂ ಕೈಯ ಬೆರಳುಗಳು ಮಾತ್ರ ಚಲಿಸುತ್ತಿದ್ದುವು. ಅವಳ ಜೀವನದ ಬಾಯಿಲೆಕ್ಕವನ್ನು ಗುಣಿಸುವುದರಲ್ಲಿ ಕೈ ಬೆರಳುಗಳು ಮಗ್ನವಾದಂತಿದ್ದುವು. ಆದರೆ ಲೆಕ್ಕ ತಪ್ಪುತ್ತಿದ್ದಿತು. ಪುನಃ ಅದೇ ಗುಣಾಕಾರ—ಮತ್ತೆ ಅದೇ ಉತ್ತರ—ತಾಳೆ ತಪ್ಪುತ್ತಿತ್ತು. ಬಂದ ಉತ್ತರ ಸರಿ ಇರುತ್ತಿರಲಿಲ್ಲ—ಮತ್ತೆ ಬೆರಳುಗಳ ಚಲನವಲನ.

ಅದೇ ಸಂಜೆಗತ್ತಲು ಪಸರಿಸುತ್ತಿತ್ತು. ಮನೆಯಲ್ಲಿ ದೀಪ ನಿರಲಿಲ್ಲ. ಹೊರಗಿನ್ನೂ ಬೆಳಕಿತ್ತು. ಆ ಬೆಳಕು ನಿಚ್ಚಳವಾದ ಬೆಳಕಲ್ಲ. ಸಂಧಿಸಮಕಾಲದ ಬೆಳಕು. ಸಮಯ ಸರಿಯುತ್ತಿತ್ತು. ಶಾರದಕ್ಕನ ಅವಸ್ಥೆ ಕಂಡು ಅದು ಮುರುಗುತ್ತಿರಬಹುದು; ಆದರೆ ನಿಲ್ಲುವಂತಿರಲಿಲ್ಲ. ಸೇತುವೆಯು ಮೇಲಿಂದ ರೈಲುಗಾಡಿ ಹೊಳೆಯಲ್ಲಿ ಬಿದ್ದಾಗ—ಕೆಡುಕೆನ್ನಿಸಿಕೊಂಡ ಕೊಳೆ ನುತ್ತೆ ಹರಿಯುವಂತೆ—ಸಮಯ ಸರಿಯುತ್ತಲೇ ಇತ್ತು. ಸಮಯ ಸರಿಯುತ್ತಿತ್ತು—ಕತ್ತಲು ಕಾಲಿಡುತ್ತಿತ್ತು ಆದರೆ ಶಾರದಕ್ಕನ ತಲೆಯಲ್ಲಿ. ಮನಸ್ಸಿನಲ್ಲಿ—ಕತ್ತಲೆ ಆಗಲೇ ಕಾಲಿಟ್ಟಿತ್ತು. ಅಂತಹ ಕತ್ತಲಲ್ಲಿ ಶಾರದಕ್ಕ ತಡವರಿಸುತ್ತಿದ್ದಳು.

ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ. ಬೀದಿಯು ದೀಪ ಹತ್ತಿದುವು. ಮಂಜುಬೆಳಕು ಪಸರಿಸಿತು. ಬಹು ಭಯಾನಕ ಬೆಳಕು ಅದು—ನಸುಬಿನ ಮೃತ ಬೊಕ್ಕ ಬೆಳಕೂ ಅಲ್ಲ—ಗಾಢ ಕತ್ತಲೆಯೂ ಅಲ್ಲ; ಹಿರಣ್ಯಕಶಿಪುವಿನ ಭೀಕರ ಕೊಲೆಯ ಸಮಯದ ಪ್ರಕಾಶವಿದ್ದಂತೆ.

ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ. ಶಾರದಕ್ಕನ ಗಂಡ ಒಂದು ಮನೆಯ ಮಾಲೀಕ. ಸಂಗೀತಶಾಸ್ತ್ರದ ಅರ್ಧ ಮೆಟ್ಟಿಲನ್ನು ತುಳಿದ ಸಂಗೀತಗಾರ(?). ಅಧಾರ್ಂಗವಾಯುವಿನಿಂದ ಮಲಗಿ ಮೂರು ತಿಂಗಳಾಗಿವೆ. ಒಂದು ಹೆಣ್ಣು ಹುಡುಗಿಯು ತಂದೆಯಾಗಿದ್ದಳು ನಿಜ ಆದರೆ ಶಾರದಕ್ಕ ತಾಯಿಯಾಗಿರಲಿಲ್ಲ. ಶಾರದಕ್ಕ ಅವನ ಎರಡನೆಯ ಹೆಂಡತಿ. ಸಂಗೀತಗಾರನ ಮಗಳ ಲಗ್ನವಾಗಿ ಹೋಗಿತ್ತು. ಶಾರದಕ್ಕ ತನ್ನ ತಲೆಯಮೇಲೆ ಆಕ್ಕಕಾಳನ್ನು ಹಾಕಿಸಿಕೊಂಡ ದಿನವೇ ತಾಯಿದೆಯು ಪ್ರಕಾಶ ತಾಯಿಯಾಗಿದ್ದಳು. ಅವಳ ಲಗ್ನಕ್ಕೆ—ಅವರ ಮಗಳು—ಮಗಳ ಗಂಡ ಬಂದಿದ್ದರು. ಆ ಮಾತಿಗೆ ಇಂದು ಏದು ವರುಷಗಳು ಕಳೆದುಹೋಗಿವೆ. ಸುಮತಿ ಸಂಗೀತಗಾರನ ಮಗಳು, ತನ್ನ ಲಗ್ನವಾದ ಎಂಟು ವರುಷಗಳ ನಂತರ ಹೊಟ್ಟೆಲು ಬಾಣಂತಿತನಕ್ಕೆ ತವರು ಮನೆಗೆ ಬಂದಿದ್ದಾಳೆ.

ಈಗಾಗಲೇ ಹದಿನೈದು ದಿನಗಳು ಕಳೆದುಹೋಗಿವೆ ಶಾರದಕ್ಕ ಸುಮತಿಯು ವಯಸ್ಸಿನವಳೇ. ಸಮವಯಸ್ಕರಲ್ಲಿ ಸ್ನೇಹ ಬಹು ಬೇಗ ಬೆಳೆಯುತ್ತದೆ. ಎಂದು ಹೇಳುವ ಪಂಡಿತರು, ಶಾರದಕ್ಕನ ಮುಖವನ್ನು ನಿಷ್ಪಕ್ಷಪಾತಿಯಾಗಿ ನೋಡಬೇಕು ಸಮಮನಃಪ್ರಿಗಳಲ್ಲಿ ಸ್ನೇಹವೆಂದು ಕ್ಲೇಶದೆ ಒಪ್ಪಬಹುದು. ತಾಯಿ ಮಗಳು ಎಂದೂ ಜಗಳವಾಡಿಲ್ಲ. ೧೫ ದಿನ ಸುಮತಿ ಆರಾಮವಾಗಿ ಮನೆಯಲ್ಲಿ ಪಾಪಿಸಿದ್ದಾಳೆ. ಶಾರದಕ್ಕನೂ ನಗುತ್ತಾಳೆ; ಸುಮತಿಯೂ ನಗುತ್ತಾಳೆ. ಆವರಿಬ್ಬರೂ ಕೂಡಿ ಊಟಮಾಡುತ್ತಾರೆ ಮಾತಾಡುತ್ತಾರೆ. ಮಲಗುತ್ತಾರೆ—

ಇಬ್ಬರೂ ಮಲಗುತ್ತಾರೆ—ಸುಮತಿ ನಿದ್ರಿಸುತ್ತಾಳೆ. ಶಾರದಕ್ಕ ಮಲಗುತ್ತಾಳೆ ನಿದ್ರೆಹತ್ತುವುದಿಲ್ಲ. ನಿಷ್ಪಾಪಿ ಮಗುವಿನಂತೆ ನಿದ್ರಿಸುವ ಸುಂಬುಗಭೀಣಿ ಸುಮತಿ ನಿದ್ರೆಯಲ್ಲಿ ಹೊರಳಾಡುತ್ತಾಳೆ. ಹಾಗೆ ಹೊರಳಾಡುವಾಗ ಸೆರಗು ಅಶ್ಲಥವಾಗುತ್ತದೆ ಬ್ಲೌಜಿನ ಬಿರಡಿ ಬಿಚ್ಚುತ್ತದೆ—ಬ್ಲೌಜಿನ ಜುಂಗು ಮೇಲೆ ಹೋಗುತ್ತದೆ. ಸೊಂಟಕ್ಕೆ ಸುತ್ತಿದ ವಸ್ತ್ರಲ ಕೆಳಗೆ ಹೊಕ್ಕುಳ ಕೆಳಗೆ ಇಳಿದಿರುತ್ತದೆ. ಮೂಲೆಮುಡಿಯಿಟ್ಟ ದೀಪದ ಮಂಜುಬೆಳಕಿನಲ್ಲಿ ಸುಮತಿಯು ಹೊಳೆಯುವ ಹವಾಲಯುಷ್ಯಾಯವಾಗಿ ಶಾರದಕ್ಕನಿಗೆ ಕಾಣಿಸುತ್ತದೆ. ಬರಲಿರುವ ಕೊಂಚ ನಿದ್ರೆಯೂ ಹಾರಿಹೋಗುತ್ತದೆ. ತಳಮಳವಾಗುತ್ತದೆ.

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ	೧೫-೦-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೮-೦
ಶ್ರೀ. ಭುಜೇಂದ್ರ ಮುಹಿಸವಾಡಿ	
ಮೂಲಶಿಕ್ಷಣದ ನೆಲ್ಯಮೂಪಣ	೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು	
ಬಾಳ-ಬಂಡಿ (ಕವನ ಸಂಗ್ರಹ)	೦-೮-೦
ಶ್ರೀ. ಬಾಳು ಬಿ. ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ
ಭಾರತದ ಬಿಳಲು

ಪ್ರತಿಗಳಿಗಾಗಿ ಬರೆಯಿರಿ :

ಶಾಂತಿ ಸೇವಾಸದನ, ಸೇಡಬಾಳ
ಪೊ. ಸೇಡಬಾಳ (ಜಿಲ್ಲಾ ಬೆಳಗಾಂವಿ)

ಸಂಕಟವಾಗುತ್ತದೆ—ಆ ಸಂಕಟ ಅವಳ ಕಣ್ಣನ್ನು ಮುಚ್ಚಗೊಡುವುದಿಲ್ಲ. ಮತ್ತೆ ಮತ್ತೆ ಸುಮತಿಯ ಹೊಟ್ಟೆಯನ್ನು ನೋಡುತ್ತಾಳೆ—ಮತ್ತೆ ತಳಮಳ—ಸಂಕಟ—ನೋವು !

ಇಡೀ ರಾತ್ರಿ ಹೀಗೆ ಕಳೆದುಹೋಗುತ್ತದೆ. ಹೀಗೆ ಎಷ್ಟು ಹತ್ತು ರಾತ್ರಿ ಕಳೆದುದಾಯ್ತು. ನಿನ್ನೆಯ ರಾತ್ರಿ ಮಾತ್ರ ಭಯಾನಕವಾಗಿತ್ತು.

ಅಧರಾಂಗವಾಯುವಿನಿಂದ ಬಳಲುತ್ತಿದ್ದ ಗಂಡನಿಗೆ ಔಷಧ ಹಚ್ಚಿ ಬಂದು ಶಾರದಕ್ಕ ಸುಮತಿಯ ಬಳಿಯಲ್ಲಿ ಮಲಗಲು ಬಂದಳು. ಮತ್ತೆ ಅದೇ ಹೊಟ್ಟೆ!

ಆ ಹೊಟ್ಟೆಯನ್ನು ನೋಡಿ ಶಾರದಕ್ಕ, ಹುಚ್ಚಾದಳು ನಿಜ. ಸಹಿಸಲಸಾಧ್ಯವಾದ ಸಂಕಟ. ಗೋಡೆಯ ಹತ್ತಿರ ಇಟ್ಟ ದೀಪವನ್ನಾರಿಸಿದಳು. ಗಾಢವಾದ ಕತ್ತಲಲ್ಲಿ ಸುಮತಿಯ ಬದಿಯಲ್ಲಿ ಬಂದು ಕುಳಿತಳು. ಹೊಟ್ಟೆ ಕಾಣಿಸುತ್ತಿದ್ದಿಲ್ಲ—ಮನಸ್ಸಿಗೆ ಅಷ್ಟೇ ಸಮಾಧಾನವಾಯ್ತು.

ಸುಮತಿ ಗೊರಕೆ ಹೊಡೆಯುತ್ತಿದ್ದಳು. ಬದಿಯ ಕೋಣೆಯಲ್ಲಿ ಗಂಡ ನರಳುತ್ತಿದ್ದ. ಶಾರದಕ್ಕ ಹಾಸಿಗೆಯ ಮೇಲೆ ಕಣ್ಣು ತೆರೆದು ಕೊಂಡು ಕುಳಿತಿದ್ದಳು. ಅವಳಿಗೆ ತಿಳಿಯದ ಹಾಗೆ ಅವಳ ಕೈ ಸುಮತಿಯ ಹೊಟ್ಟೆಯನ್ನು ಸವರ ತೊಡಗಿತು—ತನ್ನ ಕೈಯನ್ನು ಹೊಟ್ಟೆಯ ಮೇಲಿಟ್ಟೇ ವಿಚಾರಿಸತೊಡಗಿದಳು:

ತನಗೂ ಹೊಟ್ಟೆ ಇದೆ—ತನಗೂ ಎಲ್ಲ ಅಂಗಾಂಗಗಳೂ, ಆದರೂ ತನಗೇಕೆ ಹೊಟ್ಟೆ ಬರಲಿಲ್ಲ? ಬರುವುದಾಗಿದ್ದರೆ ಈಗಾಗಲೇ ಬರಬೇಕಾಗಿತ್ತು. ಇನ್ನು ಮುಂದೆ—ಸಾಧ್ಯವಿದೆಯೇ ?

ಬದಿಯ ಕೋಣೆಯಲ್ಲಿದ್ದ ಗಂಡ ನರಳುತ್ತಿದ್ದ. ಆ ನರಳುವಿಕೆ ಶಾರದಕ್ಕನ ಪ್ರಶ್ನೆಗೆ ನಕಾರಾತ್ಮಕ ಉತ್ತರವಿತ್ತಿದ್ದಿತು.

ಶಾರದಕ್ಕ ಒಂದು ಸಲ ಕೋಣೆಯತ್ತ ಕ್ರೂರನೋಟ ಬೀರಿದಳು; ಆದರೆ ಆ ನೋಟ ಗಂಡನಿಗೆ ಕಾಣುವಂತಿರಲಿಲ್ಲ. ಮತ್ತಾರಿಗೂ ಕಾಣಿಸುವಂತಿರಲಿಲ್ಲ. ಅವಳ ಮನಸ್ಸಿಗಷ್ಟೇ ಆ ನೋಟ ಕಾಣುತ್ತಿತ್ತು.

ನಿರಾಶೆಯ ಒಂದು ಉಸಿರಿನೊಂದಿಗೆ ಕೈಯನ್ನು ಸರಿಸಿದಳು; ಹಾಗೇ ಮತ್ತೆ ಮೂಲೆಯಲ್ಲಿದ್ದ ದೀಪವನ್ನು ಹೊತ್ತಿಸಿದಳು. ಮತ್ತೆ ಬೆಳಕು ಪಸರಿಸಿತು.

ಸುಮತಿಯತ್ತ ಮತ್ತೆ ದೃಷ್ಟಿಯನ್ನು ಬೀರಿದಳು ಸುಮತಿ ಅಸ್ತವ್ಯಸ್ತಳಾಗಿ ಬಿದ್ದಿದ್ದಾಳೆ. ಸೆರಗು ಸರಿದಿದೆ, ಪತ್ತಲ ಕೆಳಗಿಳಿದಿದೆ, ಬ್ಲೌಜಿನ ಬಟನ್ನು ಬಿಚ್ಚಿವೆ. ಹೊಟ್ಟೆ ಎದ್ದು ಕಾಣುತ್ತದೆ.

ಶಾರದಕ್ಕ ಆ ನೋಟಕಂಡು ಅಸ್ವಸ್ಥಳಾಗಿದ್ದಳು ತುಂಬುಹೊಟ್ಟೆ ಅವಳಿಗೆ ಸಂಕಟಸಹಿಸಲಸಾಧ್ಯವಾಯಿತು. ಆ ತಳಮಳದಲ್ಲಿ ನಾಲ್ಕೂ ನಿಟ್ಟಿಗೆ ದೃಷ್ಟಿ ಹರಿಸಿದಳು. ಮೂಲೆಯಲ್ಲಿದ್ದ ಹಾರಿಯಕೋಲು ಅವಳ ದೃಷ್ಟಿಯನ್ನು ಆಕರ್ಷಿಸಿತು. ಅವರ ಮನೆಯ ರೈತ—ಇಸಿದು ಕೊಂಡು ಹೋದ ಹಾರಿಯಕೋಲನ್ನು ಅಂದೇ ತಿರುಗಿಸಿದ್ದು, ಅದು ಅಲ್ಲಿಯೇ ಬಿದ್ದಿತ್ತು.

ಶಾರದಕ್ಕ ಮತ್ತೆ ದೀಪವನ್ನು ಪಣ್ಣದನ್ನಾಗಿ ಮಾಡಿ, ಹಾರಿಯ ಕೋಲನ್ನು ಕೈಯಲ್ಲಿರಿಸಿಕೊಂಡು ಸುಮತಿಯ ಬಳಿ ಬಂದುಕುಳಿತಳು.

ಅವಳ ಮನಸ್ಸು ಮಾತಾಡುತ್ತಿತ್ತು :

" ಪ್ರಸವವೇದನೆ ಇಲ್ಲದೆ ತಾಯಿಯಾದೆ. ಈಗ ಪ್ರಸವವೇದನೆ ಇಲ್ಲದೇ—ಈಗ ಅಜ್ಜಿಯಾಗು ! "

" ಯಾರು ಅಜ್ಜಿ—ಅಜ್ಜಿಯಾಗಲು ಅಕಾಶವವನ್ನೇ ಕೊಡುವುದಿಲ್ಲ. " ಒಂದು ಕೈಯಿಂದ ಹಾರಿಕೋಲನ್ನು ಗಟ್ಟಿಯಾಗಿ ಹಿಡಿದುಕೊಂಡಳು. ಮತ್ತೆ ಮನಸ್ಸು ಕೇಳಿತು:

"ಅಜ್ಜಿಯಾಗುವುದಿಲ್ಲವಾದರೆ ಕೊಲೆಗಡುಕಿಯಾಗುವಿಯಾ ?

" ಕೊಲೆಗಡುಕಿ ? ಛಿ ! "

ಶಾರದಕ್ಕ ಮೆಲ್ಲಗೆ ಎದ್ದು— ಕಳ್ಳಹೆಜ್ಜೆಯಿಂದ — ಹೊರ ವ್ಯಾಲೆಯಲ್ಲಿ ಹಾರಿಕೋಲನ್ನು ಮತ್ತೆ ಇರಿಸಿ ಬಂದಳು.

ಗಂಡ ಬದಿಯ ಕೋಣೆಯಲ್ಲಿ ನರಳುತ್ತಿದ್ದ. ಒಂದು ತೀರ್ಮಾನಕ್ಕೆ ಬಂದವಳಂತೆ ಶಾರದಕ್ಕ ಅಡುಗೆಯ ಕೋಣೆಯತ್ತ ನೋಟವನ್ನು ಬೀರಿದಳು.

ಮತ್ತೆ ಹಾಸಿಗೆಯಿಂದ ಎದ್ದಳು—ಗಂಡನ ಕೋಣೆಯ ದೀಪವನ್ನು ತೆರೆದಳು. ಗಂಡ ನರಳುತ್ತಿದ್ದ. ಶಾರದಕ್ಕ ಅವನ ಬದಿಗೆ

ತನ್ನ ಕೈಯನ್ನು ಉತ್ತರೀಯತ್ತ ಒಯ್ಯತೊಡಗಿದಳು. ಗಂಡ ನರಳುತ್ತಿದ್ದ. ಶಾರದಕ್ಕನ ಕೈ ಕಡವರಿಸತೊಡಗಿದುವು. ಮುಂದೆ ಹೋದ ಕೈ ಹಿಂದೆ ಬಂದುವು; ನಿಂತಲ್ಲಿಯೇ ನಿಂತುವು. ಶಾರದಕ್ಕನ ಸರ್ವಾಂಗ ಕಂಪಿಸತೊಡಗಿತ್ತು. ಮೈತುಂಬ ಬೆವರುಬಿಟ್ಟಿತು. ಕೈ ಒದ್ದೆಯಾಯಿತು. ಕುಳಿತಲ್ಲಿಯೇ ವಿಚಾರಿಸತೊಡಗಿದಳು :

" ಯಾರ ತಪ್ಪು ? ಅಪರಾಧಿ ಯಾರು ? "

ತಲೆಯಲ್ಲಿ ಕೋಲಾಹಲವೆದ್ದಿತು. ದ್ವಂದ್ವ ನಡೆಯಿತು. ಸಂಕಟ, ನೋವು, ತಳಮಳಗಳ ಕಾಯ್ದು ವಿಶ್ರಾಣವನ್ನು ಅವಳ ತಲೆಯಲ್ಲಿ ಸುರಿಯುತ್ತಿರುವಂತೆ ಭಾಸವಾಯಿತು. "ಅಪರಾಧಿ ಯಾರು? " ಎಂದು ಮತ್ತೆ ಕೇಳಿಕೊಂಡಳು:

' ತನ್ನ ಗಂಡ ! — ಗಂಡ....ಅಥವಾ ಇಂತಹ ಮುದುಕನ ಕೊರಳಿಗೆ ಕಟ್ಟಿದ ತನ್ನ ತಂದೆ ! - ತಂದೆ ಇವನ ಸಂಪತ್ತಿಗಾಗಿ ಬಾಯಿಬಿಟ್ಟು ತನ್ನನ್ನು ಇವನ ಕೊರಳಿಗೆ ಕಟ್ಟಿದರು. ಇವನ ಸಂಪತ್ತೇ ಅಪರಾಧಿ !—ಛೀ — ತಾನು ಹುಟ್ಟಿದ್ದೇ ಅಪರಾಧ ! " ಯಾವ ನಿರ್ಣಯಕ್ಕೂ ಬಾರದೆ ಶಾರದಕ್ಕ ಎದ್ದಳು.

ಗಂಡ ನರಳುತ್ತಲೇ ಇದ್ದ.

ಶಾರದಕ್ಕ ಮೆಲ್ಲನೇ ಬಾಗಿಲನ್ನು ಮುಚ್ಚಿಕೊಂಡು ಸುಮತಿಯ ಹತ್ತಿರ ಬಂದು ಕುಳಿತಳು —ಮೂಲೆಯಲ್ಲಿದ್ದ ದೀಪವನ್ನು ಸ್ವಲ್ಪ ದೊಡ್ಡದನ್ನಾಗಿ ಮಾಡಿದಳು.

ಹಾಗೆಯೇ ಹಾಸಿಗೆಯ ಮೇಲೆ ಹೊರಳಿದಳು. ಸುಮತಿಯತ್ತ ಬೆನ್ನು ಮಾಡಿ ಮಲಗಿದಳು. ನಿದ್ರೆ ಬಾರದಂತಾಗಿತ್ತು. ಮೂಲೆಯಲ್ಲಿದ್ದ ಹಾರಿಯಕೋಲು ಕಾಣಿಸಿತು. ಶಾರದಕ್ಕ ಬೆಚ್ಚಿದಳು, ನಾಲಗೆಯನ್ನು ಕಡಿದುಕೊಂಡಳು. ಕಣ್ಣು ಮುಚ್ಚಿದಳು ಹೆದರಿದಳು; ಕಂಪಿಸಿದಳು. ಮತ್ತೆ ನಳ್ಳುಬಿಟ್ಟಳು.

" ಯಾರ ತಪ್ಪಿಗಾಗಿ ಯಾರನ್ನು ಹೊಡೆಯಲು ಹೊರಟಿದ್ದೆ ? " ಎಂದು ನಾಚಿಕೆಯಾಗಿರಬೇಕು. ಆ ನಾಚಿಕೆ ನಗುವನ್ನು ತರಿಸಿತು, ನಕ್ಕಳು. ನಗು ಹೆಚ್ಚಾಯಿತು— ಆ ನಗುನಿನಿಂದ ಕಣ್ಣೀರು ಕೋಡಿಯಾಗಿ ಹರಿಯಿತು.

ಮತ್ತೆ ಮಗ್ಗಿಲನ್ನೂ ಬದಲಾಯಿಸಿದಳು. ಟೇಕಿನಲ್ಲಿ ಸುಮತಿಯನ್ನು ಜಿನ್ನಾಗಿ ದೃಷ್ಟಿಸಿ ನೋಡಿದಳು.

" ಸುಮತಿ ನಿಷ್ಕಲ್ಮಷ ಮಗುವಿನಂತೆ ನಿದ್ರಿಸುತ್ತಿದ್ದಳು ತುಂಬು ಗರ್ಭಿಣಿ—ಮೈ ಕೈಯಿಂದ ದುಂಡುದುಂಡಾಗಿದ್ದಾಳೆ—ಗಲ್ಲದ ಮೇಲೆ ಕಾಪು ಗುಲಾಬಿಯ ಬಣ್ಣ ಬಟ್ಟಲುಗಣ್ಣು—ಭರದಿಂದ ಬೆಳೆದ ಎಡೆ. ಹೊಕ್ಕುಳ ಕೆಳಗಿಳಿದ ಜೀರೆ ಗುಡ್ಡದಂತಿದ್ದರೂ ಹೊಟ್ಟೆ, ತೀರ ದೊಡ್ಡದಾಗಿ ಬೆಳೆದ ನಿತಂಬ !

ಶಾರದಕ್ಕ ಒಮ್ಮೆಲೆ ಅಳ್ಳಿರಿಗೊಂಡಳು. ಹೆಣ್ಣುಮಕ್ಕಳು ಬಸಿರಿರುವಾಗ ಹೀಗೆ ಕಾಣಿಸುತ್ತಾರೆಯೆ ? ಇಷ್ಟು ಲಕ್ಷಣವಾಗಿ ಕಾಣಿಸುತ್ತಾರೆಯೇ? ಇಷ್ಟು ಸುಂದರರಾಗಿ ಕಾಣಿಸಿಕೊಳ್ಳುತ್ತಾರೆಯೇ? ತಾನೂ ಹೀಗೆ ಕಾಣಿಸಬಹುದೇ ? ಹೀಗೇ ಕಂಡರೆ ಎಷ್ಟು ಚೆಂದ !

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಫಾಳೀಸು, ರೇಡಿಯೊ, ಗ್ರಾಮೊಫೋನ್ ಮಾರಾಟಮಾಡುವವರು, ರಿಪೇರಿ ಮಾಡುವವರು.

ಸಂಬುಗೆಯ ಮಾಲು ! ಸ್ವಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು ಬಿ. ಜೆ. ಮುತ್ತಗಿ

ಶಾರದಕ್ಕ ಒಂದು ಸಲ ಕೋಣೆಯತ್ತ ನೋಡಿದರು. ಅಲ್ಲಿ ಗಂಡ ನರಳುತ್ತಿದ್ದ ಶಾರದಕ್ಕ ಹಾಸಿಗೆಯಿಂದೆದ್ದು, ಕೋಣೆಯಲ್ಲಿದ್ದ ದೊಡ್ಡ ನಿಲುವುಗನ್ನಡಿಯನ್ನು ತಂದು —ತಾನು ಮಲಗಿಕೊಳ್ಳುವ ಸ್ಥಳದ ಎದುರು ಗೋಡೆಗೆ ಅಡ್ಡವಾಗಿರಿಸಿದಳು. ಹಾಗೆಯೇ ಮತ್ತೆ ಹಾಸಿಗೆಯ ಮೇಲೆ ಬುರುಳಿ, ಕನ್ನಡಿಯಲ್ಲಿ ನೂಡಿದ ತನ್ನ ಪ್ರತಿಬಿಂಬವನ್ನು ದಿಟ್ಟಿಸತೊಡಗಿದಳು.

ಮುಖ ಕಾಣಿಸ್ತಿತ್ತು. ಉಳಿದೆಲ್ಲ ಭಾಗ ಅರಿವೆಯಿಂದ ಮುಚ್ಚಿದ್ದಿತ್ತು. ಶಾರದಕ್ಕನ ಮನಸ್ಸು ಅಸ್ವಸ್ಥವಾಯಿತು. ಅವಸರ ಅವಸರವಾಗಿ—ತನ್ನ ಶಿರಗನ್ನು ದೂರ ತೂರಿದಳು- ಕುಬಸದ ಗಂಟನ್ನು ಬಿಚ್ಚಿದಳು — ಸೊಂಟಕ್ಕಿದ್ದ ಪತ್ತಲದ ಗಂಟನ್ನು ಪಡಿಲಿಸಿದಳು. ಜೀರೆಯನ್ನು ಹೊಕ್ಕುಳ ಕೆಳಗಿಳಿಸಿದಳು. ಮತ್ತೆ ಬೀದಿಯ ಭೀತಾರಿಯಂತೆ, ಸತೃಷ್ಣ ದೃಷ್ಟಿಯಿಂದ ಕನ್ನಡಿಯತ್ತ ನೋಡಿದಳು—

ಕುಬುಸ ಸರಿದಿದೆ-ಹರಿದಂತೆ ಭಾಸವಾಗುತ್ತಿತ್ತು. ಎದೆ ಜೋಲು ಬಿದ್ದಿವೆ... ಹೊಟ್ಟೆ ಒಳಸೇರಿದೆ - ಗಲ್ಲ ಗುಳಿಬಿದ್ದಿವೆ.

ಆಸ್ವಸ್ಥ ಮನಸ್ಸಿನಿಂದ ಶಾರದಕ್ಕ ತನ್ನ ಹೊಟ್ಟೆಯ ಮೇಲೆ ಕೈಯಾಡಿಸಿದಳು — ಮನಸ್ಸಿಗೆ ನೆಮ್ಮದಿಯಾಗಲಿಲ್ಲ. ಹಾಗೆಯೇ ಎದ್ದು ಕುಳಿತಳು. ಅವಳು ಕುಳಿತಾಗ ಕನ್ನಡಿಯಲ್ಲಿ ದೊಡ್ಡ ಹೊಟ್ಟೆ ಕಾಣಿಸಿತು. ಅದು ಸುಮತಿಯ ಪ್ರತಿಬಿಂಬ !

ಶಾರದಕ್ಕನ ಮನಸ್ಸಿನಲ್ಲಿ ಜ್ವಾಲಾಮುಖಿ ಒಮ್ಮೆಲೇ ಸ್ಫೋಟವಾಯಿತು— ಕತಕತ ಕುದಿಯತೊಡಗಿದಳು. ಅವಳ ದೃಷ್ಟಿ ಮೂಲೆಯತ್ತ ಹೋಯಿತು.

ಮೂಲೆಯಲ್ಲಿದ್ದುದು ಕಬ್ಬಿಣದ ಹಾರಿಯ ಕೋಲು : ಶಾರದಕ್ಕ ಹಲ್ಲು ಕಡಿದರು. ಜಂತಿಯ ಮೇಲಿದ್ದ ಹಲ್ಲಿ ಲೊಚಗುಟ್ಟಿತು. ಬದಿಯ ಕೋಣೆಯಲ್ಲಿದ್ದ ಗಂಡ ನರಳುತ್ತಿದ್ದ. ಸುಮತಿ ಗೊರಕೆ ಹೊಡೆಯುತ್ತಿದ್ದಳು.



ಶಾರದಕ್ಕ ಎದ್ದಳು. ಅದರೆ ಎದ್ದವಳು ತಡೆದು ನಿಂತಳು. ನಿಂತವಳು ಮತ್ತೆ ಕನ್ನಡಿಯತ್ತ ನೋಡಿದಳು—ಅಲ್ಲಿ ಸುಮತಿಯ ಮುಖ ಕಾಣುತ್ತಿತ್ತು.

ನಿಷ್ಕಪಟ ಭಾವದ ಮುಖವನ್ನೆ ಕಾಣುತ್ತಿತ್ತು. ಶಾರದಕ್ಕನ ಎದೆಯಲ್ಲಿ ಹೇಗೆಹೇಗೋ ಆಗತೊಡಗಿತು. ಇಂತಹ ನಿಷ್ಕಪಟ ಮಗುವನ್ನು ಕೊಲ್ಲಬಹುದೇ? ಅವಳು ಅಪರಾಧಿನಿಯೇ?

ಗಂಡ ಬಹಿರ್ದೆಸೆಗೆಂದು ಹೋಗಿದ್ದಾಗ ಅವಳು ಬಂದಿದ್ದಳು. ಆ ನರಳುವಿಕೆ "ತಾನು ಅಪರಾಧಿ" ಎಂದು ಉತ್ತರಿಸಿದಂತೆ ಶಾರದಕ್ಕನಿಗೆ ಕೇಳಿಸಿತು.

ಶಾರದಕ್ಕ ಪುನಃ ಕನ್ನಡಿಯತ್ತ ನೋಡಿದಳು ಸುಮತಿಯ ಮುಗ್ಧ ಮುಖ ನೋಡಿ ಅವಳ ಕರುಳು ಕಿತ್ತು ಬಂದಿತು. ಎಂತಹ ಚೆಂದವಾದ ಹೆಣ್ಣು. ಅವಳು ಭಾಗ್ಯವಂತೆ—ಅವಳ ಭಾಗ್ಯನೋಡಿ. ಯಾದರೂ ತಾನು ಸಂತೋಷಿಸಬೇಕು—ಎನ್ನುವ ಮನೋಭಾವ ಅವಳ ಮನಸ್ಸಿನಲ್ಲಿ ಕಾಲಿಡುತ್ತಿತ್ತು.

ಶಾರದಕ್ಕ ಕಣ್ಣೀರು ಸುರಿಸಿದಳು—ಸುರಿಯುವ ಕಣ್ಣೀರಲ್ಲಿ ಅವಳ ಕೃತ್ಯ ತೊಳೆದು ನಡೆದಿತ್ತು. ಪಶ್ಚಾತ್ತಾಪದಿಂದ ದಗ್ಧಳಾಗಿ, ದೀಪ ಕಣ್ಣಿದನ್ನಾಗಿ ಮಾಡಿ— ಸುಮತಿಯ ತೀರ ಹತ್ತಿರ ಬಂದು —ಪ್ರೇಮದಿಂದ ಸುಮತಿಯ ತಲೆ ನೇವರಿಸತೊಡಗಿದಳು.

ಅವಳ ಮನಸ್ಸಿಗೇನೋ ಒಂದು ಬಗೆಯ ಸಮಾಧಾನವಾಗ ತೊಡಗಿತ್ತು—ಶಾರದಕ್ಕ ಸುಮತಿಯ ಗಲ್ಲ ನೇವರಿಸತೊಡಗಿದ್ದಳು.

ಸುಮತಿ ಚಟ್ಟನೆ ಚೀರಿ ಎದ್ದಳು—ಶಾರದಕ್ಕ ಗಾಬರಿಯಾಗಿ ಎದ್ದು ದೀಪದೊಡ್ಡದು ಮಾಡಿದಳು. ನೆರೆಮನೆಯ ರಂಗಕ್ಕ ಓಡಿಬಂದು ಬಾಗಿಲು ಬಡಿದರು. ಮೂಲಿಮನೆಯ ರಾಧಾಬಾಯಿ ಓಡುತ್ತ ಬಂದರು. ಮಾಳಿಗೆಯ ಮೇಲೆ ಬಾಡಿಗೆಯಿಂದಿದ್ದ ಗೋದಕ್ಕ ಓಡಿ ಬಂದರು.

ಎಲ್ಲರೂ ಸುಮತಿಯ ಬದಿಯಲ್ಲಿ ಕೂಡಿದರು. ಸುಮತಿಗೆ ವೈದ್ಯರ ಮೇಲೆ ಎಚ್ಚರು ಬರುವುದಕ್ಕೆ ಅರ್ಧಗಂಟೆ ಕಾಲ ಹಿಡಿಯಿತು.

ಆಂಬುಲೆನ್ಸ್ ಹೇಳಿದಳು:

"ನನ್ನ—ನನ್ನ ಕುತ್ತಿಗೆ—ಶಾರದಾಬಾಯಿಯಾ, ನೀ ಹಿಚಿರೆವ್ವಾಂಗ ಆಗಲಕ್ಕೆ ಹತ್ತಿತ್ತು!"

ಕೂಡಿದವರೆಲ್ಲ—ಒಬ್ಬೊಬ್ಬರಾಗಿ ಸಂಶಯಿತ ದೃಷ್ಟಿಯಿಂದ ಶಾರದಕ್ಕನ ಕಡೆ ನೋಡತೊಡಗಿದರು. ಶಾರದಕ್ಕ ಅಪರಾಧಿನಿಯಂತೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ನರಳುತ್ತಿರುವ ಗಂಡ—ಕುಂಟುತ್ತ—ಹಾಸಿಗೆಯ ಹತ್ತಿರ ಬಂದ.

ಕೂಡಿದ ಹೆಣ್ಣುಮಕ್ಕಳು—ಪಿಸುಪಿಸು ಮಾತಾಡತೊಡಗಿದ್ದರು.

ಹೊರಗೆ ಕೋಳಿ ಕೂಗುತ್ತಿತ್ತು.

ಬೆಳಗಾದಾಗ ಸುಮತಿ—ಊರಲ್ಲಿಯೇ ಇದ್ದ ತನ್ನ ಅತ್ತಿಗೆಯ ಮನೆಗೆ ನಡೆದುಬಿಟ್ಟಳು.

ನಿನ್ನೆ ನಡೆದ ಘಟನೆಯನ್ನೇ ವಿಚಾರಿಸುತ್ತ—ಶಾರದಕ್ಕ ಬಾಗಿಲಲ್ಲಿಯೇ ನಿಂತಿದ್ದಾಳೆ. ಕತ್ತಲು ಪಸರಿಸುತ್ತಲಿದೆ. ಬೀದಿಯ ದೀಪ ಹತ್ತಿಕೊಂಡಿವೆ. ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ. ಅವಳ ಒಂದು ಕೈ ಚೌಕಟ್ಟನ್ನು ಹಿಡಿದಿದೆ. ಇನ್ನೊಂದು ಕೈ ಹಾಗೆಯೇ ಇದೆ. ಹಾಗೆಯೇ ಇದೆಯಾದರೂ—ಬೆರಳುಗಳು ಮಾತ್ರ ಚಲಿಸುತ್ತಿವೆ. ಅವು ಲೆಕ್ಕ ಹಾಕುತ್ತಿವೆ. ಲೆಕ್ಕ ತಪ್ಪುತ್ತಿದೆ. ಆದರೂ ಪ್ರಯತ್ನ ನಡೆದಿದೆ.

ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾರೆ. ತನ್ನ ಮನಸ್ಸಿನ ಬಾಯಿಲೆಕ್ಕವನ್ನು ಬಿಡಿಸಲಸಮರ್ಥಳಾದ. ಶಾರದಕ್ಕ ಇನ್ನೂ ಬಾಗಿಲಲ್ಲಿಯೇ ನಿಂತಿದ್ದಾಳೆ

ಪ್ರಿಯವಾಚಕ,

ಒಂದು ನಿಮಿಷ!

ಪ್ರ. ವಿ. ಕೃ. ಗೋಕಾಕ ಅವರ

ಅದ್ಭುತರಮ್ಯ-ಪ್ರಬುದ್ಧ ಕಾವ್ಯಕೃತಿ

ನೀರದ

ಚಿತ್ತಾಕರ್ಷಕವಾಗಿ ಚಿತ್ರಮಯವಾಗಿ

ಪ್ರಕಟವಾಗಲಿದೆ.

ವಿವರಗಳಿಗೆ

ಹರಾಗ ಪ್ರಕಾಶನ, ಧಾರವಾಡ

ಇವರಿಗೆ ಬರೆಯುವದು.

ಬುನ್‌ಸನ್

ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ, ಎಂ. ಎಸ್‌ಸಿ. ಉಸ್ಮಾನಿಯಾ ವಿ. ವಿ. ನಿಲಯ, ಹೈದರಾಬಾದ್

ಭೌತಿಕಶಕ್ತಿಯ ದ್ರಷ್ಟಾರನೂ 'ಋಷಿ' ಪದವಿಗೆ ತಕ್ಕವನಾಗಿರುವನು. ಆಧ್ಯಾತ್ಮಿಕ ದ್ರಷ್ಟಾರ ಆತ್ಮದ ಆನಂದಮಾರ್ಗವನ್ನು ಕಂಡುಹಿಡಿದವನಾದರೆ ಭೌತಿಕದ್ರಷ್ಟಾರ ಜೀವನದ ಸುಖ-ಶಾಂತಿಯ ಮಾರ್ಗಕಾರಣವನು. ಬುನ್‌ಸನನು ಇಂತಹ ಒಬ್ಬ ದ್ರಷ್ಟಾರ.

ಈ ಪ್ರಪಂಚದಲ್ಲಿ ಬಹುಜನರು ಹುಟ್ಟುತ್ತಾರೆ. ಉಸಿರಾಡಿಸುತ್ತಾರೆ. ಆದರೆ ನಿಜವಾಗಿ ಜೀವನದಲ್ಲಿ ಹೇಳಿಕೊಳ್ಳಬಹುದಾದ ಅಥವಾ ಮಹತ್ತ್ವದ ಕಾರ್ಯಗಳನ್ನು ಸಾಧಿಸಿದವರು ಕೆಲವರೇ ಇದ್ದಾರೆ. ಅಂಥವರಲ್ಲಿ ೧೯ನೆಯ ಶತಮಾನದ ಪ್ರಸಿದ್ಧ ವಿಜ್ಞಾನಿಗಳಾದ ರಾಬರ್ಟ್ ವಿಲ್‌ಹೆಲ್ಮ್ ಬುನ್‌ಸನ್ ಅವರೂ ಒಬ್ಬರು. ವಿಜ್ಞಾನಕ್ಕಾಗಿ, ವಿಜ್ಞಾನದ ಪ್ರಗತಿಗಾಗಿ ಅವರು ತಮ್ಮ ಜೀವನವನ್ನೇ ಧಾರೆಯೆರೆದರು. ವೈಜ್ಞಾನಿಕ ಸಂಶೋಧನೆಗಳಿಗಿಂತ ಮತ್ತಾವ ಕಾರ್ಯವೂ ಫಲತರವಾದುದಲ್ಲವೆಂದು ಅವರು ತಿಳಿದುಕೊಂಡಿದ್ದರು.

ಬುನ್‌ಸನ್ ಅವರು ಕ್ರಿ. ಶ. ೧೮೧೧ರಲ್ಲಿ ಮೇ ತಿಂಗಳ ೩೧ರಂದು Gottingen ನಲ್ಲಿ ಜನಿಸಿದರು. ಅವರ ತಂದೆಯವರು ಪುಸ್ತಕಭಂಡಾರದ ಅಧಿಕಾರಿಗಳಾಗಿದ್ದಲ್ಲದೆ, ವಿಶ್ವವಿದ್ಯಾನಿಲಯದಲ್ಲಿ ಭಾಷಾಶಾಸ್ತ್ರದ ಮುಖ್ಯ ಪ್ರಾಧ್ಯಾಪಕರೂ ಆಗಿದ್ದರು. ಬುನ್‌ಸನ್ ಅವರು Holzmindesn ನಲ್ಲಿರುವ ವಿಶ್ವವಿದ್ಯಾನಿಲಯಗಳಿಗೆ ವಿದ್ಯಾರ್ಥಿಗಳನ್ನು ತರಬೇತುಮಾಡುವ ಮೇಲುದರ್ಜೆಯ ವಿದ್ಯಾಶಾಲೆಯಲ್ಲಿ ತಮ್ಮ ಶಿಕ್ಷಣವನ್ನು ಪಡೆದರು. ಅನಂತರ ಕ್ರಿ. ಶ. ೧೮೩೦ರಲ್ಲಿ ಅವರು Gattnigen ವಿಶ್ವವಿದ್ಯಾನಿಲಯದಲ್ಲಿ ಪ್ರವೇಶವನ್ನು ಪಡೆದು ಸ್ಟ್ರೋಮಿಯರ್ (Stromeyer) ಎಂಬ ವಿಜ್ಞಾನಿಯ ನೇತೃತ್ವದಲ್ಲಿ ರಸಾಯನಶಾಸ್ತ್ರದ ವಿಷಯದಲ್ಲಿ ಅಭ್ಯಾಸವನ್ನು ಪ್ರಾರಂಭಿಸಿದರು. ಅಲ್ಲಿ ಅವರು ಎರಡು ವರ್ಷಗಳ ಕಾಲ ಪತಿಯಾಗಿ ಸಂಶೋಧನೆ ನಡೆಸಿ, "ಉದ್ರ್ರತಾಮಾನಕಗಳ ಬೇರೆ ಬೇರೆ ಪ್ರಕಾರಗಳ" (Different types of hygnometers) ಬಗ್ಗೆ ಒಂದು ಪ್ರಾಪ್ತಪ್ರಬಂಧವನ್ನು ಲ್ಯಾಟಿನ್ ಭಾಷೆಯಲ್ಲಿ ಬರೆದು "ಡಾಕ್ಟೊರೆಟ್" ಡಿಗ್ರಿಯನ್ನು ಪಡೆದರು. ಯೂರೋಪಿನ ಅನೇಕ ದೇಶಗಳಿಗೆ ಭೇಟ್ಟಿಕೊಟ್ಟು ಅಲ್ಲಿಯ ಪ್ರಸಿದ್ಧ ವಿಜ್ಞಾನಿಗಳೊಡನೆ ಸಂಪರ್ಕವನ್ನು ಬೆಳೆಸಿಕೊಂಡರು. ಪ್ರಯಾಣವನ್ನು ಮುಗಿಸಿಕೊಂಡು ಬಂದ ಮೇಲೆ ಅವರನ್ನು Gottingen ವಿಶ್ವವಿದ್ಯಾನಿಲಯದಲ್ಲಿ ರಸಾಯನಶಾಸ್ತ್ರದ ಅಧ್ಯಾಪಕರನ್ನಾಗಿ ನೇಮಿಸಲಾಯಿತು. ಇಲ್ಲಿ ಅವರು ಕ್ರಿ. ಶ. ೧೮೩೫ರ ವರೆಗೆ ಕೆಲಸಮಾಡಿದರು. ಒಂದು ವರ್ಷದ ತರುವಾಯ ಅವರನ್ನು Casselನಲ್ಲಿರುವ ವಿಜ್ಞಾನಸಂಸ್ಥೆಯಲ್ಲಿ ತೆಗೆದುಕೊಳ್ಳಲಾಯಿತು. ಮೂರು ವರ್ಷಗಳ ಅನಂತರ ಅವರು Murburg ವಿಶ್ವವಿದ್ಯಾನಿಲಯದಲ್ಲಿ ಮುಖ್ಯ ಪ್ರಾಧ್ಯಾಪಕರಂತೆ ನೇಮಕ ಹೊಂದಿದರು; ಮತ್ತು ಕ್ರಿ. ಶ. ೧೮೫೨ರ ವರೆಗೆ ತಮ್ಮ ಸೇವೆಯನ್ನು ಸಲ್ಲಿಸಿದರು. ಕ್ರಿ. ಶ. ೧೮೫೨ರಲ್ಲಿ Heidelberg ವಿಶ್ವವಿದ್ಯಾನಿಲಯದಲ್ಲಿ ಮುಖ್ಯ ಪ್ರಾಧ್ಯಾಪಕರಂತೆ ಕೆಲಸಮಾಡಲು ಒಪ್ಪಿಕೊಂಡು, ನಿವೃತ್ತಿಯಾಗುವ ವರೆಗೆ ಅಲ್ಲಿಯೇ ಉಳಿದರು. ಈ ರೀತಿಯಾಗಿ ಅವರು ೫೭ ವರ್ಷಗಳ ವರೆಗೆ ವಿಜ್ಞಾನದ ಪ್ರಗತಿಗಾಗಿ ಶ್ರಮಿಸಿದರು.

Carrelನಲ್ಲಿರುವ ವಿಜ್ಞಾನಸಂಸ್ಥೆಯಲ್ಲಿ ಕೆಲಸಮಾಡುತ್ತಿದ್ದಾಗ ಬುನ್‌ಸನ್ ಅವರು, ಆರ್ಸಿನಿಕೆನ (Arsenic) ಸಾವಯವ ಸಂಯುಕ್ತಗಳ ವಿಷಯದಲ್ಲಿ ಸಂಶೋಧನೆಯನ್ನು ನಡೆಸಿದರು ಅನೇಕ ವರ್ಷಗಳ ಹಿಂದೆ ಫ್ರಾನ್ಸಿನ ವಿಜ್ಞಾನಿ Cadet ಎಂಬಾತನು, ಆರ್ಸಿನಿಸ್ ಆಕ್ಸೈಡನ್ನು ಪೊಟ್ಯಾಸಿಯಂ ಎಸಿಟೇಟನೊಂದಿಗೆ ಬೆಚ್ಚಿ ಇಳಿಸುವುದರಿಂದ ಒಂದು ತೀಕ್ಷ್ಣ ವಾಸನೆಯುಳ್ಳ ದ್ರವ ಉತ್ಪನ್ನವಾಗುತ್ತದೆಂದೂ, ಅದು ಭಯಂಕರ ವಿಷದಿಂದ ಕೂಡಿರುವುದಲ್ಲದೆ ತನ ಪ್ಪಕ್ಕೆ ತಾನೆ ಸುಲಭವಾಗಿ ಉರಿದುಹೋಗುತ್ತದೆಯೆಂದೂ ತೋರಿಸಿಕೊಟ್ಟಿದ್ದನು. ಈ ದ್ರವವು ಒಂದು ವಿಷಪದಾರ್ಥವಾದುದರಿಂದ, ಅನೇಕ ವರ್ಷಗಳವರೆಗೆ ಇದರ ಬಗ್ಗೆ ಸಂಶೋಧನೆಗಳು ನಡೆಯಲಿಲ್ಲ. ಆದರೆ ಬುನ್‌ಸನ್ ಅವರು ಈ ಬಗ್ಗೆ ಸಂಶೋಧನೆಯನ್ನು ಮುಂದುವರಿಸಿ, ಈ ಭಯಂಕರ ದ್ರವದ ಮುಖ್ಯ ಅಂಶವೆ ಆರ್ಸಿನಿಕೆನ ಸಾವಯವ ಸಂಯುಕ್ತವಾಗಿದೆಯೆಂದೂ, ಅದು ಗುಣದಲ್ಲಿ ಬಹುಮಟ್ಟಿಗೆ ಲೋಹದ ಆಕ್ಸೈಡನ್ನು ಹೋಲುತ್ತದೆಯೆಂದೂ ತೋರಿಸಿಕೊಟ್ಟರು. ಮತ್ತು ಅದನ್ನು "ಕೆಕೊಡಿಲ್" (Cacodyl) ಎಂದು ಕರೆದರು. ಶೇಕಡ ೫೪ರಷ್ಟು ಕಾರ್ಬನ್ ಇರುವ ಆರ್ಸಿನಿಕಿನಿಂದ ಕೂಡಿದ "ಕೆಕೊಡಿಲಿಕ್ ಆಮ್ಲ"ವು ವಿಷರಹಿತವಾಗಿದೆಯೆಂಬುದನ್ನು ಕಂಡುಹಿಡಿದನು. ಈ ಪ್ರಯೋಗಗಳಿಂದಾಗಿ ವಿಜ್ಞಾನಪ್ರಪಂಚದಲ್ಲಿ ಖ್ಯಾತಿಯನ್ನು ಪಡೆದರು ಆದರೆ 'ಕೆಕೊಡಿಲ್ ಸೈನೈಡ್'ನ (Cacodyl cyanide) ಗುಣಧರ್ಮಗಳನ್ನು ಪರೀಕ್ಷಿಸುತ್ತಿದ್ದಾಗ, ಆದರ ಆಸ್ಫೋಟನೆಯಿಂದ ಬುನ್‌ಸನ್ ಅವರು ತಮ್ಮ ಬಲಗಣ್ಣಿನ ದೃಷ್ಟಿಯನ್ನು ಕಳೆದುಕೊಂಡರು. ಮತ್ತು

ಈ ಸಂಶೋಧನೆಯನ್ನು ಕೈಕೊಂಡಾಗ, ಉಕ್ಕನ್ನವಾದ ಅನೀಗಳ ವಾಸನೆಯನ್ನು ಸೇವಿಸುವುದರ ಫಲವಾಗಿ. ಅನೇಕ ವಾರಗಳ ಕಾಲ ಬೇನೆಯಿಂದ ಬಳಲಿದರು. ಅಂದಿನಿಂದ ಅವರು ಕೇವಲ ನಿರವಯವ ರಸಾಯನ ಶಾಸ್ತ್ರ (Inorganic chemistry)ದ ಕ್ಷೇತ್ರದಲ್ಲಿ ಕೆಲಸಮಾಡಲು ನಿರ್ಧರಿಸಿದರು.

ಕ್ರಿ. ಶ. ೧೮೪೫ರಲ್ಲಿ ಬುನ್‌ಸನ್ ಅವರ ವ್ಯಾಟ್ಸನಿನ ಬದಲಾಗಿ ಹಚ್ಚು ಸುಟುವುಳ್ಳ ಕಾರ್ಬನಿನ ವಿದ್ಯುದ್ರವ (Electrode)ವನ್ನು ಉಪಯೋಗಿಸಿ, ವಿದ್ಯುತ್‌ಕೋಶವನ್ನು ತಯಾರಿಸಿದರು. ಇದರ ಸಹಾಯದಿಂದ ಅವರು ನೀರಿನ ವಿಭಜನೆಯ ಬಗ್ಗೆ ಪರೀಕ್ಷೆ ನಡೆಸಿದರು. ಇದಾದ ನಾಲ್ಕು ವರ್ಷಗಳ ಅನಂತರ, ಬುನ್‌ಸನ್ ಅವರಿಗೆ ಒಬ್ಬ ಅಂಗ್ಲ ವಿಜ್ಞಾನಿಯೊಂದಿಗೆ "ಅಂಗ್ಲ ತಾಂಡವಾಳದ ಉತ್ಪತ್ತಿಯ ವಿಧಾನ"ದ ಬಗ್ಗೆ ಪರೀಕ್ಷೆ ನಡೆಸಲು ಅಧಿಕಾರನೀಡಲಾಯಿತು. ಬುನ್‌ಸನ್ ಅವರು ಈ ವಿಷಯದಲ್ಲಿ ಆಳವಾದ ಅಧ್ಯಯನ ನಡೆಸಿ, ಇಂಧನದ ಕೇವಲ ಶೇಕಡ ೧೫ರಷ್ಟು ಅಪಕರ್ಷಣ ಶಕ್ತಿ (Reducing power)ಯು, ಈ ವಿಧಾನದಲ್ಲಿ ಉಪಯೋಗವಾಗುತ್ತದೆಂದೂ, ಉಳಿದುದೆಲ್ಲವೂ ಕಾರ್ಬನ್ ಮಾನಾಕ್ಸೈಡಿನ ರೂಪದಲ್ಲಿ ವ್ಯರ್ಥವಾಗಿ ಹೋಗುತ್ತದೆಂದೂ ಮತ್ತು ಇದನ್ನು ಉಪಯೋಗಿಸಬಹುದಾಗಿದೆಯೆಂದೂ ತೋರಿಸಿಕೊಟ್ಟರು. ಅಲ್ಲದೆ ಅಮೋನಿಯಂ ಮತ್ತು ಸೈನೊಜನ್ ಲವಣಗಳನ್ನು ಉಪಜನ್ಯಗಳಂತೆ ಪಡೆಯಬಹುದಾಗಿದೆಯೆಂಬುದನ್ನು ಗಮನಕ್ಕೆ ತಂದರು. ಇಂಥ ವಿಶ್ಲೇಷಣೆಯ ಪರಿಣಾಮವಾಗಿ ಅನಿಲ ವಿಶ್ಲೇಷಣದಂಥ ಮಹತ್ವಪೂರ್ಣವಾದ ವಿಷಯದ ಬಗ್ಗೆ ಪುನರ್ನಿರೀಕ್ಷಣೆಯು ನಡೆಯಿತು, ಅದರ ವಿಷಯ ವ್ಯಾಪ್ತಿ ಮತ್ತು ವಿಸ್ತಾರಗಳು ಹೆಚ್ಚಿದುವು. ಬುನ್‌ಸನ್ ಅವರ "Gasometrische Methoder" ಎಂಬ ಗ್ರಂಥವು ಇಂದಿಗೂ ಆ ವಿಷಯದ ಬಗ್ಗೆ ಒಂದು ಉಲ್ಲೇಖನ ಗ್ರಂಥವಾಗಿದೆ. ಇತ್ತೀಚೆಗೆ ಹೆಚ್ಚು ಶೀಘ್ರಕಾರಿಯಾದ ವಿಧಾನಗಳು ಕಂಡುಹಿಡಿಯಲ್ಪಟ್ಟಿದ್ದರೂ ಅವು ಅವರ ಗ್ರಂಥದ ಸೂಕ್ಷ್ಮತೆ ಮತ್ತು ಯಥಾರ್ಥತೆಯನ್ನು ಎಷ್ಟೋ ದಶಕಗಳ ವರೆಗೆ ಮೀರಿಸಲಿಲ್ಲ.

ಅನಿಲಜ್ವಾಲೆಯ ಬೇರೆ ಬೇರೆ ಪ್ರಕಾಶರಹಿತ ಭಾಗಗಳ ಬಗ್ಗೆ ಬುನ್‌ಸನ್ ಅವರು ಅಧ್ಯಯನ ನಡೆಸಿ, ಒಂದು 'ದೀಪಕ' (Burner) ವನ್ನು ಕಂಡುಹಿಡಿದರು. ಈಗಲೂ ಈ ದೀಪಕವು ಅವರ ಹೆಸರಿನಿಂದ ಕರೆಯಲ್ಪಡುತ್ತದೆ. ಜ್ವಾಲೆಯ ಅನೇಕ ಭಾಗಗಳನ್ನು ಉಪಯೋಗಿಸಿ ಅವರು ಖನಿಜಲವಣಗಳಲ್ಲಿರುವ ಅಂಶಗಳನ್ನು ಪರೀಕ್ಷಿಸುವುದರಲ್ಲಿ ಸಮರ್ಥರಾದರು.

ಬುನ್‌ಸನ್ ಅವರು ಕ್ರಿ. ಶ. ೧೮೫೬ರಲ್ಲಿ ಮೂರು ನಾಲ್ಕು ತಿಂಗಳ ವರೆಗೆ 'ಐಸ್‌ಲ್ಯಾಂಡಿ' (Iceland) ನಲ್ಲಿದ್ದು, ಅಲ್ಲಿ ಸಿಕ್ಕುವ ಕಲೆಗಳ ವಿಷಯದಲ್ಲಿ ಅಧ್ಯಯನ ನಡೆಸಿದರು. ಈ ಮೊದಲು ಬಿಸಿನೀರಿನ ಬುಗ್ಗೆಯ ನೀರು (Geyser water) ಜ್ವಾಲಾಮುಖಿಯಿಂದ ಉಂಟಾಗುತ್ತದೆಂದು ಅನೇಕ ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದರು. ಆದರೆ ಬುನ್‌ಸನ್ ಅವರು ಇಂಥ ನೀರು ಜ್ವಾಲಾಮುಖಿಯಿಂದ ಉಂಟಾಗುವುದಿಲ್ಲವೆಂದೂ, ಇವೇ ತೆರದ ನೀರನ್ನು ಮಳೆಯ ನೀರನ್ನು ಕಿಲೆಗಳ ಸಂಗಡ ಕುದಿಸುವುದರ ಮೂಲಕ ತಯಾರಿಸಬಹುದಾಗಿದೆಯೆಂಬುದನ್ನೂ ತೋರಿಸಿಕೊಟ್ಟರು. ಅಲ್ಲದೆ ಕೇವಲ ಕ್ಷಾರದಿಂದ ಕೂಡಿದ ಬುಗ್ಗೆಗಳಲ್ಲಿ 'ಸಿಲಿಕಾ'ವನ್ನು ಕರಗಿಸಿಕೊಂಡು ಬಿಸಿನೀರಿನ ಬುಗ್ಗೆಯನ್ನು ಉಂಟುಮಾಡುತ್ತವೆಯೆಂದು ಗೊತ್ತುಹಚ್ಚಿದರು.



ಕ್ರಿ. ಶ. ೧೮೫೫ರಲ್ಲಿ ಅವರು "ಐಡೊಮೆಟ್ರಿ" (Iodimetry)ಯ ಬಗ್ಗೆ ಸರಿಸುಮಾರಾಗಿ ಅನ್ವಯಿಸಕ್ಕ "ಗಾತ್ರಮಾಪನದ ವಿಧಾನ" (Volumetric methods)ಗಳ ನಿರೂಪಣೆಯಿಂದ ಕೂಡಿದ ಒಂದು ಆಧಾರಭೂತವಾದ ಗ್ರಂಥವನ್ನು ಪ್ರಕಟಿಸಿದರು.

ಅವರು ತಮ್ಮ ವಿದ್ಯಾರ್ಥಿಗಳೊಂದಿಗೆ ರಾಸಾಯನಿಕ ಕ್ರಿಯೆಗಳ ಮೇಲೆ ಬೆಳಕಿನ ಕ್ರಿಯೆಯ ಬಗ್ಗೆ ಪರಿಮಾಣಾತ್ಮಕ (Quantitative) ಅಧ್ಯಯನವನ್ನು ನಡೆಸಿದರು.

ಸೂರ್ಯನಲ್ಲಿ ಕೆಲವೊಂದು ಮೂಲವಸ್ತುಗಳು ಅನಿಲರೂಪದಲ್ಲಿರುವುದೆ ಸೌರವರ್ಣಪಟಲ (Solar Spectrum)ದಲ್ಲಿರುವ ಕಪ್ಪು ಬಣ್ಣದ "Fraunhofer ರೇಖೆ"ಗಳಿಗೆ ಮೂಲ ಕಾರಣವೆಂಬುದನ್ನು ವರ್ಣಪಟಲದರ್ಶಕ (Spectroscope)ದ ಸಹಾಯದಿಂದ ತೋರಿಸಿಕೊಟ್ಟರು. ಕೆಲವು ಬುಗ್ಗೆಗಳಲ್ಲಿರುವ ನೀರಿನ ವಿಶ್ಲೇಷಣಕ್ಕಾಗಿ ವರ್ಣಪಟಲದರ್ಶಕವನ್ನು ಉಪಯೋಗಿಸಿದಾಗ ಅವರು ರುಬೀಡಿಯಂ ಮತ್ತು ಸೀಜಿಯಂ (Rubidium and Cesium) ಎಂಬ ಎರಡು ಹೊಸ ಮೂಲವಸ್ತುಗಳನ್ನು ಕಂಡುಹಿಡಿದರು.

ಮೇಲೆ ಹೇಳಿದ ಉದಾಹರಣೆಗಳಿಂದ ಜನಶ್ರುತವಾಗಿರುವ ಅವರ ಹಲವೇ ಅವಿಷ್ಕಾರಗಳ ಪರಿಚಯ ನಮಗೆ ಸಿಕ್ಕುತ್ತದೆ. ಈ ಅವರ ಮೌಲಿಕವಾದ ಕುಶಲ ಯೋಜನೆಯ ಉಪಾಯಗಳು ಮತ್ತು ಸುಲಭವಾಗಿ ಉಪಯೋಗಿಸಬಹುದಾದ ಅವರ ಪ್ರಯೋಗಶಾಲೆಯ ಕುಶಲ ಸಾಮಗ್ರಿಗಳು ಇನ್ನೂ ಹೆಚ್ಚು ಜನಶ್ರುತವಾಗಿಲ್ಲ ಬುನ್‌ಸನ್ ದೀಪಕ, ವಿದ್ಯುತ್‌ಕೋಶ, ನೀರ್ಗಲ್ಲು ಉಷ್ಣಮಾಪಕ (Ice Calorimeter), ಬುನ್‌ಸನ್ ವಾಲ್ವ್ (Bunsen Valve)

ಇಸೆಲ್ಲವೂ ಆ ಮೇಧಾವಿಯ ಕಾರ್ಯಕುಶಲತೆ ಮತ್ತು ವ್ಯವಹಾರಿಕ ಬುದ್ಧಿಯನ್ನು ನಮ್ಮ ನೆನಪಿಗೆ ತಂದುಕೊಡುತ್ತವೆ

ಬುನ್‌ಸನ್ ಅವರ ಜೀವನ ತುಂಬ ಸರಳವಾಗಿತ್ತು. ಸಣ್ಣವರು ಮತ್ತು ದೊಡ್ಡವರು ಎಂಬ ಭೇದಭಾವನೆ ಅವರಲ್ಲಿ ಲಿಲ್ಲ. ಅವರು ಎಲ್ಲರೊಡನೆಯೂ ಬೆರೆಯುತ್ತಿದ್ದರು. ಅವರು ಕೊನೆಯವರೆಗೂ ಬ್ರಹ್ಮಚಾರಿಯಾಗಿಯೇ ಉಳಿದರು.

ಅವರು ಒಬ್ಬ ಪ್ರಸಿದ್ಧ ಶಿಕ್ಷಕರಾಗಿದ್ದರು. ಕಲಿಸುವುದೆಂದರೆ ಅವರಿಗೆ ತುಂಬ ಇಷ್ಟ. ಅವರ ವಿಷಯ ಪ್ರತಿಪಾದನೆಯು ಸ್ಪಷ್ಟವಾಗಿದ್ದು ಹೇಳುವ ರೀತಿ ಸುಲಭವಾಗಿರುತ್ತಿತ್ತು; ವಿದ್ಯಾರ್ಥಿಗಳ ಮನ ಮುಟ್ಟುವಂತಿತ್ತು. ಅವರು ವಿಷಯದ ಪ್ರತಿಯೊಂದು ಅಂಶವನ್ನೂ ನೌಕಿಕ ರೂಪದಲ್ಲಿ ವಿಶದೀಕರಿಸುತ್ತಿದ್ದರು ಎಂತಲೆ ವಿದ್ಯಾರ್ಥಿಗಳು ಅವರ ಪ್ರಯೋಗಶಾಲೆಯಲ್ಲಿ ಕೆಲಸವಾಡಲು ಹಾತೊರೆಯುತ್ತಿದ್ದರು. ಬೈಲ್‌ಸ್ಟೈನ್, ಲೋಥರ್, ಲ್ಯಾಂಡೊಲ್ಟ್, ಬೇಯರ್ ಮೊದಲಾದ ಅನೇಕ ಪ್ರಸಿದ್ಧ ವಿಜ್ಞಾನಿಗಳು ಒಂದು ಕಾಲದಲ್ಲಿ ಅವರ ಪ್ರಯೋಗ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದರು. ಅವರ ಸರಳ ಸ್ವಭಾವ ವಿದ್ಯಾರ್ಥಿಗಳಲ್ಲಿ ಅವರಿಗಿದ್ದ ಪಿತೃಸದೃಶವಾದ ಪ್ರೇಮ ಮತ್ತು ಅಪಾರವಾದ ಹಾಸ್ಯಾಭಿರುಚಿ—ಇವುಗಳಿಂದ ಅವರು ಎಲ್ಲರಿಗೂ ಮೆಚ್ಚಿನವರಾಗಿದ್ದರು. ಟಿಂಡಲ್ (Tyndall) ಎಂಬ ವಿಜ್ಞಾನಿಯು ಬುನ್‌ಸನ್ ಅವರನ್ನು "ವಿಶ್ವವಿದ್ಯಾನಿಲಯದ ಆದರ್ಶ ಪ್ರಾಧ್ಯಾಪಕ" ಎಂದು ಕರೆದಿದ್ದಾನೆ.

ವಿಜ್ಞಾನಪ್ರಪಂಚಕ್ಕೆ ಬುನ್‌ಸನ್ ಅವರು ಸಲ್ಲಿಸಿದ ಸೇವೆಗಾಗಿ, ಅವರ ಮಾರ್ಗದರ್ಶನಕ್ಕಾಗಿ ಇಂದಿನ ಪೀಳಿಗೆ ಅವರಿಗೆ ತುಂಬ ಋಣಿಯಾಗಿದೆ. ಕ್ರಿ. ಶ. ೧೮೯೯ರಲ್ಲಿ ಅವರು ಸ್ವರ್ಗವಾಸಿಯಾದ ಮೇಲೆ ಅವರ ಈ ತೇಜೋಮಯವಾದ ಗೆಲವಿನ ಜೀವನದ ಕೊನೆಯಾಯಿತು. ಅವರು ದೈವಾಧೀನರಾಗಿ ೫೭ ವರ್ಷಗಳಾದರೂ ಇಂದಿಗೂ ಅವರು ತಮ್ಮ ಕೃತಿಗಳ ಮೂಲಕ ಜೀವಂತರಾಗಿದ್ದಾರೆ. ಪ್ರಯೋಗಶಾಲೆಯಲ್ಲಿರುವ "ಬುನ್‌ಸನ್‌ದೀಪಕ"ವು ವಿಜ್ಞಾನವನ್ನು ಅಭ್ಯಸಿಸುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಅವರ ನೆನಪನ್ನು ತಂದುಕೊಡುತ್ತದೆ.

ಅಪಚನವೇ?

"ಪಚನೊಲ್"

ಮಾತ್ರೆ ಸೇವಿಸಿರಿ!

• ಅದು ಉದರದ ಎಲ್ಲ ತೊಂದರೆಗಳಿಂದ ನಿಮ್ಮನ್ನು ರಕ್ಷಿಸುತ್ತದೆ.
"ಪಚನೊಲ್" ಆರ್ಜೀರ್ಣವನ್ನು ಹೋಗಲಾಡಿಸಿ ಹಸಿವನ್ನು ಹುಟ್ಟಿಸುತ್ತದೆ.

ನಾಟವಾದ ಸೀಸೆಯನ್ನು ಜೊತೆಗಿಟ್ಟುಕೊಳ್ಳಿರಿ.
ಪ್ರತಿ ಸೀಸೆಯ ಕ್ರಯ ರೂ. ೧—೪—೦

Hamdard
DAWAKHANA (TRUST) DELHI

ಲಕ್ಕುಂಡಿ

(ಸಾಂಸ್ಕೃತಿಕ ಕ್ಷೇತ್ರದರ್ಶನ)*

ಶ್ರೀ. ಆರ್. ಜಿ. ಕುಲಕರ್ಣಿ (ಬಿನಕಟ್ಟಿ) ಬಿ ಎ. (ಆನರ್ಸ್,) ಧಾರವಾಡ

ಕನ್ನಡ ನಾಡಿನಲ್ಲಿ ಕನ್ನಡ ಜನಜೀವನದ ಸಾಂಸ್ಕೃತಿಕ ಸಮಾಧಿಗಳು ಹಲವಾರು ಇವೆ. ಅಂತಹವುಗಳಲ್ಲಿ ಲೊಕ್ಕಿಗುಂಡಿಯೂ ಒಂದು. ಕವಿರತ್ನ ರನ್ನನಿಗೆ ಪೋಷಣೆ ಕೊಟ್ಟ ಮಹಾಸತಿ ಅತ್ತಿಮಬ್ಬೆಯು ಲೊಕ್ಕಿಗುಂಡಿಯ ಹೆಸರನ್ನು ಮರೆಯದಂತೆ ಮಾಡಿದ್ದಾಳೆ.

ಇದು ಚುನಾವಣೆಯ ಸಮಯ. ಈಗ ಕಾರಿನಲ್ಲಿ ಯಾವುದೇ ಹಳ್ಳಿಗೆ ಹೋದರೂ ಚುನಾವಣೆಯ ಪ್ರಚಾರಕ್ಕಾಗಿಯೇ ಬಂದರೆಂದು ಹಳ್ಳಿಗರು ಭಾವಿಸುತ್ತಾರೆ. ನಾನು ಲಕ್ಕುಂಡಿಗೆ ಹೋದಾಗ ಇದೇ ಅನುಭವ ನನಗೂ ಬಂದಿತು. ನಾನು ಅಲ್ಲಿಯ ಹಳೆಯ ಗುಡಿಗಳನ್ನು ನೋಡುತ್ತ ನಿಂತುದನ್ನು ಕಂಡು ಅವರಿಗೆ ತುಸು ವಿಚಿತ್ರವೆನ್ನಿಸಿತು. ನಾವು ನಿಂತದ್ದು ಒಂದು ಜೈನ ಬಸದಿಯ ಬಳಿಯಲ್ಲಿ ಆ ಬಸದಿಯಲ್ಲಿ ಒಬ್ಬ ಪೂಜಾರಿಯು ಕುಳಿತಿದ್ದ. ನಾನೆಲ್ಲ ಬಸದಿಯನ್ನು ಕುತೂಹಲದಿಂದ ನೋಡುವುದನ್ನು ಕಂಡು ಆತ ಉದಾಸೀನ ಭಾವನೆಯಿಂದಲೇ ಅಂದ.—

"ನೀವೇನು, ಬಂದಿರಿ ಹೋದಿರಿ! ಮುಂದೇನು ಮಾಡುವಿರಿ?" ಅವನ ಮಾತಿನಲ್ಲಿ ನಿರಾಶೆ ಕವಿದಿತ್ತು. ಮುರಿದುಬಿದ್ದ ಸಂಸ್ಕೃತಿಯ ತನ್ನ ಅವಶೇಷಗಳ ಮಧ್ಯದಲ್ಲಿ ದಿಂದ್ರವೇಷದಲ್ಲಿ, ನಿರಾಶೆಯಿಂದ, ನೀರವನಾಗಿ ಕುಳಿತಂತೆ ಆತ ಕಂಡ ಒಂದು ದೃಷ್ಟಿಯಿಂದ ಅ ನದು "ತಕ್ಷಣ ಕಿಂ 'ಮೂಡು' (Mood)" ಎನ್ನಬಹುದು

"ಬಂದಿರಿ. ಹೋದಿರಿ ಮುಂದೇನು?

ಇಂದಿನ ಅವಸ್ಥೆಯನ್ನು ಬದಲು ಮಾಡುವಿರಾ?" ಅವನ ಪ್ರಶ್ನೆ ಆ ಬಸದಿಯಲ್ಲಿ ಪ್ರತಿಧ್ವನಿಸುತ್ತಿತ್ತು. ಒಂದು ಕಾಲಕ್ಕೆ ಜೈನರ ಸಾಂಸ್ಕೃತಿಕ ಕೇಂದ್ರವಾಗಿದ್ದ ಈ ಲಕ್ಕುಂಡಿಯಲ್ಲಿ, ಅತ್ತಿಮಬ್ಬೆ, ರನ್ನನಿಂದ ಅಜಿತನಾಥ ಪುರಾಣ ಬರೆಯಿಸಿ ಅವರ ಸಾವಿರ ಪ್ರತಿ ಮಾಡಿಸಿ ಹಂಚಿದ ಈ "ಲೊಕ್ಕಿಗುಂಡಿ" ಯಲ್ಲಿ ಇಂದು ಜೈನರು ನೋಡಲಿಕ್ಕೂ ಸಿಗುವುದಿಲ್ಲ. ಈ ಪೂಜಾರಿಯೊಬ್ಬನೇ ಆ ಅತ್ತಿಮಬ್ಬೆಯ ನೆನಪನ್ನುಳಿಸಲು ಉಳಿದಿದ್ದಾನೆ.

"ಲಕ್ಕುಂಡಿ" ಇದರ ಅರ್ಥವೇನು? 'ಲಕ್ಕಿಗುಂಡಿ' ಲಕ್ಷ್ಮಿಗುಂಡಿ' ಹೀಗೆಯೇನೋ ಇರಬೇಕು. ಲಕ್ಕುಂಡಿಯು ಪ್ರಾಚೀನತೆಯನ್ನು ಸಾರುವ ಒಂದು ಶಾಸನವಿದೆ. "ದಾನಚಿಂ ನಿರ್ಮಿತಮಹಾಗ್ರಾಮಂ ಲೊಕ್ಕಿಗುಂಡಿ...." ಎಂದು ಆ ಶಾಸನದಲ್ಲಿ ಉಕ್ತವಾಗಿದೆ. ಅನೇಕ ಬಾವಿಗಳಿಂದ ಕಂಗೊಳಿಸುವ ಈ ಗ್ರಾಮದಲ್ಲಿ ಮುಳುಕಿನ ಬಾವಿಯೊಂದಿದೆ. ಅದೇ ಬಹುಶಃ "ಲಕ್ಷ್ಮಿಗುಂಡಿ" ಯಾಗಿರಬಹುದು. ಅದರಿಂದಲೇ ಈ ಗ್ರಾಮಕ್ಕೆ ಈ ಹೆಸರು ಬಂದಿದ್ದರೂ ಬಂದಿರಬಹುದು. ಅಲ್ಲಿ ಬಾವಿಗಳನ್ನೂ, ಆ ತೋಟಪಟ್ಟಿಗಳನ್ನೂ ಕಂಡಾಗ ಹಿಂದಕ್ಕೆ ಅಲ್ಲಿಯೊಂದು 'ಗ್ರಾಮವಿಶ್ವವಿದ್ಯಾನಿಲಯ' ಇದ್ದಿರಬಹುದೆಂದು ಎನ್ನಿಸುತ್ತದೆ. ಲಕ್ಕುಂಡಿಯ ವಾತಾವರಣವನ್ನು ನೆನೆದಾಗಲೆಲ್ಲ ನನಗೆ ಕೇಂಬ್ರಿಜ್‌ನಗರ-ಹಾಗೂ ಅಲ್ಲಿಯ ವಿಶ್ವವಿದ್ಯಾನಿಲಯಗಳ ನೆನಪಾಗುತ್ತದೆ. "ಕ್ಯಾನ್" ನದಿಯ ಪುಲಿನಿಂದ 'ಕೇಂಬ್ರಿಜ್' ಎಂಬ ಹೆಸರು ಆ ನಗರಕ್ಕೆ ಬಂದಿದೆ. ಕೇಂಬ್ರಿಜ್‌ನಗರದಲ್ಲಿ ವಿಶ್ವವಿದ್ಯಾಲಯ ತಲೆಯೆತ್ತಿದಂತೆ ಲಕ್ಕುಂಡಿಯಲ್ಲಿಯೂ ಜೈನ ಸಂಸ್ಕೃತಿಯ ಅಗ್ರಹಾರವು ಬೆಳೆದು ಬಂದಿದ್ದರೆ ಆಶ್ಚರ್ಯವಲ್ಲ. ನದಿ ಬಾವಿಗಳ ಪ್ರಶಾಂತ ವಾತಾವರಣದಲ್ಲಿ ವಿಶ್ವವಿದ್ಯಾಲಯಗಳು ಆಗ ಹುಟ್ಟುತ್ತಿದ್ದವು. ಲಕ್ಕುಂಡಿಯ 'ಮುಳುಕಿನ ಬಾವಿ' ಯನ್ನು ಕಂಡಾಗ ಆಗ ಇದ್ದಿರಬಹುದಾದ ಸಾಂಸ್ಕೃತಿಕ ವಾತಾವರಣದ ಕಲ್ಪನೆ ಮಾಡಿಕೊಳ್ಳಲು ಯತ್ನಿಸಿದೆ "ಈ ಬಾವಿಯಲ್ಲಿ ಮಹಾಕವಿ ರನ್ನನು ಜಲಕನ್ಯಾತಲು ಬರುತ್ತಿರಬಹುದಲ್ಲ ಎಷ್ಟೋ ಜನ ಜೈನ ವಿದ್ಯಾರ್ಥಿಗಳು ಮಂತ್ರಶಕ್ತಿಯನೆ ಮಾಪುತ್ತ ಈ ನೀರಿನಲ್ಲಿ ಸ್ನಾನ ಮಾಡುತ್ತಿರಬಹುದಲ್ಲ! ಅತ್ತಿಮಬ್ಬೆ ದಾನಚಿಂತಾಮಣಿ, ಇವೇ ಬಾವಿಗೆ ಬಂದಿರಲಿಕ್ಕಿಲ್ಲವೆ?..... ಮನಸ್ಸು ಏನೇನೋ ಕನಸು ಕಾಣುತ್ತಿತ್ತು. ಆ ಭಾವನೆಯಿಂದೆದ್ದು ತುಸು ಬಡಿಗೆ ನೋಡಿದೆ. ಅತ್ತ ಸನಿಯದಲ್ಲಿಯೇ ಒಬ್ಬ ಹೆಣ್ಣುಮಗಳು ಮಜ್ಜನಗಿಯನ್ನು ತೊಳೆಯುತ್ತಿದ್ದಳು! ಒಂದು ಕಾಲಕ್ಕೆ ಗ್ರಾಮವಿಂದ ಜ್ಞಾನ ನಿರ್ಯಾತವಾಗುತ್ತಿತ್ತು. ಇಂದು ಇದೆ

(ಪ್ರೊ. ವಿ. ಕೃ. ಗೋಕಾಕರು ಲಕ್ಕುಂಡಿಗೆ ಹೋಗಿ ಬಂದಾಗ ಅವರ ನೆನಪುಗಳ ಸಾರವನ್ನು ಸಂಗ್ರಹಿಸಿ ಅವರೊಡನೆ ಅಲ್ಲಲ್ಲಿ ಐತಿಹಾಸಿಕ ಸಾಮಗ್ರಿಯನ್ನು ಸೇರಿಸಿ ಬರೆದ ಪ್ರಬಂಧ.....)

ನದುಗಿಗೆ ಮೂಲಂಗಿ, ಬೆಣ್ಣೆ ಹಾಗೂ ಇತರ ಕಾಯಿಪಲ್ಲೆ ಕೊಳ್ಳು-
ನೆ! ಕಾಲನ ವೈಚಿತ್ರ್ಯವೆಂದುಕೊಂಡೆ.

ಲಕ್ಕುಂಡಿಯ ಜೈನ ಬಸದಿಗಳಲ್ಲಿ ಅನೇಕವಿಂದು ಬದಲಾಗಿ ಹೋಗಿವೆ. ಒಳಗಡೆಗೆ ಜೈನತೀರ್ಥಂಕರರ ವಿಗ್ರಹಗಳಿಲ್ಲ. ಮುಖಾ-ದ್ವಾರಗಳ ಮೇಲಿನ ಗಜಲಕ್ಷ್ಮಿಯು ಹಾಗೂ ಇತರ ಜೈನತೀರ್ಥಂಕರ ಸಂಕೇತಗಳನ್ನು ನೋಡಿ ಇವು ಜೈನ ಬಸದಿಗಳೆಂದು ಗುರುತಿಸ ಬಹುದಾಗಿದೆ. ಅತ್ತಿಮಬ್ಬೆಯಂತಹ ಜೈನ ದಾನಚಿಂತಾಮಣಿಯು ರನ್ನನಿಂದ ಅಜಿತನಾಥ ಪುರಾಣ ಬರೆಯಿಸಿದ ಗ್ರಾಮದಲ್ಲಿಂದು ಅಜಿತನಾಥ ತೀರ್ಥಂಕರರ ಬಸದಿಯೆಲ್ಲಿದೆಯೊ ಸಿಕ್ಕುವುದಿಲ್ಲ. ನಾನು ಆಗಲೇ ಹೇಳಿದ ಪೂಜಾರಿಯು ಕುಳಿತ ಬಸದಿಯು ನೇವಿ ನಾಥನ-ದೆಂದು ಹೇಳಿಕೆಯಿದೆ. ಇದಲ್ಲದೆ ಪೂಜಾರಿಯು ಇನ್ನೊಂದು ಬಸದಿ ಯಿದೆಯೆಂದು ಹೇಳಿ, ಪಾರ್ಶ್ವನಾಥನ ಬಸದಿಯನ್ನು ತೋರಿಸಿದ. ಅಲ್ಲಿಯೊಂದು ಸುಂದರ ನಾಗಪ್ರಭಾವಳಿ ಇದೆ. ಆ ಪ್ರಭಾವಳಿಯಲ್ಲಿ ಅದ್ಭುತ ಕಲಾವೈಭವ ಬೀಸುವ ನಾಗರ ಹಾವೊಂದು ಇದ್ದು ಅದರ ಹೆಡೆ ಪ್ರಭಾವಳಿಯ ಮೇಲ್ಗಡೆಗೆ ಬಂದಿದೆ. ಅದೊಂದು ಅತ್ಯಂತ ಸುಂದರವಾದ ಸರ್ಪ! ಅದನ್ನು ಕಂಡು ನಾನು ವಿಸ್ಮಿತನಾದೆ. ಅಷ್ಟಕ್ಕೇ ಅವನಿಗೆ ತೃಪ್ತಿಯಾಗಲಿಲ್ಲ. ಅಲ್ಲಿಗೆ ಇನ್ನಾರಾದರೂ ಬಂದರೆ ಈ ಪ್ರಭಾವಳಿಯನ್ನು ತೋರಿಸಲು ಮರೆಯಬೇಡವೆಂದು ಪೂಜಾರಿಗೆ ಹೇಳಿದೆ. ಈ ನಾಗಪ್ರಭಾವಳಿಯಿಂದಾಗಿ ಆ ಬಸದಿಯಿಂದು " ನಾಗ ನಾಥಸ್ವಾಮಿ ಗುಡಿ " ಎಂದು ಹೆಸರಾಗಿದೆ

ಲಕ್ಕುಂಡಿಯಲ್ಲಿಯ ಜೈನಬಸದಿಗಳಲ್ಲಿ ನೋಡಬೇಕಾದ ಮುಖ್ಯ ಅಂಶಗಳೆಂದರೆ : (೧) ವಜ್ರದುಂಡಿ ಕಲ್ಲುಗಳಲ್ಲಿ ಅಳಿಸಿದ ಕಮಲ-ಗಳು. (೨) ಮುಖಾದ್ವಾರದ ಕೆತ್ತನೆಯ ಕೆಲಸ. (೩) ಗಾಡಕ್ಕೆ ಕಚ್ಚಿ ಸಿದ್ಧಗೊಳಿಸಿದ ನಯವಾದ ಕಂಬಗಳು. (೪) ನಾಗಪ್ರಭಾವಳಿ. (೫) ಗೋಡೆಯ ಮೇಲಿರುವ, ಆ ಕಾಲದ ಸಾಮಾಜಿಕ ಸ್ಥಿತಿಗತಿ-ಗಳನ್ನು ಚಿತ್ರಿಸುವ ಅನೇಕ ಚಿತ್ರಗಳು. ಇವಲ್ಲದೆ ಜೈನರಾಮಾ-ಯಣಕ್ಕೆ ಸಂಬಂಧಿಸಿದ ಚಿತ್ರಗಳೂ ಉಂಟು. ಆ ಚಿತ್ರಗಳನ್ನು ನೋಡುತ್ತ ನಿಂತಾಗ ಅಲ್ಲಿ ಒಬ್ಬ ಮುದುಕನಿದ್ದ. ಅತನು ಹಳೆಯ ಸಂಸ್ಕೃತಿಯ ಬಗೆಗೆ ಗೌರವ ಕಾಯ್ದುಕೊಂಡಿದ್ದ. ನಾನು ಆ ಚಿತ್ರ-ಗಳು " ಎಷ್ಟೊಂದು ಸುಂದರವಾಗಿವೆ ! " ಎಂದಾಗ ಅತ ಅಂದ !

" ಚಿತ್ರ ಯಾಕರಿ ? ಎಲ್ಲಾ ' ವಿಚಿತ್ರ ' ಅದ. " ಅದರೆ ಇದೇ ಕುತೂಹಲ—ಅದರದ ಭಾವನೆ ಅಲ್ಲಿಯವರೆಲ್ಲರಿಗೆ ಇರಲಿಲ್ಲ ಅಲ್ಲಿ-ಬ್ಬ ಹೊಸಗಾಲದ ತರುಣನಿದ್ದ. ಅತನಿಗೆ ಹಳೆಯ ಶಿಲ್ಪ-ಕಲೆ-ಗಳೆಂದರೆ ಅಸ್ಪಷ್ಟವೇ. ಅತ ಅಂದ:

" ಅದೇನು ಬಿಡಿರಿ. ಅಷ್ಟು ಕೌತುಕಪಡುವಂಥಾದ್ದು ಅದರ-ಲ್ಲೇನಿದೆ ? ಇಂಥ ಕೆತ್ತನೆಯ ಕೆಲಸವನ್ನು ನಾವೂ ಮಾಡಬಹುದು "

ನಾನು ಅವನ ಕಡೆಗೆ ತಿರುಗಿ ಕೇಳಿದೆ, " ಅಲ್ಲಪಾ, ಕಟ್ಟಿಗೆಯಲ್ಲಿ ಹೋಗಲಿ. ಇಂಥ ಚಿತ್ರಗಳನ್ನು ನೀನೀಗ ಕಾಗದದಲ್ಲಿಯಾದರೂ ಚಿತ್ರಿಸಬಲ್ಲೆಯಾ ?...." ಆಗ ಅತ ಸುಮ್ಮನಾದ. ಇಂಥವರಿಗೆ ಹಳೆಯ ಸಂಸ್ಕೃತಿಯ ಬಗೆಗೆ ಕುತೂಹಲ ಕೆರಳಿಸಬೇಕು. ನಂತರ ಮಾತ್ರ ಅದರ ಬಗೆಗೆ ಲಕ್ಷಪೂರ್ವಕ ನಿರೀಕ್ಷಿಸುತ್ತಾರೆ. ಅದೇ ತರುಣ ಸುಸು ವೇಳೆಯ ನಂತರ ಆ ಜೈನ ಬಸದಿಯ ಕಲೆಯ ಬಗೆಗೆ ಉತ್ಸಾಹದಿಂದ ಮಾತನಾಡತೊಡಗಿದ :

" ಈ ಬಸದಿಯ ಮೇಲೆ ಜ್ಞಾಳದ ರಾತಿಯನ್ನು ಒಕ್ಕುವ ಸುಂದರವಾದ ಮೂರ್ತಿ ಇತ್ತರಿ. ಅದು ಈಗ ಎಲ್ಲಿ ಹೋಯಿತೋ ದೇವರೇ ಬಲ್ಲ....."

ಈ ಗ್ರಾಮದಲ್ಲಿಂದು ಜೈನಬಸದಿಗಳಲ್ಲದೆ, ಚಂದ್ರಮೌಳೀಶ್ವರ, ಗಣೇಶ, ಗೋಕರ್ಣೇಶ್ವರ, ಕಾಶೀ ವಿಶ್ವೇಶ್ವರ, ನನ್ನೇಶ್ವರ, ವೀರ-ಭದ್ರ ಮೊದಲಾದ ಗುಡಿಗಳಿವೆ. ಕ್ರಿ. ಶ. ಹನ್ನೊಂದನೆಯ ಶತಕದಲ್ಲಿ ಚೋಳರಾಜರು ಲಕ್ಷೇಶ್ವರ ಹಾಗೂ ಲೊಕ್ಕಿಗುಂಡಿಗಳ ಮೇಲೆ ದಾಳಿ ಮಾಡಿದಾಗ ಅನೇಕ ದೇವಾಲಯಗಳು ನಾಶವಾದುವಂತೆ. ಮುಂದೆ ಹೊಯ್ಸಳರ ವೀರಬಲ್ಲಾಳನು ೧೧೯೬ರಲ್ಲಿ ಈ ಗ್ರಾಮವನ್ನು ಯಾದವ ರಿಂದ ಗೆದ್ದು ತನ್ನ ರಾಜ್ಯದ ಉತ್ತರಭಾಗದ ರಾಜಧಾನಿಯನ್ನಾಗಿ ಮಾಡಿದನಂತೆ. ಇವೇನೇ ಆದರೂ ಲಕ್ಕುಂಡಿಯ ವಾತಾವರಣ-ವನ್ನೆಲ್ಲ ಹುಂಬಿನಿಂತ ವ್ಯಕ್ತಿತ್ವವೆಂದರೆ ಅತ್ತಿಮಬ್ಬೆಯದು ! ಗ್ರಾಮದ ಪಶ್ಚಿಮ ಭಾಗದಲ್ಲಿರುವ ಜೈನಬಸದಿಯ ಹತ್ತಿರ ಒಂದು ಶಿಲಾಶಾಸನ-ವಿದೆ. ಅದು ಕಲ್ಯಾಣ ಚಾಲುಕ್ಯರಾಜನಾದ ಇರಿವಬೆಡಂಗ ಪಶ್ಚಿಮ-ಶ್ರಯನ ಕಾಲದ್ದು. ಎಂದರೆ ಕ್ರಿ. ಶ. ೧೦೬೦ನೆಯ ವರ್ಷದ್ದಾಗಿದೆ. ಅತ್ತಿಮಬ್ಬೆಯು ಲೊಕ್ಕಿಗುಂಡಿಯಲ್ಲಿ ಕಟ್ಟಿಸಿದ ಜೈನ ಬಸದಿಗೆ ದತ್ತಿಯನ್ನು ಕೊಟ್ಟು ಸಂಗತಿ ಇದರಲ್ಲಿದೆ. ಈ ಬಸದಿಗೆ ಆಗ ' ಬ್ರಹ್ಮ ಜಿನಾಲಯ ' ವೆಸ್ಸುತ್ತಿದ್ದರಂತೆ ! ಅತ್ತಿಮಬ್ಬೆಯು ಒಟ್ಟು ಸಾವಿರದ-ಏನೂರು ಬಸದಿಗಳನ್ನು ಕಟ್ಟಿಸಿದ್ದಳಂತೆ ! ಈ ಮಹಾತ್ಮಳ ಜೀವನ ಚರಿತ್ರೆ ಪಾವನಾದ್ಭುತವಾಗಿದೆ. ಈ ತಾಯಿ ದಲ್ಲಪನಮಗ ನಾಗ-ದೇವನ ಪತ್ನಿ. ಇವಳ ಪತಿಗೆ ಇನ್ನೊಬ್ಬ ಪತ್ನಿಯೂ ಇದ್ದಳು. ಅವಳು ಈಕೆಯ ತಂಗಿ. ಪತಿ ತೀರಿಕೊಂಡಾಗ ತಂಗಿಯು ತನ್ನ ಪತಿಯೊಡನೆ ಸತಿಹೋದಳು. ಅತ್ತಿಮಬ್ಬೆ ಮಾತ್ರ ತನ್ನ ಮಗುವಿನ ರಕ್ಷಣೆಗಾಗಿ ಬದುಕಬೇಕಾಯಿತು. ಆದರೆ ಅವಳ ಬದುಕು ನಾಡಿನ ಪುಣ್ಯದ ಬದುಕಾಯಿತು. ಅವಳ ಔದಾರ್ಯದಿಂದ ರನ್ನ ಕವಿ ಕವಿರತ್ನನಾಗಿ ಹೆಸರಾದ. ಅವನಿಂದ ಅಜಿತನಾಥ ಪುರಾಣ ಹೊರ-ಬಂದಿತು. ಅವಳ ಈ ದಾನ ಈ ಉದಾರ ಹೃದಯ—ಈ ಪಾವನ-ಶೀಲ-ಸಚ್ಚಾರಿತ್ರ್ಯಗಳನ್ನು ರನ್ನಕವಿಯು ತುಂಬುಹೃದಯದಿಂದ ಹಾಡಿ ಹೊಗಳಿದ್ದಾನೆ:

" ಬಿಳಿಯರಳೆಯಂತೆ ಗಂಗಾ
ಜಳದಂತೆಸೆವಜಿತಸೇನಮುನಿಯ ಗುಣಾ
ವಳಿಯಂತೆ ನೆಗಳ್ದಕೊಪಣಾ
ಚಳದಂತೆ ಪವಿತ್ರಮತ್ತಿಮಬ್ಬೆಯ ಚರಿತಂ. "

ಅಷ್ಟರಿಂದಲೇ ಅತನಿಗೆ ತೃಪ್ತಿಯಿಲ್ಲ. " ಶ್ರೀದಾನಚಿಂತಾಮಣಿ, ನೀನಿಲ್ಲದೆ ಜೈನಧರ್ಮ ಹಾಳಾಗಿಹೋಗುತ್ತಿತ್ತು. ಶೀಲವನ್ನು

ಕಾಪಾಡಿದೆ. ಧರ್ಮವನ್ನು ಎತ್ತಿಹಿಡಿದೆ. ನಿನ್ನನ್ನೇನೆಂದು ಹೊಗಳಲಿ?" ಎಂದು ಸ್ತುತಿಸಿದ್ದಾನೆ. ಇದರಂತೆಯೇ ಲಕ್ಕುಂಡಿಯ ಶಾಸನಕರ್ತನೋರ್ವನು ಅತ್ತಿಮಬ್ಬೆಯನ್ನು "ಗುಣದಂತಕಾರ್ತಿ, ಕಟಕ-ಪವಿತ್ರೆ, ದಾನಚಿಂತಾಮಣಿ ..." ಇತ್ಯಾದಿ ನಿರುದುಗಳಿಂದ ಉಲ್ಲೇಖಿಸಿ ಅವಳು ಮಾಡಿದ ಅನೇಕ ಪವಾಡಗಳನ್ನು ಬಣ್ಣಿಸಿದ್ದಾನೆ. ಚಾವುಂಡರಾಯನು ನಿರ್ಮಿಸಿದ ಗೊಮ್ಮಟೇಶ್ವರನ ದರ್ಶನವಾಗುವವರೆಗೆ ಅನ್ನಮುಟ್ಟುವುದಿಲ್ಲವೆಂಬ ವ್ರತತೊಟ್ಟು ಆಲ್ಲಿಗುವರೆಗೆ ನಡೆಯುತ್ತ ಹೋದವಳಂತೆ! ಆಗ ಈಕೆಯು ದಾರಿಯ ದಣಿವನ್ನು ನಿವಾರಿಸಲು ಅಕಾಲವೃಷ್ಟಿಯಾಯಿತಂತೆ. ಇನ್ನೊಮ್ಮೆ ಅತ್ತಿಮಬ್ಬೆಯು ಜಿನಪ್ರತಿಮೆಯನ್ನು ತಲೆಯಮೇಲಿಟ್ಟುಕೊಂಡು ಗೋದಾವರಿ ನದಿಯನ್ನಿಳಿದಾಗ ನದಿಯು ಈಕೆಗೆ ದಾರಿಮಾಡಿಕೊಟ್ಟಿತಂತೆ! ಮತ್ತೊಮ್ಮೆ ಜಿನಪ್ರತಿಮೆಯು ನದಿಯಲ್ಲಿ ಬಿದ್ದಿತೆಂದು ಇವಳು ಎಂಟುದಿನಗಳ ವರೆಗೆ ಅನಶನವ್ರತ ಕೈಕೊಂಡಾಗ ಆ ಪ್ರತಿಮೆ ತಾನೆ ಕೈಸೇರಿತಂತೆ! ಹೀಗೆ ದಾನ-ಶೀಲ-ಸಚ್ಚಾರಿತ್ರ್ಯ, ವ್ರತೋಪವಾಸ-ಕವಿಸ್ತೋಷಕ ಹೃದಯಗಳಿಂದ ಕೂಡಿದ ಈ ತಾಯಿಯು ಆ ಕಾಲದ ಪುಣ್ಯಸ್ತ್ರೀಯರಲ್ಲಿ ಗಣ್ಯಳಾಗಿದ್ದರೆ ಆಶ್ಚರ್ಯವಲ್ಲ. ಇವನ್ನೆ ಇನ್ನೊಂದು ಶಾಸನವು ಹೃದಯಂಗಮವಾಗಿ ಬಣ್ಣಿಸುತ್ತದೆ.

"ಅಳಾರದು ಕೀರ್ತಿ ಮುಟ್ಟಿದು ವಿಷಾಪ್ತ ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೀಡಿದಂತೆ ಮಳೆಕೊಳ್ವುದೆನಿಪ್ಪಜಪಕ್ಕೆನೋಂತು ಭೂ ॥
ತಿಲಕಪತಿವ್ರತಾ ಗುಣದವಿತ್ರೆಯನಾಸತಿಯಂ ಮಹಾಸತೀ
ತಿಲಕೆಯನತ್ತಿಮಬ್ಬರಸಿಯಂ ಪೆಸರ್ಕೊಳ್ವುದು ಪುಣ್ಯಕಾರಣಂ॥

ಇಂಥ ಮಹಾಸತಿಯಿದ್ದ ಈ ಗ್ರಾಮವು ಕನ್ನಡದ ಪುಣ್ಯಭೂಮಿಯಾಗಿದೆ. ಇದು ಮುಖ್ಯವಾಗಿ ಸಾಂಸ್ಕೃತಿಕ ಕೇಂದ್ರವಾಗಿತ್ತು. ಆ ಕಾಲದ ಇತಿಹಾಸವನ್ನೂ-ಭಾವಿ-ತೋಟಪಟ್ಟಿಗಳನ್ನೂ ಕಂಡಾಗ ಇಲ್ಲಿ ರಾಜಕೀಯ ಚಟುವಟಿಕೆಗೆ ಅವಕಾಶವಿಲ್ಲವೆನಿಸುತ್ತದೆ. ಅತ್ತಿಮಬ್ಬೆಯಂತಹ ಜೈನಸಂಸ್ಕೃತಿಯ ಪೋಷಕರು— ಜಿನಾಚಾರ್ಯರು ಅವರ ಶಿಷ್ಯರು— ಈ ನೆಲದಲ್ಲಿ ಜ್ಞಾನಾರ್ಜನೆ— ಜ್ಞಾನದಾನ— ಜ್ಞಾನಪ್ರಸಾರ ಕಾರ್ಯಗಳಲ್ಲಿ ತೊಡಗಿರಬೇಕು. ಗ್ರಾಮದಲ್ಲೆಲ್ಲ ಶೀಲ-ಸಂಸ್ಕೃತಿ-ವಿದ್ಯೆ ಬುದ್ಧಿಗಳ ಗಾಳಿ ಸುಳಿಯುತ್ತಿರಬೇಕು ಸಾಧಾರಣವಾಗಿ ಶಿಕ್ಷಣ-ಸಂಸ್ಕೃತಿಗಳ ಬಗೆಗೆ ಗೌರವ ಆದರಗಳಿಂದ ಕೂಡಿದ ಶ್ರೀಮಂತವರ್ಗ, ರಾಜಕಾರಣವೆ ಗೊಂದಲ-ಗದಿಬಿಡಿಯಿಲ್ಲದ ವಿಶ್ರಾಂತಿ ವೇಳೆಯುಳ್ಳ ವಾತಾವರಣಗಳಿಂದ ಈ ಗ್ರಾಮವು ಪಂಡಿತರನ್ನು-ಕವಿಪುಂಗವರನ್ನು ವಿದ್ಯಾರ್ಥಿಗಳನ್ನು ತನ್ನ ಕಡೆಗೆ ಆಕರ್ಷಿಸುವುದು ಆಶ್ಚರ್ಯವಲ್ಲ. ಜನ ಉಂಡುಟ್ಟು ಸುಖವಾಗಿ ಕಾಲಕ್ಷೇಪ ಮಾಡುತ್ತಿರಬೇಕು. ಆದರೆ ಅವರ ಕಾಲಕ್ಷೇಪ ವ್ಯರ್ಥವಾಗಿ ಹೋಗದಂತೆ ಸಂಸ್ಕೃತಿ ವರ್ಧನಕಾರ್ಯ ನಡೆದಿರಬೇಕು. ಆದರೊಡನೆ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ
● ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಒಂದು ಧಾರ್ಮಿಕ ಉಜ್ಜ್ವಲ ಧ್ಯೇಯವನ್ನು ಒದಗಿಸಿರಬೇಕು. ಅಂಥವರಿಗೆಲ್ಲ ಅತ್ತಿಮಬ್ಬೆಯಂಥ ಮಹಾತಾಯಿ ಆದರ್ಶವಾಗಿರಬೇಕು.... ಆದರೆ? ಆದರೆ....ಇಂದು ಲಕ್ಕುಂಡಿಯ ಸ್ಥಿತಿ ಏನಾಗಿದೆ? ಆ ಮಹಾತಾಯಿಯಿದ್ದ ಸ್ಥಳವೂ ಕೂಡ ಗೊತ್ತಾಗದಂತಾಗಿದೆಯಲ್ಲ. ಹೀಗೆ ಯಾಕಾಗಬೇಕು? ಇಂದು ವಾಸ್ತುಶಿಲ್ಪ ಸಂರಕ್ಷಣ ಖಾತೆಯವರು ಅತ್ತಿಮಬ್ಬೆಯ ಮನೆಯನ್ನು-ಅದಿಲ್ಲವಾದರೆ ಆ ಮನೆಯಿದ್ದ ಸ್ಥಳವನ್ನಾದರೂ—ಕಂಡು ಹಿಡಿದು ಅಲ್ಲಿ ಅವಳ ಸ್ಮಾರಕವನ್ನು ನಿಲ್ಲಿಸಬಾರದೆ? ಪರದೇಶಗಳಲ್ಲಿ ರಸ್ಕಿನ್, ಶೇಕ್ಸ್‌ಪಿಯರ್ ಮೊದಲಾದವರ ಸ್ಮಾರಕಗಳು ಇಂದಿಗೂ ಅಲ್ಲಿನ ಜನರಿಗೆ ಸ್ಫೂರ್ತಿದಾಯಕವಾಗಿವೆ. ಇಲ್ಲಿಯೂ ಆ ಐತಿಹಾಸಿಕ ಗೌರವಭಾವನೆ ಬೆಳೆದುಬಂದು ಸತ್ಕ ಸಂಸ್ಕೃತಿಯು ಮತ್ತೆ ಸ್ಫೂರ್ತಿದಾಯಕ ಶಕ್ತಿಯಾಗಿ ಜನ್ಮತಾಳೀತು ..."

ಹಾಗೆಯೇ ಇನ್ನೇನೋ ವಿಚಾರಗಳು ತಲೆಯಲ್ಲಿ ಸುಳಿದು ಹೋದವು.....ಆದರೆ ಒಂದು ಪ್ರಶ್ನೆ ಮಾತ್ರ ಮೂಕವಾಗಿ-ವಿಷಾದದ ಸೂರಿನಂತೆ ಒಳಗೊಳಗೆ ದನಿಗುಡುತ್ತಲಿತ್ತು. ಅದಕ್ಕೇನುತ್ತರ?.... ಮನಸ್ಸು ಕೇಳುತ್ತಿತ್ತು.

"....ಒಂದು ಕಾಲಕ್ಕೆ ಅಷ್ಟೊಂದು ಸುಂದರವಾಗಿ ವೈಭವಯುತವಾಗಿ ತಲೆಯೆತ್ತಿದ ಈ ಜೈನಸಂಸ್ಕೃತಿಯು ಇಂದೇಕೆ ಕಣ್ಮರೆಯಾಗಿ ಹೋಯಿತು? ಆ ನೆಲದಲ್ಲಿ ಅತ್ತಿಮಬ್ಬೆಯ ಹೆಸರು ಹೇಳಲೂ ಕೂಡ ಒಬ್ಬ ಜೈನನಿಲ್ಲವಲ್ಲ? ಇದ್ದವನೊಬ್ಬ ಆ ನಿರಸನ ಪೂಜಾರಿ. ನಾನು ಆ ಜೈನಬಸದಿಯ ಬಳಿಯಲ್ಲಿ ಮೂಕನಾಗಿ ನಿಂತಿದ್ದಾಗ ನನ್ನ ಬದಿಗಿದ್ದ ಮುದುಕ ಮನುಷ್ಯ ಕೇಳಿದ: "ಅಲ್ಲರೀ ನೀವೆಲ್ಲಾ ಬಂದು ನೋಡಿ ಹೋಗತೀರಿ. ಏನೂ ಮಾಡುವುದಿಲ್ಲ— ನಮ್ಮ ಜಾತಿಯವರಾಗಿದ್ದರೆ ಕಡೆದು ಕೇಳುತ್ತಿದ್ದೆವು. ಏನಾದರೂ ಮಾಡಿರೆಂದು." ನಾನು ತಿರುಗಿನೋಡಿದೆ. ಅವನ ಮಾತು ನನ್ನನ್ನೆ ಪ್ರತಿಧ್ವನಿಸಿತು. "ಏನು ಈ ಜಾತಿ? ಜೈನಧರ್ಮವು ಕನ್ನಡ ಧರ್ಮವಲ್ಲವೆ? ಆ ಸಂಸ್ಕೃತಿಗಾದ ಅವನತಿ ಕನ್ನಡಕ್ಕಾದ ಅವನತಿ

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುದ್ರಣ!!!

ಶಿಕ್ಷಣ - ಶಿಕ್ಷಕದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಂತಹ, ಅನೇಕ ವಿದ್ವನ್ಮಣಿಗಳ ಸದಭಿಪ್ರಾಯವನ್ನು ಪಡೆದಂತಹ ಶೈಕ್ಷಣಿಕ ಉದ್ಗ್ರಂಥ.

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ಪಾವಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳನ್ನಿವೆ! ೪೭೫ ಪುಟಗಳು.

ಸಾದಾಪ್ರತಿಗೆ ೩-೦-೦. ಸುಂದರ ಪ್ರತಿಗೆ ೪-೦-೦
ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ :

೧. ನಿಂಬಾಳ ಕಲ್ಯಾಣಪ್ಪ, ಪೋ. ತಿಕೋಟ,
ಜಿ. ವಿಜಾಪುರ
೨. ಆಶಾ ಸಾಹಿತ್ಯಮಂದಿರ, ವಿಜಾಪುರ

ಲ್ಲವೆ?'' ನನಗೆ ನಾನೇ ಅಂದುಕೊಂಡೆ. ಪುನಃ ಆ ಮುದುಕನನ್ನು ಕೇಳಿದೆ. "ಏನಪಾ, ಈ ಬಸದಿಗಳೆಲ್ಲ ಈ ಹಾಳುಸ್ಥಿತಿಗೆ ಎಂದು ಬಂದವು?'' ಅತ ಹೇಳಿದ "ಒಮ್ಮೆ ಹಾವಳಿ ಬಂತರಿ. ಅದರಾಗ ಹಾಳಾತು ಎಲ್ಲಾ.'' "ಯಾರ ಹಾವಳಿ?....'' ನನಗೆ ನಾನೇ ಕೇಳಿಕೊಂಡೆ ಮನಸ್ಸು ಹೇಳಿತು. "ಅದು ದೊಡ್ಡ ಹಾವಳಿ! ಕಾಲನ ಹಾವಳಿ!!'' "ಅಂದಿನ ಜೈನ ಸಂಸ್ಕೃತಿ....ಆ ನಾಗರಿಕತೆ ಇಂದಿಗೂ ಇಲ್ಲಿ ಉಳಿದಿದ್ದರೇನಾಗುತ್ತಿತ್ತು? ಇಂದಿನ ಉಳಿದ ಸಂಸ್ಕೃತಿ ನಾಗರಿಕತೆಗಳೊತನೆ ಕೂಡಿಕೊಂಡು ಅದೂ ಬೆಳೆಯುತ್ತಿರಲಿಲ್ಲವೆ? ಒಂದು ಸಂಸ್ಕೃತಿಯನ್ನು ಹಾಳುಮಾಡಿ ಮತ್ತೊಂದನ್ನು ಕಟ್ಟುವದರಲ್ಲಿ ಕಾಲನ ದೃಷ್ಟಿ ಏನಿರಬಹುದೋ? ಇದೊಂದು ಮಹಾ ವೈಚಿತ್ರ್ಯವಲ್ಲವೆ?.....'' ಎಂದುಕೊಂಡೆ. ಆದರೆ ಪುನಃ ನನಗೇ ಅನ್ನಿಸಿತು. "ನಮ್ಮ ಸಣ್ಣದೃಷ್ಟಿಗೆ, ಪರಿಮಿತ ವಿಚಾರಕ್ಕೆ, ಭವ್ಯವಾಗಿ ಕಂಡದ್ದು ಕಾಲನ ದೃಷ್ಟಿಯಲ್ಲೇನು ಭವ್ಯ? ಅತನಿಗೆ ಇದೊಂದು ಮಬ್ಬಿಯ ಗೂಡುಕಟ್ಟಿ ಹಾಳುಮಾಡುವ ಮಕ್ಕಳಾಟದಂತಿರಬಹುದಲ್ಲ? ಆ ಕಾಲಪುರುಷನ ಅನಂತ ಲೀಲಾವಿಲಾಸದಲ್ಲಿ ಈ ನಾಶಕ್ಕೂ ಒಂದು ಉದ್ದೇಶವಿರಬಹುದಲ್ಲ.....ಕಾಲಾಯ ತಸ್ಮೈ ನಮಃ..... ಎಂದು ಕೈಮುಗಿದೆ.....ಅದರೂ ಆ ಲಕ್ಕುಂಡಿಯ ಪ್ರಾಚೀನ ಸಂಸ್ಕೃತಿಯ ನಯ ಸೌಂದರ್ಯ ನನ್ನ ಚಿತ್ತಹರಿಸಿಬಿಟ್ಟಿದ್ದವು...ಅದರಲ್ಲಿ ವಿಜಯನಗರದ ಸಂಸ್ಕೃತಿಯ ಭವ್ಯತೆ-ವಿಸ್ತಾರ-ಅದ್ಭುತ ಭವ್ಯಗಳು ಇರಲಿಕ್ಕಿಲ್ಲ. ಆದರೆ ಲಕ್ಕುಂಡಿಯ ಆ ಜೈನ ಸಂಸ್ಕೃತಿಯ ಸುಕುಮಾರಚೇತನ ನಮಗಿಂದಿಗೂ ಬೆಳಕು ನೀಡಲಿಕ್ಕಿಲ್ಲವೆ?.. ನನ್ನಲ್ಲಿ ಅದು ಮೈಗೂಡಿಕೊಂಡರೆ ನನ್ನ ಹೃದಯವಂತಿಕೆ ಇನ್ನಿಷ್ಟು ಶ್ರೀಮಂತವಾಗಲಿಕ್ಕಿಲ್ಲವೇ?.....'' ಹೃದಯ ಕೇಳುತ್ತಿತ್ತು. ಹಾಗೆಯೇ ಮೂಕನಾಗಿ ಅಲ್ಲಿಂದ ಬಂದೆ....

ಹೌದು. ದೇವರೇ ಬಲ್ಲ ಅಲ್ಲಿಯ ಅನೇಕ ತೀರ್ಥಂಕರರ ಮೂರ್ತಿಗಳಿಂದು ಧಾರವಾಡದ ಸಂಶೋಧನ ಸಂಸ್ಥೆಯಲ್ಲಿವೆ. ಕಳೆದ ಶಿಲ್ಪದ ಮಾತು ಬಿಟ್ಟು ಇದ್ದ ಕಲೆಯನ್ನೇ ಕಂತರೂ ಮನಸ್ಸಿಗೆ ಸಂತಸವಾಗುತ್ತದೆ. ಕುತೂಹಲ ಕೆರಳುತ್ತದೆ. ಆಗಲೇ ಹೇಳಿದ ಕಮಲಗಳ ನಯ-ಸೌಂದರ್ಯ-ಅದರ ಎಳಸುಗಳಲ್ಲಿಯ ಪ್ರಫುಲ್ಲತೆ, ಕಣ್ಣಾಣಿಸುವಂತಹವಿವೆ. ಈ ಕಮಲಗಳು ಜೈನರ ವಾಸ್ತುಶಿಲ್ಪದ ಮುಖ್ಯಲಕ್ಷಣಗಳಲ್ಲಿ ಒಂದಾಗಿವೆ. ಮೌಂಟ್ ಅಬುವಿನಲ್ಲಿ ಇಂಥವೇ ಕಮಲಗಳನ್ನು ಕಂಗಮನರಿ ಕಲ್ಲುಗಳಲ್ಲಿ ಕಟೆದಿದ್ದಾರೆ. ಆದ್ದರಿಂದ ಅಲ್ಲಿಯ ನಯ ಇಲ್ಲಿ ಬರಲಾರದಾದರೂ ಈ ಕಮಲಗಳ ಕೆತ್ತನೆಯ ಸೂಕ್ಷ್ಮತೆ ಕಲೆಯ ಕುಸುರಿನ ವೈಭವ ಅತ್ಯುಚ್ಚಮಟ್ಟದ್ದೆಂಬಲ್ಲಿ ಸಂಶಯವಿಲ್ಲ. ಅದರಂತೆ ಮಹಾದ್ವಾರದ ಎದು ಚೌಕಟ್ಟುಗಳಲ್ಲಿ ಕಾಡುಬರುವ ಕೆತ್ತನೆಯ ಕೆಲಸವನ್ನು ಕಾಣಬೇಕಾದರೆ ತಾಜಮಹಲನ್ನು ನೆನೆದುಕೊಳ್ಳಬೇಕು. ಇಲ್ಲಿಯ ಸೂಕ್ಷ್ಮತೆ ವಿಜಯನಗರದಲ್ಲಿಯ ಮಹಾದ್ವಾರಗಳಲ್ಲಿಯೂ ಕಾಡುಬರುವದಿಲ್ಲ. ಅದರೆ ಈ ಕಲಾವೈಭವವು ಎಲ್ಲ ಬಸದಿಗಳಲ್ಲಿಯೂ ಕಂಡುಬರುವುದಿಲ್ಲ ಅತ್ಯಂತ ಪ್ರಾಚೀನ ಬಸದಿಗಳಲ್ಲಿ ಮಾತ್ರ ಕಂಡುಬರುವುದು. ಉಳಿದ ಬಸದಿಗಳಲ್ಲಿಯ ಕಮಲಗಳು, ಕಂಬಗಳು-ಮಹಾದ್ವಾರಗಳು ಪ್ರಾಚೀನ ಬಸದಿಗಳ ಅಪಕ್ವ ಅನುಕರಣೆ ಮಾತ್ರ!

ಲಕ್ಕುಂಡಿಯ ಆ ಬಸದಿಗಳು—ಆ ಬಾವಿಗಳು—ಆ ಪ್ರಶಾಂತ ವಾತಾವರಣ—ಅಲ್ಲಿಯ ತೋಟಪಟ್ಟಿಗಳು....ಅವನ್ನೆಲ್ಲಾ ನೋಡುತ್ತಿರುವಂತೆಯೇ ಮನಸ್ಸು ಗತಕಾಲದ ನೆನಪುಗಳಲ್ಲಿ ಮಗ್ನವಾಗುತ್ತದೆ. ಅದೆಂಥ ಕಾಲವಾಗಿರಬೇಕು? ಆಗ ಆ ಗ್ರಾಮದ ಸ್ಥಿತಿ ಎಂಥದಿರಬೇಕು? ಅಲ್ಲಿಯ ಒಂದು ಶಿಲಾಶಾಸನ ಹೇಳುತ್ತಿದೆ:

"ವಿಭೂತಿಗೆ, ಧರ್ಮಕ್ಕೆ, ಲಕ್ಷ್ಮಿಗೆ ತವರುಮನೆಯಂತಿದ್ದ ಲೊಕ್ಕಿಗುಂಡಿಯು ಇಂದ್ರನ ಅಮರಾವತಿಗಿಂತಲೂ ಶ್ರೇಷ್ಠವಾಗಿದೆ.'' ಇನ್ನೊಂದು ಶಾಸನ ಮತ್ತು ಅಭಿಮಾನದಿಂದ ಸಾರುತ್ತದೆ:

"ಅಮರಾವತಿ ಪಟ್ಟಣವನ್ನು ಮತ್ತು ಲೊಕ್ಕಿಗುಂಡಿಯನ್ನು ಒಂದು ತಕ್ಕಡಿಯಲ್ಲಿಟ್ಟು ತೂಗಿದರೆ ನಮ್ಮ ಲೊಕ್ಕಿಗುಂಡಿಯ ತೂಕವೇ ಹೆಚ್ಚಾಗುವುದು.....''

ಸೋಲ್ಮಂಬು

(ಹಿಮಾಚಲದ ತಪೋರಂಗ)

ಪಂಡಿತ ಡಿ. ಪಂಢರಿನಾಥಾಚಾರ್ಯ ಗಲಗಲಿ, ಗದುಗು

卐

೧

ನಿತ್ಯವಿಲ್ಲಿ ಹೇಮಂತನೃತ್ಯ, ಹಿಮವಂತ ಮುಗಿಲಕಂಥ
ಚಂದ್ರಚಕಳಿ ನಡುವಿಟ್ಟು ಗಂಗೆವಾವುಡವ ಸುತ್ತಿದಂಥ ॥
ಹಾವು ಹೂವುಮುಡಿ ಸಾವು ನೋವು ನಂಟಮೈತಮಾಳ್ಪ ಶಂಭು,
ತಪದಿ ಸತ್ತ್ವ ತುಂಬಲಿಕೆ ಕುಳಿತು ತಪಿಸುವನು ಚಿತ್ಸ್ವಯಂಭು ॥

೨

ಈಶ ಕುಳಿತ ಆ ಹಾಸುಗಲ್ಲು ಸೂಸುವುದು ಶೃಷ್ಟಿಯುಸಿರು,
ಏಸು ಜನುಮದಾ ರಾಶಿತಪದ ತರು ಕಂಡಿತೆಂದು ಕುಸುರು
ಗಾಳಿ ಮುಟ್ಟಿ ಮೈತಟ್ಟಿ ತಾನು ಹುಟ್ಟಿದುದು ಸಾರ್ಥವೆಂದು
ತುಳುಕಿ ಬಳುಕಿ ತಾ ಪುಳಕಗೊಂಡು ಹೀಡುಹುದು ಗಂಧ ತಂದು ॥

೩

ಶಿವನ ಪೊತ್ತ ಪಾಷಾಣಪೀಠ ಮುತ್ತಿಟ್ಟು ಹೊರಿದು ಮಿಕ್ಕಿ
ಗಂಗೆ-ತುಂಗ-ತಾರಂಗದಂತರಂಗದಲಿ ಭಕ್ತಿಯುಕ್ಕಿ
ನಾನು ಮುಂದೆ ತಾನೆಂದು ತೂರಿ ತೆರೆಯೆದ್ದು ಮೇಲೆ ಬಿದ್ದು
ಅವನ ಪಾದ ತುದಿಬದಿಯ ತೊಳೆಯುತಿಹವಿಲ್ಲಿ ಹಾಕಿ ಜಿದ್ದು ॥

೪

ತಪದ ಸಿದ್ಧಿ ಜಪಜೇಯಸಿದ್ಧಿ ಸಂಯಮದ ಶುದ್ಧಿ ತಾನು
ಪುಣ್ಯಫಲಿತ ಪುರುಷಾರ್ಥ ತಪಿಸಿ ಪಡೆವಂಥ ಫಲವದೇನು—
ಕಣ್ಣುಮುಚ್ಚಿ ಮುಕ್ಕಣ್ಣ ಕಣ್ಣು ಬಿಟ್ಟತ್ತು ಮಣ್ಣು ಮುಗಿಲು
ಒಗ್ಗು ಒಡೆಯದಾ ದಿವ್ಯಬುದ್ಧಿ ಬುಗುಟೆದ್ದು ಏನೊ ದಿಗಿಲು !

೫

ಕಂದರ್ಪದರ್ಪ

" ಶೂಲಿ ಕೇಲಿಗಿಳಿವಂತೆ ಮಾಳ್ಪೆ ನಾನಿಂದ್ರ ! ಏಕೆ ಚಿಂತೆ ?
ಚಂದ್ರಕೋರ ಕಾಣಿಕೆಯನಿತ್ತು ಕಾಮಿನಿಗೆ ' ಚಂದ್ರಕಾಂತೆ !
ಏ ಕಾಂತೆ ಬಾರೆ ಏಕಾಂತಕೆಂದು ಕರೆಕರೆದು ತಾನು ಮುಂತೆ
ನೀರಜೊಗೆದು ನೀರೆಯನು ತಲೆಯಮೇಲಾಂತು ಕುಣಿಯುವಂತೆ ॥ "

೬

ಇಂದ್ರಉವಾಚ

ಳಾವು ಭೂಪ ಎಲೆಪುಷ್ಪಚಾಪ ನೀ ಸಗ್ಗದೊಂದು ದೀಪ
ಪುಷ್ಪಗಂಧ ಮಕರಂದದಿಂದ ನೀ ತೊಳೆಯೊ ದೇವತಾಪ
ಇಂದು ವಜ್ರಸಾಮರ್ಥ್ಯ ವಜ್ರ, ಯಮದಂಡ ನೊಂಡುಗರಿಯು
ಕಾಮಬಾಣವೇ ರಾಮಬಾಣ— ಹೊಡೆ ಗೌರಿಪತಿಯೆ ಗುರಿಯು ॥

೭

ಶೈತ್ರಯಾತ್ರೆ

ಇಂದ್ರ ತಬ್ಬಿ ಸ್ಮರನನುಬ್ಬಿ ನಡೆದ ನಿಬ್ಬಣದ ಹುರುಪುಗೊಂಡು
ಕಾತ ಹೂತ ನವಚೂತ ಚೈತ್ರಕಾನನದಿ ಮಧುವನುಂಡು;
ಚಿಗಿತ ಚಿಗುರು ಚಂದನದ ಅಗರು ತರುದೇವದಾರು ಗಂಧ
ಗಿರಿಯ ತೊರೆಯ ತುಂತುರಕೆ ಬೆರಸಿ ಪನ್ನೀರ ಪವನ ತಂದ ॥

೮

ಮಧುಸಂಗಮ

ಅಳಿಯ ಗಿಳಿಯ ಕೋಕಿಲೆಯ ಉಲಿಯ ಕಾಕಲಿಯ ಕಾಳಿಯೂದಿ
ಗಾಳಿಗೈಯ ಗುಣಿಯಿಂದ ಗಗನಡೊಳ್ ಬಡಿದು ಭುವನಭೇದಿ
ಚಿತ್ರಪತ್ರ ಚಿರಚಾರುಛತ್ರ ಹೂಮಿಡಿಯ ಗುಡಿಯ ಕಟ್ಟಿ
ಚೈತ್ರಯಾತ್ರೆ ಹೊರಹೊರಟ ಚೈತ್ರ ಮಧುವನದಿ ಮಡುವುಗಟ್ಟಿ

೯

ಮುಗಿಲು ಮುಖವ ಮುದ್ದಿಡುವ ತುಂಗಗಿರಿಶೃಂಗಹೇಮಕೂಟ
ಮಂಜುಮಂಚದಲಿ ರಂಗ ಹೂಡಿ ನಡೆಸಿದನು ಕಾಮ ಆಟ;
ಕಾಮ ಪ್ರೇಮ ಜಗಸಾರ್ವಭೌಮ ಸಾಮಂತ ಈ ವಸಂತ
ಸಂಗಚತುರ ಚತುರಂಗಬಲಕೆ ತಪಭಂಗ ಸಾಧುಸಂತ ॥

೧೦

ತುಂಬಿ ಹಾಡಿ ರಂಬಿಸಲು ದ್ರವಿಸಿತೋ ಕಮಲದಂತರಂಗ
ಯೋಗಿ ಹೃದಯಗುಮ್ಮಟದಿ ಕಾಮ ಬಾರಿಸಿದ ಜಲತರಂಗ
ಮದರ ಮಧುರ ಸಂಗೀತ ನಿರಡಿಗಾರುಡಿಗೆ ಮಂತ್ರಮುಗ್ಧ
ಮೌನಿಮನದಿ ಕಾಮರಿರ್ದ ಪ್ರೇಮವಲ್ಲರಿಗೆ ಹನಿಸಿ ದುಗ್ಧ ॥

೧೧

ಮಂಜುಪುಂಜ ಮರಗಟ್ಟಿ ಕಾಡು ಗಂಧರ್ವಬೀಡು ನಾಡು
ನೆಲವೆ ಕಾತು ಹುಡಿಯೆಲ್ಲಹೂತು ಬಂಗಾರವಾಯ್ತು ನೋಡು;
ಹೂವು ಬಿತ್ತಿ ಕಂಜಲ್ಯ ಮೆತ್ತಿ ಅದರುರದಿ ಕಂಪು ಕೆತ್ತಿ
ಗಂಧಗೀತ ಹಾಡುವುದು ಗಾಳಿಪಟವಾಯ್ತು ಯೋಗವೃತ್ತಿ ॥

೧೨

ಉಗ್ರ ತಪವನವ್ಯಗ್ರಮನದಿ ತಪಿಸುವನು ನೀಲಕಂಠ
ಬೆಚ್ಚಿ ಬೆದರಿ ಅಚ್ಚಂಗೆ ಬೆರಳು ಕಚ್ಚಿದರು ವಿಧಿ ವಿಶುಂಠ;
ತಪದ ತಾಪದ್ಹೊಗೆಯೆದ್ದ ಧೂಪತೈಜಸದ ದೀಪದುರಿಗೆ
ಹಗಲು ಮುಗಿಲು ಬುಗಿಲೆದ್ದ ಇರುಳು ನಕ್ಷತ್ರ ಹರಳು ಕಂಗೆ ॥

೧೩

ದರ್ಪನೆಂಬು ' ದೇವೋಸ್ಮಿ ' ಮಂಬು ಮೌಢ್ಯತೆಗೆ ಪಂಜುಹಿಡಿಯಿ
ಮಂಡುವನೆಯ ಹಿಮಕುಂಜಮುನಿಯ ತೇಜಃ
ಪ್ರಪುಂಜ ಹೊಡೆಯೆ—
ಕಂತುನಿಂತು ಚಿಂತಿಸಿದನೆಂತು ಆಭ್ರಾಂತ ಪಾವು ಹೂವೆ ?
ನೋಡೆ ನಡುಕ್ಕು, ಮೈಮುಟ್ಟಿ ಕೆಟ್ಟಿ ಕೆಣಕಿದರೆ ಶರಣು ಸಾವೆ ॥

೧೪

ಅಯ್ಯೊ ಶತ್ತೆ ನಾನೆಂಥ ಕತ್ತೆ ! ಇವರಿದುರು ನಾನು ಧೂಪ
ಇವನ ದೃಷ್ಟಿರುಚಿ ರೋಚಿ ವೀಚಿ ಸುರಚಾಪಕಿಂತ ಚೂಪ
ಇಂದ್ರನೆಂದ ಆ ' ಭಾವು ಭೂಪ ' ಹೊಗಳಿಕೆಯೆ ಎನಗೆ ಶಾಪ
ಈ ತಪಸಿ ಕೋಪ ತಿದಿಯೂದಿ ಬೂದಿ ನಾನಾಪೆ ರತಿಯು ದೀಪ ॥

೧೫

ಇಲ್ಲೆ ಇಟ್ಟಿ, ಈ ಬಿಲ್ಲು ಬಿಟ್ಟಿ, ದೂರಿನೆವೆ ಪಂಚಪ್ರಾಣ
ಇಲ್ಲದಿದುವೆ ಗಂಟಲಕೆ ಗಾಣ ಹೋದೀತು ಪಂಚಪ್ರಾಣ
ಪುಷ್ಪಚಾಪ ಚಾಪಲವ ಕ್ಷಮಿಸು ನಮಿಸುವೆನು ತಂದೆ ಕಂದ
ದರ್ಪ ಕಳೆದು ಕಂದರ್ಪ ಬಿದ್ದು ವಂದಿಸಿದ ಭೀತಿಯಿಂದ ॥

೧೬

ಸಾರ್ವಭೌಮಾದ್ಭುತ

ನೆಲಕೆ ಬಿದ್ದ ಮದನಂಗೆ ಬಿದ್ದ ಸುರಸ್ಪರ್ಶದಂತೆ ಇದ್ದ
ಹೈಮದೊಡಲು ಹಿಮಕಡಲು ಕಡೆದು ಪಡೆದಂಥ ಜಿಷ್ಣುಮುದ್ದೆ
ಶೈಲಸುಟದಿ ಶಿವಚಂದ್ರಕೋರ ಕೊರೆದಂಥ ಸ್ವರ್ಣಶಿಲ್ಪ
ಒಲವು ಚೆಲುವು ಕುಲಶೀಲ ದ್ವಂದ್ವಗಳ ನಿಲುವು ನಿರ್ವಿಕಲ್ಪ ॥

೧೭

ಅವಳ ಕಂಡು ಚೇತರಿಸಿಗೊಂಡು ಬಿದ್ದಂಥ ಕಾಮನೆದ್ದ
ಇವಳು ಒಲಿಯೆ ವಿರುಪಾಕ್ಷನಿಂದ ಮಮ ಪಾರಿತೋಷ ಸಿದ್ಧ
ಒಮ್ಮೆಗೈದು ಹೂಬಾಣ ಬಿಟ್ಟು ಹೊಡೆದಿದ್ದ ಶಿವನ ಎದೆಗೆ
ಕಣ್ಣ ಬಿಟ್ಟು ಹರ ಕಂಡ ಹೆಣ್ಣ ತುಟಿ ತುಂಡಿಕಣ್ಣ ಬದಿಗೆ ॥

೧೮

ತುಂಗ ಶೃಂಗ ಶೃಂಗಾರ ಮುಖದಿ ಮುತ್ತಿಟ್ಟು ಗಗನದಲ್ಲಿ
ಚಿಗುರು ಚಿಗುರಿ ವೈನವಿರು ನಿಮಿರಿ ಶ್ರೀಶೈಲಿಪ್ರೇಮಕಲ್ಲಿ
ಕೊನ್ಯದೊಡಲು ರಭಗಡಲು ಆಗಿ ಸುರಿಸುವುದು ಸ್ನೇಹಬಾಷ್ಪ
ಬೆಳಕುಬಳ್ಳಿಯಲಿ ಗಾಳಿಗುಂಟ ಅರಳಿಹುದು ಪ್ರಣಯಪುಷ್ಪ ॥

೧೯

ಮಂದಪವನ ಕವಿಗಂಧ ಛಂದ ಗುಣುಗುಣಿಸೆ ಪ್ರೇಮಕವನ
ತಪದ ವನವು ಉಪವನವು ಭುವನನೇ ಕಾಮುಕೇಳಿ ಭವನ;
ಬಾಳು ಕಾಳಕೂಟಿಂಬ ಜಟಿಲ ಕುಟಿಕೋಟಿ ಹೇಮಕೂಟ-
ಪ್ರೇಮಕೂಟ ಸರಸಾಟಬೀಟ ಎಲ್ಲಿಡೆಗು ಮೋಹಮಾಟ ॥

೨೦

ಸ್ನಾನಶುದ್ಧಗಿರಿಗುವರಿ ಗೌರಿ ಬಂದಲ್ಲಿ ಹೆಜ್ಜೆ ಇಟ್ಟು
ಹೈಮಕಲ್ಲ ಬಿಳಗಲ್ಲುಕೆಲ್ಲ ತಾವರೆಯ ಗುಲ್ಲುಕೊಟ್ಟು—
ಶಿವನ ಪಾದ ನಮಿಸಿದಳು ಹೂವಿನಂಜಲಿಯ ಸುರಿದು ಬಾಗಿ
ಅವನ ಉಗುರುಚಂದ್ರಮನು ಅವಳ ಕುರುಳಿರುಳನಪ್ಪೆ ತಾಗಿ ॥

೨೧

ನಯನ ಹೃದಯ ಚಂಚಲಿಸಿ ಸೇರೆ ಮನ್ಮಥನ ಸಂಚಿನಲ್ಲಿ
ಚಿತ್ತ ಚಲಿಸೆ ಕಣ್ ನೆಲಿಸೆ ಅವಳ ತುಟಿ ಹವಳದಂಚಿನಲ್ಲಿ,
ಹಣೆಯನುಣ್ಪು ಕೂದಲಿನ ಕಂಪು ತಂಪೆರೆಯೆ ತಪ್ಪ ಎದೆಗೆ
ಮನವು ಮೂಗಿ ಕಣ್ ಕಣ್ಣುತಾಗಿ ಕೈಬಾಗೆ ಹೃದಯತುದಿಗೆ

೨೨

ಜೇನು ಗಾನ ಝೇಂಕಾರ ಧನುಷ್ಟಂಕಾರ ಮಾಡಿ ಕರಿವ
ತಳ್ತಶೋಕ ಮಾಕರದ ಮಲ್ಲಿ ಅರವಿಂದ ಇಂದಿವರವ—
ಪುಷ್ಪಬಾಣ ವೃಷ್ಟಿಯನು ಕಂಡು ಸುರಶ್ರೇಣಿ ಪುಷ್ಪಕರೆಯೆ,
ಶಿವನ ಹೃದಯ ಶ್ರೀಶೈಲ ತೊರೆದು ಶೃಂಗಾರಗಂಗೆ ಕರೆಯೆ ॥

೨೩

ಚಂದ್ರಕಿರಣ ಕಡೆಗೋಲಿಗೊಡ್ಡಿದಂಬುಧಿಯ ಒಡಲ ತೆರದಿ
ಶಿವನ ಶಾಂತ ಎದೆ ರಾಗ ಉಕ್ಕಿ ಕಡಲಾಡೆ ಭಾವಭರದಿ
ಪ್ರೇಮವಿಡಲು ಮೂರ್ಗಣ್ಣು ಹೆಣ್ಣತುಟಿ ತೊಂಡೆಹಣ್ಣುಮೇಲೆ
ಎಂಬುಮೇಲೆ ನಾ ಗೆದ್ದೆ ಸೋತ ಶಿವ ಎನಗೆ ವಿಜಯಮಾಲೆ

೨೪

" ಹರಸ್ತು ಕಿಂಚಿತ್ ಪರಿಲುಪ್ತ ಧೈರ್ಯಃ
ಚಂದ್ರೋದಯಾರಂಭ ಇವಾಂಬು ರಾಶೇಃ
ಉಮಾಮುಖೇಬಿಂಬ ಫಲಾಧರೋಷ್ಠೇ
ವ್ಯಾಪಾರಯಾಮಾಸ ವಿಲೋಚನಾನಿ "

(ಕುಮಾರಸಂಭವ)

ಹಿಂದೂ ಸಂಸ್ಕೃತಿ ಮತ್ತು ಸಮಾಜದ ಆಚಾರಗಳು

ಲೇಖಾಂಕ ೩

ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ

卐

ನಮ್ಮ ಗೃಹ, ಗ್ರಾಮ, ಮತ್ತು ನಗರಗಳ ನಿರ್ಮಾಣ

ಹಿಂದುಗಳ ಆಚಾರವು ಶಾಸ್ತ್ರೀಯ ಜೀವನವನ್ನು ಆದರ್ಶವನ್ನಾಗಿ ಮನ್ನಿಸುತ್ತದೆಯೆಂಬುದು ನಿಶ್ಚಿತವಾದ ಮೇಲೆ, ನಿವಾಸದ ಪ್ರಶ್ನೆಯು ಬರುತ್ತದೆ. ಹಿಂದೂಸಮಾಜದವ್ಯವಸ್ಥೆಯು ನಾಲ್ಕು ವರ್ಣ ಮತ್ತು ನಾಲ್ಕು ಆಶ್ರಮಗಳನ್ನು ಅಳವಡಿಸಿಕೊಂಡಿದೆ. ನಾಲ್ವರಲ್ಲಿ ಬ್ರಹ್ಮಚರ್ಯ, ವಾನಪ್ರಸ್ಥ ಮತ್ತು ಸನ್ಯಾಸ-ಈ ಮೂರು ಆಶ್ರಮಗಳೂ ವನಗಳಲ್ಲಿರತಕ್ಕವು. ಗೃಹಸ್ಥಾಶ್ರಮವನ್ನು ಉಳಿಸಿ ಮೂರು ಆಶ್ರಮಗಳಿಗೆ ಆಶ್ರಯವನ್ನು ಕೊಡಲೋಸುಗವೇ ಸ್ವೀಕರಿಸಬೇಕೆಂದು ವಿಧಾನವಿದೆ. ಬ್ರಹ್ಮಚಾರಿ ಮತ್ತು ಸಂನ್ಯಾಸಿಯ ಸತ್ಕಾರ ಮಾಡುವುದು ಗೃಹಸ್ಥನ ಪರಮಧರ್ಮವಾಗಿದೆ ಮತ್ತು ಅತಿಥಿ ಸತ್ಕಾರವಂತೂ ಸರ್ವಪ್ರಥಮ ಧರ್ಮವಾಗಿದ್ದೇ ಇದೆ. ಗೃಹಸ್ಥಾಶ್ರಮದ ಆದರ್ಶದ ವಿಪರೀತವಾಗಿ ಇದರ ಆಚಾರವಿರಬಾರದು ಗೃಹಸ್ಥನು ಉಳಿದ ಮೂರು ಆಶ್ರಮಗಳ ಮತ್ತು ಅತಿಥಿಗಳ ಸತ್ಕಾರಕ್ಕೆಂದೇ ಗೃಹವನ್ನು ನಿರ್ಮಿಸಿಕೊಳ್ಳುವನು. ಎಂದಮೇಲೆ ಈ ಆಶ್ರಮವಾಸಿಗಳಾದ ವ್ಯಕ್ತಿಗಳಿಗೆ ಸುವಿಧೆ ಸಿಗುವಂತೆಯೂ ಅವರು ಯಾವ ವಿಧವಾದ ಸಂಕೋಚವಿಲ್ಲದಂತೆ ಇರಲು ಅನುಕೂಲವಾಗುವಂತೆಯೂ ಗೃಹನಿರ್ಮಾಣವಾಗಬೇಕು. ಇಂದು ಒಬ್ಬ ಸಾತ್ವಿಕ ವ್ಯಕ್ತಿಯು ಸಹ ನಗರಗಳಲ್ಲಿರಲು ಕೇಸುತ್ತಾನೆ. ಯಾವುದೇ ವಿಶಾಲ ಭವನವಾಗಲಿ - ಇಂದು ಯಾರಾದರೂ ತಪಸ್ವಿಯು ಇದ್ದುಕೊಂಡು ಪ್ರಸನ್ನವಾಗುವಂತಹುದಾಗಿಲ್ಲ ನಾಗರಿಕ ನಿವಾಸಗಳು ಸಾತ್ವಿಕತೆಗೆ ಪ್ರಶ್ನೆಯವನ್ನು ಕೊಡತಕ್ಕುವುಗಳಾಗಿದ್ದುವು; ಇದನ್ನು ಉದ್ವಿಗ್ನಗೊಳಿಸುವುವಾಗಿರಲಿಲ್ಲ.

ಸತ್ಯಯುಗದಲ್ಲಿಯಂತೂ ನಿವಾಸದ ಪ್ರಶ್ನೆಯೇ ಇರಲಿಲ್ಲ. ಆ ಸಮಯದಲ್ಲಿ ಗ್ರಾಮ ಮತ್ತು ನಗರಗಳಿರಲಿಲ್ಲ ಯಾರು ಎಲ್ಲಿ ಬೇಕಾದರೂ ಇಲ್ಲಿಯೇ—ವೃಕ್ಷಗಳ ಅಡಿಗಳಲ್ಲಿ ಅಥವಾ ಗುಹೆಗಳಲ್ಲಿ ತಪಸ್ಸು ಮತ್ತು ಧ್ಯಾನವನ್ನು ಗೈಯುತ್ತಿದ್ದರು. ಪೃಥ್ವಿಯು ವನ ಪೂರ್ಣವಾಗಿದ್ದಿತು. ಮತ್ತು ವನಗಳಲ್ಲಿ ಮನುಷ್ಯನ ಕ್ಷುಧೆಯನ್ನು ಶಾಂತಗೊಳಿಸಲು ಪರ್ಯಾಪ್ತವಾಗಿ ಫಲ, ಮೂಲ ಮತ್ತು ಕಂದಗಳು ಇದ್ದುವು. ಮೊಟ್ಟ ಮೊದಲಿನ ಬರಗಾಲವು ಮಹಾರಾಜ ಪೃಥುವಿನ ಕಾಲದಲ್ಲಿ ಬಂದಿತು. ಮಹಾರಾಜನಾದ ಪೃಥುವು ಪೃಥ್ವಿಯ ವಿಷಮ ಭಾಗಗಳನ್ನು ಸಮಮಾಡಿಸಿದನು; ಬೇಸಾಯದ ಪದ್ಧತಿಯನ್ನು ಪ್ರಚಾರದಲ್ಲಿ ತಂದನು; ಮತ್ತೆ ನಗರ ತಥಾ ಗ್ರಾಮಗಳನ್ನು ನೆಲೆಸಿದನು. ಬೇಸಾಯದ ಬಗ್ಗೆ ಮನುಮಹಾರಾಜರ ಶ್ಲೋಕವು ಹೀಗಿದೆ:

"ಕೃಷಿಂ ಸಾಧ್ವಿತಿ ಮನ್ಯಂತೇ ಸಾ ವೃತ್ತಿಃ ಸದ್ವಿಗರ್ಹಿತಾ।
ಭೂಮಿಂ ಭೂಮಿಶಯಾಂ ಚೈವ ಹಂತಿ ಕಾಷ್ಠಮುಖೋ ಮುಖಂ"
(ಮನು: ೧೦-೮೪)

ಬೇಸಾಯ ಉತ್ತಮವೆಂದು ಜನರು ಒಪ್ಪುವರು; ಆದರೆ ಸಜ್ಜನರು ಈ ವೃತ್ತಿಯನ್ನು ನಿಂದಿಸುವರು ಏಕೆಂದರೆ ಕಬ್ಬಿಣದೊಡನೆ ಸೇರುವ ಮರದ ಮುಟ್ಟು ಉಪಯೋಗಿಸಿ, ಕೃಷಿಕರ್ಮವು ಭೂಮಿಯ ಮತ್ತು ಭೂಗವಾದ ಜೀವಿಗಳನ್ನು ನಾಶಮಾಡುತ್ತದೆ.

ಹಿಂಸಾಪ್ರಾಯಾಂ ಪರಾಧೀನಃ ಕೃಷಿಂ ಯತ್ನೇನ ವರ್ಜಯೇತ್
(ಮನು: ೧೦-೮೫)

"ಹಿಂಸೆಯಿಂದ ಕೂಡಿರುವ ಪರಾಧೀನವಾದ (ಕೂಲಿಗಳ, ಮತ್ತು ಮಳೆಯ ಮೇಲೆ ನಿರ್ಭರವಾದ) ಕೃಷಿಕರ್ಮವು ಯತ್ನಪೂರ್ವಕವಾಗಿ ವರ್ಜಿಸಲ್ಪಡಬೇಕು." ಈ ಆಜ್ಞೆಯು ಬ್ರಾಹ್ಮಣ ಮತ್ತು ಕ್ಷತ್ರಿಯರಿಗಾಗಿ ಇದೆ. ಆಪತ್ಕಾಲದಲ್ಲಿ ವೈಶ್ಯವೃತ್ತಿಯನ್ನಾದರೂ ಅವಲಂಬಿಸಬಹುದಾಗಲಿ, ಕೃಷಿಯನ್ನು (ಬೇಸಾಯ) ಮಾತ್ರವಲ್ಲವೆಂದು ಮತ್ತೆ ಹೇಳಲಾಗಿದೆ.

ಮಹಾರಾಜ ಪೃಥುವಿನ ದ್ವಾರಾ ಪ್ರಚಲಿತವಾದ ಮೇಲೆಯ ಕೃಷಿಕರ್ಮವು ಹಿಂದೂಸಮಾಜದಲ್ಲಿ ಬಹಳ ದಿನಗಳ ವರೆಗೂ ನಿಂದಿತವಾಗಿಯೇ ಪರಿಗಣಿಸಲ್ಪಟ್ಟಿದ್ದಿತು. ಬ್ರಾಹ್ಮಣರು ದ್ವಾಪರಾಂತ್ಯದವರೆಗೂ ನಗರ ಮತ್ತು ಪಟ್ಟಣಗಳಲ್ಲಿ ವಾಸಿಸಲು ಒಪ್ಪಲಿಲ್ಲ. ಅರಣ್ಯಗಳಲ್ಲಿ ಅವರ ಆಶ್ರಮಗಳಿದ್ದುವು. ವಸಿಷ್ಠ, ವಿಶ್ವಾಮಿತ್ರ, ಅತ್ರಿ, ಸಾಂದೀಪನಿ, ಕಣ್ವ ಪ್ರಭೃತಿಗಳ ತಪೋವನಗಳ ವರ್ಣನೆಯ ಮಹಾಭಾರತದಲ್ಲಿದೆ. ಅವರೆಲ್ಲರೂ ಋಷಿಗಳಾದ ಗೃಹಸ್ಥರಾಗಿದ್ದರು. ಗೃಹಸ್ಥರಾಗಿದ್ದರೂ ಅವರಿಗೆ ನಗರ ಮತ್ತು ಗ್ರಾಮಗಳ ಅವಶ್ಯಕತೆ ಇರಲಿಲ್ಲ. ಬ್ರಾಹ್ಮಣರು ಭಾರತದಲ್ಲಿ ಸದಾ ಜ್ಞಾನಮೂರ್ತಿಗಳು

ತಪಸ್ವಿಗಳೂ ಇರುತ್ತಿದ್ದರು. ಅವರು ಯಾವಾಗಲೂ ವನಗಳಲ್ಲಿ ವಾಸಿಸಿ, ಜ್ಞಾನಾರ್ಜನೆ ಮತ್ತು ಜ್ಞಾನವಿತರಣೆಯನ್ನು ಗೈಯುತ್ತಿದ್ದರು. ಗೃಹಸ್ಥರ ಬಾಲಕರು ಅವೇ ತಪೋವನಗಳಲ್ಲಿ ತಮ್ಮ ಬ್ರಹ್ಮಚರ್ಯದ ಆಶ್ರಮವನ್ನು ಕಳೆಯುತ್ತಿದ್ದರು. ನಿರಂತರ, ನಿರ್ಬಾಧಿತ ಗುರುಸೇವೆಯನ್ನು ಮಾಡಿ ಅಲ್ಲಿಯೇ ಅವರು ವಿದ್ಯಾಧ್ಯಯನ ಮಾಡುತ್ತಿದ್ದರು.

ವನದಲ್ಲಿ ನಿಕಾಕಿಗಳಾಗಿರಲಿ ಅಥವಾ ನಗರ ಅಥವಾ ಗ್ರಾಮಗಳಲ್ಲಿರಲಿ, ನಾಲ್ಕೂವರ್ಣ ಮತ್ತು ನಾಲ್ಕೂ ಆಶ್ರಮವಾಸಿಗಳಿಗೆ ಜಲಾಶಯದ ಆವಶ್ಯಕತೆ ಇದ್ದಿತು. ಸ್ನಾನ ಸಂಧ್ಯಾತರ್ಪಣಗಳು ಪ್ರತಿಯೊಂದು ದ್ವಿಜಾತಿಗೂ ಅನಿವಾರ್ಯವಾಗಿದ್ದಿತು. ಆದುದರಿಂದ ಸರಿತಾ ತಟಗಳಲ್ಲಿಯೇ ಆವಾಸಗಳು ಸ್ಥಿರವಾಗುತ್ತಿದ್ದವು. ಅತಿವಿಸ್ತೃತ ಸರೋವರವೂ ಆವಾಸಕ್ಕೆ ಮಧ್ಯಮಸ್ಥಳವಾಗಿಬಗೆಯಲ್ಪಡುತ್ತಿದ್ದಿತು. ಹಿಂದೂ ಶಾಸ್ತ್ರೀಯ ಗ್ರಂಥಗಳಲ್ಲಿ ಶೌಚಾಲಯದ ಮತ್ತು ಪಾಯಖಾನೆ ಬಳೆಯುವವನ ಅಥವಾ ಅವನ ಕಾರ್ಯದ ವರ್ಣನೆ ಇಲ್ಲ. ಇದರಿಂದ ನಮಗೆ ಎರಡು ಮಾತುಗಳು ಸ್ಪಷ್ಟವಾಗುತ್ತವೆ. ಮೊದಲನೆಯದಾಗಿ, ಮನುಷ್ಯನಿಂದ ಮನುಷ್ಯನು ಇಂತಹ ಘೃಣಿತ ಕಾರ್ಯವನ್ನು ಮಾಡಿಸುವುದು ಹಿಂದೂಸಮಾಜಕ್ಕೆ ಅಭೀಷ್ಟವಾಗಿರಲಿಲ್ಲ. ಎರಡನೆಯದಾಗಿ, ನಮ್ಮ ಸಮಾಜ ರಚನೆಯಲ್ಲಿ ಅದರ ಯಾವ ಆವಶ್ಯಕತೆಯೂ ಇರಲಿಲ್ಲ. ಗ್ರಾಮವಾಗಲಿ, ನಗರವಾಗಲಿ, ಕಸ ಜಲಾಶಯದಿಂದ ದೂರವಾಗಿದ್ದು ನಿತ್ಯಕರ್ಮಗಳಿಗಾಗಿ, ಮನೆಗಳಲ್ಲಿ ವ್ಯವಸ್ಥೆಮಾಡುವ ಆವಶ್ಯಕತೆ ಬೀಳುವಂತೆ ರಚಿಸಲ್ಪಡುತ್ತಿರಲಿಲ್ಲ. ಇಂದಿಗೂ ದಕ್ಷಿಣ ಭಾರತದ ಮಧ್ಯ, ಉದರಲ್ಲಿಯೂ ದಕ್ಷಿಣ ಪ್ರದೇಶದ ನಗರಗಳಲ್ಲಿಯೂ, ಹೆಚ್ಚಾಗಿ, ಪಟ್ಟಣ ಗ್ರಾಮಗಳಲ್ಲಿಯೂ ಶೌಚಾಲಯಗಳ ಆವಶ್ಯಕತೆ ಬಿದ್ದು, ರಚಿಸಲ್ಪಟ್ಟಿದ್ದೂ, ಅವುಗಳನ್ನು ಶುಚಿಮಾಡಲು ಮನುಷ್ಯರನ್ನು ಏರ್ಪಡಿಸಿಯೋಗಿಸಿದಂತೆ ಮನೆಗಳನ್ನು ಕಟ್ಟಿರುವುದು ಕಾಣಸಿಗುವುದು. ಒಂದು ಓಣಿಯ ಇಕ್ಕಡೆಗಳಲ್ಲಿಯ ಮನೆಗಳ ತಲಬಾಗಿಲುಗಳು ಅಭಿಮುಖವಾಗಿರುತ್ತವೆ. ಇದು ಜನರು ಓಡಾಡುವ ಮಾರ್ಗ. ಈ ಸಾಲಿನ ಮನೆಗಳ ಹಿತ್ತಲಿನ ಬಾಗಿಲುಗಳು ಅಭಿಮುಖವಾಗಿರುತ್ತವೆ. ಈ ಹಿತ್ತಲಬಾಗಿಲುಗಳ ನಡುವಿನ ಚಿಕ್ಕ ಓಣಿಯಲ್ಲಿ ದಂಡಿಗಳು ಓಡಾಡುತ್ತವೆ. ಅವುಗಳೆ ಅಲ್ಲಿಯ ಭಂಗಿಗಳು.

ಆಂದಿನ ಗ್ರಾಮದ ಸುತ್ತಲೂ ಒಂದುನೂರು ಧನುವಿನಷ್ಟಾದರೂ ಮತ್ತು ನಗರಗಳ ಸುತ್ತಲೂ ಮುನ್ನೂರು ಧನುವಿನಷ್ಟಾದರೂ ವಸತಿರಹಿತವಾಗಿರಬೇಕೆಂದು ಮನುಸ್ಮೃತಿಯಲ್ಲಿ ಸೂಕ್ಷ್ಮವಾದ ಆಜ್ಞೆಯಿದೆ. ನಗರದಲ್ಲಿ ಒಂದು ಬೀದಿಗೂ ಮತ್ತೊಂದು ಬೀದಿಗೂ ನಡುವೆ ಉಪವನಗಳ ವ್ಯವಸ್ಥೆ ಇದ್ದಿತು.

ಸತ್ಯಯುಗದ ಆಂತ್ಯದಲ್ಲಿ ನಗರಗ್ರಾಮಗಳಾಗಲು ಮೊದಲಿಟ್ಟಾಗಲೂ, ಮನುಷ್ಯರು ಅರಣ್ಯಸಂಸ್ಕೃತಿಯ ಪ್ರೇಮಿಗಳಾಗಿ ಇದ್ದರು. ಹೀಗಾಗಿ, ನಮ್ಮ ಸಮಾಜದ ಸಂಚಾಲಕರು ಸದಾ ವಾನನದೊಳಗೆ ಇದ್ದರು. ಆ ತಪೋಧನರ ವಿಸ್ತಾರ ಸೇವೆಯನ್ನು ಗೈಯುತ್ತ ಪ್ರತಿಯೊಬ್ಬ ಬಾಲಕನು ಜೀವನದ ಪಾಠವನ್ನು ಅರಣ್ಯದೊಳಗೆ ಕಲಿಯುತ್ತಿದ್ದನು. ಆದರೆ ಆರಂಭದಲ್ಲಾಪ ನಗರಗ್ರಾಮಗಳು ಬಹಳ ಸಾದಾ ಇದ್ದುವು—ಕಟ್ಟಿಗೆಯ ಗೋಡೆಗಳು ಮತ್ತು

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ ವಾಸ್ತವದಲ್ಲಿಯೆ ಸಾಹಿತ್ಯಿಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಅ. ೧೫೦ ಪುಟಗಳು. ಬೆಲೆ ೧-೪-೦

• 'ಜಯಂತಿ' ಕಾರ್ಯಾಲಯ, ಧಾರವಾಡ

ಹುಲ್ಲಿನ ಛಪ್ಪರಗಳು ಇದ್ದ ಮನೆಗಳಿದ್ದ ಪಟ್ಟಣಗಳಿದ್ದುವು. (ಖಾಟಲೀಪುತ್ರ) ಎರಡು, ನಾಲ್ಕು ಅರು, ಎಂಟು ಮತ್ತು ಹೆಚ್ಚು ಮಾಳಿಗೆಗಳ ಮನೆಗಳ (ಶಾಲಾ) ವರ್ಣನೆಗಳು ಪ್ರಾಚೀನತಮ ವರ್ಣನೆಗಳಲ್ಲಿನವೆ. ಅಸುರರ ಕಲ್ಲಿನ ಕಟ್ಟಡಗಳನ್ನು ಕೆಡಹುವುದು ರಾಜನ ಕರ್ತವ್ಯವೆಂದು ಮನು ಆಜ್ಞೆ ಇತ್ತಿರುವನು. ಇದರಿಂದ ಶಿಲಾಸೌಧಗಳ ನಿರ್ಮಾಣ ಜ್ಞಾನವೇ ಜನರಿಗಿರಲಿಲ್ಲವೆಂದೇನಾ ಅರ್ಥವಾಗುವುದಿಲ್ಲ. ಅಗ್ನಿಯಲ್ಲಿ ಪಕ್ವವಾದ (ಸುಟ್ಟ) ಇಟ್ಟಿಗೆಗಳಿಂದ (ಇಷ್ಟಕಾ) ಯಜ್ಞಕುಂಡಗಳನ್ನು ಅನಾದಿಕಾಲದಿಂದಲೂ ಸಿದ್ಧಗೊಳಿಸುತ್ತಿರುವರು. ಪಾಷಾಣ ಮತ್ತು ಆಯಾಸ (ಲೋಹನಿರ್ಮಿತ ಭವನಗಳುಳ್ಳ) ಪುರಗಳ ವರ್ಣನೆಯೂ ಇದೆ. ವಿಮಾನಗಳ ತಯಾರಿಕೆಯೂ ಇದ್ದಿತು. ಆದರೆ, ಈ ಬಾಹ್ಯಭೋಗವೆಲ್ಲ ಅಭೀಷ್ಟವಾಗಿರಲಿಲ್ಲ. ಸೀದಾ ಸಾದಾ ಛಪ್ಪರಗಳ ಮನೆಗಳೇ ಆದರ್ಶ ಗೃಹಗಳಾಗಿ ಪರಿಗಣಿತವಾಗಿದ್ದುವು.

ತ್ರೇತೆಯ ಪ್ರಾರಂಭದಲ್ಲಿಯೇ ದೊಡ್ಡ ದೊಡ್ಡ ವಿಶಾಲಭವನಗಳ ವರ್ಣನೆ ಸಿಗುತ್ತದೆ. ಭಾರತದಲ್ಲಿ ರತ್ನ ಸ್ಫಟಿಕ ಮುಂತಾದುವುಗಳು ಬಹುಮೂಲ್ಯವಾದವುಗಳೆಂದು ಅವಶ್ಯವಾಗಿ ಪರಿಗಣಿಸಲ್ಪಡುತ್ತಿದ್ದುವು ನಿಜ. ಆದರೆ ಇಂದು ಳೆದುಕೊಂಡಿರುವಷ್ಟು ಅವುಗಳ ಬಹುಮೂಲ್ಯತೆ ಅಂದು ಇದ್ದಿರಲಿಲ್ಲ. ಭವನಗಳಲ್ಲಿ ಸ್ಫಟಿಕ, ಮಣಿ, ಸ್ವರ್ಣಗಳು — ಎಲ್ಲವುಗಳ ಉಪಯೋಗ ಮಾಡುತ್ತಿದ್ದರು—ಬಾಹುಳ್ಯದಲ್ಲಿ ಉಪಯೋಗಿಸಲ್ಪಡುತ್ತಿದ್ದುವು. ಭವನಗಳು ಅತ್ಯಂತ ಉನ್ನತವಾಗಿರುತ್ತಿದ್ದುವು ಮತ್ತು ಅವುಗಳ ಆಕಾರವು ಮೇಲೆ ಗೋಪುರದಿಂದ ಕೂಡಿರುತ್ತಿದ್ದುವು. ಗೋಪುರಗಳ ಮೇಲೆ ಸ್ವರ್ಣಕಲಶಗಳು ಮತ್ತು ಪತಾಕೆಗಳೂ ಶೋಭಿಸುತ್ತಿದ್ದುವು. ಗೃಹದ್ವಾರದ ಇಕ್ಕಡೆಗಳಲ್ಲಿ ಬಾಳೆಯ ಗಿಡ ಹಾಕಿರುತ್ತಿದ್ದರು. ಇದು ಮಂಗಳಸೂಚಕಚಿಹ್ನೆಯಾಗಿದ್ದಿತು. ದ್ವಾರವನ್ನು ನಿತ್ಯವೂ ತೋರಣದಿಂದ ಸಜ್ಜುಗೊಳಿಸುತ್ತಿದ್ದರು.

ವರ್ತಮಾನಸಭ್ಯತೆಯು ಝಗಝಗಾಮಾರುತದ ತಾಡನದಿಂದ ತಪ್ಪಿಸಿಕೊಂಡು ಉಳುಕೊಂಡಿರುವ ಪ್ರಾಚೀನ ಭವನಗಳಲ್ಲಿ ಹಿಂದುಗಳ ಎರಡು ಚಿಹ್ನಗಳು ಸಿಗುತ್ತವೆ. ಭವನದ ಮಧ್ಯದಲ್ಲೊಂದು ಪ್ರಾಂಗಣ, ಮತ್ತದರ ನಡುವೆ ತುಳಸಿಯ ಕಟ್ಟೆಯ ಮೇಲೊಂದು ಬೃಂದಾವನ, ಮತ್ತೆ ಭವನದಲ್ಲಿ ಗುಡಿಯಂತೆ ಕಟ್ಟಲ್ಪಟ್ಟಿರುವ ಒಂದು ಪೂಜಾಮಂದಿರ. ಪ್ರಾಚೀನ ಕಾಲದಿಂದಲೂ ಈ ಪೂಜಾಗೃಹವು ನಡೆದೇ ಬಂದಿದೆ. ದ್ವಾಪರಾಂತ್ಯದ ವರೆಗೂ ದ್ವಿಜಾತೀಯರು ಯಜ್ಞೋಪವೀತಸಂಸ್ಕಾರವನ್ನು ಮೊದಲ್ಗೊಂಡು ಸಂನ್ಯಾಸಿಯಾಗುವ ವರೆಗೂ ತಮ್ಮ ಪ್ರಾಜಾಪತ್ಯಾಗ್ನಿಯ ರಕ್ಷಣೆಯನ್ನು ಮಾಡಿಕೊಂಡಿರುತ್ತಿದ್ದರು. ಅದರಲ್ಲಿ ಅವರು ನಿತ್ಯ ಹವನವನ್ನು ಗೈಯುತ್ತಿದ್ದರು. ಪ್ರತಿಯೊಬ್ಬ ವ್ಯಕ್ತಿಯ ಹತ್ತಿರ ಹವನಕುಂಡವಿರುತ್ತಿದ್ದಿತು ಒಂದು ವೇಳೆ ಆತನು ಮನೆಬಿಟ್ಟು ಎಲ್ಲಿಗಾದರೂ ಹೋಗಿ ಹವನಕಾಲಕ್ಕೆ ಸರಿಯಾಗಿ ಮರಳಿ ಬರಲು ಸಾಧ್ಯವಾಗುವಂತಿರದಿದ್ದರೆ, ಹವನಕುಂಡವನ್ನು ಜೊತೆಗೇನೇ ಒಯ್ಯುತ್ತಿದ್ದನು. ಯಾವಾವನೂ ಸನ್ಯಾಸವ್ಯಕ್ತಿಯು ಅಗಮಿಸಿದರೆ, ಮನೆಯಾತನು ತನ್ನ ಅಗ್ನಿಯನ್ನು ಕೈಕೊಂಡು ನಿಂತು ಅಗಂತುಕನ ಆದರ ಮಾಡುತ್ತಿದ್ದನು. ಈ ಅಗ್ನಿಯ ರಕ್ಷಣೆಯನ್ನು ಅತ್ಯಂತ ಸಾವಧಾನದಿಂದ ಮಾಡುತ್ತಿದ್ದರು. ಅದು ಅರಿತೆಂದರೆ ಅತ್ಯಂತ ಅಪಶಕುನವಾಗಿ ಎಣಿಸುತ್ತಿದ್ದರು.

ನಗರಗಳ ಸುತ್ತಲೂ ಅಗಳ್ತೆಗಳಿರುವುದರೊಡನೆ ಪುರಾತನ ಪರಿಪಾಟಿಯಾಗಿದೆ. ಅಗಳ್ತೆಯನ್ನು ದಾಟಿಹೊಡನೆ ಪರಿಪೆಯಿರುತ್ತದೆ. ಮಾರ್ಗಗಳ ಮುಖದಲ್ಲಿ ದ್ವಾರಗಳಿರುತ್ತಿದ್ದುವು. ಭವನಗಳ ನಿರ್ಮಾಣವೂ ನಗರೆಗಳ ನಿರ್ಮಾಣದಂತೆಯಾಗುತ್ತಿದ್ದಿತು. ಮುಖ್ಯ ದ್ವಾರವು ಸಿಂಹದ್ವಾರವೆನಿಕೊಳ್ಳುತ್ತಿದ್ದಿತು. ಒಳಗೆ ಸುತ್ತುಗಟ್ಟಿರುವ ಪ್ರಕೋಷ್ಠಗಳಿರುತ್ತಿದ್ದವು. ಬಂದವರು ಒಂದರಿಂದ ಮತ್ತೊಂದರಂತೆ ದ್ವಾರಗಳನ್ನೆಲ್ಲ ದಾಟಿದ ಮೇಲೆ, ಮಧ್ಯದಲ್ಲಿರುವ ಮುಖ್ಯಸ್ಥಾನಕ್ಕೆ ತಲುಪಿಸಲ್ಪಡುತ್ತಿದ್ದರು.

ಪ್ರತಿಯೊಂದು ಭವನವೂ ಸೂಕ್ಷ್ಮಕಲಾಕೃತಿಗಳಿಂದ ಸುಸಜ್ಜಿತವಾಗಿರುತ್ತಿದ್ದಿತು. ಗೋಡೆಗಳು ಮೂರ್ತಿಗಳಿಂದಲೂ, ಚಿತ್ರಗಳಿಂದಲೂ ಅಲಂಕರಿಸಲ್ಪಡುತ್ತಿದ್ದುವು. ಗೃಹದ್ವಾರದ ಸಮೀಪದಲ್ಲಿ (ಹೊಸ್ತಿಲು ಮತ್ತು ಅಂಗಳದಲ್ಲಿ) ನಿತ್ಯ ಬಣ್ಣಬಣ್ಣದ ಅಕ್ಕಿ ಚೂರ್ಣ, ಅರಿಸಿಣ, ಕುಂಕುಮಾದಿಗಳಿಂದ ರಂಗವಲ್ಲಿ ಹಾಕಿರುತ್ತಿದ್ದರು. ಮಹಾರಾಷ್ಟ್ರದಲ್ಲಿ ಈ ಪದ್ಧತಿಯು ಇಂದಿಗೂ ಇದೆ. (ಅದೇಕೆ ? ದಕ್ಷಿಣದ ಕನ್ನಡ, ಆಂಧ್ರ, ತಮಿಳು ಮುಂತಾದಪ್ರದೇಶಗಳಲ್ಲಿಯೂ ಇದೆ). ಹಿಂದುಗಳ ಸಮಾಜದಲ್ಲಿ ಉಲ್ಲಾಸ ಮತ್ತು ಐಶ್ವರ್ಯ—ಈ ಎರಡೂ ತುಂಬಿದ್ದುವು; ಆದರೆ ಇವು ಸಾತ್ವಿಕತೆಯಿಂದ ನಿಯಂತ್ರಿತವಾಗಿದ್ದುವು. ನಗರಗಳಲ್ಲಿ ಪಕ್ಕಾ ರಾಜಮಾರ್ಗಗಳಿದ್ದವು ನಿತ್ಯವೂ ಕ್ರಮವಾಗಿ ತಪ್ಪದೆ ತೊಳೆಯಲ್ಪಡುತ್ತಿದ್ದುವು. (ಪ್ರೋಕ್ಷಿಸಲ್ಪಡುತ್ತಿದ್ದುವು). ಅದು ಸಾಧಾರಣ ಜಲದಿಂದಲ್ಲ—ಸುಗಂಧಿತ ಜಲದಿಂದ. ಸ್ಥಾನಸ್ಥಾನಗಳಲ್ಲಿ ಉಪವನ ಮತ್ತು ಕ್ರೀಡೋದ್ಯಾನ ಮತ್ತು ಕ್ರೀಡಾಪರ್ವತಗಳು ಇರುತ್ತಿದ್ದುವು. ಕೃತ್ರಿಮ ಝರಿಗಳು ಆ ಪರ್ವತಗಳ ಮೇಲಿಂದ ಸರಿದು ಬರುತ್ತಿದ್ದುವು. ಮನೆಗಳಲ್ಲಿ ನಿರಂತರವೂ ಸುಗಂಧಿತ ಧೂಪವು ಉರಿಸಲ್ಪಡುತ್ತಿದ್ದಿತು. ವಾತಾಯನಗಳಿಂದ ಈ ಧೂಪವು ಹೊರಗೆ ಹೋಗುತ್ತಿದ್ದಿತು. ರಾತ್ರಿಗಳಲ್ಲಿ ರಾಜವರ್ತ್ಮವು ಪೂರ್ಣತಃ ಪ್ರಕಾಶಿತವಾಗಿರುತ್ತಿದ್ದಿತು. ಹಗಲು ಮಾರ್ಗವೆಲ್ಲ ವಸ್ತ್ರಾಚ್ಛಾದಿತವಾಗಿರುತ್ತಿದ್ದಿತು. ಸ್ನಾನ ಸಂಧ್ಯಾದಿಗಳನ್ನು ಜಲಾಶಯಗಳ ತಟದಲ್ಲಿ ಮಾಡುತ್ತಿದ್ದರು, ಮತ್ತು ಅದಕ್ಕೆಂದು ಪಕ್ಕಾಪ್ಪಳಗಳು (ಘಟ್ಟಗಳು) ನಿರ್ಮಿತವಾಗಿರುತ್ತಿದ್ದುವು.

ವೇಷ—ಭೂಷಾ

ಹಿಂದೂ ಸಮಾಜದಲ್ಲಿ ಬ್ರಹ್ಮಚಾರಿ ಮತ್ತು ವಾನಪ್ರಸ್ಥನಿಗೆ ಕೂದಲು ತೆಗೆಸುವುದಕ್ಕಿಲ್ಲ, ಇವರಿರ್ವರಿಗೂ ಮೂಂಜ ಮೇಖಲಾ, ಜವಾ-ಯಜ್ಞೋಪವೀತ, ವಲ್ಕಲವಸ್ತ್ರ, ಮೃಗಚರ್ಮ ಇವು ವಸ್ತ್ರಗಳು. ಬ್ರಹ್ಮಚಾರಿಯು ಕೈಯೊಳು ಪಲಾಶದಂಡವನ್ನು ಹಿಡಿದಿರುತ್ತಾನೆ. ತಾಳವೃಂತದ ಛತ್ರವೂ, ಖಾದರಕ್ಷೆಯೂ, ಬಹ್ಮಚಾರಿಯನ್ನು ವಾನಪ್ರಸ್ಥಿಯಿಂದ ಬೇರೆಯಾಗಿಮಾಡುತ್ತವೆ. ಸಂನ್ಯಾಸಿಯು ಮುಂಡಿತನಾಗಿರಬೇಕು ಅಥವಾ ಜಟಾಧಾರಿಯಾಗಿರಬೇಕೆಂದು ನಿರ್ದೇಶವಿದೆ. ಸಂನ್ಯಾಸಿಯು ವಲ್ಕಲ ವಸ್ತ್ರಗಳನ್ನಾಗಲೀ, ಮುಂಜಿಷ್ಠದಲ್ಲಿ ಅದ್ದಿದ ಅಥವ ಗೈರಿಕದ ವಸ್ತ್ರಗಳನ್ನಾಗಲೀ ಧರಿಸಬೇಕು ಸಲಿಂಗ ಸಂನ್ಯಾಸಿಯು ದಂಡವನ್ನು ಧಾರಣಮಾಡುವನು. ಅಲಿಂಗ ಸಂನ್ಯಾಸಿಗೆ (ಅವಧೂತ) ಯಾವ ವೇಷವೂ ನಿಶ್ಚಿತವಾಗಿಲ್ಲ.

ಗೃಹಸ್ಥರಲ್ಲಿ ಮಸ್ತಕದಮೇಲೆ ಪೂರ್ಣವಾಗಿ ಕೂದಲನ್ನು ಉಳಿಸಿಕೊಳ್ಳುವ ಅಥವ ಶಿಖೆಯನ್ನಿಟ್ಟುಕೊಂಡು ಉಳಿದುದನ್ನು ಬೋಳಿಸುವ ಪದ್ಧತಿ ಇದ್ದಿತು. ಇಂದಿನಂತೆ ಪುರುಷನೆಂದಿಗೂ ಕೂದಲನ್ನು ಅಡ್ಡಾದಿಡ್ಡಿಯಾಗಿ ಕತ್ತರಿಸಿಕೊಳ್ಳುತ್ತಿರಲಿಲ್ಲ ಇನ್ನು ಸ್ತ್ರೀಯರ ಕೇಶಖಂಡನದ ಮಾತೇ ಅಮಂಗಲವಾಗಿ ಭಾವಿಸಲ್ಪಡುತ್ತಿದ್ದಿತ ಹೆಚ್ಚಾಗಿ ಬ್ರಾಹ್ಮಣರು ಜಟಾಧಾರಿಗಳಾಗಿದ್ದರು. ಮತ್ತು ರಾಜಕುಲದವರೂ ಕೂದಲನ್ನು ಕತ್ತರಿಸುತ್ತಿರಲಿಲ್ಲ. ಬ್ರಾಹ್ಮಣರು ವಲ್ಕಲವನ್ನು ಧರಿಸುತ್ತಿದ್ದರು ಮತ್ತು ಉತ್ತರೀಯದ ಸ್ಥಾನದಲ್ಲಿ ವಲ್ಕಲವನ್ನೊ ಅಥವಾ ಮೃಗಚರ್ಮವನ್ನೊ ಉಪಯೋಗಿಸುತ್ತಿದ್ದರು. ಅನ್ಯಗೃಹಸ್ಥರೂ ಪ್ರಾಯಶಃ ಉತ್ತರೀಯವನ್ನೇ ಧರಿಸುತ್ತಿದ್ದರು. ಕಂಚುಕವಿರುತ್ತದೆ. ಧೋತರ ಉತ್ತರೀಯ ತಥಾ ಮಸ್ತಕದಮೇಲೆ ಮುಸುಕು ಪಗಡಿ ಅಥವಾ ರುಮಾಲು ಇವೇ ಹಿಂದೂ ವೇಷವಿದ್ದಿತು. ಹೊಲಿಗೆಯ ಕಂಚುಕಿಯನ್ನು (ಕುರ್ತಾವನ್ನು) ನಾಟಕದಲ್ಲಿ ತೊಡುತ್ತಿದ್ದ ಕಾರಣದಿಂದ, ಅದರ ಒಂದು ಪಾತ್ರದ ಹೆಸರೇ ಕಂಚುಕಿಯೆಂದು ಬಿದ್ದಿದ್ದಿತು ಇಂದು ಹೇಗೆ ಪಹರೇದಾರರ ಮತ್ತು ಗೃಹಸೇವಕರ ಒಂದು ವಿಶಿಷ್ಟ ತರಹದ ವಸ್ತ್ರವಿರುತ್ತದೆಯೋ ಹಾಗೆಯೇ ಕಂಚುಕವು ಅಂದು ಸೇವಕರ ವಸ್ತ್ರವಾಗಿದ್ದಿತು ಮತ್ತು ಅದು ಹೊಲಿಯಲ್ಪಡುತ್ತಿದ್ದಿತು ಯುದ್ಧದಲ್ಲಿ ಸ್ವರ್ಣಮಯವಾದ ಅಥವಾ ಲೋಹದಿಂದ ತಯಾರಿಸಲ್ಪಟ್ಟ ಕವಚವನ್ನು ಧರಿಸುತ್ತಿದ್ದರು. ಆದರೆ ಭಾರತದಲ್ಲಿಯ ವರ್ಣನೆಗಳಿಂದ ನಮಗೆ ತಿಳಿದುಬರುವುದೇನೆಂದರೆ—ಈ ಕವಚಗಳನ್ನು ಕುರ್ತಾ ಅಥವಾ ಕೋಟುಗಳನ್ನು ಧರಿಸುವಂ

ಧರಿಸುತ್ತಿದ್ದಿಲ್ಲವೆಂದು. ಆಚಾರ್ಯರಾದ ದ್ರೋಣನು ಒಂದು ಸಲ ಯುಧಿಷ್ಠಿರನಿಗೆ ಕವಚವನ್ನು ಒಂದು ವಿಶೇಷ ರೀತಿಯಲ್ಲಿ ತೊಡಿಸಿದ್ದರು. ಕಟ್ಟುವ ಈ ಶೈಲಿಯು ಕವಚವನ್ನು ಅಭೇದ್ಯವನ್ನಾಗಿ ಮಾಡಿದ್ದಿತು. ಈ ವರ್ಣನೆಯು ನನಗೆ ಒಂದು ಮಾತನ್ನು ತಿಳಿಸುತ್ತದೆ ಹೇಗೆ ಕನ್ನಡಿಗರಲ್ಲಿಯೂ, ವೈಷ್ಣವ ಸಾಧುಗಳಲ್ಲಿಯೂ "ಗಾಂತೀ" (ಉತ್ತರೀಯ ಕಟ್ಟುವ ಅನೇಕ ಪದ್ಧತಿಗಳಿವೆಯೋ ಹಾಗೆಯೇ ಕವಚಗಳು ಕಟ್ಟುವುದಕ್ಕೆ ಯೋಗ್ಯವಾದವಿಮಿತ್ತಿದ್ದವೆಂದೂ ಮತ್ತು ಭಿನ್ನ ಭಿನ್ನ ರೀತಿಗಳಲ್ಲಿ ಕಟ್ಟಲ್ಪಡುತ್ತಿದ್ದವೆಂದೂ ತಿಳಿದು ಬರುತ್ತದೆ. ಹೊಲೆದ ವಸ್ತ್ರಗಳು ಅವಶ್ಯವಾಗಿ ಧರಿಸಲ್ಪಡುತ್ತಿರ ಬಹುದು; ಏಕೆಂದರೆ ಯಜ್ಞಾದಿ ಪವಿತ್ರಕರ್ಮಗಳಲ್ಲಿ ಹೊಲಿಗೆ ಯಿಲ್ಲದ ವಸ್ತ್ರಗಳನ್ನು ಧರಿಸುವ ವಿಧೇಯವಿದೆ. ಸ್ತ್ರೀಯರು ಸೀರೆ ಗಳನ್ನುಟ್ಟು ಕಂಚುಕವನ್ನು ತೊಡುತ್ತಿದ್ದರು. ಇದಾದರೂ ಹೊಲಿಗೆಯಿಲ್ಲದ ವಸ್ತ್ರವೇ ಆಗಿರುತ್ತಿತ್ತು; ಮತ್ತು ವೇಲಿನಂತ ಉತ್ತರೀಯವನ್ನು ಹಾಕಿಕೊಳ್ಳುತ್ತಿದ್ದರು. ಸ್ತ್ರೀಯರ ವೇಷಭೂಷಣ ಗಳು ಇಂದಿಗೂ ಬಹಳ ಹಳ್ಳಿಗಳಲ್ಲಿ ಹೀಗೆಯೇ. ಕೇವಲ ಕಂಚುಕ ವನ್ನು ಹೊರಿಸುವ ಪದ್ಧತಿ (ಪದ್ಧತಿ, ರೂಢಿ) ಬಿದ್ದಿದೆಯಷ್ಟೆ ? ಸ್ತ್ರೀ ಪುರುಷರಿರ್ವರೂ ಬಣ್ಣಬಣ್ಣದ ವಸ್ತ್ರಗಳನ್ನು ಧರಿಸುತ್ತಿದ್ದರು. ಮಾನ್ಯವಸ್ತ್ರಗಳು ಶ್ವೇತವಾಗಿರುತ್ತಿದ್ದುವು. ಅಧಿಕಾಂಶದಲ್ಲಿ ರೇಷ್ಮೆಯ ವಸ್ತ್ರವನ್ನು ಉಪಯೋಗಕ್ಕೆ ತರುತ್ತಿದ್ದರೂ, ಉಣ್ಣೆಯು ಮತ್ತು ದಾರದ ವಸ್ತ್ರಗಳ ವರ್ಣನೆಯೂ ಪರ್ಯಾಪ್ತವಾಗಿ ಸಿಗುತ್ತದೆ.

ವಿಭೂಷಣವಿನ್ಯಾಸವು ಪದ್ಧತಿಯು ಜೀವ್ಯವಾಗಿದ್ದಿತು ಮತ್ತು ಸ್ತ್ರೀಪುರುಷರಿರ್ವರೂ ವಿಭೂಷಣಗಳನ್ನು ಧರಿಸುತ್ತಿದ್ದರು. ಆದರೆ ವಿಭೂಷಣವಿನ ಶೃಂಗಾರಗಳ ಧಾರಣೆಯನ್ನು ಕೇವಲ ಗೃಹಸ್ಥರು ಮಾಡಿಕೊಳ್ಳುತ್ತಿದ್ದರೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಇದರಲ್ಲಿ ಬ್ರಾಹ್ಮಣರು ಶೃಂಗಾರತ್ಯಾಗಿಗಳಿದ್ದರು. ಪೂರ್ಣ ಸಮಾಜದ ಒಂದು ಅತ್ಯಲ್ಪ ಭಾಗವೇ ಶೃಂಗಾರದ ಪ್ರವೃತ್ತಿಯನ್ನು ಧರಿಸಲು ಸ್ವತಂತ್ರವಾಗಿದ್ದಿತು. ಇದರ ಫಲವಾಗಿ, ಸಾಮಾನ್ಯವು ವಿಷಯವಾಗಿ, ವಿಭೂಷಣವು ಪ್ರಶ್ನೆಯೇ ಇದ್ದಿಲ್ಲ. ಮುಕುಟ, ಕುಂಡಲ, ಹಾರ, ಕಂಠಾಭರಣ, ಅಂಗದ, ಕಂಕಣ, ಉದರ, ಕಿಂಕಿಣೀ, ಚರಣಾ ಭರಣ ಮತ್ತು ನಾಶಿಕಾಭರಣ (ಇವುಗಳಲ್ಲಿ ನಾಶಿಕಾಭರಣವನ್ನು ಮಾತ್ರ ಪುರುಷನು ಉಪಯೋಗಿಸುತ್ತಿರಲಿಲ್ಲ; ಮತ್ತು ಬಾಲಕರು ಯಾವಾಗಲಾದರೂ ಒಮ್ಮೆಮ್ಮೆ ಉಪಯೋಗಿಸುತ್ತಲಿರ ಇದ್ದರು.) ಇದನ್ನು ಬಿಟ್ಟು ಉಳಿದೆಲ್ಲವುಗಳನ್ನು ಪುರುಷರೂ ಧರಿಸುತ್ತಿದ್ದರು. ಸ್ತ್ರೀ-ಪುರುಷರ ವಿಭೂಷಣಗಳಲ್ಲಿ ವಿಶೇಷವಿಲ್ಲದಿರಲಿಕ್ಕೆ ಕಾರಣವಾದ ವರ್ಣನೆಯು ಸೂಕ್ಷ್ಮ ವಿವೇಚನೆಯಿಂದ ತಿಳಿದು ಬರುತ್ತದೆ. ರತ್ನಗಳ ಮತ್ತು ಸ್ವರ್ಣಾದ ಪ್ರಭಾವವು ಮನುಷ್ಯನ ದೇಹದ ಮೇಲೆ ಅನುಕೂಲ ವಿಧವಾ ಪ್ರತಿಕೂಲವಾಗಿರುತ್ತದೆಯೆಂಬುವ ಸ್ವರ್ಣಾದ ಪ್ರಭಾವವು ಸ್ವಾಸ್ಥ್ಯಕ್ಕಾಗಿ ಲಾಭದಾಯಕವೆಂದೂ ಇಂದಿನ ವಿಜ್ಞಾನಿಗಳೂ ಸ್ವೀಕರಿಸಿರುತ್ತಾರೆ. ಸ್ವರ್ಣ ಮತ್ತು ರತ್ನಾಭರಣಗಳನ್ನು ಧರಿಸುವುದು, ಅವುಗಳ ವಿಶಿಷ್ಟವಾದ ಲಾಭಾನ್ವಿತರಾಗಲಿಚ್ಛಿಸುವುದು ಗೃಹಸ್ಥರಿಗೆ ಸ್ವಾಭಾವಿಕವಿದೆ. ಇದು ಮರ್ಮವು ಮತ್ತು ವಿಶೇಷವಾಗಿ ಅವ ಮನುಷ್ಯನು ತನ್ನ ಶರೀರವನ್ನು ವಸ್ತ್ರದಿಂದ ಮುಚ್ಚಿಕೊಳ್ಳಲು ಇಚ್ಛಿಸುವನು. ಅಶಕ್ತಿ ಮತ್ತು ದಾರಿದ್ರ್ಯಗಳಿಂದಾಗಿ ಆಭರಣ ಧಾರಣೆಯು ಅಶಕ್ಯವೆಂದೂ, ನಿರಾಭರಣವಾಗಿರುವುದೇ ಶಕ್ಯವೆಂದೂ ತಿಳಿತಳಿಕೆಯ ರೂಪ ಬದಲಾಗಿದೆ; ಆದರೂ ಅನುಕೂಲವಾದರೆ ಅವನ ವಿವಿಧ ಲಾಭವನ್ನು ಬಿಡಲಾರನು. ಕೃಶ ಶರೀರದ ಆಭರಣಗಳಿಂದ ಭೂಷಿತವಾವನೆ, ಎಷ್ಟು ಭವ್ಯವಾಗಿರುತ್ತೆಂಬುದು ಕಲ್ಪನಾತೀತವಲ್ಲ.

ವಸ್ತ್ರ ಮತ್ತು ವಿಭೂಷಣಗಳಲ್ಲದೆ ತಾತ್ಕಾಲಿಕವಾದ ಶೃಂಗಾರ, ಸುಗಂಧಿತದ್ರವ್ಯ ಮತ್ತು ಪುಷ್ಪಶೃಂಗಾರ ಇವುಗಳಿದ್ದಿ ಕೃಷ್ಣನಿಗೆ ಪ್ರಿಯವಾಗಿದ್ದುವು. ಶರೀರದ ಮೇಲೆ ಅಂಗರಾಗದ ಬಳ್ಳಿಗಳನ್ನು ಬಿಡಿಸುವುದು, ಪುಷ್ಪಾಭರಣ ರಚನೆ, ಕೇಶವಿನ್ಯಾಸ— ಇತ್ಯಾದಿ ಕಲೆಗಳೂ ಅಂದಿನವು. ಪೋಷಕ ಶೃಂಗಾರ ಮತ್ತು ಚಮತ್ಕೃತಿಯ ಕಲೆಗಳ ವಿವರಣೆಯಿಂದ ಅತ್ಯಂತ ಪ್ರಾಚೀನವಾದ ವೈಭವ ಮತ್ತು ಅದರ ಕಲಾತ್ಮಕ ರೂಪಗಳ ಉತ್ತಮ ಪರಿಚಯವು ದೊರೆಯುತ್ತದೆ.

ಶಿವರಾತ್ರಿ*

[ಚಿತ್ರ ಕಾಲ್ಪನಿಕ ಸಂಕಾಂತ]

ಲೇ. ಜಿ. ಆರ್. ಸಾಂಬಶಿವರ್

ಪಾತ್ರಗಳು

ಶೇಷಂಭಟ್ಟ — ನಡುಹರಿಯುವ ಪೂಜಾರಿ
ರಾಮುಭಟ್ಟ — ವೃದ್ಧ ಪುರೋಹಿತ
ಸತ್ಯಭಾಮಾ — ರಾಮುಭಟ್ಟರ ಸೊಸೆ
ವೆಂಕಣ್ಣ ದೀಕ್ಷಿತ— ವೃದ್ಧ ಪುರೋಹಿತ
ಭೈರಾಗಿ —

[ಗೋಕರ್ಣದ ಕೋಟಿತೀರ್ಥದ ಸುತ್ತಿನ ಒಂದು ಓಣಿಯಲ್ಲಿ ಪುರೋಹಿತ ರಾಮುಭಟ್ಟರ ಮನೆ; ಬೇಳೆ ಸಂಜೆಯ ಏಳು ಗಂಟೆಯ ಇತ್ಯಾದಿ. ಊರಿಗೆ ಬಾಗಿಲಾಗಿರುವ ಕಿರಿದಾದ ಹೊರಜಗುಲಿಯಲ್ಲಿ, ಚಾಪೆಯ ಮೇಲೆ, ಪುಟ್ಟ ಕಂಬತ್ತಿನಲ್ಲಿ ಎಲೆ ಅಡಿಕೆ ಜಜ್ಜುತ್ತಾ, ರಾಮುಭಟ್ಟರು ಕೂತಿದ್ದಾರೆ. ಶೇಷಂಭಟ್ಟರ ಪ್ರವೇಶ.]

ಶೇಷಂ :— ರಾಮಜ್ಜಾ ! ರಾಮಜ್ಜಾ ! ವರ್ಷಕ್ಕೊಮ್ಮೆ ಬರೋ ಶಿವರಾತ್ರಿ ಬಂದೇಬಂತಲ್ಲಾ ! ನಿಮ್ಮನ್ನೇಲೇನು ಗಡಿಬಿಡಿ, ಗದ್ದಲ ಒಂದೂ ಕಾಣೋದಿಲ್ವಲ್ಲಾ !

ರಾಮು :— ಶೇಷಂಭಟ್ಟಾ ? ಬಾ, ಮಾರಾಯ, ಕೂತ್ಕೋ ಹೀಗೆ. ಈ ಶಿವರಾತ್ರಿ ಹಬ್ಬ ನಮಗೆ ಮದುಮಗ ಇಲ್ಲದ ಮದ್ವೆ ಹಾಗಾಗಿದೆ. ಮಾರಾಯಾ ! ಯಜಮಾನನೇ ಇಲ್ಲಮೇಲೆ, ಗದ್ದಲ ಹ್ಯಾಗ್ಬರಬೇಕ್ ಹೇಳು ?

ಶೇಷ :— ರಾಮಜ್ಜಾ, ಹಾಂಗಾದ್ರೆ, ನಿಮ್ಮನೆ ಮಾಣಿ, ಶಿವ ಭಟ್ಟ, ಇನ್ನೂ ಬಂದಿಲ್ಲಾಂತಾಯ್ತು ! ಈಗೊಂದು ತಿಂಗಳ ಹಿಂದೂ, ಹೀದೂವರೆ ತಿಂಗಳ ಹಿಂದೋ ಏನೋ, ಜವಳಿ ಅಂಗಡಿ ವೆಂಕಟೇಶ ಪೈ ಗಳಿಗೆ ಅದವಾನಿಯಲ್ಲಿ ಸಿಕ್ಕಿದ್ನಂತೆ, ಅವ.

ರಾಮು :— ಅಂ ! ನನಗೆ ಹೇಳ್ಲೇ ಇಲ್ವಲ್ಲಾ ಆ ವೆಂಕಟೇಶ ಪೈ ! ಮಾನೆ, ಮನೆಬಿಟ್ಟಿದ್ದೀಗಿ, ಹನ್ನೊಂದು ತಿಂಗ್ಳಾಯ್ತು ! ಹೋಗುವಾಗ ಅತನ ಹೆಂಡ್ತಿ ಸತ್ಯಭಾನಿ, ಕುಂಬಿನ ಬಳುವಿ ಬಸಾಗಿನ್ನೂ ಅವಳ ಕೂಸೀಗ ಚಿಂವಿ ಕುಂಬಾ ಅಂಬೆಗಾಲಿಕ್ಕಿ ಪರದಾಡ್ತಾ ಇದೆ ಈ ಬಾಣಂತನಾ ಮಾಡ್ಬೇಕಾದ್ರೇ, ಸಾಕ್ಬೇಕಾಗಿ ಹೋಯ್ತು ! ಇದ್ದ ಚೂರುಪಾರು ನಗಾ ಎಲ್ಲಾ ದೀಡಿಟ್ಟಾಯ್ತು. ಮಾಣಂಗೆ ನಮ್ಮೀ ಸ್ಥಿತಿಯೆಲ್ಲಾ ಗೊತ್ತಿಲ್ದೇ ಇಲ್ಲ. ಒಂದು ಪತ್ರಾ ಸಹಾ ಹಾಕ್ಲಿಲ್ಲ ಮಾರಾಯ ! ಏನಂತ ತೀರಿ ನಾನು ?

ಶೇಷ :— ರಾಮಜ್ಜಾ, ಶಿವಭಟ್ಟ ಪತ್ರಾ ಹಾಕ್ದಿದ್ದು ದೊಡ್ಡ ತಪ್ಪೇನೋ ಹೌದನ್ನು ! ತುಸು ಹಣಾನಾದ್ರೂ ಕಳ್ಸಬೇಕಾಗಿತ್ತು. ಅಂವ ಹಾಗೆಲ್ಲಾ ಬೇಜವಾಬ್ದಾರೀ ಪೋಲಿಯಲ್ಲ. ಹೀಗ್ಯಾಕಾಯ್ತೋ ಏನೋ !

ರಾಮು :— (ಬಾಗಿಲಿಂದ ಒಳಗೆ ಇಣಕಿ ನೋಡಿ) ಏ ಸತ್ಯ ಭಾಮೆ, ಸತ್ಯಭಾಮೇ ನೋಡ, ಅಲ್ನೋಡ್, ರಾಮಜ್ಜಾ, ಆ ಕೂಸು ನೋಡ್, ನೋಡ್, ಕೂಸು ಲಾಟನ್ ಹಿಡೀಲಿಕ್ಕೊಳ್ಳೀಯುತ್ತು ಹೋಯ್ತ್, ಹೋಯ್ತ್, ಹೋಯ್ತ್ !

(ಒಳಗಿನಿಂದ ಸತ್ಯಭಾಮಾ)

ಸತ್ಯ :— ನಾನೊಬ್ಬಳೇ ಏನೆಲ್ಲಾ ನೋಡಿಕೊಳ್ಲಿ ? ಬೀದಿ ಜನರ ದೃಷ್ಟಿ ದಾಟಿಕೊತ್ತಾ, ಆಚೆ ಬೀದಿ ತಿಪ್ಪಾಜೋಯಿಸ್ರಲ್ಲಿ ಹೋಗಿ, ಇಪ್ಪು ದೊಡ್ಡ ದೇಹ ಇಪ್ಪು ಸಣ್ಣಾದು ಮಾಡಿಕೊಂಡು, ಇವತ್ತಿನ ಫಳಾರಕ್ಕೊಂದಿಪ್ಪು ಅವಲಕ್ಕಿ— ಬೆಲ್ಲ ಕಡಾ ತಂದದ್ದಾಯಿತು ! ಅವನ್ನೀಗ ಸ್ವಲ್ಪ ಸ್ವಚ್ಛ ಮಾಡ್ತಾ ಇದ್ದೇನೆ. ನೀನೇ ಸ್ವಲ್ಪ ಕೂಸನ್ನೋಡಿಕೊಳ್ಳಿ ಮಾವಾ !

ರಾಮು :— ನಾ ಮುದುಕ ಶೇಷ, ಪಕ್ಕನೆ ಏಲ್ಲಿಕ್ಕಾಗ್ತದಾ ಮಾರಾಯಾ ಅ ಗ ಗ ಗ ....ಸ್ವಲ್ಪ, ಆ ಕೂಸನ್ನಿಲ್ಲಿ ಹಿಡಕೊಂಡು ಬಾ ಮಾರಾಯ !

ಶೇಷ :— ರಾಮಜ್ಜಾ, ನಾ ಮಡೀಲಿದ್ದೇನೆ ಮಾರಾಯಾ ! ಇವತ್ತಿನ ಪ್ರದೋಷಪೂಜೇಲಿ, ವೊದಲನೇ ಅಭಿಷೇಕ ನಂದು ! ಕೂಸೀಗೆ ಅಂಗೀ ತೊಡಿಸಿದ್ದಾಳೆ ಸತ್ಯಭಾಮೆ ..... ಅದನ್ನೀಗ ಮುಟ್ಟಿದ್ರೆ ಮತ್ತೆ ಮನೇಗ್ಹೋಗಿ ಸ್ನಾನ ಮಾಡಿಕೊಂಡು ಬರ್ಬೇಕಾಗ್ತದೆ. ಮನೇಗ್ಹೋದ್ರೂ ಬಿಸಿನೀರಿನ ಹಂಡೆ ಎಲ್ಲಾ ಬರಿದಾಗಿದೆ ! ಚೆಳಿಕೆಯೆಲ್ಲಾ ನಂದಿಸಿರ್ಬೇಕು. ಮತ್ತೆ ಬಿಸಿನೀರ್ಕಾಸಿ, ಸ್ನಾನ ಮಾಡಿ ಬರುವಷ್ಟರೊಳಗೆ ಕತ್ತಲಾಗೋದೇ ಸೈ ! .... ..ಓ ದೇವ್ರೇ ಲಾಟನ್ ಬುಟ್ಟು, ನನ್ನ ಕಡೆ ನೋಡ್ತಾ ಹರಿದು ಬರ್ತಾ ಇದ್ದಾನುಟ್ಟು ಈ ಕೆಂಪು ಮಡಿ ನೋಡಿ, ಅದರ ದೃಷ್ಟಿ ಈ ಕಡೆ

* ಸಾದ್ರಾಸ್ ಆಕಾಶವಾಣಿಯವರು ಇದೇ ಶಿವರಾತ್ರಿ ದಿನ ಪ್ರಕಟಿಸಿದ ರೂಪಕ

ಬದ್ಲಾಂಗ್ ಕಾಣ್ತಾದೆ! ಅ-ಗ-ಗೆ-ಗ ಬಂತು, ಬಂತು, ಎತ್ತಿಕೋ ರಾಮಜ್ಜಾ!

ರಾಮು:— ನೋಡು ಶೇಷಾ, ಮಾಬ್ಲೇಶ್ವರನ ಕೃಪೆ ನನ್ನ, ಮ್ಯಾಲೆ ಹ್ಯಾಂಗಿದೆ! ಒಂದ್ ಏನಿಟೆನಲ್ಲಿ ಆ ಲಾಟಾನ್ ಹಿಡಿದೆಳೆದು ಒಡೆದ್ಹಾಕ್ಕೆತ್ತು ಈ ಕೆಟ್ಟ ಕೂಸು; ದೇವ್ರೇ ಹೌದ್ ಅವರ ದೃಷ್ಟಿ ಈ ಕಡೆ ಹಾಕ್ಸಿದ್ದು. ಮಾರಾಯ, ನಮ್ಮನೇ ಮಾಣಿ ಹೀಂಗಾಗ್ತಾನಂತ ಕನಸು-ಮನಸಿನಲ್ಲಿಯೂ ಮಾಡಿರ್ಲಿಲ್ಲ! ಸತ್ಯಭಾಮೆ ಮನೇಗೆ ಬಂದ ಮ್ಯಾಲಂತೂ, ಒಂದಿಸಾದ್ರೂ ಅಂತ ಪರ ಊರಿನಲ್ಲಿ ಉಳಿದವನಲ್ಲ. ಪ್ರತಿದಿನ ಬೆಳಿಗ್ಗೆ ನಸುಕಿನಲ್ಲೇ ಎದ್ದು, ದೇವ್ರಿಗೆ ಹೂ-ಪತ್ರೆ, ತಂದು, ತಾನೇ ಅಸರಿಮಾಡಿ, ಅವಲಕ್ಕಿ ಉಕ್ಕರಿ ಕಲಸ್ತಿದ್ದ. ಸತ್ಯಭಾಮೆ ಅಡಿಗೆಗೆ ಕೈಕೆಲ್ಸಾ ಮಾಡಿಕೊಡ್ತಿದ್ದ; ಹೊತ್ತೀಗ್ ಸರಿಯಾಗಿ ದೇವಸ್ಥಾನಕ್ಕೆ ಹೋಗಿ, ಉಪಾಧಿ ಮುಗಿಸಿಕೊಂಡು ನೈವೇದ್ಯ ಕರ್ತಿದ್ದ. ಈಗ ಹೀಂಗ್ ಹ್ಯಾಂಗಾದ ಅಂತ ದಿಗಲಾಗಿದೆ ನ ನನಗೆ ಶೇಷಭಟ್ಟ!

ಶೇಷ:— ರಾಮಜ್ಜಾ, ಮಾಬ್ಲೇಶ್ವರಿದ್ದಾನೆ! ಅವನ್ನ ನಂಬಿಕೊಂಡು ಬಂದು ಇಷ್ಟು ವರ್ಷಾಂತೂದೂಕ್ಯಾಯು! ಇನ್ನೇನು ನಿನಗೆ, ಹೊತ್ತು ಮುಳುಗುವ ಹೊತ್ತು! ಮಾಬ್ಲೇಶ್ವರ ಕೈಬಿಡೂದಿಲ್ಲ ರಾಮಜ್ಜಾ!

[ದೇವಸ್ಥಾನದಲ್ಲಿ ವಾದ್ಯ-ಗಂಟಿಗಳ ಸದ್ದು]

ಹೊತ್ತಾಯ್ತು, ನಾ ಹೋಗ್ತೇನೆ....ಅಕೊ, ರಾಮಜ್ಜ, ನನ್ನ ಎದರೀಗೆ ಬಂದೇಬುಟ್ರಲ್ಲಾ ದೀಕ್ಷಿತರು! ಅವ್ರೀಗೂ ನಿನಗೂ ದೋಡಿ ರು! ಅವ್ರೀಗ ನಿನ್ನ ಹಾಂಗ ೭೦ ವರ್ಷಕ್ಕೆ ಬಂದಿದ್ದಾರೆ. ಅವ್ರೀಗೂ ಶರಾಮಾಗಿ ಮಾತ್ನಾಡೋ ಜನ ಬೇಕಾಗಿದೆ....ತಕೊ, ರಾಮಜ್ಜಾ ಎಂದಿಸ್ಟು ನಶ್ಯ ಬೇಕಾದರೆ ತಕೊ! (ದೀಕ್ಷಿತರ ಕಡೆ ನೋಡಿ) ಕೋಯ್, ವೆಂಕಣ್ಣದಿಕ್ಷಿತರೆ, ಬನ್ನಿ ಬನ್ನಿ, ಬನ್ನಿ! ರಾಮಜ್ಜ ನಿಮ್ಮ ಹಾದಿ ಕಾಯ್ತಾ ಇದ್ದಾನೆ!.... ...ನಾನಿನ್ನು ನಿಂತರಾಗ್ತು; ಬರ್ತೇನೆ, ರಾಮಜ್ಜಾ ಬರ್ತೇನೆ ದೀಕ್ಷಿತರೇ! (ಹೋಗುವನು)

ದೀಕ್ಷಿತ: — ರಾಮಭಟ್ರೇ, ನಿಮ್ಮನೇ ಮಾಣಿ ಬಂದ್ನಾ?

ರಾಮು:— ಏನ್ ಬರ್ತಾನೆ? ಹನ್ನೊಂದು ತಿಂಗ್ಳಾಯ್ತು ತೊರಗ್ಬಿದ್ ಹೋಗಿ! ಒಂದು ಕಾಗದಾ ಸಹಾ ಹಾಕ್ಲಿಲ್ಲ ಮಾರಾಯ! ಅದೇ ಸುದ್ದಿ ಮಾತಾಡ್ತಾ ಇದ್ದೆ ಈಗ; ಜವಳಿ ಅಂಗಡಿ ವೆಂಕಟೇಶ್ ಪೈಗಳು ಜವಳಿ ಖರೀದಿಗೆ ಅದ್ಯಾನೀಗೆ ಹೋದಾಗ, ಈಗೊಂದು ತಿಂಗಳ ಹಿಂದಂತೆ,—ಅಲ್ಲೇನೋ ಇವರಿಗೆ ಸಿಕ್ಕಿದ್ದಂತೆ!

ದೀಕ್ಷಿತ:— ಅಯ್ಯಪ್ಪ! ಅಷ್ಟಾದ್ರೂ ಸುದ್ದಿ ಸಿಕ್ಕಿತಲ್ಲಾ! ನಮ್ಮನೇ ಮಾಯೇದು ಅಸ್ಟು ಸುದ್ದಿಯೂ ಇಲ್ಲ! ಕಳೆದ ಫಾಲ್ಗುಣ ನಲ್ಲೇನೋ ಅವ ಬಳ್ಳಾರಿ, ಅನಂತಪುರ, ಕರ್ನೂಲು ಅತ್ತಕಡೆ ಹೋಡ್ತಿದ್ನಂತೆ. ನನ್ನನೆ ಪತ್ರೆ ಪ್ರಿಂಟ್‌ಮಾಡಿದ ಹ್ಯಾಂಡ್‌ಬಿಲ್ಲು. ನ್ನೆಲ್ಲಿ ಹಂಚಿದ್ನಂತೆ. ಆ ಕಡೆ ಪರಿಸೇ ಜನರು-ಸ್ಥಾಲ್ಯರು ಮಂದಿದಿನ ಬೆಳಿಗ್ಗೆ ಆ ಹ್ಯಾಂಡ್‌ಬಿಲ್ ಹಿಡ್ಕೊಂಡು ನಮ್ಮನೇ ಹುಡುಕಾಡ್ತಾ ಇದ್ರಂತೆ! ಇಪ್ಪತ್ತಾದ್ರೂ ಒಬ್ಬನೂ ನಮ್ಮನೇ ಮುಸುಳಿದ್ದಾಂಗಿಲ್ಲ! ನಿಮ್ಮಗನ ಸುದ್ದಿ ಕೇಳ್ತಾಂತ ಈ ಕಡೆ ಬಂದೆ.

ರಾಮು:— ವಾಹವ್ವಾ! ವಾಹವ್ವಾ! ದೀಕ್ಷಿತ, ಈಗ ನಾ ನವರ್ಷದ ಹಿಂದೆ ನನಗೂ ಹೀಂಗೇ ಒಂದು ಪ್ರಕರಣ ಗಂಟುಬಿದ್ದಿತ ಆದರೆ, ಮಾಬ್ಲೇಶ್ವರನ ಕೃಪೆಯಿಂದ, ನನಗೆ ಸಿಕ್ಕಬೇಕಾದ ಸಿಕ್ಕಿತನ್ನು! ನಮ್ಮನೇ ಮಾಣಿ ಬೆಳಗಾಂ ಕಡೆ ಪರ್ಸಿಗೆ ನಮ್ಮನ ಪತ್ರಿಕೊಟ್ಟು ಬಂದಿದ್ದಾ. ಆ ಪರ್ಸಿಯ ಜನರು ಇಲ್ಲಿ ಮೊಟಾರ ಇಳಿಯುವಾಗ, ನಮ್ಮನೇ ಮಾಣಿ ಇಲ್ಲಿರ್ಲಿಲ್ಲ; ಕುಮಟೀಗೊ ಅಂಕೋಲೇಗೋ ಹೋಗಿದ್ದ. ಬೇರೆ ಯಾರ ಮನೆಯ ಮಾಣಿಯೊ ಏನೋ-ಅಂತ ಹೋದ ಸಂಗ್ತಿ-ಸುಮ್ಮನೇ ಅವನ ಹೆಸರೀಗ ಯಾಕ ಹೇಳ್ಬೇಕು? ಆ ಪತ್ರೆ ಕೊಟ್ಟವನ ತಮ್ಮತಾನು—ಅಂತ ಹೇಳಿ, ಅವರ ನ್ನೆಲ್ಲಾ ತಮ್ಮನೇಲಿ ಇಳಿಸಿಕೊಂಡ. ರಾತ್ರಿ ದೇವಸ್ಥಾನದಲ್ಲಿ ಅಭಿಷೇಕಕ್ಕೆ ಹೋದಾಗ, ಆ ಜನರು ನಮ್ಮನೇ ಮಾಣೀ ಕಣ್ಣೀಗೆ ಬಿದ್ರು! ಬಿಡ್ತಾನಾ ಅಂತ? ಪೂಜೆ ಮುಗಿದ ಮೇಲೆ ಅವನ್ನು ಮಾತಾಡಿಸಿಯೇ ಬಿಟ್ಟ! ಆಚೇಮನೇ ಮಾಣಿಯ ಗುಟ್ಟೆಲ್ಲಾ ರಟ್ಟಾಯ್ತು! ಪರಿಸಿಯವರಿಗೆ ವೃಷ್ಯಾನ್ನ ಊಟ ಹಾಕಿದ್ದೇ ಬಂತು ಅವನಿಗೆ! ಅವರು ಕೊಡುವ ದಕ್ಷಿಣೆ, ಉಡುಗರೆ ಎಲ್ಲಾ ನಮ್ಮನೇ ಮಾಣಿ ಕಸಕೊಂಡು ಬಂದ! ಗೋಕರ್ಣದ ಪುರೋಹಿತಭಟ್ರೆರು ಹೀಗೆಲ್ಲಾ ಧೋಂಗು ಮಾಡ್ತಾರೆ ಎಂತ ಆ ಪರ್ಸಿ ಜನರಿಗೆ ಭಾವನೆ ಆಗುವ್ತಾಂಗೆ ಮಾಡಿದ್ದೇ ಬಂತು, ಅವ್ನನಿಗೆ!

ದೀಕ್ಷಿತ:— ಪರಿ, ಪರಿ, ಪರಿ, ಈ ಜನರಿಗೂ ಹಾಂಗೇ ಆಯ್ತೋ ಏನೋ! ಓ ಮಾಬ್ಲೇಶ್ವರಾ! ಏನೇನೆಲ್ಲಾ ಆಟ ಆಡಕ್ಕೊಸ್ಕೇ ಅಡ್ಸಿಕೋ!! ರಾಮಭಟ್ರೇ, ನಮ್ಮ ಕಾಲ್ದಲ್ಲಿ ಇಂಥಾ ಬಂಗಾಳಿಮೆಲ್ಲಾ ಸ್ವಲ್ಪಾದ್ರೂ ಇತ್ತಿತ್ತಾ? ಪರ್ಸಿ ಜನರು ಯಾರ ಮನೇಗೆ ಹೋದ್ರೂ, ಅವರನ್ನು ಸರಿಯಾಗಿ ವಿಚಾರಿಸಿ, ಉಪಚರಿಸಿ, ಯಾರ್ಮನೆ ಪತ್ರೆ ಹಿಡಕೊಂಡು ಅವರು ಬಂದಿರ್ತಾರೋ ಅವರಲ್ಲಿಗೇ ತಂದು ಮುಟ್ಟಿಸುತ್ತಿದ್ದರು! ಪರಿಸೇ ಜನರು ಕೂಡಾ, ತಂದ ರೊಕ್ಕ ಸಾಲ್ದಿದ್ರೆ, ನಚ್ಚಿತ್ರ ಕೈಗಡಾ ಇಸಕೊಂಡು, ಮುಂದಿನ ವರ್ಷದ ಜಾತ್ರೆಗೆ ಬಂದಾಗ, ಬೇಡಾಂದ್ರೂ ಕೇಳ್ದೇ, ಬಡ್ಡಿ ಸಹಿತಾ ವಾಪಸು ಮುಟ್ಟಿಸುತ್ತಿದ್ದರು! ಈಗಿನಷ್ಟೂ ಜನಸಂದಣಿ, ಅಂಗಡಿ ಸಾಲು, ಗದ್ದಲ, ನಾಟಕದ ಕಂಪೆನಿ, ಸಿನಿಮಾ ಕಂಪೆನಿ ಆಗಿದ್ದಿಲ್ಲಾನ್ನಿ! ಅದ್ರೂ, ಆ ಜನರ ಭಕ್ತಿ ಎಸ್ಟು!

ರಾಮು:— ದೀಕ್ಷಿತಾ, ಅದೆಲ್ಲಾ ಯಾಕ್ಹೇಳ್ತೀ ಮಾರಾಯ? ಏನೇನೆಲ್ಲಾ ತಾಳ್ಬೇಕೋ ಆ ಮಾಬಲೇಶ್ವರನಿಗೇ ಗೊತ್ತು! ಈಗೀಗ ಪರಿಸೇಜನ ಸಾವಿರಗಟ್ಲೆ ಬರ್ತಾರೇನೋ ಹೌದು, ಅವರಿಗೆ ಅವರದ್ದೇ ಮಠ, ಛತ್ರ, ಪುರೋಹಿತರು—ಎಲ್ಲಾ ಇದ್ದಾರೆ! ಸರಕಾರ ಕಾಯದೇ ಮಾಡಿದ ಮೇಲಂತೂ, ಯಾಗಕ್ಕೆ ಯಾರೂ ಪೂಜೆ— ಅಭಿಷೇಕ ಮಾಡಿ ಕೊಡಬೇಕಾಗಿಲ್ಲ. ಬೇಕಾದವರಿಂದ ಮಾಬಲೇಶ್ವರನ್ನ ಮುಟ್ಟಿಸಿ, ತಿಕ್ಕಿಸಿ, ನೀರ್ತೆಯ್ದು, ಪೂಜೆ ಮಾಡ್ಸಿಕೊಂಡು, ಹಲಲಲ

ಅಂತ ಗರ್ಜನೆ ಮಾಡಿಕೊಂತಾ ಹೊರಗೆ ಹೋಗ್ತಾರೆ! ಅಲ್ಲೇಇದ್ದ ಪುರೋಹಿತ ಭಟ್ಟರನ್ನ ಕಣ್ಣೆತ್ತಿ ನೋಡೋದು ಕೂಡಾ ಇಲ್ಲ!

ದೀಕ್ಷಿತ:— ರಾಮಭಟ್ಟಾ, ನಾ ಹೇಳೋದೂ ಅದನ್ನೇ! ಈ ಹರ್ಷೇಜನರ ದಕ್ಷಿಣೆಗೊಕ್ಕ ತಪ್ಪಿಸೋಗಿದ್ರೂ ಚೂಲ್ಲ, ಪುರೋಹಿತರು ತಂತಮ್ಮ ಕಣ್ಣಾ ಪುಟ್ಟ ಎಮೀನನ್ನಾದರೂ ಹೊಟ್ಟೆ ಹೊರಕೊಂಡು ಮಾಬಲೇಶ್ವರನ ಸೇವೆ ಸಾಂಗವಾಗಿ ಸಾಗಿಸಬಹುದಿತ್ತ! ಈಗೆರಡು ವರ್ಷದಿಂದ ಅವಕ್ಕೂ ಸೊನ್ನೆ ಶುತ್ತಿನ ಹಾಗಾಗಿದೆ!

ರಾಮು:— ಹೌದ್, ಹೌದ್, ಹುಟ್ಟುವಳಿಯ ಒಂದೂ ಅಂನೆ ಅಂತ ಮಾತ್ರವೇ ಒಡೆಯನಿಗೆ ಗೇಣಿ ಕೊಡತಕ್ಕದ್ದು ಅಂತೇನೋ ಕಾಯಿದೆ ಅಗದೆಯಲ್ಲಾ? ನಮ್ಮನೇ ಮಾತೆ, ಅದನ್ನೇ ಹೇಳಿದ್ದ— ಇಲ್ಲಿದ್ರೆ ತಾನು ಉಪಾಯವಿಲ್ಲ. ಕೆಲಸಕ್ಕೋಗಿ ಏನಾದೂ ಮಾಡಿ, ದುಡಕೊಂಡ್ಬರಬೇಕು—ಅಂತ ಅಲ್ಲಿ, ಹೊಲಕ್ಕೆ ಹೋಗ್ಲಿ, ಅದರೆ ಹೋದವನು ಹೋಗಿಯೇ ಬಿಟ್ಟೇಕಾ? ಕಾಸೂ ಇಲ್ಲ, ಪತ್ರವೂ ಇಲ್ಲ! ಇಲ್ಲಿದ್ದವ್ರು ಏನ್ ಮಾಡ್ಬೇಕು?

ದೀಕ್ಷಿತ:— ರಾಮಭಟ್ಟೋ! ಗಾಬರಿಯಾಗ್ಬೇಡಿ, ಮಾಬಲೇಶ್ವರನಿದ್ದಾನೆ! ತಾಮು ಅವಸರ್ಕಾಲ, ಇದಕ್ಕೊಂದು ಉಪಾಯ್ವಿರ್ಮ, ಅವಸ್ಥೇನ್ವು ಅಂ ವ್ಯೇ ಇವೆ. ನೀವೂ ನಾವೂ ಧರ್ಮಶಾಸ್ತ್ರ ಓದಿದವರು....

ರಾಮು:— ಧರ್ಮಶಾಸ್ತ್ರ ಓದಿದವರೇಹೋ ಹೌದು, ನಿಜ. ಹಾಂಗಾಪ್ರೆ ಏನು ಮಾಷ್ಟೇಕಂತೀ ದೀಕ್ಷಿತಾ? ಅಪ್ಪ ಅಜ್ಜಂದಿರ ಕಾಲದಿಂದ್ಲೂ ನತಸ್ತಾ ಬಂದಿವ್ನ ಮಾಬಲೇಶ್ವರನ ಪೂಜೆ, ಸೇವೆ, ಎಲ್ಲಾ ಬಿಟ್ಕೊಟ್ಟು, ಕಾಸೀ ಹೋಟ್ಲೊ, ಚಾ ದುಕಾನವೊ, ಸೋಡಾ ಫ್ಯಾಕ್ಟ್ರೀನೋ ಇಟ್ಕೊಂತು ಜೀವ್ನಾ ಮಾಡೂದಾ?

ದೀಕ್ಷಿತ:— ಹಾಂಗ್ಯಾಕಾಗ್ಬಾರ್ದೂ ಹೇಳಿ? ನೀವು ಉತ್ತುಬಿತ್ತಿ ಕೆಡೆ ಹೋದ್ಮಾಂಗ್ ಕಾಣೂದಿಲ್ಲ! ಕಾಸೀ ಹೋಟ್ಲು, ಚಾಮುದಾನ ಇಟ್ಕೊಂಡು, ಅಲ್ಲಿಯ ಅಚಾರ್ಯ ಮುಕೈಲ್ಲಾ ಈಗ ಲಕ್ಷಾಧೀಶರಾಗಿದ್ದಾರೆ ಅರಮನೆಯಂಥಾ ಬಂಗ್ಲೆ ಕಟ್ಟಿಕೊಂಡು, ಕಾರಿಟ್ಕೊಂಡು ಓಡಾಡ್ತಿದ್ದಾರೆ. ಯಾರ ಹಂಗೂ ತಾಲ್ತಂತೆ ತಮ್ಮ ತಮ್ಮ ಧರ್ಮ-ಕರ್ಮವನ್ನೂ ನಡಸ್ತಿದ್ದಾರೆ.

ರಾಮು:— ಓ ಮಾಬಲೇಶ್ವರಾ! ಏನಪ್ಪಾ ನಿನ್ನ ಲೀಲೆ?

ಹೊರಗಿನಿಂದ ತರಣನೊಬ್ಬನು ಹಾಡುವದು ಕೇಳಬರುತ್ತದೆ,

ತರಣ:— ಬಂದಾನೋ ಶಿವ ಬಂದಾನೋ |
ಬಂದಾನೋ ಶಿವ ಬಂದಾನೋ ||
ಕೈಲಾಸಗಿರಿಯಿಂದ, ಗಂಗೆಯ ತಡಿಯಿಂದ
ಬಂದಾನೋ ಶಿವ ಬಂದಾನೋ ||
[illegible] ಶಿರದಿಂದ, ಕಾಶೀಪುರದಿಂದ |
[illegible]ೋ ಶಿವ ಬಂದಾನೋ ||
ವಿಂಧ್ಯಾದ್ರಿಯನೆ ದಾಟ್ಟಿ, ಗೋದಾವರಿಯ ಮೀಟ್ಟಿ,
ಕನ್ನಡ ನಾಡೀಗೆ ಬಂದಾನೋ ||
ಬಂದಾನೋ ಶಿವ ಬಂದಾನೋ ||
ಹಂಪಿ ಹಾನಗರ ಕಂಡು, ಗೋಕರ್ಣಕೆಳಿತಂದು,
ಕಡಲ ದಂಡಿಗೆ ನಡೆತಂದಾನೋ ||
ಬಂದಾನೋ ಶಿವ ಬಂದಾನೋ ||

ರಾಮು:— ದೀಕ್ಷಿತಾ, ಅಜೋ ನಮನೆ ಮುಂನೆ ಯಾತ್ರೋ ಬೈರಾಗಿ ಹಾಡು ಶುರು ಮಾಡಿದ್ದಾನೆ. ಶಿವರಾತ್ರಿ ಬಂತೆಂದ್ರೆ ಸೈ ಈ ಗೋಸಾಯಿಗಳೆಲಾ ಹಿಂಡ್ಗಟ್ಟಿ ಕೊಂಡ್ ಬರ್ತಾರೆ!

ದೀಕ್ಷಿತ: ರಾಮಭಟ್ರೇ, ನೋಡಿ, ನೋಡಿ, ಓ ಅಲ್ಲಿ, ಕೋಟಿ ತೀರ್ಥದ ಅಚೆ ದಂಡೆ ಕೇಲೆ! ನಿನ್ನನೇ ಮಾಣೇ ಶವಾರಿ ಬರತ ಹಾಂಗೆ ಕಾಣ್ತಾದೆ!

ರಾಮು: (ಆಶ್ಚರ್ಯಾನಂದದಿಂದ) ಏಂ! ಹೌದಲ್ಲಾ ದೀಕ್ಷಿತರೇ! ನಮ್ಮನೇ ಮಾಣಿ, ಶಿವನಭಟ್ಟ!! ಅವನ ಹಿಂದೆ ಇಬ್ಬರು ಆಳು ದೊಡ್ಡ ದೊಡ್ಡ ಗಂಟು ತೆಕ್ಕೊಕೊಂತು ಬ್ರುತ್ತಾರಲ್ಲಾ!

(ಒಳಗೆ ಕರೆಯುತ್ತಾ)

ಓ ಸತ್ಯಭಾಮೆ, ಸತ್ಯಭಾಮೆ ನಿನ್ನ ಗಂತ, ನಮ್ಮನೇ ಮಾತೆ ಶಿವಭಟ್ಟ, ಬಂದೇ ಬಿಟ್ಟಲ್ಲಾ! ಬಾ, ಬಾ, ನೋಡ್ಲಿ! ದೀಕ್ಷಿತರೆ, ಅಂತೂ ಮಾಷ್ಟೇಶ್ವರನ ಕೃಪೆ ನಮ್ಮೇಲೆ ಪೂರ್ತಾ ಇವೆ ಅಂತ್ಹೇಗಾಯ್ತು!

ದೀಕ್ಷಿತ:— ನಾ ಹೇಳ್ಲಿಲ್ವಾ ರಾಮಭಟ್ರೇ? ಮಾಷ್ಟೇಶ್ವರ ಎಂದಾದ್ರೂ ತನ್ನ ಭಕ್ತರ ಕೈ ಬಿಟ್ಟಾನಾ? ನಮ್ಮನೇ ಮಾತೆಯೂ ಹೀಗೆಯೇ ಬಂದ್ನೋ ಏನೋ! ನಾ ಹೊರಡ್ತೀನೆ ತುನೆಗೆ.

ರಾಮು: ತಾಪ್ಪೊತ್ತು ಹ್ಯಾಂಗೂ ಆತಿದ್ರಿ. ಕ್ಷಣ್ಣ ನಿಲ್ರಿ ಅಗೋ ಬೈರಾಗಿ ನಮ್ಮನೇ ಮುಂನೇ ಬಂದ್ಬಿಟ್ಟಾ. 'ಬಂದಾನೋ ಶಿವ' ಹಾಡ್ಲಿ ಒಂದ್ಸಲ!

(ಸತ್ಯಭಾಮೆಗೆ)

ಸತ್ಯಭಾಮೆ, ಅಲ್ಕೋಡೆ ನಿನ್ನ ಗಂತ, ತಾ ಗರ್ತೀ ಸತ್ತ ಶಿವದೇವ್ನ ಅತುರದಿಂದ ಓಡಿ ಬರುವ ಹಾಗೆ ಕೈಹಿಸಿಕೊಂಡು, ನಗು-ಮೋರೆ ಮಾಡಿಕೊಂಡು ಬರ್ತಿದ್ದಾನೆ! ಗಂಟು ಗದಡಿ ಹೊರಸಿಕೊಂಡು ಮದ್ಯಗನ ಹಾಂಗೆ ಬರ್ತಿದ್ದಾನೆ ನಮ್ಮನೇ ಮಾಣಿ, ಶಿವಭಟ್ಟ! ಏ ಬೈರಾಗಿ ಹಾಡು ನಿನ್ನ ಹಾಡನ್ನ ಕುಣ್ಯೋತ್ತಾ ಹಾಡು. ನಿಜವಾಗಿಯೂ ಇವತ್ತು ಶಿವರಾತ್ರಿ, ಶಿವದೇವರ ಹಬ್ಬನೇ ಹಬ್ಬ!

ಬೈರಾಗಿ:— ಬಂದಾನೋ ಶಿವ ಬಂದಾನೋ |
ಬಂದಾನೋ ಶಿವ ಬಂದಾನೋ ||

— ತೆರೆ —

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಜಯಂತಿಯ ಡಿಸೆಂಬರ್ (೧೯೫೬) ಸಂಚಿಕೆಯಲ್ಲಿ ಬಿಡ್ಡವಿಸಿಕೊಂಡಂತೆ, 'ಪೂರ್ಣಾಹುತಿ' ವಿಚಿತ್ರವಿಚಿತ್ರ ಶರಂಗರೂಪಕವನ್ನು ವಿಮರ್ಶಿಸಿ ೩ ಜನರಿಂದಲೂ, 'ಕಾಲಲ್ಲಿಯ ಮುಳ್ಳು' ಚಿತ್ರಕತೆಯನ್ನು ವಿಮರ್ಶಿಸಿ ಅದು ಜನರಿಂದಲೂ ಲೇಖನಗಳು ಬಂದಿವೆ. ಕಾರಣಾಂತರದಿಂದ ಈ ಮೇಲಾಟದ ನಿರ್ಣಯವನ್ನು ಎರಡು ತಿಂಗಳ ಕಾಲ ಮುಂದೆ ದೂಡಬೇಕಾಯಿತು.

'ಪೂರ್ಣಾಹುತಿ'ಯ ವಿಮರ್ಶಕರು

೧ ಶ್ರೀ. ಆರ್. ಎಸ್. ಭಟ್ಟ, ಮಂಗಳೂರು. ೨ ಶ್ರೀಮತಿ 'ಶಲಾ' ಮಲ್ಲೇಶ್ವರಂ, ಬೆಂಗಳೂರು. ೩ ಶ್ರೀ ಕೆ. ಎಸ್. ಕರ್ಮಾ, ವಾಣೀಮಂದಿರಂ, ಕಾಸರಗೋಡು.

'ಕಾಲಲ್ಲಿಯ ಮುಳ್ಳು' ವಿಮರ್ಶಕರು

೧ ಶ್ರೀ. ಕೆ. ರಾಮಕೃಷ್ಣ ಭಟ್ಟ, ಜರ್ನಾಲಿಸ್ಟ್, ಕಲ್ಲಡ್ಕ. ೨ ಶ್ರೀ ವಾಸುದೇವ ರಾವ್, ಕೆನರಾ ಕಾಲೇಜ್ ಕುಮಟಾ. ೩ ಶ್ರೀ. ಜಿ ಎಲ್. ಗುರುಪುಣಗಿ, ಹೈದರಾಬಾದ್. ೪ ಶ್ರೀ. ಕೆ. ಎಸ್. ಕರ್ಮಾ, ವಾಣೀಮಂದಿರಂ ಕಾಸರಗೋಡು. ೫ ಶ್ರೀ. ಶಿವಣ್ಣ ಕನ್ನೂರ, ತಾಂಬಾ (ವಿಜಾಪುರ) ೬ ಶ್ರೀ. ಕೆ. ಎಂ., ಉಪಾಯ್ಕ, ಕಡೂರು.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಮಂಡಲಿಯವರೇ ನಿರೀಕ್ಷಿಸಿ ನಿರ್ಣಯವನ್ನು ಕೊಟ್ಟಿದ್ದಾರೆ. 'ಪೂರ್ಣಾಹುತಿ'ಯ ವಿಷಯದಲ್ಲಿ ಬಂದ ಮೂರು ವಿಮರ್ಶೆಗಳೂ ಉತ್ತಮವಾಗಿವೆ. ಅವುಗಳಲ್ಲಿ ಶ್ರೀ. ಕೆ. ಎಸ್. ಕರ್ಮಾ ಅವರ ವಿಮರ್ಶೆ ಅತ್ಯುತ್ತಮವಾಗಿದೆ.

'ಕಾಲಲ್ಲಿಯ ಮುಳ್ಳು' ಎಂಬುದರ ವಿಮರ್ಶೆಗಳಲ್ಲಿಯೂ ಶ್ರೀ. ಕೆ. ಎಸ್. ಕರ್ಮರವರೇ ಅತ್ಯುತ್ತಮವಾಗಿವೆ ಶ್ರೀ. ಕೆ. ಎಸ್. ರಾವ್, ಶ್ರೀ. ಕೆ. ಎಂ. ಉಪಾಯ್ಕ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕವು ಸಾಮಾನ್ಯವಾಗಿವೆ.

ಈ ವಿಭಾಗವನ್ನು ಎರಡು ತಿಂಗಳ ಸಂಚಿಕೆಗಳಲ್ಲಿ ಕಾಣದೆ, ಅನೇಕ ವಾಚಕರು ಸಂಪಾದಕರಿಗೆ ಪತ್ರಗಳನ್ನು ಬರೆದಿದ್ದಾರೆ. ಇನ್ನು ಮೇಲೆ ಎಂದಿನಂತೆಯೇ ಈ ವಿಭಾಗವನ್ನು ತಪ್ಪದೆ ಪ್ರಕಟಿಸಲಾಗುವುದು. ಕಥೆ ವಿಮರ್ಶೆಗಳು ಹೆಚ್ಚು ಹೆಚ್ಚಾಗಿ—ಈ ವಿಮರ್ಶೆಯ ಮೇಲಾಟದಲ್ಲಿ ಭಾಗ ವಹಿಸಿ. ಈ ವಿಭಾಗವನ್ನು ಅರ್ಥಪೂರ್ಣವಾಗಿಸುವಂತೆ ಮಾಡಬೇಕೆಂದು ವಿನಂತಿ.

ಮುಂದಿನ ತಿಂಗಳ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಬಗೆಹರಿಯದ ಜಾತಿಯಿಲ್ಲ' ಎಂಬ ಸಣ್ಣಕತೆಯನ್ನಾಗಲಿ, 'ಶಿವರಾತ್ರಿ' ಎಂಬ ಶರಂಗರೂಪಕವನ್ನಾಗಲಿ ವಿಮರ್ಶಿಸಿ ಲೇಖನಗಳನ್ನು ಇದೇ ಮಾರ್ಚ್ ತಿಂಗಳ ಎಲ್ಲ ದಿನಾಂಕದೊಳಗಾಗಿ ತಲ್ಪುವಂತೆ ಕಳುಹಿಸಬೇಕು.

—ಸಂಪಾದಕರು

'ಪೂರ್ಣಾಹುತಿ'

(ಐತಿಹಾಸಿಕ ತರಂಗದೂಪಕ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಕರ್ನಾಟಕದ ವೀರಚರಿತ್ರೆಯಲ್ಲಿ ಶೋಭಪೂರ್ಣವಾದ ಒಂದು ಭವ್ಯರೋಮಾಂಚಯ ಜೀವಂತ ಚಿತ್ರವನ್ನೆ ರಕ್ತಯೇರಿಸಿ ನಿಲಿಸಿದ ಕಾರಣವೆಂದರೆ—ಅದು ಕನ್ನಡಿಗರೆಯನ್ನು ಪುಳಕದಿಂದ ತುಂಬಿ, ಹುವ ವಿಜಯನಗರದ ಭವ್ಯೇತಿಹಾಸ ಸಂಧಿ!!

ಶ್ರೀ

ಕಾಲಾಯ ತಸ್ಮೈ ನಮಃ

ಖ್ಯಾತಿವೆತ್ತ ಆರಸುಮನೆತನದ ಪೌರುಷದ ನೆಲೆವೀಡು—ವಿಜಯನಗರ. ಕಾಲಪ್ರಭಾವದಿಂದ ಅನಂತವಾದ ಕಾಲಗರ್ಭದಲ್ಲಿ ಇಂದು ಅಡಗಿ ಹೋಗಿದೆ. ಅವರಿ ಕರ್ನಾಟಕದ ಜನಜೀವನದಲ್ಲಿ ಪೂರ್ಣಜೀವನದ ಪ್ರಗತಿಯನ್ನು ಸಾಧಿಸಿ—ವಿಜಯದುಂ ಭಿಯನ್ನು ನೋಳಗಿ ಕರ್ನಾಟಕ ಶ್ರೀರಮಣಿಯ ತುಂಬೆರಕದ ನುಡಿಮಾಲೆಯಲ್ಲಿ ಶಶ್ವತವನ್ನರಳಿಸಿ ನಿಂತ ವಿಜಯನಗರ—ಒಂದು ಸುದಿನದಲ್ಲಿ ವಿದ್ಯಾರಣ್ಯರ ದಿವ್ಯಜೀವನದ ಪೂರ್ಣಪ್ರಕಾಶವನ್ನು ಸ್ವಹೃದಯ ಪ್ರೇಕ್ಷಿದಲ್ಲಿ ನೆಲೆಯೂರಿಸಿಕೊಂಡಿತ್ತಿಂದರೆ ನಾತಿದು ಕನ್ನಡಿಗನೆದೆಯನ್ನು ಆನಂದತುಂದಿಲವಾಗಿಸುವುದೆಂಬಲ್ಲಿ ಸಂಶಯಕ್ಕೆ ಡೆಯಿರದ್ದು.

ಇಂದಾ ಸುವರ್ಣಸಂಧಿ, ಜೆಲ.ವೇರಿದ ಪುಣ್ಯಭೂಮಿ ಕಣ್ಣಿನಿಂದ ದೂರದಲ್ಲಿದ್ದು, ನೆನಹಿನ ಚಿತ್ರವಾಗಿದೆ. ಇದಕ್ಕೇನೆ ಅನ್ನುತ್ತಾರೆ "ಕಾಲಾಯ ತಸ್ಮೈ ನಮಃ" ಎಂದು. ಇರಲಿ!

ಪರಂಪರೆಯಿಂದಾಗಿ ಕಕ್ಕಿನಿಂದ ಬರುವ ರಾಜತ್ವವೆಂಬುದು ಯಾವಾಗಲೂ ಶಾಂತಿ-ಕ್ರಾಂತಿಗಳ ತುಮುಲ ವಾತಾವರಣದಲ್ಲಿ ನೆಲೆನಿಂತ ವಿಚಾರ. ರಾಜನಾಗಿ ಬರುವವನು ಹೃದಯಶೂನ್ಯನಾದರೆ, ಅವಿವೇಕಿಯಾದರೆ, ತನ್ನ ಮುಂದೆ ಸದಾ ನೆಲೆಸಿರುವ "ಸತ್ಯ ಸಾಧಕ ಬಳಗ"ಗಳ ಕಟುವಂಚನೆಯು ಪರಾಪವಚನಕ್ಕೆ ಒಲಿಯಾಗಿ ತಾನೇ ತಾನಾಗಿ ದುರಂತವನ್ನು ಆಮಂತ್ರಿಸುವನು; ತನ್ನ ಹಿರಿಯ ಸ್ಥಾನಕ್ಕೆ ಕಲಂಕವನ್ನು ತಂದೀವಂತೆ, ಎಂದೆಂದೂ ಮಾಯದ ಕಾಳ್ಯವೈಚಿತ್ರವೊಂದನ್ನು ಚರಿತ್ರೆಯಲ್ಲಿ ಭದ್ರಪಡಿಸುವನು; ಇಂತಿದು ಧೂರ್ತನೂಲಿಯೆಂದಾದರೆ, ಉತ್ತಮನು ಪ್ರಜಾರಂಜಕನಾಗಿ ತನ್ನ ಮುಂದೆ ನೆಲೆನಿಂತ ಮುಂತ್ರಾಲೋಚಕರ ಕಪಟವಾಣಿಗಳಿಗೆ ಬಲಿ ಬೀಳದೆ, ಸ್ವಜೀವನೋತ್ಕರ್ಷ ಸಾಧನೆಯೊಡನೆ—ಪ್ರಜೆಗಳ ಜೀವನೊನ್ನತಿಗೂ ನೆರವಾಗಿ ಬದುಕನ್ನು ಹುಲುಸಾಗಿಸುವನು, ಪವಿತ್ರೀಕರಿಸುವನು.

ಇಂತಿದು ರಾಜವೃತ್ತವೆಂದರೆ—"ಈ ಪೂರ್ಣಾಹುತಿ" ಯಲ್ಲಿ ಕಾಣಬರುವ ಅಸಹನೀಯ ದುರಂತವಾವುದಿದು? ಅಶಾಂತಿಪರ್ವದ ರುದ್ರ-ಭೀಕರವಾದ ಸುಳಿಯಲ್ಲಿ ಒಳಗೊಳಗೇ ಕುದುಗಿನಿಂತು ಕಾಲ ಶಕ್ತಿಯಿಂದ ಸಮಯ ಸಾಧಿಸಿ—ಗರ್ವದಿಂದ ತಲೆಯೆತ್ತಿ ನಿಂತ ಹಾಯಾಗಿ ಉರುಳಿ ಸಾಗುತ್ತಿದ್ದ ಜೀವನನೌಕೆಯನ್ನು ಮುಳುಗಿಸಿದ ಉರುಳಿ ಸಾಗುತ್ತಿದ್ದ ಜೀವನನೌಕೆಯನ್ನು ಮುಳುಗಿಸಿದ ಒಂದ ವಜ್ರಾವಕರವೇ ಪೂರ್ಣಾಹುತಿ! ಅರ್ಥಾತ್ ಇದು ಜೀವನದ ಪೂರ್ಣಾಹುತಿ! ಅಲ್ಲೂ ಸದಾ ವಿಜಯನಗರದ ಭವ್ಯತೆಗೆಂದೆ ಜೀವನವನ್ನು ವಿಸಾಲರಿಸಿ, ಜದಕ್ಕಾಗಿ ತಪಿಸಿ—ಅನಂತಭೋಗನಿಧಿಯಾದ ಸಾಮ್ರಾಜ್ಯವನ್ನು ಧಾರೆಯೆರೆದು, ವಿಜಯನದ ದ ಶ್ರೀಯನ್ನು ಗಾಗಿಯೇ ಹಗಲಿರುಳು ದುಡಿದು—ಕೊನೆಗೆ ಕಪಟಗಳ, ದುಷ್ಟರ ಮಾಯಾವಿಗಳ—ವಂಚನೆಗೆರವಾಗಿ, ಅಲ್ಲಲ್ಲ ತನ್ನ ಒಡಹುಟ್ಟಿದ ತಮ್ಮನ ಅವಿವೇಕಕ್ಕೆ ಬಲಿಬಿದ್ದ "ಮಲ್ಲಕಾರ್ಜುನ ದೊರೆಯ ಹಿರಿಯ ಮಗನಾದ ರಾಜಶೇಖರ" ನ ಹೇಯನಾವ ಕೊಲೆಯ ರುದ್ರ ಪೂರ್ಣಾಹುತಿಯಿದು! ಅಶಾಂತಿಪರ್ವದಲ್ಲಿ ಕಟ್ಟಟ್ಟ ಉಳಿದಿದು—ಪೂರ್ಣಾಹುತಿಯಲ್ಲಿ ಅಸ್ತಮಿಸಿತು! ಕುಹಕಿಯಾದ ಈಶ್ವರನಾಯಕನ ಕಣ್ಣಿನ ನೆನಪಲ್ಲಿ ಒಲಿದ ಅಶಾಂತಿಯು ಮೊಗ್ಗು—ಪೂರ್ಣಾಹುತಿಯಲ್ಲಿ ಅರಳಿ ಪೆದ್ದರಾಯನನ್ನು ಅವಿವೇಕ ಗರ್ತದಲ್ಲಿ ತಳ್ಳಿದಂತೆ, ಎಂದೆಂದೂ ಮಾಯದ ಕಲಂಕವೊಂದನ್ನು ವಿಜಯನಗರ ಚರಿತ್ರೆಗೆ ಲೇಪಿಸಿತು.

ಪ್ರಜಾಕಂಟಕನಾಗಿದ್ದ 'ವಿರೂಪಾಕ್ಷ'ನ ಕೊಲೆಯನ್ನು ರಾಜಶೇಖರನೆಸಗಿ, ತದ್ವೈರಿತ್ವಾದ್ಯಂದ ರಾಜ್ಯವನ್ನೊಲ್ಲನೆ ತನ್ನ ತಮ್ಮನಾದ ಪೆದ್ದರಾಯನಿಗೀವನು. ಮೊದಮೊದಲ ಪೆದ್ದರಾಯ ವಿನೀತನಾಗಿ ಅಣ್ಣನನ್ನೇ ಸಾರ್ವಭೌಮ ಪದವಿಗೆಂದು ಬೇಡಿದರೆ, ರಾಜಶೇಖರ ತನ್ನ ಜೀವನ ನಿರ್ಣಯರೂಪಣೆಯಿಂದ ಪೆದ್ದರಾಯನನ್ನು ಒಪ್ಪಿಸುವನು. ಆದರೆ, ಅದೇಕೋ ಏನೋ, ಅರಮನೆಯಲ್ಲಿ ಒಂದು ಬಗೆಯ ಕ್ರಾಂತಿಯೆದ್ದಿತು. ಮೊದಲೊಮ್ಮೆ ರತ್ನಾಂಬಿಕೆಯನ್ನು ಮೆಚ್ಚಿದ್ದ ಪೆದ್ದರಾಯ ಕೊನೆಗೆ, ದಂಡನಾಯಕ ನರಸಿಂಹನಾಯಕರ ಮಗಳಾದ ಚಂದ್ರಗಿರಿಯ ತುಳುವ ನರಸಿಂಹನಾಯಕನ ಕೈಹಿಡಿದು ಬಾಳ ಹೊಂದೀವಿಗೆಯನ್ನು ಬೆಳಗಬಯಸಿದ—ಕಮಲಾಂಬಿಕೆಯನ್ನು ನಂಬಿಕೆಯಳೆಸುವನು. ಈ ತನ್ನ ನುನೋಧರ್ಮದ ಮುಂದೆ, ಈಶ್ವರನಾಯಕನೆಂಬ ಕುಹಕಿ ಮಂತ್ರೋಪದೇಶಕನಿಂದ ಅಸೂಯೆಯ ಮಸಿಯಿಸಿಕೊಂಡ ಪೆದ್ದರಾಯ, ತನ್ನ ಅಣ್ಣನನ್ನು—ಪಿತೃಸಮಾನನಾ ಸಾಮ್ರಾಜ್ಯತ್ಯಾಗಿಯನ್ನು—ಪ್ರತಿಭಟಿಸಿ ಸಾಗುವನು. ಈ ಸಾ ಅಶಾಂತಿಯ ಪರ್ವವನ್ನು ಆಗಲೇ ಮೊಳಗಿದರೆ, ರತ್ನಾಂಬಿಕೆ ರಾಜ ಕುತಂತ್ರೋಪಾಯದನ್ನು ಎತ್ತಿತ್ತಲೂ ಪ್ರತಿಧ್ವನಿಗೊಡಿಸುವಳು ಮುಂ ಪೆದ್ದರಾಯ ಒಂದು ಬಗೆಯ ಭಾವವೈತಾ ಸಕ್ಕೆರವಾಗಿ ಅಣ್ಣ ಳಿಸಿತು, ಅಭಿಮಾನದ ನೆನಹನ್ನು ಹೃದಯದಲ್ಲರಳಿಸಿ ನೆಲ್ಲಾರಿ ಯಿಂದಾ ನೆನಹನ್ನು ಕವಿದರೆ, ಮಧ್ಯದಲ್ಲೇ ಈಶ್ವರನಾಯಕ ನುಳು ಬಂದು, ದಂಡನಾಯಕ ನರಸಿಂಹನಾಯಕ ಹಾಗೂ ರಾಜಶೇಖರನ್ನು ದೂರಿ, ಪೆದ್ದರಾಯನ ಹೃದಯದಲ್ಲಿ ಮೆಲುವಾಗಿ ವಿಷಬಿಂದುಗಳನ್ನು ಕೊಡಿಪ್ಪು ಸಾಗುವನು. ಪೆದ್ದರಾಯ ಕಪಟದ ಮುಖ

ನೂತುಗಳಿಗೆ ಮೂರುವೋಗಿ, —ರಾಜಶೇಖರ ಒಳಗಿಂದೊಳಗೆ. ಕಮಲಾಂಬಿಕೆಯು ವರಣಾರ್ಥಿಗಿ ಯತ್ನಿಸಿ—ರಾಜ್ಯವನ್ನು ಅಪಹರಿಸುವ ಯೋಚನೆಯಲ್ಲಿರುವನೆಂಬುದನ್ನು ಮನಗಂಡು,—ಒಮ್ಮಿಂದೊಮ್ಮೆಗೆ ವಿಜಯನಗರದಲ್ಲಿ ಅಗಬಾರದ, ನೆನಪಲಾಗದ-ಹಿಂದೆಂದೂ ನಡೆಯದ—ವಿಜಯನಗರದ ಜೀವಿತಕ್ಕೇ ಶರ್ವಾತ್ಮನಾ ಒಪ್ಪದ—ಎಗೆಯಲ್ಲಿ "ಮುಸಲ್ಮಾನ ದ್ವೇಷಿ" ಯಾಗಿ ಪರಿವರ್ತನೆಗೊಂಡು, ಅದೇ ನೆಲೆಯಲ್ಲಿ "ಸಿಂಹಾಸನಾರೋಹಣಕಾಲ-ಪ್ರಾಣಾ-ಉಪಪ್ರಯುಕ್ತದ್ವೇಷನಿರಾಸನಪ್ರಯತ್ನ"— ಸಂಧಿಯಲ್ಲಿ ಅಣ್ಣನನ್ನು ಪ್ರತಿಭಟಿಸಿ ಕೊನೆಗೆ "ವಿರೂಪಾಕ್ಷನ ಸಂಬಂಧಿಕರಾಂದರೆ"—ಕೆಚ್ಚೀರೆ—ಕಪಟ ಈಶ್ವರನಾಯಕನ ಕಾಪಟ್ಯದಿಂದಲೆ ತನ್ನ ಪತಿಯ ಜೀವನಕ್ಕೂ ಪೂರ್ಣಾಹುತಿಯನ್ನಿತ್ತು ತಣಿವನು. ಅಶಾಂತಿಪರ್ವದಲ್ಲಿ ಗರ್ಭದಲ್ಲಿ ಇರುತ್ತಿದ್ದ ಮುಕರ ಈ ಪ್ರಕಾರವಾಗಿ ಹೊರಬರಬಹುದೆಂದು ಯಾರೂ ನೆನೆದಿರಲಾರರು! ಹೆಚ್ಚೀರೆ ದುಷ್ಟನಾದ ಈಶ್ವರನಾಯಕ-ವಿವೇಕಿಯಾದ ಪೆದ್ದರಾಯ, ಈ ಬಗೆಯ ಕಾಳರಾತ್ರಿಯನ್ನು ತಂದೊಡ್ಡುವರೆಂದು ಯಾರು ನೆನೆದಿದ್ದರು!— ಈ ಎರಡು ರುದ್ರಾಧ್ಯಾಯಗಳ ಹೊಂದಿಕೆಯು ಹೊಲಿಗೆಯು ಭವ್ಯತೆಯು ನೆರವನ್ನು ಸಾಧಿಸಲು ಯತ್ನಿಸಿದ. "ರತ್ನಾಂಬಿಕೆ"—ಅಬ್ಬಬ್ಬ ಆಕೆ ನಾರೀಹೃದಯ ಸಂಪನ್ನಳಲ್ಲ! ಕಾಮುಪಿಪಾಸೆಯಿಂದ ಆತುರಿಸಿ ಬಂದು-ರಾಜಶೇಖರನನ್ನು ಕೆಣಕಿ-ಕೆಣಕಿ-ಪರ್ಸಿಡಿಯಾಗಿ ಸಾಗಿದಳು ಮಾತ್ರವಲ್ಲ, ಘೋರವಿಷವನ್ನು ಚೆಲ್ಲಿ ರಾಜಶೇಖರನ ಹೃದಯದ ಮುಂದೆ "ಮಾಯಾ" ಯಾಗಿ ಸುಳಿದಳು. "ಅಶಾಂತಿಪರ್ವ"ದಲ್ಲಿ ಗೂಢವಾಗಿ ಹರಿದುಬಂದ ರತ್ನಾಂಬಿಕೆ—ಪೂರ್ಣಾಹುತಿಯಲ್ಲಿ ತನ್ನ ಕಾರ್ಯಭಾಗವನ್ನು ಪೂರ್ಣವಾಗಿಸಿದಳು ಆಕೆ ನಡೆದ ನಡೆಯುದು ರುದ್ರಗಂಭೀರ. ಆಕೆಯು ಹೃದಯದಲ್ಲಡಗಿದ್ದ ಮಹಾವಿಷವನ್ನು ತೋರಲು "ನಾಟಕಕಾರರು" ಸಮೆದ ಯೋಜನೆಯದು ಅನ್ಯಾದೃಶವಿವೆ! ಅದುದರಿಂದ ಈ ಪೂರ್ಣಾಹುತಿಯಲ್ಲಿ ರತ್ನಾಂಬಿಕೆಯ ಪಾತ್ರವೂ ಬಲು ಹಿರಿದಿದೆ. ಆದರೆ ಎಲ್ಲವೂ ಗುಪ್ತವಾಗಿ ಸಾಗಿದೆ! ರತ್ನಾಂಬಿಕೆ ಈ ಪ್ರಕಾರವಾಗಿ ಪೂರ್ಣಾಹುತಿಯಲ್ಲಿ ಕಾಣಬಂದದ್ದು— ಈ ಬಗೆಯ ನಾಟಕರಚನೆಯಲ್ಲೊಂದು ನೂತನತೆಯ ಸುಳಿವನ್ನಿತ್ತಿದೆಯೆಂದರೆ ಉತ್ತಮ ನಾಟಕಕಾರರ ಮುಂದೆ ವೃಥಾಸ್ತುತಿಯಾಗದು!

ನಾಟಕೀಯತೆಯು ಬಾಧುರವಾದ ಸನ್ನಿವೇಶಕೌಶಲ್ಯದಲ್ಲಿ, ವಸ್ತುವನ್ನು ತುಂಬಿಕೊಂಡು ಬಂದುನಿಂತ ಪೂರ್ಣಾಹುತಿಯಿದು ಅವಶ್ಯಂಭಾವೀ ಪಾತ್ರಗಳ ಮಧುರಾವತರಣದಲ್ಲಿ ಒಪ್ಪಗೊಂಡು, ರಂಗವನ್ನು ದಿಗಪಬಹುದೆಂಬಲ್ಲಿ ಮಾತ್ರವಿಲ್ಲ; ಅಂತೆಯೆ ಓದುಗನನ್ನು ಪದೇ ಪದೇ ಎದೆಮುಟ್ಟಿ ಹಾದುಹೋಗುವೆಂಬಲ್ಲೂ ಸಂಶಯವೇಕೆ? ಕೇವಲ ಏಳು ದೃಶ್ಯಗಳಲ್ಲಿ—ರೂಪುದೋರಿದ ಈ ತರುಣರೂಪಕ—ಅಶಾಂತಿಪರ್ವದ ಏರು ದೃಶ್ಯಗಳ ಭದ್ರವಾದ ತಳಹದಿಯಲ್ಲಿ ತಲೆಯೆತ್ತಿ ನಿಂತು, ಒಂದು ಮಾರ್ಮಿಕೇತಿವೃತ್ತದ ಸೌಧವನ್ನು ರೂಪಿಸಿದೆ. ಈ ರೂಪಣೆಗನುವಾಗುವಂತೆ, ಬಹು ಜಾಗರೂಕತೆಯಿಂದ, ರಸಾನುಗುಣ ಸಾಂದರ್ಭಿಕ ಘಟನಾನಿವೇದನ ರೂಪದಲ್ಲಿ "ನಿರೂಪಕ" ನ ಬಂದಿದ್ದಾನೆ ಶ್ರೀ ಬೆಟಗೇರಿಯವರ ನಾಟಕತಂತ್ರಕ್ಕು ಗಂಭೀರವಾಗಿ ಅಷ್ಟೇ ಗಂಭೀರವಾಗಿ. ಪ್ರತಿಯೊಂದೆಡೆ-ಬೇಕಾದೆಡೆ ನಿರೂಪನನ್ನು ಯೋಜಿಸಿ ಸಾಗಿ ಬರುತ್ತಾನೆ. ಅವನ ನಡೆಯುಲ್ಲೊಂದು ಅಥವುಂಟು; ಗಾಂಭೀರ್ಯವುಂಟು!! ಹೆಚ್ಚೀರೆ. ಇತಿಹಾಸದ ಪೂರ್ಣತೆ ನಿಲುವಿನಲ್ಲಿ ಕಥಾಂತರಗಳನ್ನು ಕೆಕೆಯು ನೆಲುವಾಗಿ ಸಾರಿದ "ಶೃಂಖಲಾ" ಸ್ತ್ರೀವನವನದು. ಅದುದರಿಂದಲೆ ಈ ನಿರೂಪ ಈ ಪೂರ್ಣಾಹುತಿಯು "ರಕ್ತಾಂಬಿಕೆ"

ನಾಟಕವಿದರಲ್ಲಿ ಒಂದೇ ಒಂದು ಸ್ತ್ರೀಪಾತ್ರ! ವಿಶ್ವಸೃಷ್ಟಿಯ ಪುರುಷಪಾತ್ರಗಳು! ನಾಟಕಕಾರರು ಒಂದು ವಿಶಾಲವಾದ ಕಾಲವಾರ್ಧಿಕವಾದ ರಕ್ತಾಂಬಿಕೆಯಿಂದ ಈ ನಾಟಕದಲ್ಲಿ ಪೂರ್ಣಾಹುತಿಯನ್ನು "ರಕ್ತಾಂಬಿಕೆ" ಯ ಪಾತ್ರವನ್ನು ಸೆಳೆದಿದ್ದಾರೆ ಈ ಸೆಳೆತದಲ್ಲಿಲ್ಲಿಂದು ಬಗೆಯ ವೈಶಿಷ್ಟ್ಯವಿದೆ ಈ ಪಾತ್ರಕ್ಕೆ ಪೂರ್ಣ ಚಿತ್ರಣಸಾಧ್ಯವಾದ, ಕೈವಶವೈಕ ಸುಸೇವ್ಯವಾದ ಒಂದು ಬಗೆಯ ಹೃದಯವಿದೆ ನಿಲುವು, ಅಂತರ್ನಿಗೂಢವಾದ ಪಾತ್ರಪರಿಪೋಷಣೆಯ ಕೌಶಲ್ಯ, "ಏನೋ, ಏಕೋ" ಎಂಬೊಂದು ಬಗೆಯ ತಲ್ಲಣದ ತನಿಶೋಕಲತೆಯ ಗೂಢವಾದ ನಿಲುವನ್ನು— ರುದ್ರನಾಟಕದ ಜೀವಿತದ ವಿವಿಧತೆಗಳ ಹೋರಾಟವನ್ನು—ಗಂಭೀರವಾಗಿ ರೂಪಿಸಿದ್ದಾರೆ ಲೇಖಕರು "ರಕ್ತಾಂಬಿಕೆ"ಯ ಭಾವ ವಿಸ್ತಾರದಲ್ಲಿ! ಇನ್ನೊಂದೆಡೆ ಪೆದ್ದರಾಯನ ಅತ್ಯವಶ್ಯಕ ಚಿತ್ತದ ಕುಲುಗಾಟವನ್ನು, ಸಾಂದರ್ಭಿಕ ಘನ್ನತೆಯ ಪ್ರಭಾವದಿಂದ ಬಿಂಬಿಸಿದರೆ, ಮತ್ತೊಂದೆಡೆ ನಿರ್ಚಿತ್ತ, ನಿರ್ಮಕಚಿತ್ತದಲ್ಲಣ ಕುಮಿಗಿದ್ದ ಪ್ರೇಕ್ಷಕನ ಭವ್ಯತೆಯನ್ನು ಪದನಿಯೇರಿಸಿ-ಆ ಪದನಿಯ ಮುಂದೆ ಅಂತರ್ನಿಗೂಢವಾಗಿ ನೆಲೆಯಾಗಿರುವ ಹೃದಯಗಾಂಭೀರ್ಯವನ್ನು ವೀರರಕ್ತದ ತುಂಬೆಗಳನ್ನು—ವೈರಾಗ್ಯ ಮನೋಭೂಮಿಯಲ್ಲಿ ಅಚ್ಚೆತ್ತಿ "ರಾಜಶೇಖರ"ನ ಪೂರ್ಣರೂಪವನ್ನು ತೋರಿ ಲೇಖಕರು ಅನ್ಯಾದೃಶವಾದೊಂದು ಬಗೆಯಲ್ಲಿ ಪಾತ್ರಚಿತ್ರಪೋಷಣೆಯನ್ನೆಸಗಿದ್ದಾರೆ. ಉಳಿದ ಪಾತ್ರಗಳ ನಾಟಕದ ಕಂಬ ಹರಿಯಾತುವ ಬಗೆಯಲ್ಲಿ ರೂಪಿತಗಳಾವ-ಅಲ್ಲಲ್ಲಿ ಬಂದರೂ- ಪೂರ್ಣ ರೂಪಿಗಳಾಗಿ ನಿಂತ ಪಾತ್ರಗಳೆಂದರೆ, ನಾಟಕಕಾರರು ಪಾತ್ರಪೋಷಣೆಯ ನಿಲುವಿನಲ್ಲಿ ಸಾಗಿದ ಗತಿಯನ್ನು ಆದರಿಸಲೇಬೇಕಾಗಿದೆ!

"ಸನ್ನಿವೇಶಾವತರಣ!"

ಮೊದಲ ಸನ್ನಿವೇಶವು—ಕೃಷ್ಣಪಕ್ಷದ ದಶಮಿಯ ರಾತ್ರಿಯ ಗಂಭೀರಮಯ ದೃಶ್ಯ! ಆ ರಾತ್ರಿಯಲ್ಲಿ ಶಾಂತಿಕುಟೀರದ (ರಾಜಶೇಖರನ ವಾಸಸ್ಥಳ) ಅಕ್ಕರಕ್ಕದ ಕೋಟೆಗಳಲ್ಲಿ ಒಕ್ಕಲಿಗರ ಉಲ್ಲಾಸಗೀತಗಳು ಮೊಳಗಿದರೆ, ಅದರ ಮುಂದೆಯೆ ನಾಯಿಗಳ ಬೊಗಳಾಟ, ಗೂಗೆಗಳ ಕೂಗು, ನರಿಗಳ ಕಿರಿಚಾಟವು ತಲೆದೋರಿ, ಶಾಂತಿಕುಟೀರದ ಮುಂದೆ ದೊಡ್ಡದೊಂದು ರುದ್ರಾಧ್ಯಾಯವನ್ನು ತೆರೆದಿಟ್ಟಂತೆ ಕಾಣಿಸುವುದು. ಅರಮನೆಯಲ್ಲಿ ಪೆದ್ದರಾಯನ ಪಟ್ಟಾಭಿಷೇಕದ ಸಂಭ್ರಮವು ಸಿದ್ಧತೆಯ ಮುಂದೆ ನೆಲೆನಿಂತಿರುವಾಗ, ಇತ್ತ ಪರಿಸ್ಥಿತಿಯ ಭೀಕರತೆಯಲ್ಲ ರಾಜಶೇಖರ ಭಕ್ತಿಪರವಶನಾಗಿ

"ಕೂಡಲ ಸಂಗನುದೇವನ" ಸ್ತುತಿರೂಪವಾದ ಬಸವೇಶ್ವರನ ವಚನಗಳನ್ನು ಹಾಡಿ, ಭಕ್ತಿಯ ಹೊನಲಲ್ಲಿ ಜೀವಿತವನ್ನು ಹಾಯಾಗಿ ಉರುಳಿಬಿಡುವನು. ಅವನು ಹಾಡಿದ "ಬೆಳೆಯದ ಭೂವಿಯ ಲೊಂದು ಪ್ರಳಯದ ಕಸ ಹುಟ್ಟಿ ತಿಳಿಯಲೀಯದು:—ಎಚ್ಚರಲೀಯದು....." ಈ ಮಾತು ಎಷ್ಟು ಗಂಭೀರವಿದೆ. ಆ ಕಗ್ಗತ್ತಲೆಯಲ್ಲಿ, ಮನುಷ್ಯಸಂಚಾರವು ಸಾಗಬಾರದ ಆ ರಾತ್ರಿಯಲ್ಲಿ ಅಲ್ಲಿಗೆ 'ರತ್ನಾಂಬಿಕೆ' ಪಿಸರುಂಜೂಡೆ ನೂಗಿ ಬರುತ್ತಾಳೆ ರಾಜಶೇಖರನ ಮುಂದೆ 'ಅಶಾಂತಿಪರ್ವ'ದಲ್ಲಿ ದ್ರೌಪದೀರಹಿತವಾಗಿ ಉರುಳಿಹೋದ ಕಾಮುಬಾಲಕಿಯು ನುಡಿಯೆತ್ತಿ, ಬಾಯಿಗೆ ಬಂದಂತೆ ಬೇಸುತ್ತಾಳೆ. ಅಲ್ಲಲ್ಲ ಕಾತುತ್ತಾಳೆ. ಛೆ, ಅಲ್ಲ ಆ ಶಾಂತಿಯು ಮಾಧುರ್ಯವಲ್ಲಿ ವಿಷವೆರಚಿ-ವಿಕಾರಚಿಯಾಗಿ ಸಾಗತ್ತಾಳೆ ಅಕೆ ರಾಜಶೇಖರನನ್ನು ತನ್ನನ್ನು ನೋಡಲು ಕೇಳಿ ಕೇಳಿ ಬಳಲುತ್ತಾಳೆ. ಸಾಮ್ರಾಜ್ಯತ್ಯಾಗಿ, ನೈರಾಗ್ಯಮೂರ್ತಿ ರಾಜಶೇಖರ ವಿಚಲಿತನಾಗುವೆನೆ? ಅಶಾಂತಿಪರ್ವದಲ್ಲಿ ರಾಜಶೇಖರನಲ್ಲಿ ಜುಗುಪ್ಸೆ ತಾಳಿದ ರತ್ನಾಂಬಿಕೆ, ಇಲ್ಲೀಗ ಪ್ರೇಮಯಾಚನೆಗೆಂದು ಕೈಬೀಡಿ ಬರವಳಿದು ನಿರಾಶೆಳಾದಾಗ—ಉದ್ವಿಗ್ನಳಾಗಿ ಅತಿವ "ರಾಜಶೇಖರ, ಬರಿ. ಕಣ್ಣು ಕಿವಿಗಳನ್ನು ಮುಚ್ಚಿ ಕುಳಿತರೆ ಏನಾದಂತಾಯಿತು? ಈ ರತ್ನಾಂಬಿಕೆಯ ಮುಖವನ್ನು ನೋಡದಿರಬೇಕಾದರೆ.....ಅಕೆಯ ಪಸಾತುಗಳನ್ನು ಕೇಳದಿರಬೇಕಾದರೆ.....ನಿನ್ನ ದೇಹವೆಲ್ಲವನ್ನೂ ಮುಳ್ಳಕೊಳ್ಳಬೇಕಾಗುವುದು.....ರತ್ನ ಒಲಿದೆ ಅಲಂಕಾರವಾಗಬಹುದು. ಮುನಿದರೆ ಕಾಲಕೂಟವಾಗಬಹುದು!" ಈ ಮಾತುಗಳ ಮುಂದೆ ನಡೆಯಲಿರುವ ರಾಜಶೇಖರನ ಹೇಯಹತ್ಯೆಗೊಂದು ಮೊದಲೇ ಸಮೆದಿರಿಸಿದ ಪಾಚಾಂಗ! ನಾಟಕದ ಹೃದಯದ ಗತಿಯಲ್ಲಿ ತಲೆಯೆತ್ತಿನಿತ ಒಂದು ಸುಳಿಯಿದು! ಎರಡನೆಯ ದೃಶ್ಯದಲ್ಲಿ "ಪರಸಿಂಹನಾಯಕರು ಮತ್ತು ನಾರಾಯಣದಂಡಿತರು" ರಾಜ್ಯಕ್ಷೇಮಕ್ಕಾಗಿ ಅಶಿಸಿ ಆಡಿದ ಮಾತು, ಕನಲಾಂಬಿಕೆಯನ್ನು ಪೆದ್ದರಾಯನಿಂದುಳಿಸಿ ಹೃದಯಶುದ್ಧಿಯನ್ನು ಹೊಂದಲು ನೆನೆದ ಆಶಾಗೋಪುರ—ಇವೆಲ್ಲವೂ ಈಶ್ವರನಾಯಕನಿಂದ ವಿಪರೀತ ಮನೋಭಾವನೆಗೆರವಾಗಿ ನಿಲ್ಲುವ, ರಾಜಶೇಖರನಲ್ಲಿ ಪೆದ್ದರಾಯನು ಕಾಲಾಸ್ಯವನ್ನು ಎರೆದೀಯುವ ಬಗೆಯಲ್ಲಿ ಉರುಳಿನಿಲ್ಲುವ ಒಂದು ಅತಿ ಗತನವಾದ ಅರ್ಥಪೂರ್ಣವಾದ ದೃಶ್ಯವಿದು! ಈಶ್ವರನಾಯಕನಂತಹ ಖಳನೆ ಈ ದೃಶ್ಯದಲ್ಲಿತಲೆಗಾಣಿಸಿ, ಬಹು ಸಂಭಾವಿತನಂತೆ ಸಾಗುವಾಗ ಓದುಗನ ಮುಂದೆ "ಅಶಾಂತಿಪರ್ವ" ವು ಮಿಂಚಿ ಮರೆಯಾಗುವುದು ಎದೆಯಲ್ಲಿ ಏನುದೋ ಒಂದು ಬಗೆಯ ನೋವನ್ನುಂಟು ಮಾಡುವುದು! ಇನ್ನು ಮೂರನೆಯ ದೃಶ್ಯ. ಪೆದ್ದರಾಯನು ತಾನು ಎಳೆದ ಕಮಲಾಂಬಿಕೆಯ ವಿವಾಹವಿಚಾರಕ್ಕಾಗಿ ನೊಂದು ಅನ್ಯಾಯವನ್ನು ನೆನೆಯುತ್ತಿರುವಾಗಲೇ, ಈಶ್ವರನಾಯಕನು ಬಂದು "ರಾಜಶೇಖರ ಕಮಲಾಂಬಿಕೆಯ ವಿವಾಹಯತ್ನದಲ್ಲಿರುವನೆಂದೂ, ಸಾಮ್ರಾಜ್ಯವನ್ನು ಬಯಸುವನೆಂದೂ" ಅತಿ ಚಾಣಾಕ್ಷತನದಿಂದ ಕೆದಕಿ "ಜಾತಾತ್ ಸಜಾಯತೇ ಕಾವಃ, ಹೆಣ್ಣಿನ ದೆಸ್ಸನ್ನ ಹತ್ತಿದವನು, ಹೊನ್ನು ಮಣ್ಣುಗಳಿಗೂ ಆಶೆಪಟ್ಟಿರೆ ಅದರಲ್ಲಿ ಆಶ್ಚರ್ಯವೇನು?" ಎಂಬ ನುಡಿಯೆತ್ತಿ ಪೆದ್ದರಾಯನ ಕ್ರೋಧದ ಜ್ವಾಲೋಜ್ವಾಲಗಳ ಗತಿಯನ್ನೇರಿಸುವನು. ಎರಡನೆಯ ದೃಶ್ಯದಲ್ಲಿ ವಾಸ್ತವಸನ್ನಿವೇಶದಲ್ಲಿ ಮೂಡಿದ ಭಾವಗತಿಯನ್ನು ವೈಪರೀತ್ಯದ ಸುಳಿಯಲ್ಲಿ ಅದ್ದಿ—ತಾಲ್ಕನೆಯ ಸನ್ನಿವೇಶದಲ್ಲಿ ಪೆದ್ದರಾಯನಿಂದಲೇ ರಾಜಶೇಖರನನ್ನು ಅವಮಾನಗೊಳಿಸಿ, ತಾನೇ (ರಾಜಶೇಖರನು ಅಕ್ಷೇಪವೆತ್ತಿದರೂ) ಮಂತ್ರಿಪದವಿಗೇರಿ ಶಸ್ತ್ರನಾಗುವನು. ದೃಶ್ಯವಿದು ಪೆದ್ದರಾಯನು ರಾಜಶೇಖರನಿಂದಲೇ ಅಭಿಷಿಕ್ತನಾಗುವ ಸಂಧಿಯನ್ನೂ, ಪೆದ್ದರಾಯನಿಂದಲೇ ರಾಜಶೇಖರ ದೊರವೆಸೆಯುಲ್ಪಡುವ ರೀತಿಯನ್ನೂ ಒರೆದೋರಿ ಒಂದು ಬಗೆಯ ವಿಪ್ಲವಕ್ಕೆ. ಮೊದಲನೆಯ ದೃಶ್ಯದಲ್ಲಿ ಹೊಗೆಕಂಡ ಅಪಶಕುನದ ಅಗ್ನಿಗೆ ಪ್ರಭಾವವೀಯುವುದು. ಮತ್ತೊಮ್ಮೆ ಉಜ್ವಲವಾಗಿ ಐದನೆಯ ದೃಶ್ಯ (ರತ್ನಾಂಬಿಕೆಯ ಆಗಮನದಿಂದಲೇ ಕಳೆಯೇರಿಗುಡುಗುವುದು. ರಾಜಶೇಖರ "ಹುಂ-ಗುಟ್ಟುಪ್ಪ— "ಮನದೊಳಂದಿನ ಪಯಣದೆಣೆಯಂರಿತು ದೀವಟಗ,ಅನುಗೊಳಿಸು ಜೆನ್ನಾಗಿ ಮಿನುಗುವೊಲು ದೀವಿಗೆಯ"....ಎಂಬ ನುಡಿಮುತ್ತುಗಳನ್ನಿಳಿಸುವ ಕಾಲದಲ್ಲೇ ರತ್ನಾಂಬಿಕೆ ಸೇವಾವೃತ್ತಿಯನ್ನು ಬಯಸಿ ಮತ್ತೊಮ್ಮೆ ಕುಟೀರಕ್ಕೆ ಕಾಲಿರಿಸಿ, ತನ್ನ ವಿಷಪೂರಿತ ಹೃದಯದ ನಿಲುವನ್ನು ಮುಚ್ಚಟಲೆಳಸುತ್ತಾಳೆ. ರಾಜಶೇಖರ ಈ ನೆವದಿಂದ ಬಂದ ರತ್ನಾಂಬಿಕೆಯನ್ನು ದೂರವಿರಿಸಿ ಆಡುವ ಬಗೆಯದು ಅವನ ಮಹೋನ್ನತ ಹೃದಯವನ್ನು ಸಾರುತ್ತಿದೆ; ರತ್ನಾಂಬಿಕೆಯೇನು ಸಾಮಾನ್ಯವಾದ ಹೆಣ್ಣೆ? ಮುನಿದೆದ್ದ ರಕ್ಕಸಿಯಾಕೆ! ಈ ದೃಶ್ಯದಲ್ಲಿ ಕಾಣಬರುವ ಸಂಭಾಷಣೆಗಳೆಲ್ಲವೂ ಉದ್ಧರಣಕ್ಕೆ ಉತ್ತಮ ಉದಾಹರಣೆಗಳಾದಂತೆ—ರತ್ನಾಂಬಿಕೆಯಾಡಿದ "ರಾಜಶೇಖರಾ, ನೀನು ನನ್ನ ಬದುಕಿನ ಗುರಿಯು ಕನ್ನಡಿಯನ್ನು ಒಡೆದು ಹಾಳುಮಾಡಿದೆ; ಇನ್ನು.....ನಿನ್ನ ಗುರಿಯ ಕನ್ನಡಿಯನ್ನು ನೀನು ಕಾಪಾಡಿಕೊಳ್ಳುವೆಯಂತೆ!" ಈ ಮಾತೂ, ರಾಜಶೇಖರನಾಡಿದ "ಅಮ್ಮಾ, ನಾನೇನೂ ವಿಶ್ವಾಮಿತ್ರನಂತಹ ಮಹಾ ತಪಸ್ವಿಯಲ್ಲ; ನೀವು ಮೇನಕೆಯಾಗಿ ಬಂದು ನನ್ನ ತಪಸ್ಸನ್ನು ಕೆಡಿಸಬೇಕಾಗಿಲ್ಲ" ಈ ಮಾತೂ ಗಾಂಭೀರ್ಯದ ಪರಮಾವಧಿಯ ನೆಲೆಯಲ್ಲವೆ? ಮಹಾಕಾಳಿಯಾಗಿ ಅಲ್ಲಿಂದ ಸಾಗಿದ ರತ್ನಾಂಬಿಕೆ, ರಾಜಶೇಖರನ ಕೊಲೆಯ ಕಾರ್ಯದಲ್ಲಿ ಅವಕಾಶವನ್ನು ನುಗ್ಗೊಳಿಸಿದಳೆಂಬುದೀನಾಟಕದಲ್ಲಿ ಪ್ರತ್ಯಕ್ಷತಃ ಸೂಚಿಸಲ್ಪಡದಿದ್ದರೂ, ನಾಟಕಹೃದಯದ ಧ್ವನಿಯದು, ತನ್ನ ಹಿರಿಮೆಯನ್ನು ವ್ಯಕ್ತಗೊಳಿಸದುಳಿಯಲಿಲ್ಲ! ಎಷ್ಟು ಶ್ರೇಷ್ಠಹೃದಯವ್ಯಕ್ತಿಯಾಡಿದ ಆರೋಪಣವಿದು! ಆರನೆಯ ದೃಶ್ಯವು ಪೆದ್ದರಾಯು "ಮುಸಲ್ಮಾನ" ವಿರೋಧಿಯಾಗಿ ವರ್ತಿಸುತ್ತಾಗ, ಅದನ್ನು ಸಮಜಾಯಿಸಲು ಯತ್ನಿಸಿ-ವಿಫಲ ಮನೋಭಾವದಿಂದ ಸಾಗುವಂತಾದ ರಾಜಶೇಖರನ ದುರ್ದಶೆಯ ಹೃದಯದ ಮಿಡಿತದ ನೆರಳು!—ಪೆದ್ದರಾಯು ತನ್ನ ಅಣ್ಣನ ತನ್ನನ್ನು ಪ್ರತಿಭಟಿಸುವನೆಂಬ ವಿಚಾರವರಿತು ಈಶ್ವರನಾಯಕನು ತನ್ನನ್ನರ್ಪಿಸಿ—ತನ್ನ ಅಣ್ಣನ ಕೊಲೆಗೆ ಮನನೀಡಿ "ವಿಜಯನಗರ ಭವ್ಯೇತಿಹಾಸವನ್ನೇ ಕಪ್ಪೆರಚಿ, ಧೂಳಿರಚಿ ಮಲಿನತೆಯಲ್ಲಿರಗೊಟ್ಟು ಬಿಟ್ಟನು." ಈಶ್ವರನಾಯಕನಿಗೂ ಅದೇ ಬೇಕಾದುದು. ಅವನ ಕತ್ತಿ ದಾರಿಯಲ್ಲಿ ಮುಳ್ಳಾಗಿದ್ದ ರಾಜಶೇಖರನನ್ನು ಮುಗಿಸಿ

ಮುಂದಾದ. ಪೆದ್ದರಾಯ "ಮುರಿದು ಚೆಲ್ಲುವುದೇ ಮುಳ್ಳಿಗೆ ತಕ್ಕ ಶಿಕ್ಷೆ"ಯೆಂದು ರಾಜಶೇಖರನ ನಾಶಕ್ಕಾಗಿ ಪೀಠಿಕೆ ಹಾಕಿದರೆ— ಈಶ್ವರನಾಯಕ "ತಮ್ಮ ವಂತು ಸಾಮಿರದಲ್ಲಿಯು ಒಂದು ಪತ್ಯಪ್ರಭುಗಳೆ!" ಎಂದೆಂದು ಆ ಪೀಠಿಕೆಯನ್ನು ಮುಂದೊತ್ತುವನು. ಮುಂದಿನ ಹಾಗೂ ಕೊನೆಯ ದೃಶ್ಯವೇ "ವಾಲ್ಯವಂತ ಪಕ್ಕತದ ಉತ್ತರಕ್ಕಿರುವ ಭೂತಗಳ ಕೊಳ್ಳ"ದಲ್ಲಿ ಈಶ್ವರನಾಯಕ, ಶಾಂತಿಕುಟೀರದಿಂದ ಮುಸಲ್ಮಾನರಿಂದಲೆ ರಾಜಶೇಖರನನ್ನು ಹಿಡಿತರಿಸಿ, ವಾರಕ್ಕೆ ಕಟ್ಟಿಸಿ, ಛೀಗಳೆದು,—ರಾಜಶೇಖರನ ಕೆಚ್ಚೆದೆಯು, ಗಂಡೆದೆಯು, ನೊವೆದೆಯು ಉರಿಯನ್ನು ಪ್ರಜ್ವಲಗೊಳಿಸಿ—ಕೊನೆಗೆ-"ಜಕ್ಕಣ್ಣ-ದುರಗಪ್ಪರಿಂದಲೆ" ಸುರಗಿಯನ್ನು, ಬಾಧಿತ ರಾಜಶೇಖರನೆದೆಯಲ್ಲಿ-ಳಿಯಬಿಡುವನು. ಈ ದೃಶ್ಯದಲ್ಲಿ ನಾವು ಈಶ್ವರನಾಯಕನ ದುರುದ್ವೇಷಪೂರ್ಣ ವಿಷಹೃದಯವನ್ನು, ರಾಜಶೇಖರನ ಅಪ್ರತಿಮ ಧೀರ ಮನೋಭಾವವನ್ನು ಕಾಣಬಹುದು. ಈ ಸಂದರ್ಭದಲ್ಲೇ ನಾವೊಮ್ಮೆ ಯಾವುದೋ ಒಂದೆಡೆಯಲ್ಲಿ ಗುಪ್ತವಾಗಿ ನೆಲೆನಿಂತ ರತ್ನಾಂಬಿಕೆಯ ದುರ್ಹೃದಯವನ್ನೂ ಕಾಣಲು ವರಿಯುವು! — ಅಂತೂ ಅಶಾಂತಿಪರ್ವದ ಹೊಗೆ—ಪೂರ್ಣಾಹುತಿಯಲ್ಲಿ ತುಂಬಿ ಉರಿದೆದ್ದಿತು!

ಇರಲಿ! ಅಶಾಂತಿಪರ್ವದಲ್ಲಿ ಪೂರ್ಣವಾಗಿ ಕಾಣಿಸಿಕೊಳ್ಳದ ರತ್ನಾಂಬಿಕೆ ಇಲ್ಲಿ ಪೂರ್ಣವಾಗಿ ತಲೆದೋರಿರುವುದು ಬಹು ಮಾರ್ಮಿಕವಿದೆ. ಅಶಾಂತಿಪರ್ವದ ಒಂದೇ ಒಂದು ದೃಷ್ಟಿಯಿಂದ ರತ್ನಾಂಬಿಕೆ ತುಸು ಕುಸಿದಿದ್ದರೂ, ಇಲ್ಲಿ ಅಕೆ ಆ ದೋಷವನ್ನಳಿಸುವುದಕೊಡನೆ ನಾಟಕದ ಜೀವನಾಡಿಯನ್ನೆ ಮಿಗಿಲಾಗಿ ಮಾಟಿದ್ದಾಳೆ! ಕತೃಲಾಂಬಿಕೆಯನ್ನು ಈ "ಪೂರ್ಣಾಹುತಿ"ಯಲ್ಲಿ ತೋರಗೊಡದೆ ರತ್ನಾಂಬಿಕೆಯನ್ನು ವಾತ್ರ ಸೆಳೆದುದು ನಾಟಕಕಾರರ ಅದ್ಭುತ ಯೋಜನಾ ಸಾಮರ್ಥ್ಯವಾಗಿದೆ.

ಕೊನೆಯ ಮೊದಲೊಂದು ಮಾತು:—

ನಾಟಕಕಾರರು ಸಂಭಾಷಣೆಗಳಿಂದಲೆ, ಚಿಲ್ಲರ ರಸಾನುಗುಣ ಮಧುರವಾದ ಯೋಜನೆಯಿಂದಲೆ ನಾಟಕವನ್ನು ಬೆಳಗಿ—ಸಾಮಾನ್ಯ ಭಿಕವಾದ ಮಾತುಗಳ ನೆಲೆಯನ್ನು ಪಾತ್ರಗಳಲ್ಲಿ ತುಂಬಿರುವ ರೀತಿಯದು ಸರ್ವಾತ್ಮನಾ ಪ್ರಶಂಸನೀಯವಿದೆ! ಇದೂ ಒಂದು ನಾಟಕದ ಹಿರಿಮೆಯು ನಿಜ!

ರುಚಿರವಾದ ಇತಿವೃತ್ತ; ಸಂದರ್ಭಾನುಗುಣವಾಗಿ ನೆಲೆನಿಂತ ಶಾಂತಿಯ ವಚನನಿಚಯ. ಪರಿಸ್ಥಿತಿ ಪ್ರಜೋದಕವಾದ ಹಿನ್ನೆಲೆ! ಕಥಾಗತಿಯನ್ನು ಸೂಕ್ಷ್ಮವಾಗಿ ಹರಿಬೋಡಿಸುವ ನಿರೂಪಣೆಯ ಕಥಾಪ್ರಸ್ತಾವನೆ; ಉಬ್ಬುದ್ಧ ಭಾವಾವರಣಿಯಿಂದ ಬೆಳಗಿನಿಂತ ಮಧುರ ಪದವಿನ್ಯಾಸ, ಅಂತರಂಗವಾದ ಸೆಳೆತನವನ್ನು ಸಾಧಿಸಿನಿಂತ ದೃಶ್ಯ ಯೋಜನೆ—ಇವು ಶ್ರೀ. ಬೆಟಗೇರಿ ಅವರ ತುಂಬಿದೆಯು ಅನುಭವ ಸುಸನ್ನ ಲೇಖನಿಯು ವಿರುಗು! ಒಂದುತ್ತಮ ರಾಜ್ಯದಲ್ಲಿ ಬಂದೊದಗಿದ ದುರಂತವನ್ನು ಚಾರಿತ್ರಿಕವಾದ ಹಿನ್ನೆಲೆಯಲ್ಲಿ ರೂಪಿಸಿ, ಓದುಗಪನ್ನು ಸೆರೆಹಿಡಿವ ಬಗೆಯಲ್ಲಿ ರೂಪಿಸಿದ ಈ ನಾಟಕವನ್ನು ಹಾರ್ದಿಕ ಸ್ವಾಗತಕ್ಕೆರ್ಹವಾಗಿಸುವುದಕ್ಕೂ ಒಂದು ಯೋಗಬೇಕೆಂದು ವಾತಿದು ಅತಿಶಯೋಕ್ತಿಯ ಸೆರೆಯಲ್ಲಡಗದು.

ನಿಮ್ಮ ಚಿಕ್ಕಮಕ್ಕಳ

ಆರೋಗ್ಯವೇ

ಇಲ್ಲಿದೆ.

ನೌನೆಹಾಲ್!

ಕೆಳಗೆ ಕಾಣಿಸಿದ, ಚಿಕ್ಕಮಕ್ಕಳ ರೋಗಗಳಿಗೆ ಉಪಯುಕ್ತ:

ಅಶಕ್ತತೆ, ಚಿಕ್ಕಮಕ್ಕಳಿ ಪ್ಲೆಯ ಮುಟ್ಟು ದೋಷ, ಒಸಡೆಗಳ ಬಾವು, ರೋಗ ಗುಣ ಮುಖವಾದ ನಂತರ ಬರುವ ಅಶಕ್ತತೆ. ಸೆಲಿಗ್ರಾ, ಸಂಧಿವಾತ, ಬಾಯಿಬರುವಿಕೆ, ಶೀತಬಾಧೆ.

ಚಿಕ್ಕಮಕ್ಕಳಿಗೆ ಉತ್ತಮವಾದ ಪೌಷ್ಟಿಕ! ಹಸಿವನ್ನು ಹೆಚ್ಚಿಸಿ ಹಲ್ಲುಗಳು ಸುಗಮವಾಗಿ ಬರುವಂತೆ ಮಾಡುತ್ತದೆ. ರೋಗ ಬಾರದಂತೆ ಪ್ರತಿನಿರೋಧ ಶಕ್ತಿಯನ್ನು ಹೆಚ್ಚಿಸುತ್ತದೆ.

ಡಿಮೆದರ್ಸ್

ಪವಾಬಾನಾ (ಟ್ರಸ್ಟ್), ದಿಲ್ಲಿ

ಕೆಳಗೆ ಕಾಣಿಸಿದ, ಚಿಕ್ಕಮಕ್ಕಳ ರೋಗಗಳಿಗೆ ಉಪಯುಕ್ತ:

ಮಲಬದ್ಧತೆ, ಅಜೀರ್ಣ, ಹೊಟ್ಟೆಯಲ್ಲಿ ವಾಯುವಿಕಾರ, ಝಾಡಿಸುವುದು, ಅನಾಂಶ ಹಲ್ಲುಬರುವಿಕೆ. ಯಕೃತ್ ಮತ್ತು ಪ್ಲೀಹದ ಬಾವು, ನಿದ್ರಾಭಂಗ, ಬಾಯಿಬರುವುದು. ಜೊಲ್ಲು ಸೋರುವುದು. ಜಂತು ಮತ್ತು ಕ್ರಿಮಿದೋಷ, ಅತಿ ನೀರಡಿಕೆ.

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು

ಸಂಗೀತಕಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?
ನಿಜವಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ
'ಅನಂತಶಯನ' ಇವರ ಈ ಗೀತಸಂಕಲನಗಳಿವೆ:

ಮುದ್ದಣನ ಮೂಸು (ಶಿಶುಭಾವದ ಗೀತಗಳು)	೧—೧೪—೦
ಒಡನಾಡಿ (ನಲ್ವಾಡುಗಳು)	೧—೦—೦
ವಿರಹಿಣಿ (ಶತ್ಪ್ರರೂಪಕ ಗೀತಗಳು)	೧—೪—೦
ಶಾರದುಣ್ಣೆವೆ (ವಿವಿಧ ಭಾವಗೀತಗಳು)	೨—೦—೦

ಕಾವ್ಯಪ್ರೇಮಿಗಳೂ ಸಂಗೀತಕಾರರೂ ಶೀಘ್ರಗಳಿಸ್ಸು ಒಮ್ಮೆ ಓದಿ ನೋಡಬೇಕು.
ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ, ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Belgeri at the Jayanti Office, Dharwar

ಸಂಪುಟ
೧೯

ಸಂಚಿಕೆ
೧೧

ಏಪ್ರಿಲ್

ಹೊಸದಿನಕ್ಕೆ:

ಏನ ತಂದಿರುವೆ ನೀನು ಹೊಸದಿನವೆ,
ಏತಕಂದು ಬಂದೆ?
ಮಾನವತೆಯ ಭೇರಿಯನು ಮೊಳಗಿಸುವ
ತ್ರಾಣ ನಿನ್ನೊಳಿಹುದೆ?

ಕಳೆದ ದಿನಗಳಾ ಬಳಿಯೊಳೆ ನೀನೂ
ಇಳೆಗಿಳಿತಂದಿಹೆಯೋ...
ತಿಳಿವು-ಕಲೆಯ ಬೆಳೆಗಳನೇನಾದರು
ಸಲಿಸಲು ಬಂದಿಹೆಯೊ?
ನೀನೂ ಹಳದಿನ—ದಂತಿರೆ ಈ ಕ್ಷಣ
ಸಾಗು ಶರಣು ಎಂದೆ....
ಏನ ತಂದಿರುವೆ ನೀನು ಹೊಸದಿನವೆ
ಏತಕಂದು ಬಂದೆ?

ಜಗವ ಮುಸುಕಿರುವ ಹಗೆಯ ಹುಸಿ-ಕವಡ
ತೆನೆವ ಬಲುಹು ಇಹುದೆ?
ನ್ಯಾಗಗಳನೂ ಹಿಂದೊಗೆವ ವಿಜ್ಞಾನವರ
ತಿದ್ದುವ ಜ್ಞಾನವಿಹುದೆ?
ಇದ್ದರೆ ಮನೆವು—ಇರದಿರೆ, ದನಿವು
ಏತಕಾಗಿ ಬಂದೆ?
ಏನ ತಂದಿರುವೆ ನೀನು ಹೊಸದಿನವೆ,
ಏತಕಂದು ಬಂದೆ?



ಈ ಸಂಚಿಕೆಯಲ್ಲಿ :

ಧಾರವಾಡದಲ್ಲಿಯೂ ಕೆಂಪುಜಾವುಟ ಬಂತು! (ಸಂಪಾದಕೀಯ)
ಸಂಪಾದಕರು ೪೦೧

ನಾಡನಡೆ (ಸಾಂದರ್ಭಿಕ ಟಿಪ್ಪಣಿ)
'ಕಾಲಭೈರವ' ೪೦೩

ರಂಗಿ (ಸಣ್ಣಕಥೆ)
ಶ್ರೀಮತಿ ಎಂ ಕೆ. ಜಯಲಕ್ಷ್ಮಿ, ಕರಗಡ ೪೦೫

ಕನ್ನಡದ ವಿನೋದವಿಲಾಸ (ಆಕಾಶವಾಣಿ ಭಾಷಣ)
ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೪೧೨

ಪುಷ್ಪಾವಮೂರ್ತಿರು (ವಿನೋದಾತ್ಮಕ ಶ್ರವ್ಯರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮರು, ಧಾರವಾಡ ೪೧೫

ಕಾವ್ಯೇಷು ನಾಟಕಂ ರಮ್ಯಂ (ಸಂಸ್ಕೃತ ನಾಟಕ ವಿಮರ್ಶೆ)
ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೨೨

ಜಿಟಿ-ಜಿಟಿ ಮಳೆ (ಕವನ)
ಶ್ರೀ. ಎಸ್ ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ ೪೨೫

ಹಕ್ಕಿ ನಕ್ಕಿತು; ಸೊಕ್ಕು ಅಡಗಿತು! (ಐತಿಹಾಸಿಕ ಲಘುಕಥೆ)
ಶ್ರೀಮತಿ 'ಕಲಾ' ಮಲ್ಲೇಶ್ವರಂ — ಬೆಂಗಳೂರು ೪೨೬

ಗುಂಡೂಭಾವಾವಾನ ಪಾತು (ಭಾಷಿತದಲ್ಲಿಯ ಹಬ್ಬಗಳು)
ಶ್ರೀ. ಪಿ. ವಿ. ಗುಡಿ, ನ್ಯೂದಿಲ್ಲಿ ೪೩೦

ಜೋಡು (ಲಘುಪ್ರಬಂಧ)
ಶ್ರೀ ಎಸ್. ಎಸ್. ಗದಗಕರ ಬಿ. ಎ. ಧಾರವಾಡ ೪೩೪

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಆರ್. ಜಿ. ಕುಲಕರ್ಣಿ ಬಿ. ಎ. (ಆನರ್ಸ್) ಶ್ರೀ. ಕೆ. ಎಸ್. ಶರ್ಮಾ ೪೩೬

ಸಾದರ ಸ್ವೀಕಾರ (ಹೊದಿಕೆಯ ೩ನೆಯ ಪುಟದಲ್ಲಿ)

ಜಯಂತಿ

ಸಂಪುಟ ೧೯ ಸಂಚಿಕೆ ೧೧

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಭಾರತದಲ್ಲಿಯೂ ಕೆಂಪು ಬಾವುಟ ಬಂತು!

ಕಮ್ಯುನಿಸ್ಟುಮತಿಗೆ ಭಾರತದಲ್ಲಿ ಎಡೆ ದೊರೆಯಲಿಕ್ಕಿಲ್ಲವೆಂದು ಇದುವರೆಗೂ ಬಹು ಜನರ ನಿರೀಕ್ಷೆಯಿತ್ತು. ಹಾಗೆ ಬಹುಜನ ಭಾರತೀಯ ರಾಜಕಾರಣಿಗಳು, ಬಲವಾದ ಪ್ರಚಾರವನ್ನೂ ಮಾಡುತ್ತಿದ್ದರು. ಆದರೆ ಕಳೆದ ವರ್ಷೇರಡು ವರ್ಷಗಳಲ್ಲಿ ನಡೆದ ಚೀನಾ ಭಾರತ ಮೈತ್ರಿ, ರಷ್ಯಾ–ಭಾರತ ಮೈತ್ರಿ ಇವು ಆ ಪ್ರಚಾರವನ್ನು ದುರ್ಬಲಗೊಳಿಸಿಬಿಟ್ಟಿವೆ.

ಲೌಕಿಕಬುದ್ಧಿಯ ಜನರು ಮತ್ತು ದಾರಿದ್ರ್ಯ ಇವು ಹೆಚ್ಚು ಇರುವಲ್ಲಿ, ಎಲ್ಲ ರಾಜಕೀಯ ತತ್ತ್ವಗಳಿಗಿಂತ ಕಮ್ಯುನಿಸ್ಮೇ ಹೆಚ್ಚು ಪುರಸ್ಕೃತವಾಗಿ ನಿಲ್ಲುವುದು. ಪ್ರಜಾ ಪ್ರಭುತ್ವದ ಪ್ರಭಾವ ಇಂದು ಲೋಕದಲ್ಲಿ ಹೆಚ್ಚ ತೊಡಗಿದುದರಿಂದ, ಅದರ ಅಂತಿಮಸಿದ್ಧಿಯಾದ ಕಮ್ಯುನಿಸ್ಮಂ ಇಂದು ಲೋಕದ ಬಹುಜನರಿಂದ ಸ್ವೀಕೃತವಾಗಿದೆ.

ಕಮ್ಯುನಿಸ್ಟು ಪುರಸ್ಕರ್ತರು ಇಂದು ಅಮೇರಿಕೆಯಂತಹ ಬಂಡವಾಳ ಪ್ರಧಾನ ರಾಷ್ಟ್ರದಲ್ಲಿಯೂ ಇಲ್ಲದೆ ಇಲ್ಲ. ಎಲ್ಲ ಕಡೆಗಳಲ್ಲಿಯಂತೆ ಭಾರತದಲ್ಲಿಯೂ ಅಂತಹ ಜನರು ಇದ್ದಾರೆ. ಕಾಂಗ್ರೆಸ್ಸಿನ ಸ್ವಾತಂತ್ರ್ಯಯುದ್ಧದ ಕಾಲದಲ್ಲಿ ಇವರು ಕೆಲವು ಕಾಲ ಅನುಕೂಲರಾಗಿಯೂ ಕೆಲವು ಕಾಲ ಪ್ರತಿಕೂಲರಾಗಿಯು ವರ್ತಿಸಿದುದುಂಟು.

ಭಾರತೀಯ ಸ್ವಾತಂತ್ರ್ಯಯುದ್ಧದ ಕೊನೆಯ ಹೋರಾಟದ ಕಾಲದಲ್ಲಿ, ಇಲ್ಲಿಯ ಕಮ್ಯುನಿಸ್ಟರು ದೇಶದ್ರೋಹಿಗಳಂತೆ ತಮ್ಮ ಚಟುವಟಿಕೆ ನಡೆಯಿಸಿದುದುಂಟು. ಸ್ವಾತಂತ್ರ್ಯೋತ್ತರ ಭಾರತದಲ್ಲಿಯೂ ಕಮ್ಯುನಿಸ್ಟರು ತಮ್ಮ ಅಸ್ವಾಪಂಗಿಕವಾದ—ದೇಶಕ್ಕೆ ಕಲ್ಯಾಣಕಾರಿಯಾದ—ಚಟುವಟಿಕೆಗಳನ್ನು ನಡೆಯಿಸಿ, ದೇಶದ್ರೋಹಿಗಳ ಮಾಲಿಕೆಯಲ್ಲಿ ಸೇರಿಕೊಂಡಿದ್ದರು.

ಕಾಂಗ್ರೆಸಿಗರಲ್ಲಿ ಹೋರಾಟದ ಕಾಲದಂತಹ ತ್ಯಾಗವೃತ್ತಿ ಅವಿಚ್ಛಿನ್ನವಾಗಿ ಉಳಿದುಕೊಂಡಿದ್ದರೆ, ಭಾರತದಲ್ಲಿ ಮಿಕ್ಕ ಯಾವ ರಾಜಕೀಯ ತತ್ತ್ವಕ್ಕೂ ತಲೆಯೆತ್ತಲು ಅವಕಾಶವಿರಲಿಲ್ಲ. ಆದರೆ ಆತಳಿತದ ಅಧಿಕಾರವನ್ನು ವಹಿಸಿಕೊಂಡಂದಿನಿಂದ, ಅವರಲ್ಲಿ ಬೆಳೆಯುತ್ತಿರುವ ಭೋಗವೃತ್ತಿ—ಸ್ವಾರ್ಥಗಳು, ಜನತೆಯಲ್ಲಿ ಕಳವಳವನ್ನು ಹೆಚ್ಚಿಸಿಬಿಟ್ಟಿವೆ. ಅಧಿಕಾರ ಲಾಲಸೆಯ ಮೂಲಕ ಕಾಂಗ್ರೆಸಿಗರಲ್ಲಿಯೇ ಅನೈಕ್ಯ ತಲೆದೋರಿ, ಕಾಂಗ್ರೆಸ್ ಸಂಸ್ಥೆಯ ಸಂಘಟನಾಶಕ್ತಿಯನ್ನು ದುರ್ಬಲಗೊಳಿಸಿಬಿಟ್ಟಿವೆ.

ವರ್ತಮಾನದ ಅಡಳಿತದಿಂದ ಜನತೆಗೆ ಯೋಗಕ್ಷೇಮದ ಸರಿಯಾದ ಅವಕಾಶ ದೊರೆಯದೆ ಹೋದರೆ, ಆ ಅಡಳಿತದ ಬಗೆಗೆ ಜನತೆಯಲ್ಲಿ ಅಸಂತುಷ್ಟಿ–ಅತೃಪ್ತಿಗಳು ಉಂಟಾಗುವುದು ಅಸ್ವಾಭಾವಿಕವೇನೂ ಅಲ್ಲ. ಆಗ ಜನತೆ ಇದ್ದುದನ್ನು ಉಪೇಕ್ಷಿಸಿ, ಇನ್ನೊಂದು ಬಗೆಯ ಆಡಳಿತ ಕ್ರಮವನ್ನು ಅಪೇಕ್ಷಿಸುವುದು. ಇಂದಿನ ರಾಜಕೀಯ ಪದ್ಧತಿಗಳಲ್ಲಿ ಮಿಕ್ಕೆಲ್ಲ ಪುಗಳಿಗಿಂತ ಕಮ್ಯುನಿಸ್ಮು ಜನತೆಯ ಮನಸ್ಸನ್ನು ಹೆಚ್ಚಾಗಿ ಆಕರ್ಷಿಸುವಂತಹದಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಇದುವರೆಗಿನ ಆ ತತ್ತ್ವದ ಇತಿಹಾಸವೇ ಇದರ ಸತ್ಯತೆಗೆ ಸಾಕ್ಷಿಯೆನಿಸುವಂತಿದೆ.

ಅಧ್ಯಾತ್ಮಪ್ರಧಾನ ಭಾರತದಲ್ಲಿ ಕಮ್ಯುನಿಸ್ಮಿಗೆ ಸ್ವಾಗತ ದೊರೆಯಲಾರದೆಂದು ಬಹುಜನರು ಭಾವಿಸಿದ್ದರು. ಆದರೆ ಅಧ್ಯಾತ್ಮವು ನೆಲೆಯಿಲ್ಲದೇಕಾದುದು ಅರ್ಥದ ನೆಲೆಯೆಂಬುದರ ವಿಚಾರವನ್ನು ಅವರು ಮಾಡಿದಂತಿಲ್ಲ. ಲೌಕಿಕ ಜೀವನದಲ್ಲಿ ಶಾಂತಿತೃಪ್ತಿಗಳಿಲ್ಲದೆ ಹೋದರೆ, ಅಧ್ಯಾತ್ಮಕ್ಕೆ ಅಲ್ಲಿ ಎಡೆ ದೊರೆಯಲೇ ಬಂದು ಐಹಿಕ ಸುಖಸಾಧನೆಗಾಗಿಯೆ ಮೊದಲು ಹೋರಾಟವನ್ನು ಹೂಡಬೇಕಾಗುವುದು.

ಬ್ರಿಟಿಷರ ದೀರ್ಘಾವಧಿಯ ದುರಾಡಳಿತ, ಭಾರತದಲ್ಲಿ ಬಡತನವನ್ನು ಹೆಚ್ಚಿಸಿಬಿಟ್ಟಿದೆ. ಬಡತನದೊಂದಿಗೆ ಅವರು ಅಜ್ಞಾನವನ್ನೂ ಬೆಳೆಸಿದುದರಿಂದ, ಅಂದಿನ ಬಡತನ ನಿಷ್ಕ್ರಿಯವಾಗಿತ್ತು; ನಿರ್ವಿಣ್ಣವಾಗಿತ್ತು. ಮಹಾತ್ಮರ ರಾಜಕೀಯ ತತ್ತ್ವ ಆ ಬಡತನಕ್ಕೆ ಜ್ಞಾನದ ಬೆಳಕನ್ನು ತೋರಿ ಚೈತನ್ಯಶಕ್ತಿಯನ್ನಿತ್ತು; ಅದನ್ನು ಕ್ರಿಯೆಯ ಕಡೆಗೆ ತಿರುಗಿಸಿತು. ಮಹಾತ್ಮರ ರಾಜಕೀಯ ತತ್ತ್ವದ ಸಮಾಧಿಯಾಗದೆ ಹೋಗಿದ್ದರೆ, ಭಾರತದಲ್ಲಿ ಕಮ್ಯುನಿಸ್ಟುಮಿಗೆ ಕಣ್ಣು ಬಿಡಲು ಅವಕಾಶವೇ ಇರಲಿಲ್ಲ. ಆದರೆ ಮಹಾತ್ಮರ ಹೆಸರನ್ನು ಹೇಳುತ್ತ ಅವರ ತತ್ತ್ವಜ್ಞಾನದ ಅಧಾತಭೂತವು ಅವತರಿಸಿ, ವೈಯಕ್ತಿಕ ಸ್ವಾರ್ಥಸಾಧಕರ ಸಂಖ್ಯೆಯನ್ನು ಹೆಚ್ಚಿಸಿದುದರಿಂದ. ಜನತೆಯಿಂದು ಕಂಗೆಟ್ಟುಹೋಗಿದೆ; ತನ್ನ ಸುಖ-ಶಾಂತಿಗಾಗಿ ಯಾವ ದಾರಿಯನ್ನು ಹಿಡಿಯಬೇಕೆಂದು ಅದು ತಡಕಾಡುತ್ತಲಿದೆ. ಇಂತಹ ಜನತೆ ಕಮ್ಯುನಿಸ್ಟುಮಿನ ಕೂಗಿಗೆ ಓಗೊಟ್ಟು ಅವರ ಬೆನ್ನು ಹತ್ತುತ್ತಿದ್ದರೆ, ಅದೊಂದು ಬೆರಗಿನ ಸಂಗತಿಯೇನೂ ಅಲ್ಲ.

ಈ ಸಲ ಜನಾವಳಿಯಲ್ಲಿ ಕಾಂಗ್ರೆಸ್ಸು ಕೇರಳವನ್ನು ಕಳೆದುಕೊಂಡಿತು. ಮುಂಬಯಿನಗರದಲ್ಲಿಯೂ ತನ್ನ ಪ್ರಭಾವ ಕಡಿಮೆಯಾಗಿದೆಯೆಂಬುದನ್ನು ಸಿದ್ಧಮಾಡಿಕೊಟ್ಟಿತು. ಮಿಕ್ಕ ರಾಜ್ಯಗಳಲ್ಲಿಯೂ ಕಮ್ಯುನಿಸ್ಟುಂ ಚೆಂಚುಸ್ವಭೀಶನಾಡಿದೆಯೆಂಬುದನ್ನು ಲೋಕಕ್ಕೆ ತೋರಿಸಿಕೊಟ್ಟಿತು. ಖಾಸ, ಇದಕ್ಕೆ ಕಾರಣ ಕಾಂಗ್ರೆಸ್ ಸಂಸ್ಥೆಯಲ್ಲ; ಅದರ ರಾಜಕೀಯ ಧ್ಯೇಯವೂ ಅಲ್ಲ. ಯಾವ ತತ್ತ್ವದ ಕೆಂಗೂ ಒಳಗಾಗದೆ, ಸಂಧಿಸಾಧಕತನದಿಂದ ಕಾಂಗ್ರೆಸ್ ಸಂಸ್ಥೆಯಲ್ಲಿ ನುಗ್ಗಿ, ಜನಹಿತಕ್ಕಿಂತಲೂ ಸ್ವಾರ್ಥವನ್ನು ಹೆಬ್ಬಾಗಿ ಸಾಧಿಸಿದ ಕಾಂಗ್ರೆಸಿನ ಬಹುಜನ ವ್ಯಕ್ತಿಗಳು ಇದಕ್ಕೆ ಕಾರಣರು. ಭಾರತದಲ್ಲಿ ಕಮ್ಯುನಿಸ್ಟುಮಿನ ಪ್ರಭಾವ ಬೆಳೆಯಲು ಅವಕಾಶ ಮಾಡಿಕೊಟ್ಟವರೆಂದರೆ —ಇದೇ ಈ ಸ್ವಾರ್ಥಿಗಳೆಂದು ಹೇಳಬಹುದು.

ಕೇರಳರಾಜ್ಯ ಭಾರತದ ಪಶ್ಚಿಮಭಾಗದಲ್ಲಿಯ ಒಂದು ಕರಾವಳಿಪ್ರದೇಶ. ಮೊದಲು ದೇಶೀಯ ರಾಜರ ಪ್ರಭುತ್ವದಲ್ಲಿದ್ದ ಪ್ರದೇಶವೇ ಇದರಲ್ಲಿ ಹೆಚ್ಚಾಗಿದೆ. ತಿರುವಾಂಕೂರು ರಾಜರ ಪ್ರಗತಿಪರವಾದ ಆಡಳಿತದ ಮೂಲಕ, ಅಲ್ಲಿಯ ಜನರಲ್ಲಿ ಶಿಕ್ಷಣದ ಪ್ರಚಾರ ಹೆಚ್ಚಾಗಿದೆ. ಗಿಂಕ್ಕೆ ಲಂಚರಷ್ಟು ಸಾಕ್ಷರಿಗಳ ಸಂಖ್ಯೆ ಅಲ್ಲಿ ಇದೆಯೆಂದು ಹೇಳುವರು. ಸ್ವಭಾವತಃ ಅಲ್ಲಿಯ ಜನರು ಬುದ್ಧಿಶಾಲಿಗಳು; ಉದ್ಯೋಗಪ್ರಿಯರು. ನೈಸರ್ಗಿಕ ಕಾರಣದ ಮೂಲಕ ಅಲ್ಲಿ ಸಾಗುಮಾಡಬಹುದಾದ ಭೂಮಿಯ ಪ್ರಮಾಣ ಮಿಕ್ಕ ರಾಜ್ಯಗಳಿಗಿಂತ ತೀರ ಕಡಮೆ. ಆದುದರಿಂದ ಬೇರೆ ಉದ್ಯಮ-ವ್ಯವಸಾಯಗಳಿಂದ ಉಪಜೀವನ ಮಾಡುವವರ ಸಂಖ್ಯೆಯೆ ಅಲ್ಲಿ ಹೆಚ್ಚಾಗಿದೆ.

ಸ್ವಾತಂತ್ರ್ಯೋತ್ತರ ರಾಜಕಾರಣದ ಮೂಲಕ, ಕೇರಳದಲ್ಲಿ ಕಾಂಗ್ರೆಸಿನ ಸೂತ್ರಗಳೆಲ್ಲ, ಅಲ್ಲಿ ಇರುವ ಕೆಲವು ಜನ ಬಂಡವಾಳಗಾರರ ಕೈಗೆ ಸೇರಿಕೊಂಡುವು. ಕಳೆದ ಐದುವರ್ಷದ ಅವಧಿಯಲ್ಲಿ ಬಹುಕಾಲ, ಕೇರಳದ ರಾಜಕೀಯ ಅಧಿಕಾರವು ಕಾಂಗ್ರೆಸಿಗರ ಪ್ರಭಾವಕ್ಕೆ ಒಳಗಾದುದೇ ಆಗಿತ್ತು. ಆದರೆ ಆ ಅವಧಿಯ ಕೊನೆಯ ಭಾಗದಲ್ಲಿಯೇ ಕಾಂಗ್ರೆಸಿನ ಪ್ರಭಾವ ಅಲ್ಲಿ ಕಡಮೆಯಾಗಿ, ಪ್ರಜಾಪ್ರತಿನಿಧ್ಯದ ಆಡಳಿತ ಸುಗಮವಾಗಿ ಸಾಗದೆ ಹೋದುದರಿಂದ, ರಾಷ್ಟ್ರಾಧ್ಯಕ್ಷರೇ ಅಲ್ಲಿಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು.

ಈಗ? ಈಗ ಅಲ್ಲಿ ಅಧ್ಯಕ್ಷರ ಆಡಳಿತವು ಹೋಗಿ ಕಮ್ಯುನಿಸ್ಟು ಮಂತ್ರಿಮಂಡಲ ರೂಪುಗೊಂಡಿದೆ. ಭಾರತದ ಒಂದು ರಾಜ್ಯವಾದ ಕೇರಳದಲ್ಲಿ, ಇನ್ನು ಕಮ್ಯುನಿಸ್ಟು ಪದ್ಧತಿಯ ರಾಜ್ಯಶಾಸನ ನಡೆಯಲಿದೆ. ಇದೊಂದು ವಿಲಕ್ಷಣವಾದ ಪ್ರಯೋಗ. ಏಕೆಂದರೆ ಭಾರತದ ಹೊಸರಾಜ್ಯಘಟನೆಯ ನಿಯಮಗಳಿಗೂ ಕಮ್ಯುನಿಸ್ಟುಮಿಗೂ ಅನೇಕ ಮಾತುಗಳಲ್ಲಿ ಏಕವಾಕ್ಯತೆಯಿಲ್ಲ. ಕೆಲವು ವಿಷಯಗಳಲ್ಲಂತೂ ತೀರ ವಿರೋಧಭಾವನೇ ಇದೆ. ಕೇರಳದ ಕಮ್ಯುನಿಸ್ಟು ಮಂತ್ರಿಮಂಡಲವು, ಭಾರತದ ರಾಜ್ಯಘಟನೆಗಳಿಗೆ ಅವಿರೋಧವಾಗಿ ತನ್ನ ತತ್ತ್ವಕ್ಕನುಗುಣವಾಗಿ ಹೇಗೆ ಆಡಳಿತ ನಡೆಯಿಸಬಲ್ಲದು? ಇನ್ನು ಅದು ಭಾರತದ ರಾಜ್ಯಘಟನೆಯ ಮೇರೆಯನ್ನು ವಿಸ್ತರಿಸಿ ಆಡಳಿತ ಸಾಗಿಸಿದರೆ, ಕೇಂದ್ರ ಸರಕಾರ ಅದರ ನಿಯಮಭಂಗದ ಅಪರಾಧವನ್ನು ಸಹಿಸಿಕೊಂಡಿರುವುದೆಂತು?

ಕೇರಳದ ಕಮ್ಯುನಿಸ್ಟು ಧುರೀಣರು, ಭಾರತದ ರಾಜ್ಯಘಟನೆಯ ನಿಯಮಗಳಿಗೆ ಅವಿರೋಧವೆನಿಸುವಂತೆ ಆಡಳಿತವನ್ನು ಸಾಗಿಸುತ್ತೇವೆ—ಎಂದು ಸಾರಿ ಹೇಳಿದ್ದಾರೆ. ಕೇಂದ್ರ ಸರಕಾರದವರು ಮಿಕ್ಕ ರಾಜ್ಯಸರಕಾರಗಳಂತೆ ಕೇರಳರಾಜ್ಯವನ್ನೂ ನಿಷ್ಪಕ್ಷಪಾತ ದೃಷ್ಟಿಯಿಂದ ನೋಡುವೆವೆಂದು ಮಾತುಕೊಟ್ಟಿದ್ದಾರೆ. ಮಾತಿನಾಡುವುದೇನೋ ಸಹಜ; ಆದರೆ ಪರಸ್ಪರರ ಕೃತಿಯು ಮೆಲೆ ಅವಲಂಬಿಸಿರುತ್ತದೆ ಕೇರಳದ ಕಮ್ಯುನಿಸ್ಟು ಸರಕಾರ ಕಮ್ಯುನಿಸ್ಟರ ಸಹಜ ಗುಣವಾದ ಕಿಡಿಗೇಡಿತನಕ್ಕೆ ಅವಕಾಶ ಹೆಚ್ಚುತ್ತ ಹೋದರೆ, ಕೇಂದ್ರ ಸರಕಾರ ಕೇರಳದ ಕಮ್ಯುನಿಸ್ಟು ರಾಜ್ಯವನ್ನು ಬಿಗುಟುಹಾಕುವುದು ಸಂಭವವೂ ಉಂಟು. ದೇಶ-ಕಾಲ-ಪರಿಸ್ಥಿತಿಯನ್ನು ಚೆನ್ನಾಗಿ ಮನನ ಪರಿಶೀಲಿಸಿಕೊಂಡು, ಉಚಿತವಾದ ವಿಧಾಯಕಕ್ರಮದಲ್ಲಿ ಆಡಳಿತ ನಡೆಸಿದರೆ, ಕೇರಳೀಯ ಕಮ್ಯುನಿಸ್ಟು ಸರಕಾರ, ಮಿಕ್ಕ ರಾಜ್ಯಸರಕಾರಗಳಿಗಿಂತ ಪ್ರಗತಿಪರವಾಗಿಯೂ ಪರಿಣಮಿಸೀತು. ಶುದ್ಧ ಕಮ್ಯುನಿಸ್ಟು ಆಡಳಿತಕ್ರಮವನ್ನು ಒಪ್ಪಿಕೊಳ್ಳುವಂತಹ ಮನೋವೃತ್ತಿ ಇನ್ನುವರೆಗೂ ನಮ್ಮ ನಾಡಿನ ಯಾವ ಭಾಗದಲ್ಲಿಯೂ ಬೆಳೆದಿಲ್ಲ. ಬೆಳೆಯುವ ಸಂಭವವೂ ಇಲ್ಲ. ಕೇರಳದ ಕಮ್ಯುನಿಸ್ಟು ಮಂತ್ರಿಮಂಡಲ ಈ ಸತ್ಯವನ್ನು ಅರಿತುಕೊಂಡು ನಡೆಯುವುದು ಒಳ್ಳೆಯದು.

ವಿಲಂಬಕ್ಕಾಗಿ ಕ್ಷಮಾಯಾಚನೆ

ಏನೇನೋ ಅಕಸ್ಮಿಕ ಅಪತ್ತಿಗಳು ಒದಗಿ ಈಗ ಮೂರು ವಾರಗಳಿಂದಲೂ ಸಂಚಿಕೆ ವಿಲಂಬವಾಗಿ ಹೊರಡುತ್ತಲಿದೆ. ಈ ಸಂಚಿಕೆ ಸಕಾಲದಲ್ಲಿಯೆ ಹೊರಟು ವಾಚಕರ ಕೈಸೇರಬಹುದಾಗಿತ್ತು. ಆದರೆ ಶಿಖರಪ್ರಾಯವಾದ ಆಪತ್ತಿ ಈ ಸಲ ಒದಗಿ, ಸಂಚಿಕೆಯ ಮುದ್ರಣ ಕಾರ್ಯವೇ ನಿಂತುಹೋಯಿತು. ಸಂಪಾದಕರಿಗೆ ಒದಗಿದ ಅನಿರೀಕ್ಷಿತ ಆಪತ್ತಿಯನ್ನು ಸಹಾನುಭೂತಿಯಿಂದ ಕಂಡು, ನಮ್ಮ ವಾಚಕವರ್ಗ ಈ ಸಲದ ವಿಲಂಬವನ್ನೂ ದಯೆಯಿಟ್ಟು ಕ್ಷಮಿಸಬೇಕಾಗಿ ವಿನ್ನಹ.

ನಾಡನಡೆ

ಶ್ರೀಮತಿ ಬೆಟಗೇರಿಯವರ ವಿಯೋಗ

ಜಯಂತಿ ಹುಟ್ಟಿದಂದಿನಿಂದಲೂ ಅದರ ಕಾರ್ಯಕಲಾಪಗಳಲ್ಲಿ–ಕಷ್ಟನಷ್ಟಗಳಲ್ಲಿ–ಪ್ರತ್ಯಕ್ಷವಾಗಿಯೂ ಪರ್ಯಾಯವಾಗಿಯೂ ಸಹಾಯಕರಾಗಿ ಇದ್ದ ಶ್ರೀಮತಿ ಸೌ. ರುಕ್ಮಿಣಿಬಾಯಿ ಬೆಟಗೇರಿಯವರು, ಕಳೆದ ತಿಂಗಳ ೨೪ನೆಯ ದಿನಾಂಕ ರಾತ್ರಿ ದಿವಂಗತರಾದರು. ಕಳೆದ ಏಳಾರು ವರ್ಷಗಳಿಂದಲೂ ಅವರ ಆರೋಗ್ಯ ಸರಿಯಾಗಿ ಇರಲಿಲ್ಲವಾದರೂ, ದೈನ ಅವರನ್ನು ಅಕಾಲ-ನಿರಾಕಾಯ ಸರಿಗೆರೆಮಾಟವನ್ನು ಕೊನೆಯವರೆಗೂ ಅಡಹಚ್ಚಿತು. ಸಂಪಾದಕರ ಕುಟುಂಬದ ಮೇಲೆ ಅವರ ಈ ಅಗಲಿಕೆ ಬಲವಾದ ಆಘಾತವನ್ನು ಹಾಕಿರುವಂತೆ ಜಯಂತಿಯ ಜೀವನದ ಮೇಲೂ ಬಲವಾದ ಪ್ರಹಾರವನ್ನು ಹಾಕಿದಂತೆ ಆಗಿದೆಯೆಂದು ಹೇಳಬಹುದು. ಜಯಂತಿಗೆ ಶ್ರೀಮತಿಯವರ ಪ್ರೀತಿಯ ಸಹಕಾರ ದೊರೆಯುವದೆ ತೊಡಗಿದ ದಿನ. ಇಷ್ಟು ಕಾಲದ ವರೆಗೆ ಈ ಪತ್ರಿಕೆ ನಡೆಯುವುದಕ್ಕೆ ಸಾಧ್ಯವೆ ಇರಲಿಲ್ಲ. ತಾವು ಬಡವರು ತ್ರೈದೆಯಾಗಿ ಬದುಕಲು ಸಿದ್ಧರಾಗಿ, ಜಯಂತಿಯು ಯೋಗ-ಕ್ಷೇಮಗಳನ್ನವರು ನೋಡುತ್ತಿದ್ದರು. ನಗೆಯಾಟದ ಧ್ವನಿಯಲ್ಲಿ, ಜಯಂತಿ ತಮ್ಮ ಹಿರಿಯ ಹೆಣ್ಣುಮಗಳೆಂದು ಅಗಾಗ ಹೇಳುತ್ತಿದ್ದರು. ಅಂತಹ ತಾಯಿಯು ಸಾನ್ನಿಧ್ಯ-ಪ್ರೀತಿಗಳನ್ನು ಕಳೆದುಕೊಂಡುದು ಜಯಂತಿಗೊಂದು ತುಂಬಿಬಾರದಂತಹ ನಷ್ಟ. ಸಂಪಾದಕರ ಸಾಹಿತ್ಯಿಕ ಜೀವನಕ್ಕೆ ಒಂದು ಪ್ರಚೋದಕ ಶಕ್ತಿಯಾಗಿದ್ದ ಅವರ ವಿಯೋಗ, ನಾಡಿಗೂ ಒಂದು ಬಗೆಯ ನಷ್ಟವನ್ನು ಒದಗಿಸಿತೆಂದು ಹೇಳಬಹುದು. ಜಯಂತಿ ಬಿಸಿಯುಸಿರು – ಕಂಬನಿಗಳೊಂದಿಗೆ, ಪರಮಾತ್ಮನಲ್ಲಿ ದಿವಂಗತೆಯವರಿಗೆ ಸದ್ಗತಿಯನ್ನು ಕೋರುವುದು.

ಕೃತಜ್ಞತೆಯ ಸಲುವಳಿ

ನನ್ನ ಪತ್ನೀವಿಯೋಗದ ವಾರ್ತೆಯನ್ನು ಕೇಳಿ ಅನೇಕ ಜನ ನನ್ನ ಇಷ್ಟಮಿತ್ರರು, ನನ್ನ ದುಃಖದಲ್ಲಿ ಸಹಭಾಗಿಗಳಾಗಿ ಸಹಾನುಭೂತಿಯ ಪತ್ರಗಳನ್ನು ಬರೆದಿರುವರು. ಅವರಲ್ಲಿರ ಆತ್ಮೀಯವಜನಗಳು ನನ್ನ ದುಃಖಭಾರವನ್ನು ಸ್ವಲ್ಪಮಟ್ಟಿಗಾದರೂ ಹಗುರುಗೊಳಿಸಿದುದುಂಟು. ಅಂತಹ ಆತ್ಮೀಯ ಜನರಿಗೆಲ್ಲ ಪ್ರತ್ಯೇಕವಾಗಿ ಪತ್ರ ಬರೆದು ನನ್ನ ಕೃತಜ್ಞತೆಗಳನ್ನು ಸಲ್ಲಿಸಲು ಸದ್ಯ ನಾನು ಅಸಮರ್ಥನಾಗಿದ್ದೇನೆ. ಅದುದರಿಂದಲೇ ಈಗ ಜಯಂತಿಯ ಮುಖಾಂತರ ನನ್ನ ಇಷ್ಟಮಿತ್ರರಿಗೆಲ್ಲ ಕೃತಜ್ಞತೆಯನ್ನು ಸಲ್ಲಿಸಲು ಬಯಸುತ್ತೇನೆ.

ಬೆಟಗೇರಿ ಕೃಷ್ಣಶರ್ಮ

ಕನ್ನಡನಾಡಿನಲ್ಲಿ ಧುರೀಣನ ಅಯ್ಕೆ

ಕರ್ನಾಟಕದ ರಾಜಕಾರಣಸೂತ್ರಗಳು ಎಂದಿನಂತೆಯೆ ಕಾಂಗ್ರೆಸಿಗರ ಕಡೆಗೇ ಇವೆ. ಈ ಸಲದ ಚುನಾವಣೆಯಲ್ಲಿಯೂ ಕಾಂಗ್ರೆಸಿನ ಹುರಿಯಾಳುಗಳೇ ಬಹುಸಂಖ್ಯೆಯಲ್ಲಿ ಆಯ್ಕೆಗೊಂಡುದರಿಂದ, ಆ ಸೂತ್ರಗಳು ಅವರ ಕೈಯಲ್ಲಿಯೇ ಉಳಿದುಕೊಂಡಿವೆ.

ಕನ್ನಡ ಕಾಂಗ್ರೆಸ್ ಧುರೀಣರಿಗೆ ಇದುವರೆಗೆ ಇದ್ದ ಪರಿಸ್ಥಿತಿಯೇ ಒಂದು ಬಗೆಯದು; ಇಂದಿನ ಪರಿಸ್ಥಿತಿ ಅದಕ್ಕಿಂತಲೂ ತೀರ ಬೇರೆ ಬಗೆಯದು. ಮುಂಬಯಿ–ಮದ್ರಾಸ–ಹೈದರಾಬಾದಿನ ಕನ್ನಡಿಗರಿಗೆ ಹಿಂದಿನ ಪರಿಸ್ಥಿತಿಯಲ್ಲಿ ಸ್ವಾತಂತ್ರ್ಯವೇ ಇರಲಿಲ್ಲ. ಇನ್ನೊಬ್ಬರ ಕೈಯೆತ್ತಿಕೊಟ್ಟಾಗಲೇ ಒಂದೆರಡು ಅಧಿಕಾರದ ರೊಟ್ಟಿಚೂರು ಇವರಿಗೆ ದೊರೆಯುತ್ತಿದ್ದುವು. ಕೊಡಗು–ಮೈಸೂರುಗಳಲ್ಲಿ ಕಾಂಗ್ರೆಸಿಗರು ಸ್ವತಂತ್ರರಾಗಿದ್ದರಾದರೂ, ಕ್ಷೇತ್ರಸಂಕೋಚದ ಮೂಲಕ ಆ ಸ್ವಾತಂತ್ರ್ಯಕ್ಕೆ ಅಷ್ಟೊಂದು ಬೆಲೆಯಿರಲಿಲ್ಲ. ಇಂದು ನಮ್ಮ ನಾಡು ಸ್ವತಂತ್ರರಾಜ್ಯವಾಗಿ ನಿಂತಿದೆ. ಎಂತಲೆ ನಮ್ಮ ನಾಡಿನ ಧುರೀಣರೂ ಸ್ವತಂತ್ರರಾಗಿ ವರ್ತಿಸಿ ತಮ್ಮ ಹಿತಾಹಿತಗಳನ್ನು ತಾವೇ ವಿಚಾರ ಮಾಡುವಂತಹ ಸುಯೋಗ ಒದಗಿದೆ.

ಈ ಸುಯೋಗದಲ್ಲಿಯೂ ಒಂದು ದುರ್ಯೋಗ ತಲೆಹಾಕಿತ್ತು. ನಮ್ಮ ಧುರೀಣರಲ್ಲಿಯ ಅಧಿಕಾರವ್ಯಾಮೋಹ, ಪರಿಸ್ಥಿತಿಯನ್ನು ವಿಷಮಗೊಳಿಸಿದೆಯೆಂಬ ವರ್ತಮಾನಗಳು ದಿನಕ್ಕೊಂದು ಹೊಂದದಿಂದ ನಾಡಿನಲ್ಲಿ ಹರಡುತ್ತಿದ್ದುವು. ಅಂದು ಹುರಿಯಾಳುತನಕ್ಕೆ ಪ್ರಶಸ್ತಿಯನ್ನು ಕೊಡುವಸಂದರ್ಭದಲ್ಲಿ ನಮ್ಮ ಸಾರ್ವಜನಿಕ ವಾತಾವರಣದ ಬಿಸಿತನ ಏರಿನಿಂತಂತೆ, ಈಗ ಧುರೀಣತನವನ್ನು ಅರಿಸುವ ಸಂದರ್ಭದಲ್ಲಿಯೂ ಬಿಸಿತನ ಏರಿನಿಂತಿದ್ದಿತು. ಸ್ವತಃ ಮುಂದಾಳುಗಳಿಗಿಂತ ಹೆಚ್ಚಾಗಿ ಅವರವರ ಪಕ್ಷದ ಪತ್ರಿಕೆಗಳು ಒಬ್ಬರೊಬ್ಬರ ಗುಣ–ದೋಷಗಳನ್ನು ಉಪ್ಪುಕಾರಹಚ್ಚಿ ಬರೆದು ಬರೆದು, ನಾಡಿಗರ ಕುತೂಹಲವನ್ನು ಕೆರಳಿಸಿಬಿಟ್ಟಿದ್ದುವು.

ಪಕ್ಷೀಯ ಪತ್ರಗಳ ಪ್ರಚಾರದಿಂದ ಒದಗುವ ದೊಡ್ಡ ದುಷ್ಪರಿಣಾಮವೊಂದೆಂದರೆ, ನಮ್ಮ ಜನಸಾಮಾನ್ಯರು ಎಲ್ಲ ಧುರೀಣರನ್ನೂ ಸಂದೇಹ-ಅಶ್ರದ್ಧೆಗಳಿಂದ ನೋಡುವಂತೆ ಮಾಡುವುದು. ಏಕೆಂದರೆ ಒಂದು ಪತ್ರಿಕೆ ಒಬ್ಬ ಧುರೀಣನನ್ನು ಬೈಯುತ್ತಿದ್ದರೆ, ಮತ್ತೊಂದು ಪತ್ರಿಕೆ ಮತ್ತೊಬ್ಬ ಧುರೀಣನನ್ನು ಬೈಯುತ್ತಿರುವುದು. ಎರಡನ್ನೂ ಓದುವ ಜನಸಾಮಾನ್ಯರು, ಇಬ್ಬರನ್ನೂ ಅಧಿಕಾರಲೋಭಿಗಳೆಂದೂ ಸ್ವಾರ್ಥಿಗಳೆಂದೂ ಭಾವಿಸುವರೇ ಹೊರತು, ಯಾರನ್ನೂ ಒಳ್ಳೆಯವರೆಂದು ತಿಳಿದುಕೊಳ್ಳುವುದಿಲ್ಲ. ಇದರಿಂದ ಉಂಟಾಗುವ ಒಂದು ದುಷ್ಪರಿಣಾಮವೆಂದರೆ, ನಿಜವಾಗಿಯೂ ಯೋಗ್ಯತೆಯಿದ್ದ ಒಳ್ಳೆಯ ಧುರೀಣನು ಕೂಡ, ಕೊನೆಯವರೆಗೂ ಜನರ ಉಪೇಕ್ಷೆ—ಅಶ್ರದ್ಧೆಗಳಿಗೆ ಗುರಿಯಾಗಬೇಕಾಗುವುದು. ಪಕ್ಷಭೇದದ ಮೂಲಕ ಹೊಡೆದಾಟವನ್ನು ಎಬ್ಬಿಸುವ ಪತ್ರಿಕೆಗಳು ಈ ಮಾತಿನ ವಿಚಾರವನ್ನು ಮಾಡಬೇಕಾದುದು ಅನಿವಾರ್ಯವಾಗಿದೆ.

ಇಂತಹ ದುರ್ಯೋಗ-ವಿಷಮಸಂದರ್ಭಗಳನ್ನೂ ಮೆಟ್ಟಿ ಹಾಕಿ, ತಮ್ಮ ನಾಡಿನ ರಾಜಕೀಯ ಧುರೀಣನ ಆಯ್ಕೆ ಒದ್ಮುತದಿಂದಲೇ ಆಯ್ದು ಸರ್ವಾನುಮತದ ಸಂಗತಿಯಾಗಿದೆ.

ಶ್ರೀಮಾನ್ ನಿಜಲಿಂಗಪ್ಪನವರಿಗೆ ಧನ್ಯವಾದಗಳು.

ಸ್ವತಂತ್ರ ಕರ್ನಾಟಕದಲ್ಲಿ ಶ್ರೀ. ಎಸ್. ನಿಜಲಿಂಗಪ್ಪನವರು ಧುರೀಣರಾಗಿ ಆಯ್ಕೆಪಡೆದುದು, ಅವರ ಜನಪ್ರೀತಿಯ ಪರೀಕ್ಷೆಯು ಏರಡನೆಯ ಸಂದರ್ಭದಲ್ಲಿ ಇವರಿಗೇ ಮುಖ್ಯಮಂತ್ರಿಯ ಪಟ್ಟ ದೊರೆ. ತುದು ಇವರ ಮೊದಲನೆಯ ವಿಜಯ. ಈಗ ಧುರೀಣರಾಗಿ ಆಯ್ಕೆಗೊಂಡುದು ಎರಡನೆಯ ವಿಜಯ.

ತೆರೆಯ ಮರೆಯ ವರ್ತಮಾನಗಳನ್ನು ನಂಬುವುದಾದರೆ ಶ್ರೀ. ನಿಜಲಿಂಗಪ್ಪನವರಿಗೆ ಕೊನೆಯವರೆಗೂ ಎದುರಾಳಿಯಿದ್ದುದು ಕಂಡು ಬರುವುದು ಆದರೂ ಶ್ರೀ ನಿಜಲಿಂಗಪ್ಪನವರು ಯಶಸ್ವಿಗಳಾದುದು ಎದುರಾಳಿಯ ಅಸಾಮರ್ಥ್ಯವನ್ನೂ ನಿಜಲಿಂಗಪ್ಪನವರ ಸಾಮರ್ಥ್ಯವನ್ನೂ ಪ್ರಕಟಪಡಿಸುವಂತಹದಾಗಿದೆ. ಏರಿಯರ ಕೇಳಿಕೆಯಿಂದಲೋ ಸ್ವತಂತ್ರ ಬುದ್ಧಿಯಿಂದಲೋ ಎದುರಾಳಿ ಕೊನೆಯ ಕ್ಷಣದಲ್ಲಿ ಹಿಂದೆ ಸರಿದು, ಸ್ವಂತದ ಗೌರವವನ್ನೂ ಉಳಿಸಿಕೊಂಡರು; ಸರ್ವಾನುಮತದಿಂದ ಆಯ್ಕೆಯಾಗುವಂತೆ ಸಂದರ್ಭವನ್ನು ಒದಗಿಸಿಕೊಟ್ಟು ಶ್ರೀ. ನಿಜಲಿಂಗಪ್ಪನವರ ಗೌರವವೂ ಹೆಚ್ಚುವಂತೆ ಮಾಡಿದರು. ಇದಕ್ಕಾಗಿ ಮೊದಲು ನಾವು, ಧುರೀಣರ ಆಯ್ಕೆಯಲ್ಲಿ ಮಹತ್ವಾಕಾಂಕ್ಷೆಯಾಗಿ ನಿಂತವರನ್ನು ಮೊದಲು ಅಭಿನಂದಿಸಬೇಕಾಗಿದೆ.

ಶ್ರೀ ನಿಜಲಿಂಗಪ್ಪನವರು ಧುರೀಣರಾಗಿ ಆಯ್ಕೆಗೊಂಡುದು — ಸದ್ಯದ ಪರಿಸ್ಥಿತಿಯಲ್ಲಿ ಎಲ್ಲ ದೃಷ್ಟಿಯಿಂದಲೂ ಉಚಿತವಾದುದು. ಸಂಯುಕ್ತ ಕರ್ನಾಟಕದ ನಿಜವಾದ ಪ್ರತಿನಿಧಿಕ್ಕೆ ಅವರೇ ಪಾತ್ರರು. ಏಕೆಂದರೆ ಶುದ್ಧ ಮೈಸೂರಿಗರು ತಮ್ಮವರೆಗೂ ಹೊರಗಿನ ಕನ್ನಡಿಗರ ಆತ್ಮೀಯತೆಯನ್ನು ಗಳಿಸಿಕೊಂಡಿಲ್ಲ. ಹೊರಗಿನ ಕನ್ನಡಿಗರು ಶುದ್ಧ ಮೈಸೂರಿಗರನ್ನು ತಮ್ಮ ನಿಷ್ಪಕ್ಷಪಾತ ದೃಷ್ಟಿಯಿಂದ ಕಾಣುತ್ತಿಲ್ಲ ಶುದ್ಧ ಮೈಸೂರಿಗರೇ ಧುರೀಣರಾಗಿ ಆಯ್ಕೆ ಪಡೆದಿದ್ದರೆ, ಹೊರಗಿನ ಕನ್ನಡಿಗರ ಬಗೆಗೆ ಪಕ್ಷಪಾತ ಪಂಚವೂ ನಡೆಯಬಹುದಾಗಿತ್ತು. ಈಗ ನಿಜಲಿಂಗಪ್ಪನವರು ಧುರೀಣರಾಗಿ ಬಂದು ಅಂತಹ ಭೀತಿ-ಸಂದೇಹ ಸಂದರ್ಭವನ್ನು ತಪ್ಪಿಸಿದರು.

ಶ್ರೀ. ನಿಜಲಿಂಗಪ್ಪನವರು ಮೊದಲಿನಿಂದಲೂ ಲೋಕಸೇವಾ-ಕಾಂಕ್ಷೆಗಳು. ಬುದ್ಧಿವಂತರೂ ಸಮದೃಷ್ಟಿಯ ಧುರೀಣರೂ ಎನಿಸಿಕೊಂಡವರು. ಇವರ ನಾಯಕತ್ವದಲ್ಲಿ ಹೊಸ ಕನ್ನಡನಾಡು ತನ್ನ ಕುಂದು-ಕೊರತೆಗಳನ್ನೆಲ್ಲ ತುಂಬಿಕೊಳ್ಳುವುದೆಂದು ನಾವೆಲ್ಲರೂ ಆಶಿಸಬಹುದು. ಆದರೆ ಅಸಂತುಷ್ಟ ಧುರೀಣರು ಅವರಿಗೆ ವಿರೋಧಿಗಳಾಗಿ ನಿಲ್ಲದೆ, ದೇಶಹಿತದ ದೃಷ್ಟಿಯನ್ನಿರಿಸಿಕೊಂಡು ಸಹಕರಿಸಬೇಕು ಇಷ್ಟೆ! ಆ ಅಸಂತುಷ್ಟ ಧುರೀಣರು ಸಲ್ಲದ ವಿರೋಧದ ಹೊಗೆಯಬ್ಬಿಸುತ್ತ ಕುಳಿತರೆ, ಶ್ರೀ. ನಿಜಲಿಂಗಪ್ಪನವರಿಗೆ ಆ ಹೊಗೆಯನ್ನು ಅರಿಸುವುದರ ಜೊತೆಯೆ ನೇಳೆಯನ್ನು ಕಳೆಯಬೇಕಾದೀತು. ಈಗಾಗಲೇ ಕರ್ನಾಟಕದ ಪ್ರಗತಿಯ ಎಷ್ಟೋ ಕಾರ್ಯಗಳನ್ನು ಕಣ್ಣೆದುರು ಇರಿಸಿಕೊಂಡುದನ್ನು ಅವರು ತೋರಿಸಿದ್ದಾರೆ. ಅವೆಲ್ಲ ನೆರವೇರಬೇಕಾದರೆ, ಕಾಂಗ್ರೆಸಿಗರಲ್ಲಾದರೂ ಸಾಮರಸ್ಯ-ಸಹಕಾರಗಳು ಬೇಕೆಂಬುದನ್ನು ನಾವು ಮರೆಯಲಾಗದು.

ಅಖಿಲಕರ್ನಾಟಕದ ಜನತೆಯ ಆದರಕ್ಕೆ ಪಾತ್ರರಾದ ಶ್ರೀ. ನಿಜಲಿಂಗಪ್ಪನವರ ಧುರೀಣತ್ವ ನಮಗೂ ಸಂತೋಷದ ವಿಷಯ. ಅವರಿಗೆ ನಮ್ಮ ಹೃತ್‌ಪೂರ್ವಕ ಧನ್ಯವಾದಗಳು!

ವಿಶ್ವಾಸವಿಲ್ಲದ ವಿಫಲಕರ್ಮ

ಕಾಶ್ಮೀರ ಸಮಸ್ಯೆಯ ವಿಚಾರಣೆ ನಡೆಸಿ ವರದಿ ಮಾಡುವಂತೆ ಸಂ. ರಾ. ಸಮಿತಿಯಿಂದ ಪ್ರತಿನಿಧ್ಯ ಪಡೆದ ಸ್ವೀಡನ್‌ನಿನ ರಾಜಕಾರಣಿ ಗುನಾರ್ ಯಾರಿಂಗರು, ಭಾರತ-ಪಾಕಿಸ್ತಾನಗಳ ನಡುವೆ ಎಡೆಯಾಡುತ್ತಿದ್ದಾರೆ. ಈ ಪ್ರತಿನಿಧಿಯ ಬಗೆಗೆ ಭಾರತವು ಮೊದಲಿಗಿಂತಲೂ ಅವಿಶ್ವಾಸವನ್ನು ತೋರಿಸಿದೆ. ಪಾಕಿಸ್ತಾನದ ಪಕ್ಷಪಾತಿಯಾಗಿರುವ ಈ ವ್ಯಕ್ತಿಯಿಂದ ಭಾರತವು ನ್ಯಾಯವನ್ನು ನಿರೀಕ್ಷಿಸುವ ಬಗೆ ಹೇಗೆ? ಕಾಶ್ಮೀರ ಸಮಸ್ಯೆಯನ್ನು ಪಶ್ಚಿಮದ ರಾಷ್ಟ್ರಗಳೆಲ್ಲ ಪಾಕಿಸ್ತಾನದ ಪಕ್ಷಪಾತಿಗಳಾಗಿ ನೋಡುತ್ತಿದೆ ಸ್ವೀಡನ್ ರಾಷ್ಟ್ರವೂ ಇದಕ್ಕೆ ಹೊರತಾಗಿ ಇಲ್ಲವೆಂಬುದು ಅಲ್ಲಿಯ ರಾಜಕೀಯ ಧುರೀಣರ ಮಾತು-ಚಟುವಟಿಕೆಗಳಿಂದ ಭಾರತೀಯರಿಗೆ ಸ್ಪಷ್ಟವಾಗಿ ಕಂಡು ಬಂದಿದೆ. ಹೀಗಿರುವಾಗ ಯಾರಿಂಗರ ನ್ಯಾಯಬುದ್ಧಿಯ ಮೇಲೆ ಭಾರತೀಯರ ನಂಬಿಗೆ ಹೇಗೆ ಕೂಡಬೇಕು. ಇಂತಹ ಅವಿಶ್ವಸ್ತ-ಅಶ್ರದ್ಧಾಮಯ ವಾತಾವರಣದಲ್ಲಿಯೂ ಯಾರಿಂಗರು ತಮ್ಮ ಕಾರ್ಯವನ್ನು ನಡೆಸಿದುದು ಆಶ್ಚರ್ಯದ ಸಂಗತಿಯಾಗಿದೆ. ಅವರ ಈಗಿನ ಚಟುವಟಿಕೆಗಳನ್ನು ನೋಡಿದರೆ, ಸಂ ರಾಷ್ಟ್ರಸಮಿತಿಯು ಒಪ್ಪಿಸಿದ ಕರ್ತವ್ಯವನ್ನು ಹೇಗಾದರೂ ಮಾಡಿ ಕಳಿಸಿಕೊಳ್ಳಬೇಕು-ಎಂಬ ಉದಾಸೀನ ವೃತ್ತಿಗೆ ಅವರು ಇಳಿದಿರಬೇಕು— ಇಲ್ಲವೆ ಮೊದಲಿನಿಂದಲೂ ಪಕ್ಷ ವಹಿಸಿದ ಪಾಕಿಸ್ತಾನಿಗಳಿಗೆ ಅನುಕೂಲವಾಗುವಂತೆ ಯಾದರೂ ವರದಿ ಬರೆದು ಮುಕ್ತರಾಗಿ ಬಿಡಬೇಕು—ಎನಿಸುವಂತಿದೆ. ಭಾರತವು ತಮಗೆ ತೋರಿಸುತ್ತಿರುವ ಉಪೇಕ್ಷೆ— ಅಶ್ರದ್ಧೆಗಳ ಅರ್ಥವು ಅವರಿಗೆ ಆಗದೆ ಹೋಗಿರಲಾರದು. ಅವರು ದಿಲ್ಲಿಯಲ್ಲಿ ಇರುವಾಗಲೇ ಅಲ್ಲಿಗೆ ಬಂದು ಭಾರತ ಸರಕಾರ ಮತ್ತು ಜನತೆಯ ವೈಭವಪೂರ್ಣ ಆತಿಥ್ಯವನ್ನು ಕಣ್ಣಾರೆ ಕಂಡ ಯಾರಿಂಗರಿಗೆ ತಮ್ಮ ದುರ್ದಶೆಗಾಗಿ ವಿಷಾದವೂ ಆಗಿರಬಹುದು. ಪಾಕಿಸ್ತಾನದ ಪಕ್ಷಪಾತಿಯೆಂದು ಮೊದಲೇ ನಿರ್ಣಯಿಸಿಬಿಟ್ಟ ಭಾರತೀಯರು ಯಾರಿಂಗರ ವರದಿಯನ್ನು ಒಪ್ಪಲು ಸಾಧ್ಯವೇ ಇಲ್ಲ. ಸ್ವಾರ್ಥದ ವಿಷವನ್ನು ಅಂತರ್ಯದಲ್ಲಿರಿಸಿಕೊಂಡು, ನ್ಯಾಯ ನಿರ್ಣಯದ ಸೋಗನ್ನು ನಟಿಸುವ ಕುಟಿಲ ನಟನ ಕಾರ್ಯವು ಸಫಲವಾಗುವ ಬಗೆ ಹೇಗೆ?

ರಂಗಿ

(ಒಂದು ಸಣ್ಣ ಕಥೆ)

ಶ್ರೀಮತಿ ಎಂ. ಕೆ. ಜಯಲಕ್ಷ್ಮೀ, ಕರಗಡ

ಸ್ವಾಭಾವಿಕವಾಗಿ ಹೆಣ್ಣಿನದು ಸಮರ್ಪಣಬುದ್ಧಿ; ಗಂಡಿನದು ಭ್ರಮಣಬುದ್ಧಿ. ವಿಶಿಷ್ಟಪರಿಸ್ಥಿತಿಯ ಸೂಲಿಕ ಹೆಣ್ಣು ದಾರಿಗೆಟ್ಟ ಉದಾಹರಣೆಗಳೂ ಇರಬಹುದು; ಆದರೆ ಸೂಳೆ ರಂಗಿಯ ಜೀವನ, ಹೆಣ್ಣಿನ ಸಮರ್ಪಣಬುದ್ಧಿಯ ಒಂದು ಪ್ರತೀಕ!

ಶುಕ್ರವಾರಸಂತೆಯಲ್ಲಿ ಆ ದಿನ ತುಂಬಾ ಗಲಾಟೆ. ಸುತ್ತ ಮುತ್ತಣ ಹಳ್ಳಿಯ ರೈತರು ಬೇಸಾಯ-ಬೇಪತ್ತಿನ ಕೆಲಸ ಮುಗಿಸಿಕೊಂಡು ಬಿಡುವಾಗಿದ್ದರು. ಜೊತೆಗೆ ಆ ರಾತ್ರಿ ಸಂತೆಯಲ್ಲೇ ಒಂದು ನಾಟಕ ನಡೆಯುವುದಿತ್ತು. ಆದ್ದರಿಂದ ತುಂಬ ಜನ ಸೇರಿದ್ದರು.

ತಲೆ ಸಿಡಿಯುವಂತಹ ಬಿಸಿಲು. ಆದರೂ ಜನರ ಓಡಾಟ ಕಡಿಮೆಯಾಗಿರಲಿಲ್ಲ. ಮೋಚಿ ರಂಗ, ಮುಖದಿಂದ ಬಸಿಯುತ್ತಿದ್ದ ಬೆವರನ್ನು ತನ್ನ ಕೊಳಕು ವಸ್ತ್ರದಿಂದ ಒರಸಿಕೊಂಡು, ಮೆಟ್ಟು ಹೊಲಿಯುತ್ತಿದ್ದ. ರಂಗ ಆಗಾಗ ತಲೆಯೆತ್ತಿ ನೋಡುತ್ತಿದ್ದ— ಯಾರ್ಯಾರು ಬಂದಿರುವರೆಂದು ತಿಳಿಯಲು.

ಅವನು ನಾಲ್ಕಾರು ಬಾರಿ ಕತ್ತೆತ್ತಿದಾಗಲೂ ಆ ಮುದುಕನ ಕಣ್ಣೋಟ ತನ್ನ ಮೇಲೆ ಇರುವುದನ್ನು ಕಂಡ ರಂಗನಿಗೆ ಆಶ್ಚರ್ಯವಾಯಿತು. ಅದೇಕೆ ತನ್ನನ್ನು ಹೀಗೆ ನೆಟ್ಟಿಸುತ್ತಿದ್ದಾನೆ, ನೋಡಲು ಈ ಕಡೆಗೆ ಹೊಸಬನಂತೆ ಕಾಣುತ್ತಾನೆ—ಎಂದುಕೊಂಡ. ಮುದುಕ ಊರಿಬಿಸಿಲಲ್ಲಿ ಕೂತಿದಾನೆ—ಎದುರಿಗಿದ್ದ ಮರದ ನೆರಳಿಗೂ ಹೋಗಿಲ್ಲ. ಹರಿದ ಪರಟು, ಕೆಂಪುಪೇಟ, ಮೊಳಕಾಲ ಮೇಲಕ್ಕೆ ಸುತ್ತಿದ ಪಟ್ಟೆ, ಜಡೆಗಟ್ಟಿದ ಕೂದಲು, ವಿಕಾರವಾಗಿ ಬೆಳೆದುಕೊಂಡಿದ್ದ ಗಡ್ಡ-ಮೀಸೆಗಳು, ಗುಳಿಬಿದ್ದು ಕೆಂಪಗಿದ್ದ ನಿಸ್ತೇಜಕಣ್ಣುಗಳು.....

"ಸೂಳೆ ರಂಗಿಯ ಮಗನಿಗೆ ಹೋದವಾರ ಎಕ್ಕಡ ಮಾಡಿಕೆ ಹೇಳಿದ್ದೆ. ಮಾಡಿದಾನೇನೋ ನೋಡೋಣ, ಬಾರ್ಲ...." ಎಂದುಕೊಂಡು ಇಬ್ಬರು ಒಕ್ಕಲಿಗರು ರಂಗನ ಬಳಿಗೆ ಬಂದರು. ಆ ಮಾತು ಕೇಳಿ ಮುದುಕ ಬೆಚ್ಚಿದ. ಮೆಲ್ಲಗೆ ಮೇಲೆದ್ದು ಅವರ ಹಿಂದೆಯೇ ಬಂದ. "ಕೂತುಕೋ ಮುದುಕಪ್ಪ-ಬಿಸಿಲ್ಹಣ್ಣ ತಿಂದು ಸಾಕಾಯ್ತಾ? ಇಲ್ಲಿ ಬಿಸಿಲಿಲ್ಲದಿದ್ದರೂ ಬಿಸಿಲಿನ ಝಳ ಹೋಗಿಲ್ಲ. ಯಾವೂರು?"— ರಂಗ ನಗುತ್ತಾ ಕೇಳಿದ.

"ಯಾವೂರೋ, ಯಾವ ಕೇರಿಯೋ—ನನಗೆ ಊರೂ ಒಂದೇ, ಕಾಡೂ ಒಂದೇ—ಎಲ್ಲವೂ ಒಂದೇ!" ಎಂದು ನಿರಾಶೆಯಿಂದ ನಿಡುಸುಯ್ಯುತ್ತಾ ಕೂತ, ಮುದುಕ.

"ಏಕೆ ಹಾಗಂತೆ? ನಿನಗೆ ಹೆಂಡ್ರು-ಮಕ್ಕಳು ದಿಕ್ಕು-ದೆಸೆ ಯಾವುದೂ ಇಲ್ಲವಾ?"

ಮುದುಕ ಕ್ಷಣ ಬಿಟ್ಟು ಹೇಳಿದ:—

"ಇತ್ತಪ್ಪಾ ಎಲ್ಲಾ ಇತ್ತು. ಎಲ್ಲಾ ಹೋಯ್ತು! ಕಾಲರಾ ಮಾರಿ, ಹೆಂಡ್ರು ಮಕ್ಕಳು ಎಲ್ಲರನ್ನೂ ಬಡಿದು ಬಾಯಿಗೆ ಹಾಕಿಕೊಂಡ್ಲು. ನಾನು ಹೀಗೇ ತಿರುಗ್ತಾ ಇದೀನೆ....."

"ಪಾಪ, ಪಾಪ. ಯಾವೂರಲ್ಲಿದ್ದೆ ತಾತ? ಏನು ಬದುಳು ಮಾತ್ತಿದ್ದೆ?"

"ಪೇಟೇಲಿ ಅಂಗಡೀಲಿ ಕೆಲಸಕ್ಕಿದ್ದೆಸಪ್ಪಾ. ನಿನ್ನ ಕಸಬೂ ನನಗೆ ಬರ್ತಿತ್ತು....ಆರು ತೀಗಳಾಯಿತು ಎಲ್ಲಾನೂ ಕಳೆದುಕೊಂಡು. ಆಗಿನಿಂದ ಹೀಗೇ ಅಲೀತಾ ಇದೀನೆ."

"ಹಾಗಾದರೆ ನಮ್ಮ ಹಳ್ಳಿಗೆ ಬಾ ತಾತ. ನಾಲ್ಕು ದಿನ ಇದ್ದು ಬೇಸರ ಹರಿಸಿಕೊಂಡು ಹೋಗುವಿಯಂತೆ....ಯಾವ ಜನ ನೀನು?"

"ನಿಮ್ಮ ಜನವೇ!"

"ನಮ್ಮ ಜನ! ನಾನು ಯಾವ ಜನ ಅಂತ ಹೇಗೆ ಗೊತ್ತು?"

ಮುದುಕ ಕ್ಷಣ ತಬ್ಬಿಬ್ಬಾದ. ಅನಂತರ ಸಾವರಿಸಿಕೊಂಡು,

"ನಿನ್ನ ಕಸಬು ನೋಡಿದರೇ ತಿಳೀತೋದಿಲ್ಲೇ?" ಎಂದ.

ರಂಗ ತಾನು ತಿನ್ನಲುಕೊಂಡಾಗ ಮುದುಕನಿಗೂ ಒಂದು ಪಟ್ಟೆ ಕಲ್ಲಂಗಡಿ ಹಣ್ಣನ್ನು ಕೊಂಡುಕೊಟ್ಟ. ರಂಗನಿಗೆ ಬಿಡುವಿಲ್ಲದ ಕೆಲಸ. ಮುದುಕ ತಾನು ಸಹ ಕೈಹಾಕಿ ಸ್ವಲ್ಪ ಸಹಾಯ ಮಾಡುತ್ತಿದ್ದ. ಸಂಜೆಯಾಯಿತು ಸಂತೆಯ ಗದ್ದಲ ಕಡಿಮೆಯಾಯಿತು. ಮನೆಗೆ ಹೋಗಿ ಊಟಮುಗಿಸಿಕೊಂಡು ನಾಟಕದ ವೇಳೆಗೆ ಮತ್ತೆ ಬರುವುದೆಂದು ಹತ್ತಿರದ ಹಳ್ಳಿಯವರೆಲ್ಲಾ ಹೊರಟರು. ರಂಗನೂ ಕೆಲಸ ನಿಲ್ಲಿಸಿ, ಮುದುಕನನ್ನು ತಮ್ಮ ಮನೆಗೆ ಬರುವಂತೆ ಒತ್ತಾಯ ಮಾಡಿ ಒಪ್ಪಿಸಿ, ಹೊರಟ. ದಾರಿಯಲ್ಲಿ ನಾಲ್ಕಾರು ಮಂದಿ ಅವನ ಗೆಳೆಯರು ಜೊತೆಯಾದರು.

---

೫. ಸೂಃ ಅದಿಕರ್ಣಾಟಕದಲ್ಲಿ ಗಂಡುಸುಳಿಯಿಲ್ಲದಿದ್ದಾಗ ಸೂಳೆ ಬಿಡುವ ಪದ್ಧತಿ ಇತ್ತಿತು. ಅದರೆ ಅಪರಲ್ಲಿ ಈಗ ಇಲ್ಲ ಮುಂತಿ ಈ ಪದ್ಧತಿ ಅಳಿದಿದೆ. ಮನೆವಾಳ್ತನಕ್ಕಾಗಿ ಆಳಿಯನನ್ನೇ ಮನೆಯಲ್ಲಿಟ್ಟುಕೊಳ್ಳುವ ರೂಢಿ ಆಚರಣೆಗೆ ಬರುತ್ತಿದೆ.

ಸೊಗಸಾದ ಸಂಜೆ. ಹಕ್ಕಿ-ಪಕ್ಕಿಗಳು ತಿಳಿನೀಲಿಯ ಆಗಸದಲ್ಲಿ ತಮ್ಮ ಗೂಡುಗಳತ್ತ ಹಾರುತ್ತಿದ್ದವು

ರಂಗನ ಗೆಳೆಯರ ಮಾತು ಕತೆ ಎಲ್ಲೆಲ್ಲೋ ಅಲೆದು ಪ್ರೇಮದ ವಿಷಯಕ್ಕೆ ಬಂದಿತು. " ಈ ಹಕ್ಕಿಪಕ್ಕಿಗಳಲ್ಲೂ ಎಷ್ಟು ನಿಯತ್ತಿದೆ! ನೋಡಿ. ಜೋಡಿಯಾಗಿ, ಗೂಡುಮಾಡಿ ಮರಿಗಳನ್ನು ಸಾಕ್ತವೆ– ನಮ್ಮನೇಲಿ ಪಾರಿವಾಳ ಸಾಕೇದೇವಲ್ಲಾ . ಒಂದು ಹೆಣ್ಣು ಒಂಟಿಯಾಗಿದೆ. ಅದರ ಜೊತೆ ಹಕ್ಕಿನ ಬೆಳ್ಳು ಹಿಡಿದುಬಿಡ್ತು. ಆದರೆ ಏನು ಮಾಡಿದರೂ ಆ ಹೆಣ್ಣು ಹಕ್ಕಿ ಬೇರೆ ಜೊತೆ ತೆಗೆದುಕೊಳ್ಳದಲ್ಲಾ! ನನಗೆ ಆಶ್ಚರ್ಯ ಆಯ್ತದೆ." ಎಂದ, ರಂಗನ ಗೆಳೆಯ.

ಮುದುಕ, ಇಷ್ಟು ಹೊತ್ತೂ ಸುಮ್ಮನೆ ಮಾತನ್ನಾಲಿಸುತ್ತಿದ್ದವನು, ಕಹಿಯಾಗಿ ಹೇಳಿದ:—

" ಹಕ್ಕಿ-ಪಕ್ಕಿಗಳಿಗೆ ಹಣಕಾಸಿನ ಆಸೆಯಿಲ್ಲ; ಹಾಗಿರುತ್ತವೆ ಆದರೆ ಹೆಂಗಸು? ಯಾವ ಹೆಂಗಸನ್ನೂ ನಂಬೋಕಾಗೋದಿಲ್ಲ. ನಂಬಬಾರದು. ಒಳಗೊಂದು, ಹೊರಗೊಂದು ಅವರ ಮನಸ್ಸು."

ರಂಗ, ರಂಗನ ಗೆಳೆಯರು ಮುಖ ಮುಖ ನೋಡಿಕೊಂಡರು.

" ಏಕೆ ಕಾಕ, ಅಷ್ಟು ಕಠಿಣವಾಗಿ ಹೇಳ್ತೀಯ? ನಿನ್ನ ಅನುಭವ ಏನೋ ನಾವು ಕಾಣೆವು. ಆದರೆ ಎಲ್ಲೆ ಹೆಂಗಸರೂ ಹಾಗಲ್ಲ; ಈಗ ನಮ್ಮ ರಂಗನ ತಾಯಿ, ಸೂಳೇರಂಥಯನ್ನೇ ತೆಗೆದುಕೊಳ್ಳಿ. ಹೇಳಿ ಕೇಳಿ ಅವಳನ್ನು ಸೂಳೆಬಿಟ್ಟಿದ್ದರು. ಆದರೆ ಅವಳು ನಿಯತ್ತಾಗಿರಲಿಲ್ವೇ? ಯಾವ ಗರತೀಗೆ ಕಡಿಮೆಯಾಗಿದ್ದಾಳೆ ನಿಯತ್ತಿನಲ್ಲಿ? ಕಂಭಣ್ಣನ ಹೊರತು ಬೇರೆಯವರನ್ನು ಕಣ್ಣೆತ್ತಿ ನೋಡಿದಾಳಾ?" ರಂಗನ ಗೆಳೆಯ ಸವಾಲು ಹಾಕಿದ.

" ಕಂಭಣ್ಣ?"— ಮುದುಕ ಬೆದರಿದವನಂತೆ, ಬೆರಗುವಡೆದವನಂತೆ ಉದ್ಗರಿಸಿದ.

" ಹೂಂ, ಕಂಭಣ್ಣ. ನೀನು ಯಾವಾಗಲಾದರೂ ಈ ಕಡೆ ಬಂದಿದ್ಯಾ? ನಾವೂ ಕೂಡ ಅವನ್ನ ಕಂಡಿಲ್ಲ ಅವನು ಹೋದಾಗ ನಾವೆಲ್ಲಾ ತುಂಬಾ ಚಿಕ್ಕೋರಂತೆ." ರಂಗ ಹೇಳಿದ.

ಮುದುಕ ಏನನ್ನೋ: ನೆನಪುಮಾಡಿಕೊಂಡವನಂತೆ ನಿಧಾನವಾಗಿ ಹೇಳಿದ:

" ಅಂಗಡೀಲಿ ನನ್ನ ಜೊತೆ ಇನ್ನೊಬ್ಬ ಕೆಲಸ ಮಾಡ್ತಿದ್ದ – ಕಂಭಣ್ಣ ಅಂತಾ. ಅವನೇ ಇರಬೇಕೇನೋ...."

ರಂಗ ಉತ್ಸೇಗದಿಂದ ಮುದುಕನ ಕೈಹಿಡಿದುಕೊಂಡ.

" ಕಾಕ, ಹಾಗಾರೆ ನನ್ನ ಜೊತೆ ನೀನೂ ಪೇಟೆಗೆ ಬರ್ಬೇಕು."

" ಏಕೆ?—ನಮ್ಮ ಅಯ್ಯ ಅಲ್ಲವೇ ಅವ್ನು! ನಾನೊಮ್ಮೆ ನೋಡಿ ಬರ್ಬೇಕು. ನನಗೆ ಅವನ್ನ ನೋಡಿದ ನೆಪ್ಪೇ ಇಲ್ಲ."

ಮುದುಕ ತಲೆಯಾಡಿಸುತ್ತ ಅಂದ— " ಅದೇನೋ ಸರಿ; ಆದರೆ ಅವನು ಸಂಬಳ ಸಾಲದು ಅಂತಾ ಕೆಲಸಬಿಟ್ಟ. ಕಾಫಿ ತೋಟಕ್ಕೆ ಹೋಗಿ ಸೇರ್ಕ್ಯೋತೀನಿ ಅಂತಿದ್ದ. ವರ್ಷವಾಯಿತೇನೋ, ಅವನು ಹೊರಟುಹೋಗಿ. "

ರಂಗ ನಿರಾಶೆಯಿಂದ ಮುಖ ಜೋಲು ಹಾಕಿದ.

ರಂಗನ ಮನೆ ಏಳಿಕ್ಕಿತು. ರಂಗನ ಹೆಂಡತಿ ಇಬ್ಬರಿಗೂ ಕೈಕಾಲು ತೊಳೆಯಲು ನೀರು ಕೊಟ್ಟಳು.

" ಅವ್ವಾ ಎಲ್ಲಿ ಹುಚ್ಚಿ? '

" ಈ ದಿನ ಶುಕ್ರವಾರ ಅಲ್ವಾ? ಅವ್ವ ಬಿಕ್ಷೇಗೆ ಹೋಗಿದೆ. ಇನ್ನೇನು ಬರೋ ಹೊತ್ತಾಯ್ತು. "

" ಭಿಕ್ಷೇಗೆ....? "

ಮುದುಕ ಆಶ್ಚರ್ಯದಿಂದ ಕೇಳಿದ—' ದುಡಿಯೋಕೆ ನಿನ್ನಂತಹ ಮಗನಿದ್ದೂ ಭಿಕ್ಷೇಗೆ ಹೋಗಬೇಕೇ? ' ಎಂಬ ತಿಕ್ಷೇಸವಿತ್ತು ಅವನ ಧ್ವನಿಯಲ್ಲಿ.

" ಹೂಂ. ಅಮ್ಮನ ಹೆಸರಲ್ಲಿ ಭಿಕ್ಷೆ ಬೇಡ್ತಾಳೆ— ಯಾವುದಕ್ಕೂ ಇನ್ನೊಬ್ಬರ ಕೈಕಾಯೋದಿಲ್ಲ ಅವಳು. ಕಂಭಣ್ಣನ ವಿಷಯ ನಿನಗೆ ತಿಳಿದಿದೆ ಅಂತೆಯಲ್ಲಾ....ಅವ ನಮ್ಮವ್ವನ ವಿಷಯ ಏನೂ ಹೇಳಿರಲಿಲ್ವೇ....? "—ರಂಗ ಕುತೂಹಲದಿಂದ ಕೇಳಿದ.

" ಅದೇನೋ ನಂಗೆ ನೆಪ್ಪಿಲ್ಲ...." ಮುದುಕ ನೆಲನೋಡುತ್ತ ನಿಧಾನವಾಗಿ ಹೇಳಿದ.

" ಅದೊಂದು ಕತೆ. ನಮ್ಮಜ್ಜಂಗೆ ಇಬ್ಬರೇ ಹೆಣ್ಮಕ್ಕಳು— ಗಂಡು ಸುಳಿ ಇಲ್ಲ. ದೊಡ್ಡವಳನ್ನು ಲಗ್ನಮಾಡಿಕೊಟ್ಟಿದ್ರು. ಕಂಭಣ್ಣ ತಿರಿಯೋಳನ್ನ— ಅದೇ ನಮ್ಮವ್ವನ್ನ— ಲಗ್ನವಾಗಬೇಕು ಅಂತ ತುಂಬಾ ಆಶೆಯಾಗಿದ್ದ. ಆದರೆ ನಮ್ಮಜ್ಜ ತನ್ನ ವಂಶ ಅಲ್ಲಿಗೇ ನಿಂತು ಹೋಗುವುದಲ್ಲಾ, ಏನು ಮಾಡೋದು–ಎಂದು ಯೋಚಿಸಿದ. ಕಡೆಗೆ ನಮ್ಮವ್ವನ್ನ ಸೂಳೆ ಬಿಡೋದು ಅಂತಾ ನಿಶ್ಚಯಿಸಿದ. ಕಂಭಣ್ಣ ಬೇಡ ಅಂತ ಎಷ್ಟೋ ಬೇಡಿಕೊಂಡನಂತೆ. ನಮ್ಮಜ್ಜ ಒಪ್ಪಿಲ್ಲ– ನಮ್ಮವ್ವನಿಗೆ ಚಿಕ್ಕಂದಿನಲ್ಲಿ ಕಾಯಿಲೆಯಾದಾಗಲೇ ಹಾಗೆ ಹರಕೆ ಹೊತ್ತಿದ್ದೆ—ಎಂದ. ಕಡೆಗೆ ಕುಲಸ್ಥರಿಗೆಲ್ಲಾ ಊಟ ಕೊಟ್ಟು ದೇವೇಂಮ್ಮನ ಹೆಸರಲ್ಲಿ ಶಾಸ್ತ್ರಮಾಡಿ, ಸೂಳೆ ಬಿಟ್ಟರು. ಆ ಖರ್ಚನ್ನೆಲ್ಲಾ ಕಂಭಣ್ಣೇ ಕೊಟ್ಟನಂತೆ....ತಾಳಕಟ್ಟಿ ಲಗ್ನ ಆಗದೆ ಇದ್ದರೇನು ನಮ್ಮವ್ವ ಶಂಭಣ್ಣನಿಗೆ ಲಗ್ನವಾದ ಹೆಂಡತಿಗೂ ಹೆಚ್ಚಾಗಿ ವಿಶ್ವಾಸವಾಗಿ, ನಿಯತ್ತಿನಿಂದ ಇದ್ದಳು. ಆವರಿಬ್ಬರ ಜೋಡಿ ನೋಡಿ ಊರವರೆಲ್ಲಾ ಆಶ್ಚರಿಪಡೋರಂತೆ. "

ರಂಗ ಮುದುಕನತ್ತ ನೋಡಿದ. ಅವನು ಅಳಿಸುತ್ತಿದ್ದ. ಆದ ಅವನ ದೃಷ್ಟಿ ಮಾತ್ರ ಎತ್ತಲೋ ಇತ್ತು.

" ನಮ್ಮವ್ವ ಈಗಲೂ ಅಷ್ಟು ಕಳೆಯಾಗಿದ್ದಾಳೆ. ಇನ್ನು ಆಗಿ ಪ್ರಾಯದಲ್ಲಿ ಕೇಳ್ಬೇಕೆ? ಎಷ್ಟೋ ಮಂದಿಗೆ ಅವಳ ಮೇಲೆ ಕಣ್ಣಿತ್ತಂತೆ. ಆದರೆ ಅವಳು ಕಂಭಣ್ಣನ ಹೊರತು ಬೇರೆಯೋರನ್ನ ಕಣ್ಣೆತ್ತಿ ನೋಡ್ತಿರಲಿಲ್ಲವಂತೆ. ನಾನು ಎರಡು ವರ್ಷದವನಿರ್ಬೇಕ

ಆಗ ಕಂಭಣ್ಣ. ಮಾರಿ ಅನ್ನೋಳೊಡನೆ ಹೇಳದೆ ಕೇಳದೆ ಪರಾರಿಯಾಗ್ಬಿಟ್ಟನಂತೆ. ಈಗಲೂ ಒಂದೊಂದು ದಿನ ನೆನೆದುಕೊಂಡು ಅಳ್ತಾಳೆ—ತಾಳಕಟ್ಟಿಕೊಂಡ ಕೆಂತ್ತಿಮುಲ್ಲ ನಾನು. ಅವನು ಹಾಗೆ ಹೋದ ಅಂತಾ ನಾ ಅಕ್ಷೇಪಿಸೋದಿಲ್ಲ. ಆದರೆ ಒಂದು ಮಾತು ಹೇಳದೆ ಹೋದ್ನಲ್ಲಾ ಅವನು. ಅಂತ ಪೇಚಾಡ್ತಾಳೆ. ನಾನಂತೂ ಅವನ ಮುಖಾನೇ ಕಾಣೆ ..."

ಮುದುಕ ತಲೆ ತಗ್ಗಿಸಿ ಯೋಚಿಸುತ್ತಿದ್ದವನು ಕ್ಷಣ ಬಿಟ್ಟು ಹೇಳಿದ:

"ಅತುರಗಾರರಿಗೆ ಬುದ್ಧಿವಟ್ಟು, ಅಂತಾರೆ. ಅದು ನಿಜ. ಕಂಭ ಅದೇ ಪೇಚಾಡೋನು. ಸುಳ್ಳು ಚಾಡಿ ಹೇಳಿ ತಲೆ ಕೆಡಿಸಿದ್ರು. ಅದಕ್ಕೆ ಹೀಗೆ ಪಾಡು ಬೀಳ್ತಿದೀನೆ ಅನ್ನೋನು...."

ಮುದುಕ ಇನ್ನೂ ಏನು ಕೇಳಲಿದ್ದನೋ—ಹೊರಗಡೆ ಯಾರೋ ಬರುವುದನ್ನು ಕಂಡು ಅಷ್ಟಕ್ಕೇ ಮಾತು ನಿಲ್ಲಿಸಿದ.

ಬರುತ್ತಿದ್ದವಳು ರಂಗಿ—ಗೌರವರ್ಣ, ನಗುಮುಖ, ಮುಖದಲ್ಲಿ ಒಳ್ಳೆಯ ಕಳೆ. ಬಳಸೀರೆಯುಟ್ಟು (ದೇವೇರಮ್ಮನ ಹೆಸರಲ್ಲಿ ತೊಟ್ಟ) ಜಾಮರ, ಛಡಿ ಹಿಡಿದಿದ್ದಳು. ಹೆಗಲಿಗೆ ಜೋಳಿಗೆ. ತುರುಬುಸುತ್ತಿ ಮೇಲೆ ಕೆಂಪು ಹೂದಂಡೆ ಮುಡಿದಿದ್ದಳು.

ಮುದುಕ ತನ್ನನ್ನೇ ಮರೆತು ಉತ್ಸುಕತೆಯಿಂದ ಅತ್ತಲೇ ನೋಡಿದ.

"ಸಂತೆ ಆಯ್ತಾ ಮಗು? ಯಾರು ನೆಂಟರು? " ಎಂದಳು—ಧ್ವನಿ ಇಂಪಾಗಿ, ಎದೆಗೆ ತಂಪೆರೆಯುವಂತೆ ಇದ್ದಿತು.

"ನೆಂಟನಲ್ಲವ್ವಾ—ಇಷ್ಟ! ಕಂಭಣ್ಣನ ಸ್ನೇಹಿತನಂತೆ. ಸಂತೇಲಿ ಕಂಡು ಕರೆದುಕೊಂಡು ಬಂದೆ. ಪಾಪ, ಹೆಂಡತಿ ಮಕ್ಕಳೆಲ್ಲಾ ಕಾಲರಾ ಆ ಹೋಗ್ಬಿಟ್ಟಿದ್ದಾರಂತೆ. ದಿಕ್ಕಿಲ್ಲದೆ ಅಲೀತಿದ್ದ."

ಮುದುಕ ಅವಳತ್ತಲೇ ನೋಡುತ್ತಿದ್ದ. ಕಂಭನ ಹೆಸರು ಕೇಳಿದೊಡನೆಯೇ ಅವಳು ಕ್ಷಣ ಉಸಿರು ಬಿಗಿಹಿಡಿದಳು. ಅನಂತರ ಅವಳ ಕಣ್ಣುಗಳು ಮಿಂಚಿದುವು.

"ಒಳ್ಳೇ ಕೆಲಸಾನೇ ಮಾಡಿದೆ; ಕೊಡೋದು, ತಕ್ಕೊಳ್ಳೋದು—ಎಲ್ಲಾ ಆ ಮಾತಾಯಿಯ ಆಟ—ಮನುಷ್ಯರ ಕೈಲಿ ಏನಿದೆ? ನೆಲುವಿನ ಮೇಲೆ ಹಲಸಿನ ಹಣ್ಣಿತ್ತು. ಅದನ್ನ ಬಿಡಿಸಿ ಕೊಡಬೇಕಾಗಿತ್ತು?"

ರಾತ್ರಿ ಊಟ ಆಯಿತು. ತಂಗಳ ಬೆಳಕಿನಲ್ಲಿ ಮೂವರೂ ಮಾತನಾಡುತ್ತ ಕೂತರು. ರಂಗ ಮುದುಕನಿಗೊಂದು ಬೀಡಿ ಕೊಟ್ಟು ತಾನೊಂದನ್ನು ಹಚ್ಚಿಕೊಂಡ.

ಎಲೆಯಡಿಕೆ ಹಾಕಿಕೊಳ್ಳುತ್ತಿದ್ದ ರಂಗಿ,

"ಕಂಭಣ್ಣ ಮಾರವ್ವ ಚೆನ್ನಾಗಿದಾರಾ ಮುದುಕಪ್ಪಾ?" ಎಂದಳು.

ಮುದುಕನ ಮುಖ ಕಪ್ಪಿಟ್ಟಿತ್ತು. ಅವಳತ್ತ ನೋಡಿದ—ಅವಳು ಶೂನ್ಯದೃಷ್ಟಿಯಲ್ಲಿ ಎತ್ತಲೋ ನೋಡುತ್ತಿದ್ದಳು. ಮುದುಕ ಕೆಮ್ಮಿ ಗಂಟಲು ಸರಿಪಡಿಸಿಕೊಂಡ.

"ಏನು ಚೆಂದವೋ ತಿವನೇ ಬಲ್ಲ. ಅವಳೂ ಶುದ್ಧ ಜಗಳಗಂಟಿ. ಸದಾ ಜಗಳ ಆಡೋರು. ಇವನು ಕುಡಿತಾ ಬೇರೆ ಕಲಿತಿದ್ದ...."

"ಇಲ್ಲಿದ್ದಾಗ ಮಾರವ್ವ ಕುಡಿಯೋಳು. ಆದರೆ ಅವನು ಕುಡೀತಿರಲಿಲ್ಲ"

"ಎಲ್ಲಾ ಸಾವಾಸ ದೋಷ. ಅವಳು ಯಾರನ್ನೋ ಕಟ್ಟಿಕೊಂಡು ಓಡಿ ಹೋದ್ಲು. ಇವನು ಹುಚ್ಚನಂತೆ ಅಲೀತಾ ಇದ್ದ ಕೆಲವು ದಿನ. ಅಮೇಲೆ ಯಾವಳನ್ನೊ ಕೂಟಿಕೆ ಮಾಡಿಕೊಂಡ. ಆಗಲೂ ಸುಖವಾಗಿರ್ಲಿಲ್ಲ. ಕಾಲರಾ ಬಂದು ನಮ್ಮ ಕೇರಿಕೇರೀನೆ ನಾಶವಾಯ್ತು ಅಂದೆನಲ್ಲಾ—ಆಗ ಅವನ ಹೆಂಡತಿ, ಎರಡು ಮಕ್ಕಳು ಹೋಗಿ ಬಿಟ್ಟವು. ಅವನಿಗೆ ಬದುಕೇ ಸಾಕು ಅನ್ನಿಸಿಬಿಟ್ಟು ಕಾಫಿ ತೋಟದ ಕಡೆಗೆ ಹೋಗ್ಬಿಟ್ಟ."

"ಪಾಪ ಹೀಗಾಯ್ತಾ ಅವನ ಕತೆ! ಬಹಳ ಮಾನಿಷ್ಯ. ಬಹಳ ದುಡುಕಿ ಪಾಪ. ಹೂಂ, ನಾವೇನು ಮಾಡೋಕೆ ಸಾಧ್ಯ? ಎಲ್ಲಾ ಆ ಮಾತಾಯಿಯ ಆಟ. ಈಗ ಅವನು ಹೇಗಿದ್ದಾನೆ ನೋಡೋಕೆ, ಹೇಗ್ತೀಯಾ?"

ಮುದುಕ ಅವಳತ್ತ ನೋಡಿದ. ಅವಳು ಮುದುಕನ ಕಡೆ ನೋಡುತ್ತಿರಲಿಲ್ಲ. ಆಕಾಶದತ್ತ ಮುಖಮಾಡಿ ಅರ್ಧಕಣ್ಣು ಮುಚ್ಚಿದ್ದಳು—ಯಾವುದೋ ನೆನಪಿನ ಚಿತ್ರವನ್ನು ಕಾಣುವವಳಂತೆ.

"ಎಲ್ಲಾ ಹಿಂದಿನಂತೆಯೇ; ಆದರೆ ಸ್ವಲ್ಪ ನಲುಗಿದ್ದಾನೆ." ಎಂದು ನಿಡುಸುಯ್ದ ಮುದುಕ.

ಸ್ವಲ್ಪಹೊತ್ತು ಯಾರೂ ಮಾತನಾಡಲಿಲ್ಲ.

ನಂತರ ರಂಗಿ ಹಿಂದಿನದನ್ನೆಲ್ಲಾ ನೆನೆದುಕೊಂಡು ನಿಧಾನವಾಗಿ ಹೇಳಿದಳು—

"ಒಂದು ಸಣ್ಣ ಮಾತಿಗಾಗಿ ಅವನು ದುಡುಕಿ ಊರುಬಿಟ್ಟ. ನಾನೂ ಅವನೂ ಪ್ರಾಣಕ್ಕೆ ಪ್ರಾಣ ಆಗಿದ್ದೆವು. ಒಲ್ಲೇ ಗಿಡ್ಡಣ್ಣ ಅಂತಾ ಒಬ್ಬ ಇದಾನೆ—ಕಡೇ ಹಟ್ಟಿಲಿ ಆಗ ಗಿಡ್ಡನಿಗೂ ಶಂಭನಿಗೂ ಎಣ್ಣೇ ಸೀಗೇಕಾಯಿನಷ್ಟು ದ್ವೇಷ. ಶಂಭ ಹಾಸನದ ಜಾತ್ರೇಗೆ ಹೋಗಿದ್ದ. ಮಾರವ್ವನೂ ಹೋಗಿದ್ದಳು. ಗಿಡ್ಡಣ್ಣ ನನಗೆ ಏನೇನೋ ಆಶೆ ತೋರಿಸಿ ವಶಮಾಡಿಕೋಬೇಕು ಅಂತಾ ನೋಡ್ತಿದ್ದ—ಆಗ ಹೇಳಕೇಳಿ ನಿನ್ನ ಸೂಳೆ ಬಿಟ್ಟಲ್ಲವಾ ಅಂತಾ ಹಂಗಿಸೋನು. ನಾನು ಮನಸಿನಾಗೆ ನಿಶ್ಚಯಮಾಡಿಬಿಟ್ಟಿದ್ದೆ—ಶಂಭನೊಬ್ಬನೇ ನನ್ನ ಗಂಡ ಅಂತಾ. ಗಿಡ್ಡಣ್ಣನಿಗೆ ನಾನು ಅದೇ ಉತ್ತರ ಕೊಡ್ತಿದ್ದೆ—ನನ್ನ ಸೂಳೇ ಬಿಟ್ಟಬೋದು ದೇವೇರಮ್ಮನಿಗೆ ನಮ್ಮಪ್ಪನ ಮನೆ ಬೆಳಸುವ ಸುಳಿ ಬಿಟ್ಟಿದೆ. ನನ್ನ ತಂಟೆಗೆ ಇನ್ನು ಬಂದೇಡ ಅಂತಾ"

ರಂಗಿಯ ಕಣ್ಣುಗಳು ಹೊಳೆಯುತ್ತಿದ್ದವು. ಹಿಂದಿನ ಚಿತ್ರಗಳನ್ನೆಲ್ಲಾ ಮತ್ತೆ ಎದುರಿಗೆ ಕಾಣುತ್ತಿರುವಳೇನೋ ಎಂಬಂತೆ

ವಿಕಾಗ್ರಳಾಗಿ ನಿಟ್ಟಿಸುತ್ತಿದ್ದಳು. ಮತ್ತೆ ಭಾರವಾದ ಧ್ವನಿಯಲ್ಲಿ ಹೇಳಿದಳು:—

"ಮಾರವ್ವ ಜಾತ್ರೆಯಿಂದ ಬಂದಳು; ಒಂದು ಹೊಸ ಸೀರೆ ತಂದಿದ್ಲು. ಒಳ್ಳೆಯ ಹೂವುಹೂವಿನ ಸೀರೆ. ತುಂಬಾ ರಂಗಾಗಿತ್ತು. ಗಿಡ್ಡಣ್ಣ ಹೇಳಿದ—ಕಂಭ ಮಾರವ್ವನ್ನ ಇಟ್ಟುಕೊಂಡಿದಾನೆ, ಅವನೇ ಈ ಸೀರೇ ಕೊಂಡುಕೊಟ್ಟಿದ್ದಾನೆ—ಅಂತ ಗಿಡ್ಡಣ್ಣ ಅಸೂಯೆಯಿಂದ ನಮ್ಮ ಮನಸು ಕೆಡಿಸೋದಕ್ಕೆ ಹೇಳ್ತಿದಾನೆ ಅಂತಾ ನಂಬಲಿಲ್ಲ. ಸತ್ಯಹೇಳು ಅಂತಾ ಮಾರವ್ವನ್ನೇ ಕೇಳಿಕೊಂಡೆ. ಅವಳು ಆಣೆ ಪ್ರಮಾಣ ಹಾಕಿ, ಕಂಭನೇ ತೆಗೆದುಕೊಟ್ಟ, ಬೇಡ ಅಂದರೂ ಕೇಳದೆ—ಅಂದ್ಲು. ನನಗೆ ತುಂಬಾ ಸಿಟ್ಟು ಬಂತು. ದುಡ್ಡು ಕೊಟ್ಟು ನಾನೇ ಅವಳಿಂದ ಆ ಸೀರೆ ಕೊಂಡುಕೊಂಡೆ. ಕಂಭ ಬಂದಮೇಲೆ ಚೆನ್ನಾಗಿ ಹಂಗಿಸಬೇಕು, ಇನ್ನೊಂದು ಬಾರಿ ಹೀಗೆ ಮಾಡದಂತೆ ಬುದ್ಧಿ ಕಲಿಸಬೇಕು—ಅಂತಿದ್ದೆ."

ಕ್ಷಣ ಬಿಟ್ಟು ಮತ್ತೆ ಹೇಳಿದಳು:—

"ಜಾತ್ರೆಯಿಂದ ಕಂಭ ಬರುವ ದಿನ ನಾನು ಅದೇ ಸೀರೆ ಉಟ್ಟಿದ್ದೆ. ಕಂಭ ಅದನ್ನ ಕಂಡವನೇ ತುಂಬಾ ಸಿಟ್ಟಾದ.

"ಎಲ್ಲಿತ್ತೆ ಈ ಸೀರೆ ? ಯಾವನೇ ತಂದ್ಕೊಟ್ಟೋನು ? " ಅಂದ.

ತಪ್ಪು ತನ್ನಲ್ಲೇ ಇಟ್ಟುಕೊಂಡು ಹಾಗೆ ಕೇಗಿದರೆ ನಾನು ಹೇಗೆ ಸಹಿಸಬೇಕು ?

"ಯಾವನೋ ತಂದ್ಕೊಟ್ಟ. ಅದೆಲ್ಲ ನಿನಗೇಕೆ ? ನೀನೇನು ತಂದೀದೀಯಾ ನನಗೆ ? ಅದನ್ನ ಮೊದಲು ತೋರಿಸು " ಅಂದೆ.

"ಎತ್ತು ಮಾರಿದ ಹಣ ಕಳೆದು ಹೋಯ್ತು. ನಾ ಏನು ತಲ್ಲಿ ? ನಂಗೊತ್ತು—ಯಾರು ಕೊಟ್ಟಿದ್ದು ಇದನ್ನ ಅಂತ ಎಲ್ಲಿ ಹೋಗುತ್ತೆ ನಿನ್ನ ನಾಯಿಬುದ್ಧಿ ! ಮೊದಲು ಅದನ್ನ ಬಿಚ್ಚಿ ಎಸೆ. " ಅಂದ.

ಮಾರವ್ವನಿಗೆ ಸೀರೆ ಕೊಳ್ಳೋಕೆ ಹಣ ಇತ್ತು, ನನಗೆ ತರೋಕೆ ಇರಲಿಲ್ಲ—ಅಂದರೆ ಹೇಗೆ ನಂಬಲಿ ನಾನು ? ಅವನ ಕಪಟ ಕಂಡು ನನಗೂ ಕೋಪ ಬಂತು, ಅಳು ಬಂತು.

"ಹಾಳು ಗಂಡಸರನ್ನು ನಂಬಬಾರದು. ನಾ ನಂಬಿ ಕೆಟ್ಟೆ " ಅಂತ ಗೊಳೋ ಎಂದು ಅತ್ತೆ.

"ಬಿಡು ಈ ಬೂಟಾಟಕೇನೆಲ್ಲಾ ಬಿಚ್ಚಿ ಎಸೆ ಆ ಸೀರೇನಾ...." ಎಂದು ನನ್ನ ಹೊಡೆಯೋದಕ್ಕೆ ಶುರುವಾಡಿದ. ಎಂದೂ ಅವನು ನನ್ನ ಮೇಲೆ ಕೈಮಾಡಿರಲಿಲ್ಲ. ನಾನೂ ಸಿಕ್ಕಾಪಟ್ಟೆ ಕೂಗಾಡಿದೆ.

ಈ ಗಲಾಟೆ ಕೇಳಿ ಗಿಡ್ಡಣ್ಣ ಓಡಿಬಂದು ಅವನನ್ನು ಅತ್ತ ನೂಕಿದ.

"ಹೊಡೆದು ಬಡಿದು ಮಾಡೋಕೆ, ತಾಳಿಕಟ್ಟಿದ ಹೆಂಡತಿ ಅಂದುಕೊಂಡಿದೀಯಾ ? ಯಾವ ಬೇವಾರ್ಸಿಯೋ ನೀನು ಅಕೆ ಮೇಲೆ ಕೈಮಾಡೋಕೆ ? ಹುಷಾರ್" ಎಂದು ಕೂಗಿದ ಗಿಡ್ಡಣ್ಣ. ಅಲ್ಲಿ ಸೇರಿದ್ದವರೆಲ್ಲಾ ಅವಹಾಸ್ಯವಾಗಿ ನಕ್ಕುಬಿಟ್ಟರು.

ಕಂಭ ಕೈ ಕೈ ಹಿಸುಕಿಕೊಳ್ಳುತ್ತಾ ಸೆಟ್ಟಾಗಿ ನಿಂತಿದ್ದ.

ನನಗೂ ತುಂಬಾ ರೇಗಿಹೋಗಿತ್ತು—

"ಹುಂ ! ಹೊಡೆದರೆ ಸುಮ್ಮಿರೋದಕ್ಕೆ ಹೆಂಡತಿ ಅಂದ್ಕೊಂಡಿದಾನೇನೋ—ಜಾತ್ರೇಗೆ ಹೋಗಿ ಬರೀಕ್ಕೆ ಬೀಸಿಕೊಂಡು ಬಂದಿದ್ದಾನೆ ಭೂಪ !—ಬಂದಿದಾನೆ ಈಗ ಶಿಕ್ಷೆ ಮಾಡೋಕೆ ! " ಎಂದೆ.

ಜನ ಮತ್ತೆ ನಕ್ಕರು. ನನಗೆ ಆಗ ಏನಾಗಿತ್ತೋ—ಅಷ್ಟು ನೋಯಿಸಿಬಿಟ್ಟೆ ಅವನ ಮನಸ್ಸನ್ನ. ಅವನು ಪಾಪ, ತಲೆತಗ್ಗಿಸಿಕೊಂಡು ಹೋಗಿಬಿಟ್ಟ.

ನನಗೆ ಆಗ ಭಯವಾಯ್ತು. ಎಲ್ಲಿ ಹೋದ ಅಂತ ವಿಚಾರಿಸಿದೆ. ಎಲ್ಲಾ ಹೇಳಿ, ಅವನ ಪಾದಕ್ಕೆ ಬಿದ್ದಾದರೂ ಮನೇಗೆ ಕರೆದುಕೊಂಡು ಬರೋಣ—ಅನ್ನಿಸಿತ್ತು ನನಗೆ. ತುಂಬಾ ಮಾನಿಸ್ಪ ಅಂತಾ ಹೇಳಿದೆನಲ್ಲಾ—ತೊರೆದುಕೊಂಡುಬಿಟ್ಟರೆ ಮತ್ತೆ ಕಣ್ಣೆತ್ತಿಯೂ ನೋಡುವವನಲ್ಲ ಅವನು—ಅಂತ ಭಯಬಿದ್ದೆ.

ಆದರೆ, ಅವನು ಸೀದಾ ಮಾರವ್ವನಮನೆಗೆ ಹೋದ ಅನ್ನೋ ಸುದ್ದಿ ಕೇಳಿದಾಗ, ನನಗೂ ತುಂಬಾ ಬೇಸರ ಆಯ್ತು. ನನ್ನ ಎದೆ ಕುದ್ದುಹೋತು. ನಾಯಿಗೆ ನೈವೇದ್ಯವಿಟ್ಟಂತಾಯ್ತಲ್ಲಾ ಅಂತ ಬೇಚಾಡಿದೆ.

ಮಾರನೇ ದಿನವೇ ಅವನೂ ಮಾರವ್ವ ಈ ಊರೇ ಬಿಟ್ಟು ಎಲ್ಲಿಗೋ ಹೋಗಿಬಿಟ್ಟರು. "

ಅವಳ ಕಣ್ಣಿಂದ ನೀರು ಹರಿಯಿತು. ವೇದನೆ ಮುಖದ ಮೇಲೆ ಸ್ಪಷ್ಟವಾಗಿ ಮೂಡಿತ್ತು.

ಮುದುಕನೂ ನಿಡುಸುಯ್ದು ಕಣ್ಣೊರಸಿಕೊಂಡ.

"ಅಮೇಲೂ ಗಿಡ್ಡಣ್ಣ ನನ್ನ ಎಷ್ಟೋ ಕಾಡಿದ. ಆದರೆ ನನಗೆ ತುಂಬಾ ಬೇಸರ ಬಂದುಹೋಗಿತ್ತು. ಮನೆ ಬೆಳಸೋಕೆ ಮಾ ಇದಾನೆ ಇನ್ನು ಯಾವ ಗಂಡಸಿನ ಸಾವಾಸವೂ ಬೇಡ—ಅಂ ನಿಶ್ಚಯಿಸಿಬಿಟ್ಟಿ.....ಈ ಮಗನ್ನ ಸಾಕಿ ದೊಡ್ಡವನನ್ನಾಗಿ ಮಾ ಮದುವೆ ಮಾಡಿದೆ....ಅವ್ನನ ಸೇವೇಲಿ ಕಾಲ ನೂಕ್ತಿದ್ದೇನೆ..... ಆದರೂ ಒಮ್ಮೊಮ್ಮೆ ಅವನ ನೆಪ್ಪಾಗ್ತದೆ.....ತುಂಬಾ ಸಂಕಟ ಆಗ್ತದೆ....ಈ ಮಗಾ ಅಪ್ಪನ್ನ ಮುಖಾನೇ ನೋಡಲಿಲ್ಲವಲ್ಲಾ ಅಂ ವ್ಯಥೆ ಆಗ್ತದೆ....ನಮ್ಮ ಕೈಲೇನಿದೆ ? ಎಲ್ಲಾ ಆ ಮಾತಾಯಿಯ ಆಟ ಅಂದ್ಕೋತೇನೆ.... "

ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ. ಯಾವುದೊ ವೇದನಾಯುಕ್ತ ಮೌನ ಮುಸುಕಿದಂತಿತ್ತು.

"ಇನ್ನು ನಾಟಕಕ್ಕೆ ಹೋಗೋಣವಾ, ಏನು ಎಲ್ಲಾ ಹೀಗೆ ಕೂತಿದೀರಿ ? "

"ಓ, ನೀನಾ ? ಬಾ ಗಿಡ್ಡಣ್ಣ. ನಾವೂ ಈಗ ಹೊರಡೋಣ ಅಂತಿದ್ದೆವು" ಎಂದ ರಂಗ. ಮುದುಕ ಅತ್ತ ತಿರುಗಿ ನೋಡಿದ ಗಿಡ್ಡಣ್ಣ ದೃಢಕಾಯ ಮಟ್ಟಸದ ಆಳು.

"ಯಾರು ಈತ ? "

"ಅವ ಕಂಭಣ್ಣನ ದೋಸ್ತಿಯಂತೆ. ಸೇಹಿಯವನು. ಸಂತೇಲಿ ನನಗೆ ಹೂತೆಯಾದ."

"ಓ ಹಾಗೋ. ಕಂಭಣ್ಣ ಚೆನ್ನಾಗಿದಾನಾ ಮುದುಕಪ್ಪ?"

ಮುದುಕನ ಬಿಳಿಕೂದಲು, ಸುಕ್ಕುಬಿದ್ದ ಮುಖ, ಪೊದೆಯಂತೆ ಹೆಳೆದಿದ್ದ ಗಡ್ಡಮೀಸೆಗಳನ್ನು ನೋಡಿ, ಅತನ ಕೆಸರನ್ನೇ ವಿಚಾರಿಸದೆ ಮುದುಕಜ್ಜನೆಂದು ಕರೆಯುವ ಸ್ವಾತಂತ್ರ್ಯವಹಿಸಿದ್ದ ಗಿಡ್ಡಣ್ಣ, ರಂಗನೇ ಉತ್ತರಕೊಟ್ಟ:

"ಅವ ಶಾಫಿಕೋಟೆಕೈ ಹೋಗಿ ಸೇರ್ಕೊಂಡಿದಾನಂತೆ!"

"ಮಾರಾ?"

"ಅವಳು ಯಾವನನ್ನೋ ಕಟ್ಟಿಕೊಂಡು ಪರಾರಿಯಾದಳಂತೆ."

"ಕಲಿತ ಜಾಳಿ ಎಲ್ಲಿ ಬಿಡ್ತಾಳೆ! ಹೊಕ್ಕಾಗುತ್ತೆ, ಇನ್ನು ಹೋಗೋಣವಾ?"

ಮೂವರೂ ನಾಟಕ ನೋಡಲು ಹೊರಟರು. ರಂಗಿ ಅವರೆಲ್ಲಾ ಕಣ್ಮರೆಯಾಗುವವರೆಗೂ ಅಲ್ಲೇ ನಿಂತಿದ್ದಳು.

ಬಲವಂತಮಾಡಿ ಮುದುಕನನ್ನು ಅಲ್ಲೇ ಒಂದೆರಡು ದಿನ ನಿಲ್ಲಿಸಿಕೊಂಡರು. ರಂಗಿ ನಿತ್ಯವೂ ಕಂಭನ ವಿಷಯವಾಗಿ ಹಳೆಯ ಸುದ್ದಿಯನ್ನೆಲ್ಲಾ ಹೇಳಿ ಕಣ್ಣೀರಿಡುವಳು. ಮುದುಕನೆದುರಿಗೆ ಮನದಣಿಯಲನ್ನು ತೋಡಿಕೊಂಡದ್ದರಿಂದ ಅವಳ ಮನಸ್ಸಿಗೂ ಏನೋ ಒಂದು ಬಗೆಯ ನೆಮ್ಮದಿ. ಅವನನ್ನು ಕಂಡರೆ ಏನೋ ಒಂದು ಬಗೆಯ ಆತ್ಮೀಯ ವಿಶ್ವಾಸ. ರಂಗನಿಗೂ ಅಷ್ಟೆ—ಮುದುಕನ ಸಹವಾಸ ತುಂಬಾ ಹಿತವಾಗಿತ್ತು.

"ಕಾತ, ನಿನಗೂ ಬೇರೆ ಯಾರೂ ಇಲ್ಲ ಅಂತೀಯಾ. ಇಲ್ಲೇ ಯಾಕೆ ಇರಬಾರ್ದು? ನೀನೊಬ್ಬ ಸಮಗೆ ಭಾರವಲ್ಲ. ನನ್ನ ಜೊತೆ ಸಂತೆಗೆ ಬಾ. ಮನಸು ಬಂದರೆ ನನಗೆ ಸಹಾಯಮಾಡು. ಬೀಡಿ ಹೊಗೇ ಸೊಪ್ಪಿನ ಖರ್ಚು ಅಲ್ಲೇ ಹುಟ್ಟುತ್ತೆ,"

"ಹೂಂ ಹಾಗೇ ಮಾಡು ಮುದುಕಜ್ಜ. ನಮಗೆಲ್ಲಾರಿಗೂ ನೀನು ನಿಂತರೆ ಸಂತೋಷ" ಎಂದಳು ರಂಗಿ.

ಮುದುಕನ ಕಣ್ಣು ಮಂಜಾಯಿತು. ಕಂಠ ಗದ್ಗದವಾಯ್ತು. ಕೆಮ್ಮಿ ಗಂಟಲು ಸರಿಪಡಿಸಿಕೊಂಡು,

"ನೀವು ಒಳ್ಳೇ ಜನ. ನಾನು ಪಾಪಿ, ಪರದೇಶಿ. ಎಲ್ಲಿದ್ದರೂ ಆಯ್ತು ನನಗೆ. ಇಷ್ಟು ವಿಶ್ವಾಸವಾಗಿ ನೀವು ಹೇಳುವಾಗ ನನಗೇನು?" ಎಂದ.

ರಂಗಿ ಕುತೂಹಲವಾಗಿ ತನ್ನತ್ತ ನೋಡುವುದನ್ನು ಕಂಡು ಮುದುಕನಿಗೆ ಸಂತೋಷವಾಯಿತು. ಹೆಗಲಮೇಲಿನ ಕೆಂಪು ಶಲ್ಯವನ್ನು ಕಸ್ತು ಮುಚ್ಚುವಂತೆ ಸುತ್ತಿಕೊಂಡ.

ಆ ದಿನ ಗಿಡ್ಡನ ಮನೆಯಲ್ಲಿ ಶೌಂಗೆ ಬಂದಿದ್ದ ಮಗಳನ್ನು ಊರಿಗೆ ಕಳುಹಿಸಲು ರೈತರು. (ನಾಲ್ಕು ಕಾಲಿನ ಕರ್ಕಾರಿಗು) ತೇಜ ಅಡಿಗೆ. ಊಟಕ್ಕೆ ಬರುವಂತೆ ಮುದುಕನನ್ನು ಕರೆದ. ಅವರೆ ಮುದುಕ ಊಟಕ್ಕೆ ಹೋಗಲಿಲ್ಲ. ತನಗೆ ಅಭ್ಯಾಸ ತಪ್ಪಿಸೋಗಿದೆ, ತಿಂದರೆ ವೈಗಾಗುವದಿಲ್ಲ—ಎಂದ.

ಆದರೂ ಗಿಡ್ಡ ಬಲವಂತವಾಡಿ ತನ್ನ ಮನೆಗೆ ಕರೆದೊಯ್ದು, ಬೆಲ್ಲ ಬಾಳೇಹಣ್ಣು ಕೊಟ್ಟು ಅನಂತರ, ತಿಂಗಳ ಬೇಕಿನಲ್ಲಿ ತಾಂಬೂಲ ಜಗಿಯುತ್ತ ಇಬ್ಬರೂ ಜಗುಲಿಯಮೇಲೆ ಕೂತರು.

"ಮುದುಕಜ್ಜಾ-ಕಂಭಣ್ಣ ನನ್ನ ವಿಷಯ ಎಂದಾದರೂ ಹೇಳಿದ್ದನೇ?" ಗಿಡ್ಡ ಕುತೂಹಲದಿಂದ ಕೇಳಿದ.

"ಹೂಂ. ನೀವಿಬ್ಬರೂ ಮೊದಲು ತುಂಬಾ ದೋಸ್ತಿಯಾಗಿದ್ದಿರಂತೆ. ಆಮೇಲೆ ಏಕೋ ತುಂಬಾ ಮನಸ್ತಾಪ ಬಂದಿತಂತೆ."

"ಹೌದು ಮುದುಕಜ್ಜ. ಅಣ್ಣ-ತಮ್ಮಂದಿರ ಹಾಗಿದ್ದೆವು. ಆ ರಂಗಿಯದೆಸೆಯಿಂದ ನಮಗೆ ವೈರ ಬಂತು. ಆಮೇಲೆ ಏನೇನೋ ಆಗಿಹೊಯ್ತು." ಎಂದು ನಿಡುಸುಯ್ದು ಮುದುಕ, ಅವನ ಮುಖವನ್ನೇ ನಿಟ್ಟಿಸುತ್ತಿದ್ದ. ಗಿಡ್ಡಣ್ಣ ತನ್ನ ಯೋಚನೆಯಲ್ಲೇ ಮುಳುಗಿ, ಆ ಗತ ಕಾಲ್ಪದ ಚಿತ್ರವನ್ನು ನೆನಪಿಗೆ ತಂದುಕೊಳ್ಳುತ್ತಿದ್ದ.

"ರಂಗಿ ಕಂಭಣ್ಣನ್ನ ಲಗ್ನವಾಗಿದ್ದರೆ ನಾ ಮಾತಾಡ್ತಾ ಇರಲಿಲ್ಲ. ಎಲ್ಲ-ಅವೇನೂ ಬಿಟ್ಟುಬಿಡ್ತಿದ್ದೆ. ಆದರೆ ಅವಳನ್ನ ಹೇಳಕೇಳೆ ಕೂಳಿ ಬಿಟ್ಟರು. ಆಗಲೂ ಅವಳು ಗರತಿಯಂತಿರ್ತೀನೆ ಅಂದರೆ ನನಗೆ ಸಹಿಸೋಕಾಗಲಿಲ್ಲ. ರಂಗಿ ಈಗಲೇ ಹೀಗಿದಾಳೆ. ಆ ಖಾನ್ ಯದ ಕಾಲದಲ್ಲಿ ಹೇಗಿದ್ದಾನೆಯೆ ಅಂತೀಯಾ ಮುದುಕಪ್ಪ—ಕೈತೊಳೆದುಂಕೊಂಡು ಮುಟ್ಟಬೇಕು, ಹಾಗಿದ್ದಳು. ಅಲ್ಲದೆ ಗರತಿಯ ಬೆಲುವನ್ನು ನೋಡುವ ಬಗೇನೆ ಬೇರೆ. ಅದು ವೀಳಲು ಬೆಲುವು. ಪತಿಗೆ ಪಕ್ಕೋದಲ್ಲ ಎಂದು ಖಾತ್ರಿಯಾಗಿರುತ್ತೆ. ಆದರೆ ಯಾರಿಗೂ ಸೇರದ ಹೆಣ್ಣಿನ ಬೆಲುವು ಪವ್ಮನ್ನ ತುಂಬ ಪೆಳೆಯುತ್ತೆ. ಏನಾದರೂ ಮಾಡಿ ನಂಗೀನ ಒಲಿಸಿಕೊಳ್ಳಬೇಕು ಅಂತ ಹಟ ಮಾಡಿದೆ. ಈ ವಿಷಯವಾಗಿಯೇ ನನಗೂ ಅವನಿಗೂ ಮಾರಿಹಬ್ಬವಾಗಿ ಜಗಳ ಆಯ್ತು. ಪ್ರಾಣಕ್ಕೆ ಪ್ರಾಣ ಕೊಡುವಷ್ಟು ಸ್ನೇಹಿತನಾಗಿದ್ದವರು ಒಬ್ಬರ ಪ್ರಾಣ ಒಬ್ಬರು ಕಳೆಯೋವಷ್ಟು ವೈರಿಗಳಾದೆವು."

ಮುದುಕ ತಲೆತಗ್ಗಿಸಿ, ನೆಲ ಕೆರೆಯುತ್ತ ಕೇಳುತ್ತಿದ್ದ. ಗಿಡ್ಡ ಕ್ಷಣ ಹೊತ್ತು ತಡೆದು ಹೇಳಿದ.

"ನಿನ್ನ ಕಂತರೆ ಏನೋ ಒಂದು ರೀತಿ ವಿಶ್ವಾಸವಾಗ್ತಿದೆ, ಮುದುಕಜ್ಜ. ನೀನೂ ತುಂಬಾ ನೋವ್ಕಂಡಿರೋನು. ನನ್ನ ಕಷ್ಟಾ ಸುಖಾನೆಲ್ಲಾ ಆರ್ಥಮಾಡ್ಕೋತೀಯು. ನಾನು ರಂಗೀ ಮೇಲಿನ ಆಸೆಯಿಂದ ಕಂಭನಿಗೆ ದೊಡ್ಡ ದ್ರೋಹ ಮಾಡಿದೆ..... ನಿನ್ನ ಸಂಗಡ ಹೇಳಿ ನನ್ನೆದೆ ಹಗುರ ಮಾಡ್ಕೋತೀನೆ.....ಮುದುಕಪ್ಪ. ನೀನು ಯಾರಿಗೂ ಇದನ ಬಾಯಿಬಿಡಾಕಿಲ್ಲ ಅತ, ಪ್ರಮಾಣ ಮಾಡ್ಬೇಕು....." ಎಂದ ದೀನನಾಗಿ.

ಮುದುಕನ ಕೈ ನಡುಗುತ್ತಿತ್ತು. ಕ್ಷೀಣ ಧ್ವನಿಯಲ್ಲಿ ಹೇಳಿದ—

"ದೇವರಾಣೆ ಬಾಯಿಬಿಡಾಕಿಲ್ಲ. ಹೇಳು."

"ರಂಗಿ ಕಂಭಣ್ಣ ತುಂಬ ಪ್ರೀತಿಯಾಗಿದ್ದರು; ಗಂಡ-ಹೆಂಡತಿ-ಯಾತೇನೇ ನಂಬಿಕೆ-ವಿಶ್ವಾಸವಿಂದಿದ್ದರು. ನೀನು ಮಾರೀನ ನೋಡಿದ್ದೆಯೋ ಇಲ್ಲವೋ ಕಾಣೆ. ಸ್ವಲ್ಪವೂ ನಿಯತ್ತಿಲ್ಲದ ಹೆಣ್ಣು. ಗಂಡನ ಕೂಡ ಬಾಳ್ವೆ ಮಾಡಲಾರದೆ ಇಲ್ಲಿಗೇ ಓಡಿಬಂದು ಕೂಲಿ-ನಾಲಿ ಮಾಡೋಳು. ಕಂಭನ ಮೇಲೆ ಅವಳಿಗೆ ಕಣ್ಣು, ಕಂಭ ಕೈತುಂಬ ದುಡೀತಿದ್ದ. ಕೈಬಿಚ್ಚಿ ಖರ್ಚು ಮಾಡ್ತಿದ್ದ. ಮಾರಿ ಎಷ್ಟೆಷ್ಟು ಯುಕ್ತಿ ತೋಡಿದರೂ ಕಂಭ ಅವಳತ್ತ ಕಣ್ಣೆತ್ತಿಯೂ ನೋಡಲಿಲ್ಲ. ಅವಳಿಗೂ ಹಟ ಬಂದಿತ್ತು-ಏನಾದರೂ ಮಾಡಿ ಅವರಿಬ್ಬರಲ್ಲಿ ಜಗಳ ತಂದು ಹಾಕಬೇಕು ಅಂತ.

ನನಗೂ ಅದೇ ಬೇಕಾಗಿತ್ತು. ನಾನೂ ಅವಳೂ ಸೇರಿ ಮಸಲತ್ ಮಾಡಿದೆವು.

ಮಾರಿ ತುಂಬಾ ಯುಕ್ತಿವಂತೆ. ಹಾಸನದ ಜಾತ್ರೆಗೆ ಕಂಭ ಹೋಗ್ತಾನೆ ಅಂತಾ ಗೊತ್ತಾದಾಗ ತಾನೂ ಹೊರಟಳು. ಕಂಭನ್ನ 'ಒಳ್ಳೆಯ ಸೀರೆ ಆರಿಸುತೀಯ' ಎಂದು ಪುಸಲಾಯಿಸಿ ಅಂಗಡಿಗೆ ಕರೆದುಕೊಂಡು ಹೋಗಿ, ಇಪ್ಪತ್ತೈದುರೂಪಾಯಿನ ಸೀರೇನ ಕೊಂಡಳು. 'ನಿನಗೇನಾ ಸೀರೆ?' ಎಂದು ಅವ ಕೇಳಿದ್ದಕ್ಕೆ 'ಇಲ್ಲ ಗಿಡ್ಡಣ್ಣನಿಗೆ. ಅವ ಯಾರಿಗೋ 'ಮುಯ್ಯ' (ಉಡುಗೊರೆ) ಮಾಡೋಕಂತೆ' ಎಂದಳು. ಕಂಭಣ್ಣ ಎತ್ತನ್ನು ಕೊಳ್ಳಲು ಅಲ್ಲೇ ನಿಂತಿ ಕಡೆಯುವರೆಗಿದ್ದರೆ ತುಂಬಾ ಚಾರಿ (ಅಗ್ಗ) ಯಾಗಿ ಎತ್ತು ಸಿಕ್ಕಿವೆ ಅಂತ. ಮಾರಿ ಮಾತ್ರ ಊರಿಗೆ ಬಂದಳು.

ನಾನು ಮಾರಿ-ಕಂಭ ಮಾತಾಡಿಕೊಂಡು ಹೋಗಿದಾರೆಂದು ರಂಗೀಗೆ ಚಾಡಿ ಹೇಳಿದೆ. ಅವಳು ಕಿವಿಯಮೇಲೇ ಹಾಕಿಕೊಳ್ಳಲಿಲ್ಲ. ಸೀರೆ ಕೊಂಡುಕೊಟ್ಟಿದ್ದನ್ನು ಕಣ್ಣಾರೆನೋಡಿದೆ ಎಂದೆ. ಅದರೂ ಅವಳು ತಂಬಲಿಲ್ಲ. ಮಾರೀನ್ನೇ ಕೇಳಿನೋಡು ಎಂದೆ. ಮಾರಿ ಸೀರೆ ತೋರಿಸಲು ಬೇಕೆಂದೇ ಬಂದಳು, ಬಿಲ್ಲು ತೋರಿಸಿದಳು. ಕಂಭನ ಹೆಸರಿತ್ತು. ಕಂಭನಿಗೆ ತನ್ನ ಹೆಸರು ಬರೆಯುವುದಕ್ಕೆ ಬರ್ತಾ ಇತ್ತು. ಅದೊಂದು ಹೆಮ್ಮೆ ಅವನಿಗೆ. ಅದಕ್ಕೆ ತನ್ನ ಹೆಸರಿಗೇ ಬಿಲ್ಲು ಹ್ಹಾಕಿಸಿದ್ದ, ಕಂಭನೇ ತೆಗೆದುಕೊಟ್ಟ ಎಂಬ ವಿಚಾರ ಅಣೆಯುಬ್ಬಿಳು.

ಹೆಂಗುಸರು ಈ ವಿಷಯದಲ್ಲಿ ಬಹಳಾ ಸೂಕ್ಷ್ಮ, ಮುದುಕಜ್ಜ. ನಾವು ಯೋಚನೆಮಾಡಿದಂತೆ ರಂಗಿ ತುಂಬಾ ಸಿಟ್ಟಾದಳು. ಇಪ್ಪತ್ತೈದನ್ನ ತಾನೇ ಕೊಟ್ಟು ಮಾರಿಯಿಂದ ಆ ಸೀರೇನ ಕೊಂಡಳು. ಕಂಭ ಬರೋವೇಳೆಗೆ ತಾನು ಆ ಸೀರೆ ಉಟ್ಟು ಅವನ್ನ ಹಂಗಿಸಬೇಕು. ಅಂತ ಅವಳ ಆಸೆ.

ಜಾತ್ರೆಯಿಂದ ಬಂದವರು 'ಕಂಭಣ್ಣ ಸಂಜೇ ಬಸ್ಸಿಗೆ ಬರ್ತಾನೆ' ಅಂತ ಸುದ್ದಿ ಹೇಳಿದರು. ರಂಗಿ ಹೊಸಾಸೀರೆ ಉಟ್ಟು 'ಅವನ ಸ್ವಾಗತಾರಾ ಬಿಡಸ್ತೀನಿ' ಅಂತಾ ಕಾಯ್ತಾ ಇದ್ಲು. ನಾನು, ಮಾರಿ ರಸ್ತೇಬಾಜಿನಲ್ಲಿದ್ದ ಹೊಲದ ಹತ್ತಿರ ಕಾಯ್ತಾ ಇದ್ದೆವು.

ಕಂಭಣ್ಣ ಬಸ್ಸಿಳಿದ. ಅವನು ಬರೋದನ್ನ ಕಂಡೂ ಕಾಣದಂತೆ, ಮಾರಿ ಅಂದಳು.

ಸುವರ್ಣಸಂಧಿ! ಸಚಿತ್ರಗ್ರಂಥ!! ಸುಂದರ ಮುದ್ರಣ!!!

ಶಿಕ್ಷಣ - ಶಿಕ್ಷಕದರ್ಶನ

ಶಿಕ್ಷಕರಿಗೂ ಶಿಕ್ಷಕವಿದ್ಯಾರ್ಥಿಗಳಿಗೂ ಉಪಯುಕ್ತ. ವಾಗುವಂತಹ, ಶಿಕ್ಷಣತಜ್ಞರಿಂದ ಪರಿಶೀಲಿಸಲ್ಪಟ್ಟಿರುವಂತಹ, ಅನೇಕ ವಿದ್ವನ್ಮಣಿಗಳ ಸದಭಿಪ್ರಾಯವನ್ನು ಪಡೆದಿರುವಂತಹ ಶೈಕ್ಷಣಿಕ ಉದ್ಗ್ರಂಥ.

ಕರ್ನಾಟಕ ವಿ. ವಿ. ನಿಲಯದ ಕುಲಪತಿಗಳಾದ ರ್ಯಾಂಗ್ಲರ್ ಪಾವಟೆಯವರು ಮುನ್ನುಡಿಯನ್ನು ಬರೆದಿದ್ದಾರೆ.

೪೧ ಚಿತ್ರಪಡಿಯಚ್ಚುಗಳಿವೆ! ೪೭೫ ಪುಟಗಳು. ಸಾದಾಪ್ರತಿಗೆ ೩-೦-೦. ಸುಂದರ ಪ್ರತಿಗೆ ೪-೦-೦ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ ದೊರೆಯುವುದು.

ವಿವರಗಳಿಗಾಗಿ ಬರೆಯಿರಿ:

೧. ನಿಂಬಾಳ ಕಲ್ಯಾಣಪ್ಪ, ಪೋ. ತಿಕೋಟೆ, ಜಿ. ವಿಜಾಪುರ

೨. ಆಶಾ ಸಾಹಿತ್ಯಮಂದಿರ, ವಿಜಾಪುರ

"ಸೀರೇನಾ ಮುಯ್ಯ ಮಾಡಿದೆಯಾ ಗಿಡ್ಡಣ್ಣ? ಎಲ್ಲೂ ಹೋದಂತೆ ಕಾಣ್ಲಿಲ್ಲಾ?" ನಾನು ಅವನಿಗೆ ಕೇಳುವಂತೆ ಜೋರಾಗಿ,

"ನಂಗೇನು ಭಯವೇನು? ನನ್ನ ಕೂಡಿದೋಳಿಗೆ ಖುಷಿಯಾಗಿ ಕೊಟ್ಟೀನೆ.....ಊರೆಲ್ಲಾ ಸಾಕ್ಷಿ ಇದಾರೆ ಅವಳನ್ನ ಸೂಳೆ ಬಿಟ್ಟರೋಕೆ....." ಎಂದೆ.

ಕಂಭಣ್ಣ ಗಕ್ಕನೆ ಕ್ಷಣ ಅಲ್ಲೇ ನಿಂತ. ಆಮೇಲೆ ಬಂದೇ ಬಿಟ್ಟ. ನನಗೆ ಭರಭರ ಹೊಟ್ಟೆ.

ಮುಂದಿನ ತಮಾಷೆ ನೋಡೋಕೆ, ನಾನು ಮಾರಿ ಹೊಲದ ಮೇಲೇನೇ ಒಳದಾರೀಲಿ ಹಾದು ಅವನಿಗೂ ಮುಂಚೆ ಮನೆಗೆ ಬಂದೆವು.

ಮಾರಿ ಹೋಗಿ ಭಯಪಟ್ಟವಳಂತೆ ಅವಳಿಗೆ ಹೇಳಿದಳು:— ಅವನು ಬರೋವೇಳೆಗೆ ಉಟ್ಟಿರಬೇಡವ್ವಾ—ಸಿಟ್ಟಿನಲ್ಲಿ ಏನಾರೂ ಮಾಡ್ಯಾನು.. ಗಿಡ್ಡಣ್ಣ ಕೊಂಡುಕೊಟ್ಟ ಅಂತ ಹೇಳು ಅಂದಿದ್ದೆ..... ಆಮೇಲೆ ಸಿಟ್ಟಾದಾನು—ಅಂತ.

ಕಂಭ ಬಂದವನೇ ಆ ಸೀರೆ ಉಟ್ಟಿರೋದನ್ನ ಕಂಡ. ಸಿಟ್ಟಿನಲ್ಲಿ ವೈನುರೆಕು ಹೊಡೆಯೋಕೆ ಹೋದ. ಇಬ್ಬರಿಗೂ ಬಿಸಿಬಿಸಿ ಮಾತಾಯಿತು. ಈ ಗಲಾಟೆ ಕೇಳಿ ಜನ ನೆರೆದುಬಿಟ್ಟರು. ಕಂಭ

ಶಾಂತಿಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ ೧೫-೦-೦
ಲೇ. ಮಿರ್ಜಿ ಅಣ್ಣಾರಾಯರು

ಹಾಲು-ಹಣ್ಣು (ಕವನ ಸಂಗ್ರಹ) ೧-೮-೦
ಲೇ. ಭುಜೇಂದ್ರ ಮುಪಿಸವಾಡಿ

ಮೂಲಶಿಕ್ಷಣದ ಮೌಲ್ಯಮಾಪಣ ೦-೧೫-೦
ಲೇ. ಮಿರ್ಜಿ ಅಣ್ಣಾರಾಯರು

ಬಾಳ-ಬಂಡಿ (ಕವನ ಸಂಗ್ರಹ) ೦-೮-೦
ಲೇ. ಬಾಳು ಬಿ ಉಪಾಧ್ಯೆ

ಭರತೇಶನ ನಾಲ್ಕು ಚಿತ್ರಗಳು ೧-೪-೦
ಲೇ. ಮಿರ್ಜಿ ಅಣ್ಣಾರಾಯರು

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ
ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇಡಬಾಳ
ಪೋ. ಸೇಡಬಾಳ (ಜಿಲ್ಲಾ ಬೆಳಗಾಂವಿ)

ಅವಳನ್ನ ಒಂದೇಟು ಹೊಡೆದ. ನಾ ಹೋಗಿ ಅವನನ್ನು ತಡೆದೆ—ತಾಳೀ ಕಟ್ಟಿದೀಯೇನೋ ಹೊಡೆಯೋಕೆ—ಎಂದು ಹಂಗಿಸಿದೆ ಅಲ್ಲಿ ನೆರೆದವರು ಸುಮ್ಮನಿರ್ತಾರೆಯೇ? ನಳ್ಳು ಗೇಲಿ ಮಾಡಿದರು. ಅವರಿಗೆಲ್ಲಾ ಕಂಭನಮೇಲೆ ಅಸಹಾಯೆಯಿತ್ತು. ಆ ದಿನ ಎಲ್ಲಾ ತೀರಿಸಿಕೊಂಡರು. ಕಂಭಣ್ಣ ತಲೆತಗ್ಗಿಸಿ ಸೀದಾ ಹೋಗಿಬಿಟ್ಟ—ಮಾರಿ ವಿಶ್ವಾಸದಿಂದ ಒಳಕ್ಕೆ ಕರೆದು ಉಪಚಾರ ಮಾಡಿದಳು. ಕಂಭನಿಗೆ ಜನಕ್ಕೆ ಮುಖ ತೋರಿಸೋಕೂ ನಾಚಿಕೆಯಾಗಿತ್ತು. ಮಾರಿ ಉಪಾಯ ಮಾಡಿ ರಾತ್ರಾನುರಾತ್ರಿ ಅವನನ್ನು ಕರೆದುಕೊಂಡು ಪರಾರಿಯಾಗ್ಬಿಟ್ಟಳು.

ಮಾರಿಯ ಕೈಗೆ ನಾನೇ ಇನ್ನೂರು ರೂಪಾಯಿ ಹಾಕಿದ್ದೆ.

ಗಿಡ್ಡಣ್ಣನ ಧ್ವನಿ ಭಾರವಾಗಿತ್ತು. ಕಣ್ಣು ಮಂಜಾಗಿತ್ತು. ತನ್ನ ಮನಸ್ಸಿನ ಉದ್ವೇಗ ಕಳೆದುಕೊಳ್ಳಲು ಕೈಗೆ ಸಿಕ್ಕಿದ ಸಣ್ಣ ಕಲ್ಲುಗಳನ್ನೆಲ್ಲಾ ಎಸೆಯುತ್ತಿದ್ದ. ಕ್ಷಣಬಿಟ್ಟು ಮತ್ತೆ ವ್ಯಥೆಯಿಂದ ಹೇಳಿದ—

"ಮಾರಿಗೆ ಕಂಭ ಸಿಕ್ಕಿದ. ಆದರೆ ನಂಗೆ ರಂಗಿ ದಕ್ಕಲಿಲ್ಲ. ಕಂಭ ಹೋದ ಸುದ್ದಿ ತಿಳಿದು ಕೊರಗಿ ಕಡ್ಡಿಯಾದಳು ನಾನೂ ಸಲಿಗೆಯಿಂದ ಎಷ್ಟೋ ಸಮಾಧಾನ ಹೇಳ್ತಿದ್ದೆ. ಕಡೆಗೆ ಒಂದು ದಿನ—

"ಆ ಹಾಳಾದೋನಿಗಾಗಿ ಏಕೆ ಹುಯ್ಕೊತೀಯೆ—ಅಷ್ಟ ನೊಬ್ಬನೇ ನಾ ಗಂಡಸು ಮಗ? ನಾನಿಲ್ವಾ—ನಿನ್ನ ಎಳ್ಕಚ್ಚೇಕಾದ್ರೂ ತಲೆ ಮೇಲೆ ಹೊತ್ತೀನಿ" ಅಂದೆ.

ಅವಳಿಗೆ ತುಂಬ ಸಿಟ್ಟು ಬಂತು. ಇನ್ನು ಆ ವಿಷಯ ಮಾತಿತ್ತರೆ ನನ್ನ ಕೂಡ ಮುಖ ಕೊಟ್ಟು ಮಾತಾಡೋದಿಲ್ಲ ಅಂತ ಆಣೆ ಇಟ್ಟುಕೊಂಡ್ಲು. ಇನ್ನು ಯಾವ ಗಂಡಸೂ ನನ್ನ ಬಾಳಿಗೆ ಬೇಡ—ಇದಕ್ಕೆ ನಾ ತಪ್ಪಿದರೆ ಅಮ್ಮನಾಣೆ—ಅಂದಳು. ಅಂದಂತೆ ನಡಸೇ ಬಿಟ್ಟಳು ಏನು ನಡತೆ, ಎಂತಾ ನಿಯತ್ತು! ಅವಳೆದುರಿಗೆ ತಲೆ ತಗ್ಗಿಸುವಂತಾಗುತ್ತೆ ನನಗೆ!" ಎಂದ ನಿಟ್ಟುಸುರ್ಬಿಟ್ಟ.

ಸ್ವಲ್ಪ ಹೊತ್ತು ಯಾರೂ ಮಾತನಾಡಲಿಲ್ಲ.

"ಹೂಂ. ಎಲ್ಲಾ ಅವರವರ ಕರ್ಮ. ಈಕೆಗೆ ಇಷ್ಟು ಶಾಂತಿಯಾದರೂ ಇದೆ. ಆ ಪಾಪಿಗೆ? ಕುಡಿತ ಕೆಟ್ಟ ಸಹವಾಸನೂಡಿ ಪಡಬಾರದ ಪಾಡುಬಿದ್ದು.....ಮನುಷ್ಯನಂತೆ ಬಾಳದೆ ನಾಯಿ-ಬಾಳು ಬಾಳಿದ.....ಎಲ್ಲಾ ಕಳೆದುಕೊಂಡು ಪರದೇಶಿಯಂತೆ ಕಾಪ್ಟಿ ತೋಟಕ್ಕೆ ಹೋದ....ಅವರವರ ಪಾಪ ಅವರನ್ನ ಸುಂಗುತ್ತೆ." ಎಂದ ಮುದುಕ—ಅವನ ಧ್ವನಿಯಲ್ಲಿ ಮರುಕವಿತ್ತು, ಕಟುಸತ್ಯವಿತ್ತು.

ಮುದುಕ ಅಸ್ಥಿರ ನಡಿಗೆಯಿಂದ ನಡೆಯುತ್ತಾ ಬಂದು ಜಗುಲಿಯಲ್ಲಿ ಮಲಗಿಕೊಂಡ. ಸರಿ ರಾತ್ರಿಯಾದರೂ ನಿದ್ದೆ ಹತ್ತಲಿಲ್ಲ....

ಒಳಗೆ ರಂಗ—ತೊಂಗಿ ಮಾತನಾಡುವುದು ಕೇಳಿಸಿತು.

"ಮಗಾ.....? ನಿದ್ದೆ ಬಂತಾ.....?"

"ಇಲ್ಲವ್ವಾ, ನೀ ಮೊಮ್ಮಗ ಹೊಡಕೋತೀನ್ನವಲ್ಲಾ ಇಷ್ಟು ಹೊತ್ತೂನೂ!"

"ಆ ಮುದುಕಪ್ಪನ ಹೆಸರೇನಂತೆ?"

"ಕೇಳಲಿಲ್ಲವ್ವಾ?"

ಕ್ಷಣ ಮೌನ.

"ಕಂಭನಿಗೆ ಹೇಳೇ ಮೇಲೊಂದು ಮಚ್ಚೆ ಇತ್ತು. ಈ ಮುದುಕನಿಗೂ ಹಾಗೇ ಇದೆಯಲ್ಲಾ.....ಅದಕ್ಕೆ ನನಗೆ ಅನುಮಾನ ಆತ್ತು."

"ಓ. ಬಿತವ್ವಾ ಗಿಡ್ಡಪ್ಪನ ಜೊತೆಯೋನು ಅಂತೀಯ. ಇವನ್ನ ನೋಡಿದರೆ ಸಾಯೋ ಮುದುಕ....."

"ಆ ಮಾತಾಯಿಗೇ ಗೊತ್ತಪ್ಪಾ—ಗಿಡ್ಡಣ್ಣ ರೈತರ ಬಾಳು ಬಾಳ್ತಿದಾನೆ. ಅವನೊ ಕುಡಿತ ಕೆಟ್ಟ ಚಾಳೀಲಿ ನಲುಗಿದಾನಂತೆ. ಅದೇಕೋ ಈ ಮುದುಕಪ್ಪನ್ನ ಕಂಡಾಗಿನಿಂದ ನನ್ನ ಶಾಂತಿ ಕದಡಿ. ಹೋಗಿನೆ....ಕಂಭನಿಗೆ ಎಡೆ ಮೇಲೆ ದೊಡ್ಡ ಮಚ್ಚೆಯಿದೆ. ಬಲಗಾಲ ಮೇಲೆ ಸುಟ್ಟ ಗಾಯದ ಕಲೆ ಇದೆ...ಎತಗೆನ್ನೆ ಮೇಲೆ ದೊಡ್ಡ ಸಂಗಾತಿಯಿದೆ...ಏನೇ ಆಗಲಿ, ನಾಳೆ ವಿಚಾರಿಸು."

"ಆಗಲವ್ವಾ....ಎಲ್ಲಾ ಪರೀಕ್ಷೆ ಮಾಡಿಯೇ ನೋಡ್ತೀನಿ."

ಮಾರನೆಯ ದಿನ ಬೆಳಿಗ್ಗೆ ರಂಗ ಬಂದು ನೋಡಿದ. ಜಗುಲಿ ಖಾಲಿಯಾಗಿತ್ತು. ಹಾಸಿದ ಚಾಪೆಯೊಂದೇ ಕಂಡಿತು.

ಮುದುಕ ತನ್ನ ಗಂಟಿನ ಸಮೇತ ಎಲ್ಲಿಗೊ ಹೊರಟುಹೋಗಿದ್ದ.

ಕನ್ನಡ ವಿನೋದ ವಿಲಾಸ

ಶೀ. ಬಿಚಗೇರಿ ಕೃಷ್ಣಶರ್ಮಾ, ಧಾರವಾಡ

ನೊದಲ ಮಾತು

ಕನ್ನಡಜನತೆಯ ಸಂಸ್ಕೃತಿ ಇಂದು ನಿನ್ನೆಯದಲ್ಲ ಸುಮಾರು ೨೦೦೦ ವರುಷಗಳ ಜ್ಞಾತಚರಿತ್ರೆ ಅದರ ಹಿನ್ನೆಲೆಯಲ್ಲಿ ಇದೆ. ಈ ದೀರ್ಘವಾದ ಅವಧಿಯಲ್ಲಿ ಕನ್ನಡಜನತೆ ಅನೇಕ ಜೀವನಸೌಂದರ್ಯ[*]ಗಳನ್ನು ನಿರ್ಮಿಸಿ ಅಳವಡಿಸಿಕೊಂಡಿದೆ. ಮಾನವತೆಯ ವಿಕಾಸದ ಒಂದು ಮಹತ್ತ್ವದ ಲಕ್ಷಣವೆಂದರೆ ಹಾಸ್ಯ-ವಿನೋದಗಳ ವಿಲಾಸ. ಜೀವನ ಅದು ಕನ್ನಡ ಜನಜೀವನದಲ್ಲಿ ಅವಿಚ್ಛಿನ್ನವಾಗಿ ಬೆಳೆಯುತ್ತ ಬಂದಿದೆ. ನಮ್ಮ ಪ್ರಾಚೀನ ಜೀವನನಿದರ್ಶಕಗಳಾದ ಶಿಲಾಶಾಸನ-ತಾಮ್ರಶಾಸನಗಳನ್ನು ಪರಿಶೀಲಿಸಿದರೆ, 'ಜನಮೆಲ್ಲಂ ಸುಖಸಂಕಥಾ ವಿನೋದದಿಂದಿರೆ' ಎಂಬ ಮಾತು ಬಂದಿರುವ ಶಾಸನಗಳೇ ಬಹು ಸಂಖ್ಯಾತವಾಗಿರುವುದು ಕಂಡುಬರುವುದು. ನಮ್ಮ ರಾಜಕವಿ ನೃಪತುಂಗನು 'ಚದುರರ್ ನಿಜದಿಂ, ಕುರ್ಕೋದದೆಯುಂ ಕಾವ್ಯ-ಪ್ರಯೋಗ ಪರಿಣತಮತಿಗಳ್' ಎಂದು ಹೊಗಳಿಹಾಡಿರುವ—ಕವಿ ಶಕ್ರವರ್ತಿ ಪಂಪನು 'ಚಾಗದ, ಭೋಗದ ಅಕ್ಕರದ ಗೇಯದ, ಗೊಟ್ಟಿಯ ಅಲಂಪಿನಿಂಪುಗಳ್ಗೆ ಆಗರಮಾದ ಮಾನಿಸರೆ ಮಾನಿಸರು' ಎಂದು ಕನ್ನಡಿಗರ ಗುಣವನ್ನು ಕಂಡನಾಗಿಯೇ ಬಣ್ಣಿಸಿ ಹೇಳಿರುವನು. ಇಂತಹ ಕುಲರವಿಕರವಾದ ಕನ್ನಡಿಗರ ಜೀವನವು ಎಷ್ಟೊಂದು ಹಾಸ್ಯ-ವಿನೋದಗಳಿಂದ ತುಂಬಿಕೊಂಡು ಬಂದಿದೆಯೆಂಬುದನ್ನು, ಅವರ ಸಂಸ್ಕೃತಿಯ ಪ್ರತಿಬಿಂಬವಾದ ನಮ್ಮ ಸಾಹಿತ್ಯದ ಹಲವು ರೂಪಗಳಲ್ಲಿ ಕಂಡುಕೊಳ್ಳಬಹುದು. ನಾಯಕ-ನಾಯಿಕೆಯರ ಸಲಾಪ, ವಿಕ್ರಮ-ವಿಕ್ರಾಂತರ ವಿನೋದಗೋಷ್ಠಿ, ಎದುರು ಪಕ್ಷದವರನ್ನು ಕುರಿತು ಆಡುವ ವ್ಯಂಗ್ಯವಚನ—ಮಾಡುವ ವಿಡಂಬನೆ—ಇವೆಲ್ಲ ನಾಗರಿಕ ಜನತೆಯು ವಿನೋದವಿಲಾಸಕ್ಕೆ ಉದಾಹರಣೆಗಳಾಗಿವೆ. ಹಾಡುಗಬ್ಬಿಗರಾದ ರಾಘವಾಂಕ, ಕುಮಾರವ್ಯಾಸ, ರತ್ನಾಕರವರ್ಣಿ, ಕನಕದಾಸ, ಲಕ್ಷ್ಮೀಶ ಮೊದಲಾದವರ ಕೃತಿಗಳಲ್ಲಂತೂ ಹಾಸ್ಯ ವಿನೋದಗಳು ಹುಲುಸಾಗಿ ಬೆಳೆದು ನಿಂತಿವೆ. ಹೊಸಕಾಲದ ಹಳೆಯ ಕವಿಯಾದ ಮುದ್ದಣನ 'ರಾಮಾಶ್ವಮೇಧ' ಎಂಬ ಕೃತಿ, ಕನ್ನಡಿಗರ ವಿನೋದವಿಲಾಸವನ್ನು ಸುಂದರವಾಗಿ ತಂಬುತುಂಬಾಗಿ ರೂಪಿಸಿದಂತಹದು. ದೈವಭಕ್ತಿ, ಧರ್ಮ, ನೀತಿಗಳನ್ನು ಸಮಾಜಕ್ಕೆ ಬೋಧಿಸಲೆಂದು ಮುಂದೆ ಬಂದ ವೀರಶೈವ ಶರಣರೂ, ಹರಿದಾಸರೂ ತಮ್ಮಾತ್ಮದಲ್ಲಿಯ ದೋಷಗಳನ್ನೂ ವ್ಯಕ್ತಿಯ ಮನದ ಅಶಕ್ತತೆಗಳನ್ನೂ ತೋರಿಸುವಾಗ, ಅನೇಕ ಕಡೆಗೆ ಹಾಸ್ಯ-ವಿನೋದಗಳನ್ನು ಬಳಸಿಕೊಂಡಿದ್ದಾರೆ.

ಇನ್ನು ನಮ್ಮ ಜನಪದಸಾಹಿತ್ಯದಲ್ಲಿ ಪರಂಪರೆಯಿಂದ ಬಂದಿರುವ ಮಕ್ಕಳ ಹಾಡು, ಗಾದೆಯ ಮಾತು, ಚುಟುಕುಸಳಿ, ಹಬ್ಬದ ಹಾಡು, ಸಾಂಗತ್ಯ, ಲಾವಣಿ—ಇವನ್ನೆಲ್ಲ ನೋಡಿದರೆ, ಅವುಗಳ ಗುರಿ ಕೇವಲ ವಿನೋದಪ್ರಚಾರವೇ ಆಗಿರುವುದು. ಗರತಿಯರು ಬೀಸುವಾಗ ಕುಟ್ಟುವಾಗ ಹಾಡುವ ತ್ರಿಪದಿಯಲ್ಲಿ ತಮ್ಮ ಬಳಗದ ಜನರನ್ನೆ ಅಣಕದ ನುಡಿಗಳಿಂದ ಬಣ್ಣಿಸಿ ವಿನೋದ ಮಾತುವುದನ್ನು ಹಲವಾರು ಕಡೆಗೆ ನೋಡಬಹುದು. ಸೋದರಸೊಸೆಯೊಬ್ಬಳು ತನ್ನ ಸೋದರಮಾವನನ್ನು ಅಣಕಿಸಿದುದು ಹೀಗೆ :

" ಮಾನೈನ ಕುದರೀದು ಏನವ್ವ ಸಿಂಗಾರ
ದಾಗೂಡಿ ಬಳ್ಳಿ ಕಡಿವಾಣ.....
ದಾಗೂಡಿ ಬಳ್ಳಿ ಕಡಿವಾಣ ಹಿಡಕೊಂಡು
ಹಾರ್ಯಾನ ಹಾರಿ ಹತ್ತ್ಯಾನ ॥
ಹಾರಿ ಹತ್ತುದರೊಳಗ ಹಾಳು ಹಗೆಯಲಿ ಬಿತ್ತ
ನುಸಿ ಹತ್ತಿ ಮಾವ ಹಸಗೆಟ್ಟ.... ...
ನುಸಿ ಹತ್ತಿ ಮಾವ ಹಸಗೆಟ್ಟ ಅವರವ್ವ
ಬಿಸಿಲಿಗ್ಹಾಕೋದು ಮರತಾಳೋ ! "

ಈ ಹಾಡನ್ನು ಕೇಳಿದ ಸೋದರಮಾವ, ತನ್ನ ಸೋದರ ಸೊಸೆಯನ್ನು ಇನ್ನಿಷ್ಟು ಪ್ರೀತಿಯಿಂದ ಕಂಡಿರಬಹುದಲ್ಲವೆ ?

ಒಬ್ಬ ನಾದಿನಿ ತನ್ನ ಅತ್ತಿಗೆಯ ಸ್ವಭಾವವನ್ನು ಚಿತ್ರಿಸಿ ಹೀಗೆ ಹಾಡುತ್ತಾಳೆ:

" ಅಣ್ಣನ ಹೆಂತತಿ ಕಣ್ಣಿಗೆ ಒಳ್ಳಾಕಿ
ಸುಣ್ಣದ ನೀರು ಒಲಿಮುಂದ.....
ಸುಣ್ಣದ ನೀರು ಒಲಿಮುಂದ ಇಟ್ಟುಕೊಂಡು
ಎಮ್ಮಿಹಾಲಂತ ಬಡಿಸ್ಯಾಳ ॥ "

ಅದನ್ನು ಕೇಳಿದ ಅತ್ತಿಗೆ ಸುಮ್ಮನಿರುವಳೆ ? ನಾದಿನಿಗೆ ತಕ್ಕ ಉತ್ತರ ಕೊಟ್ಟೇಬಿಟ್ಟಳು.

---

* ಈ ಲೇಖನದ ಪೂರ್ವಾರ್ಧವನ್ನು ಧಾರವಾಡದ ಆಕಾಶವಾಣಿಯಿಂದ ಪ್ರಸಾರಗೊಂಡ ಕಾರ್ಯಕ್ರಮದಲ್ಲಿ ಓದಲಾಗಿದೆ. ಸಂ. ಜ.

" ಹೆಣ್ಣುಮಗಳಿಲ್ಲಂತ, ಮಣ್ಣುಗೊಂಬಿಯ ಮಾಡಿ
ಬಣ್ಣಮಣಿವ್ಯಾಗ ಕೂಡಿಸಿದ.....
ಬಣ್ಣಮಣಿವ್ಯಾಗ ಕೂಡಿಸಿದ ಅಣ್ಣಯ್ಯನ
ಹೊನ್ನ ಬಾಳೆಲ್ಲ ಮಣ್ಣಾಯ್ತು ॥ "

ಸ್ವಾತಿಗೆ ತಕ್ಕ ಮರುವಾತು ಇಬ್ಬರೂ ನಗುನಗುತ್ತಲೇ ಬೀಸತೊಡಗಿದರು. ಆಗ ನಾದಿನಿ ಮತ್ತೊಂದು ಹಾಡಿದಳು:

" ಅತ್ತಿಗಿ ಹಡೆಯುಲಿ ಕತ್ತೆ ನ್ಯೆ ಕರೆಯಲಿ
ಹಿತ್ತಲಿನ ಬಾಳಿ ಗೊನೆ ಬಿಡಲಿ.....
ಹಿತ್ತಲಿನ ಬಾಳಿ ಗೊನೆ ಬಿಡಲತ್ತಿಗೆ ಮಗಳು
ಅತ್ತೆಂದು ನನ್ನ ಕರೆಯಲಿ | "

ಅತ್ತಿಗೆಯ ಹೃದಯ ಒಳಗೊಳಗೇ ಅರಳಿಂಬೇಕು. ಅವಳೂ ಒಂದು ಹಾಡನ್ನಾರಂಭಿಸಿದಳು.

" ಗೋದಿಯ ಬೀಸಾಕ ನಾದಿನಿಯು ಜಾಣಳು
ನಾಗರ್ಹೆಡೆ ಹಾಂಗ ನಲಿನಲಿದು—
ನಾಗರ್ಹೆಡೆ ಹಾಂಗ ನಲಿನಲಿದು ಬೀಸ್ಯಾಳ
ಸೋದರಳಿಯನ ಮದುವೆಗೆ ॥ "

ಈ ಮಾದರಿಯ ಜೀವನಸಾಹಿತ್ಯದಲ್ಲಿ ವಿನೋದವೇ ಹಾಸುಹೊಕ್ಕಾಗಿರುವುದು. ಈ ಹೆಣ್ಣುಮಕ್ಕಳ ಹಾಡುಗಳಂತೆಯೇ ಗಂಡಸರ ಹಾಡುಗಳೂ ಹಾಸ್ಯ-ವಿನೋದಗಳಿಂದ ತುಂಬಿರುವುವು. ಶ್ರಮಜೀವಿಗಳಾದ ನಮ್ಮ ಜನಸಾಮಾನ್ಯರು ತಮ್ಮ ಶ್ರಮವನ್ನು ಕಡಿಮೆ ಮಾಡಿಕೊಳ್ಳುವುದು ಇಂತಹ ವಿನೋದದ ಹಾಡುಗಳಿಂದಲೆ. ಒಬ್ಬ ಶ್ರಮಜೀವಿಯ ಪ್ರಯಾಣಜೀವನದ ಉದ್ಗಾರವಿದು:

" ಪಟ್ಟಣದ ಹೆಣ್ಣೀಗೆ ಹೊಟ್ಟಾಶ್ರಯ ಕರಳಿಲ್ಲೊ
ಕೊಟ್ಟೇನಂದರ ಕೈಲಿಲ್ಲೋ !
ಕೊಟ್ಟೇನಂದರ ಕೈಲಿಲ್ಲೋ ಆಕಿನ್ನ
ಬಿಟ್ಟು ಬಿಡಲಾಕ ಮನಸಿಲ್ಲೊ ! "

ಪಾಪ, ತುಂಬ ಗೊಂದಲದಲ್ಲಿಯೇ ಬಿದ್ದಿದ್ದಾನೆ. ಇನ್ನೊಬ್ಬ ಇಬ್ಬರು ಹೆಂಡದಿರ ಗಂಡ, ತನ್ನ ಪರಿಚಯವನ್ನು ಹೀಗೆ ನೀಡಾಗಿಸಿ ಕೊಂಡಿದ್ದಾನೆ:

" ಸಾಯಲೇನೋ ಯಪ್ಪಾ ಸಾಯಲೇನೋ,
ಸತ್ತೇ ಹೋಗಲೇನೋ !
ಸವತ್ಯಾರು ಸವತ್ಯಾರು ಕಡಿದಾಡಿಕೊಂತ |
ಶಾಂವಿಗಿ ತುಪ್ಪಾ ಉಣ್ಣಾಳ ನೀಡಿ
ಲಗು ಲಗೂನ ಉಂಡೇಳಂತ |
ಸೋಟ ಸೊಟ್ಟಗೇ ತಿವಿದಾರಣ್ಣಾ ॥ ೧ ॥
ಇಬ್ಬರು ಹೆಂಡಿರ ಜಗಳಾ ಕೇಳ |
ಮಗ್ಗದ ಕುಣ್ಯಾಗ ಹೋಗಿ ಕೂತೆ—
ಗಬ್ಬಾದೆವ್ಯಾಯಂಥಾ ದಿಂಡೆರು |
ಮ್ಯಾಗ ಬಂದು ಬಿದ್ದಾರಣ್ಣಾ ॥ ೨ ॥

ಇಂದಾ ಒಬ್ಬಾಕಿ ಸಾಯಲಣ್ಣಾ
ನಾಳೀಗೊಬ್ಬಾಕಿ ಸಾಯಲಣ್ಣಾ
ಅಣ್ಣೀಗೇರಿ ಇರಭದ್ರೇವ್ರಿಗೆ ಒಂದು ಕಾಯಿ ಒಡಸತೀನಿ !"

ತಮಗೆ ನಗೆ ಬೇಕೆಂದಾಗ ನಮ್ಮ ಜನರು ದೇವರನ್ನು ಕೂಡ ಚೇಷ್ಟೆಗೆ ಗುರಿಮಾಡುವರು. ಹಂತಿ ಹೊಡೆಯುವಾಗ ನಮ್ಮ ಒಕ್ಕಲಿಗರು ಹೇಳುವ ನಗೆಹಾಡುಗಳಿವು:

"ಅಚ್ಚೀ ಹೊಲದಾ ಕರಿಯವ್ವ ಇಚ್ಚಿಕ್ಯಾಕ-ಽ ಬಂದ್ಲೋ ?
ರಾತೀಯ ಬಾನಕ್ಯ ಆಕಿಮಾಡಿ ಬಂದ್ಲೋ | "
" ಯಾಕೋ ಬಸವಯ್ಯಾ ನ್ಯೈತುಂಬ ರಾಡ್ಯೊ ?
ಕಣದಾಗಿನ ಕಂಕೀ ಕಣಿಗೆಟ್ಟು ತಿಂದ್ಯೊ ? "
" ಕಣದಮ್ಮನೂಟದ ಕರಿಗಡಬ ನೋಡಿ....
ಹಣಮಪ್ಪ ಗುಡಿಬಿಟ್ಟು ಬಂದಾನೋ ಓಡಿ ! "

ದೇವರನ್ನೇ ವಿನೋದಕ್ಕೆ ಗುರಿಮಾಡುವ ಈ ಜನರು ಊರ ಜನರನ್ನು ಬಿಡುವರೇ ? ಊರಲ್ಲಿಯ ಗೌಡ, ಕುಲಕರ್ಣಿ, ಸಾವುಕಾರ, ಸೆಟ್ಟಿ ಎಲ್ಲರ ಸ್ವಭಾವಗಳನ್ನೂ ಅಣಕಿಸಿ ವಿನೋದ ಮಾಡುತ್ತಾರೆ. ಒಂದೊಂದೇ ವಾಕ್ಯದಲ್ಲಿ ಇದ್ದರೂ ಆ ವಿನೋದವಚನಗಳು ಆ ಆ ವ್ಯಕ್ತಿಗಳನ್ನು ಕಣ್ಣೆದುರು ತಂದು ನಿಲ್ಲಿಸುತ್ತವೆ. ಉದಾಹರಣೆಗೆ ಒಂದೆರಡನ್ನು ನೋಡಿ:

" ಅರ್ಧಲೀಟ್ಟಿಗೆ ಆಶಿ ಮಾಡತಾನ ಗೌಡರ ಗೋಪಣ್ಣ |
ಹಿಂದ ನಿಂತುಕೊಂಡು ಹಳ್ಳಿ ಒಗಿಯತಾನ ಸಾವಕಾರ
ಬಾಸಣ್ಣ |
ಹಸನ ಕಾಗದಕ ಮಸೀ ಬರಿಯತಾನ ಕುಲಕರ್ಣಿ ಶಾಮಣ್ಣ
ಮೂಲ್ಯಾಗ ಕುಂತ ಮೀಸಿ ತೀಡತಾನ ವೊಳಗೈ ರಾಮಣ್ಣ |
ಮುಗ್ಗ ಜೋಳಕ ಮೂಟೆಕ್ಯಂತನ ಶೆಟ್ಟರ ಶಂಬಣ್ಣ;
ಉಗಾದಿತನಕಾ ಉದ್ರಿ ಕೊಡಂತಾನ ಬಟ್ಟರ ಸಾಂಬಣ್ಣ | "

ಇಂತಹ ಸ್ವಭಾವಚಿತ್ರಣದ ಹಾಡುಗಳು ಒಂದೊಂದು ಊರಲ್ಲಿಯೂ ಹೊಸ ಹೊಸ ರೀತಿಯವು ಸಿಗುವುವು.

ನಮ್ಮ ಹಳ್ಳಿಗಳಲ್ಲಿ ಜಾತ್ರೆ ಮಾಡುಗಳು ನಡೆದಾಗಲಂತೂ ವಿನೋದಕ್ಕೆಷ್ಟುಗ್ಗಿಯಕಾಲ ಬಂದಂತೆ ಆಗ ಹಳ್ಳಿಗರು ಅನೇಕ ಅಶ್ಲೀಲ ಸೋಗುಗಳನ್ನು ಹಾಕುವರು. ಆ ಸೋಗುಗಳಲ್ಲಿ ಬರುವ ಮಾತು-ಹಾಡುಗಳೆಂದರೆ ಒಂದೊಂದೂ ನಗೆಯ ಬುಗ್ಗೆಗಳು. ಒಂದು ಹೆಣ್ಣು-ಸೋಗು ತನಗೆ ಬೇಕಾಗುವ ಗಂಡ ಎಂಥವನೆಂಬುದನ್ನು ಹೇಳಲು ಹೀಗೆ ಹಾಡುವಳು:

ಸಾಕ್ಷ ಇರಬೇಕ್ಷ |
ಇಂಥವನ ಕೂಡ ಒಂದರಘಳಿಗ್ಯಾದರು ಸಾಕ್ಷ ಇರಬೇಕ್ಷ |
ಸೆಜ್ಜಿ ಕೆಳಡಿ ನಾ ಅಟ್ಟಿರಬೇಕ್ಷ
ಮಜ್ಜಿಗಿ ಪಳದೇ ಕಾಸಿರಬೇಕ್ಷ
ತುತ್ತು ಮಾಡಿನಾ ಉಣಿಸಿರಬೇಕ್ಷ
ದೆಕ್ಕಿನ್ಹಾಂಗ ಕಣ್ಣ ಬಿಡಿಸಿರಬೇಕ್ಷ ॥ ೧ ॥

ಕರಿಯು ಸೀದೀ ಸಾ ಉಟ್ಟಿರಬೇಕ್ಕ
ಜರತಾರೀ ಕುಬಸಾ ತೊಟ್ಟಿರಬೇಕ್ಕ
ಕುದರಿಮ್ಯಾಗನಾ ಕುಂತಿರಬೇಕ್ಕ
ಮರಿನಾಯ್ಕ್ಹಾಂಗ ಬೆನ್ನ ಹತ್ತಿರಬೇಕ್ಕ
ಸಾ ಇರಬೇಕ್ಕ—ಇಂಥವನಕೂಡ ಒಂದರಗಳಿಗಾದರು
ಸಾಕ್ಕ ಇರಬೇಕ್ಕ

ಇನ್ನೊಬ್ಬ ಗತಿಗೇಡಿಯಾದ ತಿನಿಸುಗುಳಿಯು ವೇಷಧಾರಿ ಹೀಗೆ ಹಾಡುವನು:

'ಓ! ನಾ ತಿಂದೀನಂತೀನ....ನೀಡವರ್ಯಾರಿಲ್ಲ ॥
ಎಳ್ಳ ಹಚ್ಚಿದಾ ಕೆಜ್ಜಲೊಪ್ಪೀ ಒಳ್ಳೇವೆರತು ಉಳ್ಳಾಗಡ್ಡಿ
ಕರ ಕುರ ....ನಾನು.....ಕರ ಕುರ
ತಿಂದೀನಂತೀನು ನೀಡವರ್ಯಾರಿಲ್ಲ ॥ ೧ ॥
ಕರಿದ ಕರಿದ ಹುಂಡಾಗಡುಬುಸುರ್ಯಾಳೋಗಿ ಶಾವಿಗಿ ಸಕ್ಕ
ಗುಳುಂ ಗುಳುಂ ... ನಾನು.....ಗಳಾ ಗಳ
ನುಂಗೀನಂತೀನು ನೀಡವರ್ಯಾರಿಲ್ಲ ॥ ೨ ॥

ಒಂದೇ ಎರಡೇ! ನೂರಾರು ಸೋಗುಗಳು, ನೂರಾರು ಇಂತಹ ವಿನೋದದ ಹಾಡುಗಳು. ಕನ್ನಡಿಗರು ಎಷ್ಟೊಂದು ವಿನೋದಪ್ರಿಯರೆಂಬುದನ್ನು ನೋಡಬೇಕೆನ್ನುವವರು, ಹಳ್ಳಿಗಳಿಗೆ ಹೋಗಿ ಅವರ ನಗಸುಡಿ–ನಗಹಾಡುಗಳನ್ನು ಕೇಳಿ ಹೊಟ್ಟೆಹುಣ್ಣಾಗುವಂಥ ನಕ್ಕು ಬರಬೇಕು.

ಈಗ ನಾನು ನವ್ಯ ಕನ್ನಡ ಸಾಹಿತ್ಯದಲ್ಲಿ ಬರುವ ಒಂದು ವಿನೋದ ಸಂದರ್ಭವನ್ನು ಶ್ರಾವ್ಯರೂಪಕವನ್ನಾಗಿ ತಮ್ಮ ಕಿವಿಗಳಿಗೆ ಕೇಳಿಸಬೇಕೆಂದಿದ್ದೇನೆ ಇದು 'ವೃತ್ತ ವಿಲಾಸ' ಎಂಬ ಕವಿಯ 'ಧರ್ಮಪರೀಕ್ಷೆ' ಎಂಬ ಕಾವ್ಯದಲ್ಲಿಯ ಒಂದು ಸಂದರ್ಭ. ಇವನು ಕ್ರಿ. ಶ. ೧೨ನೆಯ ಶತಮಾನದ ಒಬ್ಬ ಜೈನಕವಿ. ಇವನ 'ಧರ್ಮ ಪರೀಕ್ಷೆ' ಎಂಬುದು ಚಂಪೂಕಾವ್ಯ. ಆ ಕಾವ್ಯದಲ್ಲಿಯ 'ಮಹಾ ಮೂರ್ಖರು' ಎಂಬ ಕಥೆಯನ್ನು ಶ್ರಾವ್ಯರೂಪಕರೂಪದಿಂದ ಇಲ್ಲಿ ಚಿತ್ರಿಸಲಾಗುವುದು.

ನಿಮ್ಮ ಚಿಕ್ಕಮಕ್ಕಳ

ಆರೋಗ್ಯವೇ

ಇಲ್ಲಿದೆ.

ನೌನೆಹಾಲ್!

ಕಳಿಗೆ ಕಾಣಿಸಿದ, ಚಿಕ್ಕಮಕ್ಕಳ ರೋಗಗಳಿಗೆ ಉಪಯುಕ್ತ:
ಅಶಕ್ತತೆ, ಚಿಕ್ಕಮಕ್ಕಳ ಕ್ಷಯ ಮುಟ್ಟು ದೋಷ, ಒಸಡಿಗಳ ಬಾವು, ರೋಗ ಗುಣ ಮುಖವಾದ ನಂತರ ಬರುವ ಅಶಕ್ತತೆ. ಪೆಲೆಗ್ರಾ, ಸಂಧಿವಾತ, ಬಾಯಿಬರುವಿಕೆ, ಶೀತಬಾಧೆ.

ಚಿಕ್ಕಮಕ್ಕಳಿಗೆ ಉತ್ತಮವಾದ ಪೌಷ್ಟಿಕ! ಹುಟವನ್ನು ಹೆಚ್ಚಿಸಿ ಹಲ್ಲುಗಳು ಸುಗಮವಾಗಿ ಬರುವಂತೆ ಮಾಡುತ್ತದೆ. ರೋಗ ಬಾರದಂತೆ ಪ್ರತಿನಿರೋಧ ಶಕ್ತಿಯನ್ನು ಹೆಚ್ಚಿಸುತ್ತದೆ.

ಹನುಮಂತರಾವ್
ದಪಾಖಾನಾ (ಬಿ.ಸ್ಟೇ), ದಿಲ್ಲಿ

ಕಳಿಗೆ ಕಾಣಿಸಿದ, ಚಿಕ್ಕಮಕ್ಕಳ ರೋಗಗಳಿಗೆ ಉಪಯುಕ್ತ:
ಮಲಬದ್ಧತೆ, ಅಜೀರ್ಣ, ತೊಟ್ಟಿಯಲ್ಲಿ ವಾಯುವಿಕಾರ, ಝಾಡಿಸುವುದು, ಅಮಾಂಶ ಹಲ್ಲುಬರುವಿಕೆ. ಯಕೃತ್ ಮತ್ತು ಪ್ಲೀಹದ ಬಾವು, ನಿದ್ರಾಭಂಗ, ಬಾಯಿಬರುವುದು. ಹೊಲ್ಲು ಸೋರುವುದು. ಜಂತು ಮತ್ತು ಕ್ರಿಮಿದೋಷ, ಆಮ ಸೇರಿಕೆ.

ಮಹಾ ಮೂರ್ಖರು

(ಏನೋದಾತ್ಮಕ ಶ್ರಾವ್ಯರೂಪಕ)

ಶ್ರೀ. ಪಟಗೇರಿ ಕೃಷ್ಣಶರ್ಮ, ಧಾರವಾಡ

ಗಿ

ದೇಶಸಂಚಾರಕ್ಕೆಂದು ಹೊರಟ ದೊಳ್ಳೆಗಣ್ಣ, ಮುರಿಗಾಲ, ಮರುಳಯ್ಯ, ಪೋಟುಗಲ್ಲ ಎಂಬ ನಾಲ್ವರು ಪ್ರಯಾಣಿಕರು, ಬೇಗಿನ ಸಮಯದಲ್ಲಿ ಒಂದು ಊರ ಅಗಸಿಬಾಗಿಲ ಮುಂದೆ ಒಟ್ಟಾಗಿ ನಿಂತಿದ್ದಾರೆ. ಹೊರವಲಯದಲ್ಲಿಯೇ ದೂರದಲ್ಲಿ ಒಂದು ಜಿನಾಲಯವಿದೆ. ಈಗ ಕೇಳುತ್ತಿರುವ ಘಂಟೆಯ ಸಪ್ಪಳು ಆ ಜಿನಾಲಯದ ಬೆಳಗಿನ ಪೂಜೆಯ ಕಾಲದ್ದು :

(ಗಂಟೆ ಡಾಣಟಿಗಳ ಶಬ್ದಗಳು ದೂರದಿಂದ ಕೇಳಿಬೇಕು)

(ನಾಲ್ವರೂ ಸೇರಿ ಹಾಡುವರು)

ನಾವು ನಾವು ಮುಂದಿ ದಾರಿಹೋಕರಿರುವೆವು,
ಯಾವಾಗಲು ಊರು ಕೇರಿ ತಿರುಗುತಿರುವೆವು.
ಇಂದಿನದಿದು ಊರು ಹೊಸದು ಜನರು ಹೊಸಬರು—
ಮುಂದಿಯೆಲ್ಲ ನಮ್ಮ ಕಡೆಗೆ ನೋಡುತಿರುವರು.

ಮರುಳಯ್ಯ :

ನಮ್ಮ ಹೆಸರ ನಾನೆ ಹೇಳಬೇಕು ; ಇವರಿಗೆ
ಸುಮ್ಮನಿರಲು ನಮ್ಮ ಗುರುತು ತಿಳಿವುದು ಹೇಗೆ ?

ದೊಳ್ಳೆಗಣ್ಣ :

ಕೇಳಿರಯ್ಯ, ಕೇಳಿರಮ್ಮ ನನ್ನ ಹೆಸರನ್ನು,
ತಾಳಿ ನಿಂತು ನೋಡಿ ನನ್ನ ದೊಳ್ಳೆಗಣ್ಣನು !

(ಜನರು ಗಟ್ಟಿಯಾಗಿ ನಗುವ ಶಬ್ದ ಕೇಳಿಬೇಕು.)

ನಗುವಿದೇಕೆ ? ನಗಲು ಬೇಡಿ ಕೇಳಿ ಇಲ್ಲವೇನು ?
ನಮ್ಮ ಗುರುವು ಕಲಿಸಿ ತಿರುವ ನೀತಿವಚನವನ್ನು ?

ನಿಮಗೆ ಗೊತ್ತಿಲ್ಲ ? ಆ ವಚನ ? ಹಾಗಾದರೆ ಹೇಳ್ತೀನಿ. ಕೇಳಿ :

ಕುರುಡರ ಕುಂಟರ ಮರುಳರ
ಹರಿಗಲ್ಲರ ಕಂಡು ನಿಂತು ನಗಬೇಡಿರಿ ನೀವ್ ॥
ಕರೆದೊಯ್ದು ಮನೆಗೆ ಅವರನು
ಕರಿಗಡುಬಿಗೆ ಕುಪ್ಪವಿಕ್ಕಿ ತಿನಿಸುವುದೀಗ ॥

(ಜನರು ಇನ್ನಷ್ಟು ಹೆಚ್ಚಾಗಿ ನಗುವ ಶಬ್ದ.)

ಮುರಿಗಾಲ :

ಸರಿಯೊ ನೀ ಸರಿ ಹಿಂದೆ ದೊಳ್ಳೆಗಣ್ಣ !
ಒರೆವೆ ನನ್ನಯ ಹೆಸರ ಕೇಳಿರಣ್ಣ !

ಕುಂಟ ನಾನಾದರೂ ಎಂಟಿದಯ ಬಂಟನು,
ಒಂಟಿಗಾಲಿಂದಲೇ ನಡೆಯ ಬಲ್ಲೆ—
ಗಂಟುಗಳನು ಎಂದು ಬಗೆಯದಿರಿ ನನ್ನನ್ನು
ನಿರ್ಮಾರ ದಾರಿಯೊಳು ಮುಳ್ಳು-ಕಲ್ಲೇ !

(ಮತ್ತೆ ಜನರ ನಗೆಯ ಗುಲ್ಲು ಕೇಳಿಸುವುದು)

ಮರುಳಯ್ಯ :

ನಿಮ್ಮೂರ ಹೆಸರು ನಗೆಯೂರು ಏನು ?
ಅಮ್ಮಮ್ಮ ಅರಿತುಕೊಂಡೇ ಬಿಟ್ಟೆ ನಾನು !
ನಾನಾರು ಗೊತ್ತೇನು ? ಮರುಳರಲಿ ಹಿರಿಯ—
ನಾ ಕಂಡು ಹಿಡಿಯೆನೇ ನಿಮ್ಮೂರ ಪರಿಯ ?
ಬಿಳಿಮುಳ್ಳಿಗೆ ನಮ್ಮನ್ನು ನೋಡುತಿರೀಕೆ ?
ಸಮಗಿರುವುದೇ ಒಂಟಿಗಿರುವಂಥ ಠೀಕೆ ?

['ಓ ಒಂಟೆಕಾಲಿನ ಠೀಕೆ' ಎಂದು ಕೂಗಿ, ಜನ ಗಟ್ಟಿಯಾಗಿ ನಗುವ ಶಬ್ದ].

ಪೋಟುಗಲ್ಲ :

ನಾನು ಯಾರೆಂಬುದನು ಒರೆವೆ ಕೇಳಿ
ನಮ್ಮ ಮನೆಯ ಲೆಕ್ಕವು ಸೂರು ಕೋಳಿ—
ಕೂಗಿದರೆ ಪೋಟುಗಲ್ಲವ ಮನೆಯ ಕೋಳಿ
ಆಗುವುದೆ ಇಲ್ಲ ಸೂರ್ಯೋದಯದ ಬಾಳಿ !

ಜನರಲ್ಲಿಯವನೊಬ್ಬ : — ಇವನ ಮನೆಯ ಕೋಳಿ ಕೂಗಿದರೆ ಸೂರ್ಯೋದಯವೇ ಆಗುವುದಿಲ್ಲವಂತೆ ! ಹಾ ಹಾ (ನಗುವನು. ಜನರೆಲ್ಲರೂ ನಗುತ್ತ ಅಲ್ಲಿಂದ ಹೊರಟುಹೋಗುವರು.)

ದೊಳ್ಳೆಗಣ್ಣ : — ಎಲ್ಲರೂ ಹಾಗೇ ಹೊರಟು ಹೋದರು ! ಈ ಊರ ಜನರಿಗೇನು ಮೂರ್ಖರಿನ್ನಬೇಕೋ ಅತಿಬುದ್ಧಿವಂತರೆನ್ನಬೇಕೋ ?

(ಜಿನಾಲಯದ ಗಂಟೆಯ ಜಾಗಟೆಯ ಶಬ್ದ ಕೇಳುವುದು.)

ಮುರಿಗಾಲ : — ಈಗ ನಾವು ಎಲ್ಲಿಯಾದರೂ ಕುಳಿತು ವಿಶ್ರಾಂತಿ ತಗೊಳ್ಳಬೇಕು. ಅಲ್ಲಿ ಜಿನಾಲಯವಿದ್ದಂತೆ ಕಾಣುತ್ತದೆ. ಹೋಗಿ ಪೂಳಿಯಲ್ಲಿ ಕೂತು ದಣಿವು ಕಳೆದುಕೊಳ್ಳೋಣ ನಡೆಯಿರಿ (ಎಲ್ಲರೂ ಹೋಗುವರು).

(ಜೈನಾಲಯದ ಪೊಗಸಾಲೆಯಲ್ಲಿ ಜೈನಮುನಿಗಳೊಬ್ಬರು ಕುಳಿತು ಪ್ರಾರ್ಥನೆಯ ಶ್ಲೋಕಗಳನ್ನು ರಾಗವಾಗಿ ಹೇಳುತ್ತಿದ್ದಾರೆ.)

ಜೈನಮುನಿ:—

ಓಂಕಾರಂ ಬಿಂದು ಸಂಯುಕ್ತಂ ನಿತ್ಯಂ ಧ್ಯಾಯಂತಿ ಯೋಗಿನಃ
ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋನಮಃ ।
ಮಂಗಲಂ ಭಗವಾನ್ ವೀರೋ ಮಂಗಲಂ ಗೌತಮೋಗಣೀ
ಮಂಗಲಂ ಕುಂದಕುಂದಾರ್ಯೋ ಜೈನಧರ್ಮೋಸ್ತು ಮಂಗಲಂ ।

(ನಾಲ್ವರೂ ಬಂದು ಸಂಧ್ರಮದ ಧ್ವನಿಯಲ್ಲಿ)

ದೊಳ್ಳಿಗಣ್ಣ :— ಮುನಿಮಹಾರಾಜರಿಗೆ ಸಾಷ್ಟಾಂಗ ನಮಸ್ಕಾರ.

ಮುರಿಗಾಲ :— ಮುನಿ ಮಹಾಮೂರ್ತಿಗೆ ಎದ್ದುನಿಂತಲ್ಲಿಯೇ ನಮಸ್ಕಾರ.

ಮರುಳಯ್ಯ :— ಮುನಿವರೇಣ್ಯರಿಗೆ ಅಡ್ಡಬಿದ್ದು ನಮಸ್ಕಾರ.

ಪೋಟುಗಲ್ಲ :— ಮುನಿರಾಜರಿಗೆ ದೀರ್ಘದಂಡ ನಮಸ್ಕಾರ !

ಜೈನಮುನಿ :— (ಹರಕೆಯ ಧ್ವನಿಯಲ್ಲಿ) ಧರ್ಮದ ಅಭಿವೃದ್ಧಿಯಾಗಲಿ ! ಭದ್ರಂ, ಶುಭಂ, ಮಂಗಲಂ !

(ಮತ್ತೆ ತಮ್ಮ ಪ್ರಾರ್ಥನೆಯಲ್ಲಿ ತೊಡಗುವರು.)

ಅಜ್ಞಾನತಿಮಿರಾಂಧಾನಾಂ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ[illegible]ವೇ ನಮಃ ।

ಮರುಳಯ್ಯ :— ಏ ! ಏನೇನೋ ಮಂತ್ರಾ ಕೇಳ್ಲಿಕ್ಕೆ ಹತ್ತಿದಾ ನಲ್ಲೋ ! ನಾವು ಈಗ ಇಲ್ಲಿ ನಿಂತು ಬುಸಯೋಗ ಇಲ್ಲ. ಹೊರಟು ಹೋಗೋಣ ನಡೀರಿ ತಂಲ್ಲಿದ !

ಮುರಿಗಾಲ :— ಹೌದೋ, ಮಂತ್ರಾ ಅಂದರ ದೆವ್ವ ಭೂತ ಬರತಾವಂತ ! ಈ ಬೋಳಕಲೀ ಬತ್ತಲೇಮುನಿಗಳನ್ನು ಅವೇನು ಮಾಡ್ಯಾವು ? ನಮ್ಮಂಥವರ ಬೆನ್ನ ಹತ್ತತಾವವು !

ದೊಳ್ಳಿಗಣ್ಣ :— ಪೋಟುಗಲ್ಲ,—ಅಯ್ಯಯ್ಯೋ ಯಪ್ಪಾ ! ಲಗೂನ ಕಂಬೀಕೆತ್ತರಿ ಇಲ್ಲಿಂದ ! (ಎಲ್ಲರೂ ಹೋಗುವರು)

ಜೈನಮುನಿ:
ವಂದಿತ್ತು ಸವ್ವಸಿದ್ಧೇ
ಧುವಮಚಲ ಮಣೋವಮಂ ಗತಿಂ ಪತ್ತೇ ।
ವೋಚ್ಛಾಮಿ ಸಮಯವಾಹುಡ
ಮಿಣವೋ ಸುಯಕೇವಲೀ ಭಣಿಯಂ ॥

(ಸ್ವರವು ಕ್ರಮಕ್ರಮವಾಗಿ ದೂರ ದೂರ ಹೋಗಬೇಕು)

ಪೆ

(ಜೈನಾಲಯದ ಹೊರಬದಿಯಲ್ಲಿ ನಾಲ್ವರೂ ನಿಂತು ಮಾತನಾಡುತ್ತಿರುವರು)

ದೊಳ್ಳಿಗಣ್ಣ :— ಏನೇ ಆಗಲಿ, ಬೆಳಗಿನ ವ್ಯಾಳ್ಯದೊಳಗೆ ನನಗ ಮುನಿಗಳ ಆಶೀರ್ವಾದ ಸಿಕ್ಕಿತ್ತು

ಮುರಿಗಾಲ:— ಭಲ್ಲರಿ ಒಳ್ಳಣ್ಣ ಬಂಟಾ; ಮುನಿಗಳ ಆಶೀರ್ವಾದ ತನಗೆ ಸಿಕ್ಕಿತಂತ ! ಅವರು ಆಶೀರ್ವದಿಸಿದ್ದು ನನಗ !

ಮರುಳಯ್ಯ: — ಭಲೇ ಒಗ್ಗಾಲಿ ! ಎಷ್ಟು ಬುರುಡೀ ಬಿಡತೀಯೋ ನೀ ? ಆ ಮುನಿಗಳು ಆಶೀರ್ವಾದ ಮಾಡಿದ್ದು ನನಗ.... ... ತಿಳೀತು ?

ಪೋಟುಗಲ್ಲ: ಕೇಳಿ ಕೇಳಿ ಮರುಳ ನೀನು ! ನಿನಗ ಅಡದಾದೇನು ಅವರು ಯಾರಿಗೆ ಆಶೀರ್ವಾದ ಕೊಟ್ಟರಂಬೂದು ? ಎಲ್ಲಾರಿಗಿಂತ ಹಿಂದಗಡೆ ನಾ ನಮಸ್ಕಾರ ಮಾಡಿದೆ. ನಾ ನಮಸ್ಕಾರ ಮಾಡೂದs ತಡಾ; ಆಶೀರ್ವಾದ ಕೊಟ್ಟsಬಿಟ್ಟರು !

ದೊಳ್ಳಿಗಣ್ಣ :— ಹೌದಲೀ ಚೆಲುವಾ ! ನಿನ್ನ ಗಲ್ಲದ ಪೋಟು ನೋಡೀ ಕೊಟ್ಟಿದ್ದಾರು ಆಶೀರ್ವಾದ !

ಪೋಟುಗಲ್ಲ:— ಹಾಂಗಾದರ, ನಿನ್ನ ಗೊಡಚಗಣ್ಣಿಗೆ ಕೊಡತಾರೇನು ?

ಮುರಿಗಾಲ:— ಇಬ್ಬರಿಗೂ ಅಲ್ಲರ್ಯೋ ! ನನಗ ಕೊಟ್ಟಾರ !

ಮರುಳಯ್ಯ:— ಇದ್ದ ಒಂಟಿಗಾಲನ್ನೂ ಮುರಿದು ಬಿಟ್ಟೇನು ಸುಳ್ಳು ಸುಳ್ಳs ಕೂಗ್ಯಾಡಬ್ಯಾಡ; ನೋಡಿದ್ದಿಲ್ಲೋ.... ... . ಅವರ ಆಶೀರ್ವಾದ ಮಾಡೂದುಂದ, ಅವರ ಮಾರಿ ನನ್ನ ಕಡೆ ಇತ್ತು !

ದೊಳ್ಳಿಗಣ್ಣ:— ಮಾರಿ ನಿನ್ನ ಕಡೆ ಇದ್ದಿರಬಹುದಲೇ ! ಆದರ..... ಕಣ್ಣು ನನ್ನ ಕಡೆ ಮಾಡಿದ್ದರು !

ಪೋಟುಗಲ್ಲ:— ಇವನ್ನ ನೋಡ್ರಿ ! ಅಲ್ಲಲೇ ಕಣ್ಣು ನಿನ್ನ ಕಡೆ ಮಾಡಿರಬಹುದು; ಆದರ ಅವರು ನೋಡುತ್ತಿದ್ದರು ನನ್ನ ಕಡೆ !

ಮುರಿಗಾಲ:— ಹೌದಪಾ. ಕಾಮುಣ್ಣನ ಮೊಮ್ಮಗನ ಮುಕ ನೀನಿಂದು ನಿನ್ನ ನೋಡದೆ ಏನು ಮಾಡ್ಯಾರು ! ಅವರು ಆಶೀರ್ವಾದ ಮಾಡೂನುಂದ ಕೈ ಮಾಡಿದ್ದರು ನೋಡಿದ್ದಿಲ್ಲೋ ? ಆ ಕೈ ನನ್ನ ಕಡೇನs ಇತ್ತು !

ಮರುಳಯ್ಯ:— .....ನನಗ ಗೊತ್ತದನೋ ! ಅವರು ಆಶೀರ್ವಾದ ಮಾಡಿದ್ದು ಇನ್ಯಾರಿಗೂ ಅಲ್ಲ; ನನಗೇ ಮಾಡಿದರು

ದೊಳ್ಳಿಗಣ್ಣ:— ನೀ ಹಾಂಗ ತಿಳಕೊಂಡದ್ದು ನಿನ್ನ ಮರುಳತನ ! ಅವರು ನನಗ ಆಶೀರ್ವಾದ ಮಾಡಿದರು.

ಮುರಿಗಾಲ:— ಸುಳ್ಳ ಸುಳ್ಳs ಯಾಕ ಬಡಬಡಿಸತೀರೋ; ನನಗs ಮಾಡಿದರು ಅವರು ಆಶೀರ್ವಾದ !

ಪೋಟುಗಲ್ಲ:— ಅಲ್ಲರ್ಯೋ, ಅಲ್ಲರ್ಯೋ ! ನನಗ ಮಾಡಿದರು.

ಮರುಳಯ್ಯ:— (ಅಣಕಿಸುತ್ತ) ನನಗ ಮಾಡಿದರು ! ಮುಂದಿಗೆ ನಿಕ್ಕ ಫಲಾ ಕಸಗೊಳ್ಳಿಕ್ಕೆ ಬಂದಾನಲ್ಲೆ ಮಾಮೂರ್ತ !

ದೊಳ್ಳಿಗಣ್ಣ:— ಎಲ್ಲಾರೂ ನೀವು ಕಳ್ಳರೇ ಕಾಣ್ತೀರಿ !

ಮುರಿಗಾಲ:— ಯಾರು ಕಳ್ಳರೋ, ನಿಮ್ಮಪ್ಪ ಕಳ್ಳ !

ಮರುಳಯ್ಯ:— ನಿಮ್ಮ ಅಜ್ಜ ಕಳ್ಳ ! ನಿಮ್ಮ ಮುತ್ತಜ್ಜ ಕಳ್ಳ !

ಪೋಟುಗಲ್ಲ:— ನಿಮ್ಮ ನಾಯಿ ಕಳ್ಳ ! ನಿಮ್ಮ ಎಮ್ಮೆ ಕಳ್ಳ ! ನಿಮ್ಮ ಮನೆತನವೇ ಕಳ್ಳ !

ದೊಳ್ಳೆಗಣ್ಣ:— ಅಲ್ಲಪೋ! ಹೀಂಗಽ ನಾವಿನ್ನ ಎಷ್ಟೊತ್ತು ಜಗ. ಕಾತಬೇಕು? ಈಗ ನಾವು ಹೀಂಗ ಮಾಡೋಣ. ಎಲ್ಲಾರೂ ಕೂಡಿ, ಆ ಮುನಿಗಳ ಹತ್ತರ ಕೋಗೋಣ! ಹೋಗಿ 'ಯಾರಿಗೆ ನೀವು ಆಶೀರ್ವದಿಸಿದ್ದೂ?' ಅಂತ ಪ್ರಶ್ನವಾಗಿ ಕೇಳಿಬಿಡೋಣ!

ಮುರುಳಯ್ಯ:— ಭಲೇ ಶುಕ್ರಾಚಾರಿ, ತಲೀ ಅಂದರ ನಿನಗೊಬ್ಬಗ ಅವ ನೋಡು! ನಡೀರಿ, ದೊಳ್ಳೆಗಣ್ಣ ಹೇಳಿದ್ಹಾಂಗ, ಹೋಗಿ ಕೇಳೇಬಿಡೋಣ!

ಮುರಿಗಾಲ:— ಅದಕ್ಯಾಕ ಹಿಂದಮುಂದ ನೋಡೋದು? ಈಗಲೇ ನಡೀರಿ! ನನಗs ಅವರು ಆಶೀರ್ವಾದ ಮಾಡಿದ್ದು!

ಪೋಟುಗಲ್ಲ:— ನಿನಗಲ್ಲಲೇ ನನಗ!

ಮುರುಳಯ್ಯ:— ನನಗಲೇ—ನನಗ!

ದೊಳ್ಳೆಗಣ್ಣ:— ನನಗರ್ಯೋ ನನಗ!

(ಹೊಡೆವಾಡತ್ತಲೇ ಜಿನಾಲಯದ ಕಡೆಗೆ ಹೋಗುವರು)

೪

(ಜಿನಾಲಯದಲ್ಲಿ ಮುನಿಯು ಹಾಡುತ್ತ ಕುಳಿತಿದ್ದಾನೆ.)

ಜೈನಮುನಿ:

ಉಸಿರೆಂಬ ಕರಗಸವಿಂದ ಜೀವಾತ್ಮರ
ಬೆಸುಗೆಯ ಬಿಡಿಸಿ ನೋಡಿದರೆ—
ಮಸುಳದೆ ತೋರ್ಪ ಮಹಾತ್ಮ ನೀನೆನಗೊಲ್ಪ.
ನೆಸಗು ನಿರಂಜನ ಸಿದ್ಧಾ—ಒಲ್ಪ
ನೆಸಗು ನಿರಂಜನ ಸಿದ್ಧಾ!

(ಹಾಡು ನಡೆದಿರುವಾಗಲೇ ನಾಲ್ವರೂ ಕೂಗಾಡುತ್ತ ಬರುವರು)

ದೊಳ್ಳೆಗಣ್ಣ:— ನನಗ ಮಾತಿದಂತೀನಿ!

ಮುರಿಗಾಲ:— ನಿನಗಲ್ಲೋ ನನಗ ಮಾಡಿದರು!

ಮುರುಳಯ್ಯ:— ನನಗರ್ಯೋ ನನಗ ಮಾಡಿದರು!

'ನನಗ ಮಾಡಿದರೋ; ಬೇಕಾತ್ಯ ಕೇಳ್ರಿಲ್ಲೆ!'

[ಹಾಡನ್ನು ನಿಲ್ಲಿಸಿ ಮುನಿಗಳು ಕುತೂಹಲದಿಂದ ನಾಲ್ವರ ಕಡೆ ನೋಡುವರು.]

ಜೈನಮುನಿ:— ಇದೇನೈಪ್ಪಾ! ಇಷ್ಟ್ಯಾಕ ಕೂಗಾಡತೀರಿ? ಇಲ್ಲ್ಯಾಕ ನಿಮ್ಮ ಜಗಳಾಟ?

ದೊಳ್ಳೆಗಣ್ಣ:— ಜಗಳಾಟತೇನೂ ಇಲ್ಲ ಗುರುಗಳೇ! ಹುಮ್ಮನೇ ಒದರ್ಯಾಡಲಿಕ್ಕೆ ಹತ್ತೀನಿ. ಅಲ್ಲಾ ಸ್ವಾಮೀ! ನಿನಮ್ಮ ನಾಲ್ವರುನಂದೀ ಒಳಗ, ನೀವು ಆಶೀರ್ವಾದ ಮಾಡಿದ್ದು ಯಾರಿಗೆ? ನನಗs ಅಲ್ಲೇನ್ರೀ?

ಮುರಿಗಾಲ:— ನಂದೂ ಅದೇ ಪ್ರಶ್ನೆ ಗುರುಗಳೇ! ನೀವು ಆಶೀರ್ವಾದ ಕೊಟ್ಟದ್ದು ನನಗs ಹೌದಲ್ಲೊ?

ಮುರುಳಯ್ಯ:— ಈ ಹುಚ್ಚರಿಗೆ ಏನಾದು ತಿಳುವಳಿಕಿ ಬರತಽದೋ ಏನೋ! ತಾವು ನನಗೆ ಕೊಟ್ಟ ಆಶೀರ್ವಾದಾನ, ತಮಗ ಅಂತ ತಿಳಕೊಂಡು ಬಿಟ್ಯಾರ: ಇದ್ದ ಮಾತು ಇದ್ದಾಂಗ ನೀವs ಹೇಳ್ರಿ ಸ್ವಾಮಿಜ!

ಜೈನಮುನಿ:— ಓಂ ನಮಃ ಸಿದ್ಧಾಯ, ಓಂನಮೋ ಅರ್ಹತ್ ಪರಮೇಶ್ವರಾಯ! ಜ್ಞಾನಸ್ವರೂಪಾ! ಈ ಜಗತ್ತನ್ನು ನೀನೇ ಕಾಪಾಡಬೇಕು.

ಪೋಟುಗಲ್ಲ:— ಗೊತ್ತಾಯಿತೇನಪ್ಪಾ; ನಿಮ್ಮ ಮೂರೂ ಮಂದಿಗೆ ಏನಾದರೂ ಉತ್ತರ ಸಿಕ್ಕಿತ? ಹುಳ್ಳೇ ಒದರ್ಯಾಡತೀರಿ.... ತೀರಿತು! ಯಾಕ ಮುನಿಮಹಾರಾಜರ, ನೀವು ನನಗಲ್ಲನೇ ಆಶೀರ್ವಾದ ಮಾಡಿದ್ದು?

ಜೈನಮುನಿ:— (ತಬಕದಿಂದ) ಆಶೀರ್ವಾದ ಮಾಡಿದ್ದು?

ದೊಳ್ಳೆಗಣ್ಣ:— ಅನುಮಾನ ಯಾಕ ಸ್ವಾಮೀ! ಇಲ್ಲೇನಾದರೂ ನಾಡಿದರ ನಾ ಇದ್ದೀನಿ! ನೀವೇನೂ ಹೆದರಬ್ಯಾಡ್ರಿ! ಹೇಳಬಿಡ್ರಿ!

ಜೈನಮುನಿ:— (ಕೆರಳಿಸಿಗೆ ನಗುತ್ತ) ಹು! ಹು! ನೀವು ನಾಲ್ವ್ವಾ ಜನರು ನನಗೆ ಸಮಸ್ಯಾನ ಮಾಡಿದಿರಿ: ಆದರೆ ನಾನು ಆಶೀರ್ವಾದ ಮಾಡಿಗೆ ನಾಡಿದೆ ಏನಾಗೆ ಗೊತ್ತಾಗಲಿಲ್ಲೇನು?

ನಾಲ್ವರೂ ಒಮ್ಮೆಲ್ಲೇ:— ಗೊತ್ತಾಗದೇ ಏನ್ರಿ! ನನಗs ನೀವು ಮಾಡಿದ್ದು!

ಜೈನಮುನಿ:— ನಾನು ಆಶೀರ್ವಾದ ಮಾಡಿದ್ದು ನಿಮ್ಮ ನಾಲ್ವ್ವಾ ಜನರಿಗಲ್ಲ; ಇಷ್ಟು ಮಾತ್ರ ನಿಜ!

ಮುರುಳಯ್ಯ:— ಕೇಳಿದೇನೋ ಒಳ್ಳಣ್ಣಾ; ಅವರು ನನಗೊಬ್ಬನಿಗೇ ಮಾಡಿದ್ದು!

ಜೈನಮುನಿ:— ಟೇ! ನಿನಗೂ ಅಲ್ಲ.

ಮುರಿಗಾಲ:— ನನಗಲ್ಲವೇ ಗುರುಗಳೇ?

ಜೈನಮುನಿ:— ಊಹೂಂ! ನಿನಗೂ ಅಲ್ಲ!

ಪೋಟುಗಲ್ಲ:— ಹಾಗಾದರೆ ಯಾರಿಗೆ ನಾಡಿದಿರಿ ಗುರುಗಳೇ?

ಜೈನಮುನಿ:— ಯಾರಿಗೆ ಮಾಡಿನೆಂಬುದನ್ನ ಹೇಳುತ್ತೀನಿ! ಎಲ್ಲರೂ ಕೇಳಿ! ನಿಮ್ಮ ನಾಲ್ವರಲ್ಲಿ ಯಾವನು ಹೆಚ್ಚಿನ ಮೂರ್ಖನೋ, ಅವನನ್ನು ನಾನು ಆಶೀರ್ವದಿಸಿದೆ!

[ನಾಲ್ವರೂ 'ಓ' ಎಂದು ಶಂಖನಾದದಿಂದ ಕೂಗಾಡುವರು.]

ದೊಳ್ಳೆಗಣ್ಣ:— ನಾನೇ ಹೆಚ್ಚಿನ ಮೂರ್ಖ!

ಮುರಿಗಾಲ:— ನಿನಗಂತ ನಾಲ್ಕು ಮಡಿ ಮೂರ್ಖ ನಾನು ಇಲ್ಲಿ ಇದ್ದೀನಿ!

ಮುರುಳಯ್ಯ:— ಶಬ್ದಾಲಂಕಾರದಿಂದಲೂ ಮೂರ್ಖತನಕ್ಕೆ ನಮ್ಮ ಮನೆತನ ಪ್ರಸಿದ್ಧವಪೆ!

ಪೋಟುಗಲ್ಲ:— ನನ್ನನ್ನು ಸರಿಗಟ್ಟುವ ಮೂರ್ಖರು ನಿಮ್ಮಲ್ಲಿ ಒಬ್ಬರೂ ಇಲ್ಲ!

ಜೈನಮುನಿ:— ಅಯ್ಯಾ, ಹೀಗೆಲ್ಲ ಕೂಗಾಡಿ, ಈ ಜಿನಾಲಯದ ಶಾಂತತೆಯನ್ನು ಕೆಡಿಸಬೇಡಿರಿ. ಇಲ್ಲಿಂದ ಹೊರಟು ಹೋಗಿ. ಹೊರಗೇ—ನಿಮ್ಮಲ್ಲಿಯ ಹೆಚ್ಚಿನ ಮೂರ್ಖರಾರೆಂಬುದನ್ನು ನಿರ್ಣಯಿಸಿಕೊಳ್ಳಿರಿ! ಹುಂ! ಹೊರಡಿರಿ ಇಲ್ಲಿಂದ!

ದೊಳ್ಳಿಗಣ್ಣ :— ಆಗಲಿ, ಹೊಂಗೇಹೋಗಿ ಇದರ ನಿರ್ಣಯ ಮಾಡಿಕೊಳ್ಳುತ್ತೀವಿ. ನಡೆಯಿರೋ ಹೋಗೋಣ! (ಹೊರಟು ಹೋಗುವರು)

ಜೈನಮುನಿ :— ನಿರಂಜನಪುರುಷಾ! ಲೋಕವೆಲ್ಲಾ ಇಂಥವರಿಂದಲೇ ತುಂಬಿದೆಯಲ್ಲ; ಈ ನಾಯಿಬಾಲವನ್ನು ಸರಿಗೊಳಿಸುವ ಶಕ್ತಿ ಯಾರಲ್ಲಿದೆ?

ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ
ಮಾಣದೆ ನನ್ನೆದೆಯೆಂಬ |
ಕೋಣೆಯುಳಿದು ಕೋದೆಯಾದರೆ ನಿನಗೆ ನಿ
ನ್ನಾಣೆ ಬದಂಬರ ಪುರುಷಾ!

ಜೈ

ನಗರದ ದಂಡಾಧಿಕಾರಿ, ನಾಲ್ವರನ್ನೂ ನ್ಯಾಯಾಸ್ಥಾನಕ್ಕೆ ಎಳೆದು ತಂದಿರುವನು. ಒಬ್ಬನ ತಲೆಯೊಡೆದು ರಕ್ತ ಸೋರುತ್ತಿದೆ. ಇನ್ನೊಬ್ಬನ ಗಲ್ಲಗಳು ಊದಿಕೊಂಡಿವೆ. ಮತ್ತೊಬ್ಬನ ಮೈತುಂಬ ಬಾಸಾಳಗಳು ಮೂಡಿವೆ. ಮುಮಳಯ್ಯನ ಬಟ್ಟೆ ಒರಿಗೆಲ್ಲ ಹರಿದು ಹೋಗಿ, ಅವಿಬತ್ತಲೆಯ ಸ್ಥಿತಿಯಲ್ಲಿ ಇದ್ದಾನೆ; ಇದೀಗ ನ್ಯಾಯ ವಿಚಾರಣೆ ನಡೆಯಲಿದೆ.

ದಂಡಾಧಿಕಾರಿ :— ಈ ನಾಲ್ವು ಜನರೂ ಬೀದಿಯಲ್ಲಿ ನಿಂತು ಕೊಂಡು, ನಾನು ದೊಡ್ಡನ ಮೂರ್ಖ-ತಾನು ಹೆಚ್ಚಿನ ಮೂರ್ಖ-ಅಂತ ಜೋಡೆದಾತಿದ್ದರು. ಸನ್ನಿಧಿಗೆ ಎಳೆದುಕೊಂಡು ಬಂದಿದ್ದೇನೆ ಬುದ್ಧಿ!

ನ್ಯಾಯಾಧೀಶ :— ಇದೇನಯ್ಯಾ? ಸಾರ್ವಜನಿಕಬೀದಿಯಲ್ಲಿ ನಿಂತು ನಿಮ್ಮ ಜೋಡೆದಾಟವೇಕೆ?

ದೊಳ್ಳಿಗಣ್ಣ :— ಮುನಿಮಹಾರಾಜರು, ಜಿನಾಲಯದೊಳಗ ನಮಗ ಜೋಡೆದಾಡಲಿಕ್ಕೆ ಕೊಡುವೆಲ್ಲರು! ಅದಕ್ಕ ಬೀದಿಗೆ ಬಾರಬೇಕಾಯ್ತು! ಇಲ್ಲದಿದ್ದರ ಒಳಗಡೆ ಜೋಡೆದಾತಿದಿ ಏ!

ಮುರಿಗಾಲ :— ಹೌದೀ ಬುದ್ಧೀ! ನಮಗೇನೂ ಬೀದಿಯೊಳಗ ಬಡಿದಾಡಬೇಕೆಂತ ಅಪೇಕ್ಷಾ ಇದ್ದಿಲ್ಲರಿ; ಆದರ ನಿರ್ವಾಹವೇ ಇಲ್ಲದ್ದಾಂಗ ಆತರಿ!

(ಸಭೆಯಲ್ಲಿಯ ಜನರೆಲ್ಲರೂ ನಗುವರು).

ನ್ಯಾಯಾಧೀಶ :— (ನಗುತ್ತಲೇ) ಅಲ್ಲರೆಪಾ! ಈಗ ಜೋಡೆದಾಡುವಂಥಾ ಪ್ರಸಂಗ ಏನು ಬಂದಿದ ನಿನುಗ?

ಮುರುಳಯ್ಯ :— ಆ ಒಕ್ಕಣ್ಣನ್ನ ನೋಡಿದಿರಾ? ಅಂವ, ತಾನೇ ಮಹಾಮೂರ್ಖ—ಅಂತ ಸಾಧಿಸಲಿಕ್ಕೆ ಹತ್ತ್ಯಾನ!

ನ್ಯಾಯಾಧೀಶ :— ಹಾಂಗಾದರ, ನಿನಗ ಮಹಾಮೂರ್ಖ ಅಂತ ಅನಬೇಕಂತೀ ಏನು?

ಪೋಟುಗಲ್ಲ :— ಅಂವೆಲ್ಲಾ ಅಂದಾನರಿ; ಆದರ ಅನ್ನಗೊಡುವವರು ಯಾರು? ಅವನ ಜೀವಾ ತೊಗೊಂಡು ಬಿಟ್ಟೀನು! ಎಲ್ಲರಿಗಿಂತಾ ಹೆಚ್ಚಿನ ಮೂರ್ಖ ನಾ ಇರುವಾಗ, ಇನ್ನೊಬ್ಬನ ಅಗತಾನ ಹ್ಯಾಂಗ?

(ಮತ್ತೆ ಸಭೆಯಲ್ಲಿ ನಗೆಯ ಗದ್ದಲವೇಳುವುದು)

ನ್ಯಾಯಾಧೀಶ :— ಏನು ದಂಡಾಧಿಕಾರಿಗಳೇ ಪ್ರಕರಣ ವಿಕ್ಷಿಪ್ತವಾಗಿಯೇ ಇದೆಯಲ್ಲಾ!

ದಂ :— ಅದಕ್ಕಾಗಿಯೇ ಬುದ್ಧಿ! ನ್ಯಾಯಾಸ್ಥಾನಕ್ಕೇ ಇವರನ್ನ ಎಳಕೊಂಡು ಬಂದಿದ್ದು!

ನ್ಯಾ :— ಏನಯ್ಯಾ! ನೀವು ಹೀಗೆ ಜೋಡೆದಾಡಿದರೆ ನಿಮ್ಮನ್ನು ಸೆರೆಮನೆಗೆ ಕಳಿಸಬೇಕಾಗುವುದು. ಗೊತ್ತಾಯಿತೇ?

ಮುರುಳಯ್ಯ :— ಅಂದರ....ಅಲ್ಲೆ ಹೊಡದಾಡಲಿಕ್ಕ ಬರೂದಿಲ್ಲೇನ್ರಿ ನಮಗ?

(ಸಭೆಯಲ್ಲಿ ನಗೆಯ ಕೋಲಾಹಲ)

ಮುರಿಗಾಲ :— ಎಲೆ! ಇವರು ನಗತಾರ ಯಾಕ? ಇಲ್ಲೇನು ಕೋತಿ ಕುಣೀತಾವೇನ್ರೆಪಾ?

ಪೋಟುಗಲ್ಲ :— ಬುದ್ಧಿಯವರೆ, ನಾವು ಬಡದಾಡಬಾರದೂ ಅಂತ ನಿಮಗ ಅನಿಸಿದ್ದರ, ನೀವೊಂದು ಕೆಲಸಾಮಾಡ್ರಿ!

ನ್ಯಾಯಾಧೀಶ :— ಆದೇನಯ್ಯಾ ನಿನ್ನ ಕೆಲಸ?

ಪೋಟುಗಲ್ಲ :— ನಮ್ಮೊಳಗ ಹೆಚ್ಚಿನ ಮಹಾಮೂರ್ಖ ಯಾರು—ಅಂಬೂದನ್ನ ನಿರ್ಣಯ ಮಾಡಿ ಹೇಳ್ರಿ; ಇಲ್ಲದಿದ್ದರ, ನಮ್ಮ ಹೊಡೆದಾಟದಿಂದ ಅದನ್ನ ನಾವು ನಿರ್ಣಯ ಮಾಡಿಕೋತೀವಿ, ನಮ್ಮನ್ನ ಬಿಟ್ಟುಬಿಡ್ರಿ!

(ಸಭೆಯಲ್ಲಿ ಮತ್ತೆ ನಗೆಯ ತರಂಗವೇಳುವುದು.)

ನ್ಯಾಯಾಧೀಶ :— (ಆಶ್ಚರ್ಯದ ನಗೆಯೊಂದಿಗೆ) ನಿನುಗೆ ಈ ನಿರ್ಣಯ ಏತಕ್ಕಾಗಿ ಬೇಕಾಗಿದೆ?

ದೊಳ್ಳಿಗಣ್ಣ :— ಇವತ್ತ ಮುಂಚಾನೆ, ಮುನಿಮಹಾರಾಜರು ಆಶೀರ್ವಾದ ಮಾಡಿದರೇನ್ರಿ! ನಮ್ಮೂರಿನ ಮಹಾಮೂರ್ಖರಿಗೆ ಆದು ಸಲ್ಲತಕ್ಕದ ಅಂತ ಅವರು ಹೇಳಿದರು. ಅದರ ನಿರ್ಣಯಕ್ಕಾಗಿಯೆ ನಡೆದದ್ದು ನನ್ನ ಹೊಡೆದಾಟ! ಇಲ್ಲದಿದ್ದರ ನಾವೇನು ವೈರಿಗಳೇನ್ರಿ, ಹೊಡೆದಾಡಲಿಕ್ಕೆ? ನಾವೆಲ್ಲರೂ ಇವತ್ತಾಲ್ಯು ತಾಸೂ ಕೂಡಿ ಇರುವ ಗೆಳೆಯರು!

ನ್ಯಾಯಾಧೀಶ :— (ನಗುತ್ತಲೆ) ಸರಿ ಸರಿ! ಒಳ್ಳೆಯ ಗೆಳೆಯರು ನೀವು! ನಿಮ್ಮ ನ್ಯಾಯವನ್ನ ನಾನು ಬಗೆಹರಿಸುತ್ತೇನೆ. ನೀವೆಲ್ಲ ಈಗ ಒಂದು ಕೆಲಸ ಮಾಡಬೇಕು! ಒಬ್ಬೊಬ್ಬರೂ ನಿಮ್ಮ ಮೂರ್ಖತನದ ಮಾದರಿಯ ಒಂದೊಂದು ಕಥೆ ಹೇಳಬೇಕು. ಗೊತ್ತಾಯಿತೇ? ಮೊದಲು ನಿನ್ನ ಕಥೆ ಹೇಳು ದೊಳ್ಳಿಗಣ್ಣಪ್ಪಾ!

ದೊಳ್ಳೆಗಣ್ಣ :— ಸಂತೋಷ! ಹೇಳುತ್ತೀನೆ ಕೇಳಿರಿ! ನನಗೆ ಇಬ್ಬರು ಹೆಂಡಂದಿರು. ಇಬ್ಬರನ್ನೂ ಒಂದೇ ರೀತಿಂದ ನೋಡಿ ಕೊಳ್ಳತೀನಿ ಅಂತ ಅವರಿಗೆ ಮಾತುಕೊಟ್ಟಿದ್ದೆ. ಒಂದು ದಿವಸ ಏನಾತಂತೀರಿ! ರಾತ್ರೀ ಹೊತ್ತು, ದೊಡ್ಡಮನಿ! ಮೂರೂ ಮಂದಿ ಮನೀಒಳಗ ಮಲಕೊಂಡಿದ್ದಿವಿ ಇಬ್ಬರ ಮೈಮ್ಯಾಲೂ ಒಂದೊಂದು ಕೈಯಿಟ್ಟು ನಾ ಮಲಕೊಂಡಿದ್ದೆ. ಇಬ್ಬರಿಗೂ ನಿದ್ದಿಹತ್ತಿ ಜೋರಿನಿಂದ ಗೊರಕೇ ಹೋಡೀತಿದ್ರು; ಒಬ್ಬರ ಗೊರಿಕೆ ಇನ್ನೊಬ್ಬರಿಗೆ ಕೇಳಸತಿದ್ದಿಲ್ಲ! ಪಕ್ಕದೊಳಗಿನ ಪಣತೀ ದೀಪ ಉರೀತಿತ್ತರೀ! ಆಗ ಒಂದು ದೊಡ್ಡ ಇಲಿ ಹಾಂಡಿಗಿನ ಕೆಳಗೆ ಇಳಿದುಬಂದು, ದೀಪಸಹಿತ ಬತ್ತೀ ಕಚ್ಚಿಕೊಂಡು, ಮ್ಯಾಲಿ—ನನ್ನ ಮ್ಯಾಲಿ ತಿರಿಗಾಡಲಿಕ್ಕೆ ಹತ್ತಿತು. ದೀಪದ ಝಳಾ ಹತ್ತಿದ ಕೂಡಲೇನ, ಬಾಯಾಗಿನ ಬತ್ತಿ ಕೆಳಗ ಬಿದ್ದುಬಿಟ್ಟಿತು. ಅದು ನೆಟ್ಟಗ ಬಂದು ನನ್ನ ಈ ಕಣ್ಣನ್ಮ್ಯಾಲೇ ಬಿತ್ತು.

(ಜನರೆಲ್ಲರೂ ನಗುವರು.)

ಈಗ್ಹ ಯಾಕ ನಗತೀರಿ; ಇನ್ನೂ ಮುಂದ ಆಕ್ಕಿ! ಕಣ್ಣಿ ಮ್ಯಾಲ ಉರಿಯೂ ಬತ್ತಿ ಬಿತ್ತಲ್ಲಾ. ಅದನ್ನ ತಗಿಯೂದು ದ್ಯಾಂಗ? ಬಲಗೈಲೇ ತಗದರ, ಬಲಗಡೆ ಹೇಣ್ತಿಗೆ ಅನ್ಯಾಯ ಮಾಡಿದ್ಹಾಂಗ....ಎಡಗ್ಗೈ ಮುಂದ ತಗದರ ಎಡಗಡೆ ಹೇಣ್ತಿಗೆ ಅನ್ಯಾಯಮಾಡಿದ್ಹಾಂಗ! ಹೀಂಗಾಗಿ ಯಾವುದೂ ಬಗೀಹರೀದಸ, ಸುಮ್ಮನಿದ್ದ ಬಿಟ್ಟೆ! ಬತ್ತಿ ನನ್ನ ಈ ಕಣ್ಣಿನ ಸುಟ್ಟು ತಣ್ಣಗಾಗಿ ಹೋತು. ಅಂದಿನಿಂದ ನನಗ 'ದೊಳ್ಳೆಗಣ್ಣ' ಅಂತ ಹೆಸರು ಬಂತು.

(ಸಭೆಯಲ್ಲಿ ಜನರ ನಗೆ)

ನ್ಯಾಯಾಧೀಶ :— (ಮೆಲುನಗೆ ನಗುತ್ತ) ಒಳ್ಳೆಯ ಕಥೆ! ಇನ್ನು ಮುರಿಗಾಲಣ್ಣಾ, ನಿನ್ನ ಕಥೆ ನಡೆಯಲಿ! ದೊಳ್ಳೆಗಣ್ಣ ನಂತೆ ನಿನಗೂ ಇಬ್ಬರು ಹೆಂಡಿರೋ ಒಬ್ಬನಕೋ!

ಮುರಿಗಾಲ :— ಇಬ್ಬರು ಬುದ್ಧಿ. ನನ್ನ ಸೋದರತ್ತೀ ಮಕ್ಕಳ ಏನ್ರಿ—ಇಬ್ಬರೂ!

ನ್ಯಾಯಾಧೀಶ :— ಹುಂ ಹೂಂ! ಅವರ ಹೆಸರೇನು?

ಮುರಿಗಾಲ :— ಇಲ್ಲಾ೦ಗ ಹೇಳಬೇಕರೀ ಬುದ್ಧಿ! ಆದರ.... ಹೇಳಂತೀರಿ ಅಂದಮ್ಯಾಲೆ ಹೇಳಲಿಕ್ಕೇ ಬೇಕಲ್ರಿ! ಒಬ್ಬಳ ಹೆಸರು ಗೌರಿ; ಇನ್ನೊಬ್ಬಳ ಹೆಸರು ಬಿಳೀರಿ! (ಸಭೆಯಲ್ಲಿ ಸಣ್ಣ ನಗೆ) ಇಬ್ಬರದೂ ಪ್ರೀತಿ ನನ್ಮ್ಯಾಲ ಬಹಾಳಾರಿ! ದಿನಾಲು ಇಬ್ಬರೂ ನನ್ನ ಕಾಲು ತಿಕ್ಕಿ ಬಿಸೀನೀರು ಹನಿಸತಿದ್ದರು. ತಿಕ್ಕಲಿಕ್ಕೆ ಒಬ್ಬೊಬ್ಬರು ಒಂದೊಂದು ಕಾಲನ್ನ ಹಂಚಿಕೊಂಡಿದ್ದರು. ಕರೀದು ಎಡಗಾಲರಿ; ಬಿಳೀದು ಬಲಗಾಲರಿ! ಒಂದು ದಿನ ಬಿಳಿ ತನ್ನ ಪಾಲಿನ ಬಲಗಾಲಿಗೆ ಎಣ್ಣೀ ಹಚ್ಚಿ ತಿಕ್ಕಿ ಬಿಸೀನೀರು ತರಲಿಕ್ಕಂತ ಒಳಗ ಹೋಗಿದ್ದಳರಿ! ಆಗ ಕರಿ, ತಾನು ತಿಕ್ಕಿದ ಎಡಗಾಲನ್ನ ಬಲಗಾಲ ಮ್ಯಾಲೆ ತಟ್ಟು, ಬಿಸೀನೀರಿಗಾಗಿ ಒಳಗ ಹೋದಳು ಆಗ ಬಿಳಿ ಒಂದು ನೋಡಿದಳು: ತನ್ನ ಪಾಲಿನ ಕಾಲಮ್ಯಾಲೆ ಕರಿಯ ಪಾಲಿನ ಕಾಲು! ಅವಳ ಮೈ ಉರಿಯ ಜೆಂಕಿ ಆಯತರಿ! ಒಳಗೆ ಹೋದವಳೇ ಒಂದು ಒನಿಕೇ ತಂದು, ಕರಿಯ ಪಾಲಿನ ಎಡಗಾಲನ್ನ ಕುಟ್ಟಿದಳರಿ! ನಾನು 'ಅಯ್ಯೋ' ಅಂದೆ ಒಳಗಿನಿಂದ ಕರೀ ಓಡಿ ಬಂದು ನೋಡಿದಳು ದಡದಡನೇ ಓಡಿಹೋಗಿ, ಅಸಿಗಲ್ಲನ್ನ ಹೊತ್ತು ತಂದಳು. 'ನಿನ್ನ ಪಾಲಿನ ಕಾಲನ್ನ ನಾ ಹಾಂಗs ಬಿಡತೀನೇನ ಬೀಳ್ರೀ!' ಅಂತ ಬಲಗಾಲಮ್ಯಾಲೆ ಆ ಬಂಡೀನ ಅಪ್ಪಳಿಸಿದಳು. ಆಗ ನನ್ನ ತೊಡಿಯು ಮೂಳೆ ಮುರಿದು ಹೋಯಿತು ಅಂದಿನಿಂದಲೂ ಜನರು ನನ್ನನ್ನ 'ಮುರಿಗಾಲ' ಅಂತ ಕರೀತೊಡಗಿದರು ನನ್ನ ಹೆಂಡಿರ ಪ್ರೀತಿ ನನ್ನಮ್ಯಾಲೆ ಬಹಾಳರಿ ಬುದ್ಧಿ! ನಿತ್ಯ ಅವರ ನೆನಪು ಆಗ್ತದೆ ನನಗ!

ನ್ಯಾಯಾಧೀಶ :— (ನಗುತ್ತ ನಗುತ್ತಲೆ) ಗಂಡನಿಗೆ ತಕ್ಕ ಹೆಂಡಂದಿರು! ಹೆಂಡಂದಿರಿಗೆ ತಕ್ಕ ಗಂಡ! ಒಳ್ಳೆಯ ಜೋಡಿ!

(ಎಲ್ಲರೂ ನಗುವರು)

ಆಯಿತು, ಮರುಳಯ್ಯಾ, ಇನ್ನು ನೀಲೆ ನಿನ್ನ ಮರುಳಾಯನದ ಕಥೆ ಹೇಳ (ಯಾ?

ಮರುಳಯ್ಯ :— ಅಗಲಿದೊಡೆ, ಕೇಳತೀನಿ ಕೇಳ್ರಿ! ನನಗ ಇಬ್ಬರು ಹೆಂಡಂದಿರು!

ನ್ಯಾ. ಧೀ :— (ನಡುವೆಯೇ) ಏನಯ್ಯಾ ನಿಮ್ಮ ಊರಲ್ಲಿ ಇಬ್ಬರು ಹೆಂಡಂದ್ನ ಮಾಡಿಕೊಳ್ಳುವುದೊಂದು ಪದ್ಧತಿಯೇ ಅದೆಯೇನು? ಅಥವಾ ನಿಮ್ಮ ಊರಲ್ಲಿ ಹೆಣ್ಣುಮಕ್ಕಳ ಸಂಖ್ಯೆಯೇ ಹೆಚ್ಚಿಗೆ ಆದನೋ?

ಮರುಳಯ್ಯ :— ಎಕಽೂ ಮಾತು ಇರಬಹುದೇನ,! ನಮ್ಮ ಊರಾಗ ಹೆಂಡರು ಆಗುವವರೆಲ್ಲಾ ಹೆಂಗಸರs ಇರತಾರ್ರಿ; ಎಲ್ಲಾ ಮಂದಿಗೂ ಹೆಂಡರು ಇದ್ದಾರಂದ ಮ್ಯಾಲ, ಹೆಂಗಸರ ಸಂಖ್ಯಾ ಹೆಚ್ಚಿಗೇ ಇರಬೇಕರಿ. ನನಗ ಏನಾತಂತೀರಿ! ನಮ್ಮ ಅಪ್ಪ ತನ್ನ ಬಳಗದಾಗಿನ ಹುಡಿಗಿ ಇರಬೇಕಂತ ತನ್ನ ತಂಗೀ ಮಗಳನ್ನ ಗಟ್ಟಿಮಾಡಿದ. ಮತ್ತ ನಮ್ಮ ಅವ್ವ, ತನ್ನ ಬಳಗ ದೊಳಗಿನ ಹುಡುಗಿ ಇರಬೇಕಂತ ತನ್ನ ಅಣ್ಣನ ಮಗಳನ್ನ ಗಟ್ಟಿಮಾಡಿದಳು ಅವರವರೊಳಗs ದೊಡ್ಡ ಜಗಳನ್ನ ನಡೀತು! ನಾನು ಇಬ್ಬರೂ ಹುಡಿಗಿಯರನ್ನ ನೋಡಿದ್ದೆ. ಇಬ್ಬರೂ ಇರಲಿಂತ ಹೇಳಿ, ಅವರನ್ನ ಮದುವೆಮಾಡಿಕೊಂಡು ಬಿಟ್ಟೆ.

(ಸಭೆಯಲ್ಲಿ ನಗೆಯ ಕಿರಿ)

ಎಲೇ! ನಗತೀರೇನು? ಅವರನ್ನ ನೀವು ನೋಡಿದ್ದರು, ನೀವೂ ಅವರನ್ನ ಮದುವೀ ಮಾಡಿಕೋತಿದ್ದಿರಿ!

(ಮತ್ತೆ ನಗೆಯ ಹೊನಲು ಹರಿಯುವದು.)

ನ್ಯಾ: — ಹುಂ! ಸಾಗಲಿ ಮುಂದಿನ ಪುರಾಣ!

ಮುರುಳಯ್ಯ :— ಒಂದು ರಾತ್ರಿ ಏನಾತಂತೀರಿ ? ನನ್ನ ಇಬ್ಬರೂ ಹೆಂಡಿರೂ ಕೂಡಿ, ನನ್ನ ಕೂತ ಜಿದ್ದು ಕಟ್ಟಿದರು. ಅದೇನು ಜಿದ್ದು ಗೊತ್ತ್ಸ ? ಸೂರ್ಯೋದಯ ಆಗೂವರೆಗೂ ಯಾರೂ ಮಾತನಾಡಬಾರದು. ತಪ್ಪಿ ಯಾರಾದರೂ ಮಾತಾಡಿದರ ಅವರು ಸೋತ್ಹಾಂಗ, ಸೋತವರು ಗೆದ್ದವರಿಗೆ ಹತ್ತ್ರಿಂಡು ಜೊತೆ ಮುಂಡಿಗಿ, ಒಂದು ಮಣ ತುಪ್ಪ, ಶಕ್ಕರೀ ಬೆರೆಸಿದ ಕೆನಿಹಾಲು ಒಂದು ಕೊಡ—ಕೊಡಬೇಕು ಸರಿ ! ಎಲ್ಲರೂ ಒಪ್ಪಿ ಮಲಕೊಂಡೆವು. ಸರಿರಾತ್ರಿ ವೀರೇತು. ಕಳ್ಳರು ಮನೆಗೆ ಕನ್ನ ಕೊರೆದರು. ಒಳಗ ಬಂದರು ಮನೆಯೊಳಗಿರೂವನ್ನೆಲ್ಲಾ ಕದ್ದು ಗಂಟುಕಟ್ಟಿದರು. ನಾವು ಮೂವರೂ ಎಚ್ಚರದಿಂದಲೇ ಇದ್ದೆವು. ಆದರೆ ಜಿದ್ದಿನ ಸಲುವಾಗಿ ಮಿಸುಕುವಂತಿರಲಿಲ್ಲ. ಮಾಡಿ ಇಟ್ಟ ಸವಿಗೂಳನ್ನೆಲ್ಲಾ ಆ ಕಳ್ಳರು ಹೊಟ್ಟೆತುಂಬ ಹೊಡೆದರು. ಆದರೂ ನಾವು ಸುಮ್ಮನೆ ಬಿದ್ದಿದ್ದೆವು. ಊಟಾ ಮಾಡಿ ಅವರು, ನಾವು ಮಲಗಿದಲ್ಲಿಯೆ ಬಂದರು ಹೆಂಡಿರ ಮೈ ಮೇಲಿನದೆಲ್ಲ ಸುಲಕೊಳ್ಳಲಿಕ್ಕೆ ಹತ್ತಿದರು. ಆಗ ಹಿರಿ. ಯಾಕಿ ಮೆಲ್ಲಗೆ 'ಕಿವಿಯ ಕೊಪ್ಪು ತೆಗೆದುಕ್ಕೊಳ್ಳುವಾಗ ನೋವಾಗದಂತೆ ತಕ್ಕೊಳ್ರೆಪ್ಪಾ ನಿಮ್ಮ ಧರ್ಮಕ್ಕ' ಅಂದಳು. ಅವರು ಬಾಯಿಬಿಚ್ಚುವ್ದೇ ತಡ; ನಾವಿಬ್ಬರೂ ಎದ್ದು ಕುಣಿದಾಡ ತೊಡಗಿದೆವು 'ಓ ! ಸೋತರು, ಸೋತ್ಳು' ಎಂದು ಕೂಗಾಡಿದೆವು. ಆಗ ಕಳ್ಳರು ಓಡಿಹೋದರು. ಮನೆಯೆಲ್ಲ ಝಾಳ ಝಾಳ ! ಮಣಗಟ್ಲೆ ಬಂಗಾರ ಹೋದ ಚಿಂತೆ ನನಗಿಂದಿಲ್ಲ. ಮುಂಡಿಗಿ-ತುಪ್ಪ ಹಾಲು ಸಿಗತಾವಂತ ಹಾರಾಡಿದೆ ಆವರೆ ಮನೆಯೆಲ್ಲ ಬರಿಯುದಾದಾಗ ನನಗ ಮುಂಡಿಗಿ ಸಿಗಬೇಕು ಹ್ಯಾಂಗ ? ಮನಸಿನ ಮುಂಡಿಗೀನ್ನ ತಿನಬೇಕಾಯಿತರಿ !

ಯಾರೋಒಬ್ಬರು :— 'ಮನಸಿನ ಮುಂಡಿಗೀ ತಿಂದರ ಗೋದಿಗೆ ದೊಕ್ಕಾ ಕೊಡೂ ಕಾರಣಿಲ್ಲೇಳು !'

(ಸಭೆಯಲ್ಲಿ ನಗುವೇಳುವುದು).

ನ್ಯಾಯಾಧೀಶ :— ಏ, ತೂತುಗಳ್ಳಪ್ಪಾ, ಈಗ ನಿನ್ನ ಸರದಿ ! ನಿನ್ನ ಹೇಳಿಕೆ ಏನದ ಹೇಳಪಾ !

ಪೋಟುಗಳ್ಳ :— ತಯಾರಾಗೇ ನಿಂತೀನ್ರಿ ! ನಮ್ಮ ಅಪ್ಪ ಊರ ಗೌಡರಿ. ಮತ್ತೊಂದು ಊರ ಗೌಡನ ಮಗಳನ್ನ ತಂದು ನನಗ ಮದಿವೀ ಮಾಡಿದ್ದರ್ರಿ. ಹುಡುಗಿ ಬೆಳದು ದೊಡ್ಡಾಕ್ಯಾದರೂ ತವರಮನ್ಯಾಗ ಇರಬೇಕಂತ ಅವಳ ಹಂಬಲರಿ. ಅಪ್ಪ ಮನಿಗೆ ಕರತರಬೇಕಂತ ನಾಕಾರು ಸಾರೆ ಎಡತಾಕಿ ಹಾಂಗs ಬಂದಿದ್ದನೇನ್ರಿ ! ಆಗ ನಾನೇ ಹೋಗಿ ಹೆಂಡ್ತಿನ್ನ ಕರಕೊಂಡು ಬರತೀನಂತ ಮಾವನ ಊರಿಗೆ ಹೊಂಟುನಿಂತೆ. ಆಗ ನಮ್ಮ ಅವ್ವ ಏನು ಹೇಳಿದಳಂತೀರಿ : 'ಎಲೋ, ನೀನು ನಾಡೊಳಗಿಲ್ಲದ ಹೊಟ್ಟಿಬಾಕ ! ತಾಸು-ತಾಸಿಗೆ ನಿನಗ ಕೂಳು ಬೇಕು. ಮಾವನ ಮನಿಗೆ ಹೋದಾಗ ಹೀಂಗ ಮಾಡಿದರ,



'ತಿಂಡಿಸೋಕಾ' ಅಂತ ಎಲ್ಲರೂ ಹಾಸ್ಯ ಮಾಡಬಹುದು. ಅದಕ್ಕ ನೀನು ಹೆಚ್ಚಾಗಿ ಏನೂ ತಿನಬ್ಯಾಡ !' ಅಂತರಿ. ಹಾಂಗೇ ಆಗಲಿ ಅಂತ ಹೇಳಿ, ಮಾವನೂರಿಗೆ ಹೋದೆ, ಅಲ್ಲಿ ಅತ್ತೆ, ಮಾವ, ಭಾವ-ಮೈದುನ ಕೂಡಿ ಎಷ್ಟು ಒತ್ತಾಯ ಮಾಡಿದರೂ, ಒಂದು ಮುಳ್ಳು ಅವಲಕ್ಕಿ ತಿನ್ನಲಿಲ್ಲ; ಒಂದು ತುತ್ತು ಅನ್ನ ಉಣ್ಣಲಿಲ್ಲ !

ನ್ಯಾಯಾಧೀಶ :— ಅಯ್ಯೋ ಪಾಪ ! ಬಡಪಾಯಿ ಅಳಿಯ !

(ಜನರು ನಗೆಯು ಉಬ್ಬುಹು ಎಬ್ಬಿಸುವರು).

ಪೋಟುಗಳ್ಳ :— ಮುಂದೆ ಕೇಳ್ರಿಪಾ, ಈಗs ನಗಬ್ಯಾಡ್ರಿ ! ಸಂಜೆ ಆಯ್ತು. ಸೂರ್ಯ ಹೊಂಟುಹೋದ. ಕತ್ತಲಿ ಆತು. ರಾತ್ರಿಯು ಊಟಕ್ಕೂ ನಾ ಏಳಲಿಲ್ಲೇನೆಪಾ ! ಎಲ್ಲಾರೂ ಉಂಡರು. ನನ ....ಹೆಂಡತಿ ಕೂಡ ಹೊಟ್ಟೆ ಬಿರಿಯುವಂತ ಕಬಳಿಸಿದಳು. ಆಗ ನನ್ನ ಹೆಂಡ್ತಿ ತುಳ್ಳಿ ಸರಿಸು ಹೆಚ್ಚಿದ್ದಾಂಗಾಗಿತ್ತು. ನಮ್ಮ ಅತ್ತೆ 'ಅಳಿಯುದೇವರು ಯಾಕೋ ಉಣಲಿಲ್ಲ. ಅವರಿಗೆ ಹಸಿವೆಯಾದಾಗ ಅನ ಮಾಡಿ ಹಾಕು' ಅಂತ ನನ್ನ ಹೆಂಡತಿಗೆ ಹೇಳಿ, ಅಕ್ಕಿ-ಬೇಳೆಗಳನ್ನ ನಮ್ಮ ಹಾಸಿಗೆಯ ಹತ್ತ್ರವೇ ಇಟ್ಟರು. ಎಲ್ಲರೂ ಮಲಗಿ ನಿದ್ದೆ ಹೊಡೀಹತ್ತಿದರು. ನಾನೂ ಮಲಗಿದೆ. ಹೆಂಡತಿ ಮಲಗಿ ಗೊರಕೆಯನ್ನ ಆರಂಭಿಸಿದಳು. ನನಗೋ ಹೊಟ್ಟೆಯಲ್ಲಿ ಹಸಿವೆಯ ಬೆಂಕಿ ರಾತ್ರೀ ಕಳೆಯುಬೇಕಾದರೆ ಸಾಕುಬೇಕಾಯಿತು. ಕೋಳಿ ಕೂಗಿತು. ಹೆಂಡತಿ ಎದ್ದು ಒಳಗೆ ಹೋದಳು. ನಾನು ಹಸಿವಿನಿಂದ ಕಂಗಾಲಾಗಿ, ಅಲ್ಲಿಯೇ ಇದ್ದ ಅಕ್ಕಿಯನ್ನು ಹಿಡಿಹಿಡಿಯಿಂದ ಬಾಯೊಳಗೆ ತುಂಬಿಕೊಂಡೆ. ಅಷ್ಟರೊಳಗ ಹೆಂಡ ಅಡ್ಡಿಗೆ ಬಂದಳು. ಬಂದು ನನ್ನ ಮಾತಾಡಿಸತೊಡಗಿದಳು ಆಗ ಅಕ್ಕಿಯಿಂದ ನನ್ನ ಬಾಯಿ ತುಂಬಿ ಬಿಟ್ಟಿತ್ತು; ಗಲ್ಲ ಎರಡೂ ಉಬ್ಬಿ ವಂಗ್ಯಾನ ಗಲ್ಲದ್ಹಾಂಗ ಆಗ್ಯಾವ; ಆಗ ನಾನು, ಆಕಿ ಕೂಡ ಮಾತಾತಬೇಕರೇ ಹ್ಯಾಂಗರಿ ?

(ಸಭೆಯಲ್ಲಿ ನಗುವಿನ ಗದ್ದಲವೇಳುವುದು)

ಮುಂದಿನ ಸಂಗತೀ ಕೇಳ್ರಿ! ನನ್ನ ಗಲ್ಲ ಉಬ್ಬಿದ ಮಾರೀ ನೋಡಿ ನನ್ನ ಹೆಂಡತಿ ಗಾಬರಿಗೊಂಡಳು, 'ಅಯ್ಯೋ ಅಸ್ಪಾ!' ಎಂದು ಕಿರಿಚಿಕೊಂಡಳು. ಆಗ ಮಾವ ಓಡಿ ಬಂದ; ಅತ್ತೆ ಓಡಿ ಬಂದಳು; ಭಾವ ಓಡಿ ಬಂದ. ಎಲ್ಲಾರೂ ಅಲ್ಲೇ ಕೂಡಿದರು. ನಾನು? ಗಲ್ಲ ಉಬ್ಬಿಸಿಕೊಂಡು ಹಾಂಗs ಕೂತುಬಿಟ್ಟಿದ್ದೆ. ಜನರು ಪರಿಪರಿಯಿಂದ ವ್ಯಾಕನಾಡಿಸಿದರೂ ಮಾತನಾಡಲಿಲ್ಲ. ನನಗ ಯಾವುದೋ ಒಂದು ರೋಗ ಅಂಟಿಕೊಂಡಿದ ಅಂತ ಅವರೆಲ್ಲಾ ಕಣ್ಣೀರು ಸುರಿಸಲಿಕ್ಕೆ ಹತ್ತಿದರು. ಎಲ್ಲಾರ ಕಣ್ಣೂ ನನ್ನ ಕಡೆ! ಆಗ ನಾನು ಬಾಯಾಗಿನ ಅಕ್ಕೀ ತಿಂದು ನುಂಗದೇಕು ಹ್ಯಾಂಗ? ಉಗುಳಿ ಬಿಡಬೇಕಂದರ ಉಗಳಲಿಕ್ಕೆ ಸಂಧಿಯಾದರೂ ಹ್ಯಾಂಗ ಸಿಗದೇಕು! ಮನ್ಯಾಗ ಅಳೂದು ಕರಿಯೂದು ನಡೀತು.

[ಜನರೆಲ್ಲ ಗಟ್ಟಿಯಾಗಿ ನಗುವರು.]

ಅಷ್ಟರೊಳಗs ಸೂರ್ಯ ಮೂಡಿ ಮ್ಯಾಲ ಬಂದ. 'ಕುಂಟೆಗಾಲಿಗೇ ವೈದ್ಯ' ಅಂತ ಕೂಗತs ಒಬ್ಬ ಬೀದಿಯ ವೈದ್ಯ ನಮ್ಮ ಮನೀ ಮುಂದs ಹಾಯ್ದು ನಡೆದಿದ್ದ. ಆಗ ಯಾರೋ ಒಬ್ಬರು 'ವೈದ್ಯನ ನನ್ನ ಬಳಿಗೆ ಕರತಂದರು. ಆತ ಬಂದು ನನ್ನ ನಾಡೀ ನೋಡಿದ; ಉಬ್ಬಿದ ಗಲ್ಲಾ ನೋಡಿದ. ಬೆನ್ನಿಗೆ ಹತ್ತಿದ ಹೊಟ್ಟೀ ನೋಡಿದ. ಗಲ್ಲಗಳನ್ನ ಅದುಮಿ ಅದುಮಿ ಪರೀಕ್ಷೆಮಾಡಿದ. ಬಳಿಕ ಇದು ಘನರೋಗ! ಈಗ ಚಿಕಿತ್ಸೆ ಮಾಡಿಸದಿದ್ದರ ಇವನಿಗೆ ಸಾವು ಖಂಡಿತ' ಅಂತ ಹೇಳಿದ ನಮ್ಮ ಮಾವ, ಆ ವೈದ್ಯನಿಗೆ ಜೀಡಿ. ನ್ನು ಕೊಡುವುದಾಗಿ ಒಪ್ಪಿಕೊಂಡ ಆಗ ಆ ವೈದ್ಯ ತನ ಜೋಳಿಗೆ. ಳಿಗಿಂದ ಶಸ್ತ್ರವನ್ನು ತೆಗೆದು, ಗಲ್ಲಕ್ಕೆ ತೂತು ಮಾಡಿದ. ಆ ತನೊಳಗಿಂದ ಅಕ್ಕಿಯ ಕಾಳನ್ನ ಹೊರಗೆ ತೆಗೆದು ಎಲ್ಲರಿಗೂ ರಿಸಿ, 'ಅಯ್ಯಸ್ಪಾ ಇದು ತಂಡುಲವ್ಯಾಧಿ! ಬಹಳ ಭಯಂಕರ' ದು ಎಲ್ಲರನ್ನೂ ಕಾಲುಗೆಡಿಸಿಬಿಟ್ಟನೇನ್ರಿ!

ಅಮ್ಯಾಲ ಆ ವೈದ್ಯ ಏನು ಮಾಡಿದನಂತೀರಿ. ಎಲ್ಲಾರನೂ ರಗ ಕಳಿಸಿದ; ನನ್ನ ಮುಖದ ಮ್ಯಾಲ ಒಂದು ಕಂಬಳಿಯ ಸುಕುವಾಕಿ ಕೂತಿಸಿದ. ನನಗ ಒಳ್ಳೆಯ ಅವಕಾಶ ಸಿಕ್ಕಿತ್ತ ಯಿಯೊಳಗಿನ ಅಕ್ಕಿಯನ್ನ ತಿಂದು ನುಂಗಿಬಿಟ್ಟೆ. ಆಗ ಆ ವೈದ್ಯ ದ ಗಾಯವನ್ನ ತೊಳೆದು, ಏನೋ ಔಷಧಿ ಹಚ್ಚಿದ; ಅತ್ತೆ-ವಂದಿರನ್ನು ಕರೆದು 'ಈತನಿಗೆ ಹೊಟ್ಟೆತುಂಬ ಊಟಕ್ಕ ಹಾಕ್ರಿ' ತ ಹೇಳಿ. ಒಂದು ನೂರು ಗದ್ಯಾಣ ಪ್ರತಿಫಲ ತಕ್ಕೊಂಡು ರಟುಹೋದ. ಆ ಶಸ್ತ್ರದ ಗಾಯ ಮಾಯಬೇಕಾದರ ಂದ ಮೂರು ತಿಂಗಳ ಕಾಲ ಉಪಚಾರಮಾಡಿಸಿಗೋಬೇಕಾತು. ರೂ ಗಲ್ಲಕ್ಕ ಬಿದ್ದ ಪೋಟು ಹಾಂಗs ಉಳೀತರಿ! ಮಂದೆಲ್ಲಾ 'ಪೋಟುಗಲ್ಲ' ಅಂತ ಹೊಸಾ ಹೆಸರು ಇಟ್ಟಿತು. ಇದು ಕಥೀರಿ!

(ಸಭೆಯಲ್ಲಿ ಎದ್ದ ನಗೆಯು ಪಂಕಪಂಕ)

ಪ್ರಿಯವಾಚಕ,

ಒಂದು ನಿಮಿಷ!

ಪ್ರಿ. ವಿ. ಕೃ. ಗೋಕಾಕ ಅವರ

ಅದ್ಭುತರಮ್ಯ-ಪ್ರದೀರ್ಘಕಾವ್ಯಕೃತಿ

ನೀರದ

ಬಿತ್ತಾಕರ್ಷಕವಾಗಿ ಚಿತ್ರಮಯವಾಗಿ

ಪ್ರಕಟವಾಗಲಿದೆ.

ವಿವರಗಳಿಗೆ

ಪರಾಗ ಪ್ರಕಾಶನ, ಧಾರವಾಡ

ಇವರಿಗೆ ಬರೆಯುವದು.

ನ್ಯಾಯಾಧೀಶ:— ಭಲಿಭಲೆ! ಗೆಳಿಯರೇ ನೀವೆಲ್ಲರೂ ಒಂದೆ ಮಡಿಯಲ್ಲಿ ಹುಟ್ಟಿದ ಪೂತಿಗಳು! ನೀವು ಎಲ್ಲರೂ ಸಮಾನ ಮೂರ್ಖರಾಗಿದ್ದೀರಿ. ಆದುದರಿಂದ ಗುರುಗಳ ಆಶೀರ್ವಾದ ನಿಮಗೆ ಎಲ್ಲರಿಗೂ ಸಲ್ಲುತ್ತದೆ; ಎಲ್ಲರೂ ಅದರಲ್ಲಿ ಪಾಲುಗಾರರು!

ನಾಲ್ವರೂ ಕೇಳಿ:— ಹುಯ್ಯಾ ಹಾ! ನ್ಯಾಯಾಧೀಶರಿಗೆ ಜಯವಾಗಲಿ! ದಂಡಾಧಿಕಾರಿಗೆ ಮಂಗಳವಾಗಲಿ! ನಮ್ಮ ನಾಲ್ವರ ಜಯಶಾಲಿಗಳಿಗೂ ಮಂಗಲವಾಗಲಿ! ನ್ಯಾಯಾಧೀಶರಿಗೆ ನಮಸ್ಕಾರ! ನಮಸ್ಕಾರ! ನಮಸ್ಕಾರ! ನಮಸ್ಕಾರ!

(ಸಭೆಯಲ್ಲಿ ನಗೆ)

ನಾಲ್ವರೂ ಹೇಳಿರಿ:

ನಾವು ನಾಕುಮಂದಿ ದಾರಿಹೋಕರುವೆವು-
ಯಾವಾಗಲು ಊರುಳೇರಿ ತಿರುಗುತಿರುವೆವು.
ಬೆಳಗಿನಿಂದ ಇದುವರೆಗೂ ಕೂಳ ಕಾಣೆವು-
ಮುನಿಯ ಹರಕೆ ಕಳೆಯಲಿಲ್ಲ, ಹೊಟ್ಟೆಯು ಹಸಿವು.
ಹೊಟ್ಟೆತುಂಬ ಅನ್ನ ನೀಡಿ ಹಸಿವ ಕಳೆಯಿರಿ!
ಬೆಟ್ಟದಂತೆ ಬೆಳೆಯಲಯ್ಯ ನಿಮ್ಮ ಯಶರಿ!

ಕಾವ್ಯೇಷು ನಾಟಕಂ ರಮ್ಯಂ

(ಕಾಲಿದಾಸನ 'ಮಾಲವಿಕಾಗ್ನಿಮಿತ್ರಂ' ಎಂಬ ನಾಟಕದ ವಿಮರ್ಶೆ)

ಶ್ರೀ. ಎಚ್. ಡಿ. ಉಪಾಧ್ಯಾಯ, ಹೈದರಾಬಾದ್.

ಸಂಸ್ಕೃತ ನಾಟಕಕಾರರಲ್ಲಿ ಕಾಲಿದಾಸ ಕವಿಯು ಹೆಸರು ಮೊದಲನೆಯದಾಗಿ ವಿನುಗುತ್ತಲಿದೆ. ಆತನ ಮೊದಲ ನಾಟಕಕೃತಿಯಾಗಿರಬಹುದಾದ 'ಮಾಲವಿಕಾಗ್ನಿಮಿತ್ರ' ಎಂಬ ನಾಟಕದ ಸ್ಥಾನವೆಂತಹದು? ಅದರಲ್ಲಿ ಅಡಕವಾದ ಗುಣಗಳು ಎಂತಹವು?

ಲೇಖಾಂಕ ೨

ಭರತಾದಿ ಅಲಂಕಾರಿಕರು ಕಾವ್ಯವನ್ನು 'ಶ್ರವ್ಯ ಮತ್ತು ದೃಶ್ಯ' ಈಗೆ ಎರಡು ವಿಧ—ಎಂದು ಹೇಳಿದ್ದಾರೆ. ಶ್ರವ್ಯಕಾವ್ಯಗಳಾದ ಮಹಾಕಾವ್ಯ, ಖಂಡಕಾವ್ಯ, ಗದ್ಯಕಾವ್ಯ ಮೊದಲಾದುವು ಇನ್ನು ಪದಗಳಿಂದ ಭಾವಪೂರ್ಣವಾಗಿಯೂ ಹೇಳಿದುದನ್ನು ಕೇಳಿದಾಗ ರಸಾನುಭಾವವಂಟಾಗಿ ಶಸ್ಯೋಲಕ ಆನಂದವಾಗುತ್ತವೆ. ಆದರೆ ದೃಶ್ಯಕಾವ್ಯಗಳಾದ ನಾಟಕಗಳ ರಸಾನುಭವದ ರೀತಿ ಬೇರೆ. ಅವುಗಳನ್ನು ರಂಗದ ಮೇಲೆ ಕಲಾಪೂರ್ಣವಾಗಿ ಅಭಿನಯಿಸಿದುದನ್ನು ನೋಡಿದಾಗಲೆ ಸಾಮಾಜಿಕರಿಗೆ ಅದರಿಂದ ರಸಾನಂದವುಂಟಾಗುವುದು. ಹೀಗೆ ದೃಶ್ಯಕಾವ್ಯಗಳಾದ ನಾಟಕಗಳು ಕಾವ್ಯದ ಒಂದು ವಿಶಿಷ್ಟ ಪ್ರಕಾರವಾಗಿದ್ದರೂ, ಅವು ಪ್ರಯೋಗಪ್ರಧಾನವಾದುವುಗಳೆಂಬ ಮಾತನ್ನು ಒಪ್ಪಲೇಬೇಕಾಗುವುದು. ಉತ್ತಮ ಕಾವ್ಯ ಗುಣಗಳುಳ್ಳ ನಾಟಕವು ರಂಗದ ಮೇಲೆ ಪ್ರಯೋಗಿಸಲು ಯೋಗ್ಯವಾದಾಗಲೇ ಅದು ಉತ್ತಮನಾಟಕವೆನಿಸುವುದು. ಭಾಸ ಕಾಳಿದಾಸರ ನಾಟಕಗಳು ಇಂತಹ ಉತ್ತಮತರಗತಿಯ ನಾಟಕಗಳ ಶ್ರೇಣಿಗೆ ಸೇರಿದುವುಗಳಾಗಿವೆ 'ಕವಿಷು ಕಾಲಿದಾಸಃ ಶ್ರೇಷ್ಠಃ' ಎಂಬ ಲೋಕೋಕ್ತಿಯಂತೆ ನಾಟಕಕಾರರಲ್ಲಿಯೂ ಈತನೇ ಅಗ್ರಗಣ್ಯನೆಂದು ನಿರ್ವಿವಾದವಾಗಿ ಹೇಳಬಹುದು. ಒಳ್ಳೆಯ ನಾಟಕಕಾರನಲ್ಲಿರಬೇಕಾದ ಎಲ್ಲ ಗುಣಗಳೂ ಈ ಕವಿಯಲ್ಲಿ ಇವೆ. ಸಂಗೀತ ಮತ್ತು ನಾಟ್ಯಶಾಸ್ತ್ರದಲ್ಲಿ ಈತನಿಗೆ ನಿಗಡಿಶಯವಾದ ಅಭಿರುಚಿ. ವಾದ್ಯಗಳಲ್ಲಿ ತೂರ್ಯ, ಮುರಜ, ಪುಷ್ಕರ, ವಲ್ಲಕೀ, ಮೃದಂಗ, ಮರ್ದಲಾ ಇತ್ಯಾದಿಗಳನ್ನು ಅಲ್ಲಲ್ಲಿ ಹೇಳಿದ್ದಾನೆ ಮಾಲವಿಕೆಯು ನೃತ್ಯವನ್ನು ಬಣ್ಣಿಸುವಾಗ ಹೇಳಿದ ಮಾತುಗಳು (ಆಂಗೈರಂತರ್ನಿಹಿತವಚನೈಃ ಸೂಚಿತಃ ಸಾಮ್ಯಗರ್ಭಃ ಪಾದನ್ಯಾಸೋ ಲಯಮನುಗತಸ್ತನ್ಮಯತ್ವಂ ರಸೇನು, ಶಾಖಾಯೋನಿರ್ಮೃದುರಭಿನಯಸ್ತದ್ವಿಕಲ್ಪಾನುವೃತ್ತಿಃ, ಭಾವೋ ಭಾವಂ ನುದತಿ ವಿಷಯಾದ್ರಾಗಬಂಧಃ ಸ ಏವ.) ನೃತ್ಯಕಲೆಯಲ್ಲಿ ಕವಿಗಿರುವ ನೈಪುಣ್ಯವನ್ನು [illegible]ಪುತ್ತವೆ. 'ತ್ರೈಗುಣ್ಯೋದ್ಭವಮತ್ರಲೋಕಚರಿತಂ ನಾನಾ ಭಾವಾಶ್ರಯಂ ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎಂದು ಹೇಳಿರುವ ಕವಿ ನಾಟಕದ ಮೂಲಭೂತ ತತ್ತ್ವಗಳನ್ನು ಅರಿತವನಾಗಿದ್ದಾನೆ. ಇವೆಲ್ಲಕ್ಕೂ ಹೆಚ್ಚಾಗಿ ಪ್ರಕೃತಿ ಸೌಂದರ್ಯವನ್ನೋ ಸ್ತ್ರೀಲಾವಣ್ಯವನ್ನೋ ಹೃದಯಂಗಮವಾಗಿ ಬಣ್ಣಿಸಬಲ್ಲ ಆತನ ಕಲ್ಪನಾರಮ್ಯವಾದ ವರ್ಣನಾಚಾತುರ್ಯ, ಮಾನವ ಸ್ವಭಾವನಳ ವಿಭಿನ್ನತೆ ಮತ್ತು ಸ್ತ್ರೀಹೃದಯದ ವಿವಿಧ ವ್ಯಾಪಾರಗಳ ಯಥಾರ್ಥವಾದ ಕಾವ್ಯಮಯಚಿತ್ರಣ, ಕಾಮಿನೀ ಜನರ ಮನೋವ್ಯಾಪಾರಗಳ ವಿಶ್ಲೇಷಣೆ, ಕಾಮಿಜನರ ಸ್ವಪಕ್ಷಸಮರ್ಥನಶಕ್ತಿ, ಕಥಾವಸ್ತುವನ್ನು ಪರಸ್ಪರ ಸಂಬದ್ಧವಾದ ಘಟನೆಗಳಲಕ ಬೆಳಸಿಕೊಂಡು ಬರುವ ಆತನ ತಂತ್ರಕೌಶಲ, ವಸ್ತುವಿಗೆ ತಕ್ಕಂತೆ ಆವರಣ, ಆವರಣಕ್ಕೆ ತಕ್ಕಂತೆ ಪಾತ್ರಸೃಷ್ಟಿ, ಭಾವನೆಗಳಿಗೆ ತಕ್ಕಂತೆ ಭಾಷೆ ಮುಂತಾದುವುಗಳಲ್ಲಿ ವ್ಯಕ್ತವಾಗುವ ಆತನ ಔಚಿತ್ಯಜ್ಞಾನ, ಎಲ್ಲೆಲ್ಲಿ ಹಿತ-ವಿಹಿತವಾಗಿ ಬರುವ ಹಾಸ್ಯ, ಪ್ರಸಾದ ಮತ್ತು ಮಾಧುರ್ಯ ಗುಣಗಳಿಂದ ಕೂಡಿದ ವೈದರ್ಭೀರೀತಿಯ ಸುಲಲಿತವೂ ಮನೋಜ್ಞವೂ ಆದ ಆತನ ಕಾವ್ಯಶೈಲಿ, ಹೀಗೆ ಒಂದೇ ಎರಡೇ—ಇಂತಹ ಹತ್ತಾರು ಗುಣಗಳು ಆತನ ಕೃತಿಗಳಲ್ಲಿ ಹಾಸುಹೊಕ್ಕಾಗಿ ಬಂದಿವೆ. ಒಟ್ಟಿನಲ್ಲಿ ಈತನ ನಾಟಕಗಳಲ್ಲಿ ಕಾವ್ಯ ಮತ್ತು ನಾಟ್ಯ ಇವೆರಡೂ ಗುಣಗಳ ಮಧುರ ಸಮನ್ವಯವನ್ನು ಕಾಣುತ್ತೇವೆ.

ಕಾಳಿದಾಸನ ನಾಟಕಗಳು ಮೂರು—ಮಾಲವಿಕಾಗ್ನಿಮಿತ್ರಂ, ವಿಕ್ರಮೋರ್ವಶೀಯಂ ಮತ್ತು ಅಭಿಜ್ಞಾನ ಶಾಕುಂತಲಂ ಕವಿಯು ಅವುಗಳನ್ನು ಇದೇ ಕ್ರಮದಲ್ಲಿ ಬರೆದಿರಬಹುದೆಂದು ಬಹುಜನ

ದ್ವಾಂಸರ ಮತವಾಗಿದೆ. ಮಾಲವಿಕಾಗ್ನಿಮಿತ್ರವು ಕವಿಯ ಮೊದಲನೆಯ ನಾಟಕ. ಈ ನಾಟಕದ ಪ್ರಸ್ತಾವನೆಯಲ್ಲಿ ಕವಿಯು ಪೂರ್ವಪ್ರಬಂಧಕಾರರನ್ನು ಆದರಪೂರ್ವಕವಾಗಿ ಸ್ಮರಿಸಿದ್ದಾನೆ. ಇದಲ್ಲದೆ ವರ್ತಮಾನಕವಿಯಾದ ತನ್ನ ಕೃತಿಗಳಲ್ಲಿ ವಿದ್ವಾಂಸರಿಗೆ ಗೌರವವುಂಟಾಗಬಹುದೆ ?—ಎಂದು ತನ್ನ ಸಾಮರ್ಥ್ಯದ ಬಗ್ಗೆ ಅಧೈರ್ಯವನ್ನು ವ್ಯಕ್ತಪಡಿಸಿದ್ದಾನೆ. (ಪ್ರಥಿತಯಶಸಾಂ ಭಾಸಕವಿಪುತ್ರ ಸೌಮಿಲ್ಲಕವಿದೀನಾಂ ಪ್ರಬಂಧಾನತಿಕ್ರಮ್ಯ ವರ್ತಮಾನ ಕವೇಃ ಕಾಲಿದಾಸಸ್ಯ ಕ್ರಿಯಾಮಿಮಾಂ ದ್ರಷ್ಟುಂ ಕಥಂ ಪರಿಷದೋ ಬಹುಮಾನಃ) ವಿಕ್ರಮೋರ್ವಶೀಯದಲ್ಲಿ ಆ ಅಧೈರ್ಯವು ಕಡಮೆಯಾಗಿ ಶಾಕುಂತಲದಲ್ಲಿ ಕವಿಗೆ ತನ್ನ ಸಾಮರ್ಥ್ಯದಲ್ಲಿ ಗೂಢವಾದ ಪ್ರಬಲ ಆತ್ಮವಿಶ್ವಾಸವು ಹುಟ್ಟಿದೆ. ವಿಕ್ರಮೋರ್ವಶೀಯದಲ್ಲಿ 'ಪ್ರಣಯಿಸು-ವಾ ದಾಕ್ಷಿಣ್ಯಾತ್ ಅಥವಾ ಸದ್ವಸ್ತು ಪುರುಷಬಹುಮಾನಾತ್, ಶೃಣುತ ಜನಾ ಅವಧಾನಾತ್ ಕ್ರಿಯಾಮಿಮಾಂ ಕಾಲಿದಾಸಸ್ಯ' ಎಂದು ಹೇಳಿದ್ದರೆ ಶಾಕುಂತಲದಲ್ಲಿ 'ಸುವಿಹಿತಪ್ರಯೋಗತಯಾ ಅರ್ಥಸ್ಯ ನ ಕಮಪಿ ಪರಿಹಾಸ್ಯತೇ' ಎಂದು ಹೇಳಿದ್ದಾನೆ. ವಿಮರ್ಶ ದೃಷ್ಟಿಯಿಂದ ನೋಡುವವರಿಗೂ ಮಾಲವಿಕಾಗ್ನಿಮಿತ್ರವು ಕವಿಯ ಪ್ರಥಮನಾಟಕವೆಂಬುದು ಹೊಳೆಯುವೆ ಇರದು. ಏಕೆಂದರೆ ಈ ನಾಟಕದಲ್ಲಿ ಕವಿಯು ಪ್ರಯತ್ನಪೂರ್ವಕವಾಗಿ ಮಾತುಗಳನ್ನು ತಿದ್ದಿ ಕಷ್ಟದಲ್ಲಿ ಬರೆದಿರುವುದು ಕಂಡುಬರುತ್ತದೆ. ಆದರೆ ಶಾಕುಂತಲದಲ್ಲಿ ಕವಿಯ ಪ್ರತಿಭೆಯು ತೀಕ್ಷ್ಣವೂ ವಾಗ್ಧೋರಣಿ ಗಂಭೀರವೂ ಇದ್ದುದು ಕಾಣುತ್ತಿರುತ್ತದೆ. ಮಾಲವಿಕಾಗ್ನಿಮಿತ್ರದಲ್ಲಿ 'ಅರ್ಥಂ ವಾಗನುವರ್ತತೇ' ಎಂಬುದು ಕಂಡುಬಂದರೆ, ಶಾಕುಂತಲದಲ್ಲಿ 'ವಾಚಮರ್ಥೋನು ಧಾವತಿ' ಎಂಬುದು ಕಾಣುಬರುವುದು.

ವಸ್ತುನಿರೂಪಣೆಯ ದೃಷ್ಟಿಯಿಂದಲೂ ಮೇಲೆ ಹೇಳಿದ ಮಾತಿನ ಪುಷ್ಟಿಯಾಗುತ್ತದೆ. ಮೂರೂ ನಾಟಕಗಳ ಕಥಾವಸ್ತು ಒಂದೇ ಅದು ಕಣ್ಣು-ಗಂಡಿನ ನಡುವಿನ ಪ್ರಣಯ. ಆದರೆ ಪ್ರಣಯದ ಸ್ವರೂಪವು ಒಂದೊಂದು ತೆರನಾಗಿದೆ ಮಾಲವಿಕಾಗ್ನಿಮಿತ್ರದಲ್ಲಿ ನಿರೂಪಿತವಾದ ಪ್ರಣಯ ಕೇವಲ ವಾರ್ಥವಪ್ರಣಯ. ಇದ್ದು ಇಂದ್ರಿಯ ತೃಪ್ತಿಯನ್ನು ಮಾತ್ರ ಬಯಸುವ ಕಾಮುವಾಸನೆ. ಆದರೆ ಸಂಗವಲ್ಲಿಯೇ ಅದರ ಕರ್ಮವರ್ತನವಾಗುತ್ತದೆ. ಈ ಕಾಮುವಾಸನೆ ಕನ್ನ ಕಾರ್ಯಾರ್ಥಿಯಾಗಿ ಸಂಚು, ಕುಟಿಲ, ಕೈತವಾದಿಗಳನ್ನು ಆಶ್ರಯಿಸುತ್ತದೆ ಆದರೆ ವಿಕ್ರಮೋರ್ವಶೀಯ ಮತ್ತು ಶಾಕುಂತಲದಲ್ಲಿ ಇದರ ಉತ್ಪಟತೆ ಕ್ರಮೇಣ ಕಡಮೆಯಾಗುತ್ತ ಬಂದಿದೆ ಮಾಲವಿಕಾಗ್ನಿಮಿತ್ರದಲ್ಲಿ ಕವಿಯು ಮನೋಭಾವವು ವಸ್ತುನಿಷ್ಠವಾಗಿದ್ದು ಬಾಹ್ಯವಿಷಯಾಸಕ್ತವಾಗಿದ್ದರೆ, ಶಾಕುಂತಲದಲ್ಲಿ ಅದು ಆತ್ಮನಿಷ್ಠವಾಗಿದ್ದು ಅಂತರತ್ಮ ಮತ್ತು ಸ್ವಾನುಭವದಿಂದ ಗಂಭೀರತೆಯನ್ನು ಪಡೆದಿದೆ. ಇದಲ್ಲದೆ ಈ ಮೂರೂ ನಾಟಕಗಳ ವಾತಾವರಣ ಬೇರೆ ಬೇರೆ. ಅವುಗಳ ನಾಯಕ-ನಾಯಕಿಯರು ಬೇರೆ ಬೇರೆ. ಮತ್ತು ಅವರ ಮನೋಧರ್ಮಗಳು ಬೇರೆ ಬೇರೆ ಮಾಲವಿಕೆ ಮತ್ತು ಅಗ್ನಿಮಿತ್ರರ ಪ್ರಣಯವು ಅಂತಃಪುರ ಮತ್ತು ಪ್ರಮದವನದ ಶೃಂಗಾರಪ್ರಪಂಚದಲ್ಲಿ ನಡೆಯುತ್ತದೆ. ವಿಲಾಸಿನೀ ಜನರ ಮನೋಲಾಸಕ್ಕೆ ಬೇಕಾಗುವ ವಾತಾವರಣ ಅಲ್ಲಿ ಇದೆ. ಶ್ರವಣ ಸುಭಗವಾದ ಮತ್ತಕೋಕಿಲೆಯ ಕೂಜನ, ಚೂತಪ್ರಸವ ಸೌರಭವನ್ನು ಹರಡುವ ದಕ್ಷಿಣಮಾರುತ, ಲಲನೆಯರ ಬಿಂಬಾಧರಾಲಕ್ತಕವನ್ನು ತಿರಸ್ಕರಿಸುವ ರಕ್ತಾಶೋಕದ ಕಾಂತಿ, ಶಾಮವಾತಾವರಣವಾದ ಕುರಬಕಪುಷ್ಪ, ಲಲನೆಯರ ತಿಲಕಕ್ರಿಯೆಯನ್ನು ಮೀರಿಸುವ ದ್ವಿರೇಫಗಳಿಂದ ಕೂಡಿದ ತಿಲಕಪುಷ್ಪಗಳು ಅನಿವಿ ತ್ವವಾಗಿ ಉತ್ಕಂಠತೆಯನ್ನು ಹುಟ್ಟಿಸುವ ಮಲಯಾನಿಲ, ಪದ್ಮಿನಿಗಳಿಂದ ಶೋಭಿಸುವ ದೀರ್ಘಿಕೆಗಳು, ನವಿಲು ಪಾರಿವಾಳ ಮುಂತಾದ ಹಕ್ಕಿಗಳು, ವಾರಿಯಂತ್ರ, ಕಮುದ್ವತಿ ಲತಾಮಂದಿರ, ದೋಲಾಗೃಹ, ಅಲ್ಲಿ ಉಯ್ಯಾಲೆಯಾಡಲು ಬರುವ ರಾಜನ ಶೃಂಗಾರ ಸಖಿಯೂ ಭೋಗ-"ಭಾರ್ಯೆಯೂ ಪ್ರಮದೆಯೂ ಆದ ಇರಾವತಿ, ಇವುಗಳ ನಡುವೆ ಅಶೋಕವನವನು ಅರಳಿಸುವ ವಸಂತಲಕ್ಷ್ಮಿಯಂತೆ ಸುಂದರಿಯೂ, ಯುವತಿಯೂ, ನಾಟ್ಯಕಲಾನಿಪುಣೆಯೂ, ಲಜ್ಜಾ ರಾಶೀಭೂತೆಯೂ, ಪ್ರಣಯಪಾತ್ರಳೂ ಆದ ಮಾಲವಿಕೆ. ಅವಳಿಗೆ ಅವರೂಪ ಸರಿ. ಚಾತುರ್ಯರಾದ ಬಳುವಾಲವಿಕೆ, ಕೌಮುದಿಕೆ. ಮದನಿಕೆ ಮುಂತಾದವರು ಒಟ್ಟಿನಲ್ಲಿ ಮನೋಮೋಹಕವಾದ ಒಂದು ಶೃಂಗಾರಪ್ರಪಂಚವನ್ನೇ ಇಲ್ಲಿ ಸೃಷ್ಟಿಸಲಾಗಿದೆ. ರಾಜ್ಯವಿಪ್ಲವ, ದಂಡಯಾತ್ರೆ, ಜೈತ್ರಯಾತ್ರೆಗಳ ಗಂಭೀರ ಪ್ರಸಂಗಗಳೂ ಬಂದರೂ, ಅವು ಮೂಲ ವಸ್ತುವಿಗೆ ಪೋಷಕವಾಗಿದ್ದುಕೊಂಡು ರಾಜನ ಪ್ರಣಯಪ್ರಸಂಗವಾದನೆಯ ಕಾರ್ಯವು ಅವ್ಯಾಕುಲವಾಗಿ ನಡೆಯುತ್ತದೆ. ಅವುಗಳಿಗಿಂತ ಕಾಮುಕಂಠ್ಯ ಸಚಿವನಾದ ಗೌತಮನ ಸಂಚು, ಕುಟಿಲಕಾರ್ಯ ಮತ್ತು ಕೈತವಗಳಿಗೆಯೇ ರಂಗದಮೇಲೆ ಪ್ರಾಧಾನ್ಯ ಹೆಚ್ಚು. ಇಲ್ಲಿ ಪ್ರಣಯ ಪಾತ್ರಳಾದ ಮಾಲವಿಕೆ ಋಷಿಪುತ್ರಿಯಲ್ಲ. ರಾಜನು ತನ್ನನ್ನು ವರಿಸಲು ಬಂದಾಗ ಯಾವ ನಿರ್ಬಂಧವನ್ನೂ ಹಾಕುವುದಿಲ್ಲ. ಇಲ್ಲಿ ಗಂಧರ್ವಾಪ್ಸರೆಯರ ಅತಿಮಾನುಷ ಲೋಕದ ವೃತ್ತಾಂತಗಳಿಗೆ ಎಡೆ ಇಲ್ಲ ಇಲ್ಲಿ ಮಾನವ ಸ್ವಭಾವಸಹಜವಾದ ಆಶೆ ಆಕಾಂಕ್ಷೆ, ಭಯ, ದಿಗಿ, ಕೋಪ ಕಾತರ್ಯ, ದಾಕ್ಷಿಣ್ಯ ಔದಾರ್ಯ ಗಾಂಭೀರ್ಯ ನಿಗಳಿಗೆ ತುಂಬ ಅವಕಾಶ ಕಲ್ಪಿಸಲಾಗಿದೆ. ಇಲ್ಲಿ ಬರುವ ಸ್ತ್ರೀಪಾತ್ರದಲ್ಲಿಯೂ ಮಾನವೀಯತೆ ತುಂಬಿ ತುಳುಕುತ್ತಿದೆ ಇಲ್ಲಿ ಬರುವ ಕಥಾವಸ್ತು ಪುರಾಣ ಪ್ರಸಿದ್ಧವಾಗಿರದೆ ಇತಿಹಾಸವನ್ನು ಹಿನ್ನೆಲೆಯಾಗಿಟ್ಟುಕೊಂಡು ರಚಿತವಾದುದಾಗಿದೆ. 'ನಾಟಕಂ ಖ್ಯಾತವೃತ್ತಂ ಸ್ಯಾತ್' ಎಂಬ ನಿಯಮವನ್ನು ಪಾಲಿಸದಿದ್ದುದಕ್ಕಾಗಿಯೋ ಏನೋ, ಕವಿಯು 'ಪುರಾಣಮಿತ್ಯೇವ ನ ಸಾಧು ಸರ್ವಂ ನ ಚಾಪಿ ಕಾವ್ಯಂ ನವಮಿತ್ಯ ವದ್ಯಂ' ಎಂದು ಕೇಳಿಗನೇಕು ಕಥಾವಸ್ತು ಚಿತ್ಯಪಾತರೂ ಆದರ ಬೆಳವಣಿಗೆಯಲ್ಲಿ ಕವಿಯು ತೋರಿಸಿರುವ ಜಾಣ್ಮೆ ಅಗಾಧವಾದುದು. ಕಥೆಯು ಹಿನ್ನೆಲೆ ಹೀಗಿದೆ:

ವೈದರ್ಭವಂಶದ ಕೊನೆಯ ಅರಸನಾದ ಬೃಹದ್ರಥನು ವಿಷಯಾಸಕ್ತನಾಗಿ, ಪ್ರಜಾಪಾಲನೆಯ ಕಾರ್ಯವನ್ನು ದಕ್ಷತೆಯಿಂದ ನಿರ್ವಹಿಸದಿದ್ದಾಗ, ಅವನ ಸೇನಾಪತಿಯಾದ ಪುಷ್ಯಮಿತ್ರನು ಅವನನ್ನು

ಕೊಂಡು ಶುಂಗವಂಶದ ಪ್ರಶ್ನಾಪಕನಾಗಿ ತಾನೇ ರಾಜ್ಯಭಾರವನ್ನು ಮಾಡತೊಡಗಿದನು; ಮತ್ತು ತನ್ನ ಮಗನಾದ ಅಗ್ನಿಮಿತ್ರನನ್ನು ವಿದಿಶಾನಗರದ ಉಪರಸನನ್ನಾಗಿ ನೇಮಿಸಿದನು. ಬೃಹದ್ರಥನ ಮರಣಾನಂತರ, ಅವನ ಮಂತ್ರಿಯಾದ ವೈಶ್ಯಸಚಿವನು, ಭಗ್ನಮನೋರಥನಾಗಿ ಯಾರಿಗೂ ತಿಳಿಯದಂತೆ, ತನ್ನ ಭಾವ ಮೈದುನನೂ ವಿದರ್ಭದೇಶದ ಅರಸನೂ ಆದ ಯಜ್ಞಸೇನನ ಬಳಿಗೆ ಹೋಗುತ್ತಿರುವಾಗ ದಾರಿಯಲ್ಲಿ ಅಗ್ನಿಮಿತ್ರನ ಸೇನೆಯಿಂದ ಬಂಧಿಸಲ್ಪಟ್ಟು ಕಾರಾಗೃಹವಾಸವನ್ನು ಅನುಭವಿಸುವನು. ಇತ್ತ ಯಜ್ಞಸೇನನ ದಾಯಾದಿಯಾದ ಮಾಧವಸೇನನು ತನ್ನ ತಂಗಿಯಾದ ಮಾಲವಿಕೆಯನ್ನು ಅಗ್ನಿಮಿತ್ರನಿಗೆ ಮದುವೆಮಾಡಿಕೊಡುವುದಾಗಿ ವಿದಿಶಾನಗರಕ್ಕೆ ದೂತನನ್ನು ಕಳುಹಿಸಿದನು. ಅಗ್ನಿಮಿತ್ರನು ಕೂಡ ದೂತನನ್ನು ಕಳುಹಿಸಿ ಮದುವೆಗೆ ತನ್ನ ಒಪ್ಪಿಗೆಯನ್ನು ತಿಳುಹಿಸಿದನು. ಮಾಧವಸೇನನು ಮಾಲವಿಕೆಯನ್ನು ಕರೆದುಕೊಂಡು ವಿದಿಶಾನಗರಕ್ಕೆ ಹೋಗುವಾಗ, ದಾರಿಯಲ್ಲಿ ತನ್ನ ದಾಯಾದಿಯಾದ ಯಜ್ಞಸೇನನಿಂದ ಬಂಧಿಸಲ್ಪಟ್ಟು ಕಾರಾಗೃಹವನ್ನು ಅನುಭವಿಸುವನು. ಈ ವಾರ್ತೆ ಕೇಳಿ ಕ್ರೋಧಾವಿಷ್ಟನಾದ ಅಗ್ನಿಮಿತ್ರನು, ಮಾಧವಸೇನ ಅವನ ಕುಟುಂಬ ಮತ್ತು ಮಾಲವಿಕೆಯನ್ನು ಸೆರೆಯಿಂದ ಬಿಡಬೇಕೆಂದು ಯಜ್ಞಸೇನನಿಗೆ ಪತ್ರ ಬರೆದು ದೂತನನ್ನು ಕಳುಹಿಸಿದನು. ಯಜ್ಞಸೇನನಾದರೂ ಅಗ್ನಿಮಿತ್ರನಿಗೆ, ತನ್ನ ಭಾವ ಮೈದುನನಾದ ಮೌರ್ಯ ಸಚಿವನನ್ನು ಸೆರೆಯಿಂದ ಬಿಟ್ಟಲ್ಲಿ ತಾನೂ ಮಾಧವಸೇನ ಮತ್ತು ಅವನ ಕುಟುಂಬವನ್ನು ಸೆರೆಯಿಂದ ಬಿಡುವುದಾಗಿಯೂ, ಗ್ರಹಣವಿಚ್ಛಲದಲ್ಲಿ ಮಾಲವಿಕೆ ತಪ್ಪಿಸಿಕೊಂಡಿದ್ದು ಅವಳನ್ನು ಹುಡುಕುವುದಾಗಿಯೂ ಉತ್ತರ ಬರೆದು ತಿಳಿಸಿದನು. ಯಜ್ಞಸೇನನ ಈ ಕಾರ್ಯವಿನಿಮಯದ ವ್ಯವಹಾರದಿಂದ ಕುಪಿತನಾದ ಅಗ್ನಿಮಿತ್ರನು ತನ್ನ ಭಾವ ಮೈದುನನೂ ನರ್ಮದಾತೀರದ ಅಂತಪಾಲದುರ್ಗದ ಒಡೆಯನೂ ಆದ ವೀರಸೇನನಿಗೆ ಯಜ್ಞಸೇನನ ಮೇಲೆ ದಂಡೆತ್ತಿ ಹೋಗಲು ಆಜ್ಞೆಕೊಡುವನು. ಇತ್ತ ಮಾಧವಸೇನನು ಸೆರೆ ಬಿಡಲು ಅವನ ಮಂತ್ರಿಯಾದ ಸುಮತಿ ತನ್ನ ತಂಗಿ ಕೌಶಿಕಿಯನ್ನೂ ತನ್ನ ರಾಜನ ತಂಗಿ ಮಾಲವಿಕೆಯನ್ನೂ ಕರೆದುಕೊಂಡು ತೊರಟು ಒಂದು ವರ್ತಕರ ಗುಂಪನ್ನು ಸೇರಿ ವಿದಿಶಾನಗರಕ್ಕೆ ಹೋಗುತ್ತಿರುವಾಗ, ದೈವಯೋಗದಿಂದ ಇವರೆಲ್ಲಾ ಒಂದು ಕಾಡುಕಳ್ಳರ ಪಡೆಗೆ ಸಿಕ್ಕಿ, ಸುಮತಿ ಅವರೊಡನೆ ಹೋರಾಡುತ್ತ ಮೃತನಾಗುವನು. ಈ ವಿಪ್ಲವದಲ್ಲಿ ಕೌಶಿಕಿಯು ಸಂನ್ಯಾಸಿನಿಯ ವೇಷದಿಂದ ವಿದಿಶಾನಗರವನ್ನು ತಲುಪಿ ಅಗ್ನಿಮಿತ್ರನ ಪಟ್ಟವಹಿಷಿಯಾದ ಧಾರಿಣಿಯ ಆಶ್ರಯವನ್ನು ಪಡೆದಳು. ಇತ್ತ ಮಾಲವಿಕೆಯನ್ನು ವೀರಸೇನನು ಕಳ್ಳರಿಂದ ಬಿಡಿಸಿಕೊಂಡು ಧಾರಿಣಿಯಲ್ಲಿಗೇ ಕಾದುಬಿಟ್ಟನು. ಕೌಶಿಕಿ ಇದನ್ನು ಕಾಣದು ಸುಮ್ಮನಿದ್ದಳು. ಏಕೆಂದರೆ ಒಂದು ಸಿದ್ಧಾದೇಶದ ಪ್ರಕಾರ ಮಾಲವಿಕೆ ಒಂದು ವರ್ಷ ಸೇವಕಳಾಗಿದ್ದು ಅನಂತರ ಅನುರೂಪನಾದ ವರನನ್ನು ಪಡೆಯಬೇಕಾಗಿತ್ತು. ಗುಣೈಕಪಕ್ಷಪಾತಿನಿಯಾದ ಧಾರಿಣಿಯು ಈ ಕೆಲಸವನ್ನು ತಾನಾಗಿಯೇ ಒಪ್ಪಿಸಿ

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೫೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಣಿಯು ಮಾಲವಿಕೆಗೆ ನೃತ್ಯವನ್ನು ಕಲಿಸಿಕೊಡಲು ತನ್ನ ಗುರುವಾದ ಗಣದಾಸನನ್ನು ನೇಮಿಸಿದಳು.

ನಾಟಕದ ಕಥಾಸಾರಾಂಶವು ಹೀಗಿದೆ: ಶುಂಗದಂಶದ ಅರಸನಾದ ಅಗ್ನಿಮಿತ್ರನು ವಿದಿಶಾ ಪಟ್ಟಣದಲ್ಲಿ ರಾಜ್ಯವಾಳುತ್ತಿದ್ದನು. ಅವನಿಗೆ ಧಾರಿಣೀ ಇರಾವತೀ ಎಂಬ ಹೆಂಡತಿಯರಿದ್ದರು; ಅವರಲ್ಲಿ ಧಾರಿಣಿಯೇ ಮಹಾರಾಣಿ. ಒಂದು ದಿನ ಅಗ್ನಿಮಿತ್ರನು ತನ್ನ ಅಂತಃಪುರಸ್ತ್ರೀಯರ ಚಿತ್ರವೊಂದನ್ನು ನೋಡಲು ಅದರಲ್ಲಿ ಮಾಲವಿಕೆಯನ್ನು ಕಂಡು ಅವಳ ರೂಪಿಂದ ಮುಗ್ಧನಾಗುತ್ತಾನೆ.

ರಾಜನು ತನ್ನ ಮನೋರಥವನ್ನು ಮಿತ್ರನಾದ ಗೌತಮನಿಗೆ ತಿಳುಹಿಸಲು, ಅವನು ರಾಜನು ಮಾಲವಿಕೆಯನ್ನು ಕಣ್ಣಾರೆ ನೋಡುವಂತೆ ಒಂದು ತಂತ್ರವನ್ನು ಯೋಚಿಸಿ, ಅಸ್ಥಾನದ ನಾಟ್ಯಾಚಾರ್ಯರಾದ ಗಣದಾಸ-ಹರದತ್ತರಿಗೆ ತಮ್ಮ ತಮ್ಮ ಕೌಶಲ ಸಾಮರ್ಥ್ಯಗಳಲ್ಲಿ ಜಗಳ ಹುಟ್ಟುವಂತೆ ಮಾಡಿದನು. ಅದು ರಾಜನ ಕಿವಿಗೆ ಬೀಳಲು ಅವನು ಅಂತಃಪುರದಲ್ಲಿ ಕೌಶಿಕೆ ಎಂಬ ಪರಿವ್ರಾಜಿಕೆಗೆ ಅದನ್ನು ತೀರ್ಮಾನಕ್ಕಾಗಿ ಒಪ್ಪಿಸಿದನು. ಆಕೆ ಆಚಾರ್ಯರಿಬ್ಬರೂ ತಮ್ಮ ತಮ್ಮ ಶಿಷ್ಯೆಯರ ಅಭಿನಯವನ್ನು ಪ್ರದರ್ಶಿಸುವರೆ ಆಗ ಅವರು ಯೋಗ್ಯತೆಯನ್ನು ಗೊತ್ತುಮಾಡಬಹುದೆಂದಳು. ಅದರಂತೆ ಮಾಲವಿಕೆಯ ನೃತ್ಯನಾಯಿತು ರಾಜನ ಕಣ್ಣು ದಣಿಯಿತು ಅವನ ಮನಸ್ಸು ಮಾಲವಿಕೆಗಾಗಿ ಹಾತೊರೆಯಿತು ಇದನ್ನರಿತ ಗೌತಮನು ಅವರ ಸಮಾಗಮಕ್ಕಾಗಿ ಚಿಂತಿಸಿ ಬಕುಳಾವಳಿಕೆಯನ್ನು ಒಳಸಾಕಿಕೊಂಡ, ಧಾರಿಣಿಯು ಉದ್ಯಾನವನಕ್ಕೆ ಬೀಳುವಂತೆ ಮಾಡಿದನು. ಈ ಸಮಯದಲ್ಲಿ ಹೂ ಬಿಡದೆ ಇದ್ದ ರಾಜೋದ್ಯಾನದ ಅಶೋಕವೃಕ್ಷಕ್ಕೆ ದೋಹದಮಾಡಿ ಹೂ ಬಿಡಿಸಬೇಕಾಗಿತ್ತು. ಗುಣೈಕಪಕ್ಷಪಾತಿನಿಯಾದ ಧಾರಿಣಿಯು ಈ ಕೆಲಸವನ್ನು ತಾನಾಗಿಯೇ ಒಪ್ಪಿಸಿ

ದಳು. ಅವಳು ಈ ಕೆಲಸಕ್ಕಾಗಿ ಉದ್ಯಾನವನಕ್ಕೆ ಬಂದಿರಲು, ಅವಳ ಹೆಜ್ಜೆಗೆ ಅಲಂಕಾರ ಮಾಡುತ್ತ ಬಳುಳಾವಳಿಕೆ ಅವಳ ಪ್ರಣಯವನ್ನು ತಿಳಿದು, ರಾಜನ ಪ್ರಣಯವನ್ನೂ ಅವಳಿಗೆ ತಿಳಿಸಿದಳು. ಅಷ್ಟರಲ್ಲಿ ರಾಜನು ಅಲ್ಲಿಗೆ ಬಂದು ಮಾಲವಿಕೆಯೊಡನೆ ಉಪಚಾರದ ಮಾತುಗಳನ್ನಾಡುತ್ತಿರುವಾಗ, ಆ ಉದ್ಯಾನಕ್ಕೆ ಉಯ್ಯಾಲೆಯ ಆಟಕ್ಕೆಂದು ಬಂದು ಇದೆಲ್ಲವನ್ನೂ ನೋಡುತ್ತಿದ್ದ ಇರಾವತಿ ಅಲ್ಲಿಗೆ ಬರುವಳು ಎಲ್ಲವೂ ವಿರಸವಾಗುವುದು. ಇರಾವತಿಯ ಕೋಪದಿಂದಾಗಿ ರಾಣಿಯು ಅಪ್ಸಣೆಯಂತೆ ಮಾಳವಿಕೆಗೂ ಅವಳ ಸಖಿಗೂ ಬಂಧನವಾಗುವುದು. ಗೌತಮನು ಇದರಿಂದ ನಿರಾಶನಾಗದೆ ರಾಜನೈದ್ಯನಾದ ಧ್ರುವಸಿದ್ಧಿಯನ್ನು ಒಳಹಾತಿಕೊಂಡು, ಶಠನಿಗೆ ಹಾವು ಕಚ್ಚಿದಂತೆ ಹುಂಟುತ್ತ ಪರಳುತ್ತ ಬಂದು ಮಹಾರಾಣಿಗೆ ಹೇಳಿಕೊಂಡನು. ಆಕೆ ಅವನನ್ನು ಧ್ರುವಸಿದ್ಧಿಯ ಕತ್ತಿರ ಚಿಕಿತ್ಸೆಗೆ ಕಳುಹಿಸಲು, ಅವನು ಉದಕುಂಭ ವಿಧಾನದಿಂದ ವಿಷವಿಳಿಸುವುದಕ್ಕೆ ನಾಗಮುದ್ರಿಕೆ ಬೇಕೆಂದನು. ಇತ್ತ ಇವರ ಪಿಸುರಿಗೆ ಪೀಠದ ಮರ್ದ್ದೊಬ್ಬನು ರಾಜನನ್ನು ಮಂತ್ರಿ ಅಗತ್ಯವಾಗಿ ನೋಡಬೇಕಾಗಿತ್ತೆಂದು ಹೇಳಿ, ಅವನನ್ನು ಕರೆದುಕೊಂಡು ಹೋದನು. ಧಾರಿಣಿಯಿಂದ ಪಡೆದ ನಾಗಮುದ್ರಿಕೆಯ ಸಹಾಯದಿಂದ ವಿದೂಷಕನು (ಗೌತಮನು) ಮಾಲವಿಕೆಯನ್ನು ಬಿಡಿಸಿ, ರಾಜನಿಗೂ ಅವಳಿಗೂ ಶರಸಲ್ಲಾಪಗಳಿಗೆ ಅವಕಾಶ ಮಾಡಿಕೊಟ್ಟು, ತಾನು ಕೋಡಿಯ ಬಾಗಿಲಲ್ಲಿ ಕಾವಲು ಕೂತುಕೊಂಡಿದ್ದು, ಹಾಗೇ ನಿದ್ದೆ ಹೋಗಿ ಬಿಡುವನು. ಇದನ್ನು ನೋಡಿದ ಒಬ್ಬ ಪರಿಚಾರಿಕೆ ಈ ಸುದ್ದಿಯನ್ನು ಇರಾವತಿಗೆ ತಿಳಿಸಲು, ಅವಳು ಆಕ್ಷಣಿಗೆ ಬಂದು ತನ್ನ ಗಂಡನ ಪ್ರಣಯಚರಿತ್ರೆಯನ್ನು ಕಣ್ಣಾರೆ ನೋಡುವಳು. ರಾಜನಿಗೆ ಏನು ಮಾಡಬೇಕೆಂದು ತೋರದೆ ಇರುವಾಗ, ಅವನ ಮಗಳು ವಸುಲಕ್ಷ್ಮಿ ಕೋತಿಗೆ ಹೆದರಿಕೊಂಡಿದೆಯೆಂಬ ವರ್ತಮಾನ ಬರುವುದು. ರಾಜನು ಈ ನೆವ ಸಿಕ್ಕಿದ್ದೇ ಸಾಕೆಂದು ಹೊರಟುಹೋಗುವನು.

ಇತ್ತ ಆಶೋಕವು ಐದು ದಿನಗಳೊಳಗಾಗಿ ಪುಷ್ಪಿತವಾದ ಸುದ್ದಿ ಬರುವುದು. ಇದರಿಂದ ಮಾಲವಿಕೆಗೆ ತುಸು ಧೈರ್ಯಬಂದು, ಅವಳು ಧಾರಿಣಿಯು ತನ್ನ ಅಭಿಲಾಷೆಯನ್ನು ಪೂರೈಸಗೊಳಿಸಬಹುದೆಂದು ಬಗೆದಳು. ಇತ್ತರಲ್ಲಿ ವೀರಸೇನನು ವಿದರ್ಭದೇಶದ ಮೇಲೆ ದಂಡೆತ್ತಿ ಹೋಗಿ ಯಜ್ಞಸೇನನನ್ನು ಕೊಲಿಸಿ, ಅವನ ದಾಯಾದಿಯಾದ ಮಾಧವಸೇನನನ್ನು ಸೆರೆಯಿಂದ ಬಿಡಿಸಿದ ವೃತ್ತಾಂತವು ಬರುವುದು. ಈ ವಿಜಯವೃತ್ತಾಂತದೊಡನೆ ವೀರಸೇನನು ಇಬ್ಬರು ಹುಡುಗಿಯರು. ತನ್ನ ಉಪಚಾರವಾಗಿ ಕಳುಹಿಸಿದ್ದನು. ಅವರು ಮಾಳವಿಕೆಯನ್ನು ನೋಡಿ ತಮ್ಮ ರಾಜಪುತ್ರಿಯೆಂದು ಗುರುತಿಸಿದರು. ರಾಜನು ಮಾಲವಿಕೆಯ ವೃತ್ತಾಂತವನ್ನರಿತು ಆಶ್ಚರ್ಯಗೊಂಡನು. ಈ ಸಮಯದಲ್ಲಿಯೆ ಯಜ್ಞಾಶ್ವವನ್ನು ಹಿಂಬಾಲಿಸುತ್ತಿದ್ದ ರಾಜನ ಮಗನಾದ ವಸುಮಿತ್ರನು ಯವನರೊಡನೆ ಹೋರಾಡಿ ಜಯಶೀಲನಾದ ವರ್ತಮಾನ ಬರುವುದು. ಧಾರಿಣಿಗೆ ಸಂತೋಷವಾಗಿ ಅವಳು ಮಾಲವಿಕೆಯನ್ನು ರಾಜನಿಗೆ ಅರ್ಪಿಸುವಳು. ಹೀಗೆ ಇದು ರಾಜನ ಅಂತಃಪುರ ಮತ್ತು ಪ್ರಮದವನದ ಶೃಂಗಾರಪ್ರಪಂಚದಲ್ಲಿ ನಡೆದ ಪ್ರಣಯ ಕಥೆ.

ಜಿಟಿ-ಜಿಟಿ ಮಳೆ

ಶ್ರೀ. ಎಸ್. ಎಸ್. ಬಸುವಪಟ್ಟಿದ, ಎಮ್. ಎ. ಗುಳೇದಗುಡ್ಡ

ಜಿಟಿ ಜಿಟಿ ಮಳೆಯು ತಟ್ಟುತಟ ಹನಿಯು ಬಿದ್ದೇ ಬೀಳುತಿದೆ —
ಮೇಲಿನ ಮುಗಿಲು ರಾತ್ರಿ ಹಗಲು ಸೋದೇ ಸೋರುತಿದೆ ಗಿ

ಮನೆಮನೆ ಸೋರಿ ಊರಿನ ಕೇರಿ
ನೀರೊಳು ನಿಂದಿಹುದು—; ಊರಂತೂರು
ನೀರೇ ನೀರು; ದುರ್ಗತಿ ಬಂದಿಹುದು! ೨

ಕೂಡಲು ಇಲ್ಲ ನಿಲ್ಲಲು ಇಲ್ಲ
ಒಂದಿಷ್ಟೂ ಜಾಗೆ—; ಮಳೆಯೊಳು ಇಂತು,
ಬಾಳುವುದೆಂತು! ದೇವನ ಶ್ಯಪೆ ಹೀಗೆ! ೩

ಮಾಡವ ನೋಡಿ ಒಲೆಯನು ಹೂಡಿ
ಕೂಳನು ಕುದಿಸುವರು; ಮಳೆಮಳೆಯೆನ್ನುತ
ಕೂಳನು ತಿನ್ನುತ ದಿನವನು ನೂಕುವರು. ೪

ಮನೆಯಲಿ ಜಾಗೆ ಇರದಂತಾಗೆ,
ಬೇಸತ್ತಿದೆ ಜನವು; ನೀಯುವ ಜನಕೆ
ನೋಯುವ ಮನಕೆ ಬೇಸರವೀ ಹನಿಯು.

ಬಡವರಿಗೆಲ್ಲ ದುಡಿಮೆಯೆ ಇಲ್ಲ
ಹೇಳುವುದೇನನ್ನು; ಅವರಾ ಬಾಳು
ಗೋಳೇ ಗೋಳು ಹೇದಿಪುದೆಂತಿನ್ನು! ೫

ರೈತರು ಕೂಡ ಈ ಮಳೆ ಬೇಡ;
ಅದಾರ ಸುಖಕಿಹುದು! ಇದಾರ ಋತುಸೊ!
ದೈವದ ಮುನಿಸೊ! ಹೀಗೇಕಾಗಿಹುದು!!

ಹಕ್ಕಿ ನಕ್ಕಿತು; ಸೊಕ್ಕು ಅಡಗಿತು!

(ಐತಿಹಾಸಿಕ ಲಘುಕಥೆ)

ಶ್ರೀಮತಿ 'ಕಲಾ' ಮಲ್ಲೇಶ್ವರಂ, ಬೆಂಗಳೂರು

ವೀರಪತ್ನಿಯು ಹೃದಯವನ್ನೂ ಅಳುಕಿಸಿ ಅಳಲು ಹಚ್ಚುವಂತಹ ದಾಂಪತ್ಯಸ್ನೇಹವನ್ನು ತೋಡಕುಗಳಿರುವುವು. ಶಿವಪ್ಪನಾಯಕನ ಅಗಲಿಕೆಯ ದುಃಖದಿಂದ ಸೆಲಕ್ಕೆ ಬಿದ್ದ ಗೌರಿ, ಗಂಡನ ಕೊನೆಗಾಲದ ಒಂದು ಸಂದೇಶವಚನದಿಂದ, ಚೇತರಿಸಿ ಮೇಲಕ್ಕೆದ್ದಳು.

"ಇಲ್ಲಾ ನನ್ನೊಡೆಯಾ! ಖಂಡಿತ ಸಾಧ್ಯವಾಗುವ ಮಾತಲ್ಲ ಅದು"

"ಹಾಗೆಂದರೇನು ದೇವಯ್ಯಾ? ಅಂತಹ ಕಷ್ಟವಾದ ಕೆಲಸವೇ ಅದು? ನಾನು ಬರುವೆ ನಡಿ!"

ಶಿವಪ್ಪನಾಯಕ ಎದ್ದು ದೇವಯ್ಯನ ಹಿಂದೆ ನಡೆದ. ಗಜಶಾಲೆಯ ಪೂರ್ವಕ್ಕೆ ವಿಸ್ತಾರವಾದ ವೈದಾನದಲ್ಲಿ. ಅದೇ ತಾನೆ ಹಿಡಿದುತಂದ ಮದ್ದಾನೆಯನ್ನು ಪಳಗಿಸುವ ಕಾರ್ಯಕ್ಕೆ ತೊಡಗಿದ್ದರು. ಬಿಡಿಸಲಾರದ ಕಾಡಿನಲ್ಲಿ ಸುಖವಾಗಿ ತಿರುಗಿಕೊಂಡಿದ್ದ ಆ ಕೊಬ್ಬಿದ ಗಜವನ್ನು ತರಬೇತುಮಾಡಲು, ಎಂಟು ಹತ್ತು ಪಳಗಿದ ಆನೆಗಳನ್ನು ಬಿಟ್ಟು, ಹತ್ತು ಹನ್ನೆರೆಡು ಮಂದಿ ನುರಿತ ಮಾವುತರು ಸೇರಿದರೂ ಸಾಧ್ಯವಾಗದೆ ಹೋಗಿತ್ತು. ಗಜಶಾಲೆಯ ಮುಖ್ಯಾಧಿಕಾರಿ ಶಿವಪ್ಪನಿಗೆ ಇವರ ಸಾಹಸಗಾರವನ್ನ ಕಂಡ ನಗೆ ಬಂತು. ಇಪ್ಪತ್ತೈದು ಡಿ ಎತ್ತರವಿದ್ದು ಸೊಂಡಿಲೆತ್ತಿ ಘೀಳಿಡುತ್ತಿದ್ದ—ಕಣ್ಣಿ ಪವಾಡದಂತೆ ನಿಂತಿದ್ದ—ಆ ಆನೆಯನ್ನು ಕಂಡಾಗ, ಶಿವಪ್ಪನಿಗೆ ಭಯಕ್ಕೆ ಬದಲಾಗಿ ಪ್ರೀತಿಯೇ ಉಂಟಾಯಿತು. ಶಿವಪ್ಪ ಹತ್ತಿರ ಬಂದು ನಿಂತ. ಅದರ ಸೊಂಡಿಲನ್ನು ಒಂದುಸಾರಿ ನೇವರಿಸಿದ. ದಾಡೆಯ ಹತ್ತಿರ ಕಬ್ಬಿಣದ ಇಚ್ಚ, ಹುಂಗಾರಿಗೆ ಹಾಕಿದ್ದ ಸರಪಳಿಯನ್ನು ಬಿಚ್ಚಿದ. ಆನೆ ಘೀಳಿಡುವುದನ್ನು ನಿಲ್ಲಿಸಿತು; ಶಿವಪ್ಪ ಕೊಟ್ಟ ಕಬ್ಬಿನ ಜಲ್ಲೆಯನ್ನು ಒಂದೊಂದಾಗಿ ತಿನ್ನಹತ್ತಿತು. ಶಿವಪ್ಪ ಅದನ್ನೇ ನೋಡ್ತಿದ್ದ. ಹಿಂದಿನಿಂದ ಬೆನ್ನ ಮೇಲೆ ಯಾರೋ ಕೈ ಇಟ್ಟಂತಾಯಿತು. ಬೆಚ್ಚಿ ಹಿಂದಿರುಗಿ ನೋಡಿದ. "ಮದಗಜಗಳನ್ನು ಪಳಗಿಸುವವರಿಗೆ, ಬೆನ್ನು ತಟ್ಟುವರೆ ಭಯವೇ?" ಪರಿಹಾಸದಿಂದ ಕೇಳಿದ ಹಿಂದೆ ನಿಂತಿದ್ದಾತ.

"ಪ್ರಭುಗಳು! ಓಹ್!" ಏನೂ ಮಾತನಾಡಲು ತೋರದೆ ತೊದಲಿದ, ಶಿವಪ್ಪ.

"ಗಜದಳಕ್ಕೆ ಇನ್ನು ಮೇಲಿಂದ ನೀನೇ ದಳಪತಿಯಾಗು ಶಿವಪ್ಪ. ಗಜಶಾಸ್ತ್ರದ ಅರಿವಿರುವವರು ವಿರಳ" ನಸುನಗುತ್ತಾ ಅಪ್ಪಣೆ ಕೊಡಿಸಿದ ಇಮ್ಮಡಿ ದೇವರಾಯ, "ಗಜಬೇಂಟೆಗಾರ" ಪ್ರೌಢದೇವರಾಯ; ತಣ್ಣೀರಿನಲ್ಲಿ ಕ್ಷಣ ಮುಳುಗಿದ್ದವನಂತೆ ಉಸಿರು ಹಿಡಿದುಕೊಳ್ಳುತ್ತಾ ಗೌರವವನ್ನು ಸಲ್ಲಿಸಿದ ಶಿವಪ್ಪ.

× × × ×

ಶಿವಪ್ಪನಾಯಕನಿಗೆ ಗಿರಿಜೆಯನ್ನು ಕಂಡರೆ ಅದಕ್ಕೇ ಅಸ್ಪೋಟವು ಅಕ್ಕರೆ. ತನ್ನ ಅಭ್ಯುದಯಕ್ಕೆ ಕಾರಣಳಾದ ಅವಳನ್ನೇ ದಳ್ಳುಲ್ಲಾ ಮುಂದಾಳುತನವನ್ನು ವಹಿಸುವಂತೆ ಮಾಡಬೇಕೆಂಬುದೇ ಅವನ ಹಿರಿಯಾಸೆ. ಸದಾ ಅದು ಮುಂದಿಯೇ ಇರುತ್ತಿದ್ದ. ಗಿರಿಜೆ ಸಹ ಅಷ್ಟೇ ಪ್ರೇಮದಿಂದ ಅನುಸರಿಸುತ್ತಿದ್ದಳು. ಸ್ವತಃ ಶಿಕ್ಷಣದಲ್ಲಿ ಗಿರಿಜೆಯನ್ನು ತುಂಗಭದ್ರೆಯಲ್ಲಿ ವಿಹಾರಿಸಿ, ಪಂಪಾಪತಿಯ ದೇವಸ್ಥಾನಕ್ಕೆ ಒಂದು ಪ್ರದಕ್ಷಿಣೆ ಹಾಕಿಸಿ, ಶಿವಪ್ಪ ಅವಳನ್ನು ಕಾಡಿಗೆ ಕರೆದೊಯ್ಯುತ್ತಿದ್ದ. ಹೊಸಬೇಟೆಯ ಹೆತ್ತರದ ಕಾಡಿಗೋ, ಇಲ್ಲಾ ಹದಿನೈದು ಹತ್ತರದ ವನಕ್ಕೋ ಕರೆದೊಯ್ಯುತ್ತಿದ್ದ. ಗಿರಿಜೆಗೆ ಇವೆಲ್ಲಾ ಒಹು ಪ್ರೀತಿ. ಕಾಡಿನಲ್ಲಿ ತಲೆಯ ವುದೆಂದರೆ ತವಳಿಗೆ ಹಬ್ಬ

ಅಂದು ಕಾರ್ತಿಕ ಸೋಮವಾರ. ಪಂಪಾಪತಿಯ ದೇವಸ್ಥಾನದಲ್ಲಿ ಗಲಾಟೆಯೋ ಗಲಾಟೆ. ಶಿವಪ್ಪ ಆ ದಿನ ಮುಂಜಿತವಾಗಿಯೇ ಮನೆ ಬಿಟ್ಟಿದ್ದ. ಬಂದವನೇ ನೇರವಾಗಿ ಗಜಶಾಲೆಯ ಬಳಿಗೆ ಹೋಗಿ ಗಿರಿಜೆಯನ್ನೇರಿ ಕೊರಟು; ನಟ್ಟಿಗೆ ಪಂಪಾ ಸರೋವರದ ಬಳಿ ಸಾರಿದ ಆನೆಯನ್ನು ನೀರಿಗಿಳಿಸಿದ ಗಿರಿಜೆಗೆ ಇವೆಲ್ಲಾ ತುಂಬಾ ಕೊಡದು "ಮೊನ್ನೆ ಮೊನ್ನೆ ವೈ ತೊಳೆವಾಗಿದೆ, ಮತ್ತಿನ್ನೇಕೆ ಸ್ನಾನ ಈಗ? ಎಂದುಕೊಂಡಿತೋ ಏನೋ; ಏನಾದರೂ ನೀರನ್ನು ಮುರಿದುಕೊಳ್ಳಲಿಲ್ಲ, ಶಿವಪ್ಪನಿಗೆ ದೇಗಿತು. ಸಾಕಿ ಸಲಹಿದ ತಾಯೇ ಹೀಗೆ ಮಾಡುತ್ತಲ್ಲಾ ಎಂದುಕೊಂಡು, ಬಿಟ್ಟು ನಲ್ಲಿಅಂಕುಶವನ್ನು ಶಿವಪ್ಪ ಹಿಂಭಾಗಕ್ಕೆ ತಿವಿದ. ತಿಕ್ಷೆಯನ್ನು ತಾಳಲಾರದೆ ನೀರನ್ನು ಸುರಿದು

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯು ಮೂಲ! ಪ್ರಾಮಾಣಿಕ ವ್ಯವಹಾರ

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಕೊಂಡಿತು. ಪಂಪಾಪತಿಯು ದೇವಸ್ಥಾನದ ಮತ್ತ ಸುತ್ತಿಬರಲು ಹೊರಟಿತು, ಶಿವಪ್ಪ ನಾಯಕನಿಗೆ ಅಂದು ಮನಸ್ಸಿಗೇನೋ ನೆಮ್ಮದಿ ಇರಲಿಲ್ಲ. ತಲೆಬುಡವಿಲ್ಲದ ವಿಚಿತ್ರ ಆಲೋಚನೆಗಳು ಬರಹತ್ತಿದುವು. ದೇವಸ್ಥಾನದ ಪರಿಸರಾತ ಮುಗಿಸಿದೇಕೆ, ಅನೆಯನ್ನು ಬಂಡೀವುರದ ಅರಣ್ಯದ ಕಡೆ ತಿರುಗಿಸಿತ. ಗಿರಿಜೆ ನಾಡಿಗೆ ಬಂದು ನೆಲಸಿದ ಮೇಲೆ ತನ್ನ ಕಾಡಿಗೆ ಹೋಗುತ್ತಿದ್ದುದು ಅದೇ ಮೊದಲು. ಶಿವಪ್ಪನಿಗೆ ಅದೇಕೋ ಅಂದು ಗಿರಿಜೆಯೊಡನೆ ಕಾಡಿನಲ್ಲಿ ಅಲೆಯಾಡುವ ಮನಸ್ಸು ಆಯಿತು. ಹೊರಟೇಬಿಟ್ಟ. ದಾರಿಯುದ್ದಕ್ಕೂ ಇಲ್ಲಸಲ್ಲದ ವಿಚಾರಗಳನ್ನೇ ಕುರಿತು ಯೋಚಿಸುತ್ತಿತ್ತು ಮನಸ್ಸು. ಕಣ್ಣುಗಳು ಅತ್ತಿತ್ತ ಅಲೆದರೂ, ಮನ ಅದಿಕ್ಕಿಗೆ ಓಡಲಿಲ್ಲ, ಬೇಡಬೇಡವೆಂದರೂ ಅದೇ ವಿಷಯ ಸುಳಿಯುತ್ತಿತ್ತು: "ತಪ್ಪು ತನ್ನದೇ. ಇಲ್ಲಾ ಅವಳದೇ? ಅಬ್ಬಾ! ಅವೆಷ್ಟು ಸೊಕ್ಕು! ಅದೇನು ಹೆಮ್ಮೆ! 'ದೊಡ್ಡವರ ಮನೆ ಹೆಣ್ಣಾಗಳ ಸಹವಾಸ ಕಷ್ಟ' ಎಂದು ಅದಕ್ಕಲ್ಲವೇ ಹೇಳುವುದು! ಪಟ್ಟಮಹಿಷಿಯ ಸೋದರಮಾವನ ಮಗಳು; ಕೇಳಬೇಕೇ? ಗೌರಿಯೇ ತಪ್ಪು ಮಾಡಿದಳೇ? ತಾಲ್ಲಾ ನನ್ನದೇ ತಪ್ಪೇನೇಕವೊ? ನನ್ನ ಕೆಲಸದಲ್ಲಿ ನಾನು ಮನೆಯನ್ನು ಮರೆತಿದ್ದು ನಿಜ; ಅದರೆ.....ಅದಕ್ಕೆ... ಅವಕ್ಕಾಗಿ ಅಷ್ಟೊಂದು ಹಟವೇ? ಇರಲಿ. ನೋಡಿಯೇ ಬಿಡುತ್ತೇನೆ ಆ ಹೆಣ್ಣಿನ ಹೆಮ್ಮೆಯನ್ನು! ಅವೆಷ್ಟು ದಿನ ನಿಲ್ಲುತ್ತೆಂದು! ನನ್ನನ್ನು ಕಂಡರೆ ತವಳಿಗೆ ಲಕ್ಷ್ಯವಿಲ್ಲ ತನಕ್ಕೆ ಈ ಎಲ್ಲಾ ತಿರಸ್ಕಾರ! ನಾನಾಗಿ ಖಂಡಿತ ಅವಳಿಗೆ ಮಣಿಯುವುದಿಲ್ಲ..... ...ಇರಲಾರದು! ನನ್ನದೇ ಹೆಚ್ಚಿನ ತಪ್ಪೆಂದು ಕಾಣುತ್ತದೆ. ನಾಗೇಂದ್ರನ ಹುಟ್ಟಿದ ಹಬ್ಬದ ದಿನ ನಾನು ತುಪ್ಪದ ಕಡುಬನ್ನು ತಿನ್ನದೇ ಎದ್ದುದು ತವಳಿಗೆ ಶುಭಾಶೋವಾಗಿರಬೇಕು! ತಾನೂ ಹೆಚ್ಚಿನ ಬೇಕರವಾಗಲಿ ಎಂದೇ ಈ ದಿನ ಬೆಳಗ್ಗೆ ಉಪಹಾರವನ್ನು ಸಕತಿನ್ನದೇ ಬಂದುದು....." ಅದರೂ 'ತಪ್ಪು ನಿನ್ನದೇ' ಎಂದು ಒಳಮನಸ್ಸು ಸಾರಿ ಸಾರಿ ಹೇಳುತ್ತಿತ್ತು. ಮನಸ್ಸಿನಲ್ಲಿ ತುಮುಲ ಯುದ್ಧ ನಡೆದಿತ್ತು. ಅಷ್ಟು ಹೊತ್ತಿಗಾಗಲೇ ಗಿರಿಜೆ ಅರಣ್ಯವನ್ನು ಸೇರಿ, ತನ್ನ ಪರಿಚಿತ ಜಾದಿಯಲ್ಲಿ ನಡೆದಿದ್ದಳು.

\+ \+ \+ \+

"ನಾನಿಂದು ಹೊರಟಿಹೆನು ಬಲು ದೂರ..... ಬರುವಾಗ ಆಗುತ್ತೀನೆ ಕರದಾರಾ!" || ಪದವನ್ನು ಗುಣುಗುಣುತ್ತಾ ನಿಂತಿದ್ದ ಹತ್ತು ವರ್ಷದ ಕುರುಬರ ಹನುಮ, ತನ್ನ ಇಪ್ಪತ್ತು ಕುರಿಗಳನ್ನು ಮೇಯಲು ಬಿಟ್ಟು, ಮನಸ್ಸಿಗೆ ಬಂದುದನ್ನು ಹಾಡುತ್ತಿದ್ದ. ಇದ್ದಕ್ಕಿದ್ದಂತೆ ಅನೆ ಘೀಳಿಟ್ಟಿದುದು ಕೇಳಿಸಿತು. ಹನುಮ ಕೆದರಿ ತಿರುಗಿ ನೋಡಿದ: ಅನೆಯೊಂದು ಓಡಿ ಓಡಿ ಬರುತ್ತಿತ್ತು. ಅದರ ಮೇಲೊಬ್ಬ ಕರದಾರ ಕೂಗಾಡುತ್ತಾ ಇದ್ದಾನೆ. ಆತ ಅನೆಯನ್ನು ಹಿಡಿಯಲು ಎಷ್ಟು ಪ್ರಯತ್ನಿಸಿದರೂ ಅದು ಹತೋಟಿಯನ್ನು ಮೀರಿದೆ. ಕುರಿ ಹಿಂಡು ದಿಕ್ಕುಪಾಲಾಯಿತು. ಹನುಮ ಹೆದರಿ ತತ್ತರಿದದ್ದರಿಂದ ಅಲದವರದ ಪೊಟರೆಯೊಳಗೆ ನೇರಿಕೊಂಡ. ಮರದಿಂದ ಕತ್ತು ಗಜದಾಡಿ ಆತ ಅನೆಯ ಮೇಲಿಂದ ದೊಪ್ಪನೆ ಕೆಳಗೆ ಬಿದ್ದ. ಆಷ್ಟೊತ್ತಿಗಾಗಲೇ ಈ ಅನೆಯ ಕೂಗಿಗೆ ಮಾನ್ಯರಿ ಕೊಡಲಾರ್ತ ಭಾರೀ ಸಲಗವೊಂದು ನುಗ್ಗಿ ಬಂತು; ನೆಲವ ಮೇಲೆ ಬಿದ್ದವನನ್ನು ಎರಡು ಮೇಲೊಂದು ಬಾರಿ ಕಾಲಿಟ್ಟು ಹೊರಟಿತು. ಸೊಂಡಿಲೆತ್ತಿ ನಿಂತಿದ್ದ ಅವನ ಅನೆಯು ಸೊಂಡಿಲಿಗೆ ಸೊಂಡಿಲು ಹಾಕಿಕೆ ಗಂಡಾ ಭಾರೆಗೆಳ್ಳ ಕಾಡಿಗೆ ಹೋಯಿತು. ಎರಡು ನಿಮಿಷದ ಮೇಲೆ ಎಲ್ಲಾ ನಿಶ್ಶಬ್ದವಾಯಿತು. ಹನುಮ ಮೆಲ್ಲನೆ ಹೊರಗೆ ಬಂದ; ಬಿದ್ದವನನ್ನು ನೋಡಲು ಓಡಿದ. ಆರಮನೆ ಎತ್ತಿಗೆಯನ್ನು ಕಂಡು ಭಯವಾಯಿತು. ಸ್ವಲ್ಪ ದೂರದಲ್ಲಿ ನಿಂತ; ಕೆಳಗೆ ಬಿದ್ದ ಶಿವಪ್ಪ ಎದೆಯ ಮೇಲೆ ಕೈಯಿಟ್ಟು ನರಳುತ್ತಿದ್ದ. ಹನುಮನನ್ನು ಕಂಡೆ! ಹನಿಯೇ ಹತ್ತಿರ ಕರೆದ. ಹನುಮ ಕೋದ; ಶಿವಪ್ಪ ಕಷ್ಟದಿಂದ ಮಾತನಾಡಿದ:

"ಮಗೂ....ನೀನು ನಗರಕ್ಕೆ ಹೋಗಿ ನನಗಾಗಿ.....ನನಗಾಗಿ ಒಂದು ಕೆಲಸ ಮಾಡುತ್ತೀಯಾ? ನೀನೇ ಅದನೂ ಮಾಡುತ್ತೇನೆಯೆಂದು ಮಾತು ಕೊಡುತ್ತೀಯಾ?"

ಹನುಮನಿಗೆ ಯೋಚನೆಗಿಟ್ಟಕೊಂಡಿತು. ಅದೂ ಸಾಯುವವನ ಮುಂದೆ ತನ್ನ ದೊಡ್ಡ ಯೋಚನೆಯೇ? "ಊಂ, ಆಗಿ! ಖಂಡಿತ ಮಾಡುತ್ತೇನೆ!" ಎಂದು ಬಿಟ್ಟ ತನಿಂದು ನುಡಿದ.

"ನೋಡು! ನಗರದಲ್ಲಿ.....ಅರಮನೆಯ...ಹಿಂದಿ....ನ... ಬೀದಿಯಲ್ಲಿ, ದೇವಪ್ಪಾವರ್ಕೆ ಬಲಗಡೆ.....ನಾಲ್ಕನೆಯ ಮನೆ.... ಎರಡುಗಣದ...ಮನೆ! ...ಅಲ್ಲಿಗೆ ಹೋಗಿ.....ಆ...ಮನೆಯ...ತ ಗೌರಾಂಬೆಗೆ...ಒಂದೇ...ಒಂದು...ವಾಕ್ಯ.. ಹೇಳಬೇಕು, ಮತ್ತಾ ರಿಗೂ ಹೇಳಬಾರದು ಗೌರಾಂಬೆಯು ಬಳಿಗೆ ಹೋಗಿ 'ಹಕ್ಕಿನಕ್ಕೆತ್ತು; ಸೊಕ್ಕು ಅಡಗಿತು,' "ಇಷ್ಟು ಹೇಳು ಸಾಕ್....ಮರೆಯಬೇಡ, ...ಮತ್ತಾರಲ್ಲೂ ಹೇಳಬೇಡ.....ತಿಳಿಯಿತ್ತು....ಭಾಷೆ....ಕೊಡು!" ಶಿವಪ್ಪ ಅತಿ ಕಷ್ಟದಿಂದ ನುಡಿದ.

"ಪಂಪಾಪತಿಯಾಣೆಗೂ ಯಾರಲ್ಲೂ ಹೇಳದಿ, ಅಕ್ಕೆಗೆ ಮಾತ್ರ ಹೇಳುತ್ತೇನೆ" ಎಂದು ಭಾಷೆ ಕೊಟ್ಟ ಹನುಮ. ಶಿವಪ್ಪನ ಮುಖದ ಮೇಲೆ ಸಂತಸದ ನಗೆ ಮೂಡಿತು; ತಲೆ ಹೊರಳಿಸಿ ತನ್ನ ಕೊನೆಯುಸಿರನ್ನು ಮುಗಿಸಿದ.

ಹನುಮ ಕಟ್ಟೆಯಕಡೆ ಓಡಿ, ಹತ್ತಿರದಲ್ಲಿದ್ದವರಿಗೆಲ್ಲಾ ಆರ ಮನೆಯ ಸರದಾರ ಬಿದ್ದುದನ್ನು ತಿಳಿಸಿದ, ಜನ ಓಡಿದರು. ಸುದ್ದಿ ಆರಮನೆಗೆ ತಲುಪಿತು. ಆರಮನೆಯ ಭಟರು ಅವನ ಕಳೇಬರವನ್ನು ತೆಗೆದುಕೊಂಡು ಹೊರಟು ಹೋದರು. ಹನುಮ ಅದೇ ರಾತ್ರಿ ತನ್ನ ಹಳ್ಳಿಯನ್ನು ಬಿಟ್ಟು ನಗರಕ್ಕೆ ಹೊರಟ.

ಹನುಮ ನಗರವನ್ನು ಸೇರುವ ಹೊತ್ತಿಗಾಗಲೇ ಮೂರು ದಿನಗಳಾಗಿ ಹೋಗಿತ್ತು. ದೇವಪ್ಪಾನವ ಬಲಗಡೆ ನಾಲ್ಕನೆಯ ಮನೆ ಮುಂದೆ ಮೇನೆಗಳು, ಪಲ್ಲಕ್ಕಿಗಳು, ಅಶ್ವಗಳು ನಿಂತಿದ್ದವು. ಜನಗಳು ಒಳಗಿನಿಂದ ಹೊರಗೆ ಬರುತ್ತಿದ್ದುರು. ಆಗ ತಾನೇ ಬಂದವರು ಒಳಗೆ ಹೋಗುತ್ತಿದ್ದರು. ಹನುಮ ಇದ್ದುದರಲ್ಲಿ ಧೈರ್ಯಮಾಡಿಕೊಂಡು ಅಲ್ಲಿದ್ದ ಕಾವಲುಗಾರನನ್ನು "ಇಲ್ಲಿ ಯಾರು ಇರೋರು?" ಎಂದು ಕೇಳಿದ. "ನಡೆಯೋ ಆಚೆ ಪೋರಾ! ಏನು ಕೆಲ್ಸ ನಿಂಗೆ ಇಲ್ಲಿ? ಮನಿಗೆ ಕಷ್ಟ ಬಂದೈತೆ; ಬಂದ ಇವ ದೊಡ್ಡ ಮನ್ಸ ವಿಚಾರಿಸೋಕ್ಕೆ! ನಡಿ ಹೊರಗ!" ಎಂದು ಕಾವಲುಗಾರ ಗದರಿಸಿಕೊಂಡ.

"ಕಷ್ಟ ಬಂದೈತಾ ನಮ್ಮಪ್ಪಾ! ಏನಾಗೈತೆ?" ಆರಿಯದವನಂತೆ ಕೇಳಿದ ಹನುಮ.

"ದೊಡ್ಡೋರ ಸಮಾಚಾರ ನಿಂಗ್ಯಾಕೋ? ಹಳ್ಳೀ ಹೈದಾ! ಮನೆಯ ಯಜಮಾನ್ರು ತೀರಿಹೋಗವ್ರೆ! ಅದನ್ನು ಕಟ್ಕೊಂಡು ನಿಂಗೇನೋ?" ಕಾವಲುಗಾರ, ತನ್ನ ಗಡುಸಾದ ಉತ್ತರದಲ್ಲಿ ಸುದ್ದಿಯನ್ನೂ ತಿಳುಹಿದ. ಹನುಮನಿಗೆ ಅವಮಾನವಾಯಿತು ಅದೇ ಮನೆಯಂಬುದು ದೃಢವಾಯಿತು. ವಿಸ್ತಾರವಾಗಿದ್ದ ಜಗುಲಿಯಲ್ಲಿ ಮೂಲೆಯಲ್ಲಿದ್ದ ಕಂಭವನ್ನೊರಗಿ ಕುಳಿತ. ಕಾವಲುಗಾರ ಎಷ್ಟು ಹೇಳಿದರೂ ಅಲ್ಲಾಡಲಿಲ್ಲ. ಆ ನೆನೆಯಿಂದ ಬಂದು ಹೋಗುವವರ ಪೈಕಿ ಇವನನ್ನು ಕಂಡು ನಿಬ್ಬೆರಗಾದವರು ಒಬ್ಬರೇ ಒಬ್ಬ ಭರ್ಜರಿ ಆಸಾಮಿ, ಪೊರಕೆಯಂತೆ ಮಾಸಿ ಬಿಟ್ಟಿದ್ದ ಧೋತ, ಕುಪ್ಪಸವನ್ನು ಏರಿ ಹೋಗುವಾಗ ಒಮ್ಮೆ ಇವನನ್ನು ದಿಟ್ಟಿಸಿ ನೋಡಿಕೊಂಡ.

ಮೂರನೆಯ ದಿನದಿಂದ ಕಾವಲುಗಾರನಿಗೆ ಹನುಮ ದುಂಬಾಲು ಬಿದ್ದ: "ಏನಾದ್ರೂ ಮಾಡಿ ಮನೆಯೊಡತಿಯನ್ನು ನಾನು ನೋಡೋ ಹಂಗೆ ಮಾಡು, ನಿನ್ನ ದಮ್ಮಯ್ಯ" ಎಂದು ಪೀಡಿಸಲು ಹತ್ತಿದ. ಕಾವಲುಗಾರ 'ಅದು ಅಸಾಧ್ಯ' ಖಂಡಿತ ಆಗುವದಿಲ್ಲ; ಎಂದು ಎಷ್ಟು ಹೇಳಿದರೂ, ಬಡಪೆ ಕೇಳಿಕೊಳ್ಳುತ್ತಿದ್ದ, ಎರಡು ದಿವಸವಾಯಿತು, ದಿನವೂ ಆ ವಿಸಿಯ ಮನುಷ್ಯ ಬಂದು ಹೋಗುತ್ತಿದ್ದ. ಮೂರು ದಿನದಿಂದ ಅಲ್ಲೇ ಕೂಂದ್ದ ಆ ಹುಡುಗನನ್ನು ಕಂಡು ಆಶ್ಚರ್ಯವಾಗಿರಬೇಕು ಅವನಿಗೆ.

ಮೂರನೆಯ ದಿವಸ ಹತ್ತಿರ ಕರೆದು ಕೇಳಿದ, "ಅದೇನಪ್ಪಾ, ನಾನೂ ಮೂರು ದಿನದಿಂದ ನೋಡ್ತಾ ಇದ್ದೇನೆ! ಇಲ್ಲೇ ಪದಾ ಕೂತಿರ್ತಿಯಲ್ಲಾ, ನಿನಗೇನಾದ್ರೂ ಬೇಕಾಗಿತ್ತೇ?" ಸೌಮ್ಯವಾಗಿಯೇ ಕೇಳಿದ ಅತ,

"ನಾನು ಈ ಮನೆಯೊಡತಿಯನ್ನು ಕಾಣಬೇಕು ರಾಯರೇ!" ಹುದುಗಿದ ಆಸೆಯನ್ನು ಬಿಚ್ಚಿ ಹೇಳಿದ ಹನುಮ.

"ಏಕೆ?"

"ಏನೋ ಒಂದು ಇಚಾರಯಿಸ್ತು. ಅಕೆಯನ್ನೇ ನೋಡ, ಬೇಕು."

"ನಾನು ಅಕೆಯ ಖಾಸಾ ಅಣ್ಣ. ಅವಳ ಹತ್ತಿರ ಏನು ಹೇಳಬೇಕೆಂದು ಇರುವೆಯೋ, ಅದನ್ನು ನನ್ನ ಹತ್ತಿರ ಹೇಳು. ನಾನು ಹೇಳುತ್ತೇನೆ. ಧೈರ್ಯವಾಗಿ ಹೇಳು!"

"ಊಹುಂ! ಅದು ಸಾಧ್ಯವಿಲ್ಲ! ನಾನೇ ಸ್ವಂತ ಕಾಣಬೇಕು!" ಕಟ್ಟದಿಂದ ಉತ್ತರಿಸಿದ ಹನುಮ.

"ಸಾಧ್ಯವಿಲ್ಲ" ಎನ್ನುತ್ತಾ ಒಳನಡೆದ ಅಕೆಯ ಅಣ್ಣ.

\+ \+ \+ \+

ಎರಡನೆಯ ಅಂತಸ್ತಿನ ಪಡಸಾಲೆಯಲ್ಲಿ ಗೌರಾಂಬೆ ಕುಳಿತು ಅಳುತ್ತಿದ್ದಳು. ಪತಿ ತೀರಿ ಏದು ದಿನಗಳಾಗಿದ್ದರೂ ದುಃಖ ಆರಿರಲಿಲ್ಲ. ಒಂದು ಅಗುಳು ಅನ್ನವನ್ನೂ ಮುಟ್ಟಿರಲಿಲ್ಲ. ಹೃದಯವೇ ಬಿರಿದು ಹೋಗುತ್ತದೇನೋ ಎಂಬಂತೆ ರೋದಿಸುತ್ತಿದ್ದಳು. ಅವಳಣ್ಣ ಬಂದು ಪ್ರತಿದಿನ ಎಷ್ಟು ಹೊತ್ತು ಸಮಾಧಾನ ಹೇಳಿದರೂ ಅವಳ ಅಳುವು ಕಡಮೆಯಾಗಿರಲಿಲ್ಲ. ಇಂದು ಬಂದಾಗಲೂ ಮತ್ತೆ ಕಣ್ಣೀರು ಸುರಿಸುತ್ತಿದ್ದ ತಂಗಿಯನ್ನು ಕಂಡಾಗ, ಅವನ ಮನ ನೊಂದಿತು:

"ಗೌರಾಂಬೆ; ವೀರನ ಮಗಳಾಗಿ, ಯೋಧನ ಮಡದಿಯಾಗಿ, ಸಾವು ಕೇಡುಗಳಿಗೆ ನೀನು ಹೀಗೆ ರೋದಿಸುವುದೆ? ಪುಟ್ಟ ನಾಗೇಂದ್ರನ ಭವಿಷ್ಯವನ್ನು ಆಲೋಚಿಸಬೇಡವೇ? ವೀರ ರಮಣಿಯೆಂಬೆ ಮಗನನ್ನು ವೀರನನ್ನಾಗಿ ಮಾಡಬೇಡವೆ?" ಎಂದಿನಂತೆ ಸಂತೈಸಲು ಶುರುಮಾಡಿದ.

"ಓಹ್ ಅಣ್ಣಾ! ನಾನು ಅವರ ಸಾವಿಗಾಗಿ ಅಳುತ್ತಿಲ್ಲ; ನನ್ನ ಬದುಕಿಗಾಗಿ!" ಬಿಕ್ಕಳಿಸುತ್ತಿದ್ದಳು ಗೌರಾಂಬೆ.

ಮತ್ತೆ ಮತ್ತೆ ಅದೇ ಮಾತೆತ್ತಿದರೆ ದುಃಖ ಹೆಚ್ಚುವುದೆಂದು ಅವಳಣ್ಣ, ಮಾತನ್ನು ಇನ್ನೆಲ್ಲಿಗಾದರೂ ತಿರುಗಿಸಿದರೆ ಮೇಲೊಂದು ಯೋಚಿಸಿಕೊಂಡು, "ನೋಡು ತಂಗಿ! ಏದು ದಿನದಿಂದ ಹಳ್ಳಿಯ ಹುಡುಗನೊಬ್ಬ ಬಂದು ಅನ್ನ ನೀರಿನ ಯೋಚನೆಯೂ ಇಲ್ಲದೆ ಹೊರಗೆ ಬಿದ್ದಿದ್ದಾನೆ. ಪಾಪ ಹುಡುಗ! ನಿನ್ನನ್ನೇ ಕಾಣಬೇಕಂತೆ. ಏನು ಮಾಡಿದರೂ ಸುದ್ದಿ ಏನು ಎಂಬುದನ್ನು ಹೇಳುವದಿಲ್ಲ ಒಂದೇ ಹಠದಿಂದ ನಿನ್ನನ್ನೇ ನೋಡಬೇಕೆನ್ನುತ್ತಾನೆ. ಅವನನ್ನೇನಾದರೂ ಕಾಣುತ್ತಿಯಾವ್ವಾ?" ವಿಶ್ವಾಸದಿಂದ ಕೇಳಿದ.

"ಯಾರು? ಹುಡುಗನೇ? ಏಳಂತೆ?" ಸುರಿಯುತ್ತಿದ್ದ ಕಣ್ಣೀರನ್ನು ತೊಡೆದುಕೊಳ್ಳುತ್ತಾ ಕೇಳಿದಳು.

"ಅದೇಕೆ ಎಂಬುದನ್ನು ಏನಾದರೂ ಹೇಳುವುದಿಲ್ಲ. ಮನೆಯೊಡತಿಯನ್ನೇ ಕಾಣಬೇಕು—ಎನ್ನುತ್ತಿದ್ದಾನೆ."

"ಅಗಲಿ! ನೋಡುವಾ! ನನ್ನೊಡನೆ ಅವನಿಗೆಂತಹ ಕೆಲಸ? ಇರಲಿ, ಒಳಗೆ ಬರಹೇಳು" ಗೌರಾಂಬೆ ತನ್ನ ಅಳಲಿನಲ್ಲೇ ನುಡಿದಳು.

ಅಣ್ಣ ಹೊರಗೆ ಬಂದ. ಹನುಮ ಕಾಯುತ್ತಲೇ ಇದ. "ಬಾರೋ ಒಳಗೆ!" ಅತ ಕರೆದ. ಹನುಮ ಹೆದರುತ್ತಾ ಹೆದರುತ್ತಾ ಒಳಹೊಕ್ಕ. ಗೌರಾಂಬೆಯು ಇದಿರು ತಂದು ನಿಲ್ಲಿಸಿದ, ಅಣ್ಣನಿಗೆ ಭಯ. ಯಾವ ಹುತ್ತದಲ್ಲಿ ಎಂತಹ ಹಾವಿರುತ್ತದೆಯೋ? ಯಾರ ಗೂಢಚಾರನೋ ಇವ! ಏತಕ್ಕೆ ಬಂದಿದ್ದಾನೋ! ಮುಂತಾದ ನೂರೆಂಟು ಕಲ್ಪನೆಗಳು. "ನಿನ್ನ ಕಂಬಳಿ ತೆಗೆ" ದರ್ಪದಿಂದ ಹೇಳಿದ. ಹನುಮ ಕಂಬಳಿ ತೆರೆದ ಅವನು ಹಾಕಿಕೊಂಡದ್ದು ಬರಿಯ ಒಂದು ಚಣ್ಣ. ಅಳುತ್ತಿದ್ದ ಗೌರಾಂಬೆಗೂ ನಗು ಬಂತು. ಅಣ್ಣ ನಿಂತೇ ಇದ್ದ ಹುಡುಗ ಬಾಯಿ ತೆರೆಯಲಿಲ್ಲ. "ಹೇಳಬೇಕಾದ್ದನ್ನು ಹೇಳು ಮಗೂ!" ನಯವಾಗಿ ಕೇಳಿದಳು ಗೌರಾಂಬೆ.

"ನಿಮ್ಮೊಬ್ಬರಿಗೆ ಮಾತ್ರ ಕೇಳುವೆ!" ಎಂದ.

ಅಣ್ಣನಿಗೆ ಹೊರಗೆ ಹೋಗಲು ಸಂಜ್ಞೆ ಮಾಡಿದಳು ಗೌರಾಂಬೆ. ಅಣ್ಣನಿಗೆ ಸಂಶಯ. ಅದರೂ ತಂಗಿಯ ಮಾತಿಗೆ ಮನ್ನಣೆ ಇತ್ತು ಹೊರಗೆ ಹೋದ. ಹೋಗುವ ಮುನ್ನ ಬಾಲನ್ನು ಮುಚ್ಚಿಕೊಂಡು ಹೋಗಲು ಹೇಳಿದಳು ಗೌರಾಂಬೆ ಅಣ್ಣ ಮಾತ್ರ ಬಾಗಿಲನ್ನು ಮುಂದಕ್ಕೆ ಎಳೆದುಕೊಂಡರೂ ಹತ್ತಿರವೇ ನಿಂತ. ಬಾಗಿಲ ಕಿಂಡಿಯೊಳಗಿನಿಂದ ಇಣುಕಿ ನೋಡತೊಡಗಿದ.

ಹನುಮ ಕೇಳಿದ್ದು ಒಂದೇ ಒಂದು ಮಾತು "ಅಂದು ಯಜಮಾನ್ರು ಕಾಡಿನಲ್ಲಿ ಬಿದ್ದು ಶತ್ರುಗಳಾಗ ನಾನಿದ್ದೆ. ಸಾಯುವಾಗ ನಿಮಗೆ ಈ ಮಾತು ತಿಳಿಸು ಎಂದು ತಿಳಿದ್ರು. 'ಹಕ್ಕಿ ನಕ್ಕಿತು; ಸೊಕ್ಕು ಅಡಗಿತು.' ಅಂತ" ಎಂದು ಮುಗಿಸಿದ.

ಗೌರಾಂಬೆಯ ಮುಖ ಪ್ರಫುಲ್ಲಿತವಾಯಿತು. ಓಡಿ ಬಂದು ಆ ಬಾಲಕನನ್ನು ಅಪ್ಪಿಕೊಂಡಳು. ಪ್ರೀತಿಯಿಂದ ತಲೆಯನ್ನು ನೇವರಿಸಿದಳು. ಆಕೆ ಈಗ ಅಳುತ್ತಿರಲಿಲ್ಲ. ನಗುತ್ತಿದ್ದಳು. ಅಣ್ಣನನ್ನು ಕೂಗಿ, ಹುಡುಗನಿಗೆ ಮಜ್ಜಿಗೆ ಮಾಡೆಂದು ಹೇಳಿದಳು. ತನ್ನ ಕತ್ತಿನಲ್ಲಿದ್ದ ಮುತ್ತಿನ ಹಾರವನ್ನು ಅವನ ಕೊರಳಿಗೆ ಹಾಕಿದಳು ಸಂತಸದಿಂದ, ಉಲ್ಲಾಸದಿಂದ ಓಡಾಡಿದಳು. ಅಣ್ಣನಿಗೆ ದಿಗ್ಭ್ರಮೆ ಹಿಡಿದಂತಾಯಿತು. ತಂಗಿಯ ಮನ ನೋಯದಿರಲೆಂದು, ಅವಳು ಹೇಳಿದಂತೆ ಹುಡುಗನಿಗೆ ವಸ್ತ್ರಾಭರಣಗಳನ್ನೂ, ಒಂದು ರತ್ನ ಸುವರ್ಣದ ಹೊನ್ನುಗಳನ್ನೂ ಕೊಟ್ಟು ಮೇನೆಯಲ್ಲಿ ಹಳ್ಳಿಗೆ ಕಳಿಸಿದ. ಆದರೆ ಅತನ ಮನಸ್ಸಿನ ಅತಂಕ ಮಾತ್ರ ಅಡಗಲಿಲ್ಲ. ರಾತ್ರಿ ತಂಗಿಯು ಆನಂದದ ಉದ್ವೇಗವೆಲ್ಲಾ ಅಡಗಿದ ಮೇಲೆ ಆಕೆಯನ್ನು ಕರೆದು ಕೇಳಿದ:

"ಗೌರಾಂಬೆ! ನಿನ್ನ ನಡೆನುಡಿಗಳೆ ನನಗೇಕೋ ತುಂಬಾ ಆಶ್ಚರ್ಯವನ್ನುಂಟುಮಾಡಿವೆ. ನಿನ್ನ ಪತಿ ತೀರಿದ ಐದು ದಿನಗಳು ಪ್ರತಿಯಾಗಿ ದುಃಖಿಸಿದೆ; ಇಂದು ಆ ಹೈದನ ಮಾತು ಕೇಳಿ ಅಷ್ಟೇ ಆನಂದದಿಂದ ಓಡಾಡುತ್ತಿರುವೆ! ಇದರ ಮರ್ಮವೇ ನನಗೆ ತಿಳಿಯುವಲ್ಲಿ!"

"ಅಣ್ಣಾಜಿ! ನನ್ನ ಹೃದಯಕ್ಕೆ ಇಂದು ಅದಮ್ಯ ಸಂತಸ ಹುದೆಂದೂ ಆಗಿಲ್ಲ. ನನ್ನ ಭಾಗದ ದೇವರಾಗಿ ಬಂದ ಆ ಹುಡುಗ. ದೇವರೇ ಕಳುಹಿಸಿರಬೇಕು ಆ ಮಗುವನ್ನು; ಇಲ್ಲದಿದ್ದರೆ ನನ್ನ ಬಾಳು ಏನಾಗಬೇಕಿತ್ತು! ನನಗೆ ನನ್ನ ಪತಿ ಅಗಲಿದ್ದಕ್ಕಾಗಿ ದುಃಖವಿಲ್ಲ. ಸಾವ್ರ ಬದುಕು ಯಾರ ಕೈಯಲ್ಲೂ ಇಲ್ಲ. ಯೋಧನ ಮಗಳಾಗಿ, ವೀರನ ಪತ್ನಿಯಾಗಿ ಸಾವೆಂದರೆ ನಾನೇಕೆ ಅಂಜಲಿ? ಎಲ್ಲಾ ವಿಧಿಯ ಬರೆಹದಂತೆ ಸಾಗುತ್ತದೆ. ನನಗೆ ಮದುವೆಯಾದ ಒಂದು ವರ್ಷದ ವರೆಗೆ ನಮ್ಮಿಬ್ಬರಲ್ಲಿ ಎಂದೂ ವಿರಸ ಮೂಡಿರಲಿಲ್ಲ. ಆದರೆ..... ಆ ಒಂದು ದಿನ ... ವಿಜಯದಶಮಿಯಂದು..... ವಿಜಯಯಾತ್ರೆಯ ನೆರಿವಣಿಗೆಯನ್ನು ನೋಡಲು ದಿಬ್ಬಕ್ಕೆ ಕರೆದೊಯ್ಯುವೆನೆಂದು ಕೇಳಿದ್ದರು ಬೆಳಗಿನಿಂದ ಕಾದೆ ಔತಣಕ್ಕೆ ಬಾರೆಂದು ಕರೆದಿದ್ದ ಕೌರವರೂ ಹೋಗದೆ, ಅವನು ನೆಯಲ್ಲಿ ವಿಜಯಯಾತ್ರೆಗೂ ಹೋಗದೆ, ಕಾದೆ. ಮಧ್ಯಾನ್ಹವಾದರೂ ಅವರು ಬರಲಿಲ್ಲ. ನನಗೆ ತುಂಬಾ ಸಿಟ್ಟು ಬಂತು. 'ಈ ದಿನ ಖಂಡಿತ, ಏನು ಮಾಡಿದರೂ ಮಾತನಾಡಿಸುವುದಿಲ್ಲ' ಎಂದು ತೀರ್ಮಾನಿಸಿಕೊಂಡು ಊಟ, ತೊಟ್ಟ, ಒಡವೆ, ವಸ್ತ್ರಗಳನ್ನು ಕಳಚಿ ನಿತ್ಯದುಡಿಗೆಯಲ್ಲಿ ನಿಂತೆ. ರಾತ್ರಿ ಒಂದು ಯಾಮ ಕಳೆದ ಮೇಲೆ ಬಂದರು. ಅವರಿಗೆ ನನ್ನನ್ನು ಕೋಪಿಡೆಯ ವಿಚಾರ ಪೂರ್ಣವಾಗಿ ಮರೆತಂತೆ ತೋರಿತು. ನಿತ್ಯದಂತೆ ಭೋಜನಕ್ಕೆ ಕುಳಿತಾಗ, ಪರಿಚಾರಕನೇ ಬಡಿಸಿದಾಗ, ಅವರಿಗೆ ನನ್ನ ನೆನಪು ಬಂದಿರಬೇಕು; ತಕ್ಷಣ ಎದ್ದು ಬಂದರು. ನಾನು ನಿದ್ದೆಯನ್ನು ನಟಿಸಿದೆ. 'ಓಹ್; ಮಲಗಿ ಬಿಟ್ಟದ್ದಾಳೆ' ಎಂದುಕೊಂಡು ಹೊರಟುಹೋದರು. ನಾನು ಮೂರು, ನಾಲ್ಕು ದಿನಗಳು ಮಾತನಾಡಲಿಲ್ಲ. ಅವರು ತಮ್ಮ ತಪ್ಪು ತಿಳಿದೇ ಇರಲಿಲ್ಲ. ಆದರೆ, ಪೌರ್ಣಮಿಯ ದಿನದ ಶುಂಗಭದ್ರೆಯಲ್ಲಿ ತೆಪ್ಪೋತ್ಸವ ಏರ್ಪಾಡಾಯಿತು ಅದಕ್ಕಾಗಿ ನನ್ನನ್ನು ಕರೆಯಲು ಬಂದಾಗ. ಅವರಿಗೆ ವಿಜಯದಶಮಿಯು ನೆನಪು ಬಂದಿರಬೇಕು. ಕೆಲಸದ ಭರದಲ್ಲಿ ಮರೆತ ತಪ್ಪಿನ ತಿಳಿವು ಅರಿವಾಯಿತು. ತಮ್ಮ ತಪ್ಪನ್ನು ಒಪ್ಪಿಕೊಂಡರು. ಕ್ಷಮಾಪಣೆ ಕೇಳಿದರು. ಅಕೊತ್ತು ಅವರು ನನ್ನ ಸಿಟ್ಟು. ಅದು ತಿಳಿದ ರೀತಿ ನುನ್ನು ಕಂಡು, ಒಂದು ಪದ್ಯವನ್ನು ಕಟ್ಟಿ ಅಂದರು;

ಸೊಕ್ಕಿನಿಂದ ನಿಂತಿತು ಮುನಿದ ಹಕ್ಕಿ,
ಮನ ನೊಂದಿತು; ಸೊಕ್ಕು ಬಲಿಯಿತು.
ತನ್ನ ಸೋಲನೊಪ್ಪಿತು ಒಲಿದ ಹಕ್ಕಿ,
ಹಕ್ಕಿ ನಕ್ಕಿತು; ಸೊಕ್ಕು ಅಡಗಿತು ॥

ಅಂದಿನಿಂದ ನಮ್ಮಲ್ಲಿ ಎಂದಾದರೂ, ವಿರಸ ಮೂಡಿದರೆ, ತಪ್ಪಿದ್ದವರು "ಹಕ್ಕಿ ನಕ್ಕಿತು; ಸೊಕ್ಕು ಅಡಗಿತು" ಎಂದರೆ ಸೋಲನ್ನು ಒಪ್ಪಿಕೊಂಡಂತೆ ಎಂದು ತೀರ್ಮಾನಿಸಿದೆವು.

ಈ ಗಿರಿಜೆ ಬಂದಾಗಿನಿಂದ ಅವರು ಮನೆಗೆ ಸೇರುವುದೇ ಅಪರೂಪವಾಯಿತು. ದಳಪತಿಯ ಸ್ಥಾನವನ್ನು ಒದಗಿಸಿದ ಆ ಅನೆ, ಕೈಹಿಡಿದ ಮಡದಿಯನ್ನು ಮರೆಯುವಂತೆ ಮಾಡಿತು. ನನ್ನ ಮಗ ನಾಗೇಂದ್ರನ ಹುಟ್ಟಿದ ಹಬ್ಬದಂದೂ ಸಹ ಕೆಲಸವಿದೆಯೆಂದು ಹೇಳಿ ಬೇಗ ಬೇಗ ಉಂಡು ಹೊಂಟು ಹೋದರು. ನನಗೇಕೋ ತುಂಬಾ ತುಂಬಾ ಕೋಪ ಬಂದಿತು. ನಾನು ನಾಲ್ಕು ದಿನ ಮಾತನಾಡಲೇ ಇಲ್ಲ. ಅವರೂ ತಮ್ಮ ಸೋಲನ್ನು ಒಪ್ಪಿಕೊಳ್ಳಲಿಲ್ಲ ಏನನೆಯು

[ಮುಂದೇ ಪುಟ ನೋಡಿ]

ಗುಂಡೂ ಮಾಮಾನ ಮಾತು

(ಭಾರತದಲ್ಲಿಯ ಹಬ್ಬಗಳು)

ಶ್ರೀ. ಪಿ. ವಿ. ಗುಡಿ, ಸ್ಯಾದಿಲ್ಲಿ

ಅಸೇತು ಹಿಮಾಚಲ ಭಾರತೀಯರಿಲ್ಲರೂ ಆಚರಿಸುವ ಹಬ್ಬಗಳು ಕೆಲವಿವೆ. ಈ ಹಬ್ಬದ ಕತೆಗಳು ಒಂದೊಂದು ವಿಭಾಗದಲ್ಲಿ ಒಂದೊಂದು ಬಗೆಯಾಗಿವೆ; ಆದರೆ ಹಬ್ಬದ ದಿನಗಳು ಮಾತ್ರ ಒಂದೇ ಆಗಿವೆ. ಇದಕ್ಕೆ ಕಾರಣವೇನು?

'ಏನು ಸುಕ್ಕಾರಾಯಾ, ನನ್ಮಕ್ಕಳ್ಳೆ ರಾಜೀನಾಮೆಯನ್ನೇ ಕೊಟ್ಟೆಯೋ ಹೇಗೆ? ೧೫-೨೦ ದಿವಸಗಳ ಮೇಲಾಯಿತು, 'ನಿನ್ನ ದರ್ಶನವೇ ಇಲ್ಲ' ಎನ್ನುತ್ತ ಶೀನಪ್ಪನ ಸವಾರಿಯು ಪ್ರವೇಶಿಸಿತು.

'ಇಲ್ಲವಪ್ಪ, ನಾನು ಹೇಗೆ ರಾಜೀನಾಮೆಕೊಡುತ್ತೇನೆ permanent member!! ಆರೋಗ್ಯ ಚೆನ್ನಾಗಿಲ್ಲದ್ದರಿಂದ ಮನೆಬಿಟ್ಟು ಎಲ್ಲಿಯೂ ಹೋಗಿಲ್ಲ ಅಷ್ಟೆ.' ಎಂದು ನಾನು ನುಡಿದೆ.

'ಮನೆಯಲ್ಲಿ ಕುಳಿತು ಕುಳಿತೇ ಹೀಗಾದದ್ದು ನಿನಗೆ. ಈವೊತ್ತು ಕರೆದುಕೊಂಡು ಬರಲೇಬೇಕೆಂದು ಹೇಳಿದ್ದಾರೆ ಗುಂಡೂಮಾವಾ' ಎಂದು ಶೀನಪ್ಪ ಆಗ್ರಹಪಡಿಸಿದ್ದರಿಂದ, ಅರ್ಧಮನಸ್ಸಿನಿಂದಲೇ ಅವನ ಜೊತೆಗೆ ಹೊಂಟೆ.

ನನ್ನನ್ನು ನೋಡುತ್ತಲೇ ಗುಂಡುಮಾವಾ 'ದೀಪಾವಳಿಯ ಫರಾಳದ ನಂತರ ಕಾಣಲೇ ಇಲ್ಲವಲ್ಲ?' ಎಂದು ಕೇಳಿದರು.

"ಅಹುದು" ಎಂದು ನಾನು ಹೇಳಿದೆ "ಆರೋಗ್ಯ ಚೆನ್ನಾಗಿರಲಿಲ್ಲ ನವರಾತ್ರಿ, ದೀಪಾವಳಿಗಳ ನಂತರ ನನ್ನ ಅವಸ್ಥೆ ಪ್ರತಿವರ್ಷ ಹೀಗೆಯೇ. ನವರಾತ್ರಿಯು ೮-೧೦ ದಿವಸಗಳೆಲ್ಲ ಹಬ್ಬದೂಟ; ಮುಂದೆ ೧೫ ದಿವಸಗಳಲ್ಲಿಯೇ ಈ ದೀಪಾವಳಿ, ೬-೭ ದಿವಸ ಮುಂಜಾನೆಯಿಂದ ಫಲಾರ, ಹಬ್ಬದೂಟ, ರಾತ್ರಿ ಪಗಡೆಯಾಟದಿಂದ ನಿದ್ದೆಗೇಡು— ಹೀಗಾಗಿ ದೀಪಾವಳಿ ಮುಗಿಯುವಷ್ಟರಲ್ಲೇ ನನ್ನ ಪ್ರಕೃತಿ ಕೆಡುತ್ತದೆ. ಎಷ್ಟೋವರ್ಷ ಅನಿಸುತ್ತದೆ; 'ನವರಾತ್ರಿಯಾಗಿ ೨-೩ ತಿಂಗಳ ನಂತರ, ಯಾದರೂ ದೀಪಾವಳಿ ಬಂದರೆ ಚೆನ್ನಾಗುತ್ತಿತ್ತು' ಎಂದು.

ಗುಂಡುಮಾವಾ ಹೇಳಿದರು ನಗುತ್ತ "ನಿನ್ನ ಮಾತು ಕೇಳಿದರೆ ನಮ್ಮ ಮಗ್ಗಲು ಮನೆಯ ಹುಡುಗನ ಮಾತೇ ನೆನಪಾಗುತ್ತದೆ. ದೀಪಾವಳಿಯ ದಿವಸ ಆ ಹುಡುಗನ ತಾಯಿಯು ಹೇಳುತ್ತಿದ್ದಳು 'ಹಬ್ಬದ ದಿವಸ ರಾತ್ರಿ ಹಾಗೆಯೇ ಉಪವಾಸ ಮಲಗಬಾರದು ಸ್ವಲ್ಪ ಹೊವರೂ ಅನ್ನವನ್ನಾದರೂ ಉಂಡು ಮಲಗಕೊ' ಎಂದು. ಅದಕ್ಕೆ ಆ ಹುಡುಗ 'ಅಲ್ಲ ಅಜ್ಜಿ, ಹಂಗಾದರೆ ದೀಪಾವಳಿಯು ದಿವಸವೇ ಏಕಾದಶಿ ಬಂದರೆ ಹೇಗೆ ಮಾಡುವಿ? ಎರಡೂ ಹೊತ್ತು ಊಟಬಿಡಬೇಕಾಗುತ್ತದಲ್ಲ?' ಎಂದು ಕೇಳಿದ."

'ಆ ಹುಡುಗನಿಗೆ ಸ್ವಂತ ಬುದ್ಧಿ ಇದೆ' ಎಂದು ಶೀನಪ್ಪ ನುಡಿದ

ನನ್ನ ಕಡೆಗೆ ತಿರುಗಿ ಗುಂಡುಮಾವಾ ಹೇಳಿದರು. 'ನಮ್ಮ ಸರಕಾರದವರು national festivals....ಹಾಗೆ ಹೇಗೆ ಎಂದು ಈ ಹಬ್ಬಗಳ ಮಹತ್ವವನ್ನು ಮನಗಾಣಿಸುವವರ ಸಲುವಾಗಿ ಎಷ್ಟೊಂದು ಪ್ರಯತ್ನಿಸುತ್ತಿದ್ದಾರೆ! ಆದರೆ ಸ್ವತಂತ್ರ ಭಾರತದ ನವಯುವಕರು, ನೀವು, ಆ ಹಬ್ಬಗಳ ಮಹತ್ವವನ್ನೇ ಕಳೆದುಬಿಡುತ್ತಿದ್ದೀರಿ. ನವರಾತ್ರಿ ದೀಪಾವಳಿಗಳ ಮಹತ್ವ ಗೊತ್ತೇ?'

'ಅದನ್ನು ಕೇಳುವುದಕ್ಕಾಗಿಯೇ ಬರುತ್ತಿದ್ದೇವೆ' ಎಂಬ ಧ್ವನಿಯನ್ನು ಕೇಳಿ ತಿರುಗಿ ನೋಡಲಾಗಿ ರಂಗಣ್ಣ, ಕಿಟ್ಟಿ, ಕಾಸ್ಟ್ರಿ ಬರುತ್ತಿದ್ದರು.

'ನರಕಾಸುರನ ವಧೆ, ಕೃಷ್ಣನನ್ನು ಸ್ವಾಗತಿಸುವದಕ್ಕಾಗಿ ದೀಪಮಾಲಾ; ಇಲ್ಲವೆ ಕೌರವ ಪಾಂಡವರ ಲೆಕ್ಕದಾಟ....ಇವೇ ಅಲ್ಲವೆ ಆ ದೀಪಾವಳಿಯ ಮಹತ್ವವನ್ನು ಹೆಚ್ಚಿಸುವ ಸಂಗತಿಗಳು?' ಎಂದು ಕಿಟ್ಟು ಕೊಂಕು ನುಡಿದ.

'ಪುರಾಣದ ಆ ವಿಷಯುಗಳನ್ನು ಬಿಟ್ಟುಬಿಡು ಕಿಟ್ಟು, ಈ ನವರಾತ್ರಿ, ದೀಪಾವಳಿ, ಹೋಳಿಹುಣ್ಣಿಮೆ, ಶ್ರಾವಣಮಾಸ ಈ ಹಬ್ಬ ಕ್ರಮವಾಗಿ ಯಾವ ದಿವಸಗಳಲ್ಲಿ ಬರುತ್ತವೆ ನೋಡು. ಆಂದರೆ ಈ ಹಬ್ಬಗಳನ್ನು ಆಚರಿಸುವ ಉದ್ದೇಶ ಕಂಡುಬರುತ್ತದೆ' ಎಂದು ಗುಂಡೂಮಾವಾ ನುಡಿದರು.

ಕಾಸ್ಟ್ರಿ ಹೇಳಿದ: 'ನನ್ನ ಅಭಿಪ್ರಾಯವೆಂದರೆ ಪರಾರ್ಥ್ಯವು ಧರ್ಮಗಳಿಗನುಸಾರವಾಗಿ ಈ ಹಬ್ಬಗಳೂ ಅವೆ. ಧರ್ಮಾರ್ಥ ಕಾಮ ಮೋಕ್ಷಗಳು ಪ್ರತಿಯೊಬ್ಬ ಮನುಷ್ಯನ ಸಾಧನೆ ಹೇತುಗಳು; ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣಗಳ ಜನರಿಗೆ ಶ್ರಾವಣಿ, ದಸರೆ, ದೀಪಾವಳಿ ಮತ್ತು ಹೋಳಿ ಇವು ಕ್ರಮವಾಗಿ ಬರುವ ಹಬ್ಬಗಳು. (೧) ಶ್ರಾವಣಿ— ಹೊಸ ಯಜ್ಞೋಪವೀತ

ವಿನ ಹೋಮಹವನ ಮುಂತಾದವುಗಳನ್ನು ಪ್ರಾರಂಭಿಸಿ ಮೋಕ್ಷ
ದ್ದಾಗಿ ಪ್ರಯತ್ನಿಸುವುದು ಬ್ರಾಹ್ಮಣನ ಕರ್ತವ್ಯ. (೨) ದಸರಾ
ತ್ರಿಯರಿಗೆ—ಆಯುಧಗಳನ್ನು ಪೂಜಿಸಿ ಹೊಸ ಆಕ್ರಮಣದ
ಯವಾಗಿ ಹೊರಡಲಿಕ್ಕೆ ಶುಭ ದಿವಸ (೩) ದೀಪಾವಳಿ ವೈಶ್ಯರಿಗೆ—
ವ್ಯಾಪಾರಸ್ಥರ ಹಬ್ಬ; ಹೊಸ ವರ್ಷ ಪ್ರಾರಂಭ (೪) ಆದರಂತೆ
ಳೀ ಶೂದ್ರರಿಗೆ.'

'ನಿನ್ನ ಅಭಿಪ್ರಾಯದಂತೆ ಕೆಲವು ಹಬ್ಬಗಳನ್ನು ಕೇವಲ ಕ್ಷ
ತ್ರ ಆಚರಿಸಬೇಕೆಂದಾಯಿತು. ನನಗೇನೂ ಇದು ಅಷ್ಟು
ಮಂಜಸವೆನಿಸುವುದಿಲ್ಲ. ಸಾವಿರಾರು ವರ್ಷಗಳ ಪೂರ್ವದಲ್ಲಿ ಸಹ
ಮ್ಮ ಭಾರತದ ಪ್ರತಿಯೊಂದು ಭಾಗದಲ್ಲಿ ಎಲ್ಲರೂ ಈ ಹಬ್ಬಗಳನ್ನು
ಚರಿಸುತ್ತಿದ್ದರೆಂದು ತಿಳಿದುಬರುತ್ತದೆ. ದೀಪಾವಳಿ—ಹೈನರು
ಇಂದುಗಳು ಇಡೀ ಭಾರತದಲ್ಲಿಯೇ ಇದನ್ನು ಆಚರಿಸುತ್ತಾರೆ.
ದಕ್ಕೆ 'ದಿವಾಳಿ' ಇಲ್ಲವೆ 'ದೀಪಾವಳಿ'–Festival of lights
ಂದು ಕರೆಯುತ್ತಾರೆ. ಕೃಷ್ಣನು ನರಕಾಸುರನನ್ನು ಕೊಂದ ದಿವಸ
ಂದು ಹಿಂದುಗಳೆಂದರೆ, ಪೀಜರು ತಮ್ಮ ಓನೆಯ ಗುರುವು ಜಹಾಂ
ೀರನ ಸೆರೆಯಿಂದ ಮುಕ್ತನಾಗಿ ಬಂದ ದಿವಸವೆಂದು ಅವನ ಸ್ವಾಗತ
ಾಗಿ ಈ ದೀಪಾವಳಿಯನ್ನು ಆಚರಿಸುತ್ತಾರೆ. ಜೈನರ ಪ್ರಕಾರ
ಮಹಾವೀರನು ಮರಣಹೊಂದಿದ ನಂತರ ಜ್ಞಾನದೀಪವಂತೂ ನಂದಿ
ೋಯಿತು; ಇವುಗಳನ್ನಾದರೂ ಹೊತ್ತಿಸೋಣವೆಂದು ದೀಪ
ಳನ್ನು ಹಚ್ಚಿದರಂತೆ. ಇನ್ನೆಲ್ಲವುಗಳಿಗಿಂತ ಹೆಚ್ಚು ಸಮಂಜಸ
ನಿಸುವುದೆಂದರೆ ಕೆಸರಾದ ಕಾಮಶಾಸ್ತ್ರ ಬರೆದ ವಾತ್ಸ್ಯಾಯನನು
ಇದರ ಸಂಬಂಧವಾಗಿ ಉಲ್ಲೇಖಿಸಿದ್ದು ಅವನು ಈ ಹಬ್ಬವನ್ನು
ಯಕ್ಷರಾತ್ರಿ'ಯೆಂದು ವರ್ಣಿಸುತ್ತಾನೆ ಎಷ್ಟೋ ಜನ ಟೀಕಾಕಾರರು
ಇದಕ್ಕೆ 'ಶುಭರಾತ್ರಿ' ಎಂದು ಅರ್ಥ ಮಾಡಿದ್ದಾರೆ. ಚಳಿಗಾಲದ
ಪ್ರಾರಂಭಕ್ಕೆ ಬರುವ ಈ ದಿವಸಕ್ಕೆ ಒಂದೇ ಅರ್ಥವೇ ಸಮಂಜಸವಾಗಿ
ತೋರುವುದಲ್ಲದೆ ಅದನ್ನು ಆಚರಿಸುವ ರೀತಿಯೂ ಯೋಗ್ಯವೆನಿಸು
ತ್ತದೆ. ಅಕಬರನ ಕಾಲದಲ್ಲಿ ಇದು ನಾಡಹಬ್ಬವೇ ಆಗಿತ್ತೆಂದು
ಇನ್-ಇ-ಅಕಬರಿಯಲ್ಲಿ ಉಲ್ಲೇಖವಿದೆಯಂತೆ. ಇದೇ ರೀತಿಯಲ್ಲಾಗಿ
ಶಿವರಾತ್ರಿ, ಹೋಳಿ ಈ ಹಬ್ಬಗಳು ನಮ್ಮ ಭಾರತದ ಎಲ್ಲ ಭಾಗಗಳ
ಲ್ಲಿಯೂ ಆಚರಿಸಲ್ಪಡುತ್ತವೆ ಅವುಗಳಿಗೆ ಅವರು ಕೊಡುವ ಅರ್ಥಗಳು
ಬೇರೆ ಬೇರೆಯಾದರೂ ಆಚರಿಸುವ ರೀತಿ ಹೆಚ್ಚು ಕಡಿಮೆ ಒಂದೇ
ಆಗಿವೆ. ಆದ್ದರಿಂದ ಅದಕ್ಕಾಗಿ ಸಾಮಾನ್ಯವಾದ ಕಾರಣವೊಂದು
ಇರಲೇಬೇಕು. ಬೇಸಗೆಕಾಲ, ಮಳೆಗಾಲ, ಚಳಿಗಾಲ ಇವುಗಳ
ಪ್ರಾರಂಭಕ್ಕೆ ಇಲ್ಲವೆ ಕೊನೆಗೆ ಈ ಹಬ್ಬಗಳು ಬರುತ್ತವೆ. ಮೊದಲು
ಬೇಸಗೆಯ ಸೆಕೆ, ಅನಂತರ ಅತಿಯಾಗಿ ಮಳೆ ಇವುಗಳಿಂದ ಬೇಸತ್ತರು
ವಾಗ, ಅವುಗಳು ಮುಗಿದೊಡನೆ ಸಂತಸವಾಗುವುದು ಸ್ವಾಭಾವಿಕ
ಆದ್ದರಿಂದ ಅಂತಹ ಮಳೆಗಾಲ ಮುಗಿಯುತ್ತಿರುವ ನವರಾತ್ರಿ. ಅನಂತರ
ಮುಂದೆ ಬರುವ Health—giving season ಚಳಿಗಾಲದ
ಸ್ವಾಗತಕ್ಕಾಗಿ ದೀಪಾವಳಿ. ಬೇಕಾದಷ್ಟು ಉಡು, ತಿಂದು, ರಾತ್ರಿ
ಜಾಗರಣೆ ಮಾಡುವುದು — ದೀಪಾವಳಿಯಲ್ಲಿ ಏನು ಮಾಡಿದರೂ
ಆರೋಗ್ಯ ಸುಧಾರಿಸುವುದೆಂಬದನ್ನು ತೋರಿಸುವುದೇ ದೀಪಾವಳಿಯ
ಮುಖ್ಯತ್ವ ಮತ್ತು ಇದಕ್ಕಾಗಿಯೇ ಇದನ್ನು ಸುಖದ ರಾತ್ರಿಯೆಂದು
ವರ್ಣಿಸಿದ್ದರಲ್ಲಿ ಏನೂ ಆಕ್ಷೇಪಾರ್ಹವಿಲ್ಲ.' ಎಂದೂ ಗುಂಡುಮಾಮಾ
ಅಭಿಪ್ರಾಯವಿತ್ತರು.

'ಹಾಗಾದರೆ ಈ ಹಬ್ಬಗಳಿಗೆ ನಾವು ಬೇರೆ ಹೊಸ ಹೆಸರು
ಗಳನ್ನೇ ಕೊಡಬಹುದು. ಹೇಗಾದರೂ ಮುಂದಿನ ವರ್ಷದಿಂದ ಹೊಸ
ಕ್ಯಾಲೆಂಡರ್ ಪ್ರಾರಂಭವಾಗುವುದಿದೆ ಅದರ ಸಂಗಡ ಈ ಹಬ್ಬಗಳನ್ನು
ಸಹ—ನವರಾತ್ರಿಯನ್ನು ಮಳೆಗಾಲದ ಕೊನೆಗೆ ಬರುವ ಹಬ್ಬ,
ದೀಪಾವಳಿಯನ್ನು ಚಳಿಗಾಲದ ಪ್ರಾರಂಭದ ಹಬ್ಬ, ಹೋಳಿಯನ್ನು
ವಸಂತಾಗಮನದ ಹಬ್ಬ—ಎಂದು ಮುಂತಾಗಿ ಕರೆಯಬಹುದಲ್ಲವೇ?'
ಎಂದ ಶೀನಪ್ಪ

'ನಮ್ಮ ಶೀನು ಯಾವಾಗಲೂ ಏನಾದರೊಂದು ಹೊಸತನ್ನೇ
ಯೋಚಿಸಿರುತ್ತಾನೆ' ಎಂದರು ಗುಂಡುಮಾಮಾ 'ನೀನೆನ್ನುವದು
ಅಕ್ಷರಶಃ ನಿಜ, ಶೀನೂ ಈ ಎಲ್ಲ ಹಬ್ಬಗಳ ಅರ್ಥವಿರುವದು ಹಾಗೆಯೇ,
ಆದರೆ ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಈ ಹಬ್ಬಗಳನ್ನು
ಆಚರಿಸುವದಕ್ಕೆ ಬೇರೆ ಬೇರೆ ಕಾರಣಗಳನ್ನು ಕೊಡುತ್ತಾರೆ, ನವ
ರಾತ್ರಿಯನ್ನೆ ತೆಗೆದುಕೊಳ್ಳಿರಿ. ಭಾರತದ ಎಲ್ಲ ಕಡೆಗೂ ಈ ಹಬ್ಬ
ವನ್ನು ಹತ್ತು ದಿವಸಗಳ ವರೆಗೆ ಆಚರಿಸುತ್ತಾರೆ. ಬಂಗಾಲದಲ್ಲಿ
ದುರ್ಗಾಪೂಜೆಯ ಪ್ರಾಮುಖ್ಯತೆ ಕಂಡುಬಂದರೆ ಉತ್ತರ ಭಾರತದಲ್ಲಿ
ರಾವಣನು ಸಂಹರಿಸಲ್ಪಟ್ಟ ದಿವಸವೆಂದು ಆಚರಿಸುತ್ತಾರೆ. ನಮ್ಮ
ಕಡೆಗಂತೂ ಗೊತ್ತೇ ಇದೆ. ವೆಂಕಟೇಶ ಪದ್ಮಾವತಿಯು ಪರಿಣಯವಾದ
ದಿವಸವೆಂದು ನಾವು ಆಚರಿಸುತ್ತೇವೆ.'

'ಅಹುದು, ಭಾರತದ ಮೇಲೆ ದಾಳಿಮಾಡಿ ಉತ್ತರವಲ್ಲಿಯ
ಮೂಲ ನಿವಾಸಿಗಳನ್ನು ಹೇಗೋ ಹೊಡೆದೋಡಿಸಿದ ಆರ್ಯರಿಗೆ
ನಪ್ಪಿಣದಲ್ಲಿಯೂ ದ್ರಾವಿಡರು ಒಂದು ದೊಡ್ಡ ಸಮಸ್ಯೆಯೇ ಆಗಿದ್ದರು.'
ಎಂದು ರಂಗಣ್ಣ ನದುವೆಯೇ ನುಡಿದ. 'ದ್ರಾವಿಡರು ಆರ್ಯರಿಗಿಂತ
ಯಾವ ವಿಷಯದಲ್ಲಿಯೂ ಕಡಿಮೆಯಾಗಿರಲಿಲ್ಲ. ಅವರ ಸಂಸ್ಕೃತಿ
ಉಚ್ಚವಾಗಿತ್ತು. ವಾಲಿ, ಹನುಮಂತ, ಅಂಗದ ಮುಂತಾದ
ವಾನರರೂ, ರಾವಣ ಮೇಘನಾದ ಮುಂತಾದ ಅಸುರರೂ ಅಸಾ
ಧಾರಣ ಶೌರ್ಯಶಾಲಿಗಳಾಗಿದ್ದರೆಂದು ರಾಮಾಯಣದಲ್ಲಿಯೇ ವರ್ಣಿ
ಸಲ್ಪಟ್ಟಿದೆ. ಮತ್ತು ವಾನರ ಶ್ರೇಷ್ಠನಾದ ಹನುಮಂತನು ವೇದ
ಶಾಸ್ತ್ರ ಪಾರಂಗತನಿದ್ದನೆಂದೂ ವರ್ಣಿಸಲ್ಪಟ್ಟಿದೆ. ರಾವಣನಂತೂ
ವೇದಶಾಸ್ತ್ರಜ್ಞನಲ್ಲದೆ ಅಸಾಧಾರಣ ತಿವಿಭಕ್ಷನೂ ಇದ್ದನೆಂಬದು
ಎಲ್ಲರಿಗೂ ಗೊತ್ತಿದ್ದ ಮಾತು. ತನ್ನ ತಾಯಿಯ ಸಲುವಾಗಿ ಪೂಜಿ
ಗೆಂದು ಆತ್ಮಲಿಂಗವನ್ನೇ ತಂದ ಭಕ್ತಶ್ರೇಷ್ಠ. ಇಂತಹ ವೀರರನ್ನೆಲ್ಲ
ಕಪಟದಿಂದ ಜಯಿಸಿ, ಅವರವರಲ್ಲಿ ಒಡಕು ಹುಟ್ಟಿಸಿ ಕಡೆಗೆ ರಾವಣ
ನಂತಹ ವೀರನನ್ನು ಸಂಹರಿಸಿದರು ಅದೊಂದು ಅವರಿಗೆ 'Victory
day' ಇಂತಹ ವಿಜಯವನ್ನು ಅವರು ತನಸು ಮನಸಿನಲ್ಲಿಯೂ
ಎಣಿಸಿರಲಿಕ್ಕಿಲ್ಲ. ಆದ್ದರಿಂದ ಆ ವಿಜಯದ ದಿವಸವನ್ನು 'ವಿಜಯ
ದಶಮಿ'—Victory day ಎಂದು ಇನ್ನೂ ಆಚರಿಸುತ್ತಾರೆ.

ಉತ್ತರಭಾರತದಲ್ಲಿ ಅದರ ಪರಿಣಾಮವಿನ್ನೂ ಅದೆ. ಆದರೆ ಬಂಗಾಲದಲ್ಲಿ ಮತ್ತು ನಮ್ಮ ಪ್ರಾಂತದಲ್ಲಿ ಈ ತಂಡದ ತಂಡದ ಯೋಚನೆಗಳಿಗೆ ಎಡೆ ಇಲ್ಲ. ಬಂಗಾಲದಲ್ಲಿ ಈ ನವರಾತ್ರಿಯು ದಿವಸಗಳೆಂದರೆ ದುರ್ಗಾ, ಉಮಾ, ಶಾಲ್ಮಲೆ ಪಾರ್ವತಿಯು ಪೂಜೆಯ ದಿವಸ. ಪಾರ್ವತಿಯು ಗಂಡನ ಮನೆಯಿಂದ ತಾಯಿತಂದೆಗಳ ಮನೆಗೆ ಬರುವ ದಿವಸ. ತಂದೆತಾಯಿಗಳು ವಾತ್ಸಲ್ಯಪೂರ್ಣ ಹೃದಯದಿಂದ ಪತಿಯ ಮನೆಯಿಂದ ಬರುವ ಮಗಳ ಆಗಮನವನ್ನು ನೀಕ್ಷಿಸುತ್ತಿರುವ ದಿವಸ. ದುರ್ಗಾಪೂಜೆಯ ದಿವಸಗಳೆಂದರೆ ತಂದೆ ತಾಯಿಗಳು ಅತ್ತೆಯ ಮನೆಯಿಂದ ತಮ್ಮ ಮಗಳ ಬರುವನ್ನು ಹಾರೈಸುತ್ತಾರೆ. ಉಳಿದ ಬಂಧುವರ್ಗದವರು ಕಳ ಬಂಧುಕೂಡಿ ಸಂತೋಷದಿಂದ ವೇಳೆ ಕಳೆಯುತ್ತಾರೆ ಈ ದಿವಸಗಳೆಂದರೆ ಅಪ್ತೇಷ್ಟರು ಬಂಧು ಬಾಂಧವರು ಕೂಡಿ ಕೆಲಸು ನಲಿನ ಸುಖದ ದಿವಸಗಳು ನಮ್ಮ ಕಡೆಗೆ ಈ ನವರಾತ್ರಿಯನ್ನು ಪೀಳಿಗೆಪೀಳಿ ಪದ್ಧತಿಯಿರುವ ಪರಿಣಯದ ದಿವಸಗಳೆಂದು ಆಚರಿಸುತ್ತೇವೆ. ಕೊನೆಯ ದಿವಸ (ದಶರಿಯ ದಿವಸ) ಪ್ರತಿಯೊಬ್ಬರು ಮನೆಗೂ ಹೋಗಿ ಹಿಂದಿನ ದ್ವೇಷ ಅಸೂಯೆಗಳನ್ನು ಮರೆತು ಮತ್ತೆ ಹೊಸ ಸ್ನೇಹ ಬಾಂಧವ್ಯವನ್ನು ಕೆಸರುವ ಹೆಗ್ಗುರುತಿ ದು ಬನ್ನಿಯನ್ನು ಕೊಟ್ಟು-ತಾನಿದುಕೊಂಡು ಬರುತ್ತೇವೆ. ಪ್ರೇಮದ, ವಾತ್ಸಲ್ಯದ, ಚಿಹ್ನೆ ಎಂದು ನಾವು ನವರಾತ್ರಿಯನ್ನು ಆಚರಿಸುತ್ತಿರುವಾಗ, ಉತ್ತರಭಾರತದಲ್ಲಿ ಎಂದೋ ಸಾವಿರಾರು ವರ್ಷಗಳ ಹಿಂದೆ ಆರ್ಯರು ಪಡೆದ ವಿಜಯದ ದಿನವೆಂದು ಇನ್ನೂ ಹೆಮ್ಮೆಯಿಂದ ಆ Victory day ಆಚರಿಸುವುದು ಯೋಗ್ಯವೆ ಎಂದು ಎಷ್ಟೋ ಜನ ಎನಿಸುತ್ತದೆ ಇಷ್ಟೇ ಅಲ್ಲ, ರಾವಣ, ಕುಂಭಕರ್ಣ ಮತ್ತು ಮೇಘನಾದರ ದೊಡ್ಡ ದೊಡ್ಡ ಮೂರ್ತಿಗಳನ್ನು ಮಾಡಿ ಸುಡುತ್ತಾರೆ ಇದು ನಮಗೆ ತಿಳಿಯಿಂದು ಹೆಮ್ಮೆಪಡಬೇಕಾದ ವಿಷಯವಾದರೆ. ಬ್ರಿಟಿಷರು Divide and rule policy ಯಿಂದ ಭಾರತವನ್ನೇ ತಮ್ಮ ಆಧಿಪತ್ಯಕ್ಕೆ ಒಳಪಡಿಸಿಕೊಂಡದ್ದಕ್ಕೆ ನಾವು ಹೆಸರಿಸುವ ಕಾರಣವೇನೂ ಇಲ್ಲ, ಯುದ್ಧದಲ್ಲಿ ಜಯಾಪಜಯಗಳು ದೈವಾಧೀನವು; ಬ್ರಿಟಿಷ್-ಅಮೇರಿಕೆಗಳು ಜರ್ಮನರನ್ನು ಗೆದ್ದ ನೂರರ 'ವೇ ಒನೆಯ ತಾರೀಖಿನ ದಿವಸವನ್ನು Victory day ಎಂದು ಎಣಿಸುತ್ತ ತಿಜೆಪ್ಪಂದು ಹೆಮ್ಮೆಪಡಬಾರದೆಂದು ಹೇಳುವ ನಾವು ವಿಜಯೋದಶಮಿಯನ್ನು ಏಕೆ ರೀತಿಯಾಗಿ ಆಚರಿಸಿದರೆ....?'

ಶಾಸ್ತ್ರಿ ನುಡಿದ: 'ಏನೇ ಇರಲಿ, ಗುಂಡೂರಾವ್ರೂ ಉತ್ತರ ಮತ್ತು ದಕ್ಷಿಣಭಾರತಗಳಲ್ಲಿ ಎಷ್ಟೋ ಅಂತರವಿದೆ. ನಮ್ಮ ಕಡೆಗೆ ಅಧ್ಯಾತ್ಮದತ್ತ ಒಲವು ಹೆಚ್ಚು; ಉತ್ತರದಲ್ಲಿಯ ಜನ ವಿಲಾಸಮುಖಕ್ಕೆ ಮೆಚ್ಚಿದ್ದಾರೆ ಅಲ್ಲಿ ಪಾಶ್ಚಾತ್ಯರ ಮತ್ತು ಮುಸಲ್ಮಾನರ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದೆ. ಇದು ಅವರು ಆಚರಿಸುವ ಹಬ್ಬಗಳಲ್ಲಿಯೂ ಕಂಡುಬರುತ್ತದೆ. ಹೋಳಿ ಹಬ್ಬ;-ವಸಂತ ಋತುವಿನಾಗಮನವನ್ನು ಸೂಚಿಸುವ ಈ ಹೋಳಿಹುಣ್ಣಿಮೆಯಂದರೆ ಎಲ್ಲರಿಗೂ ಸಂತಸವಾಗುವುದು ಸಹಜ ವಸಂತ ಋತುವಿನಲ್ಲಿ ಸೃಷ್ಟಿಯ ಪ್ರತಿಯೊಂದು ವಸ್ತು-ಪ್ರಾಣಿಗಳಲ್ಲಿ ನಾವೀನ್ಯ ತುಂಬಿರುತ್ತದೆ. ಪ್ರತಿಯೊಂದು ವಸ್ತುವಿ-



ನಲ್ಲಿ ಒಂದೊಂದು ವಿಶಿಷ್ಟ ಸೌಂದರ್ಯ ಶೋಭಿಸುತ್ತದೆ. ಅಂಥ ಬಳಿಕ ಮನುಷ್ಯನ ಪಾಡೇನು? ಆ ಸೌಂದರ್ಯದ ಮಾದಕತೆಯಿಂದ ಹಿಂದುಮುಂದಿನ ಯೋಚನೆ ಇಲ್ಲದೆ, ಮಾನವನು ಮನ್ಮಥನ ದಾಸನಾಗುವುದು ಸಹಜ. ಉತ್ತರ ಭಾರತದಲ್ಲಿ ಈ ಹೋಳಿಯನ್ನು ಆಚರಿಸುವ ರೀತಿಯನ್ನು ನೋಡಿದರೆ, ಆ ಮಾದಕತೆ ಹೆಚ್ಚಾಗುವಂತೆಯೇ ವರ್ತಿಸುತ್ತಾರೆಯೆಂದು ಯಾರಾದರೂ ಅನ್ನಬಹುದು. ಹೋಳಿಯ ದಿವಸ ಇವರೆಲ್ಲರಿಗೂ ಒಂದು ತರದ ಉನ್ಮಾದ. ಸಿಕ್ಕವರಿಗೆ ಬಣ್ಣಬಳಿಯುತ್ತ ಮನಸ್ಸಿಗೆ ಬಂದಹಾಗೆ ತಮ್ಮ ಗುಂಗಿನಲ್ಲಿಯೇ ತಾವು ತಿರುಗುತ್ತಿರುವ ಈ ಜನರು, ಮನ್ಮಥನ ದಾಸಾನುದಾಸರಾಗುವುದಕ್ಕೆ ಏನು ಹಿಡಿಯುಬೇಕಾಗಿದೆ? ಆದರೆ ನಮ್ಮಲ್ಲಿಯ ರೀತಿಯೇ ಬೇರೆ. ವಸಂತಾಗಮನದ ಪೂರ್ವದಲ್ಲಿಯೇ ಮುಂಬರುವ ಈ ದಿವಸಗಳ ಎಚ್ಚರಿಕೆಯನ್ನು ಕೊಡುತ್ತೇವೆ. ಕಾಮುದಹನ ನಡಸುತ್ತೇವೆ. ನಿವು ಕಾಮನನ್ನು ಸುಟ್ಟ ಕತೆಯನ್ನು ಕೇಳುತ್ತೇವೆ, ಹೇಳುತ್ತೇವೆ. ಮನುಷ್ಯನು ಇಂದ್ರಿಯಗಳ ದಾಸನಾಗದಂತೆ; ಇಂದ್ರಿಯಗಳನ್ನು ತನ್ನ ಆಧೀನದಲ್ಲಿಟ್ಟುಕೊಳ್ಳಬೇಕೆಂಬ ಮಾತನ್ನು ಪ್ರತಿಯೊಬ್ಬರಿಗೂ ಮನವರಿಕೆಯಾಗುವಂತೆ ಮಾಡುತ್ತೇವೆ. ಆದರೆ ಮಧ್ಯ ಭಾರತದಲ್ಲಿ ಮಾತ್ರ ಇವೆರಡನ್ನೂ ಅನುಸರಿಸದೆ ಮಧ್ಯಮಮಾರ್ಗವನ್ನೇ ಹಿಡಿದಿದ್ದಾರೆ. ಹಿರಣ್ಯಕಶಿಪುವಿಗೆ ಹೋಳಿಕಾ ಎಂಬ ತಂಗಿಯೊಬ್ಬಳಿದ್ದಳು. ಅವಳಿಗೆ ಅಗ್ನಿಯಿಂದ ಏನೂ ಅಪಾಯವಿದ್ದಿದ್ದಿಲ್ಲ. ಆದ್ದರಿಂದ ಪ್ರಲ್ಹಾದನನ್ನು ಅಗ್ನಿಯಲ್ಲಿ ಶಾಕಿ ಸುಡಬೇಕೆಂದು ತಿಳಿಸಿ, ಹಿರಣ್ಯಕಶಿಪುವು ತನ್ನ ತಂಗಿಗೆ ಪ್ರಲ್ಹಾದನನ್ನು ತೆರೆದುಕೊಂಡು ಅಗ್ನಿಯನ್ನು ಪ್ರವೇಶಿಸಲಿಕ್ಕೆ ಹೇಳಿದನಂತೆ. ಆದರೆ ಅಗ್ನಿಯು ಪರಿಭಕ್ತನಾದ ಪ್ರಲ್ಹಾದನನ್ನು ಉಳಿಸಿ ಹೋಳಿಕೆಯನ್ನೇ ಸುಟ್ಟನಂತೆ. ಫೋಳಿಹುಣ್ಣಿಮೆಯ ದಿವಸ ಹೋಳಿಕೆಯ ಮೂರ್ತಿಯನ್ನು ಮಾಡಿ ಸುಡುತ್ತಾರೆ.'

'ಇದು ನೋಡು ಶಾಸ್ತ್ರಿ, ಇವುಗಳ ಮೇರಿಂದ ಉತ್ತರ ಮತ್ತು ದಕ್ಷಿಣಭಾರತದ ಜನರೆಲ್ಲರ ಸಂಬಂಧವಾಗಿ ನೀನು ಅಭಿಪ್ರಾಯಪಡುವುದು ತೀರ ಅಸಂಬದ್ಧವಾಗಿ ತೋರುತ್ತದೆ. ಅಧ್ಯಾತ್ಮ ಪ್ರಗತಿಯನ್ನು ಅಳೆಯುವ ರೀತಿ ಇದಲ್ಲ. ಪ್ರತಿಯೊಬ್ಬ ವ್ಯಕ್ತಿಯು ತನ್ನ

ಪ್ರಯತ್ನದಿಂದಲೇ ಅಧ್ಯಾತ್ಮದಲ್ಲಿ ಪ್ರಗತಿಯನ್ನು ಹೊಂದುತ್ತಾನೆ. ಉತ್ತರ ಧಾರವಾಡದಲ್ಲಿಯೂ ಇಲ್ಲಿಯಂತೆ ಎಷ್ಟೋ ಜನ ಜ್ಞಾನಿಗಳೂ ತಪಸ್ವಿಗಳೂ ಆಗಿ ಹೋಗಿದ್ದಾರೆ. ಅಂತಹ ಜ್ಞಾನಿಗಳಿಗೆ ಉತ್ತರ ದಕ್ಷಿಣ ಎಂಬ ಕಟ್ಟುನಿಟ್ಟುಗಳಿಲ್ಲ. ಅವರು ಈ ಬಂಧನಗಳನ್ನು ಮೀರುತ್ತಾರೆ. ನಿಮಗಿದು ಗೊತ್ತಿಲ್ಲದ ವಿಷಯವಲ್ಲ— ಯಾರೇ ಆಗಲಿ, ಸಂನ್ಯಾಸಿಯಾದೊಡನೆ ಜುಟ್ಟು ಜನಿವಾರಗಳನ್ನು ಹರಿದೊಗೆಯಬೇಕಾಗುತ್ತದೆ. ಜಾತಿ ವರ್ಣಗಳಿಂದ ದೂರನಾಗಿ ಉತ್ತರನೇ ಆಗಲಿ ದಕ್ಷಿಣನೇ ಆಗಲಿ— ದೇಶದ ಯಾವ ಭಾಗಕ್ಕೂ ಸಂಬಂಧಿಸದೆ, ಇಡೀ ಜಗತ್ತಿಗೇನೇ ಸಂಬಂಧಿಸಿದವನಾಗುತ್ತಾನೆ. ಆದ್ದರಿಂದ ಇಂತಹ narrow mindedness ಗೆ ಅವಕಾಶ ಕೊಡುವುದು ಯೋಗ್ಯವಲ್ಲ.' ಎಂದರು ಗುಂಡೂಮಾಮಾ.

ತೀನಪ್ಪನಿಗೆ ಈ ಅಧ್ಯಾತ್ಮ ತಲೆಹಿಡಿಯಲಿಲ್ಲ. 'ನೀವೇನೋ ಹೇಳಿದಿರಲ್ಲ; ತೀಕುರು ಸಹ ದೀಪಾವಳಿಯನ್ನು ಆಚರಿಸುತ್ತಾರೆಂದು! ಅವರಲ್ಲಿ ದೀಪಾವಳಿ ಹೇಗೆ ಪ್ರಾರಂಭವಾಯಿತು?' ಎಂದು ಕೇಳಿದ.

ಗುಂಡುಮಾಮಾ ಹೇಳಿದರು 'ಇಂದು ನೀವೆಲ್ಲ ಬಂದ ಕೂಡಲೆ ಅದನ್ನೇ ಹೇಳಬೇಕೆಂದು ನಿಶ್ಚಯಿಸಿದ್ದೆ. ಆದರೆ ಮಾತಿಗೆ ಮಾತು ಹೊಡಮು ಬೇರೆ ಏನೋ ವಿಷಯ ಪ್ರಾರಂಭವಾಯಿತು ಹೋದ ತಿಂಗಳು ಅಮೃತಸರದಿಂದ ನನ್ನ ಮಿತ್ರನ ಪತ್ರ ಬಂದಿರಲಿಲ್ಲವೇ?— ರಾಮತೀರ್ಥದ ಬಗ್ಗೆ ಬರೆದಿದ್ದರು— ಅವರ ಮತ್ತೊಂದು ಪತ್ರ ಬಂದಿದೆ. ಅಮೃತಸರದಲ್ಲಿಯ ಸುವರ್ಣಮಂದಿರ ಮತ್ತು ಅಲ್ಲಿ ತೀಕುರು ಆಚರಿಸುವ ದೀಪಾವಳಿಯ ಸಂಬಂಧವಾಗಿ ಬರೆದಿದ್ದಾರೆ. ಇವೊತ್ತು ಆಗಲೇ ವೇಳೆಯಾಗಿದೆ. ನಾಳಿನ ದಿವಸ ಆ ಪತ್ರ ಕೊಡುತ್ತೇನೆ.'

ಆ ನಂತರ ಜನವೆಲ್ಲ ಮನೆಯ ಕಡೆಗೆ ಹೊರಟರು.

[ಉಳಿದದ್ದು ಮುಂದಿನವಾರದಲ್ಲಿ].

ದಿನ ಬೆಳಿಗ್ಗೆ ಪರಿಚಾರಕ ಕೊಟ್ಟ ಉಪಾಹಾರವನ್ನೂ ಬೇಡವೆಂದು, ಹೇಳಿ ಹೊರಟವರು, ಮನೆಗೆ ಬಂದದ್ದು ಹೆಣವಾಗಿ. ಅದನ್ನು ಕಂಡು ನನ್ನ ಕರುಳು ಬೆಂದಿತು ಹೃದಯ ಒಡೆಯಿತು. ನನ್ನ ತಪ್ಪೋ, ಅವರ ತಪ್ಪೋ? ಸಾಯುವಾಗಲೂ ಶಾಂತಿಯಿಂದ ಪ್ರಾಣಬಿಡದೆ ತೊಳಲಿಸಿ ಪಾಪಿ. ಅದೆನಲ್ಲಾ ಎಂಬ ಅಳುಕು ಮೂಡಿತು. ಹೆಣ್ಣಿಗೆ ಸಹಜವಾದ ದುಃಖದ ರೂಪದಲ್ಲಿ ಆ ಅಳುಕು ಹೊರಹೊಮ್ಮಿತು, ಇಂದು ಆ ವರ್ಷ ಬಂದು "ಹಕ್ಕಿ ನಕ್ಕಿತು" ಎಂದಾಗ ನನಗೆ ಎಷ್ಟು ಕರುಣಾಧಾರವಾಯಿತು! ಪ್ರಾಣ ಬಿಡುವಾಗ ಅವರ ಮನಸ್ಸು ನೆಮ್ಮದಿಯಿಂದ ಇತ್ತು ಎಂದು ತಿಳಿಯಿತು. ತಪ್ಪು ತನ್ನದು ಎಂದು ತಿಳಿದು ಅದು ನನಗೆ ತಿಳಿಯಲಿ, ನಾನು ಅತಳ ಮೇಲೆ ಕೋಪಗೊಂಡಿಲ್ಲ ನನ್ನ ಮೇಲೆ ಅವಳು ಕೋಪಗೊಳ್ಳದಿರಲಿ. ತಪ್ಪು ನನ್ನದೆ ಅವರಿಂದ ಕ್ಷಮೆ ಬೇಡುತ್ತೇನೆ ಎಂಬ ಸಮಾಧಾನದಿಂದ ತಮ್ಮ ಬಾಳನ್ನು ಮುಗಿಸಿದ್ದರು. ಅಲ್ಲಿ ನಿಂತಿದ್ದ ಆ ಕುರುಬ ನನ್ನ ಭಾಗದ ದೈವವಲ್ಲವೆ ಮತ್ತೇನು?" ಕಥೆ ಮುಗಿಸಿದಾಗ ಅವಳ ಕಣ್ಣುಗಳಲ್ಲಿ ತೃಪ್ತತೆ ತುಂಬಿತ್ತು. ನೀರು ಎಂದೋ ಬತ್ತಿತ್ತು.

ತೀತ ಹಾಗೂ ವೈ-ಕೈ ನೋವಿನಿಂದ ಪಾರಾಗಲು ಹೊಸ ಪ್ರಭಾವೀ ಉಪಾಯ

"ಸಾಲಿನ್" (ಜೋಪಂದದಂತೆ)

ಸಾಲಿನ್‌ದ ನಾಲ್ಕು ಗುಳಿಗೆಗಳನ್ನು ಬಿಸಿನೀರಿನಲ್ಲಿ ಕರಗಿಸಿ ಮುಂಜಾನೆ ಒಮ್ಮೆ, ರಾತ್ರಿ ಹುಲಗುವಾಗ ಒಮ್ಮೆ ಸೇವಿಸಿರಿ. ಇದು ವೈಯಲ್ಲಿ ಸೇರಿಕೊಂಡ ಜಾರ್ಶದನ್ನು ಅರಗಿಸಿ ಅಶಕ್ತತೆ, ತೀನು-ನೆಗಡಿ, ವೈಸಡುಳ, ತಲೆನೋವು, ಕುಣ್ಣು-ಮೂಗುಗಳಿಂದ ನೀರಿಳಿಯುವದು, ಗಂಟಲು ಊದಿಕೊಳ್ಳುವದು ಮುಂತಾದ ವಿಕಾರಗಳನ್ನು ತಕ್ಷಣ ನಿವಾರಿಸುತ್ತದೆ.

ಕೆಮ್ಮು, ಹಾಗೂ ತೀತ ವಿಕಾರಗಳನ್ನು ಈ ಪ್ರಭಾವೀ ಉಪಾಯದಿಂದ ನೀವು ಸುಲಭವಾಗಿ ಪ್ರತಿಭಟಿಸಬಲ್ಲಿರಿ.

ಹಂದರ್ದ್ ದನಾಖಾನಾ
(ಟ್ರಸ್ಟ್) ದಿಲ್ಲಿ

Hamdard
DAWAKHANA [TRUST] DELHI

ಜೋಡು

(ಲಘುಪ್ರಬಂಧ)

ಶ್ರೀ. ಎಸ್. ಎಸ್. ಗದಗಕರ, ಬಿ ಎ. ಧಾರವಾಡ.

ಎತ್ತಾಗಿ ತೊತ್ತಾಗಿ! ಹಿತ್ತಲದ ಗಿಡವಾಗಿ!
ಮುತ್ತೈದಾದಾ ಕೆರವಾಗಿ ಗುರುವಿನಾ!
ಹತ್ತಿರರು ಎಂದ ಸರ್ವಜ್ಞ!

ಎಂಬ ಶ್ರದ್ಧಾಪರಿಪೂರಿತ ತ್ರಿಪದಿಯನ್ನೋದುವಾಗ, ಗುರುವಿನ ಮುಹತಿಯ ಕಲ್ಪನೆ ನಮಗೆ ಸ್ಪುಟವಾಗಿ ಆಗಿಯೇ ತೀರುವುದು. ಹೇಗಾದರೂ ಮಾಡಿ ಸೇವೆಯು ಋಣ ತೀರಿಸಬೇಕೆಂಬುದು ಎಂತಹ ಉದಾತ್ತ ಕಲ್ಪನೆ! ದಾಸಾನುದಾಸನಾಗಿ, ಎಲ್ಲರಿಗೂ ಉಪಯುಕ್ತವೆನಿಸುವ ಹಿತ್ತಲದ ಗಿಡವಾಗಿ, 'ಕೊನೆಗೆ ಇವೆರಡೂ ಸಾಧಿಸದಿದ್ದರೂ ಜೋಡಾಗಿಯಾದರೂ ಗುರುವಿನ ಸಂಪರ್ಕ ತಪ್ಪಿಸಿಕೊಳ್ಳಬಾರದಂತೆ! 'ಗುರುವಿನ ಗುಲಾಮನಾಗುವ ತನಕ ದೊರೆಯುದಣ್ಣ ಮುಕ್ತಿ' ಎಂಬ ತತ್ಸದೃಶ್ಯ ದಾಸರ ಮಾರ್ಮಿಕ ಉಕ್ತಿಯಲ್ಲಿ ಕೂಡ—ಜೋಡಿನ ಪ್ರಸ್ತಾಪ ನೇರವಾಗಿ ಬಾರದಿದ್ದರೂ ಮುಕ್ತಿ ಸಾಧನೆಗೆ ಗುರು ಕೈದೀಪ, ಕೈಗೋಲು ಎಂದಾಯಿತು. ಹೀಗಿಯೇ ಸನ್ಮಾರ್ಗದಲ್ಲಿ ಜೋಡಿನ ಸ್ಥಾನಮಾನ ವಿಶಿಷ್ಟ ಎಂದರಿತು ನಾವು ಸುಮ್ಮನಾಗಕೂಡದು. ಯಾಕೆಂದರೆ ಇದೇ ಸರ್ವಜ್ಞನ 'ಬರೆಯುದಲೆ ಬರುವವನ ಬರೆಯುದಲೆ ಓದುವನ ಬರಗಾಲಿನಿಂದ ನಡೆವವನ ಕರೆತಂದು ಕೆರದಿ ಹೊಡೆ' ಎಂಬ ಅಶಯದ ಸಂಕ್ತಿಗಳಲ್ಲಿ ಕತೋಗತೆ ಎನಿತು ಎಂದು ಮನವರಿಕೆಯಾಗದೇ ಹೋಗದು. ಕೊಂಚ ಕೂಲಂಕಷವಾಗಿ ಸರ್ವಜ್ಞನ ಈ ನುಡಿಯನ್ನು ಹಿಂದಿ ಹಿಳದು ನೋಡುವಾ : ಔತಣವಿಲ್ಲದೆ ಬಂದು ಹೋಗುವವನಿಗೆ ಶಾಸನವು ಯುಕ್ತವೇನೊ ಸೈ; ಉದ್ದಕ್ಕೂ ಓದಿ ಎಂದೂ ಬರೆಯುವ ಚಟ ಕೆಡವಿಕೊಳ್ಳದಿದ್ದರೆ ಶಿಕ್ಷಣದ ಧ್ಯೇಯಕ್ಕೆ ಚ್ಯುತಿಯಾಗುವುದೂ ಖಂಡಿತ. ಆದರೆ ಬಡತನದ ಬೇಗೆಯಲ್ಲಿ ಕಡುನೊಂದು ಬೇಗೆ ಕಾಲ ಜಾಕಬೇಕೆಂದು ಹೊಳೆಯದೇ ಹೇಗೊ ಜೀವನರಥ ನೂಕಿಸಿಕೊಂಡು ಸಾಗಿದ ಕಡು ದರಿದ್ರನಿಗೆ, ಕಾಲಲ್ಲಿ ಜೋಡಿಲ್ಲವೆಂಬುದು ಪ್ರಮಾದವೆ? ಅದಕ್ಕಾಗಿ ಅದರಿಂದಲೇ ಅವನಿಗೆ ಪೂಜೆಯೆ? ಎಂತಹ ಅಸಮಂಜಸ ಶಿಕ್ಷೆ! ತರ್ಕಶಾಸ್ತ್ರಕ್ಕೆ, ಸಮಾಜನೀತಿಗೆ ಹೊರತಿದು! ಸರ್ವಜ್ಞನಂತಹ ಮಹಾನುಭಾವನ ಶಿಕ್ಷಾರೀತಿಯೆ ಹೀಗೇಕಾಯಿತೆಂಬುದು ನಿಜವಾಗಿಯೂ ವಾದಗ್ರಸ್ತ ವಿಷಯ. ಬಹುತರವಾಗಿ ಯಾವನೋ ಒಬ್ಬ ವಿಲಾಸೀ ಕವಿಯು ತನ್ನ ಬಾಯಿತಿಂಡಿ ಉಜ್ವಲ (?) ಪಾಂಡಿತ್ಯ ನಿದರ್ಶನಕ್ಕೆ ಹೀಗೆ ಉದ್ಗಾರ ತೆಗೆದಿರಬಹುದೆ? ಅಂತೂ ಇದೊಂದು ಪ್ರಕ್ಷಿಪ್ತಶ್ಲೋಕವೇ ಇದ್ದೀತೆಂಬುದು ನಿರ್ವಿವಾದ.

ಸಂಶೋಧಕರ ವಿಷಯವು ಹೇಗಿದ್ದರೂ ಜೋಡಿನ ಪ್ರಪಂಚವು ವಾಸ್ತವಜೀವನದಲ್ಲಿ ಸಾಕಷ್ಟು ವಿಸ್ತೃತವಾಗಿದೆ, ವೈವಿಧ್ಯ ಪೂರ್ಣವಾಗಿದೆ. ಒಂಟಿಬಾರು, ಜೋಡುಬಾರು, ಕತ್ರಿಯ ಬಾರು, ಕಿಟಕಿಯ ಜಾಳಿಗೆ ಹೋಲುವ ಮಾಟ—ಎಷ್ಟೋ ಇವೆ. ಜಾಳಿಗೆ ಎಂದೊಡನೆ ಡಾಕ್ಟರ ಜಾನ್ಸನ್ ಮಹಾನುಭವರ 'a net is a reticulated fabric decussated at regular intervals.' ಎಂಬ ವ್ಯಾಖ್ಯೆಯನ್ನು ನೆನಪು ಮಾಡಿಕೊಳ್ಳಬೇಡಿ ಮತ್ತೆ! ಜೋಡೆಂಬುದು ಅಷ್ಟೊಂದು ಲೋಕಪ್ರಿಯ ಶಬ್ದವಾಗಿರದಿದ್ದರೂ, ಚಪ್ಪಲ್ ಎಂಬ ಮರಾಠೀ ಪದಪ್ರಯೋಗವು ತೀರ ಸಾಮಾನ್ಯರಿಗೆ ಸಹಜವಾಗಿ ಹೊಳೆಯುವುದು. ಭಲೆ ಭಾಷಾಬಾಂಧವ್ಯವೆ! ಸರಿ, ಕೊಂಚ ಸುಧಾರಿಸಿದ ಜೋಡಿನ ಬಳಗವೆಂದರೆ ಸ್ಲಿಪರ್ಸ್, ಚಡಾವು, ಕೂಜ್, ಬೂಟ್ಸ್ ಎಂಬುವು. ಕಡಾವಿಗೆ—ಕಟ್ಟಿಗೆಯವು—ಸರ್ವಸಂಗ ಪರಿತ್ಯಾಗಮಾಡಿ ಹೊರಟ ಸಂನ್ಯಾಸಿಗಳಿಗೆ ಶೋಭಿಸುವುವೆಂದರೂ, ನವನಾಗರಿಕತೆಯು ಈ ನಮ್ಮ ಮನ್ವಂತರದಲ್ಲಿ ಅವಕ್ಕೇ ಹೊಸರೂಪ—ಹೊಸ ಕಳೆ ಹೊಸ ಮಾಟ ಬಂದು 'ಸ್ಯಾಂಡಲ್ಸ್' ಎಂಬ ಅಭಿದಾನ ತಳೆದು ಸರ್ವಂತರ್ಯಾಮಿಯಾಗಿನೆ! ಎಂತಹ ಅಭದ್ರನುಡಿ!—ಎಂದು ಬೆಚ್ಚಿ ಬೀಳಬೇಡಿ. ದೇವನಾಗರೀ ನುಡಿಯನ್ನು ನಿತ್ಯವ್ಯವಹಾರದಲ್ಲಿ ಸಯುಕ್ತಿಕವಾಗಿ ಬಳಸಿದರೆ ಪ್ರಮಾದವೇಕಾಗಬೇಕು? 'Judge by the results and never by the standarcs' ಎಂಬುದು ಆಂಗ್ಲ ವಿಮರ್ಶಕರ ವಿಮರ್ಶಾತತ್ತ್ವವಾಗಿಲ್ಲವೆ? ಈ ಪ್ರಸಂಗದಲ್ಲೇಕೆ ಅನ್ವಯಿಸಬಾರದಿದು? ತನ್ನ ಪೈಲ್ವಾನರವು ಹಾಗೂ ಹಳ್ಳಿ ಬಂಧುಗಳ ಜೋಡುಗಳ ಜಿರಿಮಿರಿ ಸದ್ದು ಮಾಡಿ—ಅತಿ ಭಾರವಾಗಿ ಹೊರಗೆ ತೋರಿದರೂ—ಯಾರ ಸಲುವಾಗಿ ಅವುಗಳ ನಿರ್ಮಿತಿಯಾಗಿದೆಯೋ ಅವನಿಗೆ ವಿಶೇಷ ಶೋಭೆ ತರುವುದಲ್ಲದೆ ಚಿರಕಾಲ ತಾಳುವುವು—ಉಳಿದುವುಗಳಿಗಿಂತ ಹೆಚ್ಚು ಕಾಲವಷ್ಟೆ! ಸಮಗ್ರ ಜೀವಮಾನದಲ್ಲಿ ಒಂದೇ ಜೋಡೆಂಬರ್ಥದಲ್ಲಲ್ಲ! ಇವೆಲ್ಲ ಮರೆತರೂ ಹೆಂಗಳೆಯರ ಜೋಡಿಗೆ ಜೋಡೆಂದು ಹೆಸರಿಸಲೂ ಹೆದರಿಕೆಯುಂಟಾಗುವಷ್ಟು ನಯ ನಾಜೂಕು ಅಲ್ಲಿ ನೆಲಸಿರುವುವು ಏನು ನಕ್ಷೆ, ಜರ ಮಾರ್ದವ! ಪಾಶ್ಚಿಮಾತ್ಯ ಮಹಿಳೆಯರ ಏರುಹಿಂಬಡದ ಬೂಟು ಹಾಕಿಕೊಂಡು ನಾವು ನಡೆಯುವುದೆಂದರೆ ಡೊಂಬರ ಕಸರತ್ತೇ ಮಾಡಿದಷ್ಟು ಪರಿಶ್ರಮವಾಗುವುದು. ಏನೇ ಆಗಲಿ, ಯಾವ ಮಾನದಿಂದ ಯಾವ ವಿಶದರ್ಶಿಯಾಗಲಿ, ಜೋಡಿನ ಉದ್ದೇಶ 'ಪಾದರಕ್ಷಣೆ' ಎಂಬಲ್ಲಿ ಸಂದೇಹವಿಲ್ಲ ಪೂರ್ಣ ರಕ್ಷಿಸುವುದು ಅವುಗಳಿಂದ ಹಲವೆಡೆ ಸಾಧಿಸದಿದ್ದರೂ, ಪಾದರಕ್ಷೆ ಎಂಬ ಹೆಸರಿಗೆ ಮಾತ್ರ ಅರ್ಹತೆ ಒಂದುಂಟು ಸುಳ್ಳೆ?

ಮನುಷ್ಯನು ಜೀವಮಾನದಲ್ಲಿ ಎಷ್ಟೇ ದುಂದುಗಾರನಾಗಿದ್ದರೂ ಜೋಡಿನ ವಿಷಯದಲ್ಲಿ ಅತಿ ವಾತ್ಸಲ್ಯಪೂರ್ಣನಾಗಿರುವ; ಅನೇಕ ಜಿಪುಣ ಜೀವನನೂ ಆಗಿರುವ. ಎಷ್ಟು ದಿವಸ ಅದನ್ನು ತಡೆಸಿದರೂ ತೃಪ್ತಿಗೆ ಕೊನೆ ಇಲ್ಲ. ಒಂದು ಜೋಡು ಕೆರವಿನ ಸದುಪಯೋಗ (?) ಮಾಡಿಕೊಳ್ಳಲು ಹವ್ಯಾಸಬಟ್ಟು ಅದಕ್ಕೇರಿಗಾಗಿ ಮೂರು ಹೊಸ ಜೋಡಿನ ಹಣ ಸುರಿಯುವನೆಂದರೆ ಅತಿಶಯೋಕ್ತಿಯ ಆರೋಪವು ಎಷ್ಟೂ ಬರುವಂತಿಲ್ಲ. ನಾಲ್ಕು ಬೀದಿ ಕೂಡಿದಲ್ಲಿ ಚೆಲ್ಲಿಕೊಟ್ಟ ಹಣದ್ದೂ ಕಚ್ಚಿಕೊಂಡು ಹೋಗಲು ಮನಸ್ಸು ಮಾಡದ ಸ್ಥಿತಿಯುಂಟಾದಾಗ ಮಾತ್ರ ಅವನ್ನು ಅವನು ಚಿಲ್ಲಿಕೊಡಬಹುದಷ್ಟೆ!

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ
● ಉತ್ತಮ ಚಿತ್ರಗಳ ಮೂಲಕ
● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ವಿವಿಧ ಬಗೆಯ ಜೋಡಿನ ಸಮ್ಮೇಲನ—ಹಂಕಥೆ, ಕೀರ್ತನ—ಮುಂದಿರದ ಹೊಗೆ, ಉಪಹಾರಗೃಹ, ಸಂಗೀತಕಚೇರಿ ಸಾರ್ವಜನಿಕ ಭಾಷಣಗಳ ಎಡೆ ಯಲ್ಲಿ ನೆರೆಯುವುದುಂಟು. ತಮಗಿಲ್ಲವೆಂದು—ಇದ್ದುವಾದರೆ ಹಳೆಯವಿವೆಯೆಂದು—ಹೊಸವನ್ನು ಹೊರಕಿಸಲು ಅಪೇಕ್ಷೆ ಪಡುವವರು ಕಾಲಕಾಲಕ್ಕೆ ಈ ಸ್ಥಳಗಳನ್ನು ವಿಶ್ವಾಸದ ಸೋಗಿನಿಂದ ಸಂದರ್ಶಿಸುವರು. ಅಕಸ್ಮಾತ್ ಯಾರ ಜೋಡೂ ಒಂದು ದಿನಸಾರ್ವಜನಿಕ ಕಾರ್ಯಕ್ರಮದಲ್ಲಿ ಕಳವು ಆಗದಿದ್ದರೆ, ವಿಚಿತ್ರವಾಗಿ ಬದಲಾಗಿ ಇಜ್ಜೋಡಾಗುವ ನಗೆ ಬೀಡಿನ ಸಂದರ್ಭವಂತೂ ಉಂಟಾಗುವುದು ಅಸಹಜವಲ್ಲ.

ಇತಹ ಹೊಸ ಜೋಡುಗಳನ್ನು ಹಾಕಿಕೊಂಡು ಅಪೂರ್ವ ಒನಪು ಒಯ್ಯಾರದಿಂದ—ಗಂತಕರೂ ಸಹ-ಸಾರ್ವಜನಿಕ ಕಾರ್ಯಕಲಾಪಗಳಿಗೆ ಹೋಗಿ, ಬರಲು ಮಾಡಿಕೊಳ್ಳುವ ಇಲ್ಲವೆ ಕಳೆದುಕೊಳ್ಳುವ ಮೊದಲು, ಅವುಗಳಮೇಲೆ ಅವರದೆಷ್ಟು ಮಮತೆ! ಜೋಡಿದ್ದರೂ ಅದಕ್ಕೆ ಎಂತಹ ಮಾನ್ಯಸ್ಥಾನ! ಚಿಕ್ಕಮಕ್ಕಳ ಆಟಿಗೆಗಳಿಗಿಂತಲೂ ಅವು ಮೋಹಕವಾಗಿ ಅವರಿಗೆ ಪರಿಣಮಿಸಿರುತ್ತವೆ. ನೆಟ್ಟ ನಡೆಯಲು ಅವನ್ನು ಕೊಂಡದ್ದೆಂಬ ಅರಿವೇ ಆಗ ಆಗುವುದಿಲ್ಲ. ಹೆಂಡತಿ ಮಕ್ಕಳೊಡನೆ—ಇವನ್ನು ಹಿಡಿದದ್ದಕ್ಕಾಗಿ—ಜಗಳ. ಕೈಹಿಡಿದವಳಿಗೆ ಎಲ್ಲಬಗೆಯ ಉಪದ್ರವ ಉದ್ಭವಿಸುವುದು ಈ ಪ್ರಸಂಗದಲ್ಲಿ! ಬಹುತರವಾಗಿ ಸರಕಾರದ ಕಾನೂನುಗಳೇ ಶಿಥಿಲವಾಗಿಲ್ಲದಿದ್ದುದು ಇದಕ್ಕೆ ಕಕ್ಕ ಕಾರಣ. ಹೊಸಜೋಡು ಇತ್ತು ಪ್ರಾರಂಭದ ದಿಕೆಯಲ್ಲಿ ಎಷ್ಟೇ ನೋವು ಗಾಯ ಉಂಟುಮಾಡಿ-' We rer alone knows where the shoe pinces' ಎಂಬ ಲೋಕೋಕ್ತಿಗೆ ಎಡೆ ಕಲ್ಪಿಸಿಕೊಟ್ಟರೂ, ಅದರ ವಿಷಯಕ್ಕೆ ಅವನ ಪ್ರೇಮಾಮೃತಕ್ಕೆ ಕೊರತೆ ಆಗದಿದ್ದುದು ನಿಜವಾಗಿಯೂ ಸೋಜಿಗದ ಸಂಗತಿಯೆ! ಅಕಸ್ಮಾತ್ತಾಗಿ ದೈವದುರ್ವಿಪಾಕದಿಂದ ಇವು ಕಳೆದು ಹೋದರೆ, ಮನೆಯಲ್ಲಿ ಸಹಾಸಭೆ ನಡೆದು ಉತ್ಪಾತವಾಗುವುದು. ನಿತ್ಯ ಜೀವನದಲ್ಲಿ ಭೂತ-ಭವಿಷ್ಯತ್ತಿನ ನಡುವೆ ಒಂದು ದೊಡ್ಡಕೊಳ್ಳವೇ ನಿರ್ಮಿತವಾದಂತಾಗಿ, ಅನುಭವ ಕೋಲಾಹಲವೇಳುವುದು. ಎಲ್ಲೆಲ್ಲಿ ಇದರ ಪರಿಣಾಮವೇನಾಗುವುದೊ ಭಗವಂತನೇ ಬಲ್ಲ!

ಜೋಡು ಹಳೆಯವಿರಲಿ, ಹೊಸವಿರಲಿ, ನಿತ್ಯಬಳಕೆಗೆ ಅನುಗುಣವೆನಿಸಿ ವ್ಯವಹಾರ ಸಾಗಿದಾಗ ಒನ್ಮೆ ಮಹತ್ತ್ವದ ಕಾರ್ಯಕ್ಕೆ ಸನ್ನದ್ಧರಾಗಿ ನಾಗರಿಕರು ಹೊರಟಾಗ, ಒಂದು ಅಗುಷ್ಯ ಕೆತ್ತಿ ಬಂದರೆ ಎಂತಹ ತೊಡಕು! ವಿದ್ಯಾರ್ಥಿಗೆ ಶಾಲೆಯಲ್ಲಿ ಕಡವಾದುದಕ್ಕೆ ಪೂಜೆ, ನಿರುದ್ಯೋಗಿಯ ನೌಕರಿಯ ಹಂಬಲಕ್ಕೆ ತಿಲಾಂಜಲಿ (ಕ್ಷಣಿಕ!) ನೌಕರನಿಗೆ ಮೇಲಿನವರಿಂದ ಕೀಟಕ-ಕೀಟಲೆ! ಇನ್ನೂ ಯಾರಿಗೆ ಏನೇನೋ! ಹೀಗೆ ಅನಿವಾರ್ಯವಾಗಿ ಪರಾಣಮಿಸಿ ಜೀವನದುದ್ದಕ್ಕೂ ಒಡೆಯನಿಗಾಗಿ ಶ್ರಮಿಸುವ ಧ್ಯೇಯದಿಂದ ಪ್ರೇರಿತವಾದ ಜೋಡಿಗೆ ಉಡುಗೊರೆ ಎಂದರೆ ಕಸಬರಿಗೆಯದೆ ಮೂಲೆ. ಅದಕ್ಕೂ ಕೀಳು ಸ್ಥಳವೆಂದರೂ ಪಾಪವಿಲ್ಲ ಮನುಷ್ಯನ ಕೃತಜ್ಞತಾಬುದ್ಧಿಗೆ ಇದೊಂದು ಕಾಲಕ್ಯಾಯವಾದ ನಿದರ್ಶನವಲ್ಲವೆ?

ಚಪ್ಪಲ್ ಇಲ್ಲನೇ ಜೋಡಿನ ಮನೋರಂಜಕ ಸ್ವರೂಪ ಕಾಣಬೇಕ್ಕಾದರೆ, ಇಂದು ನಾವು ಭಾರತೀಯ ಚಿತ್ರಪಟಗಳನ್ನು ಅದರಲ್ಲಿಯೂ ಪೌರಾಣಿಕ, ಐತಿಹಾಸಿಕ ಚಿತ್ರಗಳನ್ನು—ಹಗಲಿನಲ್ಲಿ ದೀವಟಿಗೆ ಹಿಡಿದುಕೊಂಡಷ್ಟು ಸೂಕ್ಷ್ಮವಾಗಿ ನಿರುಕಿಸಬೇಕು. ಮಹಾಭಾರತ ರಾಮಾಯಣಗಳ ಚಿತ್ರಗಳಲ್ಲಿ ಕೃಷ್ಣಾರ್ಜುನ, ಕರ್ಣ, ದುರ್ಯೋಧನ ದುಶ್ಯಾಸನರ ಪಾದರಕ್ಷೆಗಳಿಗೆ ಸಂಪೂರ್ಣ ಇಪ್ಪತ್ತನೆಯ ಶತಮಾನದ ಛಾಯೆ ಇಲ್ಲವೇ ರುಳಕು ಕಾಡುಬಾರುವುದುಂಟು! ದ್ರೌಪದಿ ಸೀತಾ ದಮಯಂತಿಯರಂತೂ—ಉತ್ಕೃಷ್ಟಾವಸ್ಥೆಯಲ್ಲಿ—ನಿನೇಮಾ ತಾರೆಯರ (ಹಾಲಿವುಡ್?) ವೇಷ ಭೂಷಣಗಳನ್ನು ನೆನಪುತಾಡಿಕೊಡುವುರಲ್ಲವೆ? ಇದರಲ್ಲಿ ದಿಗ್ದರ್ಶಕರು ಪೂರ್ಣ ಹೊಣೆಗಾರರಲ್ಲದಿದ್ದರೂ, ಮನ್ವಂತರದ ಪ್ರಗತಿಯಲ್ಲಿಯೇ ಅಷ್ಟೊಂದು ರಭಸ ವೈಗೂಡಿಹೋಗಿದೆ. ಯಾರೇನು ಮಾಡುವುದು?

ಕೊನೆಗೆ ಜೋಡಿನ ಪೌರಾಣಿಕ ಪಾವಿತ್ರ್ಯ ಅರಿಯದಿದ್ದರೆ ಈ ಪ್ರಬಂಧದ ಉದ್ದೇಶವೇ ಪರಿಪೂರ್ಣವಾಗದು. ಶ್ರೀರಾಮನು ತಂದೆಯ ಆಜ್ಞೆಗನುಗುಣವಾಗಿ ಹದಿನಾಲ್ಕು ವರ್ಷ ವನವಾಸ ಕೈಕೊಂಡನಷ್ಟೆ! ಪಶ್ಚಾತ್ತಾಪದಿಂದ ಕೈಕೇಯಿಯ ಹೃದಯವಾದರೂ ಬೆಂದ್ಹೋಯಿತಲ್ಲ ತಾನೇ ಅವನನ್ನಟ್ಟಿದ್ದರೂ! ಎರಡವೇಲೆ ರಾಮಪ್ರಿಯರಂದ ಉಳಿದ ಅಯೋಧ್ಯಾ ನಿವಾಸಿಗಳ ಪರಿಸ್ಥಿತಿ ಎಷ್ಟು ಚಿಂತಾಜನಕವಾಗಿರಬೇಕು! ವಿಯೋಗ ವ್ಯಥೆಯಿಂದ ಪ್ರಜೆಯು ನಿರಂತರ ಕಣ್ಣೀರಿಟ್ಟರು, ವಿಧಿಯ ಕರುಣೆಗೆ ನೊರೆ ಇಟ್ಟರು. ಇದರ ಪರಿಹಾರಕ್ಕಾಗಿಯೇ ಮುಂದೆ ಭ್ರಾತೃವತ್ಸಲ ಭರತ, ರಾಮನಿಂದ ಪಾದುಕೆ ಪಡೆದುಕೊಂಡು ಬಂದ. ಇಂತು ರಾಮರಾಜ್ಯ-ಸಿರಿಸುಖವಾಗರದ ಪ್ರತೀಕ-ಪಾದುಕೆಗಳಿಂದಲೇ ಭೂಲೋಕದಲ್ಲಿ ಅಡಿಯಿಟ್ಟತೆಂದಮೇಲೆ ಕಲಿಯುಗದಲ್ಲಿ ಅದರ ಬಳಗದ ಮಹಿಮೆ ಬಣ್ಣಿಸುವುದು ಪಲವುಂ ತಾಲಗೆಯ ಆದಿಶೇಷನಿಗೇ ಸಾಧ್ಯ! ನಿಮ್ಮ ಮಾನವರ ಪಾಡೇನು? ಅಂತೇ ಇದೂ ನಿರಾಮ!

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬನ್ನವಿಸಿಕೊಂಡಂತೆ 'ಬಗೆಹರಿಯದ ಬಾಯಿಲೆಕ್ಕ' ಎಂಬ ಸಣ್ಣಕತೆಯನ್ನು ಕುರಿತು ೬ ಜನರಿಂದಲೂ, 'ಶಿವರಾತ್ರಿ' ಶ್ರಾವ್ಯರೂಪಕವನ್ನು ಕುರಿತು ಇಬ್ಬರಿಂದಲೂ ವಿಮರ್ಶೆಗಳು ಬಂದಿವೆ. ವಿಮರ್ಶಕರ ವಿವರಣೆ ಹೀಗಿದೆ:

'ಬಗೆಹರಿಯದ ಬಾಯಿಲೆಕ್ಕ' ಕತೆಯ ವಿಮರ್ಶಕರು:

೧. ಶ್ರೀ. ಆರ್. ಜಿ. ಕುಲಕರ್ಣಿ ಬಿ ಎ. (ಆನರ್ಸ್), ಧಾರವಾಡ. ೨. ಶ್ರೀ. ವಾಸುದೇವ ರಾಣೇ, ಕುಮಟಾ. ೩. ಶ್ರೀ. ಎಲ್. ಎ. ಪೈ. ಪ್ರಾಸಾಖಾಲ ಶಾಲೆ, ಸೋಂದಾ, ೪. ಶ್ರೀ. ಐ ಎಸ್. ಮಂಟಾ, ರಾಯಬಾಗ ವಿದ್ಯಾಲಯ ರಾಯಬಾಗ. ೫. ಶ್ರೀ. ಎಂ. ಎಫ್. ಬಸರಕೋಡ, ಬಿ. ಎ ಹುಬ್ಬಳ್ಳಿ. ೬. ಶ್ರೀ. ಕೆ. ಎಸ್. ಶರ್ಮಾ, ವಿದ್ವಾನ್, ವಾಣೀಮಂದಿರಂ, ಕಾಸರಗೋಡು.

'ಶಿವರಾತ್ರಿ' ರೂಪಕದ ವಿಮರ್ಶಕರು:

೧. ಶ್ರೀ. ಮಹಾಬಲೇಶ್ವರ ಗ. ಬರವಣಿ, ಮಲಾಡ—ಮುಂಬಯಿ. ೨. ಶ್ರೀ. ಕೆ. ಎಸ್. ಶರ್ಮಾ, ವಿದ್ವಾನ್, ವಾಣೀಮಂದಿರಂ, ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಮಂಡಲಿಯವರೇ ನೋಡಿ ನಿರ್ಣಯ ಕೊಟ್ಟಿದ್ದಾರೆ. 'ಬಗೆಹರಿಯದ ಬಾಯಿಲೆಕ್ಕ' ಕತೆಯ ವಿಮರ್ಶೆಗಳಲ್ಲಿ ಶ್ರೀ. ಆರ್. ಜಿ. ಕುಲಕರ್ಣಿ ಮತ್ತು ಶ್ರೀ. ಕೆ. ಎಸ್. ಶರ್ಮಾ ಅವರವು ಅತ್ಯುತ್ತಮವಾಗಿವೆ. ಶ್ರೀ. ಎಲ್. ಎ. ಪೈ ಅವರ ವಿಮರ್ಶೆ ಉತ್ತಮವಾಗಿದೆ. ಮಿಕ್ಕುವು ಚೆನ್ನಾಗಿವೆ. (ಯಾವ ವಿಮರ್ಶೆಯೂ ಸಾಮಾನ್ಯವಾಗಿರದಿರುವುದು ಈ ಸಲದ ವೈಲಕ್ಷಣದ ವಿಶೇಷ.)

'ಶಿವರಾತ್ರಿ'ಯ ಬಗೆಗೆ ಬರೆದ ಇಬ್ಬರ ವಿಮರ್ಶೆಗಳೂ ವಿಚಾರಪೂರ್ಣವಾಗಿವೆ. ಶ್ರೀ. ಮಹಾಬಲೇಶ್ವರ ಗ. ಬರವಣಿಯವರು, ಈ ರೂಪಕದ ಕುಂದು-ಕೊರತೆಗಳನ್ನೇ ಎತ್ತಿಕೊಂಡು, ಸಪ್ರಮಾಣವಾಗಿ ಟೀಕಿಸುವ ಪ್ರಯತ್ನ ಮಾಡಿದ್ದಾರೆ.

ಮುಂದಿನ ಸಂಚಿಕೆಯ ವಿಮರ್ಶೆಯ ಲೇಖನಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ರಂಗಿ' ಎಂಬ ಸಣ್ಣಕತೆಯನ್ನಾಗಲಿ, 'ಮಹಾಮೂರ್ಖರು' ಎಂಬ ವಿನೋದ ರೂಪಕವನ್ನಾಗಲಿ, ವಿಮರ್ಶೆಗೆ ತೆಗೆದುಕೊಳ್ಳಬೇಕು. ಪರೀಕ್ಷೆಗಳು ಮುಗಿದು ಕಾಲೇಜುಗಳಿಗೆ ಬಿಡುವಾಗಿದೆ. ಈ ಸಂಧಿಯನ್ನು ಉಪಯೋಗ ಮಾಡಿಕೊಂಡು, ಹೆಚ್ಚು ಜನರು ಲೇಖನದಲ್ಲಿ ಭಾಗವಹಿಸಬೇಕು.

—ಸಂಪಾದಕ

ಬಗೆಹರಿಯದ ಬಾಯಿಲೆಕ್ಕ

(ಸಣ್ಣ ಕತೆಯ ವಿಮರ್ಶೆ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) ಬಿ. ಎ. ಆನರ್ಸ್.

ಸುಪ್ತಚೇತನವು ಮನುಷ್ಯನಿಗೆ ಪ್ರತಿನಿಮಿಷವೂ ಒಂದೊಂದು ಬಾಯಿಲೆಕ್ಕ ಹಾಕುತ್ತಿರುತ್ತದೆ. ಆ ಬಾಯಿಲೆಕ್ಕ ಬಿಡಿಸುವುದರಲ್ಲಿ ಆತನು ಹಗಲಿರುಳೂ ಮಗ್ನನಾಗಿರುತ್ತಾನೆ. ಆದರೆ ಲೆಕ್ಕ ತಪ್ಪುತ್ತದೆ. ಪುನಃ ಪುನಃ ಗುಣಾಕಾರ ಭಾಗಾಕಾರ ಮಾಡುತ್ತಾನೆ. ಆದರೂ ತಾಳೆ ತಪ್ಪುತ್ತದೆ. ಶ್ರೀ. ವೆಂ. ಮು. ಹೋಕಿಯವರು ತಮ್ಮ ಸಣ್ಣ ಕತೆಯಲ್ಲಿ ಇಂಥದೊಂದು "ಬಗೆಹರಿಯದ ಬಾಯಿಲೆಕ್ಕ"ವನ್ನು ಬಿಡಿಸಲು ಪ್ರಯತ್ನಿಸಿದ್ದಾರೆ. ತಾಯ್ತನಕ್ಕಾಗಿ ಹಂಬಲಿಸಿ ಮೂಢ ಸಂಕಟದಿಂದ ಕೊರಗುವ ಒಂದು ಹೆಣ್ಣುಜೀವದ ಸುಪ್ತಚೇತನದ

ಗೂಢಾಗಾರದಲ್ಲಿ ಪಂಜು ಹಚ್ಚಿದ್ದಾರೆ. ತಾಯ್ತನದ ಹಂಬಲು ಹೆಣ್ಣು ಜೀವನವನ್ನು ಬೆಳಗುವ ಚಂದ್ರಕಾಂತಿಯೂ ಆಹುದು; ಅವಳ ಅಂತರಂಗವನ್ನೆಲ್ಲ ವಿಕೃತಗೊಳಿಸುವ ಕಾರಿರುಳೂ ಆಹುದು. ಪ್ರಸ್ತುತ ಕತೆಯಲ್ಲಿ ಶಾರದಕ್ಕನ ಅಂತರಂಗದಲ್ಲಿ ಅವಳ ತಾಯ್ತನದ ಹಂಬಲು ಅಸೂಯೆ, ಅತೃಪ್ತಿ-ಅಸಹಾಯತೆಗಳ ವಿಕೃತ ಕಗ್ಗತ್ತಲನ್ನು ತುಂಬಿದೆ. ಅವಳು ತನ್ನ ಗಂಡನ ದ್ವಿತೀಯ ಪತ್ನಿ. ಸವತಿ ತೀರಿಹೋಗಿದ್ದಾಳೆ. ಆದರೆ ಸವತಿಯ ಮಗಳು ಸುಮತಿ ಬಸುರಿಯಾಗಿ ತವರುಮನೆಗೆ ಬಂದಿದ್ದಾಳೆ. ಆ ಸಣ್ಣ ಹೆಣ್ಣು ಮಗುವಿಗೊಂದು ಮಗುವಾಗಲಿದೆ! ಆದರೆ ತನಗೆ....? ಸುಮತಿಗೆ ತಾನು ತಾಯಿ!... ಎಂಥ ತಾಯಿ? "ಪ್ರಸವವೇದನೆ ಇಲ್ಲದೆ" ಅವಳನ್ನು ಹೆತ್ತಿದ್ದಾಳೆ! ಇದೀಗ ತಾನು ಅಜ್ಜಿಯೂ ಆಗಬೇಕು. ತನ್ನ ಕರುಳಿನಿಂದೊಂದು ಕೂಸು ಬಂದಿಲ್ಲ; ತನಗೆ "ಅವ್ವಾ...." ಎಂದು ಕರೆಯುವರಿಲ್ಲ. ಆದರೂ ತಾನೆ ತಾಯಿ! ಅಷ್ಟೇ ಸಾಕಾಗದು....ಇನ್ನೆಂದಿಗೂ ತಾನು ತಾಯಿಯಾಗುವಂತೆಯೂ ಇಲ್ಲ! ಗಂಡ ಅರ್ಧಾಂಗವಾಯುವಿನಿಂದ ಆಚೆಯ ಕೋಣೆಯಲ್ಲಿ ನೆರಳುತ್ತಿದ್ದಾನೆ! ಅವನೊಬ್ಬ ಸಂಗೀತಗಾರ. ಆದರೆ ಅವನ ಬಾಳಿನಲ್ಲಿಯೇ ಸಂಗೀತವಿಲ್ಲದಾಗಿದೆ. ಶಾರದಕ್ಕನ ಅಂತರಂಗವನ್ನೆಲ್ಲಾ ಅದೊಂದು ಶೂನ್ಯ ತುಂಬಿಕೊಳ್ಳುತ್ತಿದೆ. ಅದನ್ನೆಲ್ಲ ಹತ್ತಿಕ್ಕಿಕೊಂಡು ಅವಳು ಸುಮತಿಯ ಸಂಗಡ ವ್ಯವಹರಿಸುತ್ತಿದ್ದಾಳೆ. ಅವರಿಬ್ಬರಲ್ಲಿ ಜಗಳವಿಲ್ಲ ಬಿರುಸು ಮಾತು ಇಲ್ಲ ಊಟ ಉಡಿಗೆ-ನಗುವು ಕಲವು ಎಲ್ಲವೂ ಸರಾಗವಾಗಿವೆ ಅದರೆ ಅದೆಲ್ಲಾ ಹೊರಗೆ....! ಒಳಗೇನಿದೆ? ಹತ್ತು ಹದಿನೈದು ದಿನ ಶಾರದಕ್ಕ ತನ್ನ ಸುಪ್ತಚೇತನವನ್ನು ಹತ್ತಿಕ್ಕಿದ್ದಾಳೆ. ಒಂದೊಂದು ಕ್ಷಣವೂ ಅಸಹಾಯತೆಯ ಚರಮಸೀಮೆಗೆ ಅವಳನ್ನೆಳೆಯುತ್ತಿದೆ. ಒಳಗೊಳಗೆ ಕೆಸರು ಕುದಿದಂತೆ ಮನಸ್ಸು ಕುದಿಯುತ್ತಿದೆ ಕರುಳಿನ ಒಳಕೊಳ್ಳದಲ್ಲಿ ಮಹಾ ಕೋಲಾಹಲ ಎದ್ದಿದೆ. ಇಂದವರ ಕೊನೆಯ ದಿನ. ಹೊರಗೆ ಸಾವಕಾಶವಾಗಿ ಸಂಜೆಗತ್ತಲು ಕವಿಯತೊಡಗಿದೆ. ಶಾರದಕ್ಕ ಬಾಗಿಲಿಗೆ ಬಂದು ಚೌಕಟ್ಟು ಹಿಡಿದುಕೊಂಡು ಈ ಒಳಗಿನ ಬಾಯಿಲೆಕ್ಕ ಬಿಡಿಸತೊತಗಿದ್ದಾಳೆ. ಅವಳ ಜೀವನದಲ್ಲಿ ಅದೊಂದು ಭಯಾನಕ ಮೃದುರೂ ಸಂಜೆ! ಬೀದಿಯ ದೀಪದ ಮಂಜು ಬೆಳಕು ಪಸರಿಸುತ್ತಿದೆ. ಅದು "ಸಾಧಕತ್ತಲೆಯೂ ಅಲ್ಲ; ಹಿರಣ್ಯಕಶ್ಯಪುವಿನ ಭೀಕರ ಕೊಲೆಯ ಸಮಯ"ದ ಭಯಾನಕ ಬೆಳಕು ಅಲ್ಲಿ ತುಂಬಿದೆ. ಆ ಮಂಜು ಮಂಜಿನ ಪ್ರಕಾಶ ಕಂಡಾಗ ಅವಳೆದೆಯಲ್ಲಿ ಪಂಜು ಹಚ್ಚಿದಂತಾಗಿರಬೇಕು. ಶಾರದಕ್ಕನ ಜೀವ ನಿಲುವಿಲಸೆ ಒದ್ದಾಡುತ್ತಿದೆ; ಒಳಗೆ ಹೋಗುತ್ತಾಳೆ. ರಾತ್ರಿ ಕವಿಯುತ್ತದೆ! ತನ್ನ ಬದಿಯಲ್ಲಿ ಆ ಸುಮತಿ ತುಂಬಿದ ಬಸುರಿ—ತುಂಬಿದ ಮೈ, ತುಂಬು ಸೌಂದರ್ಯ. ತಾಯಿ ಮಲಗಿದ್ದಾಳೆ.....ಶಾರದಕ್ಕನಿಗೆ ಸಹನೆ ಮೀರಿ ಹೋಗುತ್ತದೆ. ಇರುಳಿನ ಹನ್ನೆರಡು ಗಂಟೆಯನಂತರ ಪಿಶಾಚಿಗಳ ಸಂಚಾರ ಪ್ರಾರಂಭ-ಅವಳ ಅಂತರಂಗದಲ್ಲಿಯೂ ಅಸೂಯೆ ಅಸಹಾಯತೆಗಳ ಪಿಶಾಚಿಗಳು ಪಂಜುಹಚ್ಚಿ ಹುಚ್ಚೆದ್ದು ಕುಣಿಯತೊಡಗುತ್ತವೆ. ಒಂದು ಕಡೆಗೆ ಸುಮತಿಯ ಹಿಮಾಲಯ ಪ್ರಾಯದ ಹೊಟ್ಟೆ....ಇನ್ನೊಂದು ಕಡೆಗೆ ರೋಗಿ ಗಂಡನ ನರಳಿಕೆ.....ನಡುವೆ ಗಾಳಿ ಸುಯ್ಯೋ ಎಂದು ಸುಳಿಯುತ್ತದೆ.....ಇರುಳು ಜೀಯೆಂದು ಹುಚ್ಚು ಕವಿಯುತ್ತಿದೆ "ಅಯ್ಯೋ ದೈವವೇ.... ತನ್ನೀಗಳಿಗೆ ಹೊಣೆಗಾರರಾರು? ತನ್ನ ತಂದೆಯೆ? ಈ ಮುದುಕ ಗಂಡನ ಹಣಾದ ಕೊರಳಿಗೆ ತನ್ನನ್ನು ಕಟ್ಟಿದವನಾತನೇ ಅಲ್ಲವೆ?" ಏನೇನೋ ಕೊರಗು, ಏನೇನೊ ಸಂಕಟ.....ಅವಳು ಹುಚ್ಚಾಗುತ್ತಾಳೆ. ವಿವೇಕದ ವಾಣಿ ಕ್ಷೀಣವಾಗುತ್ತದೆ. ಮಾನವತೆ ಈ ಭೀಕರ ಹೋರಾಟದಲ್ಲಿ ದನಿಮಾನವಾಗುತ್ತದೆ. ಅವಳ ಸುಪ್ತಚೇತನದಿಂದ ವಿಕೃತ ರಕ್ಕಸಿ ಮೇಲೆದ್ದು ಹಾರಿ ಹಿಡಿದು ನಿಲ್ಲುತ್ತಾಳೆ.....ಇನ್ನೇನು ಸುಮತಿಯ ಹೊಟ್ಟೆಯಮೇಲೆ ಆ ಹಾರಿ ಬೀಳಬೇಕು.....ಆಕ್ಷಣದಲ್ಲಿ ಶಾರದಕ್ಕನ ಸ್ತ್ರೀ ಹೃದಯ ಸಂಕಟದಿಂದ ಕೂಗಿಕೊಳ್ಳುತ್ತದೆ. "ಯಾರ ತಪ್ಪಿಗಾಗಿ ಯಾರನ್ನು ಹೊಡೆಯಲು ಹೊರಟಿದ್ದೆ....? ಈ ಎಳೆಮುತ್ತೈದೆಯ ಭಾಗ್ಯನೋಡಿ ನೀನೂ ಸಂತೋಷಪಡಲಾರೆಯಾ?

ಶಾರದಕ್ಕ ಆ ಹೋರಾಟದಲ್ಲಿ ಹಣ್ಣುಹಣ್ಣಾಗಿ ಹೋಗುತ್ತಾಳೆ. ತನ್ನ ಹೊಟ್ಟೆಯನ್ನು ಕನ್ನಡಿಯಲ್ಲಿ ನೋಡಿಕೊಂಡಳು.....ಅದೆಷ್ಟು ಬರಿದಾಗಿದೆ....! ಆ ಬರಿಹೊಟ್ಟೆಯಲ್ಲಿ ಮತ್ಸರ ಕುದಿಯುತ್ತು....ಆದರೆ ಅದೀಗ ತುಸು ಶಾಂತವಾಗಿ ಮಾನವೀಯತೆಯ ತಂಗಾಳಿ ಸೂಸಿ ಬರತೊಡಗಿತ್ತು. ಕೊನೆಗೆ ಶಾರದಕ್ಕ ಗೆದ್ದಳು ಆಕ್ಕರೆಯುಕ್ಕಿತು. ತುಂಬು ಹೃದಯದರಿದ ಸುಮತಿಯ ಮೈಮೇಲೆ ಕೈಯನಾಡಿಸಿದಳು....ಆದರೇನು ದುರ್ದೈವ! ಸುಮತಿ ಚಿಟ್ಟನೆ ಚೀರಿದಳು ಅವಳ ಸ್ವಪ್ನದಲ್ಲಿ ತನ್ನ ಮಲತಾಯಿ, ಶಾರದಕ್ಕ ತನ್ನ ಕತ್ತು ಹಿಚುಕಿದಂತೆ ಆಯಿತಂತೆ! ಗದ್ದಲಕ್ಕೆ ಹೊರಗಿನ ಹೆಣ್ಣುಮಕ್ಕಳು ಬಂದರು. ಸುಮತಿಯ ಸ್ವಪ್ನ ಕೇಳಿ ಶಾರದಕ್ಕನ ಕಡೆಗೆ ಅರ್ಥಪೂರ್ಣವಾಗಿ ನೋಡಿದರು. ಮರುದಿನ ಸುಮತಿ "ಊರಲ್ಲಿಯೇ ಇದ್ದ ತನ್ನ ಅತ್ತಿಗೆಯ ಮನೆಗೆ ನಡೆದುಬಿಟ್ಟಳು...." ಶಾರದಕ್ಕನ ಮನಸ್ಸು ವಿಕೃತವಾಗಿ ಸುಮತಿಯ ಹೊಟ್ಟೆಗೆ ಹಾರಿಯಿಂದ ಹೊಡೆಯಲು ನಿಂತಾಗ ಯಾರೂ ಕಡೆಯಲಿಕ್ಕೆ ಬರಲಿಲ್ಲ ಆದರೆ ಈಗ....ಅವಳಲ್ಲಿ ವಾತ್ಸಲ್ಯ ಮೂಡಿದಾಗ ಸಮಾಜ ಅವಳ ಕಡೆಗೆ ಸಂಶಯದಿಂದ ನೋಡುತ್ತಿದೆ.....ಇದು ಹೀಗೇಕೆ?....ಅವಳನ್ನೂ ಬಾಗಿಲಲ್ಲಿ ನಿಂತು ಆ ಬಗೆಹರಿಯದ ಬಾಯಿಲೆಕ್ಕ ಬಿಡಿಸಲೆತ್ನಿಸುತ್ತಿದ್ದಾಳೆ....ಅದು ಬಿಡದಾಗಿದೆ!

ಈ ಕತೆಯಲ್ಲಿ ಮನಸ್ಸಿನ ಕೋಲಾಹಲದ ಅದ್ಭುತಶಕ್ತಿಯಿದೆ ಕತೆಯುದ್ದಕ್ಕೂ ಶಾರದಕ್ಕನ ಮನಸ್ಸಿನ ಒಳಪರಿಗಳನ್ನು ತೋರಿಸುತ್ತಿರುವುದಾಗಿ ಕಂಡುಬಂದರೂ ಸುಮತಿಯ ಸ್ವಪ್ನದ ಒಂದೇಒಂದು ಮಾತಿನಿಂದ ಅವಳ ಸುಪ್ತಚೇತನದ ಮೇಲೆ ಝಗ್ ಎಂದು ಬೆಳಕು ಬೀಳುತ್ತದೆ. ಹೊರಗಡೆಯಿಂದ ಅತ್ಯಂತ ಪ್ರಶಾಂತವಾಗಿ ಕಾಣುವ ಆ ಎರಡು ಹೆಣ್ಣು ಹೃದಯಗಳ ಅಂತರಂಗದಲ್ಲಿ ಏನೆಂಥ ಕೋಲಾಹಲ ನಡೆದಿದೆ! ಶಾರದಕ್ಕನದಾದರೊ ಕೊನೆಗೊನ್ಮೆ ಸ್ಪಷ್ಟವಾಗಿ ಕಾಣುವಂತೆ ಮನಸ್ಸಿನ ದ್ವಂದ್ವ ನಡೆಯುತ್ತದೆ. ತನ್ನ ಮನಸ್ಸು ಮತ್ಸರಗ್ರಸ್ತವಾಗಿದೆ ಎಂದು ಅವಳು ಅರಿತಿದ್ದಾಳೆ. ತಾಯ್ತನದ ಕೊರಗು ತನ್ನ ಕಂಬನಿಯನ್ನು ಕೊರೆಯುತ್ತಿದೆಯೆಂದು ಅವಳು ಅರಿತು

ಅನುಭವಿಸುತ್ತಿದ್ದಾಳೆ. ಆದರೆ ಆ ಸುಮತಿಯು ತನ್ನಲ್ಲೇನು ನಡೆದಿದೆಯೆಂಬುದನ್ನೇ ಅರಿಯಳು! ಅವಳು ತನ್ನ ಮಲತಾಯಿಯನ್ನು ತನ್ನ ಹೆತ್ತತಾಯಿಯಂತೆಯೇ ಭಾವಿಸುತ್ತಾಳೆ. ಅವಳ ಬದಿಯಲ್ಲಿ ವಿಶ್ವಾಸದಿಂದ ಪಾಯಸಾಗಿ ಮಲಗಿ ನಿದ್ರಿಸುತ್ತಿದ್ದಾಳೆ.....ಆದರೂ ಸ್ವಪ್ನದಲ್ಲಿ ಅವಳ ಸುಪ್ತಚೇತನವು ಮಲತಾಯಿಯ ಬಗೆಗೆ ಘೋರ ಚಿತ್ರಗಳನ್ನು ಕಟ್ಟಿಕೊಂಡು ನರಳುಗುತ್ತಿದೆ. ಚೀತ್ಕರಿಸುತ್ತಿದೆ ಒಂದು ದೃಷ್ಟಿಯಿಂದ ಅವಳು ತನ್ನನ್ನೇ ತಾನು -ತನಗರಿವುವಂತೆಯೇ ನುಡಿಸಿಕೊಳ್ಳುತ್ತ ಇದ್ದಾಳೆ ಎನ್ನಬೇಕೆ? ಮನಸ್ಸಿನ ಈ ಗುಪ್ತ ಹೋರಾಟವನ್ನು ಅರಿಯುವೇ ದೋದಲ್ಲಿ ಮನುಷ್ಯನ ವೈಯಕ್ತಿಕ ಹಾಗೂ ಸಾಮಾಜಿಕ ಜೀವನದ ಮೇಲೆ ಎಂಥ ಪರಿಣಾಮಗಳಾಗಬಹುದು? ಶ್ರೀ. ವೆಂ ಮು. ಜೋಶಿಯವರು ಈ ಬಾಯಿಲೆಕ್ಕವನ್ನು ಸವಾಜದ ಮುಂದೆ ಇಡುತ್ತಿದ್ದಾರೆ. ಅವರು "ನವ್ಯಕತೆ"ಗಳೆಂದು ಕರೆಯುವ ಕಥಾ ತಂತ್ರದಲ್ಲಿ ಮುಖ್ಯವಾಗಿ ಮನಸ್ಸಿನ ಈ ಘೋರವಾದ ಗುಪ್ತ ಚಲನವಲನಗಳ ಮೇಲೆ ಬೆಳಕು ಕಿಡಿಹಬ್ಬಯಿಸುತ್ತಾರೆ. ಈ ಸಂಪ್ರಕ್ಕೆ ನವ್ಯವೆಂದು ಕರೆಯುದೇಕೋ ಕರೆಯುಬಾರದೋ ಎಂಬ ವಾಕು ಬೇರೆ ಆದರೆ ಪ್ರಸ್ತುತ ಕತೆಯನ್ನು ಓದುತ್ತಿರುವಾಗ ಪ್ರತಿ ಕ್ಷಣಕ್ಕೂ ನಾವೊಂದು ಘೋರತಮಸ್ಸಿನ ಗೂಢರಾಹಸ್ಯವನ್ನು ಎದುರಿಸಿ ನಿಲ್ಲುತ್ತೇವೆ. ಅವರ ಜನ್ಮ ನಮ್ಮ ಶುತ್ತಿನ ಬಾಹ್ಯಪ್ರಪಂಚದಲ್ಲಿಲ್ಲ. ಅಲ್ಲಿ ನಮ್ಮ ನೈತಿಕ ಮಾನದಂಡಕ್ಕೆ ಸ್ಥಾನವಿಲ್ಲ. ಅದೊಂದು ಶಾಂತ ವ್ಯಕ್ತಿಗಳ ರಣರಂಗ! ಆ ರಣರಂಗವನ್ನು ಲೇಖಕರು ತೆರೆದು ತೋರಿಸುತ್ತಿರುವಾಗ ಪಾಪಿಯ ಅಸಹಾಯತೆ, ವಿಕೃತಿಯ ಅನಿವಾರ್ಯತೆಗಳು ಎದುರಾಗಿ ಕರುಣೆಯುಕ್ಕುತ್ತದೆ. ಆ ವಿಚಿತ್ರ ಪ್ರಪಾಚದ ಹೋರಾಟವನ್ನು ಮೂಕಸಾಕ್ಷಿಗಳಾಗಿ ನೋಡುತ್ತೇವೆ. ತಮ್ಮತಮ್ಮ ಅಸ್ತಿತ್ವದ ಉದ್ವೇಶವರಿಯದ ಅಸಂಖ್ಯ ಶಕ್ತಿಗಳು ಏನೇನೋ ರೂಪತಾಳಿ ಕತ್ತಲಲ್ಲಿ ಗುದ್ದಾಡುತ್ತಿರುತ್ತವೆ. ಅಪರಾಧಿಯ ಅಂತರಾಗದ ಈ ಕತೆಗೆ ಸಮಾಜದಲ್ಲಿ-ನ್ಯಾಯಾಲಯದಲ್ಲಿ-ಧರ್ಮ ಸ್ಥಳದಲ್ಲಿ ಯಾವ ಸ್ಥಾನವಿದೆ?....ಈ ಕತೆಯನ್ನು ಗಣನೆಗೆ ತಾರದ ನ್ಯಾಯನಿರ್ಣಯ, ಈ ಕತೆಯನ್ನರಿಯದ ಧರ್ಮವಿಧಿ-ಸಮಾಜ ಬಂಧನಗಳು ಮಾನವನ ಪ್ರಗತಿಪೋಷಕವಾಗಬಹುದೆ?.....ಬಹುಶಃ ಲೇಖಕರ ಈ 'ನವ್ಯಕತೆ'ಯು ಧ್ವನಿ ಇದಾಗಿರಬಹುದು .....

"ಬಗೆಹರಿಯದ ಬಾಯಿಲೆಕ್ಕ"ದ ಒಂದು ವೈಶಿಷ್ಟ್ಯವೆಂದರೆ ಅದರ ಸಮಸ್ಯೆಯು ಗರ್ಭದಲ್ಲಿಯೇ ಅದರ ತಾಂತ್ರಿಕ ಸೌಂದರ್ಯವೂ ಆತಗಿದೆ. ಶಾಂತಕ್ಕನ ಮನೋವಿಶ್ಲೇಷಣೆಯಲ್ಲಿ ಕುತೂಹಲ ಕೆರಳಿಸುವ ಶಕ್ತಿಯಿದೆ. ಸ್ವಭಾವದ ವಿಕೃತಿಯ ಮೇಲೆ ಸಂಸ್ಕೃತಿಯ ವಿಜಯವಾಗುವ ವರೆಗೆ ನಡೆದ ಕೆಲವು ಗಂಟೆಗಳ ಅಂತರಂಗದ ಹೋರಾಟದಲ್ಲಿ ಪರಿಸರದ ಚಿಕ್ಕ-ಪುಟ್ಟ ಅಂಶಗಳೂ ಜೀವಂತವಾಗಿ ನಿಲ್ಲುತ್ತವೆ. ಅಲ್ಲಿ ಹೊರಗಿನ ಸಂಜೆಗೂ ಶಾರದಕ್ಕನ ಒಳಗಿನ ಸಂಜೆಗೂ ಅಂತರ ಕಾಣಿಸುವುದಿಲ್ಲ. ಆ ಸಂಜೆಗತ್ತಲಲ್ಲಿ ಏನೇನೋ ಪ್ರತಿಮೆಗಳು ಚಿತ್ರವಿಚಿತ್ರವಾಗಿ ತಲೆಯೆತ್ತುತ್ತವೆ. ಅದೊಂದು ಮೂಕ ಕೋಲಾಹಲವೇಳುತ್ತದೆ. ಲೇಖಕರು ಹೇಳಿದ ಮಾತನ್ನೇ ಹೇಳುತ್ತ ಆ ಮೂಕ ಕೋಲಾಹಲವನ್ನು ಅತ್ಯಂತ ತೀಕ್ಷ್ಣ ಪರಿಣಾಮಕಾರಿಯನ್ನಾಗಿ ಮಾಡುತ್ತಾರೆ. ಒಂದು ಕಣ್ಣ ಕನ್ನಡಿಯಲ್ಲಿ ..ಅಚೆಯ ಕೋಣೆಯಿಂದ ಬರುವ ಅರ್ಧಾಂಗವಾಯುಪೀಡಿತ ಪತಿಯ ಕ್ಷೀಣ ಧ್ವನಿಯಲ್ಲಿ....ಸುಮತಿಯ ಹವಣಾಲಯಸ್ಯಾಯದ ಹೊಟ್ಟೆಯಲ್ಲಿ.... ಅವಳ ಸುಂದರ ತುಂಬು ವೈಯಲ್ಲಿ.....ಎಷ್ಟೊಂದು ಅರ್ಥ! ಎಷ್ಟೊಂದು ಧ್ವನಿ.... ! ಈ ಹೋರಾಟದ ಮೇಲೆ ಬಿದ್ದ ಬೆಳಕು ಹಿರಣ್ಯಕಶಿಪುವಿನ ಸಾವಿನ ಸಮಯದ ಭಯಾನಕ ಪ್ರಕಾಶವಂತೆ! ಸರಳವಾದ ಶೈಲಿಯಲ್ಲಿ.. ....ವಾಸ್ತವತೆಯ ಗಡಿ ದಾಟದ ವರ್ಣನೆಯಲ್ಲಿ....ಸಪ್ತಚೇತನದ ವಿಚಿತ್ರ ಪ್ರಪಂಚದಿಂದ ಬರುವ ಪ್ರತಿಮೆಗಳಲ್ಲಿ "ಬಗೆಹರಿಯದ ಬಾಯಿಲೆಕ್ಕ" ತನ್ನ ಘೋರವಾದ ರೂಪವನ್ನು ತಾಳಿ ನಿಲ್ಲುತ್ತದೆ. ಆದರೆ ಲೇಖಕರ ಹೃದಯದ ಸಂಸ್ಕೃತಿಯು ಆ ಕತ್ತಲಲ್ಲಿಯೂ ಬೆಳಕು ಕಾಣುವದರಿಂದ ಕತೆಯು ಕತ್ತಲಲ್ಲಿ ಮಿಂಚುಹೊಡೆದಂತೆ ಕೊನೆಯಲ್ಲಿ ಶ್ರೀಕೃದಯದ ಮಾನವೀಯತೆಯ ಮಂಗಲತೆ ಮಿನುಗುತ್ತದೆ. ಕಥಾಸಂವಿಧಾನದಲ್ಲಿರುವ ಏಕ್ಯತೆ ಕಲಾದೃಷ್ಟಿಯನ್ನು ಕಳೆದುಕೊಳ್ಳದ ಪರಾನುಭೂತಿಪರ ಸುಸಂಸ್ಕೃತ ಹೃದಯ, ಲೇಖಕರ ನಿರ್ವಿಕಾರವಾದ ತಟಸ್ಥ ದೃಷ್ಟಿಕೋನಗಳಿಂದಾಗಿ ಕತೆಯು ಪರಿಣಾಮವು ತೀಕ್ಷ್ಣವೂ ಕರುಣಾಮಯವೂ ಆಗಿದೆ. ಈ ಮೂಕ ಕರುಣೆಯು ನವಮುಖವನ್ನು ತೋರಿಸಿದ ಲೇಖಕರಿಗೆ ಓದುಗನ, ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸದಿರಲಾರೆ.

ಶಿವರಾತ್ರಿ

(ಕಾಲ್ಪನಿಕ ಏಕಾಂಕ ವಿಮರ್ಶೆ)

ಶ್ರೀ. ಕೆ. ಎಸ್. ಕರ್ಮಾ, ವಾಣೀವಿಲಾಸ ಮಂದಿರಂ, ಕಾಶರಗೋಡು.

ಗೋಕರ್ಣದ ರಾಮಭಟ್ಟರ ಮಗ ಶಿವಭಟ್ಟ ಮನೆಯವರೆಲ್ಲರ ಹೃದಯಪೂರ್ವಕವಾಗಿ ಶಿವರಾತ್ರಿಯೆಂದು ಮನೆಗೆ ಹಿಂತಿರುಗಿದ ದಿನ. ಊರು ಬಿಟ್ಟು ಹೋದ ತನ್ನ ಹನ್ನೊಂದು ತಿಂಗಳ ದೀರ್ಘವ್ಯವಧಿಯಲ್ಲಿ ಬಂದಪಡಿಸಿದ ತಂದೆಯ ಹಾಗೂ ಹೆಂಡತಿಯ ಮನೋಮಯವನ್ನು ಒಂದೇ ಒಂದು ನಿಮಿಷದಲ್ಲಿ ಮಾಯವಾಗಿಸಿ ಆ ಸ್ಥಾನದಲ್ಲಿ ಸಂತಸದ ಸುರಿಮಳೆಯನ್ನು ಸುರಿಸಿ ಶಿವರಾತ್ರಿಯನ್ನು ಕಳೆಯೇರಿಸಿದ ಸುದಿನ!!

ಅದುವೆ ಶಿವರಾತ್ರಿಯ ಹೃದಯದಲ್ಲಿ ನೆಲೆಗೊಂಡ ಕಥಾವಸ್ತುರೂಪ. "ಇದೊಂದು ಪೂರ್ಣ ಕಾಲ್ಪನಿಕ ಏಕಾಂಕವೆಂದು ಲೇಖಕರು ಹೇಳುತ್ತಾರೆ ಪಾತ್ರಗಳಾಯ್ಕೆಯು ಮಟ್ಟಿಗಿದು ಕಾಲ್ಪನಿಕ ರೂಪ. ರೀಪೆಯಲ್ಲಿರಬಹುದು. ಆದರೆ ಕಥಾಗರ್ಭದಲ್ಲಿ-ನಾವಿಕ ಹೃದಯದಲ್ಲಿ ಕಾಣಿಸುವ ಪುಣ್ಯಕ್ಷೇತ್ರಗಳ ನೆಲುವು, ಜೀವನದ ತಾಕಲಾಟದಲ್ಲಿ ನಲೆನಾಡುವ ಪುರೋಹಿತ ವರ್ಗದ ವಿವಿಧ ಭಾವಪ್ರದರ್ಶನ, ಪ್ರಸ್ತುತ ವಾತಾವರಣವು ಜೀವನದಲ್ಲಿ ತಂದಿತ್ತ ನೂತನೋನ್ಮೇಷ,—ಇವು

ಮಾತ್ರ ಕಾಲ್ಪನಿಕವೆಂಬಲಾರವು. ಸತ್ಯ ಪ್ರತಿಬಿಂಬಕವು ಲೇಖಕರು ಈ ಸತ್ಯವನ್ನು ಒರೆದೋರಲು ಗೋಕರ್ಣದ ಹಿನ್ನೆಲೆ ಹಾಗೂ ಪುರೋಹಿತವರ್ಗದ ನಾನಾಮಾಲಿ ಹಾಗೂ ಜೀವನವನ್ನು ಕಾಲ್ಪನಿಕ ಘಟಕಗಳಿಂದ ಒರೆದೋರಿರಬಹುದು ಕಾಲ್ಪನಿಕವಾದ ಈ ರಚನಾ. ವಿನ್ಯಾಸದಲ್ಲಿ ಲೇಖಕರು ನಿರೂಪಿಸಿರುವ ಜೀವನದರ್ಶನವು ಸೊಗ. ಸಾಗಿದೆ. ಯಥಾವತ್ತಾಗಿದೆ ಕಥಾಕರಣಿಯಲ್ಲಿ ನಾವೀನ್ಯವಿಲ್ಲದಿ. ದ್ದರೂ, ತೀರ ಸಾಮಾನ್ಯವಾದ ವೃತ್ತವಿದನ್ನು ಲೇಖಕರು ಏಕಾಂಕ ರೂಪದ ನಾಟಕಪರಣಿಯಲ್ಲಿ ಚಿಲುವಾಗಿಸಿದ್ದಾರೆನ್ನಬೇಕು. ಏಕಾಂಕದ ಒಂದೇ ಒಂದು ದೃಶ್ಯದಲ್ಲಿ—ಆವಶ್ಯಕ ಪಾತ್ರಗಳವತರಣದಲ್ಲಿ—ವಿಶಾಲವಾದ ಜೀವನ ಪದ್ಧತಿಯನ್ನು ಪರಾಮರ್ಶಿಸಿದ್ದಾರೆ. ಕ್ಷೇತ್ರ, ಗಳ ಜೀವನಸಂಪ್ರದಾಯ ಹಾಗೂ ಜೀವನೋಪಾಯಗಳ ಸತ್ಯ, ಸ್ಥಿತಿಯನ್ನು ವೈಚಾರಿಕ ಪರಣಿಯಲ್ಲಿರಳಿಸಿದ್ದಾರೆ.

ನಾಟಕವು ಗೋಕರ್ಣದ ಕೋಟಿತೀರ್ಥದ ಪುತ್ತಿನ ಒಂದು ಓಣಿಯಲ್ಲಿರುವ ಪುರೋಹಿತ ರಾಮಭಟ್ಟರ ಮನೆಯ ಪನ್ನಿವೇಶ ಸ್ಥಾರನೆಯಿಂದ ತೊಡಗುತ್ತದೆ ವಾರ್ಧಕ್ಯದ ಪರವಾನಧಿಯಲ್ಲಿರುವ ರಾಮಭಟ್ಟರನ್ನು ಸಂಬೋಧಿಸುತ್ತ, ಪ್ರದೋಷಪೂಜೆಯ—ಅಭಿಷೇಕ ಕರ್ಮಕ್ಕಾಗಿ ಮಡಿಯಲ್ಲಿರುವ ಶೇಷಭಟ್ಟರಿಂಬ ನತುಕರೆಯದ ಪೂಜಾರಿಗಳು ಬರುತ್ತಾರೆ. ಅವರಿಬ್ಬರಾಡುವ ಮೊದಲ ಕೆಲವು ಮಾತುಗಳಿಂದ ಲೇಖಕರು ರಾಮಭಟ್ಟರ ಅಪಹಾಯ ಪರಿಸ್ಥಿತಿ ಹಾಗೂ ಶಿವಭಟ್ಟನೆಂಬ ಅವರ ಮಗನು ಓಡಿಹೋಗಿದ್ದ ವಿಚಾರ—ಇವನ್ನು ಸ್ಪುಟವಾಗಿ ತೋರುತ್ತಾರೆ ಮಾತಿನ ಶುಳಿಯಲ್ಲಿ ಶಿವಭಟ್ಟನ ಗುಣ-ನಡತೆಯು ಶುಭ್ರತೆಯನು ತೋರಿಪುದು ಶ್ಲಾಘನೀಯವಿದೆ. ಈ ತೋರಿಕೆಯು ನಾಟಕದ ಹೃದಯಶುದ್ಧಿಗೆ ನೆಲೆನಿಂತ ಒಂದು ಪ್ರಸ್ತಾವ! ಈ ಸಂದರ್ಭದಲ್ಲಿ ಸತ್ಯಭಾಮಾ (ಶಿವಭಟ್ಟನ ಧರ್ಮ. ಪತ್ನಿ) ಕೊಡನೆ ರಾಮಭಟ್ಟರು, ಮಗು ಲಾಟಾನು ಹಿಡಿಲಿಕ್ಕೋದ ವಿಚಾರವೆತ್ತಿದಾಗ—ಸತ್ಯಭಾಮಾಳಾಡುವ "ನಾನೆಲ್ಲಾ ಏನೆಲ್ಲಾ ನೋಡಿಕೊಳ್ಳಿ? ಬೀದೀ ಜನರ ದೃಷ್ಟಿ, ದಾಟಿಕೊಳ್ತು, ಆಚೆ ಬೀದಿ ತಿಪ್ಪಾಜೊಯಿಸ್ಪಲ್ಲಿ ಹೋಗಿ, ಇಷ್ಟು ದೊಡ್ಡ ದೇಹ ಇಷ್ಟು ಪಸ್ಟದು ನೂಡಿಕೊಂಡು ಇವತ್ತಿನ ಫರಾಳಕ್ಕೊಂದಿಷ್ಟು ಅವಲಕ್ಕಿ-ಬೆಲ್ಲ ಕೊಂ ಕುದದ್ದುಯಿತು" ಎಂಬೀ ಮಾತು ಆ ಮನೆಯ ಭತತರವನ್ನು ಸೂಚಿಸಿದರೆ, ಅದರ ಬಳಿಕನೆ ನೆಲೆನಿಂತಿರುವ ಶೇಷಭಟ್ಟರ ಮಾತು ಮಡಿಯು ಕುರಿತಾದ ದೊಡ್ಡದೊಂದು ಉಪನ್ಯಾಸವನ್ನು ನೀಡಿಪುದು ಔರಸವಾಗಿದೆ. ಈ ಎರಡು ಸಂದರ್ಭಗಳನ್ನನುಗೊಳಿಸಲೆಂದೇ ಲೇಖಕರು ಕೂಸಿನ ವಿಚಾರವನ್ನು ಸೆಳೆದಿರುವರು. ದೈವವಶಾತ್ ಲಾಟಾನು ಮುಟ್ಟಿದೆ ಶೇಷಭಟ್ಟರ ಕೆಂಪು ಮಡಿಗೆ ತುನಸೋತು ಎಂದ ಕೂಸಿನ ವಿಚಾರವನ್ನು ನೆನೆದಾಡಿದ ರಾಮಭಟ್ಟರ ಕೆಲವು ಮಾತುಗಳು, ಶಿವಭಟ್ಟ ಮತ್ತು ಸತ್ಯಭಾಮಾ ಅವರ ದಾಂಪತ್ಯ ಜೀವನದೆರಕವನ್ನು ಬಿಂಬಿಸುತ್ತವೆ ಈ ಮಾತು ಮುಗಿದಾಗಲೇ ದೇವಾಲಯದಿಂದ ವಾದ್ಯ—ಗಂಟೆಗಳ ಸಪ್ಪಳ ಕೇಳಬಂದರೆ ಶೇಷಭಟ್ಟರು ಅವಸರದಿಂದ ಸಾಗನಿಂತಂತೆ, ರಾಮಭಟ್ಟರೊಡನೆ ಮಾತನಾಡಲು ಆಗಲೇ ಬಂದ ವೆಂಕಣ್ಣದೀಕ್ಷಿತರನ್ನು ಇರಿಸುವರು. ದೀಕ್ಷಿತರೂ, ಭಟ್ಟರೂ ಸಮುದುಃಪಿಗಳು. ರಾಮಭಟ್ಟರ ಮಗನು ಮನೆಯಿಂದ ತೆರಳಿದ್ದಂತೆ ದೀಕ್ಷಿತರ ಮಗನೂ ತೆರಳಿದ್ದನು. ಅವ. ರಿಬ್ಬರೂ ವಾರ್ಧಕ್ಯದ ಹೊನಲಲ್ಲಿ ಸಖ್ಯಕ್ಕೆರವಾದಂತೆ, ಸಾಂಸಾರಿಕ ಜೀವನಗತಿಯಲ್ಲೂ ಸಮರೆಂದನ್ನಬೇಕು. ಈ ಏಕಾಂಕದ ಸೌಂದರ್ಯವು ಹೊರಸೂಸುವ ಒಂದು ಸನ್ನಿವೇಶವೆಂದರೆ ಇದೊಂದೇ ಎನ್ನಬೇಕು:—

ಇವರಿಬ್ಬರ ಸಂಭಾಷಣೆಯು ಕ್ಷೇತ್ರೋಪಜೀವಿಗಳಿತಿವೃತ್ತವನ್ನು ಸಾರುತ್ತಿದೆ. "ಉತ್ಸವದ ತುಸು ದಿನಗಳ ಮೊದಲೇ ಪುರೋಹಿತರ ಕಡೆಯವರು ಊರೂರು ಸಂಚರಿಸಿ, ಪರಿಸೇ ಜನರನ್ನು ಭೇಟಿಯಾಗಿ ಕರಪತ್ರಗಳನ್ನು ಹಂಚಿ ಬಲಿಗೆ ಹಾಕಿಕೊಳ್ಳುವ ವಿಧಾನವನ್ನು—" ಈ ನಾಟಕವು ರೂಪಿಸಿದಂತೆ, ಕ್ಷೇತ್ರಕ್ಕೆ ಆಗಮಿಸಿದ ಮಂದಿಯನ್ನು ಒಬ್ಬರು ಸ್ವಾಧೀನಪಡಿಸಿ ಮತ್ತೊಬ್ಬರನ್ನು—ನ್ಯಾಯವಾಗಿ ಆ ಪರಿಸೆ. ಯವರು ಸಾಗಬೇಕಾಗಿದ್ದ ಮನೆಯವರನ್ನು—ವಂಚಿಸುವ ವಿಧಾನ. ವನ್ನೂ ಕೊನೆಗವರೇ ಸೋಲುವಂತಾದ ಬಗೆಯನ್ನೂ ಸ್ವಜೀವನ ಘಟ್ಟನೆಯಲ್ಲೇ ಕಾಣಿಸುವುದು ಧುಚಿರವಿದೆ. ಇಲ್ಲಿ ಲೇಖಕರು ಶಿವಭಟ್ಟನು ಮಕ್ಕೊಬ್ಬ ಮಾಣಿಯ ಮೋಸವನ್ನು ಪ್ರತಿಬಿಟಿಸಿ ತಾನೆಸಗಿದ ಚಾತಕಚಕ್ರತೆಯನ್ನು ಕಾಣಿಸಿರುವುದನ್ನು ವ್ಯಕ್ತೀಕರಿಸಿ. ದ್ದಾರೆ. ರಾಮಭಟ್ಟರ ಮಾತಿನ ಕೊನೆಯ ಆಜೀವನಿಯ ವಾಣಿಯು ಗುಟ್ಟೆಲ್ಲಾ ರಟ್ಟಾಯ್ತು. ಸರಿಸೆಯವರಿಗೆ ಮೃಷ್ಟಾನ್ನ ಊಟ ಹಾಕಿದ್ದೇ ಬಂತು ಅವನಿಗೆ! ಅವರು ಕೊಡುವ ದಕ್ಷಿಣೆ ಉಸುಗರೆ ಎಲ್ಲಾ ನಮ್ಮನೇ ಮಾಣಿ ಕಪಕೊಂಡು ಬಂದ! ಗೋಕರ್ಣದ ಪುರೋಹಿತ ಭಟ್ಟರು ಹೀಗೆಲ್ಲಾ ಧೋಂಗು ಮಾಡ್ತಾರೆ ಅಂತ ಆ ಪರ್ಸ್ಪೆ ಜನರಿಗೆ ಭಾವನೆ ಆಗುವ್ಹಾಂಗೆ ಮಾಡಿದ್ದೇ ಬಂತು ಅವನಿಗೆ" ಎಂಬ ಮಾತು ಸುಂದರವಿದೆ. ಅದರ ಮುಂದೆ ಕಾಣಿಸುವ ದೀಕ್ಷಿತರ ಮಾತು:—"ಹಿಂದಿನ ಜನರ ಭಕ್ತಿ ವಿಶ್ವಾಸಗಳನ್ನೂ ಅವರ ರೀತಿ ನೀತಿಗಳನ್ನೂ ವಿಶದಗೊಳಿಪಂತೆ, ಇಂದಿನ ಕ್ಷೇತ್ರೋತ್ಸವದ ವಿಲಾಸ ವೈಭವಗಳನ್ನು—ಮಿರುಗನ್ನು ಎತ್ತಿ ತೋರುವುದು" ಅನಂತರದ ರಾಮಭಟ್ಟರ ಮಾತು ಇಂದಿನ ಜನರ ಸೇವಾಕಾರ್ಯಗಳ ಸ್ವಾವಲಾಬ ಸಂಸ್ಥಿತಿಯನ್ನೂ, ಆ ಜನರ ಅಟ್ಟೋಪವನ್ನೂ ಸಾರಿ ತೋರವುದು. ಮುಂದೆ ದೀಕ್ಷಿತ ಮತ್ತು ಭಟ್ಟರಾತುವ ಮಾತು, ಜೀವನಕ್ಕೆರವಾಗದ ರಾಜಕೀಯ ವೈಷಮ್ಯವನ್ನು "ಗೇಣಿ" ಯ ರೂಪದಲ್ಲಿ ಎತ್ತಿತೋರಿಸಿ ಜೀವನಾಪೇಕ್ಷೆಯನ್ನು ಕಾಣಿಸುವುದು, ಜೀವಿಕೆಗಾಗಿ ಆ ಮುಂದಿ ತಾಕಲಾಡುವ ಸಂಕಟವನ್ನು ಬಿಂಬಿಸುತ್ತದೆ. ಮುಂದಿನ ಅವರ ಮಾತು, ಧರ್ಮಶಾಸ್ತ್ರಾನುಗುಣವಾದ ಪೂಜಾದಿ. ಗಳಿಂದ ಸಂದುನಿಂತು, ಉಡುಪಿಯ ಅಚಾರ್ಯ ಕಾಫಿ-ಚಾ ನುಕಾನು. ಗಳನ್ನಿರಿಸಿ, ಲಕ್ಷಾಧೀಶರಾದ ಬಗೆಯನ್ನರಳಿಸಿ ತೋರಿದಾಗ, ಸಗೆಯುಕ್ಕಿ ಹರಿಯುತ್ತದೆ; ಅದೇ ಮಾರ್ಗಕ್ಕೆ ಕಾಲಿರಿಪುವ ಮನೋಭಾವವನ್ನು ಬಿಂಬಿಸುವ ಅವರ ನುಡಿಗಟ್ಟು ಓಡೋಡಿ ಮುಂದೆ ಸರಿವ ನಾಟಕ ಗತಿಯಲ್ಲಿ ಎದ್ದುಕಾಣುವ ಮಿರುಗು!

ಇದಿಷ್ಟವಾತು ಇಲ್ಲಿಗೆ ಕೊನೆಗೊಂಡು ರಾಮಭಟ್ಟರ "ಓ ವಾಸ್ತುಲೇಶ್ವರಾ, ಏನಪ್ಪಾ ನಿನ್ನ ಲೀಲೆ?" ಎಂಬ ಮಾತು ದನಿ.

ಎತ್ತಿದರೆ, ಆಗಲೆ ತರುಣ ಬೈರಾಗಿಯೊಬ್ಬನು "ಬಂದಾನೋ, ಶಿವ ಬಂದಾನೋ" ಎಂಬ ಹಾಡನ್ನು ಹಾಡಿ ಬರುವನು. ಇದು ಶಿವರಾತ್ರಿ ಕಾಲದ ಬೈರಾಗಿಗಳ ಹಾಡು ಎಂದು ನಾವು ತಿಳಿದಂತೆ–ರಾಮಭಟ್ಟರ ಹೃದಯವನ್ನು ತುಂಬುವ "ಶಿವಭಟ್ಟ"ನೂ ಇಬ್ಬರು ಆಳುಗಳು ಹೊರುವಷ್ಟು ಹೊರೆಯನ್ನು ಹೇರಿಸಿಕೊಂಡು ಬರುತ್ತಿರುವನೆಂಬುದನ್ನೂ ತಿಳಿಯಲು ಮರೆಯಬಾರದು. ಬೈರಾಗಿಯ ಹಾಡನ್ನು ಅಷ್ಟೊಂದು ಎರಕದಿಂದ, ನಾಟಕೀಯತಂತ್ರದ ಹಿಡಿತದಿಂದ ಲೇಖಕರನುಗೊಳಿಸಿದ್ದಾರೆ. ಶಿವಭಟ್ಟನ ಬರುವಿಕೆಯನ್ನು ಕಂಡ ರಾಮಭಟ್ಟರು ಅನಂದ ಪರವಶರಾಗಿ ಸತ್ಯಭಾಮೆಯನ್ನೂ—ಮಾಬಲೇಶ್ವರನನ್ನೂ ಕೂಗಿ ಆಡುವ ಮಾತೂ ಅದೇ ಸಂತೋಷದಲ್ಲಿ "ಆಗೋ ಬೈರಾಗಿ ನಮ್ಮನೇ ಮುಂದೆ ಬಂದ್ಬಿಟ್ಟಾ, 'ಬಂದಾನೋ ಶಿವ—' "ಹಾಡ್ಲಿ ಒಂಸ್ಸಲ" ಎಂದಾಗಿ ಆಡುವ ಮಾತೂ ರಾಮಭಟ್ಟರಂತಹ ಮುದಿಪ್ರಾಯದ—ಮಗನಲ್ಲಿ ಅತಿಶಯ ಮಮತೆಯನ್ನಿರಿಸಿಕೊಂಡ ತಂದೆಯ—ಬಾಯಿಯಿಂದ ಬರುವ ಸ್ವಾಭಾವಿಕವಾದ ಹೃದಯದೊಸರು! ಹನ್ನೊಂದು ತಿಂಗಳ ದೀರ್ಘವಿರಹದ ನೋವು, ಜೀವನದಿಡುರು, ಮಗನಲ್ಲಿರಿಸಿದ್ದ ಅಪಾರ ವಿಶ್ವಾಸದ ಕಾವು, ಇವೆಲ್ಲವೂ ಏಕಕಾಲದಲ್ಲಿ ಮಾಯವಾಗಿ ವಾರ್ಧಕ್ಯದಲ್ಲೂ ತಾರುಣ್ಯವನ್ನು ತುಂಬಿ, ರಾಮಭಟ್ಟರನ್ನು ಅನಂದ ಬಾಷ್ಪಪ್ರಾವಿತರನ್ನಾಗಿ ಮಾಡುವ ಒಂದು ಶಕ್ತಿಯಿದೆ ಉಪಸಂಹಾರದ ಮೃದುಮಧುರ ಭಾಗದಲ್ಲಿ!

ಹೀಗೆ 'ಶಿವರಾತ್ರಿ' ರೂಪಕವಿದು,—ಗೋಕರ್ಣದ ಶಿವರಾತ್ರಿಯ ಒಳಗನ್ನು, ಜೀವನವನ್ನು, ಪೌರೋಹಿತ್ಯದ ಜೀವನದ ಮಾರ್ಪಾಟಿನ ಬಗೆಯನ್ನೆತ್ತಿ ತೋರಿದಂತೆ, ಒಂದು ಸಂಸಾರದಲ್ಲಿ ಬಂದೊದಗಿದ ಅನಂದವನ್ನು "ಶಿವಾಗಮನದ ಭವ್ಯ ಶಿವರಾತ್ರಿ"ಯ ರೂಪದಲ್ಲೂ ತೋರಿದುದು ಅದರಕ್ಕೆರವಾಗಿದೆ.

ಕಾಲ್ಪನಿಕವಾಗಿದ್ದರೂ ಏಕಾಂಕವಿದು ಹೃದಯಾವರ್ಜಕವಾಗಿದೆ. ಘಟನೆಗಳ ಮಾರ್ಮಿಕ ಸನ್ನಿವೇಶಗಳಿಲ್ಲವಾದರೂ ಸಾಹಜಿಕವಾದ ಒಂದು ಜೀವನದರ್ಶವಿದೆಯಲ್ಲ! ಆದುದರಿಂದಲೆ 'ಶಿವರಾತ್ರಿ' ಚೆಲುವಾಗಿದೆ.

ಪುರಂದರದಾಸರ ೪೦೦ ವರ್ಷದ ಸ್ಮಾರಕೋತ್ಸವ

ಶ್ರೀಪಂಢರಾಕ್ಷೇತ್ರದಲ್ಲಿ ತುಂಗಭದ್ರೆಯ ಪುಣ್ಯತಟದಲ್ಲಿರುವ ಶ್ರೀ ಪುರಂದರದಾಸರ ಮಂಟಪದಲ್ಲಿ ಪ್ರತಿವರ್ಷವೂ ಪುಣ್ಯತಿಥಿಯ ಉತ್ಸವವು ವಿಜೃಂಭಣೆಯಿಂದ ನಡೆಯುವುದು. ಈ ಸಲದ ಉತ್ಸವ ಕಾಲದಲ್ಲಿ, ೧೯೬೪ನೆಯ ಇಸ್ವಿಯ ಜನವರಿ ತಿಂಗಳಲ್ಲಿ ಶ್ರೀಪುರಂದರದಾಸರ ೪೦೦ ವರ್ಷದ ಸ್ಮಾರಕೋತ್ಸವವನ್ನು ದೊಡ್ಡ ಪ್ರಮಾಣದಿಂದ ಜರುಗಿಸಬೇಕೆಂಬ ವಿಷಯದಲ್ಲಿ ಮಾತುಗಳು ನಡೆದುವು. ಅದರಿಂದ ಪ್ರಭಾವಿತರಾದ ಶ್ರೀಮಾನ್ ಭೀಮಾಚಾರ್ಯ ಚಿಮ್ಮಲಿಗಿ, ಹೈದರಾಬಾದ್ ಅವರು, ಆ ಮಹೋತ್ಸವಕ್ಕೆ ಪೂರ್ವಭಾವಿಯಾಗಿ, ಪ್ರತಿವರ್ಷವೂ ಹಂಪೆಯಲ್ಲಿ ನಡೆಸಬೇಕೆಂದಿರುವ 'ದಾಸಸಪ್ತಾಹ' ಕಾರ್ಯಕ್ರಮವನ್ನು ಕುರಿತು ಒಂದು ಪ್ರಕಟನೆಯನ್ನು ಜಯಂತಿಯಲ್ಲಿ ಪ್ರಕಟಿಸುವುದಕ್ಕೆಂದು ಕಳುಹಿರುವರು. ಈ ಸಪ್ತಾಹಕ್ಕಾಗಿ ಬರುವ ಹರಿದಾಸರ ದಾರಿಯ ವೆಚ್ಚ, ಊಟದ ವೆಚ್ಚ ಇವುಗಳಿಗೆ ತಗಲಬಹುದಾದ ಸುಮಾರು ಒಂದು ಸಾವಿರ ರೂಪಾಯಿಗಳನ್ನು ತಾವು ಸಂಪಾದಿಸಿಕೊಡುವೆವೆಂಬ ಮಾತನ್ನು ಶ್ರೀ ಚಿಮ್ಮಲಿಗಿಯವರು ನಮಗೆ ಬರೆದ ಪತ್ರದಲ್ಲಿ ಬರೆದಿರುವರು. ಶ್ರೀ ಚಿಮ್ಮಲಿಗಿಯವರ ಈ ಯೋಜನೆ ಸಮಯೋಚಿತವಾದುದಾಗಿದ್ದು, ಮುಂಬರುವ ಮಹೋತ್ಸವಕ್ಕೆ ಅದರಿಂದ ಹೆಚ್ಚು ಅನುಕೂಲ ವಾತಾವರಣ ಉಂಟಾಗಬಹುದು. ದಾಸಸಾಹಿತ್ಯದ ಅಭಿಮಾನಿಗಳೆಲ್ಲರೂ ಶ್ರೀ ಚಿಮ್ಮಲಿಗಿಯವರ ಈ ಪ್ರಕಟನೆಯನ್ನು ಓದಿ ಮನನಮಾಡಿಕೊಳ್ಳಬೇಕು.

—ಸಂಪಾದಕರು

ಹರಿದಾಸರಲ್ಲಿ ವಿಜ್ಞಾಪನೆ

ಈ ವರೆಗೆ ಹಂಪೆಯಲ್ಲಿ ಜರುಗುತ್ತಿರುವ ಪುರಂದರದಾಸರ ಪುಣ್ಯತಿಥಿಗೆ, ಹರಿದಾಸರು ಬರುವುದು ಬಹಳ ಕಡಿಮೆ. ಈ ವರ್ಷ, ಪುರಂದರದಾಸರ ಪುಣ್ಯತಿಥಿ ಜರುಗಿಸುತ್ತಿರುವ ಕಮಿಟಿಯವರು, ೧೯೬೪ನೆಯ ದಾಸವರ್ಷ ವೈಕುಂಠಗಮನವಾಗಿ ೪೦೦ ವರ್ಷಗಳಾದುದೆಂದೂ ಕಾರಣ ೪೦೦ನೆಯ ವರ್ಷ ದಾಸವರ್ಯರ ಮಾಹಾತ್ಮ್ಯವನ್ನು ಅಖಿಲಭಾರತಕ್ಕೆ ತಿಳಿಯುವ ಹಾಗೆ ಉತ್ಸವ ಮಾಡಬೇಕೆಂದೂ ಇಟ್ಟುಕೊಂಡಿದ್ದಾರೆ. ಇವಕ್ಕೂ ಪೂರ್ವದಲ್ಲಿ ಮುಂದಿನ ವರ್ಷ ಮೊದಲುಗೊಂಡು ಪು ಆ ಅಷ್ಟಮಿ ಹಿಡಿದು ಚತುರ್ದಶಿಯ ವರೆಗೆ ನಿರಂತರ ಭಜನೆ ಕೀರ್ತನೆ ನಡೆಯುವ ವ್ಯವಸ್ಥೆ ಮಾಡುವುದು ಹರಿದಾಸರ ಕರ್ತವ್ಯವಾಗಿದೆ ಅದಕಾರಣ ಹರಿದಾಸರ ತಮ್ಮ ಅಭಿಪ್ರಾಯವನ್ನು ತಿಳಿಸಿದರೆ ಮುಂದಿನ ಕಾರ್ಯಕ್ಕೆ ಸುಲಭವಾಗುವುದು.

ತಮ್ಮ ದಾಸಾನುದಾಸ

ಭೀಮಾಚಾರ್ಯ ಚಿಮ್ಮಲಿಗಿ

ರಾಮಕೋಟು ಮನೆ ನಂ. ೬-೨-೪ ಹೈದರಾಬಾದ

ಸಾದರ ಸ್ವೀಕಾರ

೧೦೯ **ಸುಡಿಮುತ್ತು** (ಸೂಕ್ತಿ ಸಂಕಲನ) ಸಂಕಲನಕಾರರು: 'ಉಮಾಪತಿ' ಮೈಸೂರು ವಿಶ್ವವಿದ್ಯಾನಿಲಯ. ಪ್ರಕಾಶಕರು: ಸುದರ್ಶನ ಪ್ರಕಾಶನ, ತಾರಾನಿವಾಸ, ತಿಪಟೂರು. ಕ್ರಾ. ಅ. ೨೭೫ ಪುಟಗಳು; ಬೆಲೆ ೨—೮—೦.

೧೧೦ **ಹಾಲಾಹಲ** (ಸಾಮಾಜಿಕ ಕಾದಂಬರಿ) ಬರೆದವರು: ಶ್ರೀ. ಎಂ. ಎಸ್. ಅನಂತರಾವ್. ಪ್ರಕಾಶಕರು: ಉಷಾಸಾಹಿತ್ಯ ಮಾಲೆ, ಮೈಸೂರು. ಕ್ರಾ. ಅ. ೩೬೦ ಪುಟಗಳು. ಬೆಲೆ ೨—೦—೦.

೧೧೧ **ನಮ್ಮ ಮನೆಯ ದೀಪ** (ಕಥಾಸಂಕಲನ) ಬರೆದವರು: ಶ್ರೀ. ಹಾ. ಮಾ ನಾಯಕ, ಮೈಸೂರು. ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು. ಕ್ರಾ. ಅ. ೮೨ ಪುಟಗಳು ಬೆಲೆ ೧—೪—೦.

೧೧೨ **ಬಾಳಗೆಳತಿ** (ಶೃಂಗಾರ ಕವನಸಂಕಲನ ಬರೆದವರು: ಶ್ರೀ. ಅಮ್ಮೆಂಬಳ ಶಂಕರನಾರಾಯಣ ನಾವಡ. ಪ್ರಕಾಶಕರು. ಸಾಹಿತ್ಯಾಂಜಲಿ ಗ್ರಂಥಮಾಲೆ, ಕೋಟಿಕಾರು, (ದ. ಕ) ಕ್ರಾ. ಅ. ೩೬ ಪುಟಗಳು. ಬೆಲೆ ೦—೧೨—೦.

೧೧೩ **ಕರುನಾಡ ಸಿರಿಗೆ** (ಕವನಸಂಕಲನ). ಬರೆದವರು: ಶ್ರೀ. ಸಿ. ಎಂ. ದೇವೇಂದ್ರನಾಯಕ, ಧಾರವಾಡ. ಪ್ರಕಾಶಕರು: ನವೀನ ಸಾಹಿತ್ಯ ಪ್ರಕಾಶನ ಮಂದಿರ, ಧಾರವಾಡ. ಕ್ರಾ. ಅ. ೪೨ ಪುಟಗಳು. ಬೆಲೆ ೦—೧೪—೦.

೧೧೪ **ಹೂವು ಚೆಲ್ಲಿದ ಹಾದಿಯಲ್ಲಿ** (ಕವನಸಂಕಲನ) ಬರೆದವರು ಶ್ರೀ. ಕೆ ವಿ. ಸುಬ್ಬಣ್ಣ ಪ್ರಕಾಶಕರು ಅಕ್ಷರ ಪ್ರಕಾಶನ ಶಿವಮೊಗ್ಗಾ. ಕ್ರಾ. ಅ. ೬೪ ಪುಟಗಳು. ಬೆಲೆ ೧—೮—೦.

೧೧೫ **ಬೇಡನ ಮಗಳು** (ಪೌರಾಣಿಕ ರೂಪಕ) ಲೇಖಕರು ಶ್ರೀ. ವೆಂಕಟರಾಜ ಪುಣಿಂಚಿತ್ತಾಯರು, ಪುಂಡೂರು (ದ. ಕ.). ಪ್ರಕಾಶಕರು ಒಂದಾಣೆ ಮಾಲೆ, ಪ್ರಭಾತ ಪ್ರಿಂಟಿಂಗ್ ಪ್ರೆಸ್, ಮಂಗಳೂರು. ಕ್ರಾ. ಅ. ೧೬ ಪುಟಗಳು. ಬೆಲೆ ೦—೧—೦.

೧೧೬ **ಲೋಕಮಾನ್ಯ ಬಾಳಗಂಗಾಧರ ತಿಲಕ** (ಜೀವನ ಚರಿತ್ರ). ಬರೆದವರು 'ಸ್ವಾತಂತ್ರ್ಯಪ್ರಿಯ.' ಧಾರವಾಡದ ಮಿಂಚಿನ ಬಳ್ಳಿಯ ೧೯ನೆಯ ವರ್ಷದ ೨-೩-೪ನೆಯ ಪುಷ್ಪ. ಕ್ರಾ. ಅ. ೪೨೦ ಪುಟಗಳು. ಬೆಲೆ ಉತ್ತಮ ಪ್ರತಿಗೆ ೫—೦—೦ ಸಾಮಾನ್ಯ ಪ್ರತಿಗೆ ೪—೮—೦.

೧೧೭ **ಸುದರ್ಶನ** (ಪಕ್ಷಪತ್ರಿಕೆಯ ಸಪ್ತೋತ್ಸವ ಸಂಚಿಕೆ). ಸಂಪಾದಕರು ಶ್ರೀ. ಬನ್ನಂಜೆ ರಾಮಾಚಾರ್ಯರು, ಸುದರ್ಶನ ಕಾರ್ಯಾಲಯ, ಉಡುಪಿ. ಕ್ರಾ. ೧೭೦ ಪುಟಗಳು. ಬೆಲೆ ೦-೨-೦.

೧೧೮ **ವೋಟಿನ ಮಹತ್ತ್ವ** (ಪ್ರಬಂಧಾಭಾಸ). ಲೇಖಕರು ಪಂಡಿತ ಗುಂಡ್ಲೂರು ಗೋವಿಂದಪ್ಪ, ಎಳ್ಳಶ್ರೀ. (ಅಲೂರು ತಾಲ್ಲೂಕು). ಲೇಖಕರೇ ಪ್ರಕಾಶಕರು. ಕ್ರಾ. ಅ. ೧೦೬ ಪುಟಗಳು ಬೆಲೆ ೧—೦—೦.

೧೧೯ **ಈ ರಾಜ್ಯದೊಡೆಯ ರೈತ** (ಮತದಾರರ ಕೈಗನ್ನಡಿ) ಬರೆದವರು ಶ್ರೀ. ಕೊ ಚೆನ್ನಬಸಪ್ಪನವರು. ಪ್ರಕಾಶಕರು, ಸಜೀವ ಸಾಹಿತ್ಯಮಾಲೆ, ಬಳ್ಳಾರಿ. ಕ್ರಾ. ಅ. ೪೮ ಪುಟಗಳು. ಜಾನಪದೇ ಶ್ರೀ.

೧೨೦ **ಅರುಣ** (ಕಾಲೇಜಿನ ಕನ್ನಡ ಪತ್ರಿಕೆ). ಸಂಪಾದಕರು ಶ್ರೀ. ಕೆ. ಪಾಂಡುರಂಗ, ಇಂಟರ್ (ದ್ವಿ). ಮತ್ತು ಶ್ರೀ. ಕೆ. ವಿರೂ. ಪಾಕ್ಷಯ್ಯ ಹಿರೇಮಠ, ಇಂಟರ್ (ದ್ವಿ). ಚಾದರಘಾಟ ಕಾಲೇಜ್, ಹೈದರಾಬಾದ್. ರೊಯಲ್ ೧ಡಿ ೬೬ ಪುಟಗಳು.

೧೨೧ **ಮಹಾಪುರುಷ** (ಧರ್ಮಸ್ಥಳದ ಮಂಜಯ್ಯ ಹೆಗಡೆಯವರ ಸಚಿತ್ರ ವ್ಯಕ್ತಿಪರಿಚಯ). ಬರೆದವರು ಶ್ರೀ. ಮಿರ್ಜಿ ಅಣ್ಣಾರಾಯರು, ಸೇಡಬಾಳ. ಪ್ರಕಾಶಕರು ವಿನೋಕಾಭ್ಯುದಯ ಕಾರ್ಯಾಲಯ, ಶರಭವನ, ಮಂಗಳೂರು. ಕ್ರಾ. ಅ. ೧೬೦ ಪುಟಗಳು. ಬೆಲೆ ೨—೦—೦.

೧೨೨ **ಸಮಯಸಾರ** (ಜೈನ ತಾತ್ತ್ವಿಕ ಗ್ರಂಥದ ಅನುವಾದ) ಮೂಲ ಪ್ರಾಕೃತ ಗ್ರಂಥದ ಲೇಖಕರು ಶ್ರೀ ಕುಂದಕುಂದಾಚಾರ್ಯರು ಅನುವಾದಕರು ಶ್ರೀ ಮಿರ್ಜಿ ಅಣ್ಣಾರಾಯರು. ಪ್ರಕಾಶಕರು. ಶಾಂತಿಸೇವಾಶ್ರಮ, ಸೇಡಬಾಳ ಫೂ. ಕ್ರಾ. ಅ. ೧೧೪ ಪುಟಗಳು. ಬೆಲೆ ೧—೮—೦.

೧೨೩ **ಬುದ್ಧ ಚರಿತ** (ಸಚಿತ್ರ ಜೀವನ ಚರಿತ್ರ) ಲೇಖಕರು ಶ್ರೀ ಕಾಶೀನಾಥ ಪೋತದಾರ ಪ್ರಕಾಶಕರು ಕೇಶವ ಭಿಕಾಜಿ ಧವಳೇ ಶ್ರೀ ಸಮರ್ಥ ಸದನ, ಗಿರಗಾಂವ—ಮುಂಬಯಿ. ಡೆ. ಅ. ೧೩೪ ಪುಟಗಳು. ಬೆಲೆ ೧—೮—೦.

೧೨೪ **ಸಂಧ್ಯಾರಾಣಿ** (ಹೈದರಾಬಾದ್ ವಿ. ವಿ. ನಿಲಯದ ಸಾಯಂ ಕಾಲೇಜಿನ ಕನ್ನಡ ಪತ್ರಿಕೆ). ಸಂಪಾದಕರು ಶ್ರೀ. ರಾ. ಶ್ರೀ. ದೇಸಾಯಿ ಅವರು. ಸಹಸಂಪಾದಕರು ಶ್ರೀ. ಎಚ್. ಕೆ. ಕುಲಕರ್ಣಿ. ಯವರು. ಸಲಹೆಗಾರರು ಶ್ರೀ ವಾಯ್. ಅಚ್ಯುತರಾಯರು ಎಂ. ಎ. ಪ್ರಾಧ್ಯಾಪಕರೂ. ಕ್ರಾ. ೧೭೦ ಪುಟಗಳು.

ಇದರಲ್ಲಿ ವಿದ್ಯಾರ್ಥಿ ಲೇಖಕರೇ ಬರೆದ ಸಾಹಿತ್ಯವಿಷಯಕ ವಿವಿಧ ಲೇಖನಗಳಿರುವುವು. ಒಗನೆಯ ಪುಟದಲ್ಲಿ ಪ್ರಕಟವಾಗಿರುವ 'ಒಂದು ಜಾನಪದ ಗೀತೆ' ಎಂಬುದು ಅನಂತಕಂದರ ಕವನವೆಂಬುದು ಅದರ ಸಂಗ್ರಹಕಾರರಾದ 'ಎಸ್ಪಿಡಿ. ಅವರಿಗೆ ಗೊತ್ತಿದ್ದಂತಿಲ್ಲ. ಅಲ್ಲದೆ ಮೂಲಕವನದಲ್ಲಿ ಅನೇಕ ವಿಕೃತಿಗಳು ಉಂಟಾಗಿರುವುದು ವಿಷಾದದ ಸಂಗತಿ. ಜಾನಪದಸಾಹಿತ್ಯವನ್ನು ಸಂಗ್ರಹಿಸುವವರು, ಅದು ಪರಂಪರೆಯದೋ ಆಧುನಿಕ ರಚನೆಯೋ ಎಂಬುದನ್ನು ವಿವೇಚನೆ ಮಾಡದೆ ಸಂಗ್ರಹಿಸಿದರೆ, ಈ ಬಗೆಯ ತಪ್ಪುಗಳು ಉಂಟಾಗುವುವು.

ಕರ್ನಾಟಕದಲ್ಲಿ ಭಾವಗೀತಗಾಯನ ಬೆಳೆಯಬೇಕಾಗಿದೆ!

ಹಾಡಲಿಕ್ಕೆ ಬರುವಂತಹ ಕವಿತೆಗಳೇ ನಮ್ಮಲ್ಲಿ ಇಲ್ಲವೆಂದು
ಸಂಗೀತಗಾರರ ಆಕ್ಷೇಪಣೆ!

ಇದು ನಿಜವಾದ ಆಕ್ಷೇಪಣೆಯೆಂದು ನಂಬುವಿರಾ?
ನಿಜವಿಲ್ಲವೆಂಬುದರ ಪ್ರತ್ಯಕ್ಷ ಸಾಕ್ಷಿಗಳಾಗಿ
'ಆನಂದಕಂದ' ಅವರ ಈ ಗೀತಸಂಕಲನಗಳಿವೆ:

ಮುದ್ದಣನ ಮಾತು (ಶಿಶುಭಾವದ ಗೀತಗಳು)	೦-೧೨-೦
ಒಡನಾಡಿ (ನಲ್ವಾಡುಗಳು)	೧-೦-೦
ವಿರಹಿಣಿ (ಶೃಂಗಾರರೂಪಕ ಗೀತಗಳು)	೧-೪-೦
ಕಾರಹುಣ್ಣಿವೆ (ವಿವಿಧ ಭಾವಗೀತಗಳು)	೨-೦-೦

ಕಾವ್ಯಪ್ರೇಮಿಗಳೂ ಸಂಗೀತಗಾರರೂ ಇವುಗಳನ್ನು ಒಮ್ಮೆ ಓದಿ ನೋಡಬೇಕು.
ಬೇಕಾದವರು ಕೆಳಗಿನ ವಿಳಾಸಕ್ಕೆ ಬರೆಯಿರಿ!

'ಜಯಂತಿ' ಕಾರ್ಯಾಲಯ,
ಧಾರವಾಡ

Printed by N. A. Hoskeri at the Vijaya Press, Dharwar and published for the Proprietors Jayanti Publications, by K. S. Kaveri at the Jayanti Office, Dharwar

ಚಿತ್ರಾ

ಸಂಪುಟ ೧೯ ಸಂಚಿಕೆ ೧೨

೧೯೫೭ ಮೇ

ಸಾಹಿತ್ಯಿಕರು

ಎಲ್ಲೆಲ್ಲಿಯೂ ಇಹರು ಹಿರಿಯರಾಹ ಕಿರಿಯ ಸಾಹಿತ್ಯಿಕರು;
ಎಲ್ಲೆಲ್ಲಿಯೂ ಇಹರು ಕಿರಿಯರಾದ ಹಿರಿಯ ಸಾಹಿತ್ಯಿಕರು!
ಕಾಲದ ಹಿರಿಮು-ಕಿರಿದುಗಳು ಒರೆಗಲ್ಲಿನಿಸವು ಕಾಣಾ—
ಸಾಹಿತ್ಯಿಕರ ಪ್ರಪಂಚದಲ್ಲಿ!

ಇಂತಿದನರಿತನರು 'ಹುಡುಗರು' ಎಂದು ಹಿರಿಯರು
ಹಿಯ್ಯಾಳಿಸಿ ನುಡಿಯಬೇಕಿಲ್ಲ;
ಮುದಿಯರು ಎಂದು ಮುದ್ದರು ಮೂದಲಿಕೆಯ
ಮಾತನಾಡಬೇಕಿಲ್ಲ!

ಹಿರಿಯ ಗರುಡನಂತೆ ಕಿರಿಯ ಗುಬ್ಬಚ್ಚಿ ಹಾರಲಾರದೆಂಬುದನೂ
ಮರಿಗಿಳಿಯಂತೆ ನುಡಿಪದ್ದು ನೂತನನಾಡಲಾರದೆಂಬುದನೂ
ನಂಬದು ನೀತಿಯಲಾಗದು ಕಾಣಾ—
ಕೂಡದು ಜಾಣಾ!

—ಸಾಮಾಕಿ

JAYANTI

ಈ ಸಂಚಿಕೆಯಲ್ಲಿ :

ಹತ್ತೊಂಬತ್ತುವರ್ಷಗಳು. (ಸಂಪಾದಕೀಯ)
ಸಂಪಾದಕರು ೪೪೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿ)
'ಕಾಲಭೈರವ' ೪೪೩

ಕಳ್ಳರ ಗುರು (ಸಣ್ಣಕತೆ)
'ಆನಂದಕಂದ' ... ೪೪೫

ಕಾನ್ಯೇಷು ನಾಟಕಂ ರಮ್ಯಂ (ಕಾಳಿದಾಸನ ಕೃತಿವಿಮರ್ಶೆ)
ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೪೮

ಏತಕಾಗಿ ಬಂದೆ ? (ಕವನ)
'ಆನಂದಕಂದ' ೪೫೪

ದೇವರಿದ್ದಾನೆಯೆ ? (ಸಣ್ಣಕತೆ)
ಶ್ರೀ. ವೆಂ. ಸು. ಜೋಶಿ, ಧಾರವಾಡ ೪೫೪

ಕನ್ನಡದಲ್ಲಿ ಸಣ್ಣಕತೆಗಳು (ಪರಿಚಯಾತ್ಮಕ ಪ್ರಬಂಧ)
ಶ್ರೀ. ಸಿ [illegible]. ಕುಲಕರ್ಣಿ ಎಂ. ಎ., ಬಿ. ಟಿ. ಧಾರವಾಡ ೪೫೭

ಶೂನ್ಯ ಸಮರ್ಪಣ (ನವ್ಯಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್‌ಎಲ್ ಬಿ. ಮುಂಬಯಿ ೪೬೦

ಮಂಗಳ ಮಂದಿರ (ಕಾದಂಬರಿಯ ಸಮಾಲೋಚನೆ)
ಶ್ರೀ. ಗೌರೀಶ ಕಾಯ್ಕಿಣಿ, ಗೋಕರ್ಣ ೪೬೩

ಸ್ವಪ್ನಗೃಹ (ಕವನ)
ಶ್ರೀ. ಆರ್ ಜಿ. ಕುಲಕರ್ಣಿ ಬಿ. ಎ (ಆನರ್ಸ್), ಧಾರವಾಡ ೪೬೪

ಆವೃತಸರದಲ್ಲಿಯ ಸುವರ್ಣಮಂದಿರ (ಪ್ರದೇಶಪರಿಚಯ)
ಶ್ರೀ. ಪಿ. ವಿ. ಗುಡಿ, ನವದಿಲ್ಲಿ ೪೬೬

ಪುರುಷಸೂಕ್ತವಿದು ನನ್ನದು ! (ಕವನ)
ಶ್ರೀ. ಸೇತೂರಾಮ ೪೬೯

ರಾಮುವಿನ ಅಜ್ಜಿ (ಒಂದು ವ್ಯಕ್ತಿಚಿತ್ರ)
ಶ್ರೀ. ನಾ. ನರಸಿಂಹಮೂರ್ತಿ, ಮೈಸೂರು ೪೭೦

ಕೀರ್ತಿಶನಿಯಿಂದ ಯಶೋಲಕ್ಷ್ಮಿಗೆ (ಸ್ವಪ್ನೇಶ್ವರನಾಥ್ಯಕ್ಷರ ವ್ಯಕ್ತಿತ್ವ)
ಶ್ರೀ. ಕೋ. ಚೆನ್ನಬಸಪ್ಪ, ಬಳ್ಳಾರಿ ೪೭೫

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಬರವಣಿ ಮತ್ತು ಶ್ರೀ. ಶರ್ಮಾ ೪೭೭

ಸಾದರಸ್ವೀಕಾರ ಕವರ್ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೯ ಸಂಚಿಕೆ ೧೨

ಕುಟುಂಬದಲ್ಲಿಯ ಎಲ್ಲರೂ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆಗೆ ೮ ಆಣೆ.

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ

ಸಂಪಾದಕೀಯ

卐

ಹತ್ತೊಂಬತ್ತು ವರ್ಷಗಳು

ಈ ಸಂಚಿಕೆಗೆ ಜಯಂತಿ ತನ್ನ ಹತ್ತೊಂಬತ್ತನೆಯ ವರ್ಷವನ್ನು ಮುಗಿಸಿತೆಂದು ಸಮಾಧಾನದ ಉಸಿರಿಡುತ್ತಲೇ ಹೇಳಬೇಕಾಗಿದೆ. ಹತ್ತೊಂಬತ್ತು ವರ್ಷಗಳ ಅವಧಿಯೇನು ಚಿಕ್ಕದಲ್ಲ. ಒಬ್ಬನೇ ಒಬ್ಬ ಸಂಪಾದಕ ಇಷ್ಟು ದಿವಸಗಳ ವರೆಗೆ ನಡೆಸಿದ ಕನ್ನಡ ಮಾಸಪತ್ರಿಕೆಯೆಂದರೆ ಜಯಂತಿ ಒಂದೇ ಎಂದು ಹೇಳುತಂತಿದೆ. ಕೆಲವೊಂದು ಸಲ ೩-೪ ದಿನಗಳ ವಿಲಂಬವಾಗಿರಬಹುದು; ಆದರೆ ಯಾವ ತಿಂಗಳಲ್ಲಿಯೂ ಸಂಚಿಕೆ ಹೊರಡದೆ ಇಲ್ಲ. ಸಂಯುಕ್ತ ಸಂಚಿಕೆಯನ್ನು ಜಯಂತಿ ಎಂದೂ ಹೊರಡಿಸಿಲ್ಲ. ಹೊರಟಂದಿನಿಂದ ಇದುವರೆಗೆ ಜಯಂತಿ ತನ್ನ ೨೩೮ ಸಂಚಿಕೆಗಳನ್ನು ಕನ್ನಡ ವಾಚಕರಿಗೆ ಸಲ್ಲಿಸಿದೆ.

ಲೌಕಿಕ ವ್ಯವಹಾರವಾದಿಗಳು ಜಯಂತಿಯ ಸಂಚಾಲಕರನ್ನು "ವ್ಯವಹಾರಿ" 'ಹುಚ್ಚ' ಎಂದೇ ಕರೆಯಬಹುದು. ಏಕೆಂದರೆ ವ್ಯವಹಾರದಲ್ಲಿ ಹಾಕಿದ ಬಂಡವಲು ಒಂದಕ್ಕೆ ಎರಡರಷ್ಟು ಲಾಭ ತಾರದೆ ಹೋದರೆ, ಆ ವ್ಯವಹಾರವನ್ನೆವರು ಬಿಟ್ಟು ಬೇರೆಯದನ್ನು ಕೈಕೊಳ್ಳುವರು. ಆದರೆ ಜಯಂತಿಗೆ ಹಾಕಿದ ಬಂಡವಾಳ ಲಾಭವನ್ನು ತರುವುದು ಒತ್ತಟ್ಟಿಗಿರಲಿ, ತಾನೂ ತಿರುಗಿ ಸಂಚಾಲಕರ ಕೈಗೆ ಸಿಗದಂತೆ ಕಣ್ಮರೆಯಾಗುತ್ತಲಿದೆ. ಆದರೂ ಜಯಂತಿಯ ಕೈಬಿಡದ ಸಂಚಾಲಕರಿಗೆ ವ್ಯವಹಾರಜ್ಞಾನವಿದೆಯೆಂದು ಹೇಳಬಹುದೇ ಯಾರಾದರೂ? ಜಯಂತಿಯನ್ನು ಕುರಿತು ಜನರು ಆಡುವ ಮೆಚ್ಚಿಕೆಯ ಮಾತುಗಳನ್ನು ಕೇಳುತ್ತಿರುವಾಗ 'ಇನ್ನೇನು, ಜಯಂತಿಯ ದಾರಿ ಸುಗಮವಾಗುವುದು' ಎಂದು ಎನಿಸುವುದು. ಆದರೆ ವಾಸ್ತವಸಂಗತಿ ಇದಕ್ಕೆ ತೀರ ವಿರೋಧಿಯಾಗಿದೆ ಮೆಚ್ಚಿಕೆಯ ಮಾತುಗಳು ಹೆಚ್ಚಿದಂತೆಲ್ಲ ತಿಂಗಳ ಆದಾಯ ಕಡಮೆಯಾಗುತ್ತಲಿದೆ. ಇದೊಂದು ಒಡೆಯಲಾರದ ಒಗಟು.

ಒಡೆಯಲಾರದ ಒಗಟೇನು—ಇದೊಂದು ಕಾಲಧರ್ಮ! ಇಂದು ಬಹು ಜನರಿಗೆ ತಾಯಿಯ ಕರುಳುನುಡಿ ಬೇಕಾಗಿಲ್ಲ; ಗರತಿಯ ಪೈಲುನುಡಿ ರುಚಿಸುವುದಿಲ್ಲ. ಗುರುವಿನ ತಿಳಿನುಡಿ ಅಗತ್ಯವಿಲ್ಲ ಅವರಿಗೆ ಎಂತೆಂತಹವೋ ಕಚಕುಳಿಯಿಡುವ ಹುಳುವಾತುಗಳು ಬೇಕಾಗಿವೆ. ಅಂತಹ ಹುಳುಗಳನ್ನು ಹರಡುವ ಆಪೇಕ್ಷೆ ಜಯಂತಿಗಿಲ್ಲ. ಕನ್ನಡ ತಾಯಿಯ ಕೂಸುಗಳೆಲ್ಲ ತುಂಬುಮಾನಿಸರಾಗಿ ಬದುಕವಂತಾಗಬೇಕೆಂಬುದು ಜಯಂತಿಯ ಮಹದಾಶೆ. ಅದಕ್ಕಾಗಿ ತಾಯಿ ಹಾಲಿನ ಸತ್ವವನ್ನು ಕನ್ನಡಿಗರಿಗೆ ಉಣ್ಣಿಸುವ ಪಣದಿಂದ, ಪ್ರಾಮಾಣಿಕವಾಗಿ ಬದು ಹೆಣಗುತ್ತಿದೆ. ಸುಂದರ ರೂಪುತೊಟ್ಟು ನಂಜುಮೊಲೆಯನ್ನು ಉಣಿಸುವ ಪೂತನಿಯಾಗಲು ಜಯಂತಿಗೆ ಮನಸ್ಸಿಲ್ಲ. ಗೊಲ್ಲಾತನ ಆಕಳಾಗಿ ಕೆನೆಮಾಲಾ ತನಿಬೆಣ್ಣೆಗಳನ್ನು ಕೊಟ್ಟು, ಮಕ್ಕಳನ್ನು ಮಲ್ಲರನ್ನಾಗಿಸಬೇಕೆಂಬ ಮನಸ್ಸಿದೆ. ನಮ್ಮ ಜನತೆ ವಿವೇಕಬುದ್ಧಿಯಿಂದ ವಿಚಾರಮಾಡಿ ಜಯಂತಿಯ ಕಡೆಗೆ ನೋಡಿದರೆ, ಅದು ದೀರ್ಘಕಾಲದ ವರೆಗೆ ತನ್ನ ವಿಧಾಯಕ ಕಾರ್ಯವನ್ನು ಸಾಗಿಸಲು ಅನುಕೂಲವಾದೀತು.

ಕತ್ತಲೆಯಲ್ಲಿ ಬೆಳಕು ಬೇಕೆನ್ನುವವನು ದೀಪದ ಏರ್ಪಾಡನ್ನು ಮಾಡಿಕೊಳ್ಳಲೇಬೇಕು. ಶೆರೆಯುವ ದೀಪಕ್ಕೆ ಹಣತೆಬೇಕು, ಎಣ್ಣೆಬೇಕು, ಬತ್ತಿಬೇಕು. ಇವುಗಳಿಗಾಗಿ ಅವನು ತನ್ನ ಯೋಗ್ಯತೆಯಂತೆ ಅರ್ಥತ್ಯಾಗಕ್ಕೆ ಸಿದ್ಧನಾಗಲೇಬೇಕಾಗುವುದು. ತ್ಯಾಗವಿಲ್ಲದೆ ಹಾಗೆಯೇ ಬೆಳಕುಬೇಕೆಂದರೆ ಹೇಗೆ ಸಿಗಬೇಕು? ಜಯಂತಿಯ ತಿಳಿವಿನ ಬೆಳಕಿನ ದೇವಿಗೂ ಎಣ್ಣೆಬೇಕು. ಎಣ್ಣೆಯಿಲ್ಲದೆ ಅದು ಎಷ್ಟು ಹೊತ್ತು ಉರಿದೀತು? ಜಯಂತಿಯ ದೀವಿಗೆ ನಂದಾದೀವಿಗೆಯಾಗಬೇಕೆಂದು ಬಯಸುವ ವಿಚಾರಿಗಳು, ಅದಕ್ಕೆ ಕಾಲಕಾಲಕ್ಕೆ ಎಣ್ಣೆ

ರಿಯುವ ಏರ್ಪಾಡನ್ನು ಮಾಡಬೇಕು. ಇಲ್ಲವಾದರೆ ದೀಪವು ಣ್ಣಗಾಗಿ ಹೋದಮೇಲೆ ಪಶ್ಚಾತ್ತಾಪಪಡಬೇಕಾದೀತು.

ಈ ಹತ್ತೊಂಬತ್ತನೆಯ ವರ್ಷದಲ್ಲಿ ಜಯಂತಿ ಅನುಭವಿಸ ೇಕಾಗಿ ಬಂದ ದುರ್ಧರ ಆಪತ್ತಿಗಳು ಅಸಂಖ್ಯ. ಅಂತಹದರಲ್ಲಿಯೂ ನ್ನ ಕರ್ತವ್ಯಕ್ಕೆ ಚ್ಯುತಿಯನ್ನು ತಂದುಕೊಳ್ಳದೆ, ಅದು ಮುಂದು ರಿದಿದೆ. ಈ ವರ್ಷದ ಒಂದೊಂದು ಸಂಚಿಕೆಯಲ್ಲಿಯೂ ಪ್ರಕಟವಾದ ಷಯಗಳನ್ನು ಪ್ರಾಮಾಣಿಕ ಮನಸ್ಸಿನಿಂದ ವಿಮರ್ಶೆಮಾಡಿ ೋಡಿರಿ. ವಿವಿಧತೆ, ಬಹುಶ್ರುತತೆ, ಸೌಂದರ್ಯ, ಮನೋರಂಜನ ಯಾವುದರಲ್ಲಿಯೂ ಜಯಂತಿ ಹಿಂದೆ ಬಿದ್ದಿಲ್ಲವೆಂಬುದು ಒಡೆದು ಾಣದಿರದು. ಜಯಂತಿಗೆ ಪುಟಗಳು ಹೆಚ್ಚಿಗಿಲ್ಲ; ಸರಿ! ಜಯಂತಿ ುಲ್ಲಿ ಚಿತ್ರಗಳಿಲ್ಲ; ಒಪ್ಪಿಗೆ! ಜಯಂತಿಯ ಅಚ್ಚು ಜೆನ್ನಾಗಿಲ್ಲ; ಅದೂ ರಿಯೆ! ಆದರೆ ಜಯಂತಿ ಕೊಟ್ಟಿರುವ ವಿಷಯಗಳು ಯಾವ ಾಷೆಯ—ಯಾವ ಒಳ್ಳೆಯ ಪತ್ರಿಕೆಗಳು ಕೊಡುವ ವಿಷಯಗಳಿಗೂ ಡನೆಯಿಲ್ಲವೆಂಬುದನ್ನು ಸಹೃದಯರು ಒಪ್ಪದಿರರು. ಹದಿನಾರಾಣೆ ಣದಲ್ಲಿ ಹನ್ನೆರಡಾಣೆಯ ಗುಣವನ್ನು ಜಯಂತಿ ಕೊಟ್ಟಿರುವುದು; ೂಡಲಿರುವುದು. ಮಿಕ್ಕ ನಾಲ್ಕಾಣೆಯ ಗುಣವನ್ನೂ ಅದರಿಂದ ೇಕ್ಷಿಸುವವರು, ಜಯಂತಿಗೆ ಪೋಷಕರಾಗಿ ಮುಂದೆ ಬರಬೇಕು. ಣಕೊಟ್ಟು ಓದುವ ವಾಚಕವರ್ಗ ಹೆಚ್ಚಾದಂತೆ, ಜಯಂತಿ ಎಲ್ಲ ಣಗಳಿಂದಲೂ ತುಂಬಿ ನಿಲ್ಲುವುದೆಂದು ನಾವು ಆಶ್ವಾಸನ ಕೊಡ ುಲ್ಲೆವು. ಹೊರಗಡೆಯಲ್ಲಿಯೆ ತಿರಿದುಂಡು ಹಗಲಿರುಳೂ ತನ್ನ ಸೇವೆಗೆ ದ್ಧನಾಗಿರುವ ಸೇವಕ ಬೇಕೆಂದು ಎಲ್ಲರೂ ಬಯಸತೊಡಗಿದರೆ, ಈ ಸ್ವಾಭಾವಿಕವಾದ ಬಯಕೆ ಪೂರಯಿಸುವ ಬಗೆ ಹೇಗೆ?

ಕನ್ನಡನಾಡು ಒಂದಾಗಿದೆ. ಇನ್ನು ಮೇಲಾದರೂ ಜಯಂತಿಗೆ ಸಮೃದ್ಧಿಕಾಲಬರಬಹುದೆಂದರೆ, ಅಂತಹ ಆಶೆಗೂ ಅವಕಾಶವಿಲ್ಲ- ಂತಾಗಿದೆ. ನಾಡು ಒಂದಾಗಿದ್ದರೂ ನಾಡಿಗರ ಮನಸ್ಸು ಒಂದಾಗಿಲ್ಲ. ಾಡಿನ ನಾಯಕರೆನಿಸಿಕೊಳ್ಳುವವರಿಗೆ, ನಾಡಿಗೆ ಯಾವ ಮಾತಿನ ಅಗತ್ಯವಿದೆಯೆಂಬುದು ತಿಳಿದಿಲ್ಲ ಅಡಳಿತದ ಸೂತ್ರವನ್ನು ಹಿಡಿದವರು ಸಮತೆಯ ದೃಷ್ಟಿಯನ್ನು ಬಿಟ್ಟು, ಸಂದಿಗ್ಧದೃಷ್ಟಿಯಿಂದ ಜನರನ್ನು ೋಡುತ್ತಲಿದ್ದಾರೆ. ನ್ಯಾಯಬುದ್ಧಿ ಬಲಿಷ್ಠನಂತೆ ನಿರ್ಭೀತವಾದುದು ಸ್ವಾರ್ಥಬುದ್ಧಿ ಹೇಡಿಯಂತೆ ತನ್ನ ನೆರಳಿಗೇ ಹೆದರಿಹೆದರಿಬೀಳು. ಂತಹವು ಆಡಳಿತದಲ್ಲಿರುವವರೆಲ್ಲ ಇಂತಹ ಹೆದರಿಕೆಯ ಸ್ಥಿತಿ ಯಲ್ಲಿ ಇರುವಾಗ, ಜಯಂತಿಯನ್ನು ಆತ್ಮೀಯಭಾವದಿಂದ ಕಾಣು- ವವರು ಹೇಗೆ ದೊರೆತಾರು? ಜಯಂತಿ ಎಂದೂ ಯಾವುದೇ ವೈಯಕ್ತಿಕ ಪಕ್ಷವನ್ನು ಕಟ್ಟಿಲ್ಲ; ಮುಂದೆಯೂ ಕಟ್ಟಲಾರದು. ನಿಷ್ಪಕ್ಷ ಪಾತಿಯಾಗಿ ಸತ್ಯ-ನ್ಯಾಯಗಳನ್ನು ಎತ್ತಿ ಹಿಡಿಯುವಂತಹದು. ಇದರ ರೀತಿ ನಮ್ಮ ಆಡಳಿತದ ಸೂತ್ರಧಾರಿಗಳಿಗೆ ಪಥ್ಯಕರವೆನಿಸು ವುದು ಸಂಶಯದ ಮಾತೇ ಆಗಿದೆ.

ಹುಟ್ಟಿದಂದಿನಿಂದಲೂ ಕಷ್ಟದಲ್ಲಿಯೆ ಬೆಳೆಯುತ್ತ ಬಂದಿದ್ದರೂ ಜಯಂತಿ ಒಂದು ಆಶಾಸೂತ್ರವನ್ನು ಅಂಟಿಕೊಂಡು ಮುಂದುವರಿದಿದೆ. ಂದಿಲ್ಲ ನಾಳೆ-ಜನತೆ ತನ್ನ ಕಾರ್ಯದ ಕಡೆಗೆ ಕಣ್ಣೆರೆದು ನೋಡಿಯೇ ನೋಡುವುದೆಂಬ ಶ್ರದ್ಧೆಯನ್ನು ಅದು ಇರಿಸಿಕೊಂಡಿದೆ. ಈ ಶ್ರದ್ಧೆಯೇ ಜಯಂತಿಯ ಊರುಗೋಲು. ಇದು ಮುರಿದುಬಿದ್ದರೆ ಜಯಂತಿಯೂ ಅಂದೆಯೇ ಮುಗ್ಗರಿಸಿಬೀಳುವುದು. ನಮ್ಮ ಭಾಗ್ಯವಿಧಾತ ಅಂತಹ ದಿನವನ್ನು ತಾರದಿರಲೆಂದು ಜಯಂತಿಯ ಹಿತಚಿಂತಕರೆಲ್ಲ ಬೇಡಿ ಕೊಳ್ಳಬೇಕು.

ಜಯಂತಿಗೆ ದೊರೆತಿರುವ ಒಂದು ಸೌಭಾಗ್ಯವೆಂದರೆ ನಿರಪೇಕ್ಷೆ ಯಿಂ ನೆರವನ್ನು ಕೊಡುತ್ತಬಂದಿರುವ ಸಮರ್ಥವಾದ ಲೇಖಕ- ವ್ಯಂದ. ಹಣಕೊಟ್ಟು ಬರೆಯಿಸಿದರೂ ಇನ್ನೆಷ್ಟಬ್ಬರಿಗೆ ದೊರೆಯುತ್ತಾರ ದಂತಹ ಲೇಖನಗಳನ್ನು, ನಮ್ಮ ಅಭಿವಾಸಿಗಳಾದ ಲೇಖಕರು ತಾವಾಗಿಯೆ ಕಳುಹುತ್ತಾರೆ. ನಮ್ಮಿಂದ ಒದಗುವ ಅನೇಕ ಅಪರಾಧ ಗಳನ್ನು ಆತ್ಮೀಯಭಾವದಿಂದ ಕ್ಷಮಿಸುತ್ತಾರೆ. ಜಯಂತಿಯ ಒಂದೊಂದು ಪುಟವೂ ನಮ್ಮ ವಾಚಕರಿಗೆ ಮೆಚ್ಚಿಗೆಯಾಗಲು ಮುಖ್ಯ ಕಾರಣರೆಂದರೆ ನಮ್ಮ ಲೇಖಕರು. ಅವರಿಗೆ ನಾವು ಸಲ್ಲಿಸುವ ಪ್ರತಿ- ಫಲವೆಂದರೆ ಕೃತಜ್ಞತೆಯ ವಂದನೆಗಳು.

ಜಯಂತಿಯನ್ನು ಹಣಕೊಟ್ಟು ತರಿಸಿ ಪ್ರೀತಿಯಿಂದ ಓದುವ ಕೆಲವು ಚಂದಾದಾರರಾದರೂ ದೊರೆತಿರುವುದು, ಜಯಂತಿಯ ಜೀವಿತದ ಆಶೆಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ಇವರು ಜಯಂತಿಯ ಗುಣಗಳನ್ನೇ ಕಾಣುವರಲ್ಲದೆ ಕೊರತೆಗಳ ಕಡೆಗೆ ಲಕ್ಷ್ಯವನ್ನೇ ಕೊಡರು. ಇಂತಹ ಜನರು ಇನ್ನಿಷ್ಟು ಹೆಚ್ಚಿದರೆ, ಜಯಂತಿ ತನ್ನ ಕೊರತೆಗಳನ್ನು ಕಡಿಮೆಮಾಡಿಕೊಂಡೀತು; ಇನ್ನಿಷ್ಟು ಗುಣ ಗಳನ್ನು ಬೆಳಸಿಕೊಂಡೀತು. ಜಯಂತಿಯನ್ನು ಒಲವಿನಿಂದ ಪುರಸ್ಕರಿ- ಸುವ ಚಂದಾದಾರರ ಬಳಗಕ್ಕೂ ನಮ್ಮ ಅಭಿವಂದನೆಗಳು.

ಜಯಂತಿ ಇನ್ನೊಂದು ವರ್ಗದ ವ್ಯಕ್ತಿಗಳಿಗೂ ತನ್ನ ಕೃತಜ್ಞತೆ ಗಳನ್ನು ಸಲ್ಲಿಸಬೇಕಾಗಿದೆ. ಅವರಾರೆಂದರೆ ಸಾಲ-ಕೈಗಡಗಳಿಂದ ಜಯಂತಿಗೆ ಅನುಕೂಲತೆಯನ್ನು ಒದಗಿಸಿದ ಸಿರಿವಂತರು. ಅವರು ಜಯಂತಿಯನ್ನೂ ಅದರ ಸಂಚಾಲಕರನ್ನೂ ಸಾಕಷ್ಟು ಸಹಾನು ಭೂತಿಯಿಂದಲೂ ಸಹನೆಯಿಂದಲೂ ನೋಡುತ್ತ ಬಂದಿದ್ದಾರೆ. ಅವರು ಕೇವಲ ವ್ಯವಹಾರಿಗಳಾಗಿ ಸ್ವೈರಣಿಗೆಟ್ಟು ನಡೆದುಕೊಂಡಿದ್ದರೆ, ಜಯಂತಿ ನೆಲೆನಿಲ್ಲಲು ಅವಕಾಶವೇ ಇರಲಿಲ್ಲ.

ಸಾಮಾನ್ಯವಾಗಿ ಏಜನ್ಸಿ ವ್ಯವಹಾರವನ್ನು ನಾವು ಕಡಮೆ ಮಾಡುತ್ತಲೇ ಬಂದಿದ್ದೇವೆ. ಆದರೂ ಜಯಂತಿಯ ಮೇಲಿನ ಪ್ರೀತಿಯಿಂದ ವ್ಯವಹಾರವನ್ನು ನಿಲ್ಲಿಸದ ಹತ್ತಾರು ಜನ ಏಜಂಟರು ಈಗಲೂ ಇದ್ದಾರೆ ಅವರ ಆತ್ಮೀಯ ಸಹಕಾರಕ್ಕಾಗಿ ನಮ್ಮ ಅಭಿನಂದನೆಗಳನ್ನು ಅವರಿಗೆ ಸಲ್ಲಿಸಲೇಬೇಕು.

ವಿಜಯ ಮುದ್ರಣಾಲಯದ ಶ್ರೀ. ಹೊಸಕೇರಿ ನಾರಾಯಣ- ರಾಯರು, ಲಾಭದ ದೃಷ್ಟಿಗಿಂತ ಹೆಚ್ಚಾಗಿ ಜಯಂತಿಯ ಯೋಗ- ಕ್ಷೇಮದ ದೃಷ್ಟಿಯನ್ನಿರಿಸಿಕೊಂಡು ಸಹಕರಿಸುತ್ತಿರುವರು. ಈ ಅವರ ಆತ್ಮೀಯತೆಯನ್ನು ಜಯಂತಿ ಎಂದೂ ಮರೆಯದು.

ಹೊಸವರ್ಷ ಜಯಂತಿಯ ಬದುಕಿಗೆ ಭದ್ರತೆ ತರಲಿ!

—ಸಂಪಾದಕರು

ನಾಡನಡೆ

ಈ ಸಲದ ಕ. ಸಾ. ಸಮ್ಮೇಳನದ ವೈಶಿಷ್ಟ್ಯ

ಕನ್ನಡಿಗರೆಲ್ಲರೂ ಒಂದೆ ರಾಜಕೀಯ ಆಡಳಿತದ ಸೂತ್ರದಲ್ಲಿ ಬಂಧಿತರಾದ ಮೇಲೆ, ಮೊತ್ತಮೊದಲನೆಯದಾಗಿ ಸೇರುತ್ತಲಿದೆ. ಈ ಸಲದ ಕನ್ನಡ ಸಾಹಿತ್ಯಸಮ್ಮೇಳನ ಉತ್ತರಕರ್ನಾಟಕದಲ್ಲಿ ಈ ಮೊದಲು ನಡೆದ ಕನ್ನಡಸಾಹಿತ್ಯಸಮ್ಮೇಳನಗಳೆಲ್ಲ ಸಾರ್ವಜನಿಕರ ಪ್ರಾತಿನಿಧ್ಯದಲ್ಲಿ ನಡೆದುವು. ಈ ಸಲ ಕರ್ನಾಟಕ ವಿಶ್ವವಿದ್ಯಾಲಯವು ತಾನೆ ಪ್ರಾತಿನಿಧ್ಯ ವಹಿಸಿ ನಡೆಯಿಸುತ್ತಲ್ಲಿದೆ. ಇದುವರೆಗಿನ ಸಮ್ಮೇಳನಗಳೊಂದಿಗೆ ಕವಿಗೋಷ್ಠಿ, ಸಾಹಿತ್ಯಗೋಷ್ಠಿ, ಮಹಿಳಾಗೋಷ್ಠಿ, ನಾಟಕಗೋಷ್ಠಿಗಳು ನಡೆಯುತ್ತಿದ್ದುವು. ಈ ಸಲ ಅವಾವುದೂ ಇಲ್ಲವಾದರೂ, ದೇರೆ ದೇರೆ ಅಧ್ಯಕ್ಷರ ನೇತೃತ್ವದಲ್ಲಿ ವಿಚಾರಸಂಕಿರಣ, ಚರ್ಚಾಗೋಷ್ಠಿಗಳು ನಡೆಯಲಿವೆ ಸಮ್ಮೇಳನ ಸೇರುವ ನಗರದಲ್ಲಿ ಪ್ರತಿಯೊಬ್ಬ ಸುಶಿಕ್ಷಿತನೂ ಸಮ್ಮೇಳನವನ್ನು ಯಶಸ್ವಿಯಾಗಿಸುವ ಭಾರ ತನ್ನ ಮೇಲಿದೆಯೆಂಬ ಭಾವನೆಯಿಂದ ಕಾರ್ಯಮಾಡುತ್ತಿದ್ದ, ಇದು ವರೆಗಿನ ಸಮ್ಮೇಳನಗಳ ಕಾಲದಲ್ಲಿ ಈ ಸಲ ಜನಸಾಮಾನ್ಯರಲ್ಲಿ ಅಂತಹ ಆತ್ಮೀಯಭಾವನೆ ಕಾಣುತ್ತಿಲ್ಲ. ಸಮ್ಮೇಳನದ ಎಲ್ಲ ಹೊಣೆಯನ್ನು ಕರ್ನಾಟಕ ವಿಶ್ವವಿದ್ಯಾಲಯವೇ ಹೊತ್ತುಕೊಂಡುದರಿಂದ, ಮಿಕ್ಕ ಜನರಿಗೆ ಅದಕ್ಕಾಗಿ ತಪಿಸುವ ಕಾರಣವೇ ಉಳಿದಿಲ್ಲ. ತಮ್ಮ ತಪಸ್ಸಿನ ಫಲವೂ ಸಮ್ಮೇಳನದ ಯಶಸ್ಸಿಗೆ ಕಾರಣವಾಗುವುದೆಂಬ ಭಾವನೆ ಜನರಲ್ಲಿ ಇದ್ದರೆ, ಅದರ ಕಾರ್ಯದ ಬಗೆಗೆ ಅವರಲ್ಲಿ ಹೆಚ್ಚಿನ ಆತ್ಮೀಯಭಾವ ಉದಿಸುತ್ತಿತ್ತು. ಇಂದು ನೋಡಿದರೆ, ಜನರಲ್ಲಿ, ಔದಾಸೀನ್ಯಯುಕ್ತವಾದ ನಿಷ್ಕ್ರಿಯ ಕುತೂಹಲಭಾವ ಮಾತ್ರ ಕಂಡುಬರುತ್ತಲಿದೆ

ಇನ್ನೂ ಒಂದು ವಿಶೇಷವೆಂದರೆ, ಸಮ್ಮೇಳನದ ಕಾರ್ಯಕಲಾಪದ ಪಟ್ಟಿಯನ್ನು ನೋಡಿದರೆ, ಭಾಗವಹಿಸಲಿರುವ ಜನರೆಲ್ಲರೂ ಹೆಚ್ಚಾಗಿ–ಲಬ್ಧ ಪ್ರಸಿದ್ಧಿಯವರು ಎಂಬುದು ಕಂಡುಬರುವ ಹೊಸ ಸಾಹಿತ್ಯಕರ ವಿಚಾರ ಪ್ರದರ್ಶನ-ವಿನಿಮಯಗಳಿಗೆ ಅವಕಾಶ ಕಲ್ಪಿಸಿದಂತಿಲ್ಲ. ಯುವಕರ ಆಶೆ-ಆದರ್ಶಗಳೇನೆಂಬುದೂ ನಮ್ಮ ಜನರಿಗೆಲ್ಲ ತಿಳಿಯುವ ಅಗತ್ಯವಿದೆಯೆಂಬುದನ್ನು, ವಿಶ್ವವಿದ್ಯಾನಿಲಯದ ಹಿರಿಯರು ಮರೆಯಬಾರದಾಗಿತ್ತು.

ಈ ಸಲದ ಅಧ್ಯಕ್ಷರು

ಶ್ರೀಮಾನ್ ಕೆ. ವಿ. ಪುಟ್ಟಪ್ಪನವರು ಈ ಸಲದ ಸಮ್ಮೇಳನಕ್ಕೆ ಅಧ್ಯಕ್ಷರಾಗಲು ಒಪ್ಪಿಕೊಂಡುದೂ ಒಂದು ವೈಶಿಷ್ಟ್ಯವೆಂದೇ ಹೇಳಬಹುದು. ತಮ್ಮ ವಿವಿಧ ಮುಖ ಸಾಹಿತ್ಯನಿರ್ಮಿತಿಯಿಂದ ಅಖಿಲ ಕರ್ನಾಟಕಕ್ಕೂ ಜ್ಞಾತರಾಗಿ, ವೈಯಕ್ತಿಕವಾಗಿ ತಾವು ಅಜ್ಞಾತರಾಗಿಯೇ ಉಳಿಯಲು ಬಯಸಿದ ಅವರದೊಂದು ಜೀವನ ರೀತಿ ಹಲವು ಜನರಲ್ಲಿ ಅವರನ್ನು ಪ್ರತ್ಯಕ್ಷವಾಗಿ ಕಂಡು ಅವರ ಮಾತುಗಳನ್ನು ಕೇಳಬೇಕೆಂದು ಬಯಸುತ್ತಿತ್ತು. ಎಂತಲೇ ಇದಕ್ಕೆ ಮೊದಲೇ ಸಾ. ಸಮ್ಮೇಳನಾಧ್ಯಕ್ಷತೆಯು ಕರೆ ಜನತೆಯಿಂದ ಅನೇಕ ಬಾರ ಹೋಗಿದ್ದರೂ ಅವರು ಸಮ್ಮತಿಸಿರಲಿಲ್ಲ. ಈ ಸಲ ಸಮ್ಮತಿಸಿ ಕನ್ನಡಿಗರಿಗೆಲ್ಲ ಕಾಣಿಸಿಕೊಳ್ಳುತ್ತಿರುವುದು ಸಂತೋಷದ ಸಂಗತಿಯಾಗಿದೆ.

ಶ್ರೀ. ಕೆ. ವಿ. ಪುಟ್ಟಪ್ಪನವರು ಮಹಾಕವಿಗಳೆಂಬುದನ್ನು ಪ್ರತ್ಯೇಕವಾದ ಬಣ್ಣನೆಯ ಮಾತುಗಳಲ್ಲಿ ಹೇಳಬೇಕಾಗಿಲ್ಲ, ಮಾಪ್ಪ ವತೆಯನ್ನು ಚೆನ್ನಾಗಿ ವಿಕಾಸಗೊಳಿಸಿಕೊಂಡ ವ್ಯಕ್ತಿತ್ವ ಅವರದು. ಸಾಧನೆಯಿಂದ ಪ್ರವಾದಿಯ ಅಂತಸ್ತನ್ನೂ ಕಂಡವರಾಗಿದ್ದಾರೆ. ಇಂತಹವರು ವಿಶ್ವವಿದ್ಯಾಲಯದವರು ವರ್ಧಿಸಿ ನಡೆಯಿಸುವ ಈ ಸಮ್ಮೇಳನದ ಘನತೆಯನ್ನು ಅರಿತು, ಅಧ್ಯಕ್ಷರಾಗಲು ಇತ್ತ ಕರೆಗೆ ಮನ್ನಣೆಯಿತ್ತುದು ಎಲ್ಲರಿಗೂ ಇಷ್ಟವಾದ ಸಂಗತಿ. ಅವರ ನೇತೃತ್ವದಲ್ಲಿ ನಡೆಯುವ ಈ ಸಮ್ಮೇಳನ ವೈಶಿಷ್ಟ್ಯಪೂರ್ಣವಾಗಿ ನೆರವೇರುವುದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಬೆಳಗಾಂವಿಯಲ್ಲಿ ಜಾತೀಯ ಜಗಳವೆ ?

ಇದೊಂದು ಆಶ್ಚರ್ಯದ ಸಂಗತಿ. ಉತ್ತರ ಕರ್ನಾಟಕದ ಯಾವ ನಗರದಲ್ಲಿಯೂ ಹಿಂದೂ–ಮುಸಲ್ಮಾನರ ವೈಷಮ್ಯ ಇಲ್ಲವೇ ಇಲ್ಲ. ಬೆಳಗಾಂವಿಯಲ್ಲಂತೂ ಹಿಂದೂ—ಮುಸಲ್ಮಾನರು ಎಂದಿನಿಂದಲೂ ಸೌಹಾರ್ದದಿಂದ ಜೊತೆಗೂಡಿ ಬದುಕಿದ್ದಾರೆ. ಇಂತಹ ನಗರದಲ್ಲಿ ಜಾತೀಯ ಜಗಳವೇಳಬೇಕಾದರೆ, ಇದಕ್ಕೆ ಕೇವಲ ವೈಷಮ್ಯ ಕಾರಣವಾಗಿ ಇರದೆ, ಯಾವುದೋ ಬೇರೆಯ ರಾಜಕೀಯ ಕಾರಣವಿದೆಯೆಂದು ಯಾರಾದರೂ ಭಾವಿಸಿದರೆ ಅದು ಅಸ್ವಾಭಾವಿಕ ಎನಿಸಲಾರದು. ಮೊನ್ನೆಯ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಹುರಿಯಾಳಾಗಿ ಬೆಳಗಾಂವಿಯಲ್ಲಿ ಒಬ್ಬ ಮುಸಲ್ಮಾನ ಸಭ್ಯಗೃಹಸ್ಥರೇ ಇದ್ದರು. ಅವರಿಗೆ ಕಾಂಗ್ರೆಸ್ ಮನೋವೃತ್ತಿಯ ಹಿಂದುಗಳೂ ಮುಸಲ್ಮಾನರೂ ಕೂಡಿಯೆ ಮಮತೆಯಿಂದ ಮತಗಳನ್ನೂ ಹಾಕಿದರು. ಬೆಳಗಾಂವಿಯಲ್ಲಿ ಕಾಂಗ್ರೆಸ್ಸಿಗರನ್ನೂ ಕನ್ನಡಿಗರನ್ನೂ ದ್ವೇಷಿಸುವ ಮರಾಠಿಗರ ಒಂದು ಪುಂಡರ ತಂಡವಿದೆ. ಆ ತಂಡದವರೇ ಈಗ ಶಿವಜಯಂತಿಯ ಮೆರವಣಿಗೆಯ ಕಾಲವನ್ನು ದುರುಪಯೋಗ ಪಡಿಸಿಕೊಂಡು, ಹಿಂದೂ-ಮುಸಲ್ಮಾನ್ ಕಲಹವನ್ನು ಎಬ್ಬಿಸಬೇಕೆಂಬ ಕುಟಿಲ ಮಾರ್ಗವನ್ನು ಅನುಸರಿಸಿರಬಹುದಾಗಿದೆ. ನಡೆದಿರುವ ದುರ್ಘಟನೆಯನ್ನು ಹಿಂದುಗಳೂ ಮುಸಲ್ಮಾನರೂ ಜಾತೀಯ ದೃಷ್ಟಿಯಿಂದ ನೋಡಿ ಮನಸ್ಸನ್ನು ಕೆಡಿಸಿಕೊಳ್ಳಬಾರದೆಂದು ನಮ್ಮ ಹಾರೈಕೆ, ಆದ ದೊಂಬಿಯ ನಿಜವಾದ ಕಾರಣ ಬೆಳಕಿಗೆ ಬಾರದೆಹೋಗದು.

(೪೦ನೆಯ ಪುಟದಿಂದ ಬಂದುದು)

ಬಾಯಿಯಿಂದ ಅವರವರ ಯೋಗ್ಯತೆಗನುವಾಗಿ ಹೊರಡಿಸಿ-ನಾಟಕೀಯ ಸೌಶೀಲ್ಯವನ್ನೂ, ಸಭ್ಯತೆಯನ್ನು ಉರುಳಿಸಿಕೊಂಡ ಲೇಖಕರೂ ಶ್ಲಾಘನೀಯರೆಂದು ಅಭಿಮಾನದಿಂದ ಹೇಳಬೇಕಾಗಿದೆ — ೪ ನೆಯ ದೃಶ್ಯವು ಮುಂದೆ ಕಾಣಬರುವುದು. ನಾವು ಜೈನಮುನಿಗಳ ಮುಂದೆ ಬಂದುನಿಂತ ಈ ನಾಲ್ವರನ್ನೂ ಕಾಣಬಹುದು. ಮುನಿಗಳು ತಾನು ಆಶೀರ್ವಾದ ಮಾಡಿದುದು ಮಹಾಮೂರ್ಖನನ್ನು ಎಂದೆನ್ನುವಾಗ ಆ ನಾಲ್ವರೂ ಅಲ್ಲೇ ಹೊಡೆದಾಟಕ್ಕೆ ಆರಂಭಿಸಿ, ಮತ್ತು ಮುನಿಗಳ ಆದೇಶದಂತೆ ಅಲ್ಲಿಂದ ಹೊರತೆರಳಿ ಬಡಿದಾಟಕ್ಕೆ ತೊಡಗುವರು. ಈ ದೃಶ್ಯದ ಕೊನೆಯಲ್ಲಿ ಜೈನಮುನಿಗಳು ಇಂತಹ ಮಹಾಮೂರ್ಖರಿಗಾಗಿ ಕೊರಗಿ " ಕಾಣದರ್ಥವ ಕಾಣಿಸುವ ಪರಂಜ್ಯೋತಿ ನೀ ಮಾಣದೆ ನನ್ನೆದೆಯೆಂಬ । ಕೋಣೆಯುಳಿದು ಹೋದೆಯಾದರೆ ನಿನಗೆ ನಿನ್ನಾಣೆ ಚಿದಂಬರ ಪುರುಷಾ " ಎಂದಾಡುವುದು ಅರ್ಥಗರ್ಭಿತವಾಗಿದೆ. ವಿನೋದದ ಸೆಲೆಯಲ್ಲೂ ಮೂಡಿ ಬಂದ ಕವಿ-ಕಾವ್ಯಧರ್ಮವನ್ನಿದು ಸಾರಿ ತೋರುತ್ತಿದೆ. ಮುಂದೆ ೮ನೆಯ ದೃಶ್ಯ. ಇದು ನ್ಯಾಯಸ್ಥಾನದ ಚಿತ್ರ. ಅಧಿಕಾರಿಯು ಬೀದಿಯಲ್ಲಿ ಜಗಳವಾದ ಬಗೆಗೆ ಪ್ರಶ್ನೆ ಹಾಕಿದಾಗ ದೊಳ್ಳಿಗಣ್ಣನು ಕೊಡುವ " ಮುನಿಮಹಾರಾಜರು, ಜಿನಾಲಯದೊಳಗೆ ನಮಗೆ ಹೊಡದಾಡಲಿಕ್ಕೆ ಕೊಡಲಿಲ್ಲರಿ, ಅದಕ್ಕಾಗಿ ಬೀದಿಗೆ ಬಂದೆವು; ಇಲ್ಲದಿದ್ದರೆ ಒಳಗಡೆ ಹೊಡದಾಡತಿದ್ದಿವಿ ! " ಉತ್ತರವಿದು ಬಹು ಸೊಗಸಾಗಿದೆ. ಮುಂದೆ ಆ ಮಾತಿನ ತೊರಣಿಯಲ್ಲೇ ಮುರಿಗಾಲನಾಡುವ " ನಮಗೇನೂ ಬೀದಿಯೊಳಗೆ ಬಡಿದಾಡಬೇಕಂತ ಅಪೇಕ್ಷಾ ಇದ್ದಿಲ್ಲರೀ, ಆದರ ನಿರ್ವಾಹವೇ ಇಲ್ಲದ್ದಾಂಗ ಆತರಿ ! " ಎಂಬ ಮಾತು ನ್ಯಾಯಾಧೀಶರನ್ನು ನಗಿಸದೇನು ಮಾಡಬಲ್ಲದು ? ತುಂದೆ ನ್ಯಾಯಾಧೀಶರು " ನೀವು ಹೀಗೆ ಹೊಡೆದಾಡಿದರೆ ನಿಮ್ಮನ್ನು ಸೆರೆಮನೆಗೆ ಕಳಿಸಬೇಕಾಗುವುದು." ಎಂದಾಡುವಾಗ ಮರುಳಯ್ಯನು ' ಅಂದರ....ಅಲ್ಲೆ ಹೊಡೆದಾಡಲಿಕ್ಕೆ ಬರೂದಿಲ್ಲೇನ್ರೀ ನಮಗ ? " ಎಂದಾಡುವ ಈ ಮಾತಿನಲ್ಲಿ ನ್ಯಾಯಾಧೀಶರು ನಗಬೇಕೋ ಕೆರಳಬೇಕೋ ಇದು ಅವರಿಗೇ ನಿರ್ಣಯಾರ್ಹವಾದ ಮಾತು. ಆದರೆ ಸಭಿಕರು ನಗದೇನು ಮಾಡುವರು ? ಈ ನಗೆಯಿನ್ನು ಕೇಳಿ ಕೆರಳಿದ ಮುರಿಗಾಲನು " ಎಲೆ ! ಇವರು, ನಗುತಾರ ಯಾಕ ? ಇಲ್ಲೇನು ಕೋತಿ ಕುಣಿತಾವೇನ್ರವ್ವಾ " ಎಂದಾಡಿಯೆ ಬಿಡುವನು ! ಆ ಬಳಿಕ ನ್ಯಾಯಾಧೀಶರ ಅಪೇಕ್ಷೆಯಂತೆ ಅವರು ಒಬ್ಬೊಬ್ಬರಾಗಿಯೇ ತಮ್ಮ ಚರಿತ್ರೆಯನ್ನು ಹೇಳುವರು. ಅದೂ ಮಹಾಮೂರ್ಖತ್ವ ಸ್ಥಾಪನೆಯಾಗಿರುವ ಹೆದ್ದಾರಿಯ ಪುರಾವೆ. ಅವರು ಹೇಳುವ ಬಗೆಯದು ಬಹು ಚೆಲುವಾಗಿದೆ. ಅವರೆಷ್ಟು ಕುತೂಹಲದಿಂದ ಆನಂದದಿಂದ ಹೇಳುತ್ತಿರುವರು ! ಒಬ್ಬೊಬ್ಬನ ಚರಿತ್ರೆಯೂ ಮಹಾಮೂರ್ಖತೆಗಿರುವ ವಿಶಿಷ್ಟ ಲಕ್ಷಣಗಳಿಂದ ಕೂಡಿ ನಿಂತಿದೆ. ನಾಟಕಕಾರರು ಈ ವಿನೋದವು ಉಕ್ಕಿ ಬರುವಂತೆ ನಾಡನುಡಿಯುಲ್ಲಿ-ಬಳಕೆಯ ಮಾತುಗಳಲ್ಲಿ. ಪಾತ್ರಗಳಿಗುಚಿತವಾದ ರೀತಿಯಲ್ಲಿ ಕಾಣಿಸಿರುವುದು ಇನ್ನೂ ಚೆಲುವಿಗೆ ಕಾರಣವಾಗಿದೆ. ಪ್ರತಿಯೊಬ್ಬರೂ ತಮ್ಮ ಚರಿತ್ರೆಯನ್ನು ತಮಗುಚಿತವಾದ ನಡತೆಯಲ್ಲಿ ತೋರಿ ಮುಂದೆ ಬಂದುದು ಸರಸದ ಪರವಾವಧಿಗೇರಿವಾಗಿದೆ. ಈ ಭಾಗದಲ್ಲಿ ನಾಟಕಕಾರರು ರಸಾನುಗುಣ ಘಟನಾ ಸ್ವಾಸ್ಥ್ಯವನ್ನು, ತದುಚಿತವಾದ ಪದ-ವಾಕ್ಯ ಪದ್ಧತಿಯನ್ನು ಚೆನ್ನಾಗಿ ಗಮನಿಸಿದ್ದಾರೆನ್ನಬೇಕಾಗಿದೆ. ಮಹಾಮೂರ್ಖರ ಚರಿತ್ರೆಯಲ್ಲಿ ಪೋಟುಗಲ್ಲನ ಚರಿತ್ರೆಯೆಂಬುದು ತುಸು ವಿಶಾಲವಾಗಿದ್ದು ಅತಿ ಸುಂದರವಾಗಿದೆ. ನಿಜವಾದ ಮೂರ್ಖನೊಬ್ಬನು ಪಡುವ ಪಾಡಿಲ್ಲಿ ರುಚಿರವಾಗಿ ಸಮೆಯಲ್ಪಟ್ಟಿದೆ. ಈ ಚರಿತ್ರೆಯ ಮುಂದೆ ನ್ಯಾಯಾಧೀಶರು "ಎಲ್ಲರೂ ಆಶೀರ್ವಾದದಲ್ಲಿ ಪಾಲುಗಾರರು" ಎಂದಾಡುವುದು ಅವರೆಲ್ಲರ ತೃಪ್ತಿಗೂ ನೆಲೆಯಾಯಿತು.

ಅಂತೂ ನಾಟಕಕ್ಕುಚಿತವಾದ ಸನ್ನಿವೇಶಗಳನ್ನು, ವಿನೋದದ ಕಥಾಪ್ರಸ್ತಾವನೆಯನ್ನು ಅಡುವಾಗ ಮಧ್ಯೆ ಮಧ್ಯೆ ಪೋಷಕಸ್ಥಾನಯೋಜನೆಗಳನ್ನೂ, ವಸ್ತ್ವನುಗುಣವಾದ ದೃಶ್ಯಯೋಜನೆಯನ್ನು ಮಾಡಿಕೊಂಡ ನಾಟಕಕಾರರು, ಅದ್ವಿತ ಪಾತ್ರಗಳ ಪರಿಪೋಷಣೆಯನ್ನು ಗೈದಂತೆ, ಪಾತ್ರಾನುಗುಣವಾದ ಸಂಭಾಷಣೆಗಳನ್ನೂ ಅನುಗೊಳಿಸಿರುವುದು ಪ್ರಶಂಸನೀಯವಿದೆ.

ಒಟ್ಟು ಇದೊಂದು ಕನ್ನಡಕವಿಯೊಬ್ಬನ ಕಾವ್ಯವಸ್ತು ! ಕನ್ನಡದಲ್ಲಿ ನೆಲೆಗೊಂಡ ಒಂದು ರಸಾವಹವಾದ ವಿನೋದವಸ್ತು ! ಈ ವಸ್ತುವನ್ನು ಅನುಭವಸಂಪನ್ನ ಲೇಖನಿಯೆಂದು ರೂಪಕಮಾರ್ಗದಲ್ಲಿ ಇಳಿಸಿ ಸರಿಮಳಗೊಳಿಸಿದೆ. ರುಚಿರವಾದೀ ರೂಪಕಕ್ಕೆ ಹೃತ್ಪೂರ್ಣ ಸ್ವಾಗತವು !

ಕಳ್ಳರ ಗುರು

(ಸಣ್ಣ ಕತೆ)*

'ಆನಂದಕಂದ'

ಮಾನವನ ಸಂಸ್ಕೃತಿಸುಮನದ ಅರಳಿಕೆ ಎಲ್ಲೆಲ್ಲಿಯೂ ತನ್ನ ಪರಿಮಳವನ್ನು ಹರಡಬಲ್ಲದು. ಕಳ್ಳರ ಹಿರಿಯ ಭೀಮನಾಯಕನ ಮನಸ್ಸನ್ನು ತಿದ್ದಬೇಕಾದರೆ ವೈದ್ಯರು ಮಾಡಿದುದೇನು?

"ಒಂದು ವಾರ ಮುಗಿದುಹೋಯಿತು....ಮನೆಯೆಲ್ಲ ಸೂರೆ-ಹೋಗಿ! ಮನೆಯಲ್ಲಿ ಒಂದು ಕಾಸೂ, ಒಂದು ಕಾಳೂ ಉಳಿಯದಂತೆ, ಇದ್ದುದೆಲ್ಲವನ್ನೂ ಕಳ್ಳರು ದೋಚಿಕೊಂಡು ಹೋದರು! ಈ ಊರ ಹೊರಗಿನ ಮನೆ ಬೇಡವೆಂದು ನಾನು ಸಾರಿ ಸಾರಿ ಹೇಳಿದೆ—ನೀನೇನೂ ಕೇಳಲಿಲ್ಲ"

"ಹೋಗಲಿ ಬಿಡು ರತ್ನಾ! ನಮ್ಮಲ್ಲಿ ಅವು ಇಲ್ಲದೆ ಇದ್ದರೆ ಅವರು ಒಯ್ಯುತ್ತಿದ್ದರು ಹೇಗೆ? ಹಣ, ಹೊನ್ನು—ಇವುಗಳ ಸಂಗ್ರಹ ಬೇಡವೆಂದರೆ ನೀನು ಕೇಳುವುದಿಲ್ಲ ನಮ್ಮ ಈ ವೈದ್ಯಕವೃತ್ತಿ ದುಡ್ಡು ಗಳಿಸಬೇಕಾದುದಲ್ಲ; ಕೇವಲ ಸಮಾಜದ ಕ್ಷೇಮಸಾಧನೆಗಾಗಿ ಇರುವುದು. ಸಮಾಜದಿಂದ ನಮಗೆ, ಬದುಕಿ ಇರುವ ಮಟ್ಟಿಗೆ ಏನಾದರೂ ದೊರೆತರೆ ಸಾಕು!"

"ಏನು ದೊರೆಯುವುದು ಸಮಾಜದಿಂದ? ಕಳವಾದ ದಿನ-ದಿಂದ ಒಂದು ಕಾಸಿನ ಪ್ರಾಪ್ತಿಯಿಲ್ಲ. ತವರುಮನೆಯಿಂದ ತಂದ ನನ್ನ ಚಿನ್ನದ ಒಡವೆಗಳೂ ಹೋದುವು ಎಲ್ಲವೂ ಕಳೆದುಹೋಯಿತು. ಇನ್ನು ಬದುಕುವ ಬಗೆ ಹೇಗೆ?"

"ಎಲ್ಲವೂ ಎಲ್ಲಿ ಹೋಗಿದೆ ರತ್ನಾ? ಔಷಧಿಯ ಕುಪ್ಪಿಗಳಿಗೆ ಕಳ್ಳರು ಕೈಹಚ್ಚಿಲ್ಲ; ನನ್ನ ವೈದ್ಯಕ ಪ್ರಾವೀಣ್ಯವನ್ನಂತೂ ಯಾರೂ ಕದ್ದೊಯ್ಯಲಾರರು!"

"ಏನು ಪ್ರಾವೀಣ್ಯವೋ ಏನೋ! ನಾಳೆಯ ಮಧ್ಯಾಹ್ನದ ಊಟಕ್ಕೆ ತತ್ವಾರ ಬಂದು ಕುಳಿತಿದೆ!"

'ಢಣ್..... ಢಣ್.....ಢಣ್!' ದೂರ ಗಡಿಯಾರದಲ್ಲಿ, ರಾತ್ರಿಯ ಹತ್ತುಗಂಟೆ ಬಾರಿಸಿದುದು ಕೇಳಿಸಿತು. ವೈದ್ಯರ ಮನೆಯ ಮುಂಬಾಗಿಲು ಇಕ್ಕಿದ್ದಿತು. ಕಿರುಮನೆಯಲ್ಲಿ ಕುಳಿತುಕೊಂಡು ವೈದ್ಯರು—ವೈದ್ಯರ ಹೆಂಡತಿ....ಮಾತನಾಡುತ್ತಿದ್ದರು. ಮೊಗಸಾಲೆಯಲ್ಲಿ ಮಲಗಿದ ಚಿದಂಬರಮಾವ, ಗಾಢನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದರು.

ಕೃಷ್ಣಪಕ್ಷದ ಚತುರ್ದಶಿಯ ರಾತ್ರಿ. ದಟ್ಟವಾದ ಕತ್ತಲೆ ವೈದ್ಯರ ಕುಟೀರವನ್ನು ಮುತ್ತಿ ನಿಂತಿದೆ. ಊರ ಕಡೆಯಿಂದ ನಾಯಿಗಳ ಬೊಗಳಾಟ ಕೇಳುತ್ತಲಿದೆ. ಕಾಡಿನ ಕಡೆಯಿಂದ ನರಿಗಳ ಊಳಾಟ ಕಿವಿಗೆ ಬೀಳುತ್ತಲಿದೆ. ಕುಟೀರದ ಸುತ್ತಮುತ್ತಲಿನ ಮರಗಳ ಮೇಲೆ ಇರುಳುಹಕ್ಕಿಗಳ ಹಾರಾಟ, ಕಿರುಚಾಟ—ಆಗಾಗ ನಡೆದು ವಾತಾವರಣದ ನಿಶ್ಶಬ್ದತೆಯನ್ನು ಕೆಡಿಸುತ್ತಲಿವೆ.

ಇದ್ದುದಿದ್ದಂತೆ ವೈದ್ಯರ ಕಿವಿಗೆ ಹೊರಗಿನಿಂದ ಕೂಗು ಕೇಳಿಸಿತು:

"ಸ್ವಾಮಿಯವರೇ .... ವೈದ್ಯರೇ!"

ವೈದ್ಯರು ತಟ್ಟನೆ ಎದ್ದುಬಂದು ಮುಂಬಾಗಿಲನ್ನು ತೆರೆದರು. ಗೊರವೆಕಟ್ಟಿಗೆಯ ಪಂಜನ್ನು ಕೈಯಲ್ಲಿ ಹಿಡಿದುಕೊಂಡು ನಿಂತ ಬಿಬ್ಬರು ಮನುಷ್ಯರನ್ನು ನೋಡಿದರು. ಇಬ್ಬರಿಗೂ ಕಪ್ಪಗಿನ ದಪ್ಪನೆಯ ದೇಹ ತಲೆಯ ಮೇಲೆ ಅಸ್ತವ್ಯಸ್ತವಾದ ಕೂದಲ ಬೆಳೆಯಿನೆ. ಗಿಡ್ಡ ಚಣ್ಣವನ್ನು ತೊಟ್ಟಿದ್ದಾರೆ. ಮೈಮೇಲೆ ಕರಿಯ ಕಂಬಳಿ ಹೊದ್ದುಕೊಂಡಿದ್ದಾರೆ. ವೈದ್ಯರು ಅರೆನಿಮಿಷ ನಿಟ್ಟಿಸಿ ನೋಡಿ ಹೇಳಿದರು:

"ಇಂದು ನಿಮಗೆ ಏನೂ ಸಿಗುವಂತಿಲ್ಲ. ಒಂದು ವಾರದ ಹಿಂದೆಯೆ ಕಳವಾಗಿ, ಎಲ್ಲವೂ ಬರಿಮನೆಯಾಗಿದೆ. ಒಂದು ಹಿಡಿ ಕಾಳು ಕೂಡ ಮನೆಯಲ್ಲಿ ಇಲ್ಲ!"

ಬಂದವರಲ್ಲಿ ಒಬ್ಬನೆಂದ:

"ನಾವು ಕಳವಿಗೆ ಬಂದವರಲ್ಲ ಸ್ವಾಮಿ! ಮದ್ದಿಗಾಗಿ ಬಂದಿದ್ದೇವೆ!"

"ಮದ್ದಿಗಾಗಿಯೆ? ಯಾರಿಗಾಗಿ ಮದ್ದು?" ವೈದ್ಯರು ಕೇಳಿದರು.

---

* ಆಕಾಶವಾಣಿ ಕೇಂದ್ರದವರು ಏಪ್ರಿಲ್ ೫೯ನೆಯ ತಾರೀಖಿನಿಂದ ಏರ್ಪಡಿಸಿರುವ 'ಆಕಾಶವಾಣಿ ಸಾಹಿತ್ಯ ಸಮಾರೋಹ' ಉತ್ಸವದಲ್ಲಿ ಕನ್ನಡ ಭಾಷೆಯಿಂದ ಆಯ್ದು ಎರಡು ಸಣ್ಣಕತೆಗಳನ್ನು ಪ್ರಸಾರವಾಡಲಾಯ್ತು. ಆ ಎರಡು ಕತೆಗಳಲ್ಲಿ ಇದೊಂದು.

"ನಮ್ಮ ಯಜಮಾನರ ಮಗನಿಗೆ ಬುದ್ಧಿ! ಒಬ್ಬನೇ ಒಬ್ಬ ಮಗ ಅವರಿಗೆ. ಈಗ ಐದಾರು ದಿನಗಳಿಂದ ಊರಿಂದ ಬಂದು ನಲಗಿದ್ದಾನೆ. ಇಂದುಳೊ ಬಹಳ ಸಂತಟೆ ಆಯನಿಗೆ. ಜೋಗಾದಬೂಮಾಡಿ ತಪ್ಪುಸ್ಸು ಕಳೆದುಕೊಂಡು ಬರಬೇಕೆಂದು ನಮ್ಮ ಯಜಮಾನರು ಹೇಳಿದರು. ಅದಕ್ಕಾಗಿಯೇ ಈಗ ಓಡುತ್ತೋಡುತ್ತಲೇ ಇದ್ದಿಗೆ ಬಂದಿದ್ದೇವೆ. ತಾವು ಬರಬೇಕು ಬುದ್ಧಿ!" ಬಂದವಳೆಲ್ಲಿ ಒಬ್ಬ ಹೊರಯು ಧ್ವನಿಯಲ್ಲಿಯ ಹೇಳಿದ:

"ಯಾರು ನಿಮ್ಮ ಯಜಮಾನ?"

"ಬೀದರ ಚೆಳ್ಳಿಯು ಛೀಮನಾಯಕ ಬುದ್ಧಿ!"

ಬಿಗಿದ ಧ್ವನಿಯಲ್ಲಿ ವೈದ್ಯರು ಕೇಳಿದರು:

"ಆ ಚಳ್ಳಿರ ಬಿರಿಯ ಛೀಮನಾಯಕನೆ?"

ತಡವರಿಸುವ ಧ್ವನಿಯಲ್ಲಿ ಒಬ್ಬ ನುಡಿದ

"ಹೌದು, ಬುದ್ಧಿ! ಆತ .... ಚಳ್ಳಿರ ಬಿರಿಯ .... ಆತನು! ಆದರೆ ತಾವು ಈಗ ಬರಲೇಬೇಕು ಬುದ್ಧಿ! ಒಬ್ಬನೇ ಒಬ್ಬ ಮಗ ಅವನಿಗೆ ಬುದ್ಧಿ! ಮಗನೆಂದರೆ ಆತನಿಗೆ ಜೀವ—ಪ್ರಾಣ—ಬುದ್ಧೀ!"

ವೈದ್ಯರು ಒಂದು ನಿಮಿಷ ನಿಂತು ಯೋಚಿಸಿದರು. ಆಮೇಲೆ 'ಆಗಲಿ ಬಂದೆ, ಸ್ವಲ್ಪ ತಡೆಯಿರಿ' ಎಂದು ಹೇಳಿ ಒಳಗೆ ಹೋದರು. ಹೊರಡುವ ಸಿದ್ಧತೆ ಮಾಡಿಕೊಂಡು, ಬಾಗಿಲು ತಾತಳೆಯುತ್ತ ಪಂಕಿ ಹೆಂಡತಿಗೆ ಹೇಳಿ ಹೊರಗೆ ಬಂದರು: 'ರಿ! ಎಲ್ಲಿಗೆ ಹೋಗುತ್ತೀರಿ? ಇವತ್ತಿಂದು!' ಎಂದು ನುಡಿದಳು.

ತಲ್ಲಣಿಸಿದ ನಿಟ್ಟುಸಿರು. ತಾಡಿನ ನಾರಿಯಿಂದ ಮಾಡಿದ ಚಾಪೆಯ ಮೇಲೆ ಹಿಂದಿದ ಸಂಜೆಯ ಪಂಜುಬೆಳಕಿನಲ್ಲಿ ವೈದ್ಯರು ಬಡಿದಿದ್ದರು. ಪಾಂಯು ಇಪ್ಪತ್ತೆರಡಕ್ಕಿಳಿದೂ ಜಾಸ್ತಿ—ಮಾತ್ರವೋ ಸ್ವಾಭಿಮಾನಿ ಗಂಡರ ಸಪ್ಪಳ ಮಾಯವಾಗಿ ಸುರಿದು ಸೊರಗಿ ಹೋಗುತ್ತಿದ್ದಿವು. ಆಗ ವೈದ್ಯರ ಮನಸ್ಸಿನಲ್ಲಿ ಏನೇನೋ ಭಾವನೆಗಳು ಮೂಡುತ್ತಿದ್ದವು:

"ಇವರು ತಪ್ಪನ್ನು ತಿದ್ದಿಕೊಳ್ಳುವುದರಲ್ಲಿ ಮೋಸಹೋಗೂ ಅಜ್ಜವಜ್ಜೆ? ಹೊಡೆದೊಡನೆಂದರೂ, ಜೋಲಿಸರು ನಮ್ಮ ಮನೆಯ-ಳಗಿನವನ್ನು ಕೊಡಿಸುವ ಕೆಲಸ ಮಾಡಿದ್ದಾರೆ. ಇನ್ನ ಒಡನೆ ದಾಖ್ಲಾಗೊಂದಿಗೆ ತಪ್ಪನ್ನೂ ಇಟ್ಟುಕೊಂಡು ಮಾಡಬೇಕೆಂದು ಇವರ ವಿಚಾರಿಸಿದೆಯೋ ನನಗೆ! ಹಾಗಾದರೆ, ರತ್ನಳ ಗತಿಯೇನು?...."

'ಓ, ಹಾಗಲ್ಲವಾವ್ವ!' ಎಂದು ಒಬ್ಬ ಹೂಗಿದಾಗ, ವೈದ್ಯರ ಮಾತ್ಸರ್ಯಗೊಂಡಿಸಲಾಗಿ ಹೋಗಿದ್ದರು; ಎದರು ನೋಡ ಅವಳಿಗಲ್ಲಿಯೆ ಒಂದು ಸಾಗಡಾವ್ವ-ಎದಡುವಾರು ಉದ್ದದ ತನ್ನ ಜೀಕುಗಳನ್ನು ಗರಿ ಮುತ್ತ ಮುಂಬುವರಿಯುತ್ತಲಿದೆ. ಮೂವರೂ ನಿಂತು ನೋಡಿದರು ಹಾವು ತನ್ನ ಹಾಡಿಗೆ ತಾನು ಹರಿದುಹೋಗುತ್ತಿತ್ತು ಮೂವರೂ ಮುತ್ತೆ ಮುಂದೆ ಸಾಗಿದರು. ಮುತ್ತೆ ವೈದ್ಯರ ತಲೆಯಲ್ಲಿ ಯೋಚನೆಯೆದ್ದಿತು:

ಹಾವಿನಂತಹ ದುಷ್ಪಜಂತುವೂ ತಣಿಗಳಿದೆ ಯಾರನ್ನೂ ಹಿಂಸಿದದು. ಮನುಷ್ಯ? ಮನುಷ್ಯ ಮನುಷ್ಯನಿಗೆ ಬಿಡುವನೇ? ಅವನ ಆಟವು ಹಾವು, ಹಾವೂ ತೆಂತಹದ್ದಲ್ಲ—ಎಲ್ಲರನ್ನೂ ತಡಿಯುವುದು! ಕಳ್ಳನನ್ನು ನೋಡಲಾಗದಾಗಿ ಸನ್ಯಾಸಿಯವರೆಗೆ—ಎಲ್ಲರಿಗೂ ಆಶೆ! ಎಲ್ಲರಿಗೂ ಸ್ವಾರ್ಥ-ಲೋಭ! ನಮ್ಮ ರತ್ನಳಿಗೆ ಏಕೆ ಇರಬಾರದು? ತನ್ನ ಒಡವೆ-ವಸ್ತುಗಳ ಲೋಭ! ಅವಳೂ ಲೋಕದ ಮನುಷ್ಯರಲ್ಲಿ ಒಬ್ಬಳಲ್ಲವೆ?..... ಇನ್ನು ನನ್ನ ರತ್ನಳಿಗೆ ನಾನಾದರೂ ಸುರಳ ಹೊರಯಿಂತ್ತೇನೋ ಇಲ್ಲವೊ ..."

ಹಾಡಿನ ಸೀಳುದಾರಿ ಮುಗಿದು ಮೂವರೂ ಒಂದು ತೆರು-ವಳ್ಳಿಯ ಬಳಿಗೆ ಬಂದರು ಸಾಯಂಗಳು ಹೊಗಳತೊಡಗಿದುವು. ವೈದ್ಯರ ಹೃದಯ ಥವಥವಿಸತೊಡಗಿತ್ತು. ಕಳೆಯುಟಾಗ ಅಡಿಗಳು ಹೊಲಿಲುತ್ತಿದ್ದುವು. ಮೂವರೂ ಕೂಡಿ ಒಂದು ಮನೆಯು ಬಳ ಬಂದರು ಇದ್ದುದರಲ್ಲಿಯೇ ಬೊಜ್ಜ ಮನೆಯದು. ವೈದ್ಯರು ಮನೆ-ಯಲ್ಲಿ ಅಲಲಿರುವುದೇ ತಡ; ಛೀಮನಾಯ್ಕನು ಮನುಷ್ಯನೊಬ್ಬ ಎದುರುಗೊಂಡು ಬಂದ. ವೈದ್ಯರ ಎಲೆ ಹುಮ್ಮೆಂದಿತು. ಬಂದ ಮನುಷ್ಯ ವೈದ್ಯರ ಖಾದಗಳನ್ನು ಗಟ್ಟಿಯಾಗಿ ಹಿಡಿದು ಹೇಳಿದ:

"ಸ್ವಾಮಿ, ದೇವರು ಬಂದ ಹಾಗೆ ತಾವು ಬಂದಿರಿ. ಭಯ-ಯಿಟ್ಟು ನನ್ನ ಮಗನನ್ನು ನೀವಗೆ ಬದುಕಿಸಿಕೊಡಿರಿ!"

ವೈದ್ಯರು ಮೈಚಲಿಸುತ್ತ, ಅವನನ್ನು ಮೇಲಕ್ಕೆತ್ತಿ ನೋಡಿದರು. ಆ ಪಿಡಾಯುರ್ಮಾರ್ಗದ ಮುಖದ ಮೇಲೆ ನಲಿದಿಂತ ಕರುಣೆಯ ರೂಪವನ್ನು ಗುರುತಿಸಿದರು. ಹಾಗೆಯೆ ಅವನ ಕೈ ಹಿಡಿದುಕೊಂಡು, ಮಗುವು ಮಲಗಿದ್ದ ಕೆಣಿಮನೆಗೆ ಹೋದರು. ನಿಮಿಷದ ವೀಕ್ಷಣ ಮುಂಬ್ಯಾಣವಲ್ಲಿ, ಹಾಸಿಗೆಯಲ್ಲಿ ಬಿದ್ದು ತಳಮಳಿಸುವ ಮಗು-ವನ್ನು ನೋಡಿದರು. ಪಕ್ಕದಲ್ಲಿಯೇ ಕುಳಿತ ಮಗುವಿನ ತಾಯಿ, ಮನೆ ಮಕ್ಕೆ ಅಳುತ್ತಲಿದ್ದಾಳೆ.

ಮಗುವಿನ ಬಿಡದಲ್ಲಿ ಹಾಸಿದ್ದ ಹಾಸಿಗೆ ತಮ್ಮ ಮನೆಯ ಹೆಂಡುಮ ವೈದ್ಯರಿಗೆ ಗೊತ್ತಾಗಲಿಕ್ಕೆ ಬಹಳ ಕಾಲ ಬೇಕಾಗಲಿಲ್ಲ. ಮಗುವಿನ ಕಾಲು ಬಳಿಯಲ್ಲಿಯೆ ಕುಂಡೆ ಬಂದು ಕುಳಿತ. ಕೆಂಡಲೆಯ ಅಡಿಗೆ ಬಳಯಲು ನೋಡಬೆಂದಿಂದ ಸೋಪಾಯ್ತ ಅದನೂ ಕಂಬನಿಗರೆದು ಬೊಬ್ಬಿಗಿದ. ! ವೈದ್ಯರ ಮುಖವ್ಯನಿಂದ ಹಾಸಿಗೆಯು ನಿಷಯು ಸಾರಿ ಬೋಯಿತು. ತಾವು ಕಳ್ಳರು ಮನೆಯಲ್ಲಿ ಕುಳಿತರಬೆ, ತಾಯಿ-ತಂದೆ ತಪ್ಪಿಸಿ ಎಂದು ಕಲುಹಾಡೆದಯಗಳಿಸುದು ಕುಳಿತಿದ್ದೇನೆ—ಎಂಬ ಭಾವನೆ ಅವರ ಹೃದಯದಲ್ಲಿ ಜಾಗೃತವಾಯಿತು.

ವೈದ್ಯರು ಮಗುವಿನ ತಾಪಿಯನ್ನು ಹಿಡಿದು ನೋಡಿದರು. ಬ್ಯಬಿಯ ರೀತಿಯನ್ನು ಪರೀಕ್ಷಿಸಿ ಗುರುತಿಸಿದರು. ಕೆಲವರೆಡೇಡಿಂದು ತಾಯ್ಮಂದಿಗಳಿಗೆ ಸೀಳಿ ಔಷಧಿಯ ಪಾಕವೊಂದನ್ನು ಮಗುವಿಗೆ ಕುಡಿಸಿದರು. ತಾಳ್ಮೆಯು ನಿಮಿಷಗಳಲ್ಲಿಯೇ ಮಗುವು ಅರಿಗಣ್ಣು ಮುಚ್ಚಿ ಮಲಗಿಕೊಂಡಿತು.

"ವೈದ್ಯರಿಗೆ ಯಾವುದೋ ಸೊಪ್ಪು ಗೊತ್ತಾಯಿತು. ಆದು ಹೇಗೆ ಯವರಿಗೆ ಹೇಗೆ ಗೊತ್ತಾಗಬೇಕು? ಕಳ್ಳರೆಯು ಇಂತ್ರ ಬೇಕು ಕಂಡವನೊಂದಿಗೆ ತಾವೇ ತಾಡಿಗೆ ಹೋದರು. ಕಲ್ಲು ನಡಹುತ್ತ ಪುಟ್ಟುಗಳನ್ನು ಹುಳಿಹುತ್ತ ತಾಡಿನ ತುಂಬ ಅಡ್ಡಾಡಿದರು. ಬೇಕಾದ ಸೊಪ್ಪು ದನ್ನೆಗೆ ಕಂಡಾಗ ಜೆಳ್ಳ ಮುಳ್ಳಂತೆ ಕುಣಿದಾಡಿದರು. ಮರಳಿ ಮನೆಗೆ ಬಂದಾಗ ಮನೆ ಮುಲ್ಲಿ ಕರುಣಾಕ್ರಂದನ ನಡೆದಿತ್ತು.

ಮಗುವಿನ ತಂದೆ-ತಾಯಿಗಳು ತಾತನಮಾವದಿಂದ ಮಗುವಿನ ಕೈ-ಕಾಲುಗಳನ್ನು ತಿಕ್ಕುತ್ತಿದ್ದರು. ವೈದ್ಯರು ಬಂದು ನಾಡಿ ಪರೀಕ್ಷೆಯನ್ನು ನೋಡಿದರು. ತಾಯಿ-ತಂದೆಗಳಿಗೆ ಸಮಾಧಾನವನ್ನು ಹೇಳಿ, ತಾವು ತಂದಿದ್ದ ಸೊಪ್ಪಿನ ರಸದೊಂದಿಗೆ ಮತ್ತಿಷ್ಟು ಗಲ ಔಷಧಿಯನ್ನು ಕುಡಿಸಿದರು. ಕುಪ್ಪಿಯಲ್ಲಿದ್ದ ಒಂದು ಲೇಹವನ್ನು ಹಣೆಯ ತುಂಬ ಬಳಿದರು. ಮಗುವಿನ ಮುಕ್ಕಿ ಕಣ್ಣು ಮುಚ್ಚಿ ಬೆಚ್ಚು ಕೊಂಡಿತು.

ಮೂರು ತಾಲ್ಲೂ ನಿಮಿಷ ಮೌನದಲ್ಲಿ ಸಂಭವಿಸಿ. ಬಳಿಕ ವೈದ್ಯರು ಭೀಮನಾಯಕನನ್ನು ಕೇಳಿದರು :

"ನಿನ್ನನ್ನು ಕರೆಯುವಂತೆ ನಿನಗೆ ಯಾರು ಹೇಳಿದರು ?"

"ಚಟ್ಟಿಹಳ್ಳಿಯ ಯಾವ ಹಿರಿಯರೂ, ಇಲ್ಲಿಗೆ ಬಂದು ನೋಡಿ ಹೋಗಲಿಕ್ಕೆ ಒಕ್ಕಲಿಲ್ಲ! ಇಂತಹ ಮಗುವನ್ನು ತಲ್ಲಿಗೇ ಕರೆದುಕೊಂಡು ಹೋಗುವುದು ಹೇಗೆ? ನಿಮ್ಮ ಮನೆಯ ತುಂಬ ತುದ್ದುಗಳಿದ್ದಬ್ಬ ನನಗೆ ಗೊತ್ತಿತ್ತು. ಅಯ್ಯಾಗ, ನಿಮ್ಮನ್ನೇ ಕೆಲಸಾ ಕೊಂಡು ಬರುವಂತೆ ನನ್ನ ಜನರಿಗೆ ಹೇಳಿದೆ."

ವೈದ್ಯರಿಂದರು :

"ಒಳ್ಳೆಯದು ಮಾಡಿದೆ. ಇವತ್ತಿಂದು ದಿನ ಹೋಗುವುದರಲ್ಲಿ ನಿನ್ನ ಮಗು ನಿನಗೆ ದಕ್ಕುತ್ತದ್ದಿತ್ತೆ. ದೇವರು ನಿನಗೂ ಒಳ್ಳೆಯ ಬುದ್ಧಿ ಕೊಟ್ಟ. ನಾನೂ ಹೊರಟೆ ಬಂದೆ. ನೋಡು ಭೀಮನಾಯಕ, ಕಾಯುವುದು ದೇವರ ಕೆಲಸ; ಕೊಲ್ಲುವುದು ರಾಕ್ಷಸರ ಕೆಲಸ! ಕಾಯುವ ಕೆಲಸಕ್ಕಾಗಿ ಮನಮುಟ್ಟಿ ಮಾಡಿಯುವವರಿಗೆ, ದೇವರು ಸಹಾಯ ಇದ್ದೇ ಇರುತ್ತದೆ."

"ಕಾಯುವುದು ದೇವರ ಕೆಲಸ——ಕೊಲ್ಲುವುದು ರಾಕ್ಷಸರ ಕೆಲಸ....." ಎಂಬ ಮಾತುಗಳು ಭೀಮನಾಯಕನ ಕಿವಿಯನ್ನು ತಟ್ಟಿದುವು. ಆಗ ಅವನ ಮನಸ್ಸೋಳೊಂದು ಪ್ರಶ್ನೆ ಹೊರಟಿತ್ತು :

"ನಾನು ಕಾಯುವ ಕೆಲಸ——ಎಂದು ಯಾವುದನ್ನು ಮಾಡಿದ್ದೇನೆ? ಇಲ್ಲವೇ ಇಲ್ಲವೆಂದನೇಲೆ, ದೇವರು ನನಗೆ ಹೇಗೆ ಸಹಾಯ ಮಾಡುತ್ತಾನೆ?"

ಆಗಲೇ ಮಗುವು ಕಣ್ಣು ತೆರೆಯಿತು. ಅಲ್ಲಿಂದಲ್ಲಿಗೆ 'ಅಪ್ಪಾ!' ಎಂದು ಕರೆಯಿತು. ತಾಯಿ-ತಂದೆಗಳಿಬ್ಬರೂ ಆನಂದ-ಆಶ್ಚರ್ಯಗಳಿಂದ ಮಗುವನ್ನು ನೋಡಿ ಮೈಮರೆದರು. ಮಗುವು ಎಚ್ಚರಾಗಿ ಕಣ್ಣು ತೆರೆದಿತ್ತು. ಮಗುವಿನ ಮೈ ಬೆವರಿನಿಂದ ತೊಪ್ಪೆದ್ದಿತ್ತು. ತಾಯಿ ನಡುಗುವ ಧ್ವನಿಯಲ್ಲಿ ಹೇಳಿದಳು :

"ಮಗುವಿನ ಮೈಗೆಲ್ಲ ಬೆವರು ಬಂದಿದೆ."

ವೈದ್ಯರು ಅಂಕ್ಷಿಪ್ತ ಭಾವದಲ್ಲಿ ಗಟ್ಟಿನಿಸುತ್ತ ಹೇಳಿದರು :

"ಚೇತರಿಸಿ ಕೊಳ್ಳಲಾರಂಭಿಸಿದೆ. ಅತ ಕೆಲವೇ ಕ್ಷಣಗಳಲ್ಲಿ ಮಾತನಾಡಬಹುದು."

ಮತ್ತೆರ್ಧರಿಂದು ಗಲ ಔಷಧಿಯನ್ನು ಕುಡಿಸುತ್ತಿರುವಾಗ ಮಗುವಿನ ತೋಳು ಕೊಡಗಿತು. 'ತಾಯಿ, ಇನ್ನು ಮೇಲೆ ಇವರು ನಿನ್ನ ಮಗ. ಹೆಸರಿಡುವ ಕಾರಣವೇನೂ ಇನ್ನು ಉಳಿಯಲಿಲ್ಲ!' ಎಂದು ಹೇಳುತ್ತಿದೆ. ಆಗ ಆ ತಾಯಿ-ತಂದೆಗಳಿಬ್ಬರೂ ವೈದ್ಯರನ್ನು ಕೃತಜ್ಞತೆಯು ದೃಷ್ಟಿಯಿಂದ ಮಿಯ್ಯುತ್ತಿದ್ದರು. ಆಗ ವೈದ್ಯರು ಆ ಎಣೆಯಲ್ಲಿ ಭೀಮರಾಜಾಲದಲ್ಲಿ ಬೇಕಾದನ್ನು ತಾಣದೆ, ಮನುಷ್ಯಜೀವಿ ಮಾನವೀಯಗಳನ್ನು ಬಾಚಾಂತ್ತಿದ್ದರು.

ಬೆಳಗಾಗುವುದರೊಳಗೆ ವೈದ್ಯರು ಮನೆಗೆ ಹೊರಟರು. ಆಗ ಭೀಮನಾಯಕ ವೈದ್ಯರ ಕಾಲುಮೇಲೆ ಬಿದ್ದು ಹೇಳಿದ.

"ಆ ದಾರಿಯ ದೇವರು ಇಬ್ಬಾನೋ ಇಲ್ಲವೋ! ನೀವೆ ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು! ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ."

* * * *

ಪುರುಡಿಯಲ್ಲಿ ಅಮಾವಾಸ್ಯೆಯ ತಮೋರಾತ್ರಿ. ಚಟ್ಟಿಗಂಟೆಯ ಸಮಯವಾಗಿದೆ. ವೈದ್ಯರ ಮನೆಯ ಮುಂಬಾಗಿಲು ಇನ್ನೂ ತೆರೆದೇ ಇದೆ. ಮೊಗಸಾಲೆಯಲ್ಲಿಯೂ ಗುಂಪುಗೂಡಿದ ಮಾನವಕೋಟಿ ಮಾತನಾಡುತ್ತಿದ್ದಾರೆ; ಹೊಡತ ಹುಬ್ಬಲು :

"ನಿಮ್ಮ ವೈದ್ಯಶಾಸ್ತ್ರಾನೀರ್ಣಯಕ್ಕೆ ಮೂರಿಯುವ ಪ್ರತಿಫಲ ಅಭಿನಂದನಾಯಿತು; ಶಾಲುಹುಂಬ ನಮ್ಮ ಮುಖ್ಯ ಎಂಬವಿಲ ಗಾಯಿ; ನಿಮ್ಮಿಗೇಂಹು ಅಭಿಮಾನ!"

"ಇದೇನು ನಿನ್ನ ಮಾಮೂ ರಜ್ಜಾ? ನಿನ್ನ ವೈದ್ಯಶಾಲೆಯ ಪ್ರಾಮಿಣ್ಯ, ಅನ್ನ ಹಾಯಿಗ್ಯಾಯಿಗಳನ್ನು ಸಂತಲಿಸಿಸಿ ಒಬ್ಬ ತಂದೆಯ ಕೂಲು ನನ್ನು ಉಳಿಸಿಕೊಟ್ಟಿಯು. ಈವು ಜೋಗಳ ಬಿಡು; ಏನೋ ಏನೋ, ಸೊಕಡಿಗಾಗಿ ಅಲ್ಲಿ ಯಾರೂ ಬಂದಿಲ್ಲ. ಇವ್ಯಕಲ್ಲಿಂದೇ ಬರಬೇಕಾ. ಗುತ್ತು....."

ವೈದ್ಯರು ಮಾತನಾಡುತ್ತಿರುವಾಗಲೆ, ನಿನ್ನೆಯ ದಿನ ಕರೆಯಲು ಬಂದ ಬೇಡರಿಬ್ಬರೂ ತಲೆಯ ಮೇಲೆ ಗಂಟುಗಳನ್ನು ಹೊತ್ತುಕೊಂಡು ಒಳಗೆ ಬಂದರು. ಅವರ ಹಿಂದಿನಿಂದಲೇ ಭೀಮನಾಯಕನೂ ಒಳಗೆ ಬಂದ. ಬಂದವನೇ ವೈದ್ಯರಿಗೆ ನಮಸ್ಕಾರ ಮಾಡಿ ಹೇಳಿದ :

"ನೀವು ಒಯಿಸಿಗಳನ್ನು ದೇವರಿಗೆ ಒಪ್ಪಿಸಲು ಬಂದಿದ್ದೇನೆ. ನಿನ್ನೆಯ ಕ್ಷೌರಕ್ಕೆ, ವಯಿಯಿಟ್ಟು ಎಲ್ಲವನ್ನೂ ಒಪ್ಪಿಸಿಕೊಳ್ಳಬೇಕು."

ಆಳುಗಳಿಬ್ಬರೂ ಗಂಟುಗಳನ್ನು ಬಿಚ್ಚಿ ಮುಂದಿಟ್ಟರು. ವೈದ್ಯರು ಮನೆಯಲ್ಲಿ ಲಭ್ಯವಾಗಿ ಹೋದ ಪದಾರ್ಥಗಳೆಲ್ಲ ಅಷ್ಟಗಲ್ಲಿ ಇದ್ದವು. ಭೀಮನಾಯಕನಿಗೆ ಹೇಳಿದರು :

"ನಿನ್ನ ಹಾಸಿಗೆ ನಿನ್ನ ಮಗನ ಹುಟ್ಟಿಲಲ್ಲಿ ಇದೆ. ಅದೊಂದನ್ನು ಮಾತ್ರ ತಂದಿಲ್ಲ. ಅದು ನಿಮ್ಮ ಹರಕೆಯಾಗಿ ನಿನ್ನ ಮಗನಿಗೆಂದೇ ಇರಲಿ!"

ಆಗ ಗಂಡ ಹೆಂಡತಿ ಇಬ್ಬರೂ ಮಾತನಾಡಲೇ ಇಲ್ಲ. ಅಂತರಿದ ಹೃದಯದಿಂದ ವೈದ್ಯರು ಹೆಂಡತಿಯನ್ನು ನೋಡುತ್ತಿದ್ದರು. ಹೆಂಡತಿ ಹೆರಿಗುಗಣ್ಣಿಗಳಿಂದ ವೈದ್ಯರ ಕಡೆಗೊಮ್ಮೆ, ಭೀಮನಾಯಕನ ಕಡೆಗೊಮ್ಮೆ ನೋಡುತ್ತಿದ್ದರು. ಧನ್ಯತೆಯ ಮುಗುಳುನಗೆ ಅವರ ಮುಖಗಳ ಮೇಲೆ ರಾಜ್ಯವಾಡುತ್ತಿತ್ತು.

ಕಾವ್ಯೇಷು ನಾಟಕಂ ರಮ್ಯಂ

(ಕಾಲಿದಾಸನ 'ಮಾಲವಿಕಾಗ್ನಿಮಿತ್ರಂ' ನಾಟಕದ ವಿಮರ್ಶೆ')

ಶ್ರೀ. ಎಚ್. ಜೆ. ಉಪಾಧ್ಯಾಯ, ಎಂ. ಎ. ಹೈದರಾಬಾದ್

ಈ ನಾಟಕದಲ್ಲಿ ಬರುವ ವಿದೂಷಕ, ಕಾಲಿದಾಸನ ಮಿಕ್ಕ ನಾಟಕಗಳಲ್ಲಿ ಬರುವ ವಿದೂಷಕರಿಗಿಂತ ಶ್ರೇಷ್ಠನಾಗಿದ್ದಾನೆ. ನಾಟಕದ ನಾಯಿಕೆ ಮಾಲವಿಕೆಗಿಂತ, ನಾಯಿಕೆಯಲ್ಲದ ಧಾರಿಣಿ, ಹೆಚ್ಚು ಪ್ರಭಾವಶಾಲಿನಿಯಾಗಿ ರೂಪಿತಳಾಗಿದ್ದಾಳೆ.

ಲೇಖಾಂಕ ೨

ನಾಟಕದ ನಾಯಕ ಅಗ್ನಿಮಿತ್ರ. ಕೆಲವು ವಿಮರ್ಶಕರು ಈತನನ್ನು 'Un reroice rero' 'ಅಧೀರನಾಯಕ' ಎಂದು ಕರೆದಿದ್ದಾರೆ. ನಾಟಕದ ತುಂಬ ಕಾವಗಾರ್ತನಾಗಿ ಕಂಡುಬರುವು. ದನ್ನು ಅವರು ಇದಕ್ಕೆ ಕಾರಣವಾಗಿ ಹೇಳುವರು. ಆದರೆ ರಾಜನು ರಾಜನೀತಿ ಕುಶಲನೂ ಸ್ವಾಭಿಮಾನಿಯೂ ಆಗಿದ್ದಾನೆಂಬುದು, ಆತನು ತನ್ನ ಮಂತ್ರಿಯಾದ ವಾಹಿತಕನೊಡನೆ ಆಡುವ ಮಾತುಗಳಿಂದ ಸ್ಪಷ್ಟವಾಗುತ್ತದೆ. ಮತ್ತೆ ಕೆಲವರು ಮೇಲೆ ಹೇಳಿದ ಮಾತಿನ ಪುಷ್ಟಿಗಾಗಿ ಧಾರಿಣಿಯ 'ಯದಿ ರಾಜಕಾರ್ಯೇಷ್ವಪೀ ದೃಶ್ಯಪಾಯ ನಿಪುಣತಾಕಾರ್ಯಪುತ್ರಸ್ಯ ತದಾ ಶೋಭನಂ ಭವೇತ್' ಎಂಬ ಮಾತುಗಳನ್ನು ಉದಾಹರಿಸುತ್ತಾರೆ ಆದರೆ ಇವು ಧಾರಿಣಿಯ ಕೊಂಕುನುಡಿಗಳಾಗಿವೆ. ರಾಜನು ಸ್ವತಃ ಯುದ್ಧವಾಡದಿದ್ದರೂ ತನ್ನ ಬುದ್ಧಿಮತ್ತೆ ಮತ್ತು ಸೇನಾಪತಿಯ ಮೂಲಕವಾಗಿ ವಿಜಯವನ್ನು ಸಂಪಾದಿಸುತ್ತಾನೆ. ಮತ್ತೆ ಕೆಲ ವಿಮರ್ಶಕರು ರಾಜನು ಮಧ್ಯವಯಸ್ಕನಾಗಿದ್ದು ಇಬ್ಬರು ಹೆಂಡಿರಿದ್ದರೂ ದಾಸಿಯಾದ ಮಾಲವಿಕೆಯ ಪ್ರಣಯವನ್ನು ಕೋರುವುದು ಆತನ ಕೀಳು ಅಭಿರುಚಿಯನ್ನು ವ್ಯಕ್ತಪಡಿಸುವುದೆಂದು ಹೇಳಿದ್ದಾರೆ. ಆದರೆ ವಿಮರ್ಶಕರು ಇಲ್ಲಿ 'ರಾಜಾನೋ ಬಹುವಲ್ಲಭಾಃ' ಎಂಬ ಮಾತನ್ನು ನೆನೆಯಬೇಕು. ಮಾಲವಿಕೆ ದಾಸಿಯಾಗಿ ಇರಬೇಕಾಗಿ ಬಂದುದು ಒಂದು ಸಿದ್ಧಾದೇಶದ ಪರಿಣಾಮ; ಆದರೆ ಅವಳ ರೂಪ ಲಾವಣ್ಯಾದಿಗಳನ್ನು ನೋಡಿದ ಯಾರಿಗೂ ಅವಳು ಉತ್ತಮಕುಲಸಂಭೂತೆಯಾಗಿರಬೇಕೆಂದು ಎನಿಸುವುದು. ಇಲ್ಲಿ ಕೌಮುದಿಕೆಯ 'ನನ್ವಾಕೃತಿ ವಿಶೇಷೇಷ್ವಾದರಃ ಸದಂ ಕರೋತಿ' ಎಂಬ ಮಾತನ್ನೂ ಮತ್ತು ಗಣದಾಸನ 'ಆಕೃತಿವಿಶೇಷಪ್ರತ್ಯಯಾದೇನಾಮನೂನವಸ್ತುಕಾಂ ಸಂಭಾವಯಾಮಿ' ಎಂಬ ಮಾತನ್ನೂ ಸಹೃದಯರು ಸ್ಮರಣೆಗೆ ತಂದುಕೊಳ್ಳಬೇಕು. ಅನ್ಯಸಂಕ್ರಾಂತ ಹೃದಯಿಯಾದರೂ ಧಾರಿಣಿ ಮತ್ತು ಇರಾವತಿಗೆ ಆದರ ಸೂಚ್ಯವಾದ ತೋರಿಸುತ್ತಾನೆ. ಧಾರಿಣಿಯ ವಿಷಯದಲ್ಲಿ ರಾಜನಿಗೆ ವಿಶೇಷ ಗೌರವ ಮತ್ತು ಆದರಭಾವವಿದ್ದುದು 'ದೇವ್ಯಾನ್ಯಾರಣ್ಯಾಶ್ರಿತ್ಯಂ ರಕ್ಷನ್ನಾತ್ಮನಃ ಪ್ರಭುತ್ವಂ ನ ದರ್ಶಯತಿ' ಎಂಬ ಮಾತಿನಿಂದ ಕಂಡುಬರುತ್ತದೆ. ಇದರಿಂದಾಗಿಯೋ ಏನೋ, ಸ್ಪಣಯಸಂವಾದನೆಯು ಕಾರ್ಯದಲ್ಲಿಯೂ ತಾನು ಮುಂದಿರದೆ ಗೌತಮನನ್ನೇ ಮುಂದೆ ಮಾಡುತ್ತಾನೆ ಈ ವಿಷಯದಲ್ಲಿ ಗೌತಮನು ರಾಜನ ಬಗ್ಗೆ ಹೇಳಿದ: 'ಭವಾನಪಿ ಸೂನೋಃ ಪರಿಚರೋವಿಹರಂಗಮ ಇವಾವಿಷಲೋಲುಪೋ ಭೀರುಶ್ಚ' ಎಂಬ ಮಾತು ಯಥಾರ್ಥವಾಗಿದೆ. ನಾಟ್ಯಾಚಾರ್ಯರಿಬ್ಬರ ಜಗಳ ನಡೆದಾಗ ಮತ್ತು ಗೌತಮನು ತನಗೆ ಹಾವು ಕಚ್ಚಿದಂತೆ ನಟಿಸುವಾಗ, ರಾಜನು ಏನೂ ಅರಿಯದವನಂತೆ ನಟಿಸುತ್ತಾನೆ ಇದು ಆತನ ಕಪಟ ಮತ್ತು ನಿಷ್ಠಾಕ್ಷಿಣ್ಯವನ್ನು ತೋರಿಸುತ್ತದೆ. ಮಾಲವಿಕೆಯೊಡನೆ ಸರಸ ಸಲ್ಲಾಪ ನಡೆದಾಗ, ಇರಾವತಿಯು ಅಲ್ಲಿಗೆ ಬರಲು ಉಪಾಯಕಾಣದೆ, ಆವನು ಇರಾವತಿಯ ಕಾಲಿಗೆ ಬಿದ್ದು ಹೇಳುವ 'ದಾಕ್ಷಿಣ್ಯಂ ನಾಮ.... ಬೈಂಬಿಕಾನಾಂ ಕುಲದ್ವಯಂ' ಎಂಬ ಮಾತುಗಳಲ್ಲಿ ಪ್ರಾಮಾಣಿಕತೆ ಇದೆ ಎಂಬುದು ವಿವಾದಾಸ್ಪದ. ಒಟ್ಟಿನ ಮೇಲೆ ಪುರೂರವ ಮತ್ತು ದುಷ್ಯಂತನಲ್ಲಿದ್ದ ಶ್ರೇಷ್ಠಗುಣಗಳು ಈತನಲ್ಲಿ ಕಂಡುಬರುವುದಿಲ್ಲ. ಪುರುಷೋತ್ತಮರಲ್ಲಿ ವಿದೂಷಕನ ಪಾತ್ರವು, ತುಂಬ ಪರಿಣಾಮಕಾರಿಯಾಗಿದ್ದು. ಇವನೇ ಈ ಸ್ಪಣಯನಾಟಕದ ಸೂತ್ರಧಾರಿ. ಕಥೆಯ ಬೆಳೆವಣಿಗೆ ಮುಕ್ತವಾಗಿರುತಾಯು ಈತನಿಂದಲೇ. ವಿಕ್ರಮೋರ್ವಶೀಯ ಮತ್ತು ಶಾಕುಂತಲದಲ್ಲಿ ವಿದೂಷಕನಿಗೆ ಅಷ್ಟೊಂದು ಮಹತ್ವವಿಲ್ಲ ಆದರೆ ಮಾಲವಿಕಾಗ್ನಿಮಿತ್ರದಲ್ಲಿ ವಿದೂಷಕನ ಪಾತ್ರವು ಐದೂ ಅಂಕಗಳಲ್ಲಿ ಬಂದಿದೆ. ಇವನು ಈ ನಾಟಕದಲ್ಲಿ

ವಿಕ್ರಮೋರ್ವಶೀಯದಲ್ಲಿದ್ದಂತೆ ಔದರಿಕನೂ ಅಲ್ಲ, ಶಾಕುಂತಲದಲ್ಲಿಯ ಅಂತಃಪುರದ ಸ್ತ್ರೀಜನರ ಅಪಹಾಸ್ಯಕ್ಕೆ ಈಡಾಗುವ ನುಂದ ಬುದ್ಧಿಯ ಬಡ ಬ್ರಾಹ್ಮಣನೂ ಅಲ್ಲ. ಈ ನಾಟಕದಲ್ಲಿ ಅವನಿಗೆ ಮಂತ್ರಿಪದವು ಲಭಿಸಿದೆ. ರಂಗದ ಮೇಲೆ ವಿದೂಷಕನು ಮೊದಲ ಸಲ ಪ್ರವೇಶಿಸಿದಾಗ ರಾಜನು ಅವನನ್ನು ನೋಡಿ 'ಅಯಮಪರಿಕಾರ್ಯಾಂತರಶುಚಿರ್ಮೋಷ್ಯಾನುಪಶ್ಯಿತಃ' ಎಂದು ಹೇಳಿದ ಮಾತು ಎಷ್ಟೊಂದು ಅರ್ಥಪೂರ್ಣವಾದಿದೆ! ಇವನ ಕುಟಿಲ ಕಾಮತಂತ್ರಗಳಿಂದ ಕೊಚ್ಚಿಗೆದ್ದ ಇರಾವತಿಯು 'ಉಪಪನ್ನಂ ಸತ್ಯಮಯಮತ್ರ ಬ್ರಹ್ಮಣಂದುನಾ ಕೃತಃ ಪ್ರಯೋಗಃ ಇಯಮುಸ್ಯ ಕಾಮತಂತ್ರಸಚಿವಸ್ಯ ನೀತಿಃ' ಎಂದು ಹೇಳುವ ಮಾತು ಅಕ್ಷರಶಃ ಸತ್ಯವಾದುದು. ಎಂತಹ ಬಿಕ್ಕಟ್ಟಿನ ಪ್ರಸಂಗ ಬಂದರೂ ಇವನ ಪ್ರಜ್ಞಾಚಕ್ಷು ಏನೊಂದೊ ಉಪಾಯವನ್ನಾಗಲಿ ಪರಿಹಾರವನ್ನಾಗಲಿ ಹುಡುಕಿ ತೆಗೆಯುವುದು. ನಾಟ್ಯಾಚಾರ್ಯರಿಬ್ಬರಿಗೂ ಜಗಳ ಕಚ್ಚಿ ರಂಗದ ಮೇಲೆ ಮಾಲವಿಕೆಯು ನೃತ್ಯವು ನಡೆಯುವಂತೆ ಮಾಡುವುದೂ, ಧಾರಿಣಿಯನ್ನು ಉಯ್ಯಾಲೆಯಿಂದ ಬೀಳುವಂತೆ ಮಾಡಿ ರಕ್ತಾಶೋಕದ ದೋಹದವು ಮಾಲವಿಕೆಯಿಂದ ನೆರವೇರುವಂತೆ ಮಾಡುವುದೂ, ಬಕುಳಾವಳಿಕೆಯನ್ನು ಒಳಹಾಕಿಕೊಂಡು ಮಾಲವಿಕೆಗೆ ರಾಜನ ಪ್ರಣಯವನ್ನು ಸೂಚಿಸುವುದೂ, ಅವರಿಬ್ಬರ ಸಮಾಗಮವನ್ನು ನಿರ್ಪಡಿಸುವುದೂ, ಮಾಲವಿಕೆಯನ್ನೂ ಬಕುಳಾವಲಿಕೆಯನ್ನೂ ಸಾರಭಾಂಡಾರಗೃಹದ ಸೆರೆಯಿಂದ ಬಿಡಿಸುವುದೂ ಅವನ ಸುನೀತಿ ಫಾದಪದ ಫಲಗಳಾಗಿವೆ. ಮಾಲವಿಕೆಯ ನೃತ್ಯ ಮುಗಿದ ಮೇಲೆ 'ಭವತಿ ತಸ್ಯಾಃ ಕಿಮಪಿವೋವಿಸ್ಮೃತಃ ಕ್ರಮಭೇದಃ' ಎಂದು ಹೇಳಿ ಅವಳನ್ನು ರಂಗದ ಮೇಲೆ ಕೆಲಕಾಲ ನಿಲ್ಲುವಂತೆ ಮಾಡಿ, ತನ್ಮೂಲಕ ರಾಜ ಗೆ ಅವಳನ್ನು ಮನದಣಿಯುವ ವರೆಗೆ ನೋಡಲು ಅವಕಾಶವನ್ನು ಕಲ್ಪಿಸಿಕೊಟ್ಟು ಆಮೇಲೆ 'ಪ್ರಥನೋಪದೇಶ ದರ್ಶನೇ ಪ್ರಥಮಂ ಬ್ರಾಹ್ಮಣಸ್ಯ ಪೂಜಾಕರ್ತವ್ಯಾ' ಎಂದು ಹೇಳಿ, ಎಲ್ಲರನ್ನೂ ನಗುವಂತೆ ಮಾಡುವುದು ಇವನ ರಸಿಕತನವನ್ನು ತೋರಿಸುತ್ತದೆ.

ಧಾರಿಣಿಯು ಪಂಡಿತ ಕೌಶಿಕೆಯೊಡನೆ ನೃತ್ಯವನ್ನು ನೋಡಲು ಬರುತ್ತಿರುವುದನ್ನು ನೋಡಿ ರಾಜನಿಗೆ 'ಅನಿಹಾ ಅವಿಹಾ, ಉಪ್ಪತಿತಾ ಪೀಠಮರ್ದಿಕಾಂ ಪಂಡಿತ ಕೌಶಿಕೀಂ ಪುರಸ್ಕೃತ್ಯದೇವೀ' ಎಂದು ಹೇಳಿ, ಪಂಡಿತ ಕೌಶಿಕೆಯು ಕುಂಟೆಣಿಗಿತ್ತಿ ಎಂಬುದನ್ನು ಸೂಚಿಸುವುದರಲ್ಲಿಯೂ, ಮಾಲವಿಕೆಯ ರೂಪದಿಂದ ಮುಗ್ಧನಾಗಿ ಅವಳ ಸಮಾಗಮಕ್ಕಾಗಿ ಹಾತೊರೆಯುವ ರಾಜನ ಮನಸ್ಸಿನ ಅಧೀರಾವಸ್ಥೆಯನ್ನು ಕಂಡು 'ಸಾಧು ತ್ವಂ ದರಿದ್ರ ಆತುರ ಇವ ವೈದ್ಯೇನೋಪನೀಯ ಮಾನಮೌಷಧವಿಭ್ಯಸಿ' ಎಂದು ಹೇಳಿದ ಮಾತುಗಳಲ್ಲಿಯೂ, ಸಮುದ್ರಗೃಹದಲ್ಲಿ ಮಾಲವಿಕೆ ಮತ್ತು ರಾಜನ ಸಮಾಗಮವನ್ನು ಏರ್ಪಡಿಸುತ್ತಿರುವಾಗ ಅಲ್ಲಿ ಇರಾವತಿ ಯದಾಸಿಯಾದ ಚಂದ್ರಿಕೆಯನ್ನು ಕಂಡು ಸಾಶಂಕನಾಗಿ ರಾಜನಿಗೆ 'ಅಹೋ ಕುಂಭೀಲಕೈಃ ಕಾಮುಕೈಶ್ಚ ಪರಿಹರಣೀಯಾ ಚಂದ್ರಿಕಾ' ಎಂದು ಹೇಳಿದ ಶ್ಲೇಷೋಕ್ತಿಯಲ್ಲಿಯೂ, ಅಭರಣಾಲಂಕೃತಳಾಗಿ ವೈವಾಹಿಕ ವೇಷದಲ್ಲಿ ಧಾರಿಣಿಯೊಡನೆ ಬಂದ ಮಾಲವಿಕೆಯನ್ನು ಕಂಡು ರಾಜನಿಗೆ 'ಭೋಃ ವಿಸ್ರಬ್ಧೋ ಭೂತ್ವೇಮಾಂ ಯೌವನವತೀಂ ಪಶ್ಯ' ಎಂದು ಹೇಳಲು, ಧಾರಿಣಿಯು ಯಾರನ್ನು ಎಂದು ಕೇಳಲು 'ತಪನೀಯಾಶೋಕಸ್ಯ ಕುಸುಮಂ ಶೋಭಾಂ'ಎಂದು ಶೀಘ್ರವಾಗಿ ಪ್ರತ್ಯುತ್ತರದಲ್ಲಿ ಹೇಳಿದ ಚತುರೋಕ್ತಿಯಲ್ಲಿಯೂ ಇವನ ವಾಕ್‌ಚಾತುರ್ಯವೂ ರಸಿಕತನವೂ ವ್ಯಕ್ತವಾಗುತ್ತವೆ. ಒಟ್ಟಿನಲ್ಲಿ ಈ ನಾಟಕದಲ್ಲಿ ವಿದೂಷಕನು ವಹಿಸಿರುವ ಪೀಠಮರ್ದಕನ (ನಾಯಕನಿಗೆ ಅವನ ಪ್ರಣಯ ಸಂಪಾದನೆಯ ಕಾರ್ಯದಲ್ಲಿ ನೆರವಾಗುವವನು) ಪಾತ್ರವು ತುಂಬ ಪರಿಣಾಮಕಾರಿಯಾಗಿದೆ. ವಿದೂಷಕನ ಒಂದೇ ಒಂದು ದೋಷವೆಂದರೆ, ಅವನು ಸಮುದ್ರಗೃಹದಲ್ಲಿ ಅಗ್ನಿಮಿತ್ರ ಮತ್ತು ಮಾಲವಿಕೆಯ ಸಮಾಗಮವನ್ನು ಏರ್ಪಡಿಸಿ ಅಲ್ಲಿ ಕಾವಲಿದ್ದು, ನಿದ್ರೆಹೋದಾಗ ಕನಸಿನಲ್ಲಿ ತನ್ನ ಸನದಲ್ಲಿದ್ದುದನ್ನೆಲ್ಲ ಕನಕರಿಸುವನು. ಇದರಿಂದಾಗಿ ಅವನು ನಡೆಸಿದ ಎಲ್ಲ ಕಾರಸ್ಥಾನದ ಗುಟ್ಟು ರಟ್ಟಾಗಿ, ಇರಾವತಿಯು ಅಲ್ಲಿಗೆ ಬರಲು ಎಲ್ಲವೂ ವಿರಸವಾಗುವುದು. ಈ ದೋಷವೊಂದನ್ನು ಕಡೆಗಣಿಸಿದರೆ, ವಿದೂಷಕನ ಪಾತ್ರವು ಉಳಿದೆಲ್ಲ ಪಾತ್ರಗಳಿಗಿಂತಲೂ ತುಂಬಾ ಪರಿಣಾಮಕಾರಿಯಾದ ಪಾತ್ರವಾಗಿದೆ ಎಂದು—ಹೇಳಬಹುದು. ಈ ಪಾತ್ರದ ಚಿತ್ರಣದಲ್ಲಿ ಕವಿಯು ತೋರಿಸಿದ ಕೌಶಲವು ನಿಜವಾಗಿಯೂ ಪ್ರಶಂಸನೀಯವಾದುದು. ಮಾಲವಿಕೆ ಈ ನಾಟಕದ ನಾಯಿಕೆ. ಅವಳು ರಾಜಕುಮಾರಿ. ವಿದರ್ಭದೇಶದ ಅರಸನಾದ ಮಾಧವಸೇನನ ತಂಗಿ. ಅವಳ ವಯಸ್ಸು ಸುಮಾರು ೧೮ ವರುಷ. ಈ ಮಾತು ಅರಸನು ಅವಳನ್ನು ಮೊದಲ ಸಲ ಚಿತ್ರದಲ್ಲಿ ನೋಡಿದಾಗ ಧಾರಿಣಿಯನ್ನು ಕುರಿತು 'ದೇವಿ ಅಪೂರ್ವೇಯಂ ದಾರಿಕಾ ಅಸನ್ನ ಅಲಿಖಿತಾ ಕಿಂ ನಾಮಧೇಯಾ ಇತಿ' ಎಂದು ಕೇಳುವ ಮಾತಿನಿಂದ ಸ್ಪಷ್ಟವಾಗುತ್ತದೆ. ಇದಲ್ಲದೆ ನಾಟ್ಯಾಚಾರ್ಯನಾದ ಗಣದಾಸನು ಅವಳ ನಾಟ್ಯಕಲಾನಿಪುಣತೆಯನ್ನು ಬಣ್ಣಿಸುವಾಗ 'ತತ್ತದ್ವಿಶೇಷಕರಣಾತ್ ಪ್ರತ್ಯಪದಿಶತೀವ ಮೇ ಬಾಲಾ' ಎಂದು ಹೇಳುವಾಗ ಮಾಲವಿಕೆಯನ್ನು ಬಾಲೆಯೆಂದು ಹೇಳಿದ್ದಾನೆ. ಇವಳು ಒಳ್ಳೆಯ ರೂಪವತಿ, ಯುವತಿ ಮತ್ತು ನಾಟ್ಯಕಲೆಯಲ್ಲಿ ನಿಪುಣೆ. ಇವಳನ್ನು ಮೊದಲಸಲ ನೋಡಿದಾಗ ಇರಾವತಿಯು ಇವಳ ರೂಪಾತಿಶಯವನ್ನು ನೋಡಿ 'ಸ್ಥಾನೇ ಶಂಕಿತಾ ಮೇ ಹೃದಯಂ' ಎಂದು ಹೇಳುತ್ತಾಳೆ. ಇವಳ ನಾಟ್ಯಕಲಾನಿಪುಣತೆಯನ್ನು ಕಂಡು ಮೆಚ್ಚಿದ ಗಣದಾಸನು ಇವಳ ಬಗ್ಗೆ 'ಪರಮನಿಪುಣಾ ಮೇಧಾವಿನೀ ಚ', 'ಯದ್ಯದ್ ಪ್ರಯೋಗವಿಷಯೇ ಭಾವಿಕಮುಪದಿಶ್ಯತೇ ಮಯಾತಸ್ಯೈವ, ತತ್ತದ್ ವಿಶೇಷಕರಣಾತ್ ಪ್ರತ್ಯುಪದಿಶತೀವ ಮೇ ಬಾಲಾ' ಎಂದು ಮೆಚ್ಚಿಗೆಯ ಮಾತುಗಳನ್ನು ಹೇಳಿದ್ದಾನೆ ಇವಳು ನಾಟ್ಯಾಭಿನಯದ ಪರೀಕ್ಷೆಯಲ್ಲಿ ಉತ್ತೀರ್ಣಳಾಗಿ ಅರಸನ ಮೆಚ್ಚುಗೆಯನ್ನೂ ಪಡೆಯುತ್ತಾಳೆ. ಚಲಿತನೆಂಬ ನಾಟ್ಯವನ್ನು ಅಭಿನಯಿಸುವಾಗ ತನಗೆ ಅರಸನಲ್ಲಿದ್ದ ಅನುರಾಗವನ್ನು ಹಿತಮಿತವಾದ ಆಂಗಿಕ ಅಭಿನಯದಿಂದ ವ್ಯಕ್ತಪಡಿಸುತ್ತಾಳೆ. ಅರಸುಗುವರಿಯಾಗಿದ್ದೂ ದುರ್ದೈವದಿಂದ ಅರಸನ ಅಂತಃಪುರದಲ್ಲಿ ತೊತ್ತಾಗಿ ದುಡಿಯುತ್ತಿದ್ದಾಗ ಬಂದ ಎಲ್ಲ ಕಷ್ಟ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

● ಧ್ವನಿವಾಹಕ ಯಂತ್ರದ ಮೂಲಕ

● ಉತ್ತಮ ಚಿತ್ರಗಳ ಮೂಲಕ

● ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ

ನಷ್ಟಗಳನ್ನೂ ತಾಳ್ಮೆಯಿಂದ ಅನುಭವಿಸುತ್ತಾಳೆ. ಮಧ್ಯವಯಸ್ಕನೂ ಇಬ್ಬರು ಹೆಂಡಿರುಳ್ಳವನೂ ಆದ ಅಗ್ನಿಮಿತ್ರನಲ್ಲಿ ಮಾಲವಿಕೆ ತೋರುವ ಅನುರಾಗ ವಿಚಿತ್ರವೆನಿಸಿದರೂ ಈ ಮೊದಲೆ ಅವಳ ಮುದುವೆಯನ್ನು ಅವಳ ಅಣ್ಣನಾದ ಮಾಧವಸೇನನು ಅಗ್ನಿಮಿತ್ರನೊಡನೆ ಮಾತುವುದಾಗಿ ನಿಶ್ಚಯಿಸಿರುವುದನ್ನು ಸಹೃದಯರು ಸ್ಮರಣೆಗೆ ತಂದುಕೊಳ್ಳಬೇಕು. ಇವಳು ಭೀರು, ಅಂಜುಬುರುಕಿ. ಧಾರಿಣಿಯನ್ನು ಕಂಡರೆ ಇವಳಿಗೆ ಯಾವಾಗಲೂ ಭಯ, ಹೆದರಿಕೆ. ಇದರಿಂದಾಗಿ ಅಗ್ನಿಮಿತ್ರನಲ್ಲಿ ಅನುರಕ್ತಳಾಗಿದ್ದರೂ ತಾನೇ ಮುಂದೆ ಬಂದು ಇವಳು ತನ್ನನೆ ಅರಸನಲ್ಲಿದ್ದ ಅನುರಾಗವನ್ನು ಎಂದೂ ವ್ಯಕ್ತಪಡಿಸಿಲ್ಲ. ಬಕುಳಾವಳಿಕೆಯೇ ಇವಳ ಪ್ರಣಯವನ್ನು ಅರಸನಿಗೆ ತಿಳಿಸುವಳು. ಅಶೋಕವೃಕ್ಷಕ್ಕೆ ಒದೆಹದವನ್ನು ನೆರವೇರಿಸಲು ಹೋದಾಗ, ತನ್ನ ಅಸಹಾಯಸ್ಥಿತಿಯನ್ನು ನೆನೆದು ಮರುಗುತ್ತಾಳೆ. ಇವಳ ಮನಸ್ಸಿನ ಅಧೀರಾವಸ್ಥೆಯು 'ಪರದೇವಿಜ್ಯೇಷ್ಠಾವತ್ ವಿಶ್ರಬ್ಧಂ ಮುಹೂರ್ತಕಂ' ಎಂಬ ಮಾತಿನಿಂದ ತಿಳಿದು ಬರುತ್ತದೆ. ಹೀಗೆ ಇವಳ ರೂಪಾತಿಶಯವನ್ನು 'ದೀರ್ಘಾಕ್ಷಂ ಶರದಿಂದುಶಾಂತವದನಂ ಬಾಹೂನತಾವಂಸಯೋಃ, ಸಂಶ್ಲಿಷ್ಟಂ ನಿಬಿಡೋನ್ನತಸ್ತನಮುರಃ ಪಾರ್ಶ್ವೇ ಪ್ರಮೃಷ್ಟೇ ಇವ, ಮಧ್ಯಃ ಪಾಣಿಮಿತೋ ನಿತಂಬಿಜಘನಂ ಪಾದಾವರಾಲಾಂಗುಲೀ, ಧಂದೋನರ್ತಯಿತುರ್ಯಥೈವ ಮನಸಃ ಶ್ಲಿಷ್ಟಂ ತಥಾಸ್ಯಾವಪುಃ' ಎಂದೂ ಅವಳ ನೃತ್ಯ ಮುಗಿದ ಮೇಲೆ ಅವಳು ನಿಂತ ನಿಲುವನ್ನು 'ನೃತ್ತಾದಸ್ಯಾಃ ಸ್ಥಿತಮತಿತರಾಂ ಕಾಂತಂ' ಎಂದೂ ಅವಳ ರೂಪಲಾವಣ್ಯವನ್ನೋ ಅಂಗಭಂಗಿಯನ್ನೋ ನುನದಣಿಯವಂತೆ ಬಣ್ಣಿಸಿದ ಕವಿಯು ಒಬ್ಬ ರಾಜಕುಮಾರಿಯಲ್ಲಿರಬಹುದಾದ ಇನ್ನಿತರ ಗುಣಗಳ ಬಣ್ಣನೆಗೆ ಅಷ್ಟೊಂದು ಅವಕಾಶವನ್ನು ಕಲ್ಪಿಸಿಕೊಟ್ಟಿಲ್ಲವೆಂದು ತೋರುತ್ತದೆ. ಇಲ್ಲಿ ಡಾಕ್ಟರ್ ಕೀಥರು ಮಾಲವಿಕೆಯ ಬಗ್ಗೆ ಹೇಳಿದ ಮಾತುಗಳನ್ನು ನೆನಪಿಗೆ ತಂದುಕೊಳ್ಳಬಹುದು. The heroine is her self but faintly presented in contrast with the more effective characterisation of the two queens harine Dearint and Iravati. Malavika is not out standing or impressive as Sakuntla. he only redeeming feature of her character may be stated in tne following words. "There is in Malavika a sweetness, a delicacy, a purity that makes her no unworthy precursor of Sila, of indumati, of the yaksas" bride and of Sakuntala. ಒಟ್ಟಿನ ಮೇಲೆ ನಾಯಿಕೆಯ ಪಾತ್ರವು ಹೆಚ್ಚು ಪ್ರಭಾವಕಾರಿಯಾಗುವಂತೆ ಚಿತ್ರಿತವಾಗಿಲ್ಲ. ಧಾರಿಣಿ ಮತ್ತು ಇರಾವತಿಯ ಪ್ರಭಾವಪೂರ್ಣವಾದ ಪಾತ್ರಗಳ ಮಧ್ಯದಲ್ಲಿ ನಾಯಿಕೆಯ ಪಾತ್ರವು ಇನ್ನೂ ಮಂಕಾಗಿ ತೋರುವುದು. ಧಾರಿಣಿಯ ಪಾತ್ರದಲ್ಲಿ ಆದರ್ಶ ಗೃಹಿಣಿಯ ಚಿತ್ರವನ್ನು ಕಾಣಬಹುದು. ಈ ಪಾತ್ರದ ರಚನೆಯಲ್ಲಿ ಕವಿಯು ತೋರಿಸಿದ ಜಾಣ್ಮೆ, ಲೋಕಾನುಭವ, ಹೃದಯ ಸಂಸ್ಕಾರ, ದೃಷ್ಟಿವೈಶಾಲ್ಯ ಮುಂತಾದುವನ್ನು ಎಷ್ಟು ಬಣ್ಣಿಸಿದರೂ ಕಡಮೆಯೆ. ಕಾಳಿದಾಸನ ಸ್ತ್ರೀಪಾತ್ರಗಳಲ್ಲಿ ಧಾರಿಣಿಯು ತನ್ನ ಔದಾರ್ಯ ದಾಕ್ಷಿಣ್ಯ ಗಾಂಭೀರ್ಯ ಮುಂತಾದವುಗಳಿಂದ ಸಹೃದಯರ ಮನಸ್ಸನ್ನು ಸೂರೆಗೊಳ್ಳುತ್ತಾಳೆ. ಮಾಲವಿಕೆ ಮತ್ತು ಇರಾವತಿಯ ಪಾತ್ರಗಳು ಧಾರಿಣಿಯ ಹಿರಿಮೆಯನ್ನು ಎತ್ತಿತೋರಿಸುವ ಉಪಪಾತ್ರಗಳಷ್ಟೆ. ಅವಳು ರಾಜನ ಮೊದಲನೆಯ ಹೆಂಡತಿ, ಪಟ್ಟಮಹಿಷಿ. ಅರಸನಿಗೆ ಅವಳಲ್ಲಿ ವಿಶೇಷ ಗೌರವ. ಅರಸನು ಇರಾವತಿಯನ್ನು ಮೆಚ್ಚಿ ಮುದುವೆಯಾದಾಗ ಅವಳು ಎಳ್ಳಷ್ಟೂ ಅಸಮಾಧಾನವನ್ನು ವ್ಯಕ್ತಪಡಿಸುವುದಿಲ್ಲ. ಅವಳ ಉದಾರವಾದ ಹೃದಯವನ್ನು ಸವತಿಮಾತ್ಸರ್ಯದ ಕಲ್ಮಷವು ಹೆಚ್ಚು ಸೋಂಕಲಿಲ್ಲ. ಸಪತ್ನಿಯಾದ ಇರಾವತಿಯನ್ನು ಆದರದಿಂದ ಕಂಡಳು. ಅರಸನು ತನ್ನ ದಾಸಿಯಾದ ಮಾಲವಿಕೆಯಲ್ಲಿ ಅನುರಕ್ತನಾದುದನ್ನು ತಿಳಿದು ಮಾಲವಿಕೆಯು ಅರಸನ ಕಣ್ಣಿಗೆ ಬೀಳದಂತೆ ನೋಡಿಕೊಳ್ಳುವಳು. ನಾಟ್ಯಾಚಾರ್ಯರಿಬ್ಬರ ಜಗಳದಲ್ಲಿ ವಿದೂಷಕನ ಕುಟಿಲತಂತ್ರವನ್ನು ಅರಿತವಳಾಗಿದ್ದರೂ ಕೇವಲ ದಾಕ್ಷಿಣ್ಯಕ್ಕಾಗಿ ಅದನ್ನು ವಿರೋಧಿಸದೆ ಇರುವಳು. ನೃತ್ಯದ ನೆವದಿಂದ ಅರಸನು ಮಾಲವಿಕೆಯನ್ನು ಕಾಣಲು ಅತುರನಾಗಿ ತ್ವರಿಸಿದ್ದುದನ್ನು ಕಂಡು 'ಅಹೋ ಅವಿನಯ ಆರ್ಯಪುತ್ರಸ್ಯ' ಎಂದು ಮನಸ್ಸಿನಲ್ಲಿಯೆ ಅಂದುಕೊಳ್ಳುವಳು. ಇರಾವತಿಯ ಇಚ್ಛೆಯಂತೆ ಮಾಲವಿಕೆಯನ್ನು ಬಂಧನದಲ್ಲಿಡುವಳು. ಆದರೆ ಪ್ರಸಂಗವು ಕೈಮೀರಿ ಹೋಗಲು ತಾನು ಮಾತು ಕೊಟ್ಟಂತೆ ಇರಾವತಿಯ ಒಪ್ಪಿಗೆಯನ್ನು ಪಡೆದಬಳಿಕ ಮಾಲವಿಕೆಯನ್ನು ತನ್ನ ಗಂಡನಿಗೆ ಅರ್ಪಿಸುವಳು. ಧಾರಿಣಿಯು ಮೊದಲ ಸಲ ರಂಗದಮೇಲೆ ಬಂದಾಗ ಅರಸನು ಹೇಳುವ 'ಮಂಗಲಾಲಂಕೃತಾಭಾತಿ-ಕೌಶಿಕ್ಯಾಯತಿವೇಷಯಾ, ಶ್ರಯೀ ನಿಗ್ರಹವತ್ಯೇವ ಸಮಮಧ್ಯಾತ್ಮವಿದ್ಯಯಾ' ಎಂಬ ಮಾತು ಅರಸನಿಗೆ ಅವಳಲ್ಲಿದ್ದ ಗೌರವಭಾವವನ್ನು ತೋರಿಸುತ್ತದೆ. ಅರಸನು ಅವಳ ರೂಪದಿಂದಲ್ಲ ಗುಣದಿಂದೆ ಮುಗ್ಧನಾಗಿದ್ದಾನೆ. ವಿದೂಷಕನಿಗೆ ಹಾವು ಕಚ್ಚಿದುದನ್ನು ತಿಳಿದು ತುಂಬ ದುರಗುತ್ತಾಳೆ ಮತ್ತು ನಾಗಮುದ್ರಿಕೆಯನ್ನು ಏನೊಂದೂ ವಿಚಾರಿಸದೆ ಕೊಟ್ಟು ಬಿಡುತ್ತಾಳೆ. ಹೀಗೆ ಇವಳಲ್ಲಿ ದಯೆ, ದಾಕ್ಷಿಣ್ಯ, ಮರುಕ, ತಾಳ್ಮೆ, ಕ್ಷಮೆ, ಹೆರರಿಗೆ ಹಿಂಸೆ ಕೊಡದಿರುವುದು, ಕೋಪಗೊಳ್ಳದಿರುವುದು ಇವೇ ಮುಂತಾದ ಹಲವಾರು ಒಳ್ಳೆಯಗುಣಗಳನ್ನು ಕಾಣುತ್ತೇವೆ. ಇವಳ ತಾಳ್ಮೆ

ಮತ್ತು ಕ್ಷಮಾಗುಣವನ್ನು ಪಂಡಿತಕೌಶಿಕೆಯು 'ಮಹಾಪಾರ ಪ್ರಸನಯೋಃ ಪದ್ಮಶಕ್ಷಮಯೋರ್ದ್ವಯೋಃ ಧಾರಿಣಿ ಭಾತ ಧಾರಿ ಣ್ಯೋರ್ಭವ ಭರ್ತಾ ಶಂಭ್ವಶಂ' ಎಂಬ ಮಾತುಗಳಲ್ಲಿ ತುಂಬ ಹೊಗಳಿದ್ದಾಳೆ. ಒಟ್ಟಿನ ಮೇಲೆ ಕವಿಯು ಧಾರಿಣಿಯ ಪಾತ್ರದಲ್ಲಿ ಒಳ್ಳೆಯ ಹೆಂಡತಿಯ ಚಿತ್ರವನ್ನು ಕೊಟ್ಟಿದ್ದಾನೆ. ಇರಾವತಿ ಅಗ್ನಿ. ಮಿತ್ರನ ಎರಡನೆಯ ಹೆಂಡತಿ. ಧಾರಿಣಿಗಿಂತ ಚಿಕ್ಕವಳು. ಇನ್ನೂ ಯುವತಿ. ನಾಟ್ಯಕಲೆಯಲ್ಲಿ ಇವಳಿಗೆ ಅಭಿರುಚಿ ಇದೆ. ಇವಳು ಒಳ್ಳೆಯ ರೂಪವತಿ. ರಾಜನ ಶೃಂಗಾರ ಸಖಿ ಮತ್ತು ಭೋಗಭಾರ್ಯೆ ಇವಳಿಗೆ ತನ್ನ ಸೌಂದರ್ಯದಲ್ಲಿ ಹೆಮ್ಮೆ ಇದ್ದಂತೆ ತೋರುತ್ತದೆ. ಅರಸನು ಮಾಲವಿಕೆಯಲ್ಲಿ ಅನುರಕ್ತನಾದುದನ್ನು ಕಂಡು ಇವಳ ಎದೆ ಉರಿಯುತ್ತದೆ ಅದು ಅವಳಿಗೆ ಸಹನವಾಗುವುದಿಲ್ಲ. ಪ್ರಣಯವು ಬೆಳೆಯುಂತೆ ಮಾಲವಿಕೆಯನ್ನು ಬಾಧನದಲ್ಲಿಡಿಸುವಳು. ಮಾಲವಿ ಕೆಯ ವಿಷಯದಲ್ಲಿ ರಾಜನ ಅನುರಾಗಪೂರ್ಣ ವರ್ತನೆಯನ್ನು ಕಂಡು ಅರಸನನ್ನು 'ಶಠ ಅವಿಶ್ವಸನೀಯ ಹೃದಯೋಽಸಿ' ಎಂದು ಬೈಯ್ಯುತ್ತಾಳೆ. ಅರಸನು ಕಾಲಿಗೆ ಬೀಳಲು ಅವು ಮಾಲವಿಕೆಯ ಕಾಲು ಗಳಲ್ಲಿಂದು ಹುಚ್ಚು ಮಾತುಗಳನ್ನು ಆಡುತ್ತಾಳೆ. ಧಾರಿಣಿಯು ವಿಷಯದಲ್ಲಿಯೂ ಇವಳಿಗೆ ಸಂಶಯ. ಮಾಲವಿಕೆ ಮತ್ತು ಅರಸನ ಸಮಾಗಮಕ್ಕೆ ಧಾರಿಣಿಯೇ ಕಾರಣಳೆಂದು ಮತ್ತು ಮಾಲವಿಕೆಯ ವಿಷಯದಲ್ಲಿ ಪಕ್ಷಪಾತ ಮಾಡುತ್ತಿದ್ದುದಾಗಿ ಅವಳ ಮೇಲೆ ಆಪಾದನೆ ಹೊರಿಸುತ್ತಾಳೆ. ಹೀಗೆ ಇವಳಲ್ಲಿ ದರ್ಪ, ಕೋಪ, ಸ್ವಾಭಿಮಾನ, ಕಾಠಿಣ್ಯ, ಮಾತ್ಸರ್ಯ ಮುಂತಾದ ಗುಣಗಳನ್ನು ಕಾಣುತ್ತೇವೆ. ಒಟ್ಟಿನ ಮೇಲೆ ಇರಾವತಿಯ ಪಾತ್ರವು ತುಂಬ ಪ್ರಭಾವಕಾರಿ. ಯಾಗಿದೆ. ಧಾರಿಣಿ ಮತ್ತು ಇರಾವತಿ ಇವರಿಬ್ಬರಲ್ಲಿರುವ ಗುಣ. ವೈಧರ್ಮ್ಯವನ್ನು ಕವಿಯು ಎತ್ತಿ ತೋರಿಸಿದ್ದಾನೆ. ಈ ಬಗ್ಗೆ ಡಾಕ್ಟರ್ ಕೀಥರು ಹೇಳಿದ ಮಾತುಗಳನ್ನು ಇಲ್ಲಿ ನೆನೆಯಬಹುದು:

The most effective characterisation, however is reserved for the two queens, Dharini and Iravati, the grace and dignity, and finally the magnanimity of the former, despite just cause for anger are set off effectively against the passionate impetuosity of the latter, which leads her to constant eaves-dropping and to an out break against the king, forgetful of his rank and rights.

ಪರಿವ್ರಾಜಿಕೆಯಾದ ಪಂಡಿತ ಕೌಶಿಕೆಯು ಮಾಧವಸೇನನ ಮಂತ್ರಿಯಾದ ಸುಮತಿಯ ತಂಗಿ. ಇವಳು ವಿಧವೆ. ಸುಮತಿಯು ಇವಳೊಂತಿಗೆ ಮಾಲವಿಕೆಯನ್ನು ವಿದಿಶಾ ನಗರಕ್ಕೆ ಕರೆದುಕೊಂಡು ಹೋಗುವಾಗ, ದಾರಿಯಲ್ಲಿ ಕಾಡುಕಳ್ಳರ ಪಡೆಗೆ ಸಿಕ್ಕಿ ಆವರೊಡನೆ ಹೋರಾಡಿ ಮೃತನಾಗುವನು. ವೈಧವ್ಯದುಃಖ ಮರಕಳಿಸಿತೋ ಎಂಬಂತೆ ಇವಳು ಇದ್ದ ಒಬ್ಬ ಅಣ್ಣನನ್ನೂ ಕಳೆದುಕೊಂಡು ಪರ

ಶಾಂತಿಸೇವಾಸದನದ ಹೊಸ ಪುಸ್ತಕಗಳು

ಜೈನಧರ್ಮ	೧೫-೦-೦
ಶ್ರೀ. ನಿರ್ಜಿ ಅಣ್ಣಾರಾಯರು	
ಹಾಲು-ಹಣ್ಣು (ಕವನ ಸಂಗ್ರಹ)	೧-೮-೦
ಶ್ರೀ. ಭುಜೇಂದ್ರ ಮಹಿಷವಾಡಿ	
ಮೂಲಶಿಕ್ಷಣದ ಮೌಲ್ಯಮಾಪಣ	೦-೧೫-೦
ಶ್ರೀ. ನಿರ್ಜಿ ಅಣ್ಣಾರಾಯರು	
ಬಾಳೆ-ಬಂಡಿ (ಕವನ ಸಂಗ್ರಹ)	೦-೮-೦
ಶ್ರೀ. ಬಾಳು ಬಿ ಉಪಾಧ್ಯೆ	
ಭರತೇಶನ ನಾಲ್ಕು ಚಿತ್ರಗಳು	೧-೪-೦
ಶ್ರೀ. ನಿರ್ಜಿ ಅಣ್ಣಾರಾಯರು	

ಅಚ್ಚಿನಲ್ಲಿ:

ಸಂಸ್ಕೃತಿಯ ಹೃದಯ
ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾಸದನ, ಸೇದಬಾಳ
ಪೋ. ಸೇದಬಾಳ (ಜಿಲ್ಲಾ ಬೆಳಗಾಂವಿ)

ದೇಶಿಯಾದಳು ಬಾಳುವೆಯಲ್ಲಿ ಇವಳಿಗಾಗಿ ಬರಿಯ ದುಃಖವೇ ಇವಳ ಭಾಗದಲ್ಲಿ ಬಂದುತಿದೆ. ಸುಮತಿಯು ಮಡಿಯಲು ಮತ್ತು ಮಾಲವಿಕೆಯು ಆ ಗದ್ದಲದಲ್ಲಿ ಕಣ್ಮರೆಯಾಗಲು, ಕಾಡಿನಲ್ಲಿ ಅಯ್ಯೋ ಎಂದು ಅಳುವಳು. ಅರಣ್ಯರೋದನದಿಂದ ಪ್ರಯೋಜನವಾಗದೆಂದು ತಿಳಿದು ಅಣ್ಣನ ದಹನಸಂಸ್ಕಾರವನ್ನು ಮಾಡಿ, ಯತಿವೇಷದಲ್ಲಿ ವಿದಿಶಾನಗರಕ್ಕೆ ಬರುವಳು. ಅಲ್ಲಿ ಮಹಾರಾಣಿಯಾದ ಧಾರಿಣಿ ಯನ್ನು ಆಶ್ರಯಿಸುವಳು. ಇತ್ತ ಮಾಲವಿಕೆಯನ್ನು ವೀರಸೇನನು ಧಾರಿಣಿಯಲ್ಲಿಯೇ ತಂದುಬಿಡಲು, ಕೌಶಿಕೆಯು ಅವಳನ್ನು ಗುರುತಿಸಿದರೂ ಸಾಧ್ವಿನ ಸಿದ್ಧಾದೇಶದಲ್ಲಿ ನಂಬುಗೆಯುಳ್ಳವಳಾದ ಅವಳು ಆ ಮಾತನ್ನು ಗುಟ್ಟಾಗಿಯೇ ಇಡುವಳು. ಅರಸನು ಮಾಲವಿಕೆಯಲ್ಲಿ ಅನುರಕ್ತನಾದುದನ್ನು ತಿಳಿದು ಗೌತಮನು ಅರಸನು ಮಾಲವಿಕೆಯನ್ನು ಕಣ್ಣಾರೆ ಕಾಣಲೆಂದು ಏರ್ಪಡಿಸಿದ ಮಾಲವಿಕೆಯ ನೃತ್ಯಾಭಿನಯದ ಪ್ರಸಂಗದಲ್ಲಿ ವಿದೂಷಕನಿಗೆ ತುಂಬ ಬೆಂಬಲವನ್ನೀಯುವಳು. ಇವಳು ತನ್ನ ಬುದ್ಧಿಮತ್ತೆ ಮತ್ತು ಒಳ್ಳೆಯ ಸ್ವಭಾವದಿಂದಾಗಿ ಅರಸನ ಮತ್ತು ಮಹಾರಾಣಿಯ ಆದರ ಮತ್ತು ಅನುಗ್ರಹಕ್ಕೆ ಪಾತ್ರಳಾಗುವಳು ಚಲಿತ ನಾಟ್ಯಾಭಿನಯದಲ್ಲಿ ಮಾಲವಿಕೆಗೆ ಪ್ರಣಯ ಗೀತೆಯನ್ನು ಇವಳೇ ಹೇಳಿಕೊಡುವಳು. ವಿದೂಷಕನು ಹಾವು ಕಚ್ಚಿದಂತೆ ನಟಿಸುತ್ತಿದ್ದಾಗ, ವಿಷವೇಗವನ್ನು ಇಳಿಸಲು 'ಛೇದೋ ದಂಶಸ್ಯದಾಹೋವಾ ವ್ಯತೇರ್ವಾರಕ್ತವೋಕ್ಷಣಂ, ವಿತಾನಿ ದಷ್ಟವಾ

ನ್ಯಾಣಾಮಾಯುಷಃ ಪ್ರತಿಪತ್ತಯೇ' ಎಂದು ಹೇಳಿದ ಮಾತುಗಳಿಂದ ಇವಳು ವಿಷವೈದ್ಯವನ್ನೂ ಅರಿತವಳಾಗಿದ್ದಳೆಂದು ತಿಳಿಯುತ್ತದೆ. ೂನೆಯ ಅಂಕದಲ್ಲಿ ಮಾಲವಿಕೆಯ ಪೂರ್ವವೃತ್ತಾಂತವನ್ನು ಹೇಳಿ ಾರಿಣಿಯು ಅರಸ ಮತ್ತ. ಮಾಲವಿಕೆಯ ವಿಷಯದಲ್ಲಿ ಪಕ್ಷಪಾ ತಹಿಸಿದ್ದರೂ, ಅದು ಎಲ್ಲ ಜನರಿಗೆ ತಿಳಿಯುವುದಿಲ್ಲ ಧಾರಿಣಿಗೆ ಮಾತ್ರ ೦ದು ತಿಳಿದಂತೆ ಕಾಣುತ್ತದೆ ನೃತ್ಯಾಭ್ಯಸನದ ಕಾಲದಲ್ಲಿ ಅರಸನೂ ಅರಬೇಕೆಂದಾಗ ಧಾರಿಣಿಯು ಕೌಶಿಕಿಯ ಬಗ್ಗೆ 'ಮುಗ್ಧೇ ಕಿಂ ಮಾಂ ಾಗೃತೀನುಪಿ ಸುಪ್ತಾಮಿವ ಕರೋಷಿ' ಎಂದು ಹೇಳುವ ಮಾತನ್ನು ಇಲ್ಲಿ ನೆನೆಯಬೇಕು. ಇವಳು ನಾಟ್ಯಕಲೆಯನ್ನು ಚೆನ್ನಾಗಿ ಅರಿತವ ಾಗಿದ್ದಾಳೆ. ಇವಳೇ ಮಾಲವಿಕೆಯ ನೃತ್ಯಾಭ್ಯಸನದ ಪರೀಕ್ಷಕಿ ಮತ್ತು ನಿರ್ಣಾಯಕಿಯು. ಇವಳೇ ಮಾಲವಿಕೆಗೆ ಅರಸನ ಪ್ರಣಯ ಸಂಪಾದನೆಯಲ್ಲಿ ಸಹಾಯ ಮಾಡುವಳು ವಿಮರ್ಷಕನು ಇವಳನ್ನು 'ಪೀಠಮರ್ದಿಕೆ'ಯೆಂದು ಕರೆದಿರುವುದು ಯಥಾರ್ಥವಾಗಿದೆ. ಬಕುಳಾವಳಿಕೆ ಧಾರಿಣಿಯ ಚೇಟಿ ಮತ್ತು ಮಾಲವಿಕೆಯ ಜೀವದ ಗೆಳತಿ. ಕಷ್ಟಕಾಲದಲ್ಲಿ ಕೆರಳಿಗೆ ಸಹಾಯಕಳಾಗುವುದು ಇವಳ ಸ್ವಭಾವ. ಮಾಲವಿಕೆಯು ಅರಸನ ಪ್ರಣಯಸಂಪಾದನೆಯಲ್ಲಿ ಇವಳ ಸಹಾಯ ವನ್ನು ಕೇಳಿದಾಗ 'ವಿಮರ್ದಕುರುಭೂರ್ಮಕುಲಾವಲಿಕಾ ಖಲ್ವಹಂ' ಎಂದ ಹೇಳಿದ ಇವಳ ಮಾತನ್ನು ಇಲ್ಲಿ ನೆನೆಯಬೇಕು. ಹರದಾಸ ಮತ್ತು ಗಣದಾಸರ ಪಾತ್ರಗಳ ಮೂಲಕ ಕವಿಯು ವಿದ್ವಾಂಸರ ಅನ್ಯೋನ್ಯ ಯಶೋದೂಷಣೆಯನ್ನು 'ಪ್ರಾಯೇಣ ಸಮಾನವಿದ್ಯಾಃ ಪರಸ್ಪರ ಯಶಃ ಪುರೋಭಾಗಾಃ' ಎಂಬ ಮಾತುಗಳಲ್ಲಿ ಹೇಳಿದ್ದಾನೆ. ಇದಲ್ಲದೆ ಕೇವಲ ಹೊಟ್ಟೆಪಾಡಿಗಾಗಿ ವಿದ್ಯೆ ಹೇಳುವುದು ಗರ್ಹ್ಯವಾದುದೆಂಬ ಅಭಿಪ್ರಾಯವನ್ನು 'ಯಸ್ಯಾಗೆನುಃ ಕೇವಲ ಜೀವಿಕಾಯೈ, ತಂ ಜ್ಞಾನಪಣ್ಯಂ ವಣಿಜಂ ವದಂತಿ' ಎಂಬ ಮಾತುಗಳಲ್ಲಿ ವ್ಯಕ್ತಪಡಿಸಿದ್ದಾನೆ.

ಕೊನೆಯದಾಗಿ ಡಾಕ್ಟರ್ ವಿಲ್ಸನ್‌ರು ಈ ನಾಟಕದ ಬಗ್ಗೆ ಎತ್ತಿದ ಆಕ್ಷೇಪವೊಂದನ್ನು ಕುರಿತು ವಿಚಾರಿಸೋಣ. ಈ ನಾಟಕವು ಬೇರೊಬ್ಬ ಕಾಳಿದಾಸನಿಂದ ಬರೆಯಲ್ಪಟ್ಟಿದೆಯೆಂಬುದು ಅವರ ವಾದದ ತಾತ್ಪರ್ಯ—ಅವರು ತಮ್ಮ ವಾದದ ಸಮರ್ಥನೆಯಲ್ಲಿ ಹೇಳುವ ಕಾರಣಗಳು ಹೀಗೆ ಇವೆ:

There is neither the same melody in the verse nor fancy in the thoughts. The manners described appears to be those of a degenerate state of Hindoo Society. ಮೊದಲನೆಯದಾಗಿ ಈ ನಾಟಕದಲ್ಲಿಯೂ ಇನ್ನುಳಿದ ನಾಟಕಗಳಂತೆ ಕವಿಯ ಶೈಲಿಯು ಮಧುರವೂ ಲಲಿತವೂ ಆಗಿದೆ. ಈ ನಾಟಕವನ್ನು ಓದಿದ ಯಾರೂ ಈ ಮಾತನ್ನು ಒಪ್ಪದೆ ಇರಲಾರರು ಕೊನೆಯದಾಗಿ ಈ ನಾಟಕದಲ್ಲಿ ಸಮಾಜದ ಹೀನ ಆಚಾರಗಳ ಚಿತ್ರವಿದೆಯೆಂಬುದು.

ಬಡತನದ ಬಾಳು

(ಕಥಾಸಂಕಲನ)

ಬರೆದವರು : 'ಆನಂದಕಂದ'

ಇದರಲ್ಲಿಯ ಒಂದೊಂದು ಕಥೆಯೂ ನಮ್ಮ ಜನಜೀವನದ ವಾಸ್ತವಚಿತ್ರ. ವಾಸ್ತವದಲ್ಲಿಯೆ ಸಾಹಿತ್ಯಕಸೌಂದರ್ಯವನ್ನು ಸಹಜವಾಗಿ ಹೇಗೆ ತುಂಬಬಹುದೆಂಬುದಕ್ಕೆ ಇದರಲ್ಲಿಯ ಕಥೆಗಳು ಒಳ್ಳೆಯ ಮಾದರಿಗಳಾಗಿವೆ.

ಕ್ರೌ. ಆ. ೧೩೦ ಪುಟಗಳು. ಬೆಲೆ ೧-೪-೦

'ಜಯಂತಿ' ಕಾರ್ಯಾಲಯ, ಧಾರವಾಡ

ಇಲ್ಲಿ ವಿಮರ್ಶಕರು ಇದು ಐತಿಹಾಸಿಕ ನಾಟಕವೆಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ನಾಟಕದ ಕಥಾವಸ್ತು ಅಂತಃಪುರದಲ್ಲಿ ನಡೆದ ಪ್ರಣಯ. ಕವಿಯು ಕಥೆಗೆ ತಕ್ಕಂತೆ ಪಾತ್ರಗಳನ್ನೂ ಸನ್ನಿವೇಶಗಳನ್ನೂ ಸಂಧಾನಗಳನ್ನೂ ಕಲ್ಪಿಸಿದ್ದಾನೆ. ಈ ನಾಟಕದಲ್ಲಿ ವೇದಾಂತವಿಲ್ಲ, ಜೀವನದ ಗಂಭೀರ ತತ್ತ್ವಗಳ ದರ್ಶನವಿಲ್ಲ. ಇಲ್ಲಿ ಎಸ್. ಕೆ. ಡೇ ಅವರು ಈ ನಾಟಕದಬಗ್ಗೆ ಹೇಳಿದ ಮಾತುಗಳನ್ನು ನೆನೆಯಬಹುದು.

The motif of the progress of a courtly love intrigue through hindarances to royal desire for a lowly maiden and its denouement in the ultimate discovery of her status as a princes was perhaps not as banal in Kalidasa's time as we are wont to think. Perhaps the tone and tenor of the play did not permit a more serious development of this aspect of the plot but it should not be regarded as a deficiency. Gallantry is undoubtedly the key note of the play, and its joys and sorrows should not be reckoned at a higher level. Judged by its own standard there is nothing immature, clumsy or turged in the drama. The characterisation is sharp and clear, and the expression polished, elegant and even dainty.

ಏತಕಾಗಿ ಬಂದೆ?

'ಆನಂದಕಂದ'

ಪಲ್ಲವಿ

ಏನ ತಂದಿರುವೆ ನೀನು ಹೊಸದಿನವೆ,
ಏತಕೆಂದು ಬಂದೆ?
ಮಾನವತೆಯ ಭೇರಿಯನು ಮೊಳಗಿಸುವ
ತ್ರಾಣ ನಿನ್ನೊಳಿಹುದೆ?—ಹಂದೇ,
ಏತಕೆಂದು ಬಂದೆ?

ನೀನು ಬರಲಿರುವ ಕೂನುಗಳರುಹಿತು
ಬೇವಿನ ಹೂಗುಡಿಯು....
ನಿನಗಾಗಿಯೆ ಬನವನು ಅನುಗೊಳಿಸಿತು
ಮಾವಿನೆಳೆಯ ಮಿಡಿಯು.
ಮಲ್ಲಿಗೆವೆಣ್ಣು—ತೆರೆಯಿತು ಕಣ್ಣು
ನೀನು ಬರುವೆಯೆಂದೇ
ಏನ ತಂದಿರುವೆ ನೀನು ಹೊಸದಿನವೆ
ಏತಕಾಗಿ ಬಂದೆ?

ಕೋಗಿಲೆ ಪಂಚಮರಾಗದಿ ಹಾಡಿತು
ಸ್ವಾಗತ ಸಂಗೀತ....
ಸೋಗೆಯನರಳಿಸಿ ಕೇಗಿನುಲುಹಿನಲಿ
ನವಿಲಾಡಿತು ಕುಣಿತ.
ಎಲ್ಲಿಯು ಆಶೆ—ಸುರಿಸಿದೆ ಸೇಸೆ—
ನಿನ್ನ ಬರವಿಗೆಂದೇ
ಏನ ತಂದಿರುವೆ ನೀನು ಹೊಸದಿನವೆ,
ಏತಕೆಂದು ಬಂದೆ?

ಕಳೆದ ದಿನಗಳಾ ಬಳಿಯೊಳೆ ನೀನೂ
ಇಳೆಗಿಳಿತಂದಿಹೆಯೋ....
ತಿಳಿವು-ಕಲೆಯ ಬೆಳೆಗಳನೇನಾದರು
ಸಲಿಸಲು ಬಂದಿಹೆಯೋ?
ನೀನೂ ಹಳದಿನ—ದಂತಿರೆ ಈಕ್ಷಣ
ಸಾಗು ಶರಣು ಎಂದೆ....
ಏನ ತಂದಿರುವೆ ನೀನು ಹೊಸದಿನವೆ
ಏತಕಾಗಿ ಬಂದೆ?

ಬಿಗಿದ ಮುಷ್ಟಿಯೊಳು ಹುಗಿದಿಹುದೇನನು
ಸೊಗವನ್ನೊ ದುಗುಡವನ್ನೋ?
ತೆಗೆ ತೆರೆ ತೋರಿಸು ಅಂಗೈಗೆರೆಗಳ
ಬಗೆಯನು ನೋಡುವೆನೋ!
ನೀನೆ ಸುದ್ದಿವಿ—ಇರದಿರೆ ಈ ಬುವಿ-
ಗೇನು ಗತಿಯೊ ಮುಂದೆ....
ಏನ ತಂದಿರುವೆ ನೀನು ಹೊಸದಿನವೆ
ಏತಕೆಂದು ಬಂದೆ? ೪

ಒಡಲೊಳಗೇನನು ಅಡಗಿಸಿಕೊಂಡಿಹೆ,
ಒಲವನ್ನೊ ವೈರವನ್ನೋ?
ಗುಡುಗಿ ಗುತುಗಿ ಉಗ್ಗಡಿಸುವೆಯೇನನು,
ಕೊಲೆಯನ್ನೊ ಕಾವಲನ್ನೋ?
ಮಳೆಗಳು ಕೂಳ[illegible] ಕೊಡುವುವೆ ಹೇಳು
ಹೆ[illegible]ವರುಷದ ತಂದೆ!....
ಏನ ತಂದಿರುವೆ [illegible]ನು ಹೊಸದಿನವೆ
ಏತಕೆಂದು ಬಂದೆ? ೫

ಕಾಲರಾಯ ಕಿವಿಮಾತನಾವುದನು
ಹೇಳಿ ಕಳುಹಲಿಲ್ಲೆ?
ಬಾಳೆ ಗೋಳು-ಗೋಳಾದ ಬವಣೆಯನು
ನೋಡು, ತಿಳಿವುದಿಲ್ಲೇ!
ಇದಕೆ ಉಪಾಯ—ಇದ್ದರೆ ಗೆಳೆಯ
ಕರೆವೆ ಬಾಡೊ ಮುಂದೆ....
ಏನ ತಂದಿರುವೆ ನೀನು ಹೊಸದಿನವೆ,
ಏತಕೆ ದು ಬಂದೆ? ೬

ಜಗವ ಮುಸುಕಿರುವ ಹಗೆಯ ಹುಸಿ-ಕವಚ
ತೆಗೆವ ಬಲುಹು ಇಹುದೆ?
ಮೃಗಗಳನೂ ಹಿಂದೊಗೆವ ಮಾನವರ
ತಿದ್ದುವ ಚಲವಿಹುದೆ?
ಇದ್ದರೆ ಮಣಿವು!—ಇರದಿರೆ, ದಣಿವು
ಏತಕಾಗಿ ಬಂದೆ?
ಏನ ತಂದಿರುವೆ ನೀನು ಹೊಸದಿನವೆ
ಏತಕೆಂದು ಬಂದೆ? ೭

ದೇವರಿದ್ದಾನೆಯೇ?

(ಒಂದು ಜೀವನಕಥೆ)

ಶ್ರೀ. ವೆಂ. ಮು. ಜೋಶಿ, ಧಾರವಾಡ

ದೇವರ ಅಸ್ತಿತ್ವನನ್ನು ಕುರಿತು ಸಾವಿರ ಸಾವಿರ ವರ್ಷಗಳ ಅನುಭವ ಸಾರಿಹೇಳುತ್ತಲಿದ್ದರೂ, ನ್ಯವಹಾರಬುದ್ಧಿಯ ಲೌಕಿಕರು ಅದನ್ನು ನಂಬುವುದಿಲ್ಲ. ರಂಗಣ್ಣ 'ದೇವರಿದ್ದಾನೆ' ಎಂದು ನಂಬಲಿಕ್ಕೆ ಕಾರಣನೇನು ಘಟಿಸಿತು?

"ದೇವರಿದ್ದಾನೆಯೇ?"

"ಪ್ರಶ್ನೆ ದೊಡ್ಡದು. ಅದನ್ನು ಕೇಳಿದವರೂ ಸಣ್ಣವರಲ್ಲ. ಈ ಪ್ರಶ್ನವನ್ನು ಕೇಳಿಕೊಂಡಾಕೆ ಸುಬ್ಬಕ್ಕ....ಸಾಕ್ಷಾತ್ ಸುಬ್ಬಕ್ಕ. ರಘುನಾಥರಾಯರ ಸೊಸೆ, ಗುಂಡಣ್ಣನ ಹೆಂಡತಿ, ಎರಡು ಚಿಕ್ಕ ಮಕ್ಕಳ ಪೋಷಣೆಯ ಭಾರವನ್ನು ಹೊತ್ತ ವಿಧವೆ, ಮೂವತ್ತನ್ನೂ ಮುಟ್ಟದ ವಯಸ್ಸಿನಲ್ಲಿಯೇ ಇದೆಲ್ಲದರ ಜೊತೆಗೆ ಸುಖಸಂಪತ್ತಿನಿಂದ ಮನೆತನ ಮಾಡಿಕೊಂಡ ಅವಸ್ಥೆಗೆ ಇಳಿದ ಅನಸೂಯವನ್ನು ಕಂಡುಂಡ ಕಳಕಳಿಯ ಹೃದಯದ ಸುಬ್ಬಕ್ಕ ಈ ಪ್ರಶ್ನವನ್ನು ಕೇಳುತ್ತಿದ್ದಾಳೆ."

ಶ್ರೀರಂಗರ "ಪುರುಷ" ಕಾದಂಬರಿಯ ಮೊದಲ ಪುಟದ ಮೊದಲ ಸಾಲುಗಳನ್ನು ಓದುತ್ತಿದ್ದ ಕಾರಕೂನ ರಂಗಣ್ಣ ಕಣ್ಣನ್ನು ಮುಚ್ಚಿಕೊಂಡ. ಮೂರು ದಿನಗಳಿಂದಲೂ ಮಲಗದೇ ಇದ್ದ ರಂಗಣ್ಣ ಕಣ್ಣನ್ನು ಮುಚ್ಚಿಕೊಂಡದ್ದು ಅದೇ ಮೊದಲು—ಅದರೆ ನಿದ್ರೆಗಾಗಿ ಅಲ್ಲ. ನಿದ್ರೆ ಬರುವ ವಯಸ್ಸನ್ನು ಇನ್ನೂ ಮುಟ್ಟಿರಲಿಲ್ಲವಾದರೂ—ಅಂಥ ಪರಿಸ್ಥಿತಿಯಲ್ಲಿ ಮಾತ್ರ ಕಾಲಿಟ್ಟಿದ್ದ. ಅದು ಅವನ ಮನದ ಭಯಕ್ಕೆ ಅಲ್ಲ, ಕಣ್ಣಿಗೆ ಬರೆಹ.

ಕಣ್ಣನ್ನು ಮುಚ್ಚಿಕೊಂಡ ಕಾರಕೂನ ರಂಗಣ್ಣನ ಕಣ್ಣೆದುರಿನಲ್ಲಿ ಪಟಪಟನೇ—ಕೆಂಪುಬಣ್ಣದ ಪತಾಕೆಯಂತೆ ಕಾಣುವ ಹಲವು ಸನ್ನಿವೇಶಗಳು ಒಂದರ ಹಿಂದೊಂದು ಕಾಣಿಸಿಕೊಂಡು ಜಾರತೊಡಗಿದುವು:

ಹೆಂಡತಿಯ ವಿಷಮಜ್ವರ!

ಏಳು ತಿಂಗಳ ಕೂಸು—ಮಗಳ ಜ್ವರ—ಆರಯಿಕೆ!

ತಾಯಿಯ ಹಾಲನ್ನು ಹತಾಶ್ಚಾಗಿ ಬಿಡಿಸಿಕೊಂಡು ಕೃತ್ರಿಮ ಹಾಲಿಗೆ ಬಾಯಿ ಬಾಯಿ ಬಿಡುವ ಮಗಳ ಮುಗ್ಧ ಮುಖ!

ಡಾಕ್ಟರರ ಬಿಲ್ಲು!

ಕಿರಾಣಿಯವರ ಉದ್ದರಿ!

ಕಟ್ಟಿಗೆ ಅಡ್ಡೆಯವನ ಸಾಲ!

ಕಚೇರಿಯಲ್ಲಿಯ ಅಗದದ ರಾಶಿ!

ಅರ್ಜಂಟ್—ಟಾಪ್ ಪ್ರಯಾರಿಟಿ—ವರ್ಕಶೀಟ್.

ಅಧಿಕಾರಿಗಳ ಮೆಮೊ!

ವಾರ್ನಿಂಗ್!

ಇನ್‌ಕ್ರಿಮೆಂಟಿನ ಆಂಜಿಕೆ!!

ರಂಗಣ್ಣ ಅಂಜಿ ಕಣ್ಣನ್ನು ತೆರೆದ—ಮೇಲಿನ ಕಹಿನೆನಹುಗಳನ್ನು ಕಂಡು ಅವುಗಳ ಭೀಕರ ಭವಿಷ್ಯಕ್ಕೆ ಅಂಜಲಿಲ್ಲ. ಹೆಂಡತಿಯ ನರಳುವಿಕೆಗಾಗಿ—ಮಗಳ ಅಳುವಿಗಾಗಿ—ಕಿರಾಣಿ ಅಂಗಡಿಯವನ ಅಗಮನದಿಂದ ಅವನು ಕಣ್ಣನ್ನು ತೆರೆದುದು ಸಂಕಟಗಳು—ಸಾಕ್ಷಾತ್ ಮೂರು ಸಂಕಟಗಳು ಎದುರಿಗೆ—ಮೂರೂ ಬದಿಗೆ ಮುಖ ಕೊಡುವ ಸ್ಥಿತಿಯಲ್ಲಿ ರಂಗಣ್ಣನಿರಲಿಲ್ಲ. ಆದರೆ ಅನಿವಾರ್ಯ. ತ್ರಿಮುಖದತ್ತನಾಗಿ ನಿಲ್ಲುವ ಧೈರ್ಯವಿಲ್ಲ. ಇದ್ದ ಒಂದು ಮುಖವನ್ನು ಮುಚ್ಚಿಕೊಳ್ಳಲೂ ಅಸಮರ್ಥ.

ತೊಯಿಸಿಕೊಂಡವ ಮತ್ತೆ ಮಳೆಬಂದಾಗ ಸೆಟೆದುನಿಲ್ಲುವಂತೆ—ರಂಗಣ್ಣ ಕುಳಿತಲ್ಲಿಯೆ ಎದ್ದುನಿಂತ. ನರಳುವ ಹೆಂಡತಿಯ ಬಾಯಲ್ಲಿ ಹಣ್ಣಿನ ರಸವನ್ನು ಹಾಕಿ—ಮಗಳ ಕೈಯಲ್ಲಿ ಆಟಿಗೆಯ ಸಾಮಾನನ್ನು ಇರಿಸಿ, ಅಂಗಡಿಯವನತ್ತ ಮುಖ ತಿರುಹಿನಿಂತ. ಅಂಗಡಿಯವನ ಮುಖ ಕೆಂಪಾಗಿತ್ತು. ಎರಡು ತಿಂಗಳುಗಳಿಂದ ತಡೆದು ನಿಂತ ಉದ್ದರಿ—ಹಾಲಾಹಲವಾಗಿ ಅವನ ಮುಖಾಂತರ—ನೇತ್ರಾಂತರವಾಗಿ ಹೊರಹೊಮ್ಮತೊಡಗಿತ್ತು. ರಂಗಣ್ಣ ನಿಶ್ಚಲನಾಗಿ ನಿಂತಿದ್ದ. ಸಮುದ್ರಮಂಥನದಲ್ಲಿ ಹೊರಟ ಹಾಲಾಹಲ ನುಂಗಲು ನಿಂತ ನೀಲಕಂಠನಂತೆ!

ತನ್ನಲ್ಲಿದ್ದ ಶಬ್ದಭಾಂಡಾರ ಮುಗಿದಾಕ್ಷಣ ಅಂಗಡಿಯವನು ಹುರಳಿದ;

ರಂಗಣ್ಣ ಇನ್ನೂ ನಿಂತೇ ಇದ್ದ.

ಪಕ್ಕದ ಮನೆಯ ಸಂಗೀತಗಾರಳ ಮಗಳು ಹಾಡುತ್ತಿದ್ದಳು:

"ತಿತ್ತಿರಿ ತುಂಬಿನೆ ಭೂಮಿಯು ಕಣಜ, ಕಕ್ಕಸಬಡುತಿದೆ ಬೊಕ್ಕಸ ದೊಡಲು! ತೆರವೋ ತೆರವು—ಬರಿದೋ ಬರಿದು—ಬಡವರ ಬಗ್ಗರ ತುತ್ತಿನ ಚೀಲಾ! "ದೇವರದೊಂದು ಗೋರಿಯ ಕಟ್ಟಿ, ಧರ್ಮದ ಧೂಪಕೆ ಬೆಂಕಿಯನಿಕ್ಕಿ —ಗಣ ಗಣ....."

"ಗಣ್ ಗಣ್ ಗಣ್."

ಪಾಡಿನಲ್ಲಿಟ್ಟ ಗಡಿಯಾರದ ಅಲಾರಾಮ್ ಬಡಿಯತೊಡಗಿತು.

ಗುಳಿಗೆ ಕೊಡುವ ಸಮಯ ನೆನಪಾಗಲೆಂದೇ ಇರಿಸಿದ ಅಲಾರಾಮ್ ಅದು. ರಂಗಣ್ಣ ಬಾಗಿಲನ್ನು ಮುಂದೂಡಿ ಒಳಗೆ ಬಂದು, ಅಲಾರ್ಮನ್ನು ಬಂದುಮಾಡಿ, ಗುಳಿಗೆಯನ್ನು ಹೆಂಡತಿಯ ಬಾಯಲ್ಲಿರಿಸಿ, ಮತ್ತೆ ಬದಿಯ ಕುರ್ಚಿಯಲ್ಲಿ ಕುಳಿತ. ಅವನ ಮುಖದ ಎದುರಿನಲ್ಲಿಯೇ ಕಿಟಕಿ ಹೊರಗಿನ ಜಗತ್ತು ತಾತ್ಕಾಲಿಕವಾಗಿ ಅವನಿಗೆ ಶೂನ್ಯವೆಂದು ಕಂಡರೂ—ಆ ಕಿಟಕಿಯಿಂದ ಹೊರಗಿನ ಜಗತ್ತಿನ ದೃಶ್ಯ ಕಾಣುತ್ತಿತ್ತು. ಅದು ಅನಿವಾರ್ಯ. ರಂಗಣ್ಣನಿಗೆ ಹೆಂಡತಿಯಶ್ಟ ನೋಡಲು ಅಂಜಿಕೆ—ಅವಳು ಅಸ್ಥಿಪಂಜರದಂತಾಗಿದ್ದಾಳೆ.

ನೋಡುವುದಕ್ಕೆ ಭಯ—ನೋಡದೆ ಹೋದರೆ ಮನಸ್ಸಿನ ಕಾತರ ಹೆಚ್ಚಾಗುತ್ತದೆ. ನೋಡಿದರೆ ಇನ್ನೊಂದು ಭಯ: ಅಸ್ಥಿಪಂಜರದಂತಾದ ಹೆಂಡತಿಯ ದೇಹ ನೋಡಿದಾಕ್ಷಣ ಸಲ್ಲದ ವಿಚಾರ—ಘೋರ ವಿಚಾರ.

ಸಹಿಸದ ನೋವು—ಅಸಾಧ್ಯ ನೋವು—ಕಲಮಲ!

ಈ ನೋವು ಕಡಿಮೆಯಾಗುವುದಕ್ಕೆ ಕಿಟಕಿ ತಾತ್ಕಾಲಿಕ ಸಾಧನ.

ರಂಗಣ್ಣ ಕಿಟಕಿಯ ಹೊರಗಡೆ ದೃಷ್ಟಿ ಚೆಲ್ಲಿದ. ಮೂರಂತಸ್ತಿನ ಸಿಮೆಂಟ್-ಕಾಂಕ್ರೀಟ್ ಬಿಲ್ಡಿಂಗು. ತೀರ ಹೊಸದು—ಇಂದೇ ಗೃಹಪ್ರವೇಶ.—ತಳಿರು ತೋರಣ-ಶೃಂಗಾರ—ನಡೆದಿತ್ತು ಅಲ್ಲಿ.

ಎಲ್ಲವೂ ಕಿಟಕಿಯೊಳಗಿಂದ ರಂಗಣ್ಣನಿಗೆ ಕಾಣುತ್ತಿದೆ. ಮೂರಂತಸ್ತಿನ ಮನೆಯನ್ನು ಕಟ್ಟಿಸಿದವನು, ಆ ಓಣಿಯಲ್ಲಿ ಆರೇಳು ವರುಷಗಳ ಹಿಂದೆ ಚಹದ ಅಂಗಡಿಯನ್ನು ತೆರೆದ ಉಡುಪಿಯ ಗೋಪಾಳಪ್ಪ. ಆದೇ ಓಣಿಯಲ್ಲಿ ರಂಗಣ್ಣ ಏಳು ವರುಷಗಳ ಮೊದಲೂ ಮನೆ ಮಾಡಿರುವ. ರಂಗಣ್ಣ ಹಳೆಯ ನೆನಪುಗಳನ್ನು ಮೆಲುಕು ಹಾಕತೊಡಗಿದ:

ಉಡುಪಿಯ ಗೋಪಾಳಪ್ಪ ಅದೇ ಚಹದ ಅಂಗಡಿಯನ್ನು ತೆರೆದಿದ್ದ. ಹೆಂಡತಿಯಿಂದ ಬಂದ ಪತ್ರವನ್ನು ಓದುವುದಕ್ಕಾಗಲಿ, ಬಂದ ಪತ್ರಗಳಿಗೆ ಉತ್ತರವನ್ನು ಬರೆಯಲಿಕ್ಕಾಗಲಿ ತಾನೇ ಹೋಗ್ತಬೇಕು. ಅಕ್ಷರದ ಕೆಲಸ ಯಾವುದೇ ಇರಲಿ, ಗೋಪಾಳಪ್ಪನಿಗೆ ರಂಗಣ್ಣ ಬೇಕೇ ಬೇಕು. ವ್ಯವಹಾರ ಚತುರ ಗೋಪಾಳಪ್ಪನ ಅಂಗಡಿ ಬೆಳೆಯತೊಡಗಿತು—ಏಳು ವರುಷದಲ್ಲಿ ಮೂರಂತಸ್ತಿನ ಮನೆ—

ರಂಗಣ್ಣ ಯೋಚನೆಗೀಡಾದ—ತಾನೂ ಏಳು ವರುಷ ಪ್ರಾಮಾಣಿಕವಾಗಿ ದುಡಿದಿದ್ದಾನೆ. ಬಂದ ಸಂಕಟಗಳ ನೋವನ್ನು ಉಂಡು—ಅರೆಹೊಟ್ಟೆಯಲ್ಲಿಯೇ ಇಂಟರ್ ಪರೀಕ್ಷೆ ಮುಗಿಸಿರುವ. ಬಿ. ಎ. ಆಗಬೇಕೆನ್ನುವ ಹಂಬಲ—ಈ ಏಳು ವರುಷಗಳು ಸರಕಾರೀ ನಿರ್ಲಂಚ ನೌಕರನಾಗಿರುವ. ಈ ಏಳು ವರುಷಗಳ ಪ್ರಾಮಾಣಿಕತನದ ಫಲವೇನು?

ಜೇನು-ಬೇಸರಿಕೆ-ಡಾಕ್ಟರ್ ಬಿಲ್ಲು-ಸಾಲ ಉದ್ದರಿ-ಅವಮಾನ-ಅಸಮರ್ಥತೆ—ವಾರ್ನಿಂಗು.

'ಛೆ' ಎಂದು ತಲೆಕೊಡಹಿಕೊಂಡು ರಂಗಣ್ಣ ಕಿಟಕಿಯ ಹತ್ತಿರ ಬಂದು ನಿಂತ.

ಗೋಪಾಳಪ್ಪ ಮೂರಂತಸ್ತಿನ ಗೃಹಪ್ರವೇಶ ಮಾಡುತ್ತಿದ್ದಾನೆ ರಂಗಣ್ಣನ ಬಾಯಿಯಿಂದ ಶಬ್ದವೊಂದು ಹೊರಬಿತ್ತು:

"ದೈವದುರ್ವಿಲಾಸ!"

ಅಕ್ಷರದ ಅಭ್ಯಾಸವಾಗಿ ಹೊರಟ ಶಾಸ್ತ್ರ—ತನ್ನ ಹೆಂಡತಿಯ ಬೇನೆಗೆ ಬೇಕಾಗುವ ಔಷಧಿಯನ್ನು ಸಕಾಲಕ್ಕೆ ತರಲೂ ಅಸಮರ್ಥ; ಆದರೆ ನಿರಕ್ಷರಕುಕ್ಷಿಯಾದ—ಅಂಕಿಯು ಜ್ಞಾನವಿಲ್ಲದ—ಗೋಪಾಳಪ್ಪ ಅಸಂಖ್ಯ ನೋಟುಗಳ ಅಂಕಿಗಳನ್ನೆಣಿಸತೊಡಗಿರುವ.

ರಂಗಣ್ಣನ ಕಣ್ಣುಗಳ ಮುಂದಿಂದ ಅವನು ಓದಿದ ಪುಸ್ತಕಗಳು ಒಂದೊಂದಾಗಿ ಕಾಣಿಸಿಕೊಂಡು ಹಿಂದೆ ಸರಿಯತೊಡಗಿದುವು:

'ಮಾರ್ಕ್ಸ್—ಲೆನಿನ್— ಪಾಮ್‌ದತ್ತ—ಕಾಮ್ರೇಡ್ ರಾಯ್, ಹಸಿವೆಯನ್ನು ತಡೆದು ಹೋರಾಟ ನಡೆಸಿದ ಕೆಂಗಣ್ಣಿನ ಕೆಂಪು ಬಣ್ಣದ ಕಮ್ಯೂನಿಸ್ಟ್ ರಷ್ಯಾ ಕ್ರಾಂತಿಯ ವರ್ಣನೆ—

ಎಲ್ಲವೂ ರಂಗಣ್ಣನ ಕಣ್ಣೆದುರು ಸುಳಿಸುಳಿದು ಮಾಯವಾಗತೊಡಗಿದುವು.

ಕಣ್ಣೆದುರು ಒಂದೂ ನಿಲ್ಲಲಿಲ್ಲ.

ಮುಂದೆಂದಾದರೂ ಸುಖದ ದಿನಗಳು ಬಂದಾವು—ಎಂಬ ಆಶೆಯನ್ನು ಬಿಡದ ರಂಗಣ್ಣನಿಗೆ ಮಾರ್ಕ್ಸ್‌ವಾದ, ರಾಯ್ ಅವರ ವಾದ ಸಮರ್ಪಕವಾಗಿ ತೋರಲಿಲ್ಲ.

"ದೇವರಿದ್ದಾನೆಯೇ?"

ಮತ್ತೆ ಅವನು ತನ್ನನ್ನು ತಾನೇ ಕೇಳಿಕೊಂಡ. ಕಾಮ್ರೇಡ್ ರಾಯ 'ದೇವರಿಲ್ಲ' ಎಂದು ಹೇಳಿದುದರ ನೆನಪಾಯಿತು. "ಇದ್ದಾನೆ" ಎಂದು ವಾದಿಸುವವರಿಗೆ ಅವನನ್ನು ತೋರಿಸುವ ಧೈರ್ಯವಿಲ್ಲ; ಇಲ್ಲವೆಂದು ಹೇಳುವವರಿಗೆ ಈ ಸಂಕಟವಿಲ್ಲ.

ರಂಗಣ್ಣ ಮತ್ತೆ ವಿಚಾರಿಸಿದ:

ದೇವರು ಇರಲೇಬೇಕು. ಇಲ್ಲದೇ ಹೋದರೆ—ತಡೆದು ನಿಂತ ದವಾಖಾನೆಯು ಫೀ ಮುಟ್ಟಿಸುವವರೆಗೂ ಔಷಧವಿಲ್ಲವೆಂದು ಖಂಡಿತ. ವಾದಾಗ—ಮನೆಯವಳ ಜ್ವರ ಗುಣವಾಗಲೆಂದು—ಅದರ ಭಾರವನ್ನು ನನ್ನೆ ತಾನೇ ದೇವರ ಮೇಲೆ ಹಾಕಿದ್ದನಲ್ಲವೇ. ತನ್ನನ್ನು ರಕ್ಷಿಸುವ ದೇವರು ಇರಲೇಬೇಕು. ಈಗ ಯಾರ ಆಧಾರವೂ ತನಗಿಲ್ಲ. ಇಂಥ ಅವಸ್ಥೆಯಲ್ಲೂ ತಾನು ಬದುಕಿದ್ದಾನೆ. ತಾನು ಬದುಕಿದ್ದಾನೆ—ಎನ್ನುವುದೇ ದೇವರಿದ್ದಾನೆ ಎಂಬುದಕ್ಕೆ ಸಾಕ್ಷಿ. ಕಾಮ್ರೇಡ್ ರಾಯನ ಸರ್ಟಿಫಿಕೇಟಿನ ಮೇಲೆ ದೇವರು ನಿಲ್ಲಬೇಕಾಗಿ-

ದೆಯೇ?—ಖಂಡಿತವಾಗಿಯೂ ಇಲ್ಲ. ರಾಯನಿಗೂ ಸಂಕಟ ಬರ. ಬೇಕಾಗಿತ್ತು. ಆಗ ದೇವರ ಅಸ್ತಿತ್ವ ಅವನಿಗೂ ಅನಿವಾರ್ಯವೆನಿಸ-ಬಹುದಿತ್ತು. ಮೂರು ದಿನದ ಜಾಗರಣೆಯನ್ನು ಅನುಭವಿಸಿದ ರಂಗಣ್ಣನಿಗೆ ಈ ವಾದಗ್ರಸ್ತ ವಿಷಯ—ವಿಚಾರಾಹವನವಾಗಿ ಉಳಿಯ ಲಿಲ್ಲ. ದೇವರಿದ್ದಾನೆಯೇ?

ಇನ್ನೂ ನಿಶ್ಚಿತ ಉತ್ತರವನ್ನು ಮುಟ್ಟುವುದರೊಳಗೇ—ಹೆಂಡತಿ ನರಳಿದಳು. ನರಳುವಿಕೆ ಹೊಸದಲ್ಲ—ಆದರೆ ಧ್ವನಿಯಲ್ಲಿ—ವಿಲಕ್ಷಣ ತೋರಿಬಿತ್ತು. ಗಾಬರಿಯಾಗಿ ರಂಗಣ್ಣ ಹೆಂಡತಿಯ ಹತ್ತಿರ ಬಂದು ಕುಳಿತು ಹಣೆಯನ್ನು ಮುಟ್ಟಿದ. ದೇಹ ತೀರ ಕ್ಷೀಣವಾಗಿತ್ತು—ಜ್ವರ ಜೋರಾಗಿತ್ತು. ರಂಗಣ್ಣನ ಬಾಯಿಂದ ಅವನಿಗೆ ತಿಳಿಯದಂತೇ ಶಬ್ದಗಳು ಹೊರಬಿದ್ದುವು:

"ದೇವರೇ, ನನ್ನನ್ನು ಉಳಿಸು!"

'ನನ್ನ ಹೆಂಡತಿಯನ್ನು ಉಳಿಸು' ಎನ್ನಲಿಲ್ಲ.

'ಉಳಿಸು' ಶಬ್ದ ರಂಗಣ್ಣನ ಕೋಶದಲ್ಲಿ ತೀರ ಭಿನ್ನವಾಗಿತ್ತು.

"ಬರತೀವಿ—" ಎಂದು ಕೇಳಿ "ಹೊರಟಿಂತೆ" ಇಷ್ಟು ಆ ಶಬ್ದ.

'ಉಳಿಸು' ಈ ವಾಕ್ಯನೆಯ ಹಿಂದೆ—ತನ್ನ ಅಂತರಾಳದಲ್ಲಿ. 'ಈ ಅಸಹನೀಯ ಸಂಕಟದೊಳಗಿಂದ ಉಳಿಸು' ಎನ್ನುವ ಮನೋ-ಭಾವನೆ ಆ ವಾಕ್ಯಾರ್ಥನೆಯಲ್ಲಿ ಅಡಗಿಕೊಂಡಿತ್ತು.

ಹೆಂಡತಿಯ ನರಳುವಿಕೆ ನಿಲ್ಲತೊಡಗಿತ್ತು. ನರಳುವಿಕೆ ನಿಂತು ನಿದ್ರೆ ಅವಳನ್ನಾವರಿಸಿತು. ಗೊರಕೆಯ ಶಬ್ದ ಕೇಳಿ ರಂಗಣ್ಣನಿಗೆ ಸ್ವಲ್ಪ ಸಮಾಧಾನವಾಯಿತು. ತನ್ನ ಹೆಂಡತಿ ಮೂರು ದಿನಗಳಿಂದ ನಿದ್ರಿಸಿಲ್ಲ—ಈ ಗೊರಕೆ ಅವನಿಗೆ ಕೊಂಚ ಸಮಾಧಾನ ತಂದಿರಿಸಿತು. ತಾನು ಕುಳಿತಲ್ಲಿಯೇ ನಿದ್ರಿಸಬೇಕೆಂದು ಮಾಡಿದ.

ಮಗಳ ಅಳುವಿಕೆ ಅವನನ್ನು ಹಾಗೆ ಮಾಡಿಸಗೊಡಲಿಲ್ಲ. ಕುಳಿತಲ್ಲಿಂದ ತಟ್ಟನೇ ಎದ್ದು ಮಗಳ ಹತ್ತಿರ ಬಂದುನಿಂತ ಹಸಿವೆಯಿಂದ ಹುಗು ಅಳುತ್ತಿತ್ತು. ಹಾಲನ್ನು ತಯಾರಿಸುವುದಕ್ಕಾಗಿ ಡುಮೆಕ್ಸ್ ಡಬ್ಬವನ್ನು ತೆರೆದ

ಡಬ್ಬ ಆಗಲೇ ಖಾಲಿಯಾಗಿತ್ತು

ನಿಂತಲ್ಲಿಯೇ ನಿಶ್ಚಲನಾಗಿ ನಿಂತು ಬಿಟ್ಟ ರಂಗಣ್ಣ. ಕಣ್ಣಿಗೆ ಕತ್ತಲೆ ಅವರಿಸಿಕೊಡಗಿತು.

ರಂಗಣ್ಣನ ಹೃದಯದಲ್ಲಿ ಕಲಮಲವಾಗತೊಡಗಿತು. ಮಗಳಿಗೆ ಆಹಾರ ತರಲು ಅಸಮರ್ಥನಾದ ತಾನು ಜೀವಿಸಬೇಕೆ?

ತನ್ನ ಗತಜೀವನದ ಸಿಂಹಾವಲೋಕನ ನಡಿಸಿದ:

ತಾನು—ತನ್ನದು ಎಂದು ಹೇಳಿಕೊಳ್ಳಲು ಒಂದು ಇಂಚು ನೆಲವಿಲ್ಲ. ಕಾರಕೂನಿಕೆಯೇ ಜೀವನವೃತ್ತಿ. ತಂಗಿಯು ಲಗ್ನ. ತಾಯಿತು—ಈಗ ಹೆಂಡತಿಯು ಜ್ವರ—ಮಗಳಿಗೆ ಹಾಲಿನ ಡಬ್ಬ—ಸಾಲ—ಉದ್ಯೋಗ-ಸಂಕಟ ನೋವು. ಕಿಸೆಯಲ್ಲಿ ಒಂದು ಕಾಸೂ ಇಲ್ಲ.

'ದೇವರಿದ್ದಾನೆಯೇ?'

ಮತ್ತೆ ಅವನಿಗೆ ಪ್ರಶ್ನೆ:

ಹೆಂಡತಿ ನರಳುತ್ತಿದ್ದಾಳೆ; ಮಗಳು ಅಳುತ್ತಿದ್ದಾಳೆ.

ಹಾಲಿನ ಡಬ್ಬಾ ಖಾಲಿ—ಕಿಸೆಯಲ್ಲಿ ಪುಡಿಕಾಸೂ ಇಲ್ಲ.

'ದೇವರಿದ್ದಾನೆಯೇ?'

ಬಾಗಿಲು ಬಡಿದ ಶಬ್ದವಾಯಿತು. ನಿರ್ವಿಕಾಲಧಾನದೊಂದಿಗೆ ರಂಗಣ್ಣ ಬಾಗಿಲಿನತ್ತ ಬಂದ. ಬಾಗಿಲನ್ನು ತೆರೆದ. ಬಾಗಿಲಲ್ಲಿ ನಿಂತವಳು—ಅಡಿಗೆಯವಳು. ರಂಗಣ್ಣನ ಹೆಂಡತಿ ಪ್ರಸೂತಳಾದಾಗ ಅವನ ಮನೆಯಲ್ಲಿಯ ಅಡುಗೆಗಾಗಿ ಬಂದು ನಿಂತವಳು. ರಂಗಣ್ಣನೇ ಕೇಳಿದ.

"ಏನು ಬೇಕು?"

"ಸಿಟ್ಟಾಗಬೇಡ್ರಿ"

"ಅಹ್ಯೂ ಶಕ್ತಿ ನನ್ನಲ್ಲಿಲ್ಲ"

"ನಿನ್ನೆ ಸ್ವಲ್ಪ ಬಿದ್ದಿತ್ತು."

"ನೀವೇ ಸುಖ-ನಿದ್ರೆಗೆ ವೇಳೆಯಾದರೂ ಸಿಗುತ್ತದೆ"

"ನನ್ನ ಮಗಳಿಗೆ ಸೀಕಾಗೇದ-ಜ್ವರ ನಿಲ್ಲವೊಲ್ಲವು. ಸ್ವಲ್ಪ-ದೊಳಗ ದೇವರು ಬಂದು ಹೇಳಿದ್ದಾಂಗ ಆತು"

"ದೇವರು—ಏನು ಹೇಳಿದ್ದಾಂಗ ಆತು?"

"ಕಳವು ಮಾಡಿದ ಆ ಐವತ್ತು ರೂಪಾಯಿ ಅವರದು ಮುಟ್ಟಿಸಿ ಬಾ—ಅಂದರ ನಿನ್ನ ಮಗಳ ಜ್ವರ ಅರಿತಾವ ಅಂತ"

"ಅಂದರ ಹಿಂದಕ—ನನ್ನ ಹೆಂಡತಿಯ ಪೆಟ್ಟಿಗೆಯಲ್ಲಿಯು ೫೦ ರೂಪಾಯಿ ಕಳವಾಗಿದ್ದುವು. ನೀವು ತೊಗೊಂಡಿದ್ದಿರೇನು?"

".....ಹೌ—ದು—ನನಗೊಬ್ಬಾಕೇನೇ ಮಗಳು. ನಾನು ವಿಧವೆ. ಅವಳನ್ನ ಬೆಲೋ ಮನೀಗೆ ಕೊಡಬೇಕು ಅಂತ ಹೇಳಿ ನನ್ನ ಪಾಲಿನವು ೧೦ ಕೂರಿಗೆ ಹೊಲಾ ಮೊನ್ನೆ ಮಾರಿದೆ. ಆದರೆ ಮಗಳಿಗೆ ಭಾಳ ಜ್ವರ—ಇಳಿಯಲೊಲ್ಲವು. ನಿನ್ನೆ ಸ್ವಲ್ಪ ದಾಗ—ಹಿಂಗ ಹೇಳಿದ ಕೂಡಲೇ—ತರಲಿ ಬಿಡ್ರಿ. ಇವು ನಿಮ್ಮುವು ರೂಪಾಯಿ ತೊಗೊಳ್ರಿ—ನಿಮ್ಮ ಕಾಲಬೀಳತೇನಿ.... ಇದನ್ನ ಯಾರುಮುಂದೂ ಹೇಳಬೇಡ್ರಿ ದೇವರಾಣಿ"

ರಂಗಣ್ಣನ ಕೈಯಲ್ಲಿ ಹತ್ತು ರೂಪಾಯಿಗಳ ಐದು ನೋಟು-ಗಳನ್ನಿಟ್ಟು ಅಡಿಗೆಯವಳು ಬಾಗಿಲ ಹೊರಗೆ ನುಸುಳಿ ಮಾಯವಾದಳು.

ರಂಗಣ್ಣ ನಿಂತಲ್ಲಿಯೇ ನಿಂತು ಉತ್ತರಿಸಿದ.

"ದೇವರಾಣೆ ಅಂದ್ರು ಹೇಳೂದಿಲ್ಲ!"

ದೇವರಾಣೆ—ಅವನ ಹೆಸರಿನಿಂದ ಆಣೆ ಮಾಡುವದೆಂದ್ರೆ ಅವನ ಅಸ್ತಿತ್ವ ಒಪ್ಪಿಕೊಂಡಂತಾಗಿತ್ತು ರಂಗಣ್ಣ.

ಮಗು ಅಳುತ್ತಿತ್ತು ಹಾಲಿನ ಡಬ್ಬಿಗಾಗಿ—ರಂಗಣ್ಣನ ಕಾಸಿಲ್ಲದ ಕಿಸೆ ತುಂಬಿತ್ತು.

ರಂಗಣ್ಣ ಪ್ರೇಮದಿಂದ ಕೂಸನ್ನೆತ್ತಿಕೊಂಡ. ಆ ಕೂಸಿನ ಸ್ಪರ್ಶ ದಿಂದ ರಂಗಣ್ಣನಿಗೆ ದೇವರ ಅಸ್ತಿತ್ವದ ಅರಿವಾಗತೊಡಗಿತ್ತು.

"ದೇವರಿದ್ದಾನೆ" ರಂಗಣ್ಣ ಹೇಳಿಕೊಂಡ.

"ಹುಂ ಹುಂ" ಬಗಲಲ್ಲಿದ್ದ ಕೂಸು ಹೂಂಗುಟ್ಟುತ್ತಿತ್ತು.

ಕನ್ನಡದಲ್ಲಿ ಸಣ್ಣಕತೆಗಳು

ಪ್ರೊ. ಸಿ. ಎಸ್. ಕುಲಕರ್ಣಿ ಎಮ್. ಎ. ಬಿ. ಟಿ. ಜನತಾಕಾಲೇಜ, ಧಾರವಾಡ

ಕನ್ನಡದ ಸಣ್ಣಕತೆಗಾರ, ವಸ್ತುನಿಷ್ಠನಾಗಿರುವಂತೆ ಆದರ್ಶವಾದಿಯೂ ಆಗಿರುವನು. ಈ ಆದರ್ಶವು ಕತೆಗಾರನ ಜೀವನದರ್ಶನವನ್ನು ಅವಲಂಬಿಸಿರುವುದರಿಂದ, ಅದು ಬೇರೆ ಬೇರೆ ರೂಪ ತಾಳಿರಬಹುದು. ಆದರೆ ಅದು ಕತೆಗಾರನ ಆದರ್ಶವೆಂಬುದನ್ನು ಮರೆಯುವಂತಿಲ್ಲ.

ಲೇಖಾಂಕ ೧

ಕನ್ನಡದಲ್ಲಿ ಬಂದ ಸಣ್ಣ ಕತೆಗಳನ್ನು ಸವಿಾಲೋಚಿಸುವ ಈ ಲೇಖನಗಳನ್ನು ಬರೆಯಲು ಹಲವು ಕಾರಣಗಳಿವೆ.

ಮೊದಲನೆಯದೆಂದರೆ ಇದೇ ವರುಷ ಜನೆವರಿ ತಿಂಗಳಲ್ಲಿ ಧಾರವಾಡದಲ್ಲಿ ನಡೆದ ಕನ್ನಡ ಸಣ್ಣ ಕತೆಗಾರರ ಹಾಗೂ ಲಲಿತ ಪ್ರಬಂಧಕಾರರ ಸಮ್ಮೇಳನದಲ್ಲಿ 'ಸಣ್ಣಕತೆಗಳ ಬಗ್ಗೆ ಒಂದು ವಿಚಾರ ಸಂಕೀರ್ಣವು ನಡೆಯಿತು. ಅದಕ್ಕೆ ಬೆಂಗಳೂರಿನ ಶ್ರೀ. ಕೆ. ಗೋಪಾಲಕೃಷ್ಣರಾಯರು ಅಧ್ಯಕ್ಷರಾಗಿದ್ದರು. ಆಗ ನಾನು 'ಆಧುನಿಕ ಕನ್ನಡ ಸಣ್ಣಕತೆಗಳಲ್ಲಿ ತಥ್ಯಾಂಶವಿದೆಯೇ?' ಎಂಬ ವಿಷಯವಾಗಿ ವಿವೇಚನಾಡಿದೆ. ಅವೇಳೆ ಅದರ ಸಾರವನ್ನು ಬರೆದು ಕೊಡಲು ಗೆಳೆಯರಾದ ಶ್ರೀ. ವರದರಾಜ ಹುಯಿಲಗೋಳರು ಕೇಳಿಕೊಂಡರು. ನನ್ನ ಭಾಷಣದ ಸಾರವನ್ನು ಬರೆಯುತ್ತಿರುವಾಗ ಆಧುನಿಕ ಕನ್ನಡ ಕತೆಗಳಷ್ಟನ್ನೇ ವಿಚಾರಕ್ಕೆ ತೆಗೆದುಕೊಳ್ಳದೇ, ಇಡಿ ಸಣ್ಣಕತೆಯ ವಿಭಾಗವನ್ನೇ ಏಕೆ ವಿಮರ್ಶಿಸಬಾರದು?—ಎಂಬ ವಿಚಾರ ಹೊಳೆಯಿತು. ಕೂಡಲೇ ಅದಕ್ಕೆ ಕೈ ಹಾಕಿದೆ.

ಈ ಲೇಖನಗಳನ್ನು ಬರೆಯಲು ಕಾರಣವಾದ ಎರಡನೆಯ ಸಂಗತಿಯೆಂದರೆ; ಬೆಂಗಳೂರಿನ ಒಂದು ವಾರಪತ್ರಿಕೆಯಲ್ಲಿ ನನ್ನ ಭಾಷಣ ತಥ್ಯಾಂಶವಿಲ್ಲದ್ದು ಎಂಬ ಒಂದು ಟೀಕೆಯೂ ಕಾಣಿಸಿಕೊಂಡಿತು. ನನ್ನ ಭಾಷಣ ಬರೀ ರೂಪರೇಷೆಯುಳ್ಳದ್ದಾಗಿದ್ದುದರಿಂದ, ಆ ಲೇಖನ ಬರೆದ ಮಹನೀಯರಿಗೆ ಬಹುಶಃ ಅದು ಆರ್ಥವಾಗಿರಲಿಕ್ಕಿಲ್ಲ. ಅಥವಾ ತಥ್ಯಾಂಶವೆಂಬ ಶಬ್ದ ಅವರಿಗೆ ಬೇರೆ ಅರ್ಥವನ್ನು ಕೊಡುತ್ತಿರಬಹುದು. ಅದೇನೇ ಇರಲಿ, ಆ ಟೀಕೆಗೆ ಉತ್ತರವಾಗಿ ಒಂದು ಅಭ್ಯಾಸಪೂರ್ಣವಾದ ಲೇಖನವನ್ನು ಬರೆಯುವುದು ನನಗೆ ಅವಶ್ಯವೆನಿಸಿತು.

ಮೂರನೆಯದಾಗಿ ನನ್ನ ಭಾಷಣವನ್ನು ಮೆಚ್ಚಿಕೊಂಡ ಹಲವು ಗೆಳೆಯರು ಅದನ್ನು ವಿಸ್ತರಿಸಿ ಬರೆಯಬೇಕೆಂದು ಒತ್ತಾಯಪಡಿಸತೊಡಗಿದ್ದರು. ಅವರ ಒತ್ತಾಯ ಸಂಯೆನಿಸಿ ಸಣ್ಣಕತೆಗಳ ಬಗ್ಗೆ ಬರೆಯಬೇಕೆಂದು ನಿಶ್ಚಯಿಸಿದೆ.

ಈ ಲೇಖಗಳನ್ನು ಬರೆಯಲು ಕಾರಣವಾದ ಇನ್ನೊಂದು ಮಹತ್ತ್ವದ ಸಂಗತಿಯೆಂದರೆ, ಇಲ್ಲಿಯವರೆಗೆ ಪ್ರಕಟವಾದ ಕನ್ನಡ ಕತೆಗಳ ಅವಲೋಕನಗಳಲ್ಲಿ, ಮೈಸೂರು ಕಡೆಯ ಕತೆಗಾರರ ಕತೆಗಳ ವಿಮರ್ಶೆಗೆ ಹೆಚ್ಚು ಪ್ರಾಶಸ್ತ್ಯ ದೊರೆತು ಉತ್ತರ ಕರ್ನಾಟಕದ ಹಾಗೂ ಇನ್ನುಳಿದ ಕರ್ನಾಟಕದ ಭಾಗಗಳ ಕತೆಗಾರರ ಕತೆಗಳು ಬಹಳ ಸಂಕ್ಷಿಪ್ತವಾಗಿ ಸಮಾಲೋಚಿಸಲ್ಪಟ್ಟಿವೆ. ಇದನ್ನು ಹೋಗಲಾಡಿಸಿ ಕರ್ನಾಟಕದ ಎಲ್ಲ ಭಾಗಗಳ ಕತೆಗಾರರ ಕತೆಗಳನ್ನು ನಿಷ್ಪಕ್ಷಪಾತವಾಗಿ ವಿಮರ್ಶಿಸುವುದು ಅವಶ್ಯವೆನಿಸಿತು.

ಈ ಸಮಾಲೋಚನೆಯನ್ನು ಆಧುನಿಕ ಅಂದರೆ ಇತ್ತೀಚಿನ ಸಣ್ಣಕತೆಗಳಿಗಷ್ಟೇ ಪರಿಮಿತಗೊಳಿಸದಿರಲು ಕಾರಣವೆಂದರೆ, ಕನ್ನಡದಲ್ಲಿ ಸಣ್ಣಕತೆ ಪ್ರಾರಂಭವಾದದ್ದೇ ಇತ್ತೀಚೆಗೆ ಎಂದು ಹೇಳಬಹುದು. ಹಾಗೆ ವಿಚಾರಿಸಿದರೆ ಕನ್ನಡದ ಸಣ್ಣ ಕತೆಗಳೆಲ್ಲ ಆಧುನಿಕವೇ. ಯಾಕೆಂದರೆ ಕನ್ನಡದಲ್ಲಿ ಸಣ್ಣಕತೆ ಪ್ರಾರಂಭವಾಗಿ ಅರ್ಧಶತಮಾನ ಕೂಡ ಕಳೆದಿಲ್ಲ.

ಕೊನೆಯದಾದರೂ ಇನ್ನೊಂದು ಮಹತ್ತ್ವವಾದ ಅಂಶವೆಂದರೆ ಒಂದು ಸಾಹಿತ್ಯದಲ್ಲಿ ಅಥವಾ ಸಾಹಿತ್ಯಪ್ರಕಾರದಲ್ಲಿ ತಥ್ಯಾಂಶವಿದೆಯೆ? ಎಂದು ವಿಚಾರಿಸುವವರು, ಅವರ ಯಾವುದೋ ಒಂದು ಅಂಶವನ್ನೂ ಗುಣವನ್ನೂ ವಿಚಾರಕ್ಕೆ ಒಳಪಡಿಸಿಸಿ, ಅದನ್ನು ಇಡಿಯಾಗಿಯೆ ನೋಡುವುದು ತೀರ ಅವಶ್ಯ. ಹಾಗೆ ಇಲ್ಲಿಯೂ ಮಾಡಲಾಗಿದೆ.

ಹೀಗೆ ಹಲವಾರು ಕಾರಣಗಳಿಂದಾಗಿ ಈ ಲೇಖನಗಳನ್ನು ಪ್ರಾರಂಭಿಸಿದ್ದೇನೆ.

ಸಣ್ಣಕತೆಯೆಂಬ ಸಾಹಿತ್ಯರೂಪ ಹುಟ್ಟಿ ಬೆಳೆದದ್ದು ಆಧುನಿಕವಾದರೂ, ಕಥಾಸಾಹಿತ್ಯವು ಬಹಳ ಪ್ರಾಚೀನವಾದದ್ದು. ಸಣ್ಣಕತೆ ನಮ್ಮ ಸಾಹಿತ್ಯಕ್ಕೆ ಪಡುವಣದಿಂದ ಬಂದಕೊಡುಗೆ ಎನಿಸಿದರೂ

ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಸಣ್ಣಕತೆಗಳಿಗೆ ಕೊರತೆಯಿಲ್ಲ ಎಂಬ ಅಂಶವನ್ನು ನಾವು ಮರೆಯಬಾರದು.

ಆಧುನಿಕ ರೂಪವನ್ನು ತಾಳಿದ ಸಣ್ಣಕತೆ ಜನಿಸಲು ಆಧುನಿಕ ಕಾಲದ ಪರಿಸ್ಥಿತಿಯೇ ಕಾರಣವೆಂದು ಹೇಳಬಹುದು. ಯಂತ್ರ ಯುಗವು ಪ್ರಾರಂಭವಾದಾಗಿನಿಂದ ಮಾನವನಿಗೆ ವಿಶ್ರಾಂತಿಯು ಹೆಚ್ಚು ದೊರೆಯುವಂತೆ ಅವಸರವೂ ಹೆಚ್ಚಾಗಿದೆ. ಅವನ ಜೀವನವು ಅವನ ಅವಸರದಿಂದ ಯಾಂತ್ರಿಕವಾಗತೊಡಗಿದೆ. ಈ ಯಾಂತ್ರಿಕ ಜೀವನದಲ್ಲೂ ಸ್ವಲ್ಪದರಲ್ಲಿ ಸ್ವಾರಸ್ಯವನ್ನು ತಂದುಕೊಟ್ಟು ಅವನ ಮನೋರಂಜನೆ ಮಾಡುವ ಸಾಹಿತ್ಯ ಪ್ರಕಾರಗಳಲ್ಲಿ ಸಣ್ಣಕತೆಯೂ ಒಂದಾಗಿದೆ. ಅದುದರಿಂದ ಸಣ್ಣಕತೆ ಇಂದು ಜನಪ್ರಿಯವಾದ ಅನಿವಾರ್ಯವಾದ ಸಾಹಿತ್ಯಪ್ರಕಾರವೆನಿಸಿದೆ.

ಶ್ರೀ. ಪಂಜೆ ಮಂಗೇಶರಾಯರು, ಶ್ರೀ. ಕೆರೂರ ವಾಸುದೇವಾಚಾರ್ಯರು, ಶ್ರೀ. ಎಮ್. ಎನ್. ಕಾಮತರು ಹಾಗೂ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರರು ಇವರಿಂದ ಪ್ರಾರಂಭಿಸಲ್ಪಟ್ಟ ಕನ್ನಡ ಸಣ್ಣಕತೆಯ ಬೆಳೆ ಇಂದು ಹುಲುಸಾಗಿ ಬೆಳೆದಿದೆ. ಇನ್ನೂ ಬೆಳೆಯುತ್ತಲಿದೆ. ಇಂದಿನ ಯಾವ ವಾರಪತ್ರಿಕೆ ಮಾಸಪತ್ರಿಕೆಯನ್ನು ತೆರೆದು ನೋಡಿದರೂ ಸಣ್ಣಕತೆ ತಪ್ಪದೆ ನಮ್ಮ ಕಣ್ಣಿಗೆ ಬೀಳುತ್ತದೆ. ಅಲ್ಲದೆ ಹಲವು ಮಾಸಪತ್ರಿಕೆಗಳು ಸಣ್ಣಕತೆಗಾಗಿಯೇ ವೀಸಲಾಗಿವೆ. ಇಂದು ಕನ್ನಡಸಾಹಿತ್ಯದಲ್ಲಿ ಕಾಲಿಡಬಯಸುವ ಪ್ರತಿಯೊಬ್ಬನೂ ಸಾಮಾನ್ಯವಾಗಿ ಸಣ್ಣಕತೆಯಿಂದಲೇ ಸಾಹಿತ್ಯಕೃಷಿಯಲ್ಲಿ ಪ್ರವೇಶ ಮಾಡುತ್ತಿದ್ದಾನೆಂದು ಹೇಳಿದರೆ ಅತಿಶಯೋಕ್ತಿಯೆನಿಸಲಿಕ್ಕಿಲ್ಲ ಈ ರೀತಿ ಹುಲುಸಾಗಿ ಬೆಳೆದ ಈ ಬೆಳೆಯಲ್ಲಿ ಜೊಳ್ಳುಕಾಳುಗಳೆಷ್ಟು? ಗಟ್ಟಿಕಾಳುಗಳೆಷ್ಟು?—ಎಂಬ ಪ್ರಶ್ನೆಯನ್ನು ಕೇಳುವ ಕಾಲವು ಈ ಕಾರಣ ಗಳಿಂದಾಗಿ ಈಗ ಒದಗಿಬಂದಿದೆ.

ಮೊದಲನೆಯದಾಗಿ ತೀರ ಎಳೆಯರು ಹೊಸಬರು ಸಣ್ಣಕತೆಗಳ ರಚನೆಯಲ್ಲಿ ಕೈಹಾಕತೊಡಗಿದ್ದಾರೆ. ಶ್ರೀ. ತ. ಸು. ಶಾಮರಾಯರು ಹೇಳಿದಂತೆ ಈ ಎಳೆಯರಿಗೆ ಹೊಸಬರಿಗೆ ಸಣ್ಣಕತೆಯ ವಾಮನಾವತಾರದಲ್ಲಿ ಅಡಗಿದ ತ್ರಿವಿಕ್ರಮ ಶಕ್ತಿ ಪರಿಯಾಗಿ ಅರ್ಥವಾಗಿಲ್ಲ. ಆದುದರಿಂದ ಸಣ್ಣಕತೆ ತನ್ನ ಸತ್ತ್ವವನ್ನು ಕಳೆದುಕೊಳ್ಳತೊಡಗಿದೆ.

ಎರಡನೆಯದೆಂದರೆ ಇತ್ತೀಚಿಗೆ ಕೇಳುಪ್ರಣಯದ ಉತ್ತಾನ ಶೃಂಗಾರದ ಕತೆಗಳ ಸಂಖ್ಯೆ ಬೆಳೆಯತೊಡಗಿದೆ. ಎಷ್ಟೋ ಸಲ ಸಣ್ಣಕತೆ ಬರೀ ಕಾಮಪ್ರಚೋದನೆಗೆ ಕಾರಣವಾಗತೊಡಗಿದೆ.

ಮೂರನೆಯದಾಗಿ ಸಣ್ಣಕತೆ ಕಡಿಮೆ ಪರಿಶ್ರಮದಲ್ಲಿ ತೀವ್ರ ಪ್ರಸಿದ್ಧಿಯನ್ನು ತಂದುಕೊಡುವ ಸಾಧನವೆನಿಸಲಾರಂಭಿಸಿದೆ. ಇದರಿಂದ ಕತೆಗಾರರ ಹಾಗೂ ಕತೆಗಳ ಸಂಖ್ಯೆ ಬೆಳೆದರೂ ಗುಣ ಬೆಳೆಯದಿದೆ.

ಈ ಪರಿಸ್ಥಿತಿಯಲ್ಲಿ ಸಣ್ಣಕತೆಗಳಲ್ಲಿ ಅದರಲ್ಲಿಯೂ ಇತ್ತೀಚಿನ ಸಣ್ಣಕತೆಗಳಲ್ಲಿ ತಥ್ಯಾಂಶವಿದೆಯೇ?—ಎಂದು ಪ್ರಶ್ನೆ ಕೇಳಿಸ್ದೆ ತೀರ ಸ್ವಾಭಾವಿಕ. ಆವಶ್ಯಕ.

ಆದರೆ ಇಷ್ಟರಿಂದಲೇ ಕನ್ನಡ ಸಣ್ಣಕತೆಗಳಲ್ಲಿ ಅವು ಆಧುನಿಕವನ್ನೇ ಇರಲಿ ಮೊದಲಿನವೇ ಇರಲಿ, ತಥ್ಯಾಂಶವಿಲ್ಲವೆಂದು ಹೇಳುವುದು ಖಂಡಿತವಾಗಿಯೂ ಸರಿಯಾಗಲಾರದು. ಒಟ್ಟಿನಲ್ಲಿ ನಮ್ಮ ಸಣ್ಣಕತೆಗಳನ್ನೆಲ್ಲ—ಅವು ಆಗಿನವೇ ಇರಲಿ ಈಗಿನವೇ ಇರಲಿ—ವಿಮರ್ಶಿಸಿ ನೋಡಿದಾಗ, ಕನ್ನಡಿಗರು ಮುಖ ಕೆಳಗೆ ಹಾಕುವ ಪ್ರಸಂಗವೇನೂ ಇಲ್ಲವೆಂದು ಧೈರ್ಯವಾಗಿ ಹೇಳಬಹುದು ಇಷ್ಟೇ ಅಲ್ಲ ಕನ್ನಡದ ಸಣ್ಣಕತೆಗಳನ್ನು ಉಳಿದ ಭಾಷೆಯ ಸಣ್ಣಕತೆಗಳ ಕೂಡ ತೂಗಿ ನೋಡಿದಾಗ ಅವು ಯಾವ ದೃಷ್ಟಿಯಿಂದಲೂ ಕಡಿಮೆ ಯೋಗ್ಯತೆಯುವಾಗಿಲ್ಲವೆಂದು ಸ್ಪಷ್ಟವಾಗಿ ಕಂಡುಬರುವುದು.

ಕಳೆದ ೪೦-೪೫ ವರುಷಗಳಿಂದಲೂ ಬೆಳೆದುಬಂದು ದಿನದಿನಕ್ಕೆ ಜನಪ್ರಿಯವಾಗುತ್ತ ನಡೆದ ಕನ್ನಡ ಸಣ್ಣಕತೆಗಳಲ್ಲಿ ಅವು ಆಧುನಿಕವೇ ಇದ್ದರೂ ತಥ್ಯಾಂಶವಿಲ್ಲವೆಂದು ಹೇಳುವುದು ಸಾಹಸದ ಮಾತು. ಕನ್ನಡ ಸಣ್ಣಕತೆ ಇಲ್ಲಿಯವರೆಗೂ ಜನಪ್ರಿಯವಾಗಿ ಬದುಕಿ ಬಾಳಿದ್ದೇ ಅದರಲ್ಲಿ ತಥ್ಯವಿದೆ—ಸತ್ವವಿದೆ—ಎಂಬ ಮಾತನ್ನು ಸಿದ್ಧಮಾಡಿ ತೋರಿಸುತ್ತದೆ. ಕಾದಂಬರಿಗಳು ಜನಪ್ರಿಯವಾದ ಈ ಕಾಲದಲ್ಲಿಯೂ ಕೂಡ ಸಣ್ಣಕತೆ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳದಿರುವುದು ಅದರಲ್ಲಿರುವ ಸತ್ತ್ವದ ಕಾರುಹಾಗಿಲ್ಲವೇ?

ಆದರೆ ಜನಪ್ರಿಯವಾದದ್ದೆಲ್ಲ ತಥ್ಯವುಳ್ಳದ್ದೇ?—ಎಂಬ ಶಂಕೆಯನ್ನು ಇಲ್ಲಿ ಎತ್ತಬಹುದು. ಇದಕ್ಕೆ ಸಮಾಧಾನವೆಂದರೆ ಜನಪ್ರಿಯವಾದದ್ದೆಲ್ಲವೂ ತಥ್ಯವುಳ್ಳದ್ದಿರುವುದಿಲ್ಲವೆಂದು ಹೇಳುವಂತೆ ಜನಪ್ರಿಯವಾದದ್ದೆಲ್ಲ ಬರೀ ಜೊಳ್ಳು ಎಂದೂ ಹೇಳಲು ಬರುವುದಿಲ್ಲ.

ಹಾಗಾದರೆ ಕನ್ನಡ ಸಣ್ಣಕತೆಗಳಿಗೆ ಸತ್ತ್ವವನ್ನು ತಂದುಕೊಟ್ಟ ಅಂಶಗಳು ಯಾವುವು?

ಮೊದಲನೆಯದಾಗಿ ಕನ್ನಡದ ಸಣ್ಣಕತೆ ಸಣ್ಣದಾದರೂ ಕತೆಯಾಗಿದೆ. ಕತೆ ಯಾವಾಗಲೂ ಮನೋರಂಜನೆಯನ್ನೇ ಗುರಿಯನ್ನಾಗಿಟ್ಟುಕೊಂಡಿರುವಂತದು. ಕನ್ನಡದ ಸಣ್ಣಕತೆಯು ಮನೋರಂಜನೆಯನ್ನು ಬಿಟ್ಟಿಲ್ಲ.

ವಾಸ್ತವಿಕತೆ ಕನ್ನಡ ಸಣ್ಣಕತೆಗಳಲ್ಲಿ ಕಂಡುಬರುವ ಎರಡನೆಯ ಸತ್ತ್ವಾಂಶವಾಗಿದೆ. ಆಧುನಿಕ ಕನ್ನಡ ಸಣ್ಣಕತೆಗಳು ಪ್ರಾಚೀನ

ಕಾಲದ ಕತೆಗಳಂತೆ ಬರೀ ಅಡುಗೂಲಜ್ಜಿಯ ಅದ್ಭುತರಮ್ಯ ಕತೆಗಳಾಗಿಲ್ಲ. ಯಾವುದೋ ಒಂದು ಕಲ್ಪನಾಲೋಕದಲ್ಲಿಯ ಏನೋ ಒಂದು ವಿಷಯವನ್ನು ಎತ್ತಿಕೊಂಡು ಬರೆದಂಥವಾಗಿಲ್ಲ. ನಮ್ಮ ನಿತ್ಯ ಜೀವನದಲ್ಲಿಯ ಸಜೀವಸಂಗತಿಗಳನ್ನು ಆಧಾರವಾಗಿಟ್ಟುಕೊಂಡು ಕತೆಯ ಎರಕದಲ್ಲಿ ಹೊಯ್ದ ಕೃತಿಗಳು ಆವಾಗಿವೆ. ಕತೆಗಳು ವಾಸ್ತವಿಕವಾಗಿದ್ದಾಗ ಅವು ನೇರವಾಗಿ ಓದುಗನ ಎದೆಯನ್ನು ಪ್ರವೇಶಿಸುವುದರಿಂದ, ಓದುಗನಲ್ಲಿ ಒಂದು ಆತ್ಮೀಯತೆಯನ್ನು ಹುಟ್ಟಿಸುವುದರಿಂದ, ವಾಸ್ತವಿಕತೆಯು ಕತೆಗೆ ಒಂದು ಸತ್ತ್ವವನ್ನು ತಂದುಕೊಡುತ್ತದೆ.

ವಸ್ತು ಹಾಗೂ ನಿರೂಪಣೆಯಲ್ಲಿ ವೈವಿಧ್ಯವು ಇರುವುದೂ ಒಂದು ತಥ್ಯಾಂಶವಾಗಿದೆ. ಎಲ್ಲ ಕತೆಗಳೂ ಒಂದೇ ರೀತಿಯಲ್ಲಿ ಒಂದೇ ಶೈಲಿಯಲ್ಲಿ ಒಂದೇ ಪಡಿಯಚ್ಚಿನಲ್ಲಿ ಬಂದರೆ, ಒಂದೇ ವಸ್ತುವನ್ನು ಆಯ್ದುಕೊಂಡಿದ್ದರೆ, ಓದುಗನಲ್ಲಿ ಬೇಸರವನ್ನುಂಟುಮಾಡಿ ತಮ್ಮ ಉದ್ದೇಶವನ್ನೇ ಅವು ವಿಫಲಗೊಳಿಸುತ್ತವೆ. ಅದಕ್ಕಾಗಿ ವಸ್ತು ಹಾಗೂ ನಿರೂಪಣೆಯಲ್ಲಿ ವೈವಿಧ್ಯವಿರುವುದು ತೀರ ಅವಶ್ಯ. ಇಂಥ ವೈವಿಧ್ಯ ಇಂದಿನ ಕನ್ನಡ ಕತೆಗಳಲ್ಲಿ ಸಾಕಷ್ಟು ಕಂಡು ಬರುತ್ತಲಿದೆ.

ಕನ್ನಡ ಸಣ್ಣಕತೆಗಳಲ್ಲಿ ನಾವು ಗಮನಿಸಬೇಕಾದ ಇನ್ನೊಂದು ಮುಖ್ಯತ್ವದ ಅಂಶವೆಂದರೆ ಅವು ಜೀವಂತವಾಗಿರುವುದಲ್ಲದೆ ಜೀವನ. ವನ್ನು ಪ್ರತಿಬಿಂಬಿಸುತ್ತವೆ. ನಮ್ಮ ಜೀವನದಿಂದ ತೀರ ದೂರವಾಗಿರುವ ಸಾಹಿತ್ಯಕೃತಿ—ಅದು ಎಷ್ಟೇ ಒಳ್ಳೆಯದಿದ್ದರೂ—ಮನೋರಂಜಕವಾಗಿದ್ದರೂ – ಓದುಗನ ಹೃದಯವನ್ನು ಗೆದ್ದುಕೊಳ್ಳಲಾರದು. ಅವನ ಮನಸ್ಸಿನ ಮೇಲೆ ಸರಿಣಾಮಕಾರಿಯಾದ ಪ್ರಭಾವವನ್ನು ಬೀರಲಾರದು. ಮತ್ತು ಜೀವನದಿಂದ ದೂರವಾದ ವಿಮುಖವಾದ ಸಾಹಿತ್ಯಕೃತಿ ಹಾಗೂ ಅದರಲ್ಲಿಯ ಅಭಿರುಚಿ ಪಲಾಯನಸಾಹಿತ್ಯವೆನಿಸೀತೆ ಹೊರತು ಪ್ರಗತಿಪರವಾದ ಸಾಹಿತ್ಯವೆನಿಸಲಾರದು. ಆದುದರಿಂದ ಸಾಹಿತ್ಯದಲ್ಲಿರುವ ಜೀವನದ ಸಾಮೀಪ್ಯ, ಜೀವನದ ಪ್ರತಿಬಿಂಬಗಳು ಸಾಹಿತ್ಯ ಕೃತಿಯಲ್ಲಿ ಸತ್ತ್ವವನ್ನು ತಂದುಕೊಡುತ್ತವೆ.

ಈ ದೃಷ್ಟಿಯಿಂದ ನೋಡಿದಾಗ ನಮ್ಮ ಜೀವನದ ಯಾವ ಸನ್ನಿವೇಶಗಳೂ ಸಮಸ್ಯೆಗಳೂ ನಮ್ಮ ಸಣ್ಣ ಕತೆಗಾರನ ಕಣ್ಣು ತಪ್ಪಿಸಲು ಸಾಧ್ಯವಾಗಿಲ್ಲ. ಕನ್ನಡ ಸಣ್ಣಕತೆಗಾರನು ತನ್ನ ಸುತ್ತಲಿನ ಜೀವನವನ್ನು ಕಣ್ಣುತೆರೆದು ನೋಡಿದ್ದಾನೆ. ನೋಡುತ್ತಿದ್ದಾನೆ. ಮತ್ತು ನೋಡಿ ಸುಮ್ಮನೆ ಕುಳಿತಿಲ್ಲ. ತಾನು ಕಂಡುಂಡ, ಸುಖದುಃಖಗಳನ್ನು ಚಿತ್ರಿಸಿ, ತನಗೆ ಸಂಬಾರದ್ದನ್ನು ಖಂಡಿಸಿ ತನಗೆ ಸರಿಯೆನಿಸಿದ್ದನ್ನು ಹೊಗಳಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಗೊಳಿಸಿದ್ದಾನೆ. ಎಷ್ಟೋ ಸಮಸ್ಯೆಗಳಿಗೆ ತನಗೆ ತಿಳಿದ ರೀತಿಯಲ್ಲಿ



ಪರಿಹಾರವನ್ನೂ ಸೂಚಿಸಿದ್ದಾನೆ. ಮನೋರಂಜನೆಯ ಕೂಡ ಮನೋಜಾಗ್ರತಿಯನ್ನೂ ಮಾಡಿದ್ದಾನೆ. ಅವನು ಬರೀ ಮನೋರಂಜನೆಯನ್ನೇ ತನ್ನ ಗುರಿಯನ್ನಾಗಿ ಇಟ್ಟುಕೊಂಡಿಲ್ಲ. ಮನವನ್ನು ಸಮಿಸುವ ಜೊತೆಗೆ ಮೆದುಳನ್ನು ಅವನು ಅಲುಗಿಸುತ್ತಾನೆ. ಎದೆಯನ್ನು ಕಲಕುವಂತೆ ತಲೆಯನ್ನು ಕಾಯಿಸುತ್ತಾನೆ.

ಇಷ್ಟೆಲ್ಲ ಹೇಳಿದ್ದನ್ನು ನೋಡಿ, ಕನ್ನಡ ಸಣ್ಣಕತೆ ಬರೀ ವಸ್ತುನಿಷ್ಠವಾದದ್ದು, ಅಲ್ಲಿ ಆದರ್ಶವಾದದ್ದು ಏನೂ ಇಲ್ಲವೇ ಇಲ್ಲ—ಎಂದು ತಿಳಿಯಬಾರದು. ಕನ್ನಡ ಸಣ್ಣಕತೆಗಾರನು ವಸ್ತುನಿಷ್ಠನಾಗಿರುವಂತೆ ಆದರ್ಶವಾದಿಯೂ ಆಗಿದ್ದಾನೆ. ಈ ಆದರ್ಶವು ಕತೆಗಾರನ ಜೀವನಾದರ್ಶನವನ್ನು ಅವಲಂಬಿಸಿರುವುದರಿಂದ ಅದು ಬೇರೆ ಬೇರೆ ರೂಪವನ್ನು ತಾಳಿರಬಹುದು; ಆದರೆ ಅದು ಕತೆಗಾರನ ದೃಷ್ಟಿಯಿಂದ ಆದರ್ಶವೆಂಬ ಮಾತನ್ನು ನಾವು ಮರೆಯಲಾಗದು.

ಆದರೆ ಇದೆಲ್ಲ ಬರೀ ಸಾಮಾನ್ಯವಾದ ವಿವೇಚನೆಯಾಯಿತು. ಇಲ್ಲಿ ಪ್ರತಿಪಾದಿಸಿದ ಮಾತುಗಳಿಗೆ ಆಧಾರವೇನು? ಎಂಬ ಪ್ರಶ್ನೆ ಓದುಗನಲ್ಲಿ ಬರುವುದು ಸ್ವಾಭಾವಿಕ. ಅದಕ್ಕೆ ಉತ್ತರವೆಂದರೆ ಇಲ್ಲಿಯವರೆಗೆ ಬೆಳೆದು ಬಂದ ಕನ್ನಡ ಕತೆಗಳನ್ನೆಲ್ಲ ಹಕ್ಕಿನೋಟದಿಂದ ನೋಡುವುದೇ ಆಗಿದೆ ಎಂದು ಹೇಳಬಹುದು.

ಹೀಗೆ ಹಕ್ಕಿನೋಟದಿಂದ ನೋಡುವಾಗ ನಾನು ಐದು ವಿಷಯುಗಳನ್ನು ಇಲ್ಲಿ ಪರಿಶೀಲಿಸಬೇಕೆಂದಿದ್ದೇನೆ. ಅವು ಯಾವುವೆಂದರೆ (೧) ಬೆಳವಣಿಗೆ (೨) ವಸ್ತು (೩) ಪಾತ್ರಗಳು (೪) ನಿರೂಪಣೆ (೫) ಶೈಲಿ.

ಈ ಐದು ದೃಷ್ಟಿಗಳಿಂದ ಕನ್ನಡ ಸಣ್ಣಕತೆಗಳನ್ನು ಪರಿಶೀಲಿಸಿ ನೋಡಿದಾಗ, ಕನ್ನಡ ಕತೆಗಳ ಹುಲುಸಾದ ಬೆಳೆಯಲ್ಲಿ ಬಹಳಷ್ಟು ಗಟ್ಟಿ ಕಾಳುಗಳಿವೆ—ಕನ್ನಡ ಸಣ್ಣಕತೆ ತನ್ನದೇ ಆದ ಒಂದು ವಿಶಿಷ್ಟ ಸ್ಥಾನ ಹಾಗೂ ಯೋಗ್ಯತೆಗಳನ್ನು ಗಳಿಸಿಕೊಂಡಿದೆ—ಎಂಬ ಮಾತು ಮನದಟ್ಟಾಗದೇ ಇರದು.

ಶೂನ್ಯ ಸಮರ್ಪಣ

(ನವ್ಯಕವನ)

ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬೈ

ಗಡಿದೂರದ ಬೆನ್ನೇರಿ ಹೊರಟಿತ್ತು ಸವಾರಿ.....
ಕಬ್ಬಿಣಹಳಿ ತುಳಿಯುತ್ತ ನಿಳ್ಳು ಹೊಡೆದು
ಛಕ್ ಛಕ್ ಛಕ್ ಛಕ್ ಛಕ್ ಛಕ್ .....
ನವಸ್ಪತಿಗಳ ಭೂತಾವಕಾರಗಳು ಸುತ್ತಮುತ್ತಿ ಓಡಿದುವ ಹಂದೆಹಿಂದೆ
ಗಾಲಿ ಮುಂದೆ ನುಗಿವೆ.

ನೇತ್ರವರ್ಮಳದ ಮಧ್ಯಬಿಂದುವಿನ ಮೇಲೆ
ಪುಳಿನಾರಣ್ಯದ ರೇಪೆ.
ನೀರಿಗೆ ಆಲೆ-ಬುದ್ಬುದವಿಲ್ಲ.
ಹನೆಯಲಿ ಗಾಳಿಯೇ ಇಲ್ಲ.
ಏನಿದು? ಏನಿದು?
ತುಂಗಭೂಮಿಯು ಮೇಲೆ ಕೋತುಂಗಿಯು ಕೂಡಾ ನೆರಳಿಲ್ಲ.
ಎಂಜಿನ್ನು ಸರಿ ಇದೆ ಸಾಮಿ.
ಎಂಜಿನ್ನು ಓಡುತಿದೆ ನೋಡಿದಿರಾ ?

ಏಲಾ ಇವನ.....
ಒಹೋ ಗಾಲಿನೇ ಸಲುಕಿಕೊಂಡಿದೆ ಭೂಮಾತೆಯು ವಕ್ಷ-
ಮುಷ್ಟಿಯಲಿ
ಬಿತು ಬಿಡು ತಾಯೀ ಬಿತು.
ಈ ಸಂಧಿಯಲ್ಲಿ
ಕೈಗೆ ಕೈಯಿಟ್ಟು ನೆಕ್ತರಬಲದಿ ಕೊರಿತಾಡುವ ಸಂಧಿಯಲ್ಲಿ
ಕ್ಷಣಕ್ಷಣಕೆ ಅಡಿ ಅಡಿ ಮುನ್ನುಗ್ಗಿ ಸಿಂಹಾಸನ ಗೆಲುವ ಮುಹೂ-
ರ್ತ ಸಂಧಿಯಲ್ಲಿ
ಬೇಡ ಈ ಕಪಟ ಬೇಡ ಬಿಡು.

ಕುಶ್ಯಾರ್.
ಳ್ಳು ಮುಷ್ಟಿಬಿಗಿದು ಕಾಲಹಾಗಿದು ನೆಲದಲ್ಲಿ
ಳ್ಳು ಹಾಗೆ ಹಾಗೆ....ಹಾಗೆ .....
ದಹೋಗುವ ಒಂದೆರಡು ಪಲಿಹ್ಯಾಟುಗಳು
ಳ್ಳನೆ ಹಲ್ಕಿಸಿಯದೇಕೇ ?

ಶ್ಯಾಮವಿತ್ತ ಪಲಿಲಸೋಮ
ಡಮಿಕಳಕೆ ಕಳಕೆ ಕೇರಿ ಸೋರಿ
ಕೈಯ ತುತ್ತು ಬಾಯ್ಗೆ ಬಾರದಂತಾಯ್ತು.
ಹಿಡಿದ ಕೊಡದ ತಳಕ್ಕೇ ಛಿದ್ರಛಿದ್ರವಾಗಿದ್ದರೆ
ನಾನೇನು ತಲೆ ಜಪ್ಪಿಕೊಳ್ಳುವುದು ಮಾರಾಯಾ ?

ಎಡಬಲ ಎಡಬಲ ಎಡಬಲ
ಹಾಯು ಈ ಬೋಳೆಯ ಮೇಲಿಂದ
ನೇರ ನೇರ ನೇರ.....
ಛಕ್ ಛಕ್ ಛಕ್ ಛಕ್.....
ಗಾಡಿ ನಡೆಯುತ್ತಲೇ ಇದೆ.
ಅದನ್ನು ತಡೆವವರಾರು ?

ಬಾ ಮಗು ಬಾ ಇಲ್ಲಿ,
ಹೇಳು ಕೋಷ್ಟಕ ಮಗ್ಗಿ.
ಒಂದು ಎರಡು ಮೂರು ನಾಲ್ಕು.....
ಜ್ಯೇತ್ರ ವೈಶಾಖ ಜ್ಯೇಷ್ಠ ಆಷಾಢ.....
ಸೋಮ, ಮಂಗಳ, ಬುಧ, ಗುರು, ಶುಕ್ರ ಶನಿ....
ಸಾಕೋ ಶನಿ ಸಾಕು.

ತಂಬೂರಿ ಶುಂಬೆಲ್ಲ ಕೇಸರ ಬಾಸರ....
ಏನು ಶುದ್ಧ ಗಾರ್ದಭಗಾನ.
ಅಲಾಪರಚನೆ ಗೊತ್ತೇ ಇಲ್ಲ
ತಾನವೈವಿಧ್ಯತೆ ಇಲ್ಲವೇ ಇಲ್ಲ.
ತಾಳವೈಚಿತ್ರ್ಯ ನಾಸ್ತಿ.
ತಾ ತಂಬೂರಿ
ಓ..... ತಬಲೆಗೆ ಶಾಯಿಯಿಲ್ಲ, ಢಕ್ಕೆಗೆ ತೂತು !
ಸರಿ ಸರಿ !

ಬಾ ಗೆಳೆಯ ವಾಯುವಿಹಾರಕ್ಕೆ
ಕೂತು ಕೊಂಡಿಗೆ ಒರಲೆ ಹಿಡಿದೀತು.
ನಗಬೇಡ ಮಾರಾಯಾ,
ನನಗೆ ನೀನೇ ಜೊತೆಯಲ್ಲವೇ ?
ಹಳ್ಳದ ದಂಡ್ಯಾಗ ಮೊದಲಿಗೆ ಹೋದಾಗ
ಎಲ್ಲೂ ಯಾರೂ ಇಲ್ಲ, ನಗೆಯಂತೂ ಸಾಯಲಿ.
ದಿನನಂತೆ ನೀರು ಹರಿಯುತ್ತಲೇ ಇತ್ತು ತುಂತುರು ತುಂತುರಾಗಿ.

ನಡೆದು ನಡೆದು ಬಂದೇವೀ ಕಾನಿಗೆ
ಓಹೋ ಇದು ಶೇಮುಂತನ ದಿಲ್ಲಿಯಲ್ಲ!
ಕಾವುನಿಗೆ ನನ್ನ ಮೇಲೇ ವಕ್ರದೃಷ್ಟಿ
ಅವ ಬಕಾಮನಲ್ಲನೇ? ವ್ಯವಹಾರ ಚತುರ
ಭಾಂಡವಲು ಇದ್ದಲ್ಲೇ ಹೂಡುವನು ಬಾಣ.
ತಿವಿಡೆಂಡುಗಳಾದರೂ ಸಿಗಬೇಕಲ್ಲನೇ?

ತಲೆಯ ಮೇಲೆ ಕೈಯಿಕ್ಕು
ಕಾನು ತೊರೆದು ಹೊಕ್ಕೆ ದುಕಾನು ಶೀತಪೇಯಕ್ಕಾಗಿ.
ಹೊಟ್ಟೆ ಕುದಿಯುತ್ತಿತ್ತು ಅನ್ಯರಳದ ಹವಿಸ್ಸಿನಲಿ
ಕೋಕಾಕೋಲಾ ಪಾರ್ಲೆಪ್ಪಾಲ್ ಮೆಂಗೋಲಾ ಅಲ್ಲಿಸ್ಪ್ರೀಮು....
ನಾಲಗೆಯಿಂದಿಳಿಯಿತು ಜೇನಹನಿ....
ಪಾಕೀಟನಲ್ಲಿದ್ದ ಒಂದಾಣೆ ಕೊಟ್ಟೆ
ನೋಡಾ ಕುಡಿದೆ
ಹಾಗೂ ಹೀಗೂ ಹಿಡಿದೆ ನೇರ ಮನೆದಾರಿ.

" ಏನು ಮಾತಲಿ ಗೆಳತೀ.
ಹಳೇಕಾಲದ ಗೃಹಿಣಿಗೆ ಒಲೆ-ತೊಟ್ಟಿಲು....
ದೂರನೆಂದ್ರೆ ಮನೇ ಮೆಟ್ಟಿಲು ..."
" ಹೌದಲ್ಲನೇ..... ಎಲ್ಲವೂ ಹನೇಬರಹ.... "

ಕೈಮುಚ್ಚಿ ಕಣ್ತೆರೆ ಗೆಳೆಯ
ನೇತ್ರಬಿಂಬಕೆ ಮೆರುಗುವುದೆಲ್ಲ
ಕೈಗೆರಗುವುದಿಲ್ಲ ಕಣೋ....
ಮನೇಮೆಟ್ಟಿಲಿಳಿದವನೇ
ಫೂರ್ವಾಶ್ರಮನು ಹಿಡಿಮನಡೆ ಆಫೀಸಿಗೆ ಕರಡುಗೀಜಲು.
" ಶಲಾಮು ಸಾಹೇಬ ಶಲಾಮು "

ಇದು ಬೆಮರಗಡಲಿನಾ ಸೀಮಿ
ಬಂದನಾ ಸಾಮಿ
ತಲೆ ತುರಿಸಿಕೊಳ್ಳುತ್ತಾ
ಕಾಲೆಳೆದುಕೊಳ್ಳುತ್ತಾ
ಏನೆಂಥ ಹಂದರದ ಬೀಡ
??.....ನೋಡ
ಸುತ್ತುಮುತ್ತು ವರುಸ-ವರುಸಗಳಿಂದ
ವಿದ್ಯುದ್ದೀಪ ಸಾಲು ಸಾಲು ಭೋರ್ಗರೆಯುತಿದೆ
ನಿಶ್ಚಿತ ಕೆಂಡಲ ಪೊದರಿನ ಬೆಳಕನ್ನು ಒಂದೇ ತೆರದಲ್ಲ
ಅಮವಾಸ್ಯೆ ಸತ್ಯುಪಾಕಿದರು.
ಹುಣ್ಣಿಮೆ ಹುಗಿದುಹಾಕಿದರು.

ಭಕ್ ಭಕ್ ಭಕ್ ಭಕ್ ಭಕ್.....
ಏನಿದು? ಕಾಲಿಡಲು ಪ್ಲೇಟ್‌ಫಾರ್ಮೇ ಇಲ್ಲವೇ?
ಸನಿಹದಲ್ಲಿ ನಗರದಾರಿಯೇ ಇಲ್ಲವೇ?
ಇದು ಯಾವ ಸ್ಥಿತಿಗತಿ?
ಎಂಜಿನ್ನು ಓಡುತಿದೆ ನೋಡಿದಿರಾ?
ನೋಡಿದೆ ನೋಡಿದೆಯಪ್ಪ
ಅದರ ಹೊರತು ಎಲ್ಲವೂ ನಾಸ್ತಿಯಲ್ಲ!

ಓಂ.....
ಶೂನ್ಯಾತ್ ಶೂನ್ಯಮುದಜ್ಯತೇ '
" ಏನು ಮಾಡೋದು ಗೆಳತೀ!
ದೇವರಾಯ್ತು ಧರ್ಮವಾಯ್ತು ಜಪವಾಯ್ತು ತಪವಾಯ್ತು
ಟಾನಿಕ್ಕು ಇಂಜೆಕ್ಷನ್ನಾಗಳಾದುವೆಸ್ಟೋ!
ಇನ್ನೂ ಮಕ್ಕಳಾಗಲಿಲ್ಲ ನನಗೆ....
ವೈದ್ಯ ಬೊಗಳ್ತಾನೆ ದೇವ್ರ ದಯೆಯೊಂದೇ ಉಳಿದ ಮದ್ದೆಂತ
ಏನು ಮಾಡಲಿ..... "

ಇಗೋ ವರ್ಷ ಅಗೋ ವರ್ಷ
ಕಣ್ಣಾಲಿ ವರ್ಷ ವರ್ಷ
ಭೂ ಬೆಳಗುವ ಜ್ಯೋತಿ ವರ್ಷ
ಚುಕ್ಕಿ ವರ್ಷ. ಸರ್ವವೂ....ಸರ್ವವೂ.....
.....
ಶೂನ್ಯಸ್ಯ, ಶೂನ್ಯವಾದಾಯ ಶೂನ್ಯಮೇವಾವಶಿಷ್ಯತೇ "
ಓಂ ಶೂನ್ಯಮ್ ಶೂನ್ಯಮ್ ಶೂನ್ಯಮ್ !

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು, ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಿಕರು: ಬಿ. ಜೆ. ಮುತ್ರಗಿ

"ಮಗಳ ಮದುವೆ"

(ಒಂದು ಸಮಾಲೋಚನೆ)*

ಗೌರೀಶ ಕಾಯ್ಕಿಣಿ, ಗೋಕರ್ಣ

ರಾಜಕೀಯ ಕಾದಂಬರಿ–ಎಂಬುದೊಂದು ಲಲಿತ ವಾಙ್ಮಯದ ಪ್ರಕಾರವಿದ್ದುದೇ ಆದರೆ ಅದು ಹೇಗೆ ಇರಬಲ್ಲದು? ರಾಜಕಾರಣ ಮತ್ತು ಕಾದಂಬರಿಯ ಕಥಾವಸ್ತು–ಇವುಗಳ ಕಲಬೆರಕೆ–ಕಲಸು ಮೇಲೋಗರವಾದ ಮಾತ್ರಕ್ಕೆ ರಾಜಕೀಯ ಕಾದಂಬರಿ ಆಗಬಲ್ಲದೆ? ರಾಜಕಾರಣ ಸಾಮಾಜಿಕ ಹಾಗೂ ಸಾರ್ವಜನಿಕ ಜೀವನದ ಒಂದು ತೊಡಕಿನ ಅಂಗ. ಕಥಾವಸ್ತುವೋ: ಕೇವಲ ವೈಯಕ್ತಿಕ:–ಒಂದು ಕುಟುಂಬ; ಒಂದು ಕಚೇರಿ, ಒಂದು ಕಾಪಾರ್ಟ್‌ಮೆಂಟು ಆವರಣ—ಸನ್ನಿವೇಶ ಏನೇ ಇರಲಿ, ಒಳಗೆ ವ್ಯಕ್ತವಾಗುವುದು ವಿನ್ಯಾಸತೋಷಿ. ವುದು ಕೇವಲ ವ್ಯಕ್ತಿ-ವ್ಯಕ್ತಿತ್ವಗಳ ವಿಕಾಸ, ಗುಣದೋಷ ಪರಿಪೋಷಣೆ ವಸ್ತು ಕತಿಯಾಗುವಾಗ, ಅಭಿಯ ಭಾವ ರಚವಾಗುವಾಗ ನಡೆಯುವ ಪಾಕಸಿದ್ಧಿಯಲ್ಲಿ ಮಿಕ್ಕ ವಿಷಯು—ಸಂಗತಿ ಪರಿಪೋಷಕ, ಪಾರಿಪಾರ್ಶ್ವಕ. ಈ ದೃಷ್ಟಿಯಿಂದ ಕಂಡಾಗ, ಕಾದಂಬರಿಯಲ್ಲಿ ರಾಜಕಾರಣ ಹೆಣೆಯಲ್ಪಡುವ ಬಗೆ ಸಾಮಾನ್ಯವಾಗಿ ಎರಡು. ಒಂದರಲ್ಲಿ ರಾಜಕೀಯ ಅಂದೋಲನ–ರಾಜ್ಯದ ಯುದ್ಧ–ವಿಪ್ಲವಾದಿ ಕ್ರಾಂತಿಪ್ರಸಂಗಗಳೆಲ್ಲ ಹಿನ್ನೆಲೆಯಾಗಿ ಕೇವಲ ಚಲಚ್ಚಿತ್ರದ ಬೆಳ್ಳಿರೆಯಾಗಿ ಕಥಾಭಿತ್ತಿಯಾಗಿ ನಿಲ್ಲಬಹುದು. ಇನ್ನೊಂದರಲ್ಲಿ ಕಥೆಯು ಮಾನವೀಯ ಜೀವನದ ಮೇಲೆ. ಜೀವನದ ಒಳಹೊರಗೆ ಅದು ಗಾಳಿಬೆಳಕಾಗಿ ಹರಿದಾಡಿ, ಕಥೆಯ ನಿರೂಪಣೆಗೆ ಒಂದು ಸಜೀವ ಎಳಕವನ್ನು ಹೊಯ್ಯಬಹುದು.—ಈ ಎರಡನೆಯ ರೀತಿಗೂ ಎರಡು ರೂಪಗಳಿವೆ. ಎಂಥ ರಾಜಕಾರಣದ ಸುಂಟರಗಾಳಿ ಸುತ್ತು ಸುಳಿದಾಡುತ್ತಿದ್ದರೂ ಕಥೆ ಆದ್ಯಂತವಾಗಿ ಒಂದು ಕೌಟುಂಬಿಕ ಇಲ್ಲವೆ ದಾಂಪತ್ಯಿಕ ವಸ್ತುವಾಗಿಯೇ ವಿಕಾಸಪಡುತ್ತಿರಬಹುದು; ಅಥವಾ ಕೌಟುಂಬಿಕವೋ ವೈಯಕ್ತಿಕವೋ ಆಗಿ ಸಾಗುವ ಕಥೆಯೇ ತನ್ನ ಕವಲೊಡೆಯುತ್ತ ಸಾಗುವ ಕ್ರಿಯೆ.–ಪ್ರತಿಕ್ರಿಯೆಗಳ ಹಬ್ಬುವ ಸುಳಿಗಳಲ್ಲಿ ಒಂದು ಬಹು ದೊಡ್ಡ ರಾಜಕೀಯ ಸ್ಥಿತ್ಯಂತರವನ್ನೇ ಕವಳಿಸಿಕೊಬ್ಬಬಹುದು. ಮೊದಲನೆಯದಕ್ಕೆ ಅತಿ ಪ್ರಾಚೀನ ಉದಾಹರಣೆಬೇಕೆ? ವಾಲ್ಮೀಕಿಯ ರಾಮಾಯಣ! ಆರ್ಯ, ವಾನರ, ರಾಕ್ಷಸ ಸಂಸ್ಕೃತಿಗಳ ಸಂಘರ್ಷದ ಶತಯೋಜನ ವಿಸ್ತೀರ್ಣಕತಲು ಅಯೋಧ್ಯೆ, ಕಿಷ್ಕಿಂಧೆ, ಲಂಕೆಗಳ ಸುತ್ತಲೂ ವಿಜೃಂಭಿಸಿ ಉರುಳುತ್ತಿದ್ದರೂ, ಅದನ್ನು ಕಟ್ಟಿ ಮೆಟ್ಟಿನಿಂತ ಸೇತು ರಾಮ–ಸೀತೆಯರ ಹೃದಯ ಬಂಧವೆ! ಆದಿಯಿಂದ ಅಂತ್ಯದವರೆಗೂ ರಾಮಾಯಣ ಒಂದು ಕುಟುಂಬದ, ದಾಂಪತ್ಯದ, ಸೌಹಾರ್ದದ ಹಾಗೂ ಸೋದರ್ಯದ ಮಾನವೀಯ ಕಥೆಯಾಗಿಯೇ ನಿಂತಿದೆ. ಅದೇ ಮಹಾಭಾರತವೊ? ಅದು ಎರಡನೆಯ ಪ್ರಕಾರದ್ದು. ಇದೇ ಕ್ರಮದ ಸಮಾಂತರವನ್ನು ನಾವು ಮೃಚ್ಛಕಟಿಕದಲ್ಲಿಯೂ ಮುದ್ರಾ ರಾಕ್ಷಸದಲ್ಲಿಯೂ ಕಾಣುತ್ತೇವೆ. ಪಾಲಕನ ರಾಜ್ಯದಲ್ಲಿ ಎದ್ದ ವಿಪ್ಲವ, ಆರ್ಯಕನು ಹೂಡಿ ಗೆದ್ದ ರಾಜಕೀಯ ಕ್ರಾಂತಿ ಇವುಗಳ ರಭಂಕಭಾವಾತದ ಹೆಜ್ಜೆಯ—ಹುಲುಗೆಜ್ಜೆಗಳಾಗಿ ಚಾರುದತ್ತ ವಸಂತಸೇನೆಯರ ಹೃದಯಗಳು ಝಲಿಝಿಲಿಸುವುವು. ಆದರೆ ಅಲ್ಲಿ? ಚಾಣಕ್ಯ, ಅಮಾತ್ಯ ರಾಕ್ಷಸ, ಚಂದ್ರಗುಪ್ತರಿಂದ ಚಂದನದಾಸನ ವರೆಗೂ ರಾಜಕಾರಣದ ಅಮಾನುಷ ಜಾಲವನ್ನೇ ನೆಯ್ಯುವ ಗೂಟಗಳಂತೆ ಕೆಲಸ ಮಾಡುವರು.

ಈ ಎರಡೂ ಕ್ರಮಪರಿಪಾಕಗಳು ಕನ್ನಡ ಕಾದಂಬರೀ ಕ್ಷೇತ್ರದಲ್ಲಿಯೂ ಸ್ಫುಟವಾಗಿ ರೂಪಗೊಂಡ ಕೃತಿಗಳಿವೆ. ರಾಮಾಯಣ, ಮೃಚ್ಛಕಟಿಕ, ಡಿಕೆನ್ಸನ "ಟೇಲ ಆಫ್ ಟೂ ಸಿಟೀಸ್," ಶರಚ್ಚಂದ್ರನ "ಪಾಥೇರದವಿ" ಇವುಗಳ ಮಾರ್ಗದಲ್ಲಿಯೇ ನಮ್ರವಾಗಿ ಹೆಜ್ಜೆ ಇಟ್ಟ ಒಂದು ಕಾದಂಬರಿ ಶ್ರೀ. ಬೆಟಗೇರಿ ಕೃಷ್ಣಶರ್ಮರ "ಮಗಳ ಮದುವೆ." ಇನ್ನೊಂದು ತಮ್ಮ ವಿಶ್ವತೋಮುಖ ಪ್ರತಿಭೆಯ ಬಹು ಪ್ರಸವ ರೂಪಣ ಪ್ರಪಂಚದಿಂದ ನಮ್ಮನ್ನು ಚಕಿತಗೊಳಿಸುತ್ತ ಬಂದ ಶ್ರೀ. ಶಿವರಾಮ ಕಾರಂತರ "ಗೊಂಡಾರಣ್ಯ." ಹಾಗೇ ನೋಡಿದರೆ, ಅವರ "ಔದಾರ್ಯದ ಉರುಳಿನಲ್ಲಿ" ಎಂಬ ಕೃತಿಯೂ ಈ ಮೊದಲನೆಯ ಮಾದರಿಯ ಸುತ್ತಿನಲ್ಲಿ ನಿಲ್ಲಬಹುದಾದದ್ದೇ ಎನ್ನಬೇಕು. ಆದರೆ ಅಲ್ಲಿ ಆ ವಿಚಾರ ಅಪ್ರಸ್ತುತ.

ಬಯಲಾಟಗಾಳಿಯಲ್ಲಿ ತೂರಾಡುವ ಕಡ್ಡಿ-ತೊಪ್ಪಲು-ಹುಲ್ಲುಗರಿಗಳನ್ನು ಹೆಕ್ಕಿ ತಂದು ಹಕ್ಕಿಗಳು ತಮ್ಮ ಗೂಡು ಕಟ್ಟಬಹುದು, ಅದೇ ರೀತಿ ದೇಶದಾದ್ಯಂತ ರಾಜಕೀಯ ಕೋಲಾಹಲವೆದ್ದಾಗಲೂ ಅದೇ ಕೋಲಾಹಲದ ಕೈಗೊಂಬೆಗಳಾದ, ಅಥವಾ ಅದನ್ನೇ ಕೈಗೊಂಬೆಯಾಗಿ ಕುಣಿಸುವ ಸೂತ್ರಧಾರಿಗಳಾದ ವ್ಯಕ್ತಿಗಳು ತುಸು ಪರಿದು ನಿಂತು, ತಡೆದು ನೋಡಿ, ಮನುಷ್ಯರಾಗಿ ಉಸಿರಾಡಿಸಬಹುದು. ಮಾನವ್ಯದ ಅತ್ಮೀಯ ಅಪ್ತವ್ಯದ ಒಂದು ಸ್ನಿಗ್ಧ ಮಧುರ ಮಂಟಪವನ್ನು ಕಟ್ಟಬಹುದು. ತನ್ನ ಮದುವೆಗಾಗಿ ವಿಚಾರಿಸಲು ತೆರಪಿಲ್ಲದ, ತಲೆಯಮೇಲೆ ಪೋಲೀಸ ವಾರಂಟಿನ ಬಚ್ಚುಗತ್ತಿ ಕೂದಲಿಗೆ ನೇತು ಬಿದ್ದ, ದೇಶದ ಜನತೆಯ, ಆದರ್ಶದ ಹಾಗೂ ಅಂದೋಲನದ ಅನೇಕ ಭುಗಿಲೆದ್ದ ಪ್ರಶ್ನೆಗಳು ತಲೆತಿಂದು ದಿಗಿಲುಗೊಳಿಸುತ್ತ

* ಕಳೆದ ವರ್ಷ ಮುಂಬಯಿ ಸರಕಾರ ಬಹುಮಾನವಿತ್ತ ಕಾದಂಬರಿ.

ದಿಗ್ಭ್ರಮೆಗೊಳಿಸುತ್ತಿರುವಾಗಲೂ ಒಬ್ಬ ರಾಜಕೀಯ ಮುಂದಾಳು, ತನ್ನ ಮಿತ್ರನ ಮದುವೆಗಾಗಿ—ಇದೂ ಒಬ್ಬ ಮಧ್ಯಮವರ್ಗದ ಅಸಹಾಯ ಗೃಹಸ್ಥನ ಕನ್ನೆಯ ಕೈಗೆ ಧಾರೆಯ ನೀರುಬಿಟ್ಟು ಅವರ ಕಣ್ಣೀರಧಾರೆ ನಿಲ್ಲಿಸುವುದಕ್ಕಾಗಿ—ಪೇಚಾಡುವುದನ್ನೂ ನಾವು ಒಮ್ಮೊಮ್ಮೆ ಕಾಣಬಹುದು.

ಹಾಗೆ ಕಾಣಬಯಸುವವರು, ಹಾಗೆ ಕಾಣಲು ಸಿಗದಿದ್ದರೆ "ಮಗಳ ಮದುವೆ" ಕಾದಂಬರಿಯನ್ನು ಅವಶ್ಯ ಓದಬೇಕು. ಮಗನ ಮದುವೆಯನ್ನು ಮುರಿದು, ತನ್ನ ಮದುವೆಯ ಕಂಕಣವನ್ನು ಕೂಡ ಬಿಚ್ಚದೆ ದೊಡ್ಡಿಗಾಗಿಯೋ ದೇಶಕ್ಕಾಗಿಯೋ ಯುದ್ಧಕ್ಕೆ ಹೊರಟವರ ವೀರಕಥೆಗಳನ್ನು ಯಾರು ಕೇಳಿಲ್ಲ? ಆದರೆ ತನ್ನನ್ನು ಹಿಡಿಯುವ ವಾರಂಟು ತಲೆಯಮೇಲೆ. ಹಿಡಿದುಕೊಟ್ಟವರಿಗೆ ಭಾರಿ ಬಕ್ಷೀಸು ಸರಕಾರ ಹೊರಡಿಸಿದಾಗ, ಚಳವಳಿಯ 'ರಣಭೇರಿ' ಕರೆಯುತ್ತಿದ್ದಾಗ, ಅದೆಲ್ಲ ಸಂಭ್ರಮದ ನಡುವೆ ಒಂದು ಮದುವೆ ಜೋಡಿಸುವುದಕ್ಕಾಗಿ ತನ್ನ ಬಾಳಿನ ಕೆಲವು ಅಮೂಲ್ಯ ದಿನಗಳನ್ನು ವೆಚ್ಚ ಮಾಡುವುದು ನಷ್ಟವಲ್ಲವೆಂದು ನಂಬಿದ ಒಬ್ಬ. ಧೀರೋದಾತ್ತ ಯುವಕನ ಕಥೆ ಈ ಕಾದಂಬರಿ.

ಅಹುದು, ಕಾದಂಬರಿ ಈ ಯುವಕನದೆ. ಇದು ನಾಯಕ ಪ್ರಧಾನವಾದ ಕೃತಿ. ಕಾದಂಬರಿಯ ೩೬ ಪ್ರಕರಣಗಳಲ್ಲಿ ಒಟ್ಟು ಸುಮಾರು ೨೫ ಪ್ರಕರಣಗಳು ನಾಯಕ 'ರತ್ನಾಕರ'ನ ಕುರಿತೇ ಬರುತ್ತವೆ. ಅವನು ಪ್ರತ್ಯಕ್ಷ ಬಾರದ ಉಳಿದ ಪ್ರಕರಣಗಳಲ್ಲಿ ಅವನ ಕುರಿತು ಮಾತು, ಚರ್ಚೆ, ನೆನವು, ಪತ್ರ ಏನಾದರೂ ಬಂದೇ ತೀರುತ್ತದೆ. ಶ್ರೀ. ಕೃಷ್ಣಶರ್ಮರ 'ರಾಜಯೋಗಿ' 'ಅಶಾಂತಿಪರ್ವ' ಮತ್ತು 'ಸುದರ್ಶನ' ಇವುಗಳನ್ನು ಯಾರು ಮರೆತಿಲ್ಲ? ಅನಂತರ ಬಹುದೀರ್ಘಕಾಲ ಅವರ ಲೇಖನಿಗೆ ಕಾದಂಬರಿಯ ಲೇಖನಕ್ಕೆ ಆಣಿಯಾಗಿದ್ದಿಲ್ಲ. ಆದರೆ ೧೭-೧೮ ವರ್ಷಗಳನಂತರವೂ ಆ ಲೇಖನಿಯ ಮೊನೆ ಮೊಂಡವಾಗಿಲ್ಲ, ಜಂಗು ತಿಂದಿಲ್ಲ "ನನ್ನ ಪ್ರತಿಭೆ ಬತ್ತಿದೆಯೋ ಜೀವಂತವಾಗಿದೆಯೋ ಎಂಬುದನ್ನು ಸಾಹಿತ್ಯಕ ಮಿತ್ರರು ಈ ಕಾದಂಬರಿಯನ್ನು ಓದಿ ಪರೀಕ್ಷೆ ಮಾಡಲಿ!" ಎಂದು ಅವರೇ ತಮ್ಮ ಮುನ್ನುಡಿಯಲ್ಲಿ ಆಹ್ವಾನಿಸಿದ್ದಾರೆ.

ಈ ಲೇಖಕನಿಗೆ ಇಂಥ ಆಹ್ವಾನಕೊಡುವ ಆತ್ಮವಿಶ್ವಾಸ ಖಚಿತವಾಗಿಯೂ ಇದೆ. ಈ ವಿಶ್ವಾಸದ ಫಲವೆಂದರೆ ತಾನು ಉಂಟುಮಾಡುವ ಆಶೆ-ಆಕಾಂಕ್ಷೆಗಳ ಕುರಿತು ಈತ ನಾಚಿಕರನ್ನು ಎಂದೂ ಅತೃಪ್ತಿಯಲ್ಲಿ ಇಡುವುದಿಲ್ಲ. ಸಾಮಾನ್ಯವಾಗಿ ಕಥನಕಲಾವಿದರಲ್ಲಿ ಜಗತ್ತಿನ ವಾಙ್ಮಯದಲ್ಲಿಯೇ ಎರಡು ಮಾದರಿ:—ಒಂದು, ಎಂಥ ಅಶಕ್ಯವನ್ನೂ ಅಸಂಭವವನ್ನೂ ಅಸಾಮಾನ್ಯವನ್ನೂ ಸತ್ಯವಾಗಿ ಶಕ್ಯವಾಗಿ ಒದಗಿಸಿ, ಕಾಣಿಸಿ ಓದುಗರನ್ನು ಶಬ್ಬಿಬ್ಬಾಗಿಸಿ, ತಮ್ಮ ಯಶಸ್ಸಿನ ವಿಜಯರಥವನ್ನು ರಸಿಕರ ಹೃದಯದ ಮೇಲಿಂದ ನಿರಂಕುಶವಾಗಿ ಸಾಗಿಸಿಕೊಂಡು ಹೋಗುವವರು. ತಮ್ಮ ತಮ್ಮ ಪರಿಯಲ್ಲಿ ಶ್ರೀರಂಗ, ಕಾರಂತ, ದೇವುಡು, ತರಾಸು ಈ ಕೋಟಿಯವರು. ಇವರೆಲ್ಲರಿಗೂ ರವೀಂದ್ರರೂ ಶರಚ್ಚಂದ್ರರೂ ಸೀಮಾಪುರುಷರು. ಇನ್ನೊಂದು ಮಾದರಿ: ವ್ಯಕ್ತಿಗಳ ವಿಚಾರಧಾರೆಗಳ ಸಾಮಾಜಿಕ ವರ್ಗಗಳ ಪ್ರಾತಿನಿಧಿಕ ಇಲ್ಲವೆ ಪ್ರತೀಕಾತ್ಮಕ ಮಾದರಿಗಳನ್ನು ನಿಲ್ಲಿಸಿ, ಓದುಗರಿಗೆ ಪರಿಚಿತವಿದ್ದುದನ್ನೇ ಪುನಃಪ್ರತ್ಯಯದ ಆನಂದಕ್ಕಾಗಿ ನವೀನೀಕರಿಸಿ ನುಡಿಯುವವರು. ಪ್ರೇಮಚಂದ, ಸುದರ್ಶನ, ಹರಿನಾರಾಯಣ ಆಪಟೆ, ನಾ. ಸಿ. ಫಡಕೆ, ಮಾಸ್ತಿ, ಪ್ರಭೃತಿಗಳು ಈ ವರ್ಗದವರು. ಶ್ರೀ. ಕೃಷ್ಣಶರ್ಮರೂ ಈ ಪಂಕ್ತಿಯಲ್ಲಿ ಕೂಡ್ರುತ್ತಾರೆ. "ರಾಜಕೀಯಚಳವಳಿಯ ವಾತಾವರಣವನ್ನು ಹಿನ್ನೆಲೆಯಾಗಿ ಇಟ್ಟುಕೊಂಡು, ಉತ್ತರಕರ್ನಾಟಕದ ಜನಜೀವನದ ಚಿತ್ರದ ವಿವಿಧ ಮಾದರಿಗಳನ್ನು ಇದರಲ್ಲಿ ರೂಪಿಸಲಾಗಿದೆ." ಎಂದ ಲೇಖಕನ ಪರಿಚಯ ವಾಕ್ಯವೇ ಇದಕ್ಕೆ ಸಾಕ್ಷಿ. ಒಂದು ಹೃದ್ಯವಾದ ಕಥೆಯನ್ನು ಹೇಳುವ ಅವಸರದಲ್ಲಿಯೇ ಅಲ್ಲಲ್ಲಿ ಸಮಾಜದ, ಸಂಪ್ರದಾಯದ ಜೀವನದ ಬೇರೆ ಬೇರೆ ಮಟ್ಟದ ವ್ಯಕ್ತಿವಿಶೇಷಗಳನ್ನು ಲೇಖಕರು ತುಂಬ ಆಸಕ್ತಿಯಿಂದ ಆಕರ್ಷಕವಾಗಿ ಪುರುಷಪ್ರಮಾಣದಲ್ಲಿ ಚಿತ್ರಿಸುತ್ತ ಸಾಗಿದ್ದಾರೆ.

ಈ ಚಿತ್ರಣವು ಒಂದು ರೀತಿ ಕಥೆಯ ಆಚ್ಚುಕಟ್ಟಿಗೆ ಒಂದು ಅಂತರಾಯವೋ ಎನಿಸುವಂತಿದೆ. ಸಾಕಲ್ಯ ಮತ್ತು ಕೌಶಲ್ಯದಿಂದ ಪೂರ್ತಿ ಶಬ್ದಚಿತ್ರಗಳನ್ನು ಬರೆದು ಬಣ್ಣತುಂಬುವ ಪಂಥ ಈ ಲೇಖಕ ತೊಟ್ಟಂತೆಯೇ [illegible]ತ್ತದೆ. ಕನ್ಯಾಪರೀಕ್ಷೆಯಂಥ ಒಂದು ಅವಶ್ಯ ಪ್ರಸಂಗದ ಚಿತ್ರ[illegible]ಲ್ಲಿ ಹೇಗೋ, ಅವಾಂತರದ ಬಸ್ಸುನಿಲ್ದಾಣ ಹಾಗೂ ಪ್ರವಾಸಗ[illegible]ಕ್ಷೇಪಕ ದೃಶ್ಯಗಳಲ್ಲಿ—ಮುದ್ದಾವುರದ ಗ್ರಾಮಜೀವನದ ಚಿತ್ರಗಳನ್ನು ರೇಖಿಸುವುದರಲ್ಲಿಯೂ ಇವರ ಲೇಖನಿಕೆ ರಮಿಸುತ್ತದೆ, ವಿರಮಿಸುತ್ತದೆ. ಈ ಕಥೋಪಕಥನದ ಚಾಪಲ್ಯವು ಅದರ ಚಾತುರ್ಯದಿಂದ ಕ್ಷಮ್ಯವಾಗಲಾರದು. ಗುಣದ ಅತಿರೇಕವೂ ಒಂದು ದೋಷವೇ. ಅವಯವ ಸೌಷ್ಠವದಂತೆ ಅವುಗಳ ಸಂಸ್ಥಾನವೂ ಸೌಂದರ್ಯದ ಮೂಲಘಟಕ. ವಸಂತಗೌರೀಪೂಜೆಯ ಸಂಭ್ರಮ, ನೆಂಕಣ್ಣ ಮತ್ತು ಮಂಡಳಿಯವರ ಚರ್ಚೆ-ಚೇಷ್ಟಿತಗಳ ವಿವರ, ಕೃಷ್ಣಳಿಯ ಸಹೃದಯಸತ್ಕಾರದ ಚಿತ್ರ. ನಿಂಗಪ್ಪನ ಮನೆಯ ಚಿತ್ರ ಇವುಗಳ ಸಂಕ್ಷೇಪ ಯಾವ ಅಕ್ಷೇಪಕ್ಕೂ ಕಾರಣವಾಗುತ್ತಿದ್ದಿಲ್ಲ. ಪ್ರಸಂಗಚಿತ್ರಣದಂತೆ ವಾದ—ವಿಚಾರಗಳ ಚರ್ಚೆ-ಚರ್ವಣಗಳಲ್ಲಿಯೂ ಲೇಖಕ ತೇಲಿ ಹೋಗುವುದುಂಟು. ಈ ದೃಷ್ಟಿಯಿಂದ ರತ್ನಾಕರನಂತಹ ಒಬ್ಬ ಕರ್ತೃತ್ವ ನೇತೃತ್ವಗಳು ಎರಕವಾದ ನಾಯಕನಲ್ಲಿ ಇಂಥ ಚರ್ಚೆ ಹಾಗೂ ತತ್ತ್ವಪ್ರತಿಪಾದನೆಯ ವಿಲಕ್ಷಣ ಆಸಕ್ತಿ ಪ್ರಸ್ತುತ ಅಪ್ರಸ್ತುತ ಪ್ರಸಂಗಗಳಲ್ಲಿ ಪ್ರಕಟವಾಗುವುದು ಕೆಲವೊಮ್ಮೆ ವಿನೋದವಾಗಿ ಕಂಡು ರಸಾಭಾಸವಾಗುತ್ತದೆ—ಸಂಗೀತನಾಟಕದಲ್ಲಿ ಸ್ಟೇಶನ್ನಿಗೆ ಹೊರಟುನಿಂತ ನಾಯಕ ವಿರಹಗೀತ 'ವನ್ನವೋರ್' ತೆಗೆದುಕೊಂಡು ಹಾಡುತ್ತ ನಿಂತಂತೆ.

ಆದರೆ ಇಷ್ಟೊಂದು ನಿಜ. ಈ ಅತಿರೇಕರೂಪದ ಅನೇಕವನ್ನು ಮರೆತರೆ, ಲೇಖಕರ ಪ್ರತಿಭೆ ಯಾವ ಪ್ರಸಂಗಾನುಕೂಲ ಪಾತ್ರ-ಸೃಷ್ಟಿಗೂ ವಾತಾವರಣ ನಿರ್ಮಿತಿಗೂ ಸಮರ್ಥವಾಗಿದೆಯೆಂದೇ

ಎನಿಸುವುದು. ಪುನರಾವೃತ್ತಿಗೆ ಎಡೆಕೊಡದೆ, ಬಂದ ಪ್ರತಿಯೊಂದು ಹೆಣ್ಣು ಗಂಡು ಪಾತ್ರಗಳ ವ್ಯಕ್ತಿವಿಶೇಷಗಳು ಒಳ್ಳೇ ಸ್ಪುಟವಾಗಿ ದಿಟವಾಗಿ ಮನದಟ್ಟಾಗಿ ಒಡಮೂಡಿವೆ. ಕಾವೇರಿ, ಕುಮುದಾ, ಸುಭದ್ರೆ ಹಾಗೂ ಕಾಶವ್ವ ಇವರ ತುಂಬ ಚಿತ್ರಗಳನ್ನೇ ಆಯ್ದು ಓದಿದರೂ ಸಾಕು. ಒಂದರಂತೆ ಒಂದಿಲ್ಲ; ಒಂದರಲ್ಲಿಯೂ ಕುಂದಿಲ್ಲ. ಬಂದ ದೇಶಭಕ್ತರಲ್ಲಿಯೂ ಎಷ್ಟು ವಿಧ. ರಂಗಣ್ಣನಂತೆ ರತ್ನಾಕರನಿಲ್ಲ. ಸುಖವಸ್ತು ಮಧ್ಯಮವರ್ಗದ ಕನ್ಯಾಪಿತರಾದ ಅನಂತರಾಯ—ಗೋಪಾಲರಾಯರಲ್ಲಿಯೂ ಸಾಮ್ಯ-ವೈಸಮ್ಯ ಸೂಕ್ಷ್ಮವಿದ್ದಂತೆಯೇ ಸಜೀವವಾಗಿ ಬಂದಿದೆ. ಅದೇ ರೀತಿ ಅಪಕ್ಕೂ ನವುರಾಗಿ ರೂಪಿಸಿದ್ದು ಈ ರಾಯರುಗಳ ಹೆಂಡಂದಿರ ಹೆಣ್ಣುಪೆತ್ತ ಕರುಳುಗಳ ಕುಸುರಾದ ಚಿತ್ರಣ! ಈ ಲೇಖಕರ ಹಿಂದಿನ ಕಾದಂಬರಿಗಳಂತೆ ಈ ಕೃತಿಯಲ್ಲಿಯೂ ಪಾತ್ರರೂಪಣದಲ್ಲಿ ಒಂದು ತಂತ್ರ ಎದ್ದು ಕಾಣುತ್ತದೆ. ಪಾತ್ರಗಳು ಜೋಡಿಜೋಡಿಯಾಗಿ ನಿಂತು ತಮ್ಮ ಸಮಾಂತರ ಸಾಮ್ಯ-ವೈಷಮ್ಯಗಳಿಂದ ಕಥೆಯ ಹಂದರಕ್ಕೆ ಒಲುಮೆಯನ್ನೂ ಮಾಟದ ನಿಲುಮೆಯನ್ನೂ ತಂದುಕೊಡುತ್ತವೆ. ರತ್ನಾಕರ-ರಂಗಣ್ಣ, ಅನಂತ-ಗೋಪಾಲರಾಯರಿಂದ ಮೊದಲಾಗಿ ಹನುಮಪ್ಪ-ಡ್ರಾಯ್ವರ್ ದತ್ತೂವರೆಗೂ ಈ ದ್ವಂದ್ವಜಾರಿ ಪಾತ್ರರಚನೆ ವ್ಯಕ್ತವಾಗಿದೆ. ಇದು ಇಬ್ಬರು ಫೌಜದಾರರಲ್ಲಿಯೂ ತಪ್ಪಿಲ್ಲ! ಈ [illegible]ದ್ವಂದ್ವದ ಜತೆಗೆ ವಿರೋಧಿದ್ವಂದ್ವವೂ ಅಲ್ಲಲ್ಲಿ ನಿರ್ಮಾಣವಾಗಿ ಪಾತ್ರಸೃಷ್ಟಿಯ ಸಮಕಟ್ಟು ಒಂದು ಒಳಹೊಂದಿಕೆಯನ್ನು ಕಾಪಾಡಿಕೊಂಡಿದೆ. ಕುಮುದಾ-ಕಾವೇರಿಯವರಿಗೆ ಸುಭದ್ರೆ-ಕಾಶವ್ವ, ರತ್ನಾಕರ-ರಂಗಣ್ಣರಿಗೆ ವೆಂಕಣ್ಣ; ಅನಂತರಾಯ ಗೋಪಾಲರಾಯರಿಗೆ ಖಂಜೀವರಾಯರಿಗೆ, ಅದೇಕೆ? ದೇಶಪ್ರೇಮಿ ಪೋಲೀಸ ಹನುಮಪ್ಪನಿಗೆ ಕ್ಷಮಾಯಾಚನೆಮಾಡಿ ದ್ರೋಹ ಬಗೆದ ಕಾಂಗ್ರೆಸ್ ಕಾರ್ಯಕರ್ತ ಬಸಪ್ಪ—ಹೀಗೆ ಈ ಪಾತ್ರಗಳ ತ್ರಿಕೋನವಿಟಿ-ರೂಢ ಅರ್ಥದಲ್ಲಿ ಬಲ್ಲ ಮತ್ತೆ! —ಸಾಧಿಸಿದ್ದು ಇದೆಲ್ಲ ಸಳಗಿನ ಕೈಚಳಕದ ಫಲವೇ ಹೊರತು ಹೇತುಪೂರ್ವಕ ಹುಚಿಕೆ ಅಲ್ಲ.

ಸಾಮಾನ್ಯವಾಗಿ ಬಿ. ಸ. ಕೃ. ರ ಕೃತಿಗಳಲ್ಲಿ ಅವರು ಹೊಗಳಿ ಹೆಸರಿಟ್ಟ ನಾಯಕಪಾತ್ರಗಳೇ ತಮ್ಮ ಮಟ್ಟಕ್ಕೆ ನಿಲುಕದೆ ಮುಗ್ಗರಿಸುತ್ತವೆ; ಆದರೆ ಎರಡನೆಯ ಮೂರನೆಯ ತರಗತಿಯ ಪಾತ್ರಗಳು ತುಂಬ ಜೀವಂತವಾಗಿ ನಡೆದಾಡುತ್ತವೆ. ಕಾರಂತರಲ್ಲಿ ಪಾತ್ರಗಳೆಲ್ಲ ಕಳೆತುಂಬಿ ಕಳಕಳಿಸುತಿದ್ದರೂ, ಕಾದಂಬರಿಯ ರಚನೆಯಲ್ಲಿ ಕೌಶಲ್ಯಕ್ಕೆ—ಉಚಿತ ಎಣಿಕೆ ಹೆಣಿಕೆಗಳಿಗೆ—ಅಷ್ಟೊಂದು ಗಮನವಿರುವುದಿಲ್ಲ. ಅಲ್ಲದೆ ಹಲವೊಮ್ಮೆ ಮೂರು ಕಾದಂಬರಿಗಳಿಗೆ ಸಾಲುವಷ್ಟು ಜೀವನಾನುಭವದ ಮೂಲದ್ರವ್ಯ ಒಂದು ಕಾದಂಬರಿಯಲ್ಲಿ ಜಡಿದು ತುಂಬಿರುತ್ತದೆ. ಇವೆರಡೂ ಪ್ರಮಾದಗಳು. ಕೃಷ್ಣಶರ್ಮರಲ್ಲಿ ಈ ಹದ ತಪ್ಪಿರುವುದು ಕಡಮೆ. ವರ್ಣನಾತಿರೇಕದ ಮೋಹ ಬಿಟ್ಟರೆ "ಮಗಳ ಮದುವೆ" ಒಂದು ಪ್ರಮಾಣಬದ್ಧ ಕೃತಿ. ವಾತಾವರಣ, ವಸ್ತುವೈವಿಧ್ಯ, ವಿಭಿನ್ನ ವ್ಯಕ್ತಿತ್ವದ ಮಾದರಿ, ವಾದ-ವಿವೇಚನೆ, ರಾಷ್ಟ್ರೀಯತೆ, ಮಾನವತೆಯ ಕು[illegible] ಲೇಖಕನ ಸಂದೇಶ, ಪ್ರಾದೇಶಿಕ ವೈಶಿಷ್ಟ್ಯ.—ಇವೆಲ್ಲವೂ ಮೂಲಕಥೆಯ ಸ್ವಾರಸ್ಯಕ್ಕೆ ತೀರ ಸಮಂಜಸವಾಗಿ ಅಳವಟ್ಟಿವೆ, ಕಳಿಕಟ್ಟಿವೆ.

ರಚನೆಯ ಕಟ್ಟನಲ್ಲಿ ಇನ್ನಿಷ್ಟು ಆಧುನಿಕತೆ ಅಥವಾ ನಾದಮಯತೆ ತರಬಹುದಿತ್ತು. ಉದಾಹರಣಾರ್ಥವಾಗಿ ಕಥೆಯು ಎರಡನೆಯ ಪ್ರಕರಣದಿಂದ ಪ್ರಾರಂಭವಾಗಿ, ಕುಮುದೆ ಕಟಕಿಯೊಳಗಿಂದ ರತ್ನಾಕರನ ಸ್ವಯಂಸೇವಕದಲದ ಕೂಜು ನೋಡುತಿದ್ದಂತೆ ಒಂದು 'ಹಿಂಝಳಕ' Flash back ಕೊಟ್ಟು, ಕನ್ಯಾಪರೀಕ್ಷೆಯ ಪ್ರಥಮಾಧ್ಯಾಯ ಪ್ರತಿಲೋಮ ತಂತ್ರದಿಂದ ಬಂದರೆ, ಅದು ಹೆಚ್ಚು ಆಕರ್ಷಕವಾಗುತ್ತಿತ್ತು. ವರ್ಣನೆಯ ವಿವರಣೆಯ ವ್ಯಾಮೋಹದಲ್ಲಿ ಲೇಖಕ ಮುನ್ಶಿ ಪ್ರೇಮಚಂದರನ್ನು ಹೋಲುತ್ತಾನೆನ್ನಬೇಕು. ಇಲ್ಲವಾದರೆ ನಡುರಾತ್ರಿಗೆ ಪೋಲಿಸ ಪಡೆಯ ಹುದುಕಾಟದ ಕಾಟದಿಂದ ತಪ್ಪಿಸಿಕೊಳ್ಳುವ ಧಾವತಿಯಲ್ಲಿಯೂ ನಿಂಗಪ್ಪನ ಮನೆಯ ಚಿತ್ರಣ. ಅಲ್ಲಿಯೂ ಆ ವಿಮನಸ್ಕತೆಯಲ್ಲಿಯೂ ರತ್ನಾಕರನ ಪಾಪಭೀರು ಕಣ್ಣಿನಿಂದ ಕಾಶವ್ವನ ಗ್ರಾಮೀಣ ಸ್ತ್ರೀ ಸೌಂದರ್ಯದ ವರ್ಣನೆ ಎಳೆದು ತಂದು ಮಾಡುವುದು ಔಚಿತ್ಯಕ್ಕೆ ವಿಸಂಗತವೆನಿಸುತ್ತದೆ. ಚಿತ್ತವೃತ್ತಿಯ ಒಂದು ವಿಪರ್ಯಾಸವದು.

ಆದರೆ ಇದೊಂದು ಸ್ಥಾನ, ಮತ್ತು ರತ್ನಾಕರನ 'ವ್ಯಾಖ್ಯಾನ ಬಾಜಿ' ಯ ಅನಾವಶ್ಯಕ ಪ್ರದರ್ಶನಗಳ ಕೆಲವು ಪ್ರಸಂಗಗಳನ್ನು ಮರೆತರೆ, ಮಿಕ್ಕ ಕಥಾಸಂವಿಧಾನದಲ್ಲಿ ಲೇಖಕ ತುಂಬ ಕಲಾತ್ಮಕತೆಯನ್ನು ಪ್ರಕಟಿಸಿದ್ದು ಕಂಡುಬರುತ್ತದೆ. ವೆಂಕಣ್ಣನ ಮತ್ತು ಅವನ ಸಂಗಡಿಗರ ಉಂಡಾಡಿ-ಉಪಬ್ಯಾಪಿತನದ ಚಿತ್ರಣ ಒಳ್ಳೆ ನೈಜತೆಯದಾಗಿದೆ. ವೆಂಕಣ್ಣನ ನಾಟಕದ ಹವ್ಯಾಸಕ್ಕೆ ಅನುಕೂಲವಾಗಿ ತತ್ಕಾಲೀನ ಜನಪ್ರಿಯ ಬಾಲಗಂಧರ್ವನ "ಪ್ರೇಮ ನಚ ಜಾಯಿ!" ಈ ಹಾಡಿನ ಪಲ್ಲವಿ ಅವನ ಬಾಯಿಯಲ್ಲಿ ಇದ್ದದ್ದು ಉಚಿತವೇ ಸರಿ. ಮೊದಲನೆಯ ಪ್ರಕರಣದಲ್ಲಿ ಮಾಯವಾಗುವ ಕರವಸ್ತ್ರದ ತುಟ್ಟಿಗಾರಿಕೆಯನ್ನು ಈ ಉಪದ್ವ್ಯಾಪಿಗಳ ಮಾತಿನಲ್ಲಿಯೇ ತಂದದ್ದು ಅಷ್ಟೇ ಮರ್ಮಿಕವಾಗಿದೆ. ಅದೇ ರೀತಿ ತೋರಿಕೆಗೆ ತೀರ ಅಪ್ರಸ್ತುತವೆಂದೆನಿಸುವ ೩ನೆಯ ಪ್ರಕರಣದಲ್ಲಿಯ ಕಟ್ಟೆ ಇನಸ್ಪೆಕ್ಟರರ ಬಡಪರ್ಫಿಯ ಕಥನದೊಳಗಿಂದ ಏಳುವ ಇನಾಮಿನ ಚರ್ಚೆಯೂ ಮಾರ್ಮಿಕವಾಗಿದೆ. ಎಲ್ಲಕ್ಕೂ ಕೌತುಕಾಸ್ಪದವಾದ ಮಾರ್ಮಿಕ Touch ೩೦ನೆಯ ಪ್ರಕರಣದಲ್ಲಿದೆ. ರತ್ನಾಕರನು ಕುಮುದಳ ಚಿತ್ರದ ತದೇಕ ಧ್ಯಾನದಲ್ಲಿ ಆಪ್ರಕಾಶಿತ ಪ್ರೇಮದ ಗುಲಾಬಿಮುಗಿಲುಗಳಲ್ಲಿ ತೇಲಾಡಿ ಒಂದು ಭಾವೋದ್ರೇಕದ ಬಿಗುವಿನಲ್ಲಿ ಇರುವಾಗ, ಡ್ರಾಯ್ವರ್ ದತ್ತಾ ಟೊಳೆಯ ಗೊನೆ ಹೊತ್ತುಕೊಂಡು ಬರುವುದರಿಂದ ತುಂಬ ಸಹಜವಾದ ಪ್ರಾಸಂಗಿಕ ವಿನೋದದ ಪ್ರತಿರೋಧಿಯಾದ ಮುರುವು ಕಥಾ ಪ್ರವಾಹಕ್ಕೆ ಬರುತ್ತದೆ. ಹಾಗೆಯೇ ೩೫ನೆಯ ಪ್ರಕರಣದಲ್ಲಿ ಉಡಾ ಗೊರೆಗಳ ಸುರಿತು ಅನಾವಶ್ಯಕ ತತ್ತ್ವವಿವೇಚನೆ ಹೆಡೆ ಎತ್ತಿದ್ದರೂ ಮುಂದೆ ಆ ನಿಮಿತ್ತ ರತ್ನಾಕರ ಕುಮುದ ಇಬ್ಬರ ಪ್ರಣಯ ಮೋಹ ಪೆಡೆಯುವಂತಾವುಗುದೂ ಹೃದ್ಯವಾಗಿದೆ. ಈ ಹೃದ್ಯತೆಗೆ ಒಂದ

ತೀವ್ರ ಕರುಣದ ನೆರಳು ಉಂಟಾಗುತ್ತದೆ.—ಮುಂದಿನ ಪ್ರಕರಣ ಲ್ಲಿಯೇ, ರತ್ನಾಕರನ ಬಂಧನದಲ್ಲಿ! ಅಗಲಾವೆ ಮತ್ತು ಕಂಪನಿ ಯವರು ನಡುವೆ ಎರಡು ಸಲ ದುಷ್ಟ ಪ್ರಚಾರದ ಪತ್ರಗಳನ್ನು ಬರೆಯುವುದರಿಂದ, ಅವರ ಪಾತ್ರಪರಿಪೋಷಣೆಯಿಂದಿಗೆ, ಕಥೆಯಲ್ಲಿ ಅವಶ್ಯಕ ರೋಚಕತೆಯ ತೀವ್ರತೆ ಅಲ್ಲಲ್ಲಿ ಹುರಿಗೊಂಡು, ಉತ್ಕಟತೆಯ ರಸಸ್ಥಾನಗಳು ಉಂಟಾಗುತ್ತವಲ್ಲದೆ ಅವು ಇತರ ನಾಯಕ ಪಾತ್ರಗಳ ನೇಲೂ ಬೆಳಕು ಬೀರುತ್ತವೆ. ಈ ಕಾದಂಬರಿಯದು ಇದೊಂದು ನೈಪಿಸ್ಯ. ಇಲ್ಲಿ ಬರುವ ಕ್ರಿಯೆ-ಪ್ರತಿಕ್ರಿಯೆಗಳ ಒಂದೊಂದು ಘಟನೆ ಒಂದಕ್ಕಿಂತ ಹೆಚ್ಚು ಮುಖಗಳಿಂದ ಕಥಾಮರ್ಮವನ್ನು ಹೊರ-ಗೆಡಹುತ್ತವೆ. ಈ ವಿಷಯವ್ಯ ರಸಪುಷ್ಟಿಗೆ ಈಗೆ ಪೋಷಕವೋ, ಲೇಖಕನ ಕಲಾಪ್ರತಿಭೆಯೂದೂ ಹಾಗೆಯೇ ಪರಿಚಾಯಕ.

ಹಾಗಿದ್ದರೆ ಈ ಕೃತಿಯಲ್ಲಿ ದೋಷಗಳೇ ಇಲ್ಲವೆ? ಕೆಲವು ದೋಷಗಳ ಉಲ್ಲೇಖ ನೇಲೆಯೇ ಬಂದಿದೆ. ಕಾದಂಬರಿ ಆಧುನಿಕ ಯುಗದ ಗದ್ಯ ಮಾಧ್ಯಮವಾದ್ದರಿಂದ. ಆ ಬಿರುದನ್ನು ಸಾರ್ಥಕಗೊಳಿ-ಸಲೇ ಲೇಖಕರು ಹೊರಟಂತಿದೆ. ಅಷ್ಟಾದಶವಲ್ಲದಿದ್ದರೂ ಎಷ್ಟೆಲ್ಲ ವಿವಿಧ ದೃಶ್ಯ, ಪ್ರಸಂಗ-ವ್ಯಕ್ತಿಚಿತ್ರಣ ಈ ಚಿಕ್ಕ ಕಾದಂಬರಿಯಲ್ಲಿ ಒಂದೆಡೆಗೆ ತರಲಾಗಿದೆ. ವರ್ಣನೆಗೆ ವಿಷಯ ಸಾಲದುದಕ್ಕೊ ಎನ್ನು ವಂತೆ, ನಾಯಕನ ವೇಷಾಂತರಗಳೂ ಸಾಕಷ್ಟು ಇವೆ. ಹಳ್ಳಿಯ ಹಾಡು-ಜಾನಪದ ನೃತ್ಯ ಇವೆರಡು ಏಕೋ ಸಮಾವೇಶವಾಗದೆ ಉಳಿದುವು! ಲೇಖಕನ ಅಜಾಗ್ರತೆಯಿಂದ ಒಂದೆಡೆಗೆ ಗೋಪಾಲರಾಯ ಗೋವಿಂದರಾಯನಾಗಿದ್ದಾನೆ; ಶುಭದ್ರೆ ಭಾಗೀರಥಿ ಆಗುತ್ತಾಳೆ. ಕತೆಗೆ ಸಹಜ ಓಘವಿದ್ದರೂ ರಚನೆಯ ವಿಶೇಷ ಒನಪು ಒಯ್ಯಾರವಿಲ್ಲ.

ಕಾದಂಬರಿಯ ಮುಖ್ಯದೋಷ ಅದರ ಅತಿವರ್ಣಕ ಗದ್ಯ ಶೈಲಿಯಲ್ಲಿದೆ. ಲೇಖಕನು ಓದುಗರ ಕಲ್ಪನೆಗೆ ವಿಶೇಷವೇನೂ ಬಿಡುವುದಿಲ್ಲ. ಎಲ್ಲವನ್ನೂ ತಾನೇ ವಿವರವಾಗಿ ವಿಸ್ತಾರವಾಗಿ ವರ್ಣಿ-ಸುತ್ತ ವಿವೇಚಿಸುತ್ತ ಸರಾಗವಾಗಿ ಸಾಗುತ್ತಾನೆ. ಇದರಿಂದ ಒಂದು ರೀತಿ ಬಾಲಬೋಧಕಳಿ ಇಲ್ಲಿಯ ಗದ್ಯಕ್ಕೆ ಬಂದಿದೆ. ಇದರ ಇನ್ನೊಂದು ದೋಷ ಗದ್ಯಶೈಲಿಯ ಗ್ರಾಂಥಿಕತೆ. ಸಮ್ಮಿಶ್ರವಾಕ್ಯ ಬುದ್ಧಿವಾದದ ಅವ್ಹಾನ ಹೊರತು ಭಾವದ ಅಭಿವ್ಯಕ್ತಿಗೆ ಯೋಗ್ಯವಾಹನವಲ್ಲ. ಇಲ್ಲಿಯ ಗದ್ಯ ಅದೇಕೋ ಸುಟಿಯಾಗಿ ಸ್ಫೂರ್ತಿಯುಕ್ತವಾಗಿ ಮಯಣದ ಮಾರ್ದವವನ್ನು ಇಟ್ಟುಕೊಂಡಿಲ್ಲ. ಇದರಿಂದ ಕಥೆಗೆ ಪ್ರವಾಹಿತ್ವ ಇಲ್ಲವೇ ವೇಗ ಬರುವುದಿಲ್ಲ, ಎಲ್ಲ ವಿಲಂಬಿತವಾಗಿ ನಡೆ-ಯುತ್ತದೆ; ಆದರೂ ಇಲ್ಲಿಯ ಶೈಲಿ ಪ್ರಾಮುಖ್ಯವಾಗಿ ಕನ್ನಡ ಕಥಾಲೇಖನದ್ದು. ಪಾಶ್ಚಾತ್ಯ ಇಲ್ಲವೆ ಇತರ ವರ್ಚಸ್ಸಿನ ಛಾಯಾಗಿಲ್ಲ. ಇದು ಅಂದವೋ ಕುಂದೋ ಅವರವರ ರುಚಿಯ ಪ್ರಶ್ನೆ.

ಕಾದಂಬರಿಕಾರರು ಕವಿಗಳೂ ಆಹುದು. ಈ ಕವಿಹೃದಯ ಮಾನವತೆಯ ದಿವ್ಯಮಧುರ ರಮ್ಯಗಂಭೀರ ಸಂದೇಶವನ್ನು ಮೊಳಗು-ತ್ತದೆ. ಹೆಣ್ಣುಗಳೆಲ್ಲ ತಾಯ್ತನದ ಕರುಣವನ್ನು ಅರಳಿಸುತ್ತಾರೆ. ಒಬ್ಬ ಕನ್ಯೆಯ ಕಲ್ಯಾಣ ಕಟ್ಟಲಿಕ್ಕಾಗಿ ದೇಶಕಾರ್ಯವನ್ನು ಕೆಲಕಾಲ ಬದಿಗಿಟ್ಟ ಒಬ್ಬ ಅಪೂರ್ವ ರಾಷ್ಟ್ರಸೇವಕನ ಈ ಕಥೆ, ಮಾನವ್ಯದ ಯಶೋಗೀತ, ವಿಜಯಗಾಥೆ. "ನಾನು ನಿಜವಾಗಿಯೂ ಸತ್ಯಾ-ಗ್ರಹಿಯೇ?" ಅತ ಸಂಶಯಪಡುತ್ತಾನೆ. ಆದರೆ "ಪ್ರಾಮಾಣಿಕ-ನಾದ ಒಬ್ಬನೇ ಒಬ್ಬ ಮನುಷ್ಯ ಎಷ್ಟೊಂದು ಒಳ್ಳೆಯದನ್ನು ಮಾಡಬಲ್ಲ ಲೋಕಕ್ಕೆ" ಎಂದು ಓದುಗನಿಗೂ ಎನಿಸುವುದು, ಈ ಸತ್ಯಾಗ್ರಹಕ್ಕೆ ಹೋಗದ "ಸದಾಗ್ರಹಿ" ಯ ಕಥೆ ಓದಿ!

ಸ್ವಪ್ನ ಗೃಹ

ಆರ್. ಜಿ. ಕುಲಕರ್ಣಿ, (ಬೆಳಗಾವಿ)

೧

ಓ ಯಾವ ಸ್ವಪ್ನ ಗೃಹವಿದುವು ಇಲ್ಲಿ ನಾನೇಕೊ ಬಂದುನಿಂತೆ ?
ಅದೊ ಮಿಂಚುತಿಹುದು ಘಟಸರ್ಪವಲ್ಲಿ ಮನಕಿಲ್ಲವೇಕೊ ಚಿಂತೆ ?
ಹೊರತ್ತನಿಲಿಯನ್ನು ಮಲಗಿರುವ ನಭದಿ ನಕ್ಷತ್ರ ಪುಂಜ ಪುಂಜ !
ಒಳಗಿತ್ತ ಸ್ವ[illegible]ಂದಿರದ ಗೋಡೆಯೊಂದೊಂದು ವರ್ಣ ಕುಂಜ !

೨

ಏನೇನೋ ಮೂರ್ತಿ ಏನೇನೊ ಚಿತ್ರ ನಿಂತಾವ ಕತ್ತಲಾಗ,
ಅವು ಕಾಣಬೇಕು ಆ ಸರ್ಪ ಚರ್ಮ ಆಗೀಗ ಮಿಂಚಿದಾಗ,
ಓ ವಿಧಿಯೆ! ಮನಕೆ ಬೆಳಕಿದ್ದ ಬಿಟ್ಟು ಕಲ್ಪನೆಯು ಇಲ್ಲವಲ್ಲಾ
ಸುಮುಮುಮ್ಮು ನಿಂತ ಕತ್ತಲಿನ ಕೂಡ ತಾ ಬೆರೆತು ಹೋಯಿತಲ್ಲಾ !

೩

ನನಗೆಟುಕದಲ್ಲ ನಗೆಮುತ್ತಿನಂಥ ನಕ್ಷತ್ರ ಜ್ಯೋತಿ ಕೈಗೆ
ಅಷ್ಟಲ್ಲ ಮತ್ತೆ ನೀರವತೆ ಮುತ್ತಿ ನಿಂತಿಹುದು ಒಳಗೆ ಹೊರಗೆ
ಭಯವೆಲ್ಲ ಹೋಯ್ತು ಘಟಸರ್ಪವಾಗಿ ದೋಕಾಡುತಿರುವದೇನು ?
ಘನ ನಿದ್ರೆಯಲ್ಲಿ ನಸುದೆಳಕು ಸೂಸಿ ಈ ಸ್ವಪ್ನವಾಯಿತೇನು ?

೪

ಇದು ಜಲವು ತಳೆದ ನವಗೂಢ ನಿಲವು ಬೆಳಕಿರುಳಿತಾವೆನೇನು ?
ಇದರಾಚೆಗೇಚೆಗೇನುಂಟೊ ತಾನು ಇದನರಿಯ ಬಲ್ಲೆನೇನು ?
ಈ ಸ್ವಪ್ನಗೃಹದೊಳಿರುವಾಗಲೇನೆ ನನಗಿರಲಿ ಎಚ್ಚರೆಂಬೆ !
ಓ ತಾಯಿ ನಿನಗೆ ತಲೆಬಾಗಿ ನಿಲುವೆ ಶ್ರೀ ಕರುಣೆಯಿರಲಿಯೆಂಬೆ

ಅಮೃತಸರದಲ್ಲಿಯ ಸುವರ್ಣಮಂದಿರ

(ಗುಂಡೂಮಾಮಾನ ಯೋಚ್ಕಿ)

ಶ್ರೀ.. ಪಿ. ವಿ. ಗುಡಿ, ಸ್ಕೂದಿಲ್ಲಿ

ಅಮೃತಸರೋದರವಿದ್ದ ನಗರ 'ಅಮೃತಸರ' ಎಂದು ಹೆಸರುಪಡೆಯಿತು. ಇದಕ್ಕೂ ಸ್ಥಳಪುರಾಣವಿದೆ. ಸಿಖರ ಗುರುದ್ವಾರದ ನೈವಿಶ್ಯವೇನು? ಗುರುದ್ವಾರದಲ್ಲಿ ಇರುವ 'ಲಂಗರ್' ಎಂಬ ಹೆಸರಿನ ಭೋಜನಶಾಲೆಗಳ ಅಗಷ್ಯವು ಏಳಿ ಉಂಟಾಯಿತು?

'ಇವೊತ್ತಾದರೂ ಗುಂಡೂಮಾಮಾ ಮನೆಯಲ್ಲಿ ಇರುತ್ತಾರೋ ಇಲ್ಲವೋ' ಎಂದು ಯೋಚಿಸುತ್ತಲೇ ನಾನು, ಶೀನಪ್ಪ, ರಂಗೆಣ್ಣಿ ಹೊರಟಿದ್ದೆವು. ದಾರಿಯಲ್ಲಿ ಶಾಸ್ತ್ರಿಯೂ ಕಿಟ್ಟುವೂ ನಮ್ಮನ್ನು ಕೂಡಿದರು. ಅವರು ಕೂಡ ಅದೇ ಯೋಚನೆಯಲ್ಲಿಯೇ ಇದ್ದಂತೆ ತೋರಿತು. ಅದರೆ ಬಾಗಿಲಲ್ಲಿಯೇ ನಿಂತಿದ್ದ [illegible]ಮಾಮಾನನ್ನು ದೂರದಿಂದಲೇ ನೋಡಿ, ನಮಗೆಲ್ಲ ಒಳ್ಳೇ [illegible]ೋಷವಾಯಿತು. ನಾವು ಸಮೀಪಿಸುತ್ತಲೇ 'ಬನ್ನಿರಿ, ನಾನು ನಿಮ್ಮ ದಾರಿಯನ್ನೇ ಕಾಯುತ್ತಿದ್ದೆ. ಈಗ ೩-೪ ದಿವಸಗಳಿಂದಲೂ ನೀವು ಬಂದು ನಿರಾಶರಾಗಿ ಹೋಗುತ್ತಿದ್ದಿರಿಂದು ಕೇಳಿ, ಇಂದು ಬರುವಿರೋ ಇಲ್ಲವೋ ಎಂದು ಗಾಬರಿಯಾಗಿದ್ದೆ!' ಎಂದು ನಮ್ಮನ್ನು ಸ್ವಾಗತಿಸಿದರು. 'ಬಹಳೇ ಅಗತ್ಯದ ಕೆಲಸದ ಸಲುವಾಗಿ ಕೂಡಲೇ ಹೊರಡಬೇಕಾಗಿ ಬಂದದ್ದರಿಂದ ನಿಮಗೆ ಹೇಳಿ ಹೋಗುವುದು ಕೂಡ ಅಸಾಧ್ಯವಾಯಿತು.' ಎಂದರು.

'ಏನು ಗುಂಡೂಮಾಮಾ, ಇಲೆಕ್ಶನ್ ಟೂರಮೇಲೆ ಹೋಗಿದ್ದಿರಾ?' ಎಂದು ಕಿಟ್ಟು ಚೇಷ್ಟೆಮಾಡಿದ.

'ಇಲೆಕ್ಶನ್ ತೆಗೆದುಕೊಂಡು ನಮ್ಮಂತಹ ಮುದುಕರೇನು ಮಾಡಬೇಕಾಗಿದೆ? ಅದು ನಿಮ್ಮಂತಹ ನವಶರುಣರ ಕೆಲಸ!' ಎಂದು ಗುಂಡೂಮಾಮಾ ಉತ್ತರ ಕೊಟ್ಟರು.

'ನಿಮ್ಮ ಅಮೃತಸರದ ಮಿತ್ರನ ಪತ್ರವನ್ನು ಕೇಳಲಿಕ್ಕೆ ನಾವೆಲ್ಲ ಉತ್ಸುಕರಾಗಿದ್ದೆವು. ಅದರೆ ಮರುದಿವಸ ನೀವು ಸಿಗಲೇ ಇಲ್ಲ.' ಎಂದು ನಾನು ನುಡಿದೆ.

ಕೂಡಲೇ ಕಿಟ್ಟು 'ಭವನ ಜರ್ನಲ್'ನಲ್ಲಿ ಶ್ರೀ. ದವೆಯವರು 'Immortal India' ಎಂಬ ಲೇಖನದಲ್ಲಿ, ಅಮೃತಸರದ ವಿಷಯು ತಾಗಿಯೂ ಬರೆದಿದ್ದಾರೆ. ಅಷ್ಟೇ ಇರಬಹುದು' ಎಂದು ಹೇಳಿದ.

ಗುಂಡೂಮಾಮಾ ಕಿಟ್ಟುವಿನ ಕಡೆಗೆ ತಿರುಗಿ 'ಅವರು ಅಮೃತಸರದ ವಿಷಯವಾಗಿ ಬರೆದದ್ದು ನಿಜ. ಆದರೆ ಅದನ್ನು ಅವಲೋಕಿಸುವ ರೀತಿ ಬೇರೆಯಾಗಿದೆ ಯಾವುದೇ ವಸ್ತುವಾಗಲಿ, ಸ್ಥಳವಾಗಲಿ, ಅದು ನೋಡುವವರ ಮೇಲೆ ಅವಲಂಬಿಸಿರುತ್ತದೆ. ನಮ್ಮ ರಂಗಣ್ಣನೇ ದಿಲ್ಲಿ ಆಗ್ರಾದ ಕಡೆಗೆ ಹೋದರೆ, ಅತನು ಅಲ್ಲಿಯ ಕೆಂಪುಕೋಟೆ ಕುತುಬಮಿನಾರ್, ತಾಜಮಹಾಲ್ ಮತ್ತು ಬೇರೆ ಬೇರೆ ಬಾದಶಹರ ಗೋರಿ—ಇವುಗಳನ್ನು ನೋಡುವುದರಲ್ಲಿಯೇ ತನ್ನ ಎಲ್ಲ ವೇಳೆಯನ್ನು ಕಳೆಯಬಹುದು; ಅದರೆ ನಮ್ಮ ಶಾಸ್ತ್ರಿ ಹೋದರೆ, ಮಥುರಾ—ವೃಂದಾವನಗಳನ್ನು ನೋಡುವುದರಲ್ಲಿ ಹೆಚ್ಚು ವೇಳೆ ತೆಗೆದುಕೊಳ್ಳಬಹುದು. ಬದರೀನಾಥಕ್ಕೆ ಹೋಗಿಬರುವ ಯಾತ್ರಿಕರು ದಿಲ್ಲಿ—ಆಗ್ರಾಗಳಿಗೆ ಹೋಗದೆ ಮಥುರಾ—ವೃಂದಾವನಕ್ಕೆ ಇಳಿಯುತ್ತಾರೆ. ನರ್ಮದಾ ನದಿಯು ಜಬಲ್‌ಪುರದಲ್ಲಿ ಇದ್ದರೂ ಅಲ್ಲಿ ಇಳಿದು ಸಂಗಮರವರ ತಿಲೆಗಳನ್ನು ನೋಡುವುದನ್ನು ಸಹ ಬಿಟ್ಟು, ಎಲ್ಲ ಯಾತ್ರಿಕರು ಹೊಸಂಗಾಬಾದಕ್ಕೆ ನರ್ಮದಾಸ್ನಾನಕ್ಕಾಗಿ ಇಳಿಯುತ್ತಾರೆ. ಇದು ನೋಡು ಕಿಟ್ಟು, ನೀನು ಹೇಳಿದ ಶ್ರೀ. ದವೆಯವರ ಲೇಖನದಲ್ಲಿ ಅವರು ಅಮೃತಸರದ ಬಗ್ಗೆ ಬರೆದಿದ್ದರೂ, ಅದರಲ್ಲಿ ರಾಮತೀರ್ಥದ ಸಲುವಾಗಿ ಏನೂ ಬರೆದಿಲ್ಲ; ಅದರೆ ನನ್ನ ಮಿತ್ರರು ಅಮೃತಸರದ ಬಗ್ಗೆ ಬರೆಯುವಾಗ ಮೊದಲಿಗೇ ಅದನ್ನು ಬರೆದಿದ್ದಾರೆ. ಅಂದ ಬಳಿಕ ನನ್ನ ಮಿತ್ರರ ದೃಷ್ಟಿಯಲ್ಲಿ ಮುಖ್ಯವಾದುವುಗಳು ಶ್ರೀ. ದವೆಯವರಿಗೆ ಗೊತ್ತುಸಹ ಇವೆಯೋ ಇಲ್ಲವೋ ಎಂದು ಸಂಶಯು ಬರುತ್ತದೆ. ನನ್ನ ಮಿತ್ರರು ಸುವರ್ಣಮಂದಿರದ ಬಗ್ಗೆ ಬರೆದದ್ದು—ಸುಂದರ ಸರೋವರದ ಮಧ್ಯದಲ್ಲಿ ವಿರಾಜಿಸುವ ಸುವರ್ಣಮಂದಿರ, ಬೆಳುದಿಂಗಳಲ್ಲಿ ಕಾಣುವ ಅದರ ಸೌಂದರ್ಯ—ಮುಂತಾಗಿ ವರ್ಣಿಸುವ ಶಾಲೆಯ ಹುಡುಗರ ನಿಬಂಧವಲ್ಲ, ಸಿಖರಷ್ಟೇ ಅಲ್ಲದೆ ಉಳಿದವರು ಸಹ ಅದಕ್ಕೆ ತೋರುವ ಭಕ್ತಿ, ಅದರ ಸಲುವಾಗಿ ಸಿಖರು ಮಾಡಿದ ಬಲಿದಾನ—ಇವುಗಳ ಸಂಬಂಧವಾಗಿ ಹೆಚ್ಚಿಗೆ ಬರೆದಿದ್ದಾರೆ.'

ಕಿಟ್ಟುವು ಅಷ್ಟಕ್ಕೆ ಸುಮ್ಮನಾದ. ಗುಂಡೂಮಾಮಾ ಪತ್ರ ತೆಗೆದು ಓದತೊಡಗಿದರು:

'ವಿಜಯನಗರ ರಾಜ್ಯಸ್ಥಾಪನೆಯ ಕಾಲಕ್ಕೆ ವಿದ್ಯಾರಣ್ಯರು ತಪಸ್ಸು ಮಾಡುತ್ತಿದ್ದಾಗ, ವಿಜಯನರದ ಪಟ್ಟಣದ ಸ್ಥಳವನ್ನಾರಿಸುವುದಕ್ಕೆ ಕಾರಣೀಭೂತವಾದ ಚಿಗರಿ ಮತ್ತು ಬೇಟೆನಾಯಿಗಳ ಕತೆಯಂತೆ, ಅಮೃತಸರ ಕಟ್ಟಿಸುವುದಕ್ಕೆ ಕೂಡ ಒಂದು ಕತೆಯನ್ನು ಹೇಳುತ್ತಾರೆ. ದುರಿಜಂದ ಎಂಬೊಬ್ಬ ಸಾಹುಕಾರನ ಮಗಳು— ರಜನಿ ಮತ್ತು ಬೇನೆಯಿಂದ ಬಳಲುವ ಅವಳ ಪತಿ, ಪ್ರವಾಸಕ್ಕೆ ಹೊರಟಾಗ, ಒಂದು ಗಿಡದ ಬುಡಕ್ಕೆ ತಂಗಿದರು. ರಜನಿ ತಿನ್ನಲಿಕ್ಕೆ ಏನಾದರೂ ತರಬೇಕೆಂದು ಬೇರೆ ಕಡೆಗೆ ಹೋಗಿದ್ದಳು. ಆಗ ಅವಳ ಪತಿಯು ಗಿಡದ ನೆರಳಲ್ಲಿ ಮಲಗಿಕೊಂಡು, ಹತ್ತಿರವೆ ಇದ್ದ ಒಂದು ಚಿಕ್ಕ ಹೊಂಡದ ಕಡೆಗೆ ನೋಡುತ್ತಿದ್ದನು. ಕಾಗೆಗಳು ಬಂದು ಅದರಲ್ಲಿ ಸ್ನಾನಮಾಡಿ ಬೆಳ್ಳಗೆ ಹಂಸಗಳಾಗಿ ಹಾರಿ ಹೋಗುತ್ತಿದ್ದುವು. ಅದನ್ನು ನೋಡಿ ಒಳ್ಳೇ ಸೋಜಿಗಗೊಂಡು ಅವನೂ ಹೋಗಿ ಅದರಲ್ಲಿ ಸ್ನಾನ ಮಾಡಲು, ರೋಗವೆಲ್ಲ ಗುಣಹೊಂದಿ ಅವನೊಬ್ಬ ಒಳ್ಳೇ ಸುಂದರ ದೃಢಕಾಯದ ತರುಣನಾದನು. ಅಷ್ಟರಲ್ಲಿ ಅಲ್ಲಿಗೆ ಬಂದ ಅವನ ಹೆಂಡತಿಯು, ತನ್ನ ಗಂಡನನ್ನು ತಾನೇ ಗುರುತಿಸದಾದಳು. ಅನಂತರ ಸಮೀಪದಲ್ಲಿದ್ದ ಗುರು ರಾಮದಾಸರು (ಸಿಖರ ನಾಲ್ಕನೆಯ ಗುರು) ಆ ಸ್ಥಳದ ಮಹತ್ತ್ವವನ್ನು ಹೇಳಿ, ಅಲ್ಲಿಯೇ ಅಮೃತ ಸರೋವರವನ್ನು ಕಟ್ಟಿಸಿದರು. (ಇದರಿಂದಾಗಿಯೇ ಈ ಪಟ್ಟಣಕ್ಕೆ ಅಮೃತಸರವೆಂದು ಕರೆಯುತ್ತಾರೆ). ಈ ಸರೋವರದ ಮಧ್ಯದಲ್ಲಿಯೇ, ಇನೆಯ ಗುರುವಾದ ಗುರು ಅರ್ಜುನಸಿಂಗರು ಸುಂದರವಾದ ದರ್ಬಾರ್ ಸಾಹಿಬನನ್ನು ಕಟ್ಟಿಸಿ, ಅದನ್ನು ಸಿಖರ ಮುಖ್ಯ ಧರ್ಮಸ್ಥಳವನ್ನಾಗಿ ಮಾಡಿದರು. ಅದಕ್ಕೆ ' ಹರಿಮಂದಿರ ' ಎಂದೂ ಕರೆಯುತ್ತಾರೆ. ಗುರು ಅರ್ಜುನಸಿಂಗರು ಗುರುನಾನಕರಿಂದ ಮೊದಲಾಗಿ ಉಳಿದ ಗುರುಗಳ ಉಪದೇಶಾಮೃತವನ್ನು ಸಂಗ್ರಹಿಸಿ ಬರೆದರು. ಅದಕ್ಕೆ ' ಆದಿಗ್ರಂಥ— ಗ್ರಂಥಸಾಹಿಬಾ ' ಎಂದು ಕರೆಯುತ್ತಾರೆ. ಮೊದಲು ಗುರುವಿಗಿದ್ದ ಪ್ರಾಮುಖ್ಯತೆಯೇ ಈಗ ಈ 'ಆದಿಗ್ರಂಥ'ಕ್ಕೆ ಇದೆ. ಪ್ರತಿಯೊಂದು ಗುರುದ್ವಾರದಲ್ಲಿ ಅದರದೊಂದು ಪ್ರತಿಯನ್ನಿಟ್ಟು ಅದಕ್ಕೆ ಪೂಜೆ ಸಲ್ಲಿಸುತ್ತಾರೆ, ಅದನ್ನು ಪಠಣ ಮಾಡುತ್ತಾರೆ. ದರ್ಬಾರಸಾಹಿಬ್‌ನಲ್ಲಿ ಅದರದೊಂದು ಹಸ್ತಲಿಖಿತ ಪ್ರತಿಯನ್ನಿಟ್ಟಿದ್ದಾರೆ. ಇಲ್ಲಿ [illegible]ತಿ ದಿವಸದ ೨೪ ತಾಸೂ ಅದರ ಪಾರಾಯಣ ಮಾಡುತ್ತಾರೆ.

ಬಹಳ ವರ್ಷಗಳ ಹಿಂದೆ ಈ ಸ್ಥಳವೆಲ್ಲ ದಟ್ಟವಾದ ಅರಣ್ಯವಾಗಿತ್ತೆಂದೂ, ಇಲ್ಲಿ ಭಗವಾನ್ ಬುದ್ಧನು ಬಂದು ' ಭಿಕ್ಷುಗಳಿಗೆ ನಿರ್ವಾಣಹೊಂದಲಿಕ್ಕೆ ಇದು ಬಹು ಯೋಗ್ಯಸ್ಥಳವೆಂದೂ ಅದರಿ ಅದಕ್ಕೆ ಇನ್ನೂ ಕೆಲವು ವರ್ಷ ಹೋಗಬೇಕೆಂದೂ ಹೇಳಿದನೆಂದು ಪ್ರತೀತಿ ಇದೆ. ಗುರುನಾನಕನ ತಪಸ್ಸಿಯಲ್ಲಿ ಗುರು ನಾನಕರೂ ಕೆಲ್ಲಿ ಕೆಲವು ದಿವಸ ಇದ್ದರಂತೆ.

ಇವೆಲ್ಲವುಗಳ ಫಲವಾಗಿ ಇದೊಂದು ಸಿಖರಿಗೆ ದೊಡ್ಡ ಪುಣ್ಯ ಕ್ಷೇತ್ರವಾಗಿದೆ. ನಾವು ನಮ್ಮ ಆಯುಷ್ಯದಲ್ಲಿ ಒಮ್ಮೆಯಾದರೂ ಕಾಶಿಗೆ ಹೋಗಿ ಬರಬೇಕೆಂದು ಇಚ್ಛಿಸುವಂತೆ, ಪ್ರತಿಯೊಬ್ಬ ಸಿಖನು ಒಮ್ಮೆಯಾದರೂ ಈ ಸರೋವರದಲ್ಲಿ ಸ್ನಾನಮಾಡಿ ದರ್ಬಾರ್ ಸಾಹಿಬದ ದರ್ಶನ ಮಾಡಿಕೊಳ್ಳಲೇಬೇಕೆಂದು ಇಚ್ಛಿಸುತ್ತಾನೆ. ಸಾವಿರಾರು ಹಿಂದು ಜನರೂ ಸಹ ಬರುತ್ತಾರೆ.

ಈ ಮಂದಿರದಲ್ಲಿ ಜಾತಿಭೇದವಿಲ್ಲ; ಯಾರಾದರೂ ಬರಬಹುದು. ಇದರ ಜೊತೆಗೆ ೫೦೦-೬೦೦ ಜನರು ಇರಲಿಕ್ಕೆ ಬರುವಷ್ಟು ದೊಡ್ಡ ಧರ್ಮಶಾಲೆಯೂ ಇದೆ. ಅಲ್ಲಿಯೂ ಜಾತಿ-ವರ್ಣಗಳ ಭೇದ ಮಾಡುವುದಿಲ್ಲ ಇಲ್ಲಿ ಯಾರಾದರೂ ಬಂದು ೩-೪ ದಿವಸ ಇರಬಹುದು. ಇಲ್ಲಿಯ ಲಂಗರಿನಲ್ಲಿ ದಿನಾಲೂ ಸಾವಿರಾರು ಜನರಿಗೆ ಅನ್ನದಾನ ಮಾಡುತ್ತಾರೆ. ಅದರ ಸಲುವಾಗಿ ವರ್ಷಕ್ಕೆ [illegible] ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಖರ್ಚು ಮಾಡುತ್ತಾರೆ. "

' ಇದೇನು ಒಂದು ಹೊಸ ಹೆಸರೀ ಕೇಳಿದಂತಾಯಿತು ! ಲಂಗರ್ ಎಂದರೆ ಅನ್ನಛತ್ರವೇ ? ' ಎಂದು ಶೀನಪ್ಪ ಕೇಳಿದ.

' ಲಂಗರ್ ಎಂದರೆ ಅನ್ನಛತ್ರ ವಷ್ಟೇ ಅಲ್ಲ; ಅದಕ್ಕೂ ಹೆಚ್ಚಿಗೆ ಅರ್ಥವನ್ನೊಳಗೊಂಡಿದೆ' ಎಂದರು ಗುಂಡೂಮಾವಾ. 'ಮುಸಲ್ಮಾನರು ಮಾಡುವ ಅನ್ಯಾಯ ಅತ್ಯಾಚಾರ ಮತ್ತು ಹಿಂದುಗಳು ಪಡುತ್ತಿರುವ ದುಃಖ-ಸಂಕಟಗಳನ್ನು ನೋಡಿ ಸಿಖ ಗುರುಗಳು ಇದೆಲ್ಲದರ ಮುಖ್ಯಕಾರಣ ಹಿಂದುಗಳಲ್ಲಿಯ ಜಾತಿಭೇದವೇ ಎಂದು ಕಂಡುಕೊಂಡರು. ಅದನ್ನು ನಾಶಮಾಡುವುದಕ್ಕಾಗಿ ಪ್ರತಿಯೊಂದು ಗುರುದ್ವಾರದಲ್ಲಿ [illegible]ನ್ನು ಸ್ಥಾಪಿಸಲಾಯಿತು. ಲಂಗರಿಲ್ಲದ ಗುರುದ್ವಾರವೆ ಇಲ್ಲವೆಂದು ಹೇಳಬಹುದು. ಇಲ್ಲಿ ಪ್ರತಿಯೊಬ್ಬರಿಗೂ ಜಾತಿ-ಲಿಂಗಗಳ ಭೇದವಿಲ್ಲದೆ ಊಟಕೊಡುತ್ತಾರೆ.'

ಮತ್ತೆ ಗುಂಡೂಮಾವಾ ಪತ್ರದತ್ತ ಹೊರಳಿದರು. "ವಿಜಯನಗರ ರಾಜ್ಯದ ವಿರುದ್ಧವಾಗಿಯೇ ಬಾಹಮನಿರಾಜ್ಯ ಹುಟ್ಟಿಕೊಂಡಂತೆ, ಈ ಸಿಖ ಸಂಥವು ಮುಸಲ್ಮಾನರ ಅನ್ಯಾಯ ಅನ್ಯಧರ್ಮ ದ್ವೇಷಗಳ ಮೂಲಕ ಹುಟ್ಟಿಕೊಂಡಿತಾದ್ದರಿಂದ, ಯಾವಾಗಲೂ ಅವರವರಲ್ಲಿ ವೈಮನಸ್ಸು ಬೆಳೆದು ಸಣ್ಣಪುಟ್ಟ ಕಾಳಗಗಳು ನಡೆದೇ ಇದ್ದುವು. ಮುಸಲ್ಮಾನರಲ್ಲಿ ಒಂದು ನಂಬಿಗೆ ಇತ್ತು - ಸಿಖರು ಈ ಅಮೃತ ಸರೋವರದಲ್ಲಿ ಸ್ನಾನಮಾಡಿದರೆ ಅವರ ಶಕ್ತಿ ಇಮ್ಮಡಿ ಯಾಗುತ್ತದೆಂದು. ಆದ್ದರಿಂದ ಎಷ್ಟೋ ಸಲ ಈ ಸರೋವರವನ್ನು ಹುಗಿಸಿ ಹರಿಮಂದಿರವನ್ನು ಎಷ್ಟೋ ಸಾರಿ ನಾಶ ಮಾಡಿದರು. ಪ್ರತಿಸಾರಿಯೂ ಎಲ್ಲ ಕಡೆಯಿಂದಲೂ ಸಿಖಧರ್ಮಾಭಿಮಾನಿಗಳು ಬಂದು, ತಮ್ಮ ಜೀವದ ಹಂಗುದೊರೆದು ಕಾದಿ, ಮತ್ತೆ ಅದನ್ನು ವಶಪಡಿಸಿಕೊಳ್ಳುತ್ತಿದ್ದರು. ಮೊಗಲರ ಆಳಿಕೆಯಲ್ಲಿ ಇಷ್ಟೇ ಅಲ್ಲ, ಅನಂತರ ಸಹ ನಾದಿರಶಹ, ಮತ್ತು ಅಹಮದಶಹ ಅಬ್ದಾಲಿಯ ದಾಳಿಗಳಿಂದಲೂ ಸಿಖರು ಬಹಳೇ ಕಷ್ಟಪಡಬೇಕಾಯಿತು ಅಹಮದಶಹ ಅಬ್ದಾಲಿಯಂತೂ ಸಿಖರನ್ನು ಸಂಪೂರ್ಣವಾಗಿ ನಾಶಗೊಳಿಸಬೇಕೆಂತಲೇ ಬಂದಂತಾಗಿತ್ತು. ಹರಿಮಂದಿರವು ನೆಲಸಮವಾಯಿತು. ಸಿಖರು ಎಲ್ಲಿಯೋ ಅಡಗಿ ಕುಳಿತುಕೊಂಡರು ಇಂತಹ ಪರಿಸ್ಥಿತಿಯಲ್ಲಿ ಬಾಬಾ ದೀಪಸಿಂಗನೆಂಬವನ ನಾಯಕತ್ವದಲ್ಲಿ ಕೆಲವು ಸಿಖ ಧರ್ಮಾಭಿಮಾನಿಗಳು ಹರಿಮಂದಿರವನ್ನು ಉಳಿಸಿಕೊಳ್ಳುವುದಕ್ಕಾಗಿ ಅಮೃತಸರದತ್ತ

ಸಾಗಿದರು. ಅಮೃತಸರದಿಂದ ೭-೮ ಮೈಲಿನ ಮೇಲೆ ಘೋರ ಸಂಗ್ರಾಮವೇಪಡಿತು. ಬಾಬಾದೀಪಸಿಂಗನು ದರ್ಬಾರ್ ಸಾಹಿಬವನ್ನು ಮುಟ್ಟಿಯೇ ಪ್ರಾಣಬಿಡುವುದೆಂದು ಪ್ರತಿಜ್ಞೆ ಮಾಡಿದ್ದನು. ಯುದ್ಧದಲ್ಲಿ ದೀಪಸಿಂಗನಿಗೆ ಬಹಳ ಘಾಯವಾಗಿ, ಅವನ ಕುತ್ತಿಗೆಯು ಸಹ ಅರ್ಧ ಕೊಯ್ಯಲ್ಪಟ್ಟಿತ್ತೆಂದು ಹೇಳುತ್ತಾರೆ. ದೀಪಸಿಂಗನು ಬೀಳುತ್ತಿರುವಾಗಲೆ, ಅವನ ಅನುಯಾಯಿಗಳಲ್ಲಿ ಒಬ್ಬನು ಅಂದನಂತೆ: 'ದೀಪಸಿಂಗಜಿ, ನೀವು ದರ್ಬಾರ್ ಸಾಹಿಬನನ್ನು ಮುಟ್ಟುವೆನೆಂದು ಪ್ರತಿಜ್ಞೆ ಮಾಡಿರುವಿರಲ್ಲವೆ?' ಎಂದು; ಕೂಡಲೇ ದೀಪಸಿಂಗನು ಒಂದು ಕೈಯಿಂದ ಶಿರವನ್ನು ಗಟ್ಟಿಯಾಗಿ ಹಿಡಿದುಕೊಂಡು ಮತ್ತೊಂದು ಕೈಯಿಂದ ಯುದ್ಧಮಾಡುತ್ತ ದರ್ಬಾರ್ ಸಾಹಿಬವನ್ನು ಮುಟ್ಟಿದನೆಂದು ಹೇಳುತ್ತಾರೆ. ಆ ಸ್ಥಳದಲ್ಲಿ ದೀಪಸಿಂಗನ ನೆನಪಿಗಾಗಿ ಒಂದು ಗುರುದ್ವಾರ ಕಟ್ಟಿಸಿದ್ದಾರೆ. ಅದಕ್ಕೆ 'ಗುರುದ್ವಾರಾ ಶಹೀದ್ ಬಿಂಗಾ ಬಾಬಾ ದೀಪಸಿಂಗ' ಎಂದು ಕರೆಯುತ್ತಾರೆ. ೧೭೭೫ನೆಯ ಇಸ್ವಿಯಲ್ಲಿ ಅಬ್ದಾಲಿಯು ಭಾರತದಿಂದ ಹೋದನಂತರ, ಸಿಖರು ಮತ್ತೆ ಈ ಹರಿಮಂದಿರವನ್ನು ತಮ್ಮ ವಶಕ್ಕೆ ತೆಗೆದುಕೊಂಡರು. ಅಂದಿನಿಂದ ಅದು ಅವರ ವಶದಲ್ಲಿಯೇ ಇದೆ.

ಮುಸಲ್ಮಾನರ ಅನ್ಯಾಯ, ಅತ್ಯಾಚಾರಗಳ ವಿರುದ್ಧ ಹೋರಾಡುವುದೇ ತಮ್ಮ ಮುಖ್ಯ ಕರ್ತವ್ಯವೆಂದು ಸಿಖರು ತಿಳಿದುಕೊಂಡಿದ್ದರು. ಪ್ರತಿಯೊಂದು ಕುಟುಂಬದಲ್ಲಿಯೂ [illegible]ನಾದರೂ ಈ ಪವಿತ್ರ ಕಾರ್ಯಕ್ಕಾಗಿ ಬಲಿದಾನ ಕೊಡಲು ಸಿದ್ಧನಾಗುವುದು ಆಗಿನ ಕಾಲಕ್ಕೆ ಸಾಮಾನ್ಯ ಪದ್ಧತಿಯಾಗಿತ್ತೆಂದು ತೋರುತ್ತದೆ. ಈಗಲಾದರೂ ಸಹ ಉತ್ತರಭಾರತದಲ್ಲಿ ಎಷ್ಟೋ ಹಿಂದು ಮನೆತನಗಳಲ್ಲಿ, ಹಿರಿಯ ಮಗನು ಸೀಖನಿದ್ದು ಉಳಿದವರು ಹಿಂದುಗಳಿದ್ದು ಕಂಡುಬರುತ್ತದೆ. ಗುಡಿಗಳಿಗೆ ಹೋಗುವಂತೆ ಹಿಂದೂಜನರು ಗುರುದ್ವಾರಗಳಿಗೂ ಹೋಗುತ್ತಾರೆ.

ದರ್ಬಾರ್ ಸಾಹಿಬದ ಎದುರಿಗೆನೇ 'ಅಕಾಲ ತಖ್ತ್' ಇದೆ. ಇನೆಯ ಗುರುವಾದ ಹರಗೋವಿಂದಸಿಂಗನು ಧರ್ಮಗುರುವಷ್ಟೆ ಅಲ್ಲದೆ ಸಿಖ ಪಂಗಡಕ್ಕೆ ನಾಯಕನೂ ಆಗಿದ್ದನು. ಆಗಲೇ ತಖ್ತ್‌ವನ್ನು ಕಟ್ಟಿಸಿದ್ದು. ಅವನು ಇಲ್ಲಿ ರಾಜರಂತೆ ಸಭೆ ಸೇರಿಸಿ ನ್ಯಾಯಾನ್ಯಾಯಗಳ ನಿರ್ಣಯ ಕೊಡುತ್ತಿದ್ದನು. ರಾಜಚಿಹ್ನೆವೆಂದು ಒಂದು ಖಡ್ಗವನ್ನೂ ಉದಯೋಗಿಸುತ್ತಿದ್ದನು. ಹರಗೋವಿಂದಸಿಂಗನು ಅಮೃತಸರಕ್ಕೆ ಒಂದು ಕೋಟೆಯನ್ನು ಕಟ್ಟಿಸಿ, ಆತ್ಮರಕ್ಷಣೆಗಾಗಿ ಒಂದು ಚಿಕ್ಕ ಸೇನೆಯನ್ನೂ ಕೂಡಿಸಿದ್ದನು. ಹರಗೋವಿಂದಸಿಂಗ ಮತ್ತು ಹತ್ತನೆಯ ಗುರುವಾದ ಗುರುಗೋವಿಂದಸಿಂಗ ಇವರು ಉದಯೋಗಿಸಿದ ಆಯುಧಗಳನ್ನು ಈ ಅಕಾಲ-ತಖ್ತ್‌ದಲ್ಲಿ ಇನ್ನೂ ಇಟ್ಟಿದ್ದಾರೆ."

ಗುರುಗೋವಿಂದಸಿಂಗರ ಹೆಸರು ಕೇಳಿದಕೂಡಲೆ ರಂಗಣ್ಣ ಬಡಿದೆಬ್ಬಿಸಿದವರಂತೆ ಗಡಬಡಿಸಿ ಕೇಳಿದ: 'ಗೋವಿಂದಸಿಂಗರ ಸಂಬಂಧವಾಗಿ ಏನು ಬರೆದಿದ್ದಾರೆ? ಈ ಗುರುಗೋವಿಂದಸಿಂಗರು ಇಲ್ಲದಿದ್ದರೆ ಸಿಖರ ಹೆಸರೇ ಉಳಿಯುತ್ತಿರಲಿಲ್ಲ. ಗುರುನಾನಕರು ಈ ಧರ್ಮದ ಸಂಸ್ಥಾಪಕರಾದರೆ, ಔರಂಗಜೇಬನ ಕೈಯಲ್ಲಿ ಸಿಲುಕಿ ಪ್ರಾಣಬಿಡುತ್ತಿದ್ದ ಸಿಖರನ್ನು ಮತ್ತೆ ಒಂದುಗೂಡಿಸಿ ಅವರಲ್ಲಿ ಧೈರ್ಯ ತಂದುಕೊಟ್ಟು, ಹೊಸ ಜೀವಕಳೆಯನ್ನು ತುಂಬಿ, ಅವರನ್ನು ಒಂದು ಬಲಾಢ್ಯ ಜನಾಂಗವನ್ನಾಗಿ ಮಾಡಿದ ಕೀರ್ತಿ ಗುರುಗೋವಿಂದ ಸಿಂಗರಿಗೆ ಸಲ್ಲತಕ್ಕದ್ದು.'

'ನನ್ನ ಮಿತ್ರರು ಸುವರ್ಣಮಂದಿರದ ಇತಿಹಾಸ ಬರೆದಿದ್ದಾರೆ; ಗುರುಗೋವಿಂದಸಿಂಗರದಲ್ಲ' ಎಂದು ನುಡಿದು, ಮತ್ತೆ ಗುಂಡೂಮಾಮಾ ಪತ್ರದತ್ತ ಹೊರಳಿದರು: "ಪಂಜಾಬದ ಸಿಂಹನೆಂದು ಹೆಸರಾದ ರಣಜಿತಸಿಂಹರಿಗೆ ಈ ಗುರುದ್ವಾರದ (ದರ್ಬಾರ್ ಸಾಹಿಬ) ಮೇಲೆ ಬಹಳ ಭಕ್ತಿವಿಶ್ವಾಸವಿದ್ದಿತಂತೆ. ದರ್ಬಾರ್ ಸಾಹಿಬವು 'ಸುವರ್ಣಮಂದಿರ'ವಾದದ್ದು ರಣಜಿತಸಿಂಹನಿಂದಲೇ. ಮೇಲೆಲ್ಲ ಬಂಗಾರದ ತಗಡನ್ನು ಕೂಡಿಸಲಿಕ್ಕೆ ಎಷ್ಟೋ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದಲ್ಲದೆ, ಎಷ್ಟೋ ಜಮೀನುಗಳನ್ನು ದಾನಮಾಡಿದ್ದಾನೆ; ಎಷ್ಟೋ ಲಕ್ಷ ರೂಪಾಯಿಗಳ ವಜ್ರವೈಡೂರ್ಯಗಳನ್ನು ಸಹ ಕೊಟ್ಟಿದ್ದಾನೆ. ಅವೆಲ್ಲವುಗಳನ್ನು ದರ್ಬಾರ್ ಸಾಹಿಬದಲ್ಲಿ ಇಟ್ಟಿದ್ದಾರೆ.' ಗುಂಡೂಮಾಮಾ ಪತ್ರ ಮಡಿಸಿ ಪಾಕೀಟಿನಲ್ಲಿಟ್ಟರು. ತುಟಿಯುವಾಗಲೇ ರಂಗಣ್ಣ ನುಡಿದ: 'ಸಿಖ ಜನಾಂಗದ ಇತಿಹಾಸದಲ್ಲಿ ಗುರುಗೋವಿಂದಸಿಂಗರ ಹೆಸರೇ ಬಹಳ ಮುಖ್ಯವಾದದ್ದು. ಮೊಗಲ ಬಾದಶಹರ ಅತ್ಯಾಚಾರದಿಂದ ಸಿಖರಿಗೆ ತಲೆ ಎತ್ತದಂತಾಗಿತ್ತು. ಜಹಾಂಗೀರನು ತನಯ ಗುರುವಾದ ಅರ್ಜುನ ಸಿಂಗನನ್ನು ಕೊಲ್ಲಿಸಿದನು. ೬ನೆಯ ಗುರುವಾದ ಹರಗೋವಿಂದ ಸಿಂಗನನ್ನು ಹನ್ನೆರಡು ವರ್ಷ ಕಾರಾಗೃಹವಾಸದಲ್ಲಿ ಇಟ್ಟಿದ್ದನು. ಔರಂಗಜೇಬನಂತೂ ಸಿಖರಿಗೆ ತೊಂದರೆಕೊಟ್ಟವರಲ್ಲಿ ಅಗ್ರಗಣ್ಯ. ಅವನು ೯ನೆಯ ಗುರುವಾದ ತೇಘ್ ಬಹದ್ದೂರನನ್ನು ದರ್ಬಾರಿಕ್ಕೆ ಕರೆಯಿಸಿ, ತನ್ನ ದೈವೀಶಕ್ತಿಯಿಂದ ಏನಾದರೂ ಅದ್ಭುತ ಕಾರ್ಯ ಮಾಡಿ ತೋರಿಸಲಿಕ್ಕೆ ಆಜ್ಞಾಪಿಸಿದನಂತೆ. ಎಷ್ಟು ಹೆದರಿಕೆ ಹಾಕಿದರೂ ಪ್ರಯೋಜನವಾಗದ್ದರಿಂದ, ಕಡೆಗೆ ಬಹು ಕ್ರೂರತನದಿಂದ ಕೊಲ್ಲಿಸಿದನಂತೆ. (ಸಿರ್ ದಿಯಾ, ಸರ್ ನ ದಿಯಾ —ತಲೆಹೋದರೂ ತನ್ನ ಗುಟ್ಟನ್ನು ಹೇಳಲಿಲ್ಲ.) ಗುರುಗೋವಿಂದಸಿಂಗನು ತಂದೆಯ ಕೊಲೆಯ ಸೇಡನ್ನು ತೀರಿಸಿಕೊಳ್ಳಬೇಕೆಂದು ಪ್ರತಿಜ್ಞೆ ಮಾಡಿದನು. ಆದರೆ ಔರಂಗಜೇಬನ ಸೈನ್ಯಬಲದ ಎದುರಿಗೆ ಏನು ಮಾಡಲಿಕ್ಕೂ ಸಾಧ್ಯವಿರಲಿಲ್ಲ. ೨೦ ವರ್ಷಗಳವರೆಗೆ ಅರಣ್ಯದಲ್ಲಿದ್ದು ತಪಸ್ಸುಮಾಡಿ ಭವಾನಿಯನ್ನು ಒಲಿಸಿಕೊಂಡನಂತೆ. ಅನಂತರ ಹೆದರಿ ಹುದುಗಿಕೊಂಡು ಕುಳಿತಿದ್ದ ಸಿಖರಲ್ಲಿ ಧೈರ್ಯ ತಂದು, ಅವರನ್ನು ಯೋಧರ ತಂಡವನ್ನಾಗಿ ನಿರ್ಮಿಸಿದ. ಅದಕ್ಕಾಗಿ ಅವನೊಂದು ಹೊಸ ಯುಕ್ತಿಯನ್ನೇ ಯೋಜಿಸಬೇಕಾಯಿತು. ಒಂದು ದೊಡ್ಡ ಉದ್ದೇಶಸಾಧನೆಗಾಗಿಯೇ ಸಿಖ ಜನಾಂಗವು ಇದೆಯೆಂದೂ, ಇವರೆಲ್ಲ 'ಖಾಲ್ಸಾ' ಎಂದರೆ ದೇವರಿಂದಲೇ ಈ ಕಾರ್ಯಕ್ಕಾಗಿ ನಿಯೋಜಿತರಾದವರೆಂದೂ, ಆದ್ದರಿಂದ ಇವರು ಕೈಕೊಂಡ ಕಾರ್ಯಗಳೆಲ್ಲೆಲ್ಲ ಜಯವು ಕಟ್ಟಿಟ್ಟದ್ದೇ ಎಂದೂ ತನ್ನ ಪ್ರತಿಯೊಬ್ಬ ಅನುಯಾಯಿಯ ಮನಸ್ಸಿನ ಮೇಲೆ ಬಿಂಬಿಸಿದ. ಈ 'ಖಾಲ್ಸಾ' ಪಂಗಡಕ್ಕೆ ಸೇರಿದವರೆಲ್ಲ ಕೆಲವೊಂದು

ನಿಯಮಗಳನ್ನು ಪಾಲಿಸಬೇಕಾಗುತ್ತಿತ್ತು—ತಮ್ಮ ಹೆಸರಿನ ಕೊನೆಗೆ 'ಸಿಂಗ' (ಸಿಂಹ) ಎಂದು ಹೆಚ್ಚಿಕೊಳ್ಳಬೇಕು; ಕೂದಲುಗಳನ್ನು ಕತ್ತರಿಸಬಾರದು; ಕಚ್ಛೆ (ಚಡ್ಡಿ)ಯನ್ನು ಧರಿಸಲೇಬೇಕು; ಕೈಯಲ್ಲಿ ಕಡೆ (ಉಕ್ಕಿನ ಕೈಬಳೆ) ಹಾಕಿಕೊಳ್ಳಬೇಕು; ಕಂಗಿ (ಹಣಿಗೆ) ಮತ್ತು ಕೃಪಾಣ (ಚಿಕ್ಕ ಕತ್ತಿ-ಜಂಬೆ)ಯಾವಾಗಲೂ ಹತ್ತಿರ ಇರಬೇಕು. ಈ ಖಾಲ್ಸಾ ಪಂಥದ ಜನರೆಂದರೆ ಮೊಗಲರ ಸಂಗಡ ಕಾದಾಡುವುದಕ್ಕೆ ಯಾವಾಗಲೂ ಸಿದ್ಧವಾಗಿದ್ದ ಯೋಧರ ತಂಡ. ವಾಗಿತ್ತು. ಈ ಖಾಲ್ಸಾಕ್ಕೆ ಕೂಡಬೇಕಾದರೆ ಮೊದಲು ಪವಿತ್ರವಾದ ನೀರನ್ನು ಕೃಪಾಣದಿಂದ ತಿರುಗಿಸಿ ಕುಡಿಯಬೇಕಾಗುತ್ತದೆ. ಈ ಖಾಲ್ಸಾ ಜನ್ಮ ತಾಳಿದ್ದರ ಮೂಲಕಾರಣ, ಔರಂಗಜೇಬನ ಪರಧರ್ಮ ದ್ವೇಷವೇ ಎಂದು ಹೇಳಬಹುದು.

ಈ 'ಗುರುಗೋವಿಂದಸಿಂಗನ ಸಂಬಂಧವಾಗಿ ಎಷ್ಟೋ ಕತೆಗಳನ್ನು ಹೇಳುತ್ತಾರೆ. ಬಹುತರವಾಗಿ ಅವು, ಅನ್ಯಾಯದ ವಿರುದ್ಧ ಆತ್ಮಸಂರಕ್ಷಣೆಗಾಗಿಯಷ್ಟೇ ಯುದ್ಧ ಮಾಡಬೇಕೆಂಬ ಅವರ ತತ್ತ್ವ. ವನ್ನು ತೋರಿಸುತ್ತವೆ. ಇಂದ್ರಿಯನಿಗ್ರಹ ಶಕ್ತಿಯೂ ಅವರಲ್ಲಿ ಅಸಾಧಾರಣವಾಗಿತ್ತೆಂದು ಹೇಳುತ್ತಾರೆ. ಒಮ್ಮೆ ಒಬ್ಬ ಸುಂದರ ಸ್ತ್ರೀಯು ಅವರನ್ನು ಕಾಮಿಸಿಬಂದು 'ನನಗೆ ನಿಮ್ಮಂತಹನೇ ಆದ ಒಬ್ಬ ಮಗನನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡಳಂತೆ. ಕೂಡಲೆ ಅವರು 'ತಾಯಿ, ನಾನೇ ನಿನ್ನ ಮಗನಿಸ್ಪೇನೆ. ನಾನು ಕೈಕೊಂಡ ಕಾರ್ಯದಲ್ಲಿ ಜಯಶಾಲಿಯಾಗೆಂದು ಹರಸಬೇಕು' ಎಂದು ಕೈ ಮುಗಿದರಂತೆ.'

ರಾತ್ರಿ ಹತ್ತರ ಗಂಟೆ ಕೇಳಬಂದಿತು. 'ಇವರ ಸಲುವಾಗಿ ಎಷ್ಟು ಹೇಳಿದರೂ ಕಡಿಮೆಯೇ. ಮತ್ತೆ ಯಾವಾಗಲಾದರೂ ಇವರ ಸಲುವಾಗಿ ಹೆಚ್ಚಿಗೆ ಹೇಳುವೆ.' ಎಂದು ರಂಗಪ್ಪನೆಂದ. ಗುಂಡೂ ಮೂವೂನ ಅಪ್ಪಣೆಪಡೆದು ಮನೆಯ ಕಡೆಗೆ ಹೊರಟೆವು. 'ನಾಳೆ ಬರಲಿಕ್ಕೆ ಮರೆಯಬೇಡಿರಿ' ಎಂದು ಗುಂಡೂಮೂವೂ ಹೇಳಿದರು.

ಪುರುಷಸೂಕ್ತವಿದು ನನ್ನದು!*

ಶ್ರೀ. ಸೇತುರಾಮು

ಜನಕನ ವಾರಸದಾರನು ನಾನು, ದುಃಖದ ಭಯವೆನಗಿಲ್ಲ—
ಸುಖ-ದುಃಖಗಳೆರಡೊಂದೇ ಸಮ ಜೀವಕೆ ಸುಖದಾಮಿಷವಿಲ್ಲ. ೧

ದುಃಖದಿಂದೆ ತುಂಬಿದೆ ಜಗವೆಲ್ಲ ಶೋಕಗೀತವೀ ಬಾಳು:—
ಅಳುಬುರಕರ ಈ ಹಾಡನು ನಾನೆಂದಿಗು ಉಸುಹಾಕೆನು ಕೇಳು! ೨

ನನ್ನೊಂದಡಿ ತ್ಯಾಗದಾ ಅಗ್ನಿಕುಂಡದಲಿ ಬೇಯುತಿಹುದು,
ಇನ್ನೊಂದಡಿ ಭೋಗದಾರಾಶಿಯಲಿ ತಾಳಹಾಕುತಿಹುದು. ೩

ಮುಕ್ತಿಯ ಹುಚ್ಚಿನಗಿಲ್ಲ ಸ್ವರ್ಗಲೋಕದ ವಾತೇತಕೆ ಬೇಕು?
ಇರದ ಸ್ವರ್ಗದಾ ಹೊಸ ಅರ್ಥವ ನಾನರಿತುಕೊಂಡೆನದೆ ಸಾಕು ೪

ಪ್ರಾಣಗಳಲಿ ಬಳಿಬಳಿ ತಿಳಿನೀಲಿಯುನೇನೊ ಅರಳಿಹವು ಹೊಸವು,
ಏನದು? ಎಂತದು? ಎಂಬುದೆನಗೆ ಓ! ತಿಳಿಯದು ಹೊಳೆಯದು
ತುಸ್ಪುವು. ೫

ಇಂದು ನನಗೆ ನಸು ಉಚ್ಚಸ್ವರದಲಿ ಹಾಡುವಾತುರವು ಒಳಗೆ,
ತುದಿನಾಲಗೆಯುಲಿ ಲಯದ ಕುಣಿತವಿದ್ದರು ನುಡಿಹೊಮ್ಮದು
ಹೊರಗೆ, ೬

ನುಡಿಯಲು ಬಾರದ ಶಬ್ದಸಮೂಹದ ಭಾವಮಯದ ಮಂತ್ರಗಳ
ಘೋಷವುಕ್ಕುತಿಪೆ ಕಂಪಿಸುತಲಿ ತನುರೋಮರೋಮ ರಂಧ್ರಗಳ. ೭

ಆಗ ಜಗದ ಕೋಲಾಹಲವೆನ್ನಯ ಕಿವಿಗಳ ಸೋಂಕಲರಿದು,
ಮಂತ್ರಗಳ ಸ್ವರಕೆ ಲಯದಲಿ ನನ್ನೆದೆ ಕುಣಿವುದಾಗ ಮೈಮರೆದು. ೮

ನಾನು ಕಣ್ಣಮುಚ್ಚಿರಲು ನನಗೆ ಕಟ್ಟಿದಿರು ನೀನೆ ಕಾಣಿಸುವೆ,
ನಿನ್ನ ರೂಪವನು ಕುಡಿದು ನಿನ್ನನೇ ಹೃದಯದಿ ನಾ ತುಂಬಿಹುವೆ. ೯

ಮರಣವನ್ನು ಚುಂಬಿಸುವೆ ಮರಣವದು ನೀಲನೀರಜವು ನನಗೆ,
ಮುದುಡಿಕೊಳುವ ಮುನ್ನವೆ ಬಿಟ್ಟೊಡುವುದಾತ್ಮಭೃಂಗವದು
ಕೊನೆಗೆ. ೧೦

ಇಷ್ಟವರಿತು ಮನವರಿಕೆಯಾಗೆ ನಾನಾರಿಗೇಕೆ ರೋಷಿಸುವೆ?
ಕರ್ಮಸೂಕ್ತವನು ಸದಾ ಹಾಡುತಲಿ ಜಗದಲಿ ನಗುನಗುತಿರುವೆ. ೧೧

ಸಾಗರವೂ ಮಧು ಭೂಮಂಡಲ ಮಧು ನೀಲಾಕಾಶವು ಮಧುವು
ವಿಶ್ವವೆಲ್ಲವೂ ಮಧು ನನಗೆನ್ನಯ ಅಂತರಂಗ ಮಧುತಮವು. ೧೨

ಪುರುಷಸೂಕ್ತವಿದು ನನ್ನದು ಮಂತ್ರಗಳವು ನನ್ನವು ಹೊಸವಿಹವು.
ಕತ್ತಲಲ್ಲಿ ಇವು ಮಿಣುಕುದೀಪಗಳ ಹೊತ್ತಿಸೆ ಬೆಳಗುತಲಿಹವು. ೧೩

ತುಳಿದ ಹಾದಿಯೊಂದೀಗ ನನಗೆ ಬೆಳಕಿನಲಿ ನಸುನೆ ಕಾಣುತಿದೆ,
ಆದಿಶೇಷನಾ ಹೆಡೆಯ ಮೇಲೆ ಧರೆ ದುಂಡಾಗಿ ತೂಗುತಿದೆ! ೧೪

* ಪ್ರಾ. ಪಂಡಿತ ಅವಧೇಶ್ವರರ ಮೂರಾರೀಕವನದ ಅನುವಾದ

ರಾಮುವಿನ ಅಜ್ಜಿ

(ಒಂದು ವ್ಯಕ್ತಿಚಿತ್ರ)

ಶ್ರೀ. ನಾ. ನರಸಿಂಹ ಮೂರ್ತಿ, ಮೈಸೂರು.

ಕೇವಲ ಬುದ್ಧಿವಾದಿಗಳ ಗುಂಪಿನಲ್ಲಿ ಅಜ್ಜಿಯನ್ನು ಅರಿಹುಜ್ಜಿಯೆಂದು ಅಡಿಕೊಳ್ಳಬಹುದು. ಅದರೆ ಹೃದಯದ ವಿಶಾಲವು ಬೇಕೆನ್ನುವವರು, ಅಜ್ಜಿಯನ್ನು ದೇವತೆಯೆಂದು ಪೂಜಿಸಬಹುದು. ಅಜ್ಜಿಯಂತಹ ಅರಳಿದ ಮನಸ್ಸು ಕುಟುಂಬದಲ್ಲಿ ಎಂಥ ಆನಂದ ನೀಡಬಲ್ಲದು!

ರಾಮು, ನಾನು ಆಪ್ತಸ್ನೇಹಿತರು. ನಮ್ಮ ಮನೆ, ಅವರ ಮನೆ ಅಕ್ಕಪಕ್ಕದಲ್ಲಿಯೇ ಇವೆ. ಅವರ ಮನೆಯವರೂ, ನಮ್ಮ ಮನೆಯವರೂ ಬಹಳ ಹಿಂದಿನಿಂದಲೂ ಒಂದೇ ಮನೆಯವರಂತೆ ನಡೆದುಕೊಂಡು ಬಂದಿದ್ದೇವೆ. ರಾಮುವಿನ ಮನೆಯಲ್ಲಿರುವವರೆಂದರೆ ರಾಮು, ಅವನ ತಂದೆ, ತಾಯಿ ಮತ್ತು ಅವನ ಮೂವರು ತಂಗಿಯರು. ಆಗಾಗ ಅವರ ಮನೆಗೆ ಅವನ ಅಜ್ಜಿ, ಅಂದರೆ ಅವನ ತಾಯಿಯ ತಾಯಿ, ಬರುತ್ತಿರುತ್ತಾರೆ. ಅಜ್ಜಿ ಇರುವುದು ಬೆಂಗಳೂರಿನಲ್ಲಿ, ತನ್ನ ಮಗ-ಸೊಸೆಯರ ಮನೆಯಲ್ಲಿ. ರಾಮುವಿನ ಅಜ್ಜಿ ನಮ್ಮ ಮನೆಯವರಿಗೆಲ್ಲ ಚಿರಪರಿಚಿತೆವಾದುದು. ನಾನು ಈಗ ಅದರ ವಿಷಯ ಸ್ವಲ್ಪ ನಿಮಗೆ ತಿಳಿಸುತ್ತೇನೆ.

ಅಂದು ರಾಮು ನನ್ನ ಬಳಿಗೆ ಬಂದು ಹೇಳಿದ: "ಬೆಂಗಳೂರಿಂದ ಕಾಗದ ಬಂದಿದೆ ಕಣೋ ಮೂರ್ತಿ!"

"ಏನು ಸವಾಚಾರ? ಯಾರು ಕಾಗದ ಬರೆದಿರೋದು?" ನಾನು ಕೇಳಿದೆ.

"ಅಜ್ಜ ಕಾಗದ ಹಾಕಿಸಿದೆ ಕಣೋ. ಇವತ್ತು ಸಂಜೆಯ ಕೈಲಿಗೆ ಬರುತ್ತಂತೆ. ಸ್ಟೇಷನ್ನಿಗೆ ಹೋಗಬೇಕು."

"ಹ್ಞೂ!"

"ನೀನೂ ಬಾ. ಇಬ್ಬರೂ ಹೋಗೋಣ. ನಂಗೊಬ್ಬನಿಗೇ ಹೋಗೋಕೆ ಬೇಜಾರು."

"ಆಗಲಿ ನಡಿಯೋ!"

ಅಂತೆಯೇ ಅಂದು ಸಂಜೆ ಇಬ್ಬರೂ ರೇಲ್ವೆ ಸ್ಟೇಷನ್ನಿಗೆ ಹೋದೆವು. ಬಹಳ ಹೊತ್ತಿನ ಮೇಲೆ ರೈಲು ಬಂದಿತು. ಹೆಂಗಸರ ಗಾಡಿಯಲ್ಲಿದ್ದ ಅಜ್ಜಿಯನ್ನು ನಾವು ಸ್ವಲ್ಪ ಕಷ್ಟದಿಂದಲೇ ಪತ್ತೆ ಹಚ್ಚಿದೆವು. ನಮ್ಮನ್ನು ಕಂಡಕೂಡಲೇ ಅಜ್ಜಿ, "ಓ ಬಂದೀರೋ? ಮೂರ್ತೀನ್ನೂ ಕರಕೊಂಡು ಬಂದೀಯೇನೋ ರಾಮು? ಸರಿ-ಹೋಯ್ತು ಬಿಡು—" ಎಂದಿತು.

ರಾಮು, "ಸಾಮಾನು ಕೊಡು ಅಜ್ಜಿ ಮುಂಚೆ" ಎಂದ.

ಅಜ್ಜಿ ಕಿಟಕಿಯಿಂದ ಮುಂಚೆ ಕೊಟ್ಟ ಸಾಮಾನೆಂದರೆ ಒಂದು ಸಾಧಾರಣ ಗಾತ್ರದ ಚಬ್ಬಿ. ರಾಮು, "ಇದೇನಜ್ಜೀ?" ಎನ್ನುತ್ತಾ ಅದನ್ನು ಕೈಗೆ ತೆಗೆದುಕೊಂಡ. ಅಜ್ಜಿ, "ಹುರಿಗಾಳು ಕಣೋ. ನಿಮ್ಮ ತಂದೇಗೆ ಇಷ್ಟಾಂತ ಮಾಡಿಕೊಂಡು ಬಂದೆ." ಎಂದು ಹೇಳಿ ಇನ್ನೊಂದು ಚಬ್ಬವನ್ನು ಕಿಟಕಿಯಿಂದ ನೀಡಿತು. ನಾನು ಅದನ್ನು ಇಸಿದುಕೊಂಡೆ. ರಾಮು ಪುನಃ, "ಇದೇನಜ್ಜೀ?" ಎಂದ.

"ಮೈಸೂರು ಪಾಕು ಕಣೋ. ಶಾಂತಂಗೆ (ರಾಮುವಿನ ತಂಗಿ) ಬಹಳ ಇಷ್ಟ ಸಿಹಿ ತಿಂಡಿ. ನಮ್ಮ ಸೊಸೆ ಕೈಲಿ ಮಾಡಿಸಿದೆ!"

ಅಜ್ಜಿ ಮತ್ತೊಂದು ಚಬ್ಬವನ್ನು ಕಿಟಕಿಯಿಂದ ಚಾಚಿತು.

ರಾಮು, "ಸರಿಹೋಯ್ತು" ಎನ್ನುತ್ತ ಅದನ್ನು ಕೈಗೆ ತೆಗೆದುಕೊಂಡ. ಅಜ್ಜಿ, "ಒಂದಿಷ್ಟು ಹೆಪ್ಪಳ ಸಂಡಿಗೆ ಅಷ್ಟೆ. ನಿಮ್ಮಮ್ಮನಿಗೆ ಇಷ್ಟ. ಹ್ಞೂ ನಿಂತುನಿಂತ ಹಾಗೇ ಹೊರಟುಬಿಟ್ಟೆ. ಇದ್ದೇ ಇದ್ರೆ ಇನ್ನಿಷ್ಟು ತಿಂಡಿ, ಒಂದಿಷ್ಟು ಚಕ್ಕಲಿ, ಕೋಡಬಳೆ ಮಾಡ್ಕೊಂಡು ಬರಬಹುದಾಗಿತ್ತು." ಎನ್ನುತ್ತಾ, ಒಂದು ದೊಡ್ಡ ಹಲಸಿನ ಹಣ್ಣನ್ನು ಕಿಟಕಿಯಿಂದ ತೂರಿಸಿತು. ನಾನು ಅದನ್ನು ತೆಗೆದುಕೊಂಡು ಪ್ಲಾಟ್‌ಫಾರಮ್ಮಿನ ಮೇಲಿಟ್ಟೆ.

ಅಜ್ಜಿ, "ದಾರೀಲಿ ಮದ್ದೂರ್ಲಿ ಕೊಂಡ್ಕೊಂಡೆ. ಅದು ಸರಿ ಕಣೋ ಮೂರ್ತಿ. ಇದಕ್ಕೆ ಹತ್ತಾಣೆ. ನಾನು ಒಂದು ರೂಪಾಯಿ ನೋಟ್ಕೊಟ್ಟೆ. ಇನ್ನು ಅವನು ವಾಪಸ್ಸು ಎಷ್ಟು ಕೊಡಬೇಕು ಹೇಳು—" ಎಂದು ಕೇಳಿತು.

"ಆರಾಣೆ" ನಾನೆಂದೆ.

"ನೋಡೋ ಇಷ್ಟು ಕೊಟ್ಟದಾನೆ, ಸರಿಯೇಂತ" ಎಂದು ಅಜ್ಜ ಟೊಂಕದಲ್ಲಿ ಸಿಕ್ಕಿಸಿಕೊಂಡಿದ್ದ ದುಡ್ಡನ್ನು ತೆಗೆದು ತೋರಿಸಿದ. ಅಲ್ಲಿದ್ದುದು ಕೇವಲ ಐದಾಣೆಗಳು. ನಾನು, "ಒಂದಾಣೆ ಕಡಿಮೆ ಕೊಟ್ಟದಾನೆ ಅಜ್ಜ" ಎಂದೆ.

ಅಜ್ಜ, "ಹಾಗೇನೋ. ಮುಂಡೇಗಂಡ ಹಾಗಾದ್ರೆ ಮೋಸ ಮಾಡ್ಬಿಟ್ಟ! ಇರಲಿ, ಎಲ್ಲಿ ಹೋಗ್ತಾನೆ ಬಿಡು. ಬೆಂಗಳೂರಿಗೆ ವಾಪಸ್ಸು ಹೋಗುವಾಗ ಸಿಕ್ಕದೇ ಇರ್ತಾನೆಯೇ! ಆವಾಗ ಛೀಮಾರಿ ಹಾಕಿ ದುಡ್ಡು ಇಸ್ಕೋತೀನಿ" ಎಂದು, ತನ್ನ ಬಟ್ಟೆಯ ಗಂಟನ್ನು ಹಿಡಿದುಕೊಂಡು ಗಾಡಿಯಿಂದ ಇಳಿಯಿತು.

ನಾವು ಕೂಲಿಯವನನ್ನು ಗೊತ್ತುಮಾಡಿಕೊಂಡು ಸಾಮಾನನ್ನು ಹೊರಕ್ಕೆ ಸಾಗಿಸಿದೆವು. ಅನಂತರ ಒಂದು ಟಿಟಕಾಗಾಡಿಯನ್ನು ಹತ್ತಿದೆವು. ಅಜ್ಜ ರಾಮುವನ್ನು ಕೇಳಿತು: "ಮನೇಲೆಲ್ಲಾ ಚೆನ್ನಾಗಿದಾರೇನೋ?"

ರಾಮು, "ಹ್ಞು— ಅಜ್ಜ" ಎಂದ.

ಅನಂತರ ನನ್ನ ಕಡೆಗೆ ತಿರುಗಿ ಅಜ್ಜ ಕೇಳಿತು, "ನಿಮ್ಮನೇಲೋ ಹುಡ್ಗಿ?"

"ನಮ್ಮನೇಲೂ ಅಷ್ಟೆ ಅಜ್ಜ!" ನಾನೆಂದೆ.

"ಹೇಗಿದಾಳೋ ವಿಮಲಾ (ನನ್ನ ತಂಗಿ)? ಈಗಲೂ ಕಾಲೇಜಿಗೆ ಹೋಗ್ತಿದಾಳೇನೋ?"

"ಹ್ಞು, ಅಜ್ಜ!"

"ಈಗಲೂ ಮದುಮೆ ಬೇಡಂತಾಳೇನೋ?"

"ಅವಳು ಓದಿದ್ದು ಮುಗಿಯೋ ವರೆಗೂ....."

"ಒಳ್ಳೇ ಓದಾಟ ಆಯ್ತಪ್ಪ. ಅವಳೂ, ಶಾಂತಾ ಇಬ್ಬರೂ ಸರೀಗಿದಾರೆ. ಹೆಂಗಸರಿಗ್ಯಾಕೋ ಓದು? ಈಗ ನಾವೆಲ್ಲಾ ಓದೇ ಇದ್ದೀವೇ? ಈಗೇನಾಗಿರೋದು ನಮಗೆ?"

"ಅಗಿನ ಕಾಲ ಒಂದು ತರ, ಈಗೊಂತರ ಅಜ್ಜ!"

"ಅದು ಸರೀನ್ನೂ. ಆಗಿನ ಕಾಲದಲ್ಲಿ ವಯಸ್ಸಿಗೆ ಬಂದ ಹುಡುಗೀರು ಮನೆ ಬಿಟ್ಟು ಹೋಗೋಹಾಂದ್ರೇನು. ಜೊತೆಗೆ ತಮ್ಮ ಬೆಳಸಿಕೊಂಡು ಮನೇಲಿ ಎಲ್ಲ ಇಟ್ಕೊಂಡಿರೋದು. ಎಂಟು ವರ್ಷ ಆದ್ರೆ ಆಗ್ತೋಯ್ತು. ನಂಗೆ ಮದುವೆ ಆದಾಗ ಆರು ವರ್ಷವೋ ಏನೊಂತಪ್ಪ, ನನಗೆ ಜ್ಞಾಪಕಾನೇ ಇಲ್ಲ!"

ಅಷ್ಟರೊಳಗೆ, ಗಾಡಿಯ ಕುಲುಕಾಟದಿಂದಾಗಿ ಅದರ ಹಿಂಭಾಗದಲ್ಲಿ ಇಟ್ಟಿದ್ದ ಹಲಸಿನ ಹಣ್ಣು ಕೆಳಕ್ಕೆ ಬಿದ್ದು, ಟಾರ್ ರಸ್ತೆಯಮೇಲೆ ಹಲವಾರು ಉರುಳುಗಳು ಉರುಳಿತು. ಅಜ್ಜ ತಾನೇ ಬಿದ್ದೆನೆಂಬಷ್ಟು ಸಂಕಟದಿಂದ, "ಹೋಯ್ತಲ್ರೋ, ಹೋಗ್ರೋ, ಹೋಗ್ರೋ!" ಎಂದು ಕೂಗಿಕೊಂಡಿತು. ಮತ್ತು ಗಾಡಿಯವನನ್ನು ಕುರಿತು, "ಏನೋ, ಹೀಗೋ, ಗಾಡಿ ಹೊಡೆಯೋದು? ಮದ್ದೂರಿಂದ ತಂದ ಹಣ್ಣು ಬಿದ್ದು ಹಾಳಾಯ್ತಲ್ಲೋ! ನೀನೂ ಸರಿಯಾಗಿದೀಯ ಬಿಡು. ನಮ್ಮ ಬೆಂಗಳೂರಿನಲ್ಲಿ ಹೀಗೆಲ್ಲ ಗಾಡಿ ಹೊಡೆಯೋಲ್ಲ" ಎಂದಿತು, ಅಸಮಾಧಾನದಿಂದ. ನಾನು, ರಾಮು ಗಾಡಿಯಿಂದಿಳಿದು ಹೋಗಿ, ಆ ಹಣ್ಣನ್ನು ಅದು ಮೊದಲಿದ್ದ ಸ್ಥಾನದಲ್ಲಿ ಪ್ರತಿಷ್ಠಾಪಿಸಿದೆವು. ಅಜ್ಜ ರಾಮುವಿಗೆ, "ಅದರ ಮೇಲೆ ಒಂದು ಕಣ್ಣಿಟ್ಟಿರೋ ರಾಮು" ಎಂದು ಎಚ್ಚರಿಕೆ ಕೊಟ್ಟಿತು.

ಗಾಡಿ ಮನೆಯಮ್ಮನ್ನು ಸೇರಿತು. ನಾನು, ರಾಮು ಇಳಿದು, ಸಾಮಾನುಗಳನ್ನು ರಾಮುವಿನ ಮನೆಯಲ್ಲಿಟ್ಟು ಬಂದೆವು. ಅನಂತರ ನಾನು ರಾಮುವಿಗೂ, ಅಜ್ಜನಿಗೂ ಹೇಳಿ ನನ್ನ ಮನೆಗೆ ಹೋದೆ.

ಕೇವಲ ಅರ್ಧಗಂಟೆಯೊಳಗೆ ಅಜ್ಜ ನಮ್ಮ ಮನೆಗೆ ಬಂದಿತು. "ಏನೇ, ಚೆನ್ನಾಗಿದೀಯೇನೇ?" ಎಂದು ತಮ್ಮ ತಾಯಿಯನ್ನು ಪ್ರಶ್ನಿಸಿತು.

ನಮ್ಮ ತಾಯಿ, "ಬನ್ನಿ ಅಜ್ಜ, ಯಾವಾಗ ಬಂದ್ರಿ?" ಎಂದರು.

"ಈಗ ಬಂದೆ ಕಣೆ" ಎಂದು ತಾನು ಕೈಯಲ್ಲಿ ಹಿಡಿದಿದ್ದ ಚೀಲದಲ್ಲಿದ್ದ ಮೂರುನಾಲ್ಕು ಪೊಟ್ಟಣಗಳನ್ನು ಈಚೆಗೆ ತೆಗೆಯಿತು. ನಮ್ಮ ತಾಯಿ, "ಇದೇನಜ್ಜ, ಇವೆಲ್ಲಾ!" ಎಂದರು.

"ಏನಿಲ್ಲ ಕಣೇ. ಒಂದಿಷ್ಟು ಹಪ್ಪಳ, ಸಂಡಿಗೆ, ತಿಂಡಿ ತಂದಿದ್ದೆ. ನಿನಗೊಂದು ಸ್ವಲ್ಪ ಕೊಟ್ಟು ಹೋಗೋಣಾಂತ. ನೋಡು, ಇಲ್ಲಿರೋದು ತಿರುಳಾದ" ಎಂದು ಅಜ್ಜ ಒಂದು ಸಣ್ಣ ಕಾಗದದ ಪೊಟ್ಟಣವನ್ನು ತನ್ನ ಕೈಯಿಂದ ತೆಗೆದು ನಮ್ಮ ತಾಯಿಗೆ ಕೊಟ್ಟಿತು.

"ಎಲ್ಲರಿಗೂ ಪ್ರಸಾದ ಕೊಡೇ. ಆ ದೇವರು ಮಹಾಸಕ್ತ" ಎಂದಿತು ಅಜ್ಜ. ನನಗೆ ಅಜ್ಜನನ್ನು ರೇಗಿಸಬೇಕೆಂದರೆ ಬಲು ಇಷ್ಟ. ನಾನೆಂದೆ, "ಹಾಗಾದ್ರೆ ವಿಕ್ಕ ದೇವರು ಅಷ್ಟು ಸಕ್ತ ಇಲ್ಲವೇ ಅಜ್ಜ?"

ಅಜ್ಜ ಹೇಳಿತು, "ಹಾಗಲ್ಲವೋ ಅರ್ಥ....ಎಲ್ಲ ದೇವರೂ ಸಕ್ತಾನೇ ಅನ್ನೂ. ಆದರೆ ಈ ದೇವರು ಮಾತ್ರ ಮಹಾಸಕ್ತ ನೀನು ಮನಸ್ಸಿನಲ್ಲಿ ಮಾಡಿಕೊಂಡಿಪ್ಪು ಆಗದೇ ಇದ್ರೆ ಕೇಳು."

"ಹಾಗಾದ್ರೆ ಗಣಪತಿಗಿಂತ ಸಕ್ತಾನ್ನೀ!"

"ಅಯ್ಯೋ, ಹಾಗೆಲ್ಲಾ ದೇವರುಗಳ್ನ ಹೋಲಿಸೋಕೆ ಆಗುತ್ತೇನಪ್ಪ. ಗಣಪತಿಗೆ ಸಮ ಯಾವ ದೇವರು ನಿಲ್ಲೋಕಾಗುತ್ತೆ ಹೇಳು!"

ಅಷ್ಟರಲ್ಲಿ ನಮ್ಮ ತಾಯಿ ಪ್ರಸಾದವನ್ನು ಎಲ್ಲರಿಗೂ ಹಂಚಿದರು. ನಾನು ಬಾಯಿಗೆ ಹಾಕಿಕೊಂಡು, "ಗಣಪತಿ ಪ್ರಸಾದದಷ್ಟು ಇದು ರುಚಿಯಿಲ್ಲಾಜ್ಜ" ಎಂದೆ.

ಅಜ್ಜ, "ಹಾಗೆಲ್ಲಾ ಅಡಬಾರ್ದು ಕಣೋ ಮೂರ್ತಿ. ಏನಂಗೆ ತೀರ್ದು, ಹುಡುಗ! ಆ ದೇವರು ಎಷ್ಟು ಸಕ್ತಾಂತೀಯ. ಕೇಳು, ಹೇಳ್ತೀನಿ: ಮೊಣಸಿನ ಪುಡಿ ಸುಟ್ಟಮ್ಮ ಇದಾಳೆ ನೋಡು, ಬೆಂಗಳೂರಲ್ಲಿ. ಅವಳೇನು ಮಾಡಿದಳು ಗೊತ್ತೇ? ಅವಳೂ ತಿರುಪತೀಗೆ

ಹೋಗಿ ಯಾವುದಕ್ಕೋ ಹರಸಿಕೊಂಡು ಬಂದಿದ್ದು. ಅವಳಿಗೆ ಮೊನ್ನೆ ಮೊನ್ನೆ ಮನಸ್ಸಿಗೆ ಬೇಜಾರಾಯ್ತೂಂತ ಕಾಣುತ್ತೆ. 'ಏನು ದೇವರೋ. ನನ್ನ ಕಷ್ಟ ಬಗೆಹರಿಯೋ ಹಾಗಿಲ್ಲ. ಎಲ್ಲ ಭ್ರಾಂತಿ' ಅಂದುಕೊಂಡ್ಳಂತೆ. ನೋಡು, ತಕ್ಷಣ ಗಂಟಲು ಕಟ್ಟಿಹೋಗೋದೇ? ಆ ದಿವಸವೆಲ್ಲಾ ಅವಳಿಗೆ ಮಾತಾಡೋಕೇ ಆಗ್ಲಿಲ್ಲವಂತೆ. ಅವಳು ಹೆದರಿಕೊಂಡು, ದೇವರಿಗೆ ತಪ್ಪುಕಾಣಿಕೆ ತೆಗೆದಿಟ್ಟ ಮೇಲೇ ಅವಳಿಗೆ ಪುನಃ ಮಾತನಾಡೋಕೆ ಸಾಧ್ಯವಾದದ್ದಂತೆ. ಹಾಗೆ:..." ಎಂದು ಹೇಳುತ್ತಿದ್ದ ಹಾಗೇ ನಾನು ಕೇಳಿದೆ, "ಹಾಗಾದ್ರೆ ಸುಬ್ಬಮ್ಮ ಹಂಸಿಕೊಂಡಿದ್ದನ್ನು ದೇವರು ನೆರವೇರಿಸಿತೋ?"

"ಇಷ್ಟು ಬೇಗ ಅದೆಲ್ಲ ಆಗುತ್ಯೇ ಹೇಳು. ಕಾದು ನೋಡಬೇಕು. ಹಾಗೆಲ್ಲಾ ದೇವರ ವಿಷಯದಲ್ಲಿ ದುಡುಕಬಾರದು."

ಅಜ್ಜ ಬಹಳ ಹೊತ್ತು ಅದೂ ಇದೂ ಮಾತನಾಡಿ, ಅನಂತರ ಮನೆಗೆ ಹೋಯಿತು.

× × × ×

ಬೆಳಗ್ಗೆ ಏಳೂಕಾಲಿನ ಸಮಯ. ನಾನು ರೇಡಿಯೋವನ್ನು ಕೇಳುತ್ತಾ ಕುಳಿತಿದ್ದೆ. ಆಗ ಅಜ್ಜ ನಾನಿದ್ದೆಡೆಗೆ ಬಂದಿತು. ತಕ್ಷಣ "ಅದೇನು ಕೇಳ್ತಾ ಇದೀಯೋ. ಹಾಳು ಅಳಿಅಳಿ ಅಂತ ಚಳಿ ಬಂದೋರ ಹಾಗೆ, ಅದೇನು ಚೆನ್ನಾನೋಪ್ಪ. ಸರ ನಾಮಾನ ಖಾಕು, ಲಕ್ಷಣವಾಗಿ ಕೇಳೋಣ. ನಾನೇ [redacted], ಬೆಂಗಳೂರಲ್ಲಿ ದೇವರ ನಾಮಾನ ಕೇಳದೇ ಇರೊಲ್ಲಾಪ್ಪ!

ನಾನು ರೇಡಿಯೋವನ್ನು ಬೆಂಗಳೂರಿಗೆ ಟ್ಯೂನ್ ಮಾಡಿದೆ. "ಹರಿಸ್ಮರಣೆ ಮಾಡೋ" ರೇಡಿಯೋವಿನಲ್ಲಿ ಪ್ರಸಾರವಾಗುತ್ತಿತ್ತು. ಗೊನ್ಗರ ಧ್ವನಿಯವೊಬ್ಬರು ಕಷ್ಟವಟ್ಟು ಅದನ್ನು ಹಾಡುತ್ತಿದ್ದರು. 'ಸಂಗೀತದಲ್ಲಿ ಅಲ್ಪಸ್ವಲ್ಪ ಅಭಿರುಚಿಯಿಟ್ಟುಕೊಂಡಿರುವರು ಇದನ್ನು ಕೇಳಿದರೆ, ಇನ್ನು ಮೇಲೆ ನಮ್ಮ ಸಂಗೀತವನ್ನು ಕೇಳುವ ಶ್ರಮವನ್ನು ಅವರು ತೆಗೆದುಕೊಳ್ಳುವುದಿಲ್ಲ' ಎಂದು ನಾನೆಂದುಕೊಳ್ಳುತ್ತಿದ್ದ ಹಾಗೆಯೇ ಅಜ್ಜ, "ಎಷ್ಟು ಸೊಗಸಾಗಿ ಹಾಡ್ತಿದ್ದಾನೆ ನೋಡು!" ಎಂದು ಹೇಳಿತು, ತಲ್ಲೀನತೆಯಿಂದ.

ದೇವರ ನಾಮಗಳು ಮುಗಿದ ಕೂಡಲೇ ಕನ್ನಡದಲ್ಲಿ ವಾರ್ತೆಗಳ ಪ್ರಸಾರ ಆರಂಭವಾಯಿತು. ಅಜ್ಜ ಇನ್ನೂ ಕಿವಿ ನಿಮಿರಿಸಿಕೊಂಡು ಕುಳಿತಿತ್ತು. ಮಧ್ಯೆ ಮಧ್ಯೆ, "ಏನಂತೋ ಮೂರ್ಖ—ಏನೋ ಅವನು ಹೇಳ್ತಿರೋದು?" ಎಂದು ಕೇಳುತ್ತಿತ್ತು. ನಾನು, "ಹೇಳ್ತೀನಿ ತಡೀರಿ ಅಜ್ಜ," ಎನ್ನುತ್ತಿದ್ದೆ. ಅಷ್ಟರಲ್ಲಿ ರಾಮು ಬಂದ. "ಏನೋ ಸುಯೇಜ್ ಸಮಸ್ಯೆ ಹೀಗಾಗಿ ಬಿಟ್ಟಿದೆ?" ಎಂದ ಅವನು ಕಾತರತೆಯಿಂದ.

"ಏನೋಪ್ಪ" ಎಂದೆ ನಾನು ಮ್ಲಾನವದನನಾಗಿ.

"ಅಲ್ಲಾ ರಷ್ಯಾದೋರು ಹೇಳಿರೋದು ನೋಡಿದೆಯಾ? ಇನ್ನು ಹನ್ನೆರಡು ಗಂಟೆ ಒಳಗೆ ಬ್ರಿಟನ್ನೋನು ಯುದ್ಧ ನಿಲ್ಲಿಸದೇ ಇದ್ರೆ ನಾವು ಸುಮ್ನೆ ಬಿಡೋಲ್ಲಾಂತ ಬೆದರಿಸಿರೋದ!"

"ಏನ್ಕೋ ಅದು! ಇನ್ನೊಂದು ಯುದ್ಧ ಆಗುತ್ತೇನ್ಕೋ ಹಾಗಾದ್ರೆ?" ಅಜ್ಜ ಗಾಬರಿಯಿಂದ ಕೇಳಿತು.

ರಾಮು, "ಆಗೋ ಹಾಗೇ ಇದೆ" ಎಂದ ಗಂಭೀರವಾಗಿ.

ಅಜ್ಜ. "ಸರಿಹೋಯ್ತಪ್ಪ. ಆ ಗಣಪತೀನೇ ಗತಿ....ಇಲ್ಲಿಗೆ ಯಾವತ್ತು ಬಾಂಬು ಹಾಕ್ತಾರೋ?" ಎಂದು ಕೇಳಿತು.

ರಾಮು, "ಇಲ್ಲಿಗೆ ಯಾವತ್ತು ಹಾಕ್ತಾರೋ ಗೊತ್ತಿಲ್ಲ" ಎಂದ, ಅಜ್ಜಯನ್ನು ಬೆದರಿಸಲೋಸುಗ.

"ಹಾಗಾದ್ರೆ, ಗಣಪತೀಗೆ ಹರಸ್ಕೋತೀನಿ ತಡಿ—" ಎಂದಿತು ಅಜ್ಜ, "ಅದ್ಯಾಕ್ಕೋ ನಗೋದು. ನಿಮಗೆಲ್ಲಾ ಕುಚೇಷ್ಟೇನೇ. ಹೋದ ಯುದ್ಧ ಗೊತ್ತಿಲ್ಲವೇನ್ಕೋ ನಿಮಗೆ? ಎಷ್ಟು ಜೋರಾಗಿ ನಡೀತಿತ್ತು, ಏನು ಭಳೆ! ನಾನೂ ನೋಡೀ, ನೋಡೀ ಸಾಕಾಗಿ, ಕಡೇಗೆ ಗಣಪತೀಗೆ ಹರಸಿಕೊಂಡೇ ನೋಡು, ಒಂದು ದೊಡ್ಡ 'ಅವಿಶೇಕ' ಮಾಡಿಸ್ತೀನಿ, ಯುದ್ಧ ನಿಲ್ಲಿಸು ನನ್ನಪ್ಪಾಂತ! ದೇವರ ಸೊಂಡಿಲಿನಿಂದ ಒಂದು ದಸ್ಸ ಸಂಟಿಗೆ ಹೂವು ಕೆಳಗೆ ಬಿತ್ತು ನೋಡು. ಮಾರನೆಯ ದಿನಾನೇ ಯುದ್ಧ ನಿಲ್ತೂಂತ ಸುದ್ದಿ ಬಂತು. ನಾನು ಹರಸಿಕೊಳ್ದೇ ಇದ್ದಿದ್ರೆ ಅದೆಲ್ಲ ನಿಲ್ತಿತ್ತು ಹೇಳು. ಹಾಗೆಲ್ಲಾ ದೇವರ ಸತ್ಯಾನ ಸುಳ್ಳೂಂದ್ರೆ ಆಗುತ್ಯೇ? ಈಗ್ಲೂ ಅಷ್ಟೆ. ಇವತ್ತು ಸಂಜೆ ನಿಮ್ಮನ್ನೂ ಕರಕೊಂಡು ಹೋಗಿ ಹರಸ್ಕೋತೀನಿ ನೋಡಿ. ನೋಡ್ತಿರಿ. ಯುದ್ಧ ನಿಲ್ಲದಿದ್ರೆ ಯಾತಕ್ಕೆ—" ಎಂದು ನಮಗೆ ಸವಾಲು ಹಾಕಿತು.

ಸರಿ. ಅಂದು ಸಂಜೆ ಅಜ್ಜ ಬಲವಂತ ಮಾಡಿ ಕನ್ನ ಮನೆಯವರನ್ನೂ, ನಮ್ಮ ಮನೆಯವರನ್ನೂ ದೇವಸ್ಥಾನಕ್ಕೆ ಕರೆದುಕೊಂಡು ಹೊರಟಿತು. ನಮ್ಮ ಸುತ್ತುಮುತ್ತಲ ಮನೆಯವರು, ಹೊರಟಿದ್ದ ದೊಡ್ಡ ಗುಂಪನ್ನು ನೋಡಿ, ಅನಂತರ ಅಜ್ಜಯೇ ಅದಕ್ಕೆ ಕಾರಣವಿರಬೇಕೆಂದು ಊಹಿಸಿ, "ಏನಜ್ಜೀ, ಸವಾರಿ?" ಎಂದರು. ಅಜ್ಜ ಗಂಭೀರವಾಗಿ, "ಮತ್ತೇನು ಮಾಡೋದು ಹೇಳಿ. ಯುದ್ಧ ಹೆಚ್ಚಾಗ್ತೋಯ್ತಂತೆ. ಯಾವತ್ತು ಬಾಂಬು ಬೀಳುತ್ತೋ ಇಲ್ಲೀಗೆ. ಅದಕ್ಕೇ ದೇವರಿಗೆ ಮುಂಡೆ ಹರಸಿಕೊಂಡ್ರೆ, ಸ್ವಾಮಿ ನನ್ನಪ್ಪ ಯುದ್ಧಾನ ನಿಲ್ಲಿಸ್ತಾನೆ. ಬನ್ನೀ, ನೀವೂನೂ ಗಣೇಶನ ಗುಡೀಗೆ—" ಎಂದು [redacted] ವರನ್ನೂ ಆಹ್ವಾನಿಸಿತು ಅವರು ಮುಗುಳ್ನಕ್ಕು, ಅದನ್ನು ಮೃದುವಾಗಿ ತಿರಸ್ಕರಿಸಿದರು.

ದಾರಿಯಲ್ಲಿ ಕೂವಿನ ಅಂಗಡಿಗಳು ಸಿಕ್ಕಿದುವು. ಅಜ್ಜ, "ಮೈಸೂರು ಸರಿ, ಹೂವಿಗೆ" ಎಂದು ಮೊದಲನೆಯ ಅಂಗಡಿಗೇ ಕಾಲಿಟ್ಟಿತು.

"ಹೇಗಪ್ಪಾ ಮಾರು?" ಎಂದು ಅಜ್ಜ ಹೂವಾಡಿಗನನ್ನು ಕೇಳಿತು.

"ನಾಲ್ಕಾಣೆ ತಾಯಿ" ಅವನೆಂದ.

"ಯಾಕಪ್ಪಾ ನಾಲ್ಕಾಣೆ?"

"ಊವು ನೋಡಿ ತಾಯಿ!"

"ಹೂವೇನೋ ಚೆನ್ನಾಗಿದೆ ಬಿಡು. ಅದ್ರೆ ನಾಲ್ಕಾಣೆ ಯಾರು ಕೊಡ್ತಾರೇಳು. ಒಂದಾಣೆ ಮಾಡ್ಕೋ."

" ತಾಯಿ! "

" ಹೋಗಲಿ ಎರಡೂವರಾಣೆ ಮಾಡ್ಕೋಳೋ. "

" ಆಗಲಿಕ್ಕಿಲ್ಲ ತಾಯಿ. "

" ಮೂರೂವರಾಣೆ..... " ಅಜ್ಜಿ ಮಾತು ಮುಗಿಸುವುದರೊಳಗೆ ರಾಮು, " ಬಿಡಜ್ಜಿ, ಆದಕ್ಕಾಕೆ ಅಷ್ಟು! ಮೂರಾಣೇಗೆ ಕೊಡ್ತಾರೆ. ವ್ಯಾಪಾರ ಮಾಡೋದೊಳ್ಳೇ ಹೆಸ್ರಾಗಿದೆ " ಎಂದ. ಹೂವಿನವನು ಪೂರು ಹಾಕುತ್ತಾ, " ಎಷ್ಟು ಮಾರು ಕೊಡಲಿ ತಾಯೀ? " ಎಂದ.

ಅಜ್ಜಿ, " ಮೂರೂವರಾಣೆ ಹೆಚ್ಚಂತಲ್ಲೋ, ಮೂರಾಣೆ ಹೂಡ್ಕೊಂಡು ಮೂರುಮಾರು ಕೊಡೋ " ಎಂದಿತು.

" ಮೂರಾಣೆಗೆ ಅಗೊಲ್ಲ ತಾಯೀ "

" ಹೋಗಲಿ ಕೊಡೋ."

ಅಜ್ಜಿ ಹೂವನ್ನು ತೆಗೆದುಕೊಂಡು ಒಂದು ರೂಪಾಯಿಯ ನೋಟನ್ನು ಹೂವಿನವನಿಗೆ ಕೊಟ್ಟು, ರಾಮುವಿಗೆ " ಚಿಲ್ಲರೆ ಸರಿಯಾಗಿ ಇಸ್ಕೋಳೋ. ಹಲಸಿನ ಹಣ್ಣೋನು ಮಾಡಿದ ಹಾಗೆ ಮಾಡ್ಯಾನು" ಎಂದಿತು. ಹೂವಿನವನು ಒಮ್ಮೆ ಅಜ್ಜಿಯತ್ತ ನೋಡಿ, ಅನಂತರ ರಾಮುವಿಗೆ ಚಿಲ್ಲರೆಯನ್ನು ಕೊಟ್ಟ.

ಅಜ್ಜಿ ಪಕ್ಕದಲ್ಲಿದ್ದ ಹೂವಿನ ಅಂಗಡಿಗೆ ನುಗ್ಗಿತು. " ಇದೇನಜ್ಜಿ ? " ಎಂದ ರಾಮು.

" ಶಂಪಿಗೆ ಹೂವು ನೋಡೋ ಹೇಗಿದೆ! ಬೆಂಗಳೂರಲ್ಲಿ ಇಂಥ ಕೆಂಪಸಂಪಿಗೆ ಹೂವು ಸಿಕ್ಕೊಲ್ಲ! "

ಅಜ್ಜಿ ತನ್ನ ಸ್ವಭಾವಕ್ಕನುಗುಣವಾಗಿ ವ್ಯಾಪಾರ ಮಾಡಿತು. ಅನಂತರ ರಾಮುವಿಗೆ, " ನೂರೆಂಟು ಹೂವು ತೊಗೊಳೋ. ಅಷ್ಟೋತ್ತರ ಮಾಡಿಸಿ ಬಿಡೋಣ " ಎಂದಿತು. ರಾಮು, " ಗಣಪತೀಗೆ ತಲೆನೋವು ಖಂಡಿತ ಬಂದ್ಬಿಡುತ್ತೆ ಅಜ್ಜಿ, ಇಷ್ಟೊಂದು ಹೂವಿನ ಹಾರನೆ ಕುಡಿದರೆ " ಎನ್ನುತ್ತಾ ವ್ಯಾಪಾರವನ್ನು ಮುಗಿಸಿದ.

ನಾಲ್ಕು ಮಾರು ದೂರ ಹೋಗುವುದರೊಳಗೆ ಒಬ್ಬ ಹುಡುಗ ಬಟ್ಟೆಯನೇಲೆ ಗುಲಾಬಿಯ ಹೂವುಗಳನ್ನು ಹರಡಿಕೊಂಡು ಕುಳಿತಿದ್ದುದು ಕಾಣಿಸಿತು. ಅಜ್ಜಿ ಅದನ್ನೂ ಬಿಡಲಿಲ್ಲ ಅವನ್ನೆಲ್ಲಾ ಕೊಂಡುಕೊಂಡು ರಾಮುವಿನ ತಾಯಿ ಮತ್ತು ತಂಗಿಯರಿಗೆ, ನನ್ನ ತಾಯಿ ಮತ್ತು ತಂಗಿಯರಿಗೆ ಎರಡೆರಡು ಹೂವುಗಳನ್ನು ಕೊಟ್ಟು, " ಮುಡಕೊಳ್ಳೇ ಲಕ್ಷಣವಾಗಿ " ಎಂದಿತು.

ರಾಮುವೆಂದ, " ನೀನು ತಂದಿರೋ ದುಡ್ಡೆಲ್ಲಾ ಇವತ್ತೇ ಉಡಾಯಿಸಿಬಿಟ್ಟೀ ಅಜ್ಜಿ. "

" ಹೋಗಲಿ ಬಿಡೋ, ಇದ್ದಾಗ ಖರ್ಚು ಮಾಡೋದು; ಇಲ್ದೇ ಇದ್ದಾಗ ಇಲ್ವೇಇಲ್ಲ. ಏನೋ, ದೇವರಿಗೆ ಮಾಡಿದ್ದು ಎಂದಿಗೂ ಹೆಂಡವಾಗೊಲ್ಲ ಬಿಡು " ಎಂದಿತು ಅಜ್ಜಿ. ಕ್ಷಣಕಾಲದನಂತರ, " ರಾಮೂ, ಎಂದಿಪ್ಪತ್ತೈದು ಬಾಳೇಹಣ್ಣು ಕೊಂಡುಕೊಂಡು ಬಾರೋ. ಹಾಗೇ ಎರಡು ತೆಂಗಿನಕಾಯಿ, ಒಂದಿಷ್ಟು ಕರ್ಪೂರ ಊದುಗಡ್ಡಿ....." ಎಂದು ಅಜ್ಜಿ ತನ್ನ ಸೊಂಟದಿಂದ ಎರಡು ರೂಪಾಯಿಯ ನೋಟನ್ನು ತೆಗೆದು ರಾಮುವಿಗೆ ಕೊಟ್ಟಿತು. ನಮ್ಮ ತಾಯಿ ನನಗೆ, " ನೀನೂ ತೊಗೊಂಬಾ ಹೋಗೋ ತಾಯಿ, ಹಣ್ಣಿನ್ನ " ಎಂದರು. ಅಜ್ಜಿ, " ಬೇಡಾ ಸುಮ್ನಿರೋ ಮೂರ್ತಿ. ನಾನು ತರಿಸ್ತಿಲ್ವೇ—" ಎಂದು ನನ್ನನ್ನು ತಡೆದುಬಿಟ್ಟಿತು.

ಕಡೆಗೂ ದೇವಸ್ಥಾನ ಸಿಕ್ಕಿತು. ಅರ್ಚಕರು ಅಜ್ಜಿಯನ್ನು ಕಂಡೊಡನೆ " ಯಾವತ್ತು ಬಂದ್ರಮ್ಮ? " ಎಂದರು. ಅಜ್ಜಿ ಮೈಸೂರಿನಲ್ಲೇ ಹುಟ್ಟಿ ಬೆಳೆದದ್ದರಿಂದಾಗಿ, ಅದಕ್ಕೆ ಮೈಸೂರಿನ ಹಳೆಯ ತಲೆಗಳ ಪರಿಚಯ ಜಾಸ್ತಿ.

ಅಜ್ಜಿಯೆಂದಿತು, " ನಿನ್ನೆ ಬಂದೇಪ್ಪಾ. ಚೆನ್ನಾಗಿದೀರಾ? "

" ಇಷ್ಟರಮಟ್ಟಿಗೇನಮ್ಮ! ನೀವು? ಮಗಾ, ಸೊಸೆ, ಮೊಮ್ಮಕ್ಕಳು? ಮೊಮ್ಮಕ್ಕಳು ಎಷ್ಟು ಜನ ?

" ನಾಲ್ಕು ಜನಾಪ್ಪ..... ...ಎಲ್ಲಾ ಹೆಣ್ಣುಬೋಕಿಗಳು. "

" ಈ ಸಲ ಗಂಡಾಗುತ್ತೆ ಬಿಡಿ. "

" ನಂಗೆ ಅದೊಂದೇಪ್ಪ ಆಸೆ ಇರೋದು. ಏನೋ ನಿಮ್ಮ ಆಶೀರ್ವಾದದಿಂದ ಹಾಗಾದ್ರೆ ಸಾಕು. ಗಣಪತಿ ಕಣ್ಣುಬಿಟ್ಟು ನೋಡಬೇಕು ಅಷ್ಟೆ.....ಈ ಸರ್ತಿ ಗಂಡು ಆಗದೇ ಇಹ್ರೆ, ನಾನಂತೂ ಯಾರ ಹತ್ರಾನೂ ಮಾತಾಡೊಲ್ಲಪ್ಪಾ! ಅದೇನು ಹೇಳಿ, ಒಂದಾದ್ರೆ ಚೆನ್ನ, ಎರಡಾದ್ರೆ ಚೆನ್ನ, ಬರೀ ಹೆಣ್ಣೇ ಆಗ್ತಿದ್ರೆ ಬೇಜಾರಾಗೋಲ್ವೇ? "

" ಅದು ಸರೀನ್ನಿ.....ಆದರೆ ದೇವರ ಸಂಕಲ್ಪಕ್ಕೇನ್ನ ಮಾಡೋದು, ಹೇಳಿ! "

" ಅದೇನೋ ನಿಜ..... ....ರಾಮೂ, ಆ ಹೂವು, ಹಣ್ಣು ಕೊಡೋ....ಒಂದು ಅಚ್ಚುಕಟ್ಟಾದ ಅಷ್ಟೋತ್ತರ ಮಾಡ್ಬಿಡೀಪ್ಪ.... ನಾಡಿದ್ದು ಅವಿಶೇಕ ಮಾಡೋಕಾಗುತ್ತೇ ನಿಮಗೆ? "

" ಯಾವ ಅಭಿಷೇಕ ? "

" ಶಾಲ್ಯಾನದ್ದು! "

" ಹ್ಞು, ಒಂಬತ್ತು ಗಂಟೆ ಮೇಲಾದ್ರೆ ಆಗುತ್ತಮ್ಮ. ಅದಕ್ಕೆ ಮುಂಚೆ ಒಂದಿದೆ. "

" ಹಾಗೇ ಮಾಡಿ. ಸಾಳೆ ನಮ್ಮ ರಾಮೂ ಕೈಲಿ ದುಡ್ಡು ಕಳಿಸ್ತೀನಿ. "

" ಆಗಲಿ "

ಪೂಜಾರರು ಅಷ್ಟೋತ್ತರವನ್ನು ಬೇಗಬೇಗನೆ ಮಾಡಿದರು. ಅಜ್ಜಿ ಯಾರೊಡನೆಯೂ ಮಾತನಾಡದೆ, ನಾನು, ರಾಮು ಮಾತನಾಡಲು ಯತ್ನಿಸಿದಾಗ, ಕೈ-ಕಣ್ಣುಗಳ ಸಂಜ್ಞೆಯಿಂದಲೇ ನಮ್ಮನ್ನು ಸುಮ್ಮನಾಗಿಸಿ, ಭಯಭಕ್ತಿಗಳಿಂದ ಕೈಮುಗಿದುಕೊಂಡು ನಿಂತಿತ್ತು. ತೀರ್ಥ-ಪ್ರಸಾದಗಳನ್ನು ಸ್ವೀಕರಿಸಿದನಂತರವೂ ಬಹಳ ಹೊತ್ತಿನ.

ಬಿಗೆ ಅಜ್ಜಿ ಕದಲದೆ, ದೇವರ ವಿಗ್ರಹವನ್ನು ನೋಡುತ್ತ ನಿಂತಿದ್ದುದನ್ನು ನೋಡಿ ರಾಮು, "ಹೋಗೋಣವೇ ಅಜ್ಜಿ?" ಎಂದ.

ಅಜ್ಜಿ, "ತಡಿಯೋ, ಪ್ರಸಾದವೇ ಬಿದ್ದಿಲ್ಲ–" ಎಂದಿತು.

ಕಾಲುಗಂಟೆಯನಂತರ ಗಣಪತಿಯ ವಿಗ್ರಹದ ತಲೆಯಮೇಲಿ. ನಿಂದ ಪಾದರಿಯ ಹೂವೊಂದು ಬಿದ್ದಿತು ಅಜ್ಜಿ ಪೂಜಾರಿಗೆ, 'ಕೊಡೀಪ್ಪ ಆ ಹೂವನ್ನ" ಎಂದಿತು. ಪೂಜಾರರು ಆ ಹೂವನ್ನು ಅಜ್ಜಿಗೆ ತಂದುಕೊಟ್ಟರು.

ಅಜ್ಜಿ ನಮಗೆಲ್ಲಾ "ನಡಿರ್ರೋ; ಇನ್ನು ಯುದ್ಧ ನಿಂತಹಾಗೇ! ಭಯಪಡಬೇಡಿ!" ಎಂದಿತು.

× × × ×

ಅಜ್ಜಿ ದಿನವೂ ವಾರ್ತೆಗಳು ಪ್ರಸಾರವಾಗುವ ವೇಳೆಗೆ ಸರಿಯಾಗಿ ನಮ್ಮ ಮನೆಗೆ ಬರುತ್ತಿತ್ತು. ನಾನು ಒಂದುವೇಳೆ ಮರೆತರೂ ಅಜ್ಜಿ, "ಹಾಕೋ ಮೂರ್ತಿ ರೇಡಿಓ (ರೇಡಿಯೋ) ನ, ಏಳೂಮುಕ್ಕಾಲಿಗಲ್ವೇನೋ, ಅದು, ಯುದ್ಧದ್ದು ಹೇಳೋದು?" ಎಂದು ನನಗೆ ಜ್ಞಾಪಿಸುತ್ತಿತ್ತು. "ಏನಾಯ್ತೋ? ಯುದ್ಧ ಕಡಿಮೆ ಆಯ್ತೇನೋ?" ಎಂದೆಲ್ಲ ಬಾಯಿ ತೆರೆದು ಕೇಳುತ್ತಿತ್ತು. ಕಡೆಗೊಂದು ದಿನ ನಾನು, "ಯುದ್ಧ ನಿಂತ ಹಾಗೇ ಅಜ್ಜಿ, ಇನ್ನೇನು ಪರವಾಗಿಲ್ಲ." ಎಂದಾಗ, ಅಜ್ಜಿ, "ನಂಗೊತ್ತಿಲ್ವೇನೋ ನಮ್ಮ ದೇವರ ಸತ್ಯ! ಗಣಪತಿ ಮಾತು ಸುಳ್ಳಾಗೋಕಾಂದ್ರೇನು?" ಎಂದಿತು. ದೇವರ ಮಾತಿನಲ್ಲಿ ಸಾರ್ಥಕತೆಯು ತುಂಬಿ ತುಳುಕುತ್ತಿತ್ತು.

ಅಂದು ಮಧ್ಯಾಹ್ನ ಅಜ್ಜಿ, "ನಾನು ನಾಳೆ ಬೆಂಗಳೂರಿಗೆ ಹೊರಟ್ಬಿಡ್ತೀನೇ" ಎಂದು ತನ್ನ ಮಗಳಿಗೆ (ರಾಮುವಿನ ತಾಯಿಗೆ) ಹೇಳಿತು.

ರಾಮುವಿನ ತಾಯಿ, "ಇರಮ್ಮಾ ಇನ್ನೂ ಒಂದೆರಡು ದಿನ, ಏನೀಗ!" ಎಂದರು.

"ನಿನಗ್ಗೊತ್ತಿಲ್ವೇನೇ ಅಲ್ಲೀ ಸಂದರ್ಭ? ಸೊಸೆ, ತುಂಬಿದ ಬಸುರಿ. ಅವಳನ್ನು ಬಿಟ್ಟು ಇಲ್ಲಿ ಚಕ್ಕಂದ ಹೊಡೀತಾ ಕೂತಿರ್ಲೀ ಹೇಳು? ಏನೋ, ಎಲ್ಲರನ್ನೂ ನೋಡಬೇಕೂಂತ ಆಸೆ ಆಯ್ತು ಒಂದೆರಡು ದಿನಾ ಇರೋಣಾಂತ ಬಂದೆ. ಹಾಗಂದ್ಬಿಟ್ಟು ತಿಂಗಳಾನುಗಟ್ಲೆ ಇಲ್ಲಿರೋಕಾಗುತ್ತೇ ಹೇಳು" ಎಂದು ಅಜ್ಜಿ ಹೇಳಿದ ಮಾತು. ಗಳು, ರಾಮುವಿನ ತಾಯಿನ್ನು ಸುಮ್ಮನಾಗಿಸಿದುವು.

ಅಜ್ಜಿ ರಾಮುವಿಗೆ ಹೇಳಿತು: "ಬೆಂಗಳೂರಿಗೆ ಕಾಗದ ಹಾಕ್ಬಿಡೋ ರಾಮು."

"ನೀನೇ ಬರೀ ಅಜ್ಜಿ ಕಾಗದಾನ!" ರಾಮು ನಗುತ್ತಾ ಹೇಳಿದ.

"ನಂಗೆ ಬರ್ಯೋಕೆ ಬಂದಿದ್ರೆ ನಿಂಗೆ ಹೇಳ್ತಿದ್ನೇನೋ.... ನಾನೂ ಅಕ್ಷರ ಕಲೀತಿದೀನಿಕಣೋ. ನನ್ನ ಸೊಸೆ ಹೇಳ್ಕೊಡ್ತಿದಾಳೆ."

"ನಿಂಗ್ಯಾಕಜ್ಜೀ ಅಕ್ಷರ?"

"ನೀನೂ ಸರಿ! ನಾನಾವ್ರೇನು ಅಕ್ಷರ ಕಲೀಬಾರ್ದೇನೋ? ಏನೋ ಒಂದೆರಡು ಪುಸ್ತಕ ಓದೋ ಆಸ್ಪಾದರೂ, ಎರಡು ಅಕ್ಷರ ಬರೆಯೋ ಆಸ್ಪಾದರೂ ಕಲಿತಿರಬೇಡವೇ ಹೇಳು!"

"ಈ ವಯಸ್ಸಿನಲ್ಲಿ....."

"ವಯಸ್ಸೆಂತದೋ, ವಿದ್ಯೇಗೇ? ಆಸೆ ಮುಖ್ಯ ಅಷ್ಟೆ."

"ನೀನೇ ಬರೀ ಅಜ್ಜಿ ಕಾಗದಾನ. ನಾನು ಬರಕೊಟ್ಟಿದ್ದನ್ನ ನೋಡಿಕೊಂಡು ಬರಿ ಅಜ್ಜಿ!"

"ಆಗಲಿ ಬರಕೊಡೋ."

ರಾಮು ಒಂದು ಹಾಳೆಯ ಮೇಲೆ ಕಾಗದದಲ್ಲಿ ಬರೆಯಬೇಕಾಗಿದ್ದ ವಿಷಯಗಳನ್ನೆಲ್ಲಾ ಬರೆದ. ಅಜ್ಜಿ ಒಂದು ಪೆನ್ಸಿಲ್ಲನ್ನು ತೆಗೆದುಕೊಂಡು, ಮತ್ತೊಂದು ಕಾಗದದ ಹಾಳೆಯ ಮೇಲೆ, ರಾಮು ಬರೆದಿದ್ದುದನ್ನೆಲ್ಲವನ್ನೂ ಬಹಳ ಶ್ರಮದಿಂದ ಕಾಪಿಮಾಡಿತು. ರಾಮು ಅದನ್ನು ಕವರಿನಲ್ಲಿಟ್ಟು, ಬೆಂಗಳೂರಿನ ವಿಳಾಸವನ್ನು ಬರೆದು ಪೋಸ್ಟ್‌ಮಾಡಿ ಬಂದ.

ಮಾರನೆಯದಿನ ಅಜ್ಜಿ ತನ್ನ ಡಬ್ಬಗಳನ್ನೆಲ್ಲಾ ಜೋಡಿಸುತ್ತಾ ಕುಳಿತಿತ್ತು. ನಾನು ಅಜ್ಜಿಯನ್ನು ಕೆಣಕಲು ಕೇಳಿದೆ: "ಅಜ್ಜೀ, ಈ ಸರ್ತಿ ನಿಮಗೆ ಮೊಮ್ಮಗಳೇ ಆದರೆ ಏನು ಮಾಡ್ತೀರ?"

ಅಜ್ಜಿ ಸಿಡಿಲು ಬಡಿಸಿಕೊಂಡಂತೆ, "ಅಯ್ಯೋ! ಬೇಡ ಮುಹಾ ರಾಯಾ? ಈ ಸರ್ತಿಯಾದರೂ ಒಂದು ಗಂಡೂಂತ ಆಗಲಿ" ಎಂದಿತು.

ನಾನೆಂದೆ, "ಏನ್ಮಾಡೋದು ಅಜ್ಜಿ? ಈ ಸರ್ತೀನೂ ಹೆಣ್ಣೇ ಆಗುತ್ತೇಂತ ನನಗೆ ಅನ್ನಿಸ್ತಿದೆ."

"ಅಯ್ಯೋ! ನಾಕು ಸುಮ್ನಿರಪ್ಪ!"

"ಆದರೆ ಏನ್ಮಾಡ್ತೀರ?"

"ಯಾರ ಕೈಲೂ ಮಾತಾಡೊಲ್ಲ. ನಾಮಕರಣ ಕೂಡ ಮಾಡಿಗೊಡಿಸೊಲ್ಲ ನೋಡ್ತಿರು. ಹೆಣ್ಣುಬೋಕಿಗಳಿಗೇಕೆ ಅಕರಾಸ್ತೆ?"

ಅಜ್ಜಿಯನ್ನು ನಾನು, ರಾಮು ರೈಲು ಹತ್ತಿಸಿ ಬಂದೆವು. ರಾಮುವಿನ ಮನೆ ಮಾತ್ರವಲ್ಲದೆ ನಮ್ಮ ಮನೆಯೂ 'ಬಿಕೋ' ಎನ್ನಿಸುತ್ತಿತ್ತು.

ಹದಿನೈದು ದಿನಗಳೊಳಗೆ ರಾಮುವಿನ ಮನೆಗೆ ಕಾಗದ ಬಂದಿತು. ಅಜ್ಜಿಗೆ ಮೊಮ್ಮಗಳು ಹುಟ್ಟಿದಳೆಂದು ಅದರಲ್ಲಿ ತಿಳಿಸಲಾಗಿತ್ತು. ನಮ್ಮ ಮನೆಯವರೆಲ್ಲಾ ನನ್ನನ್ನು 'ತರಾಟೆ'ಗೆ ತೆಗೆದುಕೊಂಡರು, ನಾನು ಹಿಂದೆ ನುಡಿದಿದ್ದ ಭವಿಷ್ಯಕ್ಕಾಗಿ.

"ಯಾವ ಬಾಯಲ್ಲಿ ಅಂದೆಯೋ. ಪಾಪ, ಮುದುಕಿ ಎಷ್ಟು ಆಸೆಯಾಗಿತ್ತೋ ಗಂಡಾಗುತ್ತೇಂತ" ಎಂದು ಎಲ್ಲರೂ ನನ್ನನ್ನು ಮೂದಲಿಸಿದರು. ನನಗೂ ಅಜ್ಜಿಯನ್ನು ನಾನು ಹಾಗೆ ತಮಾಷೆ ಮಾಡಬಾರದಾಗಿತ್ತೆನಿಸಿತು.

ಅದಾದ ಐದಾರು ದಿನಗಳಲ್ಲಿ ರಾಮುವಿನ ಮನೆಯವರಿಗೂ, ನಮ್ಮ ಮನೆಯವರಿಗೂ ಮಗುವಿನ ನಾಮಕರಣಕ್ಕೆ ಆಹ್ವಾನ ಬಂದಿತು. ನಾವೆಲ್ಲಾ ಅದಕ್ಕಾಗಿ ಬೆಂಗಳೂರಿಗೆ ತೆರಳಿದೆವು. ಅಜ್ಜಿ ನಾವೆಲ್ಲಾ ಊಹಿಸಿದ್ದಂತೆ ಸಪ್ಪಗಿರಲಿಲ್ಲ.

ನಾನು ಅಜ್ಜಿಯನ್ನು ಕೇಳಿದೆ: "ಏನಜ್ಜಿ, ಹೆಣ್ಣಾದರೆ ಯಾರ ಕೈಲೂ ಮಾತಾಡೊಲ್ಲ ಅಂದಿದ್ರಿ?"

(ಕವರ್ ಮೂರನೆಯ ಪುಟ ನೋಡಿರಿ).

ಕೀರ್ತಿಶನಿಯಿಂದ ಯಶೋಲಕ್ಷ್ಮಿಗೆ

(ಸಮ್ಮೇಳನಾಧ್ಯಕ್ಷರ ವ್ಯಕ್ತಿತ್ವ)*

ಶ್ರೀ. ಕೋ. ಚೆನ್ನಬಸಪ್ಪ, ಬಳ್ಳಾರಿ

ಶ್ರೀ ಕುವೆಂಪು ಅವರೊಡನೆ ನನಗಾದ ಪ್ರಥಮಸಂದರ್ಶನ ೧೯೪೫ರ ವೇಸಗೆಯಲ್ಲಿ. ಆಗವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ವಾಸ ಮಲ್ಲೇಶ್ವರಂನಲ್ಲಿ ಅಂದು ಅವರೊಡನೆ ಆಡಿದ ಮಾತುಕತೆಗಳು ಇಂದೂ ನನಗೆ ಚೆನ್ನಾಗಿ ನೆನಪಿವೆ. ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನೆಯನ್ನು ನೆರವೇರಿಸಬೇಕೆಂದು ಆಹ್ವಾನಿಸಲು ನಾನವರಲ್ಲಿಗೆ ಹೋಗಿದ್ದೆ. ಅವರನ್ನು ಪರಿಪರಿಯಿಂದ ಬೇಡಿಕೊಂಡೆ; ಆದರೆ ಅವರು ಮಾತ್ರ 'ಜಪ್ಪಯ್ಯ' ಎಂದರೂ ಒಪ್ಪಲಿಲ್ಲ. ಕೊನೆಗೆ ಶ್ರೀ ಕುವೆಂಪು ಹೇಳಿದರು: "ಒಂದೇ ಮಾತಿನಲ್ಲಿ ಬರಲಿಕಾಗದು, ಎಂದು ಹೇಳಿ ಕಳಿಸಿಬಿಡುತ್ತಿದ್ದೆ. ಆದರೆ ನೀವು ಅಷ್ಟು ದೂರದಿಂದ ಬಂದಿದ್ದೀರೆಂದು ಇಷ್ಟೆಲ್ಲ ತರ್ಕಮಾಡಿ ನಿಮ್ಮನ್ನು ಒಪ್ಪಿಸಬೇಕಾಯಿತು." 'ಹಾಗಾದರೆ ನಾನು ಬಂದದ್ದರ ಲಾಭ?' ಎಂದು ಕೇಳಿದೆ.

'ಇನ್ನೊಮ್ಮೆ ಹೀಗೆಲ್ಲ ಬರಬಾರದೆಂಬ ಬುದ್ಧಿ ಬಂತಲ್ಲ ಅದೇ ಲಾಭ' ಎಂದು ದೊಡ್ಡದಾಗಿ ನಕ್ಕರು. ನಾನೂ ಗೆ. ಕಟ್ಟಮನಿ ಇಬ್ಬರೂ ನಕ್ಕೆವು.

'ಬಂದರೆ ಆಗುವ ನಷ್ಟವೇನು?' ಎಂದು ಮತ್ತೆ ಕಾಡಿದೆ.

'ಸಾಧಾರಣವಾಗಿ ನಾನು ಸಭೆ-ಸಮ್ಮೇಳನಗಳಿಗೇ ಹೋಗುವುದಿಲ್ಲ. ಅದರಿಂದ ನನಗೆ ತುಂಬ ನಷ್ಟ. ಮೊದಲನೆಯದಾಗಿ ಜನ ನನ್ನನ್ನು ಹೊಗಳುವುದರಿಂದ ಅಹಂಕಾರಕ್ಕೆ ಎಡೆ ಕೊಡುತ್ತದೆ. ಎಂದು ನೀವೆ ತೆಗಳಿದರೆ ಮನಸ್ಸಿಗೆ ವ್ಯಥೆಯಾಗಬಹುದು ಯಾಕೆ ಬೇಕು?' ಎಂದರು.

'ಆದರೆ ನೀವು ಆ ಸ್ಥಿತಿಯನ್ನು ದಾಟಿದ್ದೀರಿ' ಎಂದೆ ನಾನು.

'ಇಲ್ಲ, ಏಣಿಯನ್ನು ಪೂರ್ಣ ಹತ್ತಿನಿಂತು ಕೆಳಗೆ ನೋಡಿದರೆ ಅಪಾಯವಿಲ್ಲ. ಮಧ್ಯದಲ್ಲೇ ನಿಂತು ಕೆಳಗೆ ನೋಡಿದರೆ ತಲೆತಿರುಗುವ ಸಂಭವವಿದೆ. ಒಮ್ಮೆ ಶ್ರೀರಂಗಪಟ್ಟಣದಲ್ಲಿ ಸಭೆಯಾಯಿತು. ಸಭೆ ಮುಗಿದ ಮೇಲೆ ವೃದ್ಧ ಬ್ರಾಹ್ಮಣರೊಬ್ಬರು ನಮಸ್ಕಾರ ಮಾಡಲು ಬಂದರು. ನನಗೆ ದಿಕ್ಕೇ ತೋಚದಂತಾಯಿತು. ಅದು ಎಂಥವನ ತಲೆಯನ್ನೂ ತಿರುಗಿಸುವಂಥ ಸನ್ನಿವೇಶ. ಅದಕ್ಕೇ ನಾನು ಎಲ್ಲಿಗೂ ಬರಲಾರೆ!' ಎಂದು ಖಂಡಿತವಾಗಿ ಹೇಳಿದರು.

ಶ್ರೀ. ಕುವೆಂಪು ಧಾರವಾಡದ ಸಾಹಿತ್ಯಸಮ್ಮೇಳನದ ಅಧ್ಯಕ್ಷತೆ ವಹಿಸಲು ಒಪ್ಪಿಗೊಂಡಿದ್ದಾರೆ. ಎಂಬುದನ್ನು ಕೇಳಿದಾಗ, ೧೯೪೫ರ ಆ ಘಟನೆ ನನ್ನ ನೆನಪಿಗೆ ಬಂತು. ಶ್ರೀ. ಕುವೆಂಪು ಅವರು ಬಹಿರಂಗ ಸಭೆಗಳಲ್ಲಿ ಭಾಗ ವಹಿಸದಿರುವ ವ್ರತವನ್ನು ಧಾರ್ಮಿಕನಿಷ್ಠೆಯಿಂದ ನಿರವೇರಿಸಿಕೊಂಡು ಬಂದಿದ್ದಾರೆ. ೧೯೪೫ರ ಹೊಸದರಲ್ಲಿ ಬಂದ 'ಕಿಂದರಿ ಜೋಗಿ'ಯಿಂದ ಹಿಡಿದು 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದ ವರೆಗೆ ಕನ್ನಡ ನಾಡಿನ ಅಸಂಖ್ಯಾತ ಓದುಗರು ಅವರ ಕವಿತೆಗಳಿಂದ, ಕತೆಗಳಿಂದ, ಕಾದಂಬರಿಯಿಂದ, ನಾಟಕಗಳಿಂದ, ಕಾವ್ಯವಿಮರ್ಶೆಗಳಿಂದ ಅಗಾಧವಾದ ಸ್ಫೂರ್ತಿಯನ್ನು ಪಡೆದಿದ್ದಾರೆ. ಕೆಲವು ಭಾವುಕರ ಕಣ್ಣಲ್ಲಿ ಅವರು ಅತಿಮಾನುಷ ಶಕ್ತಿಯೇ ಆಗಿದ್ದಾರೆ. ಎಷ್ಟೋ ಜನ [illegible]ಯನ್ನು ನೋಡಬೇಕೆಂದೇ ಮೈಸೂರಿನ ವರೆಗೂ ಹೋಗಿದ್ದಾರೆ. ಎಷ್ಟೋ ಸಾರಿ ನಿರಾಶೆಯಿಂದ ಹಿಂದಿರುಗಿಯೂ ಬಂದಿದ್ದಾರೆ.

ಶ್ರೀ. ಕುವೆಂಪು ಅವರ ಹೆಸರಿನ ಸುತ್ತ ಎನೋ ಒಂದು ಬಗೆಯ ಕೌತುಕ ಸುತ್ತುವರಿದಿದೆ. ಅವರು ಮಹಾರಾಜಾ ಕಾಲೇಜಿನಲ್ಲಿಯೂ ಕೆಲಸ ಮಾಡುತ್ತಿದ್ದರೂ, ಅವರ ವಿದ್ಯಾರ್ಥಿಗಳಿಗೆ ಹೊರತಾಗಿ ಬೇರೆಯವರ ಕಣ್ಣಿಗೂ ಬೀಳುವ ಸ್ವಭಾವ ಅವರದಲ್ಲ. ಮೊದಲು ನಡೆದುಕೊಂಡೇ ಬರುತ್ತಿದ್ದಾಗ ಅವರ ಎಡೆಬಿಡದ ಸಂಗಾತಿಯೆಂದರೆ— ಅವರ ಛತ್ರಿ! ಆಮೇಲೆ ಕಾರಿನಲ್ಲಿ ಬರಲು ಮೊದಲು ಮಾಡಿದಾಗ, ಕಾರಿನ ಬೀಗದ ಕೈ! ಅಂಥ ಏಕಾಂತಜೀವನ ಅವರದು.

ಹಿಂದೆ, ಇಪ್ಪತ್ತು ವರ್ಷಗಳ ಕೆಳಗೆ ಧಾರವಾಡದಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ಅವರು, ಮೈಸೂರು ವಿಶ್ವವಿದ್ಯಾಲಯದ ಪ್ರತಿನಿಧಿಯಾಗಿ ಧಾರವಾಡಕ್ಕೆ ಬಂದಿದ್ದರಂತೆ. ಆಗ ಸರ್ವದರ್ಶನತೀರ್ಥರಾಗೇಕೆ ಶಾಸ್ತ್ರಿಗಳು ಅಧ್ಯಕ್ಷತೆ ವಹಿಸಿದ್ದರು. ಅವರೊಡನೆ ತೆಗೆದ ಒಂದು ಗ್ರುಪ್ ಫೋಟೋದಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರು ಇದ್ದಾರೆ. ಆದರೆ ಸಭೆಯಲ್ಲೇ ಅವರನ್ನು ಕಾಣುವುದು ಕಷ್ಟವಾಗಿತ್ತಂತೆ. ಅವರಿಂದ ತಮ್ಮದೊಂದು ಕವನ('ತೇನೆಹಕ್ಕಿ')ವನ್ನು ಓದಿಸಬೇಕಾದರೆ, ಎಲ್ಲಿಂದಲೋ ಗುಂಪಿನ ಮಧ್ಯದಿಂದ ಹಿಡಿದು ಎಳೆದುತರಬೇಕಾಯಿತಂತೆ. ವೇದಿಕೆಯ ಮೇಲೆ ಯಾರೋ ತಂದು ನಿಲ್ಲಿಸಿದರು. ಕವಿತೆ ಓದಿದರು. ಒಂದಕ್ಷರವನ್ನೂ ನುಡಿಯದೆ ಮತ್ತೆ ವೇದಿಕೆಯಿಂದ ಇಳಿದುಹೋದರು!

---

* ೪. ಸಾ. ಸಮ್ಮೇಳನ ಕಾರ್ಯಾಲಯದಿಂದ ಪ್ರಕಟನೆಗಾಗಿ ಬಂದದ್ದು. ಸಂ. ಚ.

ಹೀಗೇಕೆ ಶ್ರೀ ಕುವೆಂಪು ಸಭೆ-ಸಮ್ಮೇಳನ ಗದ್ದಲಗಳಿಗೆ ಹೋಗುವುದಿಲ್ಲ? ಅವರನ್ನು ಬಹು ಬಲ್ಲೆನೆಂದು ಹೇಳಿಕೊಳ್ಳುವ ಒಬ್ಬರು ಹೇಳಿದರು: 'ಅವರಿಗೆ ಸಭಾಕಂಪ!' ಎಂದರು. ಇದನ್ನು ಕೇಳಿದ ನನಗೆ ಹಿಡಿಸಲಾರದಷ್ಟು ನಗೆ ಬಂತು! ಮತ್ತೊಬ್ಬ ಮಹಾ ಭಾಷಣಕಾರರು, 'ಅವರಿಗೆ ಭಾಷಣ ಮಾಡಲು ಬೇಕಾದ ವಾಙ್ಮಯ ಧಾರೆ ಇಲ್ಲ' ಎಂದು ಹೇಳಿದರು. ಅದನ್ನು ಕೇಳಿ, ಆ ಭಾಷಣಕಾರರ ಬಗ್ಗೆ 'ಅಯ್ಯೋ' ಎನ್ನಿಸಿತು ನನಗೆ. ಆದರೆ ನಿಜವಾದ ಕಾರಣವೇ ಬೇರೆ. ಶ್ರೀ ಕುವೆಂಪು ಮುಖ್ಯವಾಗಿ ಆಧ್ಯಾತ್ಮಿಕ ಸಾಧಕರು. ಗೌಣವಾಗಿ ಕವಿಗಳು. ಅವರ ಎಲ್ಲ ಕಾರ್ಯಾಚರಣೆಯೂ ಕವಿತೆಯನ್ನು ಬರೆಯುವ ಅವರ ಸಹಜಗುಣದಿಂದ ಹಿಡಿದು ವೈಸ್‌ಛಾನ್ಸಲರ್ ಕೆಲಸದ ಸಾಮಾನ್ಯ ಕೆಲಸದ ವರೆಗೆ-ಎಲ್ಲವೂ ಅವರ ಆತ್ಮೋನ್ನತಿಯ ಸಾಧನೆಯ ಸಹಾಯಕ ಘಟನೆಗಳು, ಪೂರಕಗಳು. ಕವಿತೆಯನ್ನು ಬರೆಯುವುದರಿಂದ ಅವರ ಆತ್ಮೋನ್ನತಿಗೆ ಅತಂಕವಾಗುವುದೆಂದು ಕಂಡುಬಂದಿದ್ದರೆ ಅದನ್ನೂ ಅವರು ತ್ಯಜಿಸುತ್ತಿದ್ದರು! ಅವರ ಸಾಧನೆಯ ಗುರಿ: 'ತನ್ನತಾನ್ ಇಲ್ಲಗೈವುದೆ'. ತನ್ನತನವನ್ನು ಇಲ್ಲಗೈವುದರಲ್ಲಿ ಅಡ್ಡಿ ಬರುವ ಪ್ರತಿಯೊಂದನ್ನೂ ಅವರು ನಿಷ್ಕರುಣೆಯಿಂದ ಧ್ವಂಸ ಮಾಡುವರು! ಆದ್ದರಿಂದಲೇ ಅಹಂಕಾರಪೋಷಣೆಗೆ ಅತ್ಯಂತ ಅನುಕೂಲ ಸಂದರ್ಭಗಳೆಂಬ ಸಭೆ-ಸಮ್ಮೇಳನ-ಮುಖಸ್ತುತಿಗಳಿಗೆ ಅವರು ಹಾಜರಾಗುವುದೇಯಿಲ್ಲ.

'ತನ್ನತಾನ್ ಇಲ್ಲಗೈವುದೆ ಎಲ್ಲ ಸಾಧನೆಯ ಗುರಿ' ಎಂಬ ಸತ್ಯವನ್ನು ಅವರ ಪ್ರತಿಯೊಂದು ಕೃತಿಯಲ್ಲೂ ಒಂದಲ್ಲ ಒಂದು ರೂಪದಲ್ಲಿ ಗುರುತಿಸಬಹುದು. ಒಂದುಕಡೆ: 'ಪೊರಕೆ ಹಿಡಿದರೆ ಕೀಳೆ? ಚಮರಿಹಿಡಿದರೆ ಮೇಲೆ?' ಎಂದು ಕೇಳುತ್ತಾರೆ. ಅವರ ದೃಷ್ಟಿಯಲ್ಲಿ ಪೊರಕೆಹಿಡಿದ ಕೈ ಕೀಳಲ್ಲ—ಚಮರಿ ಹಿಡಿದ ಕೈಮೇಲಲ್ಲ. ಭಗವಂತ ಎಲ್ಲರಲ್ಲೂ ಇದ್ದಾನೆ. ಎಲ್ಲರೂ ಸಮಾನರು. ಆದ್ದರಿಂದ ಅವರು ಪ್ರೊಫೆಸರ್ ಕೆಲಸ ಬಂತೆಂದು ಹಿಗ್ಗಿದವರೂ ಅಲ್ಲ. ವೈಸ್-ಛಾನ್ಸಲರ್ ಕೆಲಸ ಬಂದೀತೆಂದು ನಿರೀಕ್ಷಿಸಿದವರೂ ಅಲ್ಲ. ಅವರಿಗೆ ಎಲ್ಲ ಸ್ಥಾನವೂ ಒಂದೆ:

"ಸೂತ್ರಧಾರಿಯು ನೀನು
ಪಾತ್ರಧಾರಿಯು ನಾನು
ಯಾವ ಪಾತ್ರವನಿತ್ತರೇನು ನೀನೆನಗೆ?
ನಿನ್ನ ಪದಕಮಲದಲಿ
ಮನೆಮಾಡಿರುವ ನನಗೆ
ಅಸ್ಥಾನವೀಸ್ಥಾನವೆಲ್ಲಪಾಸ್ಥಾನ." ಎಂದು ಹಾಡಿದ್ದಾರೆ.

ಹಾಗೆಯೇ ಶ್ರೀರಾಮಾಯಣ ದರ್ಶನದಲ್ಲಿ ಊರ್ಮಿಳೆ ಭರತನನ್ನು ಶ್ರೀರಾಮ ಲಕ್ಷ್ಮಣರನ್ನು ನೋಡಲೆಂದು ಹೊರಟಾಗ, ವಸಂತವು ಬಂದು 'ನೀನು ಈಗಿರುವಂತೆಯೇ ಬಾ ಅಕ್ಕ, ನಿನ್ನ ತಪಸ್ಸನ್ನು ಅವರು ನೋಡಲಿ' ಎಂದು ತಡೆಯುತ್ತಾಳೆ. ಅದಕ್ಕೆ ಊರ್ಮಿಳೆ: 'ಛೀ, ಪತಿಗೇಂ ಪ್ರದರ್ಶನಂ ಕಡಲ್ಗಿದಿರೊಳ್' ಎನ್ನುತ್ತಾಳೆ. ಊರ್ಮಿಳೆಯ ಒಬ್ಬಳು ಶ್ರೀ ಕುವೆಂಪು ಅವರ ಜೀವನಸೂತ್ರವೇ ಎನ್ನಬಹುದು. ಅದ್ದರಿಂದಲೇ ಅವರಿಗೆ ಊರ್ಮಿಳೆಯ ಬಗ್ಗೆ ಬಹು ಅಭಿಮಾನ. ಪ್ರಖ್ಯಾತನಾದದ್ದೇ ಪ್ರಯೋಜನಕಾರಿಯಾದದ್ದು, ಶ್ರೇಷ್ಠವಾದದ್ದು ಎಂಬ ಭಾವನೆ ಸಲ್ಲದು. ಯಾರಗೊಡವೆಗೂ ಹೋಗದೆ ತನ್ನ ಹೊಲದಲ್ಲಿ ಉಳುವ ರೈತನಿಗಿಂತ ಮೇರೆವಣಿಗೆ ಹೊರಟ ದೊರೆ ಅವರ ದೃಷ್ಟಿಯಲಿ ದೊಡ್ಡವರಲ್ಲ. ಶ್ರೀ ಕುವೆಂಪು ಅವರು ತಮ್ಮ ಕಾವ್ಯದಲ್ಲಿ ಯಾವ ಆದರ್ಶವನ್ನು ಕಟ್ಟಿನಿಲ್ಲಿಸಿದ್ದಾರೆಯೋ, ಅದರಂತೆಯೇ ನಡೆದ ಕೆಲವೇ ಕವಿಗಳಲ್ಲಿ ಒಬ್ಬರು. ಅದ್ದರಿಂದಲೇ ಅವರಿಗೆ ಈ ಸಭೆ-ಸಮ್ಮೇಳನಗಳೆಂದರೆ ಸೇರುವುದಿಲ್ಲ.

ಹಾಗಾದರೆ ಇತ್ತೀಚೆಗೆ ಸಭೆ-ಸಮ್ಮೇಳನಗಳಿಗೆ ಯಾಕೆ ಹೋಗುತ್ತಾರೆ? ಕೀರ್ತಿಯನ್ನು ಶನಿಯೆಂದು ಬಹುಸ್ಮರಿಸಿದ ಈ ಕವಿ ಇತ್ತೀಚೆಗೆ ಯಾಕೆ ಸಭೆಗಳಿಗೆ ಹೋಗುತ್ತಾರೆ? ಅದಕ್ಕವರು ಹೀಗೆ ಉತ್ತರ ಕೊಡುತ್ತಾರೆ: "ಇಷ್ಟೊಂದು ಜನಸೇರಿ, ಇಷ್ಟೊಂದು ವಿಶ್ವಾಸದಿಂದ ಆದರಿಸುವುದು ನನ್ನಿಂದ ಏನಾದರೂ ಪ್ರತಿಫಲವೇಕು ಅಂತಾಗಲೀ, ಪ್ರತಿಫಲಸಿಗುತ್ತದೆ ಎಂದಾಗಲೀ, ಯಾವುದಾದರೂ ಆಶೆಯಿದ್ದಿದ್ದರೆ ಇದು ನನಗೆ ಕೀರ್ತಿಶನಿ ಆಗುತ್ತಿತ್ತು. ಅದೇನೂ ಇಲ್ಲ. ಈ ಆದರ ವಿಶ್ವಾಸ ಸದ್ರೂಪವಾದದ್ದು. ಅಸದ್ರೂಪವಾದದ್ದಲ್ಲ. ಇದು ಕೀರ್ತಿಶನಿಯಲ್ಲ. ಯಶೋಲಕ್ಷ್ಮಿ. ಇಂಥ ಆದರ ವಿಶ್ವಾಸದ ಸಮಾರಂಭಗಳಲ್ಲಿ ವಿಭೂತಿಯನ್ನು ಎಚ್ಚರಿಸುತ್ತೇನೆ. ನಮ್ಮ ಹೃದಯದಲ್ಲಿರುವ ವಿಭೂತಿಯನ್ನು ಎಚ್ಚರಿಸುತ್ತದೆ. ಯಶೋಲಕ್ಷ್ಮಿಯ ಗುಣ ಎಂಥದೆಂದರೆ, "ನಾನಳಿವ ಪಥವೆ ನೀನಿಳಿವ ರಥ" ಈ ಯಶೋಲಕ್ಷ್ಮಿ ಬಂದಾಗ ನಾನೆಂಬುದೆಲ್ಲ ಅಳಿದೇ ಹೋಗಿರುತ್ತದೆ!"

ಯಶೋಲಕ್ಷ್ಮಿಯನ್ನೇ ತಂದುಕೊಡುವ, ವಿಭೂತಿಯನ್ನು ಎಚ್ಚರಿಸುವ ಈ ಸಂದರ್ಭಗಳು ಕೀರ್ತಿಶನಿಯಾಗಲಾರವು. ಅಹಂಕಾರವನ್ನು ಅಳಿಸುವ ಸಾಧನಗಳವು. ಕ್ರಮ-ಕ್ರಮೇಣ ಭೂಮಿ ತನ್ನ ಪ್ರಜ್ಞೆಯನ್ನು ದಿವ್ಯವನ್ನಾಗಿ ಮಾಡಿಕೊಳ್ಳುತ್ತಾ ಉತ್ತಮಸ್ಥಿತಿಗೇರುವ ಸಾಧನೆಯದು. ಇಂಥ ಊರ್ಧ್ವಲೋಕಗಳಿಗೆ ನಮ್ಮ ಪ್ರಜ್ಞೆ ಏರುವಂತೆ ಸರಸ್ವತೀದೇವಿ ಅನುಗ್ರಹಿಸಲಿ ಎಂದು ಶ್ರೀ ಕುವೆಂಪು ಈ ಸಮಾರಂಭಗಳಿಗೆ ಈಗೀಗ ಒಪ್ಪಿಕೊಳ್ಳುತ್ತಿದ್ದಾರೆ.

ಧಾರವಾಡದ ಸಾಹಿತ್ಯ ಸಮ್ಮೇಳನವಾದರೂ ಇಂಥ ಯಶೋಲಕ್ಷ್ಮಿಯನ್ನು ತರುವ ಮಾರ್ಗ ಎಂದು ಹಾರೈಸುತ್ತೇನೆ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ರಂಗಿ' ಸಣ್ಣಕತೆಯನ್ನು ಕುರಿತು ೫ ಜನರಿಂದಲೂ 'ಮಹಾಮೂರ್ಖರು' ಎಂಬ ನಗೆಯಾಟವನ್ನು ಕುರಿತು ೩ ಜನರಿಂದಲೂ ವಿಮರ್ಶೆಗಳು ಬಂದಿವೆ. ವಿಮರ್ಶಕರ ಪರಿವಿಡಿ ಹೀಗಿದೆ :

'ರಂಗಿ' ಸಣ್ಣಕತೆಯ ವಿಮರ್ಶಕರು :

೧. ಶ್ರೀ. ವಾಸುದೇವ ರಾಣೇ, ಕೆನರಾ ಕಾಲೇಜ್, ಕುಮಟಾ. ೨. ಶ್ರೀ. ಮಹಾಬಲೇಶ್ವರ ಗ. ಬರವಣಿ, ಮುಲಾಡ—ಮುಂಬಯಿ. ೩. ಶ್ರೀ. ಎಂ. ಎಫ್. ಬಸರಕೋಡ ಬಿ. ಎ. ಹುಬ್ಬಳ್ಳಿ. ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೫. ಶ್ರೀ. ರಘುಪತಿ, ಅನಂತಪುರ.

'ಮಹಾಮೂರ್ಖರು' ರೂಪಕದ ವಿಮರ್ಶಕರು :

೧. ಶ್ರೀ. ರಘುಪತಿ, ಅನಂತಪುರ. ೨. ಶ್ರೀ. ಎಂ. ಲಕ್ಷ್ಮೀನರಸಿಂಹಯ್ಯ, ಬೆಂಗಳೂರು ೩. ಕೆ. ಎಸ್. ಶರ್ಮಾ, ಕಾಸರಗೋಡು.

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕ ಸಮಿತಿಯವರೇ ನೋಡಿ ನಿರ್ಣಯವನ್ನು ಕೊಟ್ಟಿದ್ದಾರೆ. ವಿಮರ್ಶಕರ ಸಂಖ್ಯೆ ಕಡಮೆಯಿದ್ದರೂ ಬಂದಿರುವ ಎಲ್ಲ ವಿಮರ್ಶೆಗಳೂ ಚೆನ್ನಾಗಿರುವುದೆಂದು ಪರೀಕ್ಷಕರು ತಮ್ಮ ಸಮಾಧಾನವನ್ನು ವ್ಯಕ್ತ ಪಡಿಸಿದ್ದಾರೆ.

'ರಂಗಿ' ಕತೆಯನ್ನು ಕುರಿತ ವಿಮರ್ಶೆಗಳಲ್ಲಿ **ಶ್ರೀ. ಮಹಾಬಲೇಶ್ವರ ಗ. ಬರವಣಿ** ಮತ್ತು **ಶ್ರೀ. ಕೆ. ಎಸ್. ಶರ್ಮಾ** ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ ಮಿಕ್ಕುವೂ ಉತ್ತಮವಾಗಿವೆ.

'ಮಹಾಮೂರ್ಖರು' ರೂಪಕದ ವಿಮರ್ಶೆಗಳಲ್ಲಿ ಶ್ರೀ ಕೆ. ಎಸ್. ಶರ್ಮಾ ಅವರದು ಅತ್ಯುತ್ತಮವಾಗಿದೆ. ಇನ್ನಿಬ್ಬರ ವಿಮರ್ಶೆಗಳೂ ಚೆನ್ನಾಗಿವೆ.

ಇನ್ನು ಮುಂದೆ ಜನವರಿಯ ೨೦ನೆಯ ಸಂಪುಟ ಪ್ರಾರಂಭವಾಗುವುದು. ಹೊಸವರ್ಷದಲ್ಲಿ ಈ ವಿಭಾಗವನ್ನು ಇನ್ನೂ ಹೆಚ್ಚಾಗಿ ಪ್ರಯೋಜನಕಾರಿಯೆನಿಸುವಂತೆ ಮಾಡಬೇಕೆಂದು ನಮ್ಮ ಅಪೇಕ್ಷೆ. ಹಾಗಾಗುವುದಕ್ಕೆ ಯೋಗ್ಯ ಸಲಹೆ–ಸೂಚನೆಗಳನ್ನು ಯಾರಾದರೂ ಕೊಡಬಯಸಿದರೆ ಅವಶ್ಯವಾಗಿ ಕೊಡಬೇಕು.

ಮುಂದಿನ ಸಂಚಿಕೆಯ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ದೇವರಿದ್ದಾನೆಯೆ ?' ಎಂಬ ಕಥೆಯನ್ನಾಗಲಿ, 'ಕಳ್ಳಗುರು' ಎಂಬ ಕಥೆಯನ್ನಾಗಲಿ ಕುರಿತು ವಿಮರ್ಶೆ ಬರೆದು ಕಳುಹಬೇಕು.

—ಸಂಪಾದಕರು

"ರಂಗಿ"

(ಕಥಾವಿಮರ್ಶೆ)

ಶ್ರೀ. ಮಹಾಬಲೇಶ್ವರ ಗ. ಬರವಣಿ, ಮುಲಾಡ–ಮುಂಬಯಿ

'ಬಾಲವಿವಾಹ,' ಪತಿಯಳಿದ ಪತಿಯು 'ಕೇಶಮುಂಡನ,' 'ಸಹಗಮನ' ಮೊದಲಾದ ಅದಿಕಾಲದ ಪದ್ಧತಿಗಳಂತೆಯೇ ಗಂಡು ಸಂತಾನವಿಲ್ಲದಿದ್ದಾಗ ಸೂಳೆಬಿಡುವುದೂ ಒಂದು ಪದ್ಧತಿ. ಹೀಗೆ ಅದಿಕಾಲದ ಮೂಢಭಾವನೆಯ ರೂಢಿಗಳಿಂದ ಅದೆಷ್ಟು ಜನ ಸುಮಂಗಲೆಯರು, ಪ್ರಾಯಪ್ರಬುದ್ಧರಾಗಿ ಕಳುವಳಿಕೆ ಬರುವದರೊಳಗಾಗಿಯೇ, ಬಾಳಿನ ಸವಿಯನ್ನು ಸವಿಯುವುದೇಕೆಂಬ ಸವಿಗನಸಿನಲ್ಲಿರುವಾಗಲೇ, ಪತಿಯನ್ನು ಕಳೆದುಕೊಂಡೋ, ಸಹಗಮನ ಮಾಡಿಯೋ, ಸುಖ ಸೌಭಾಗ್ಯಹೀನರಾಗಿ, ಬಾಳಿನಲ್ಲಿ ಬೆಳಕನ್ನು ಕಾಣದೆ, ಜೀವನ ಸುಖವನ್ನನುಭವಿಸದೆ ತಮ್ಮ ಬಾಳನ್ನು ದುಃಖಸಾಗರದಲ್ಲಿ ತೇಲಿಸಿರೋ ಆ ದೇವನೇ ಬಲ್ಲ! ಅಂತೆಯೇ ಹಳೆಯ ಕಾಲದ ಸೂಳೆಬಿಡುವ

ಈ ಕೀಳು ಪದ್ಧತಿಯಿಂದ ತನ್ನ ಜೀವನವನ್ನು ಬರಡಾಗಿಸಿಕೊಂಡು. ಕೊನೆಯ ತನಕ ವಿರಹವೇದನೆಯಲ್ಲಿ ತೊಳಲಿದ, ಸೂಳೆಬಿಟ್ಟರೂ ಸೂಳೆಯಂತೆ ಸಿಕ್ಕ ಸಿಕ್ಕ ಪುರುಷನ ಕಾಮಕೇಳಿಗೆ ಹುತ್ತಾಗದೆ—ಹುತ್ತಾಗಲು ಇಚ್ಛಿಸದೆ—ತಾನು ನಂಬಿದ ಒರ್ವನೇ ಒರ್ವ ಕಂಭಣ್ಣನಿಗಾಗಿ ತನ್ನ ಸರ್ವಸ್ವವನ್ನೂ ಸಮರ್ಪಿಸಿ, ಅವನ ನೆನೆವರಿಕೆಯಲ್ಲಿಯೇ ತನ್ನ ಬಾಳನ್ನು ಸಾಗಿಸಿದ ರಂಗಿಯ ಕಥೆ ಇದು! ಸೂಳೆಯೆಂದು ಬಿಟ್ಟರೂ ಗರತಿಯಂತೆಯೇ ಪವಿತ್ರತೆಯಿಂದ ಬಾಳಲು ಸಾಗಿಸಬಹುದೆಂದು ಅಚರಣೆಯಿಂದ ತೋರಿಸಿಕೊಟ್ಟ ದೃಷ್ಟಾಂತ. ಈ ಸೂಳೆಬಿಟ್ಟ ರಂಗಿಯ ಕಥೆ. ಕೇರಿಯ ಮೂಲೆ, ಸಂದುಗಳಲ್ಲೊ ಊರ ಹೊರವಲಯಗಳಲ್ಲೊ ಜೋಪಡಿಗಳನ್ನು ಕಟ್ಟಿಕೊಂಡು. ಮುಚ್ಚಂಜೆಯಾದೊಡನೆಯೇ ಕಾಮೋದ್ರಿಕ್ತ ಸಮಾನನಾದ ತಮ್ಮ ನೈಜಮುಖಕ್ಕೆ ಸ್ನೋ-ಪೌಡರುಗಳನ್ನು ಬಳಿದುಕೊಂಡು; ಸಿಂಗಾರವಾಗಿ ಬಜಾರ್‌ಗಳಿಂದ ಬಾಗಿಲಲ್ಲಿ ನಿಂತು, ಹೋಗಿ ಬರುವ ದಾರಿಗರನ್ನು ಕೈಬೀಸಿ ಕರೆಯುವ ಮಾನಗೆಟ್ಟ, ಧನದಾಹಿಯ ಸೂಳೆಯರ ಕಥೆಯಂತಲ್ಲ! 'ಕೆಸರಿನೊಳಗಿದ್ದ ಕಮಲದಂತೆ!' 'ಪುನುಗಿನ ಬೆಕ್ಕಿನ ಮಲವೆನ್ನಿಸಿಕೊಳ್ಳುವ ಪುನುಗಿನಂತೆ!' ರಂಗಿಯ ಕಥೆ-ಜೀವನ ಸರಿಯುನ್ನತವಾಗಿದೆ! ಆದರ್ಶಮಯವಾದುದು! ಜನರ ಹೃದಯದಲ್ಲಿ ಕರುಣಾರಸವನ್ನುದ್ಭವಿಸಿ, ಗರತಿಯಂತಿದ್ದರೂ ಸೂಳೆಯೆಂದು ಹಂಗಿಸಿಸಲ್ಪಡುವ ರಂಗಿಯ ಪರಿಸ್ಥಿತಿಗೆ ಮರುಕವುಂಟಾಗುತ್ತದೆ. ರಂಗಿಯ ಸಮಗ್ರಜೀವನದ ಚಿತ್ರಣವನ್ನೊಳಗೊಂಡಿರುವ ಈ ಹೃದಯಂಗಮ ಕಥೆಗೆ "ರಂಗಿ" ಎಂದು ಹೆಸರಿಸಿ ಕರೆದಿದ್ದು ಸಮರ್ಪಕವಾಗಿದೆ 'ರಂಗಿ' ಎಂಬ ತಿರೋನಾಮವನ್ನು ನೆನಪಿಗೆ ತಂದುಕೊಂಡ ಕೂಡಲೇ, ರಂಗಿಯು ಅದ್ಯಂತ ಜೀವನದ ಚಿತ್ರಣ ನಮ್ಮ ಕಣ್ಣೆದುರಿಗೆ ನಿಲ್ಲುತ್ತವಾದ್ದರಿಂದ, ತಿರೋನಾಮ ಅರ್ಥಗರ್ಭಿತವಾಗಿದೆ.

ರಸಭರಿತವಾದ ಶೈಲಿಯಲ್ಲಿ ನಿರಾತಂಕವಾಗಿ ಕಥೆ ಮುಗಿದಿದೆ. ಓದುತ್ತ ಹೋದಂತೆ ಮುಂದೂ ಓದೋಣ-ಮುಗಿಸಿಯೇ ಬಿಡೋಣ-ಎನ್ನುವ ತರಾತುರಿ ಓದುಗನಲ್ಲಿ ಉತ್ಪನ್ನವಾಗುತ್ತದೆ ಕಥಾನಿರೂಪಣೆ ಓದುಗನ ಮನಸೆಳೆಯುವಂತಿದೆ. ಚಿತ್ರಫಲಕದಲ್ಲಿ ಅಚ್ಚಳಿಯದೆ ನೆಲೆಯೂರಿ ನಿಲ್ಲುವಂತಹ ಕಥಾವಸ್ತುವಾಗಿದೆ ಸಮಾಜದಲ್ಲಿ ಕಡೆಯಬಹುದಾದಂತಹ, ನಡೆದಿರಬಹುದಾದ ಒಂದು ಸತ್ಯ, ನೈಜ ಚಿತ್ರಣವನ್ನು ಓದುಗನ ಮನ ಮುಟ್ಟುವಂತೆ ಕಥೆಯನ್ನು ಹೆಣೆಯುವುದರಲ್ಲಿ, ನಿರೂಪಿಸುವುದರಲ್ಲಿ ಶ್ರೀಮತಿಯವರದು ಎತ್ತಿದ ಕೈ ಎನ್ನಬೇಕು. ಏಕೆಂದರೆ, ಕಥೆಯುದ್ದಕ್ಕೂ ನಡುವೆಲ್ಲಿಯೂ ಬೇಸರಿಕೆ ಕಾರದಂತಹ ಸುಂದರ ಸುರಸ ಶೈಲಿ; ಸರ್ವಯೋಚಿತ ವರ್ಣನೆ, ಎಷ್ಟು ಬೇಕೋ ಅಷ್ಟೇ ಸಂಭಾಷಣೆ, ಕಥೆಯಲ್ಲಿ ಬರುವ ಬೇರೆ ಬೇರೆ ವ್ಯಕ್ತಿಗಳ ನೈಜಸ್ವಭಾವಚಿತ್ರಣ, ನಿರೂಪಿಸಿದ ರಂಗಿಯ ಜೀವನ ಸೊಗಸಾಗಿದೆ!

ಹೂವಿನಿಂದ ಹೂವಿಗೆ ಹಾರುವ ಪತಂಗದಂತೆ ಕಂಭಣ್ಣ, ರಂಗಿಯನ್ನು ಕೇವಲ ಕ್ಷುಲ್ಲಕ ಕಾರಣಾರ್ಥವಾಗಿ ತ್ಯಜಿಸಿ ಮಾರಿಯೊಡನೆ ಹಾರಿ ಹೋದನು.—ಆದರೆ ಮಾರಿಯಿಂದ ಅತನಿಗೆ ಸಿಗದೇಕಾದ ಸುಖ ಸಿಕ್ಕಿತೆ? ಆ ಜಗಳಗಂಟಿ ತುಂಡಿ, ಬೇಕಾದಷ್ಟು ಹಣವನ್ನು ಅತನಿಂದ ದೋಚಿಕೊಂಡು, ತನ್ನ ಕುಲಶಾಳಿಯಂತೆ ಇನ್ನಾವನನ್ನೋ ಕೂಡಿ ಓಡಿಹೋದಳು. ಎಮೇಲೆ ಮತ್ತಾವನನ್ನೋ ಕೂಟಕೆ ಮಾಡಿಕೊಂಡ ಕಂಭಣ್ಣ; ಅಗಲಾದರೂ ಸುಖಿಯಾದನೆ? ಹೆಂಡಿರು-ಮಕ್ಕಳು ಎಂಬಲಾರೋಗಕ್ಕೆ ಬಲಿಯಾದರು. ಕಂಭಣ ಸ್ಥಿತಿ ನಾಯಿ-ನರಿಗಳಿಗೂ ದೇಡವಾಯಿತು. ಅತನಿಗೆ ಬದುಕೇ ಬೇಡೆನಿಸಿಬಿಟ್ಟಿತು. ಹೂವಿನಿಂದ ಹೂವಿಗೆ ಹಾರುವ ಪತಂಗದಾಟದಲ್ಲಿ ಸುಖವನ್ನು ಕಾಣದೆ ಹತ್ತಾನನು. ತನ್ನನ್ನು ನಂಬಿದ್ದ ರಂಗಿಯೊಡನೆಯೇ ಇದ್ದಿದ್ದರೆ ಈ ಸ್ಥಿತಿಯಾಗುತ್ತಿತ್ತೆ? ಈ ಭ್ರಮಾಬುದ್ಧಿಯು ಕಂಭಣ್ಣನ ಚಿತ್ರಣದಿಂದ ಈಗಿನ ಕಾಲದ ಸಮಾಜದಲ್ಲಿರುವ ಭ್ರಮಣಬುದ್ಧಿಯುಳ್ಳ ಗಂಡಿಗೆ, ತಾನು ಪತಂಗದಂತೆ ಭ್ರಮಿಸಿದರೆ ತನ್ನ ಸ್ಥಿತಿ ಯಾವರೀತಿಯಾಗಬಹುದೆಂಬುದನ್ನು ಗಮನಕ್ಕೆ ತಂದುಕೊಡುವಂತಾಗಿದೆ.

ಸುಂದರವಾದ ವಸ್ತುವೊಂದನ್ನು ಕಂಡರೆ ಸರ್ವರಿಗೂ ಆ ವಸ್ತು ತನ್ನದಾಗಿದ್ದರೆ ಚೆನ್ನಾಗುತ್ತಿತ್ತು -ಎಂದೆನಿಸುತ್ತದೆ. ಅಂತೆಯೇ ಕೆಲವರು ಆ ವಸ್ತುವನ್ನು ತನ್ನದನ್ನಾಗಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ, ಆ ಪ್ರಯತ್ನವೆಲ್ಲವೂ 'ಗಾಳಿಗೋಪುರದಂತೆ,' 'ನರಿಯು ನೆಗೆತಕ್ಕೆ ಸಿಗದ ದ್ರಾಕ್ಷೆಯು ಹುಳಿಯಂತೆ' ಎನ್ನುವುದನ್ನು ಅರಿಯದೆ ಕಾರ್ಯಸಕ್ತರಾಗುತ್ತಾರೆ ಅಂತೆಯೇ ಈ ಕಥೆಯುಲ್ಲಿ ಗಿಡ್ಡಣ್ಣನ ಪರಿಸ್ಥಿತಿಯಾಗಿದೆ. ರಂಗಿ ತನಗೆ ವಶಳಾಗದೆ ಕಂಭಣ್ಣನಿಗೆ ವಶಳಾಗಿದ್ದಳ್ಳಾ—ಎಂಬ ಮಾತ್ಸರ್ಯದಿಂದ, ಕಂಭ-ರಂಗಿಯರಲ್ಲಿ ವಿರಸ ಏರ್ಪಡಿಸಿದರೆ ತನಗೆ ವಶಳಾದಾಳು ಎನ್ನುವ ಅತ್ಯಾಶೆಯಿಂದ, ರಂಗಿಗೆ ಅಲ್ಲಲ್ಲಿ ಸಲ್ಲಾಪಾಡಿ ಹೇಳಿ, ಕಂಭ-ವಸಾಯರ ಸುಳ್ಳುಸಂಬಂಧವನ್ನು ಖಾತ್ರಿಯಾಗುವಂತೆ ಮಾರಿಯಿಂದಲೇ ರಂಗಿಗೆ ಹೇಳಿಸಿ, ಪುಕಲಾಯಿಸಿ, ರಂಗಿ-ಕಂಭರಲ್ಲಿ ಜಗಳವೇರ್ಪಟ್ಟು, ಕಂಭ ರಂಗಿಯನ್ನು ತ್ಯಜಿಸಿ ಹೋಗುವಂತೆ ತನ್ನ ಕುಟಿಲ ಕಾರಸ್ಥಾನ ನಡೆಸಿದ ಗಿಡ್ಡಣ್ಣ ರಂಗಿಯನ್ನು ಪಡೆದನೆ? ಮೊದಲು ತುಂಬ ಮೋಸ್ತು ಸಮಾನಿಸಿದ್ದ ಕಂಭನಿಗೆ ಕಡು ವೈರಿಯಾದನು; ನಂಬಿದ ಮಿತ್ರನಿಗೆ ದ್ರೋಹಿಯಾದನು. ರಂಗಿಯ ಪಾಲಿಗೆ ಅವಳ ಬಾಳ ಕೊಲೆಯನ್ನು ಮಾಡಿದ ಕೊಲೆಪಾತಕಿಯಾದನು. ಈ ಗಿಡ್ಡಣ್ಣನಂಥ ಕಪಟಕಾರಸ್ಥಾನ, ಮಾತ್ಸರ್ಯದ, ಅತ್ಯಾಶೆಯ ವ್ಯಕ್ತಿಚಿತ್ರಣದಿಂದ ತುಂಬಿದ ಸಮಾಜದಲ್ಲಿರುವ ಅವನಂತಹ ಸ್ವಭಾವವುಳ್ಳ ಗಂಡಸರಿಗೆ, ತನ್ನ ಈ ಕೃತಿಯಿಂದ ಎಷ್ಟು ಜನರ ಬಾಳು ಹದಗೆಡುತ್ತದೆ, ಮಾಡಿದ ಕಾರ್ಯ ಎಷ್ಟು ನೀಚವಾಗಿದೆ, ಅದರಿಂದ ತಮಗೆ ಸಿಗುವ ಪ್ರತಿಫಲ, 'ಅತ್ಯಾಶೆ ಗತಿಗೆಡಿಸಿತು' ಎನ್ನುವಂತೆ, ಎನ್ನುವುದನ್ನು ಮನನನಮಾಡಿಕೊಡುವಂತಾಗಿದೆ.

"ಹಾಗಾದರೆ ನಮ್ಮ ಹಳ್ಳಿಗೆ ಬಾ ತಾತ. ನಾಲ್ಕು ದಿನ ಇದ್ದು ಬೇಸರ ಹರಿಸಿಕೊಂಡು ಹೋಗುವೆಯಂತೆ ....." ಎಂದಾಡಿದ ರಂಗಿಯ ಮಗನ ಮಾತು, ತಾನು ತಿನ್ನಲು ಕೊಂಡಾಗ ಮುದುಕನಿಗೂ ಕೊಟ್ಟು ಉಪಚರಿಸಿದ ರೀತಿ; "ಸಂಕೆ ಅಯ್ತಾ ಮಗು? ಯಾರು ನೆಂಟರು?" "ನೆಂಟನಲ್ಲವ್ವ—ಇಷ್ಟ!....." ಎಂಬವೆರಡು ತಾಯಿ-ಮಗನ ಮಾತು,—ಇವೆಲ್ಲವೂ, ಸಮಾಜದ ಜನತೆಗು ದೃಷ್ಟಿಯಲ್ಲಿ

ಸೂಳೆಯೆಂದೆನಿಸಿಕೊಳ್ಳುವ ರಂಗಿಯ ಮನೆಯವರ ಉದಾರ ಆದರಾತಿಥ್ಯದ, ಅಸಹಾಯ ಪುರುಷನನ್ನು ನೋಡುವ ಸ್ನೇಹಾರ್ದಭಾವದ ಪ್ರತೀಕವಾಗಿದೆ.

ಸಾಮಾನ್ಯ ಓದುಗನಿಗೆ, ಕಥೆಯುದ್ದಕ್ಕೂ ಕಾಣಿಸಿಕೊಳ್ಳುವ ಮುದುಕ ಯಾರಾಗಿರಬಹುದು—ಎನ್ನುವುದು ಪತ್ತೆಯಾಗದೆ ಹೋಗಬಹುದು; ಆದರೆ, ಸೂಕ್ಷ್ಮಪರಿಶೀಲನ ಮಾಡಿದರೆ, ಕೆಲವೊಂದು ಸಂದರ್ಭಗಳಲ್ಲಿ ಆ ಮುದುಕ ಬಹಿರಂಗಪಡಿಸಿದ ಭಾವನೆಯನ್ನು ಗ್ರಹಿಸಿದರೆ, ಒಂದು ದಿನ ರಾತ್ರಿ ರಂಗಿ ಆಕೆಯ ಮಗ ಅಡಿಕೊಳ್ಳುತ್ತಿದ್ದ ಮಾತನ್ನು ಕೇಳಿಸಿಕೊಂಡ ಮುದುಕ ಮರುದಿನ ಮಾಯವಾದುದನ್ನು ಓದಿದರೆ, ಆ ಮುದುಕ ಕಂಭನೇ ಆಗಿರಬೇಕು ಎನ್ನುವದು ಸ್ಪಷ್ಟವಾಗುತ್ತದೆ. ಹೀಗೆ ಸಂಪೂರ್ಣ ಕಥೆ ಭಾವಗರ್ಭಿತವಾಗಿ, ಅರ್ಥಪೂರ್ಣವಾಗಿ, ಸುರಸವಾಗಿ ಒಡಮೂಡಿದೆ!

ಸೂಳೆಚಟ್ಟಿ ರಂಗಿ, ಸಮಾಜದ ದೃಷ್ಟಿಯಲ್ಲಿ ಸೂಳೆಯೆಂಬ್ದೆನಿಸಿಕೊಂಡರೂ ಯಾವ ಗರತಿಗೂ ಕಡಿಮೆಯಿಲ್ಲದಷ್ಟು ಪರಿಶುದ್ಧವಾಗಿ ತನ್ನ ಬಾಳನ್ನು ಸಾಗಿಸಿದಳೆನ್ನುವುದು. ಈಗಿನ ಕಾಲದ ಗರತಿಯರೆನಿಸಿಕೊಳ್ಳುವ ಚಂಚಲ ಹೆಣ್ಣುಗಳಿಗೆ ಒಂದು ಮಾರ್ಗದರ್ಶನವಾಗಿದೆ! ಗತಕಾಲದ ನೆನಹಿನ ಚಿತ್ರಣವನ್ನು ಕಣ್ಣೀರಿನೊಡನೆ ವೇದನಾಯುಕ್ತ ಮುಖಳಾಗಿ ಹೇಳುವ ಮಾತು, ವಾತಿನಪರಣಿ ಓದುಗನಲ್ಲಿ ಕರುಣಾರಸವನ್ನುದ್ಭವಿಸುತ್ತದೆ. ಪವಿತ್ರವಾದ ರಂಗಿಯ ಬಾಳು ಈ ರೀತಿ ಹಾಳಾಯಿತಲ್ಲ—ಎಂದು ಮರುಕವುಂಟಾಗುತ್ತದೆ ಮನೆಗೆ ಬಂದ ಅಸಹಾಯ ಮುದುಕನಿಗೆ ಆಶ್ರಯಕೊಟ್ಟು, ಆತನನು ತಮ್ಮ ಮನೆಯವನಂತೆಯೇ ನಡೆಸಿಕೊಂಡ ರೀತಿ, ಆತನ ಬಗೆಗೆ ತೋರಿದ ಆದರ ಇವನ್ನೆಲ್ಲ ನೋಡಿದರೆ ರಂಗಿಯ ವಿಶಾಲಹೃದಯ, ಸ್ನೇಹಾರ್ದಭಾವ ಇವುಗಳ ಪರಿಚಯವಾಗುತ್ತದೆ "ಕಂಭನೊಬ್ಬನೇ ನನ್ನ ಗಂಡ" ಎಂದ ಆಕೆಯ ನುಡಿ, ಆತನ ನೆನೆವರಿಕೆಯಲ್ಲಿಯೇ ಬಾಳನ್ನು ಸಾಗಿಸಿದ ರೀತಿ, ಇನ್ನಾರನ್ನೂ ತನ್ನ ಜೀವನರಂಗದಲ್ಲಿ ಸೇರಿಸಿಕೊಳ್ಳದೆ, ಮುತ್ತಾವ ಪರಪುರುಷನ ಆಶೆಗೆ ಬಲಿಯಾಗದೆ ಪರಿಶುದ್ಧವಾಗಿದ್ದುದನ್ನು ನೋಡಿದರೆ, ಆಕೆಯ ಸಮರ್ಪಣಾಬುದ್ಧಿಯು ದ್ಯೋತಕವಾಗಿದೆಯೆಂದೆನ್ನಬಹುದು. ಅಂತೂ ರಂಗಿಯ ಜೀವನ ಪರಿಶುದ್ಧವಾಗಿ, ಆಕೆಗೆ ಬರದೆನಿಸಿದರೂ, ಸಮಾಜದ ಜನತೆಗೆ ಆದರ್ಶಮಯವಾಗಿದೆ.

ಸಹಜಜೀವನದ ಚಿತ್ರಣವೊಂದನ್ನು ರಸವತ್ತಾಗಿ, ಹೃದಯಂಗಮವಾಗಿ ಓದುಗನ ಮನಮುಟ್ಟುವಂತೆ ಸಮಾಜದ ಜನತೆಗೆ ಆದರ್ಶಪ್ರಿಯವಾಗುವಂತೆ ನಿರೂಪಿಸಿದ ರಂಗಿಯ ಪರಿಶುದ್ಧವಾದ ಈ ಜೀವನ ಕಥೆ, ಪ್ರತಿಯೊಬ್ಬ ಓದುಗನ ಮನಃಪಟಲದಲ್ಲಿ ಅಚ್ಚಳಿಯದೆ ಉಳಿಯುವಂತಾಗಿದೆ; ಪರಿಣಾಮಕಾರಿಯಾಗಿದೆ. ಹೀಗೆಯೇ ಸಮಾಜದ ಜನತೆಗೆ ಆದರ್ಶ ಜ್ಯೋತಿಯಾಗುವಂಥ, ಪರಿಣಾಮಕಾರಕ, ಸಹಜ ಜೀವನ ಚಿತ್ರಣದಿಂದೊಡಗೂಡಿದ ಕಥೆ-ಲೇಖನಗಳು ಇನ್ನೂ ಹೆಚ್ಚಾಗಿ ಶ್ರೀಮತಿಯವರ ಲೇಖನಿಯಿಂದ ಲಿಖಿತವಾಗಲೆಂದು ಹಾರೈಸುತ್ತೇನೆ. ಪರಿಣಾಮಕಾರಿಯಾಗುವಂತೆ, ಸುರಸವಾಗಿ ಈ ಸಹಜ ಜೀವನ ಚಿತ್ರಣವನ್ನು ಕಥಿಸಿದ ಶ್ರೀಮತಿಯವರಿಗೆ ನನ್ನ ಹಾರ್ದಿಕ ವಂದನೆಗಳು.

'ಮಹಾ ಮೂರ್ಖರು'

(ವಿನೋದಾತ್ಮಕ ಶ್ರಾವ್ಯರೂಪಕದ ವಿಮರ್ಶೆ)

ಶ್ರೀ. ಕೆ. ಎಸ್. ಕರ್ಮಾ ನಾಣೇಮುಂದಿಗಂ, ಕಾಸರಗೋಡು

"ಶ್ರಾವ್ಯರೂಪಕ" ವಿದಕ್ಕೆ ಮೊದಲಾಗಿ ಸುಪ್ರಸಿದ್ಧ ನಾಟಕಕಾರರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರು, ಹಿನ್ನೆಲೆಯಾಗಿ "ಕನ್ನಡದ ವಿನೋದವಿಲಾಸ" ಎಂಬೊಂದು ಲೇಖನವನ್ನು ಬರೆದಿದ್ದಾರೆ. ಕನ್ನಡ ಕಾವ್ಯಗಳಲ್ಲಿರಬಲ್ಲ ವಿನೋದದ ಸೆಲೆಯನ್ನು ವಿವಿಧದೃಷ್ಟಾಂತಗಳಿಂದ ಎತ್ತಿ ತೋರಿದ್ದಾರೆ. ಈ ನಿದರ್ಶನ ಕೊನೆಯಲ್ಲಿ "ವೃತ್ತವಿಲಾಸ" ಕವಿಯಿಂದ ರಚಿತವಾದ "ಧರ್ಮಪರೀಕ್ಷೆ" ಎಂಬ ಕಾವ್ಯದ ವಿನೋದಪೂರ್ಣ ಮಧುರಸಂಧಿಯೊಂದನ್ನು ನಾಟಕರೂಪವಾಗಿ ಶ್ರವ್ಯಮಾರ್ಗದಲ್ಲಿರಳಿಸಿ ತೋರಿದ್ದಾರೆ. ಅದುವೆ "ಮಹಾಮೂರ್ಖರು"—

ರೂಪಕದ ವಸ್ತುವಿದು ಸಾಮಾನ್ಯರೆಲ್ಲರ ಅರಿವಿಗೆ ನಿಂತ ವಸ್ತುವೇ ಆಗಿದೆ. ಹೆಜ್ಜೇಕೆ, ಕೆಲವಾರು ಮನೆಗಳಲ್ಲಿ ಹಿರಿಯರ ಬಾಯಿಯಿಂದ ಕಥಾರೂಪವಾಗಿ ಬಂದ ನೆನಪು ನನಗಿದೆ. ಕಥಾರೂಪವಾಗಿ [illegible]ಲ್ಲಿ ಬಂದಿರುವುದನ್ನು ಹೆಚ್ಚಿನವರರಿತಿರಬಹುದು. ಹೀಗೆ ಎಲ್ಲರ ಅರಿವಿಗೆ ಬಂದಿರುವ ಪ್ರಸ್ತುತ ಕಥಾವಸ್ತುವನ್ನು ಶ್ರೀ. ಬೆಟಗೇರಿಯವರು ರೂಪಕನಿರ್ಮಾದಲ್ಲಿ ಕಂಡರಿಸಿ—ಜೈನಕವಿಯಿಂದ ರಚಿತವಾದ ಈ ಕಥಾಭಾಗಕ್ಕೆ ಅದುನೆ ನೆಲೆಯು ಜೈನಮುನಿಯರದ ಪ್ರೌತಿನಿಧ್ಯವನ್ನು ತೋರಿಸಿ ಅರಳಿಸಿರುವುದು ಸುಂದರವಿದೆ. ಕರ್ಣಾಕರ್ಣಿಕೆಯ ನೆಲೆಯಲ್ಲಿ, ಅಜ್ಜಿಕತೆಯ ನೆಲೆಯಲ್ಲಿ ಹರಿದುಬಂದ ಕತೆಯಿದನ್ನು, ಒಂದು ಸತ್ಯಮಾರ್ಗದಲ್ಲಿ, ಕನ್ನಡ ಕವಿಯ ಹೃದಯದಿಂದ ಹೊರಬುಬಂದ ಬಗೆಯಲ್ಲಿ ನಿಗದಿಸಿ "ವೃತ್ತವಿಲಾಸ" ಕವಿಯೊಡನೆ "ಧರ್ಮಪರೀಕ್ಷೆ" ಚಂಪೂಕಾವ್ಯದ ಹೃದಯವನ್ನು ತೋರಿದುದು ಬಹ್ವಾದರಣೀಯವಿದೆ. ಕನ್ನಡ ಮಂದಿಯಲ್ಲಿ ನೆಲೆಗೊಂಡ ಪ್ರತಿಯೊಂದು ಕತೆಗೂ, ಪ್ರಸಿದ್ಧವಾದ ಒಂದು ಕವಿಧರ್ಮದ ಸೆಲೆಯಿದೆ; ಒಂದು ಸ್ವಾರಸ್ಯವಾದ ಕನ್ನಿವೇಶವಿದೆಯೆಂಬುದನ್ನು ಈ ಕಥಾವಿಸ್ತರಣೆಯಿಂದಲೇ ನಾವರಿಯಬಹುದು. ಬಹ್ವಂಶವಾದ ಮಂದಿಗೆ ಮಹಾಮೂರ್ಖರೆಂಬೀ ಕತೆಗೊಂದು ನೆಲೆಯಿರುವ "ಧರ್ಮಪರೀಕ್ಷೆ" ಕಾವ್ಯವುಂಟೆಂಬುದು ತಿಳಿದಿರಲಾರದು. ತಿಳಿವ ಮಂದಿಯಿದ್ದರೂ ಈ ಬಗೆಯ ಗವೇಷಣೆಗೆ ಮನಸೀಡುವುದೂ ಅಪರೂಪ! ಇರಲೀ ಮಾತು. "ಮಹಾಮೂರ್ಖರು" ಕತೆಯಿದು ವಸ್ತುವಿನ ದೃಷ್ಟಿಯಿಂದ ಸಾಮಾನ್ಯವಿರಬಹುದು. ಆದರೂ ಸ್ವಭಾವಚಿತ್ರಣದಿಂದ ಕಾವ್ಯಧರ್ಮದಿಂದ ಅದಕ್ಕೊಂದು ಹಿರಿತನವಿದೆಯೆಂಬುದು ನಿರ್ವಿವಾದ. ಈ ಮಾತನ್ನು ಈ ಶ್ರಾವ್ಯರೂಪಕವು ಇನ್ನಷ್ಟು ಕಳೆಯೇರಿಸಿ ತೋರುತ್ತದೆ!—

ಕಥಾಂಶವೇನು ?.....

ದೇಶಸಂಚಾರಕ್ಕೆಂದು ಹೊರಟ ದೊಳ್ಳಿಗಣ್ಣ, ಮುರಿಗಾಲ, ಮರುಳಯ್ಯ, ಪೋಟುಗಲ್ಲ ಇವರು ನಾಲ್ವರು, ಬೆಳಗಿನ ಕಾಲದಲ್ಲಿ ಒಂದು ಊರ ಆಗಸೆಬಾಗಿಲ ಮುಂದೆ ಬಂದು, ಅಲ್ಲಿಂದಲೇ ಜಿನಾಲಯವೊಂದರಿಂದ ಗಂಟೆಯ ಸಪ್ಪಳ ಕೇಳುವರು. ಮುಂದೆ ಅವರು ಜನರೆದುರಿಗೆ ಬಂದು ಬಹು ಚೆಲುವಾಗಿ, ಜನರಿಗೆ ನಗೆಯುಕ್ಕಿ ಬರುವಂತೆ ತಮ್ಮ ಪರಿಚಯವನ್ನು ಹೇಳಿ, ಜೈನಮುನಿಯ ಬಳಿ ಬಂದು ವಂದಿಸುವರು. ಪ್ರತ್ಯೇಕ ಪ್ರತ್ಯೇಕ ವಂದಿಸಿದ ಅವರೆಲ್ಲರಿಗೂ ಆಶೀರ್ವದಿಸಿದ ಮುನಿಯ ಮಾತನ್ನೂ—ಶ್ಲೋಕವನ್ನು ಕೇಳಿದ ಅವರು ಹೊರಬಂದು, ಮುನಿ ಆಶೀರ್ವದಿಸಿದುದು ಯಾರಿಗೆಂದು ವಾದಿಸುವರು. ವಾದದ ತೀರ್ಮಾನಕ್ಕಾಗಿ ಮುನಿಯ ಬಳಿಗೆ ಬರುವರು. ಮುನಿಯು ಇವರ ಹೇಡಿತನವನ್ನೂ ಮೂರ್ಖತನವನ್ನು ಕಂಡು "ತಾನು ಮಹಾಮೂರ್ಖನಿಗೆ ಆಶೀರ್ವದಿಸಿದುದು" ಎಂದನ್ನುವನು. ಈ ಮಾತನ್ನು ಕೇಳಿದ ಅವರು, ತಮ್ಮಲ್ಲಿ ಮಹಾಮೂರ್ಖನಾರೆಂಬುದನ್ನು ತಿಳಿಯಲು ಜಗಳಾಡುತ್ತ, ಮುನಿಯ ಆಕ್ಷೇಪದಂತೆ ಆಲಯದಿಂದ ಹೊರಬಂದು, ಊರ ಮುಂದೆ ಗುದ್ದಾಡುವರು. ದಂಡಾಧಿಕಾರಿಯು ಅವರನ್ನು ಸೆರೆಹಿಡಿದು, ನ್ಯಾಯಸ್ಥಾನಕ್ಕೆ ತರುವನು ನ್ಯಾಯಾಧೀಶರ ಮುಂದೆ ಈ ನಾಲ್ವರೂ ತಮ್ಮ ಮಹಾಮೂರ್ಖತನಶ್ಕೆರುವ ಕಾರಣವನ್ನು ಹೇಳುವರು. ಅವರಿತ್ತ [illegible]ಣ :—

ದೊಳ್ಳಿಗಣ್ಣ—ಈತ ಇಬ್ಬರು ಹೆಂಡ[illegible] ಇಬ್ಬರನ್ನೂ ಒಂದೇ ರೀತಿ ನೋಡುವ ಈ ಮೂರ್ಖ, ಒಂದು ದಿನ ರಾತ್ರಿ ಇಬ್ಬರ ಮೇಲೂ ಕೈಯಿರಿಸಿ ಮಲಗಿದ್ದ. ಆಗ ಒಂದು ಇಲಿ ಹಣತೆಯ ಬತ್ತಿಯನ್ನು ಸೆಳೆಯುತ್ತ ಹೇಗೋ ದೊಳ್ಳಿಗಣ್ಣನ ಒಂದು ಕಣ್ಣಿನ ಮೇಲೆ ಉರಿಯುತ್ತಿರುವಂತೆಯೆ ಬೀಳಿಸಿತು. ದೊಳ್ಳಿಗಣ್ಣ ಅಪಚಾರವಾಗಬಾರದೆಂದು ಕೈಯೆತ್ತದೆ ತನ್ನ ಕಣ್ಣನ್ನು ಸುಡಿಸಿಕೊಂಡ. ಇನ್ನು ಮುರಿಗಾಲ. ಈತನಿಗೂ ಇಬ್ಬರು ಹೆಂಡಿರು. ಒಂದು ದಿನ ಒಬ್ಬಾಕೆ ತನ್ನ ಸಾಲಿನ ಕಾಲಿಗೆ ಎಣ್ಣೆ ಹಚ್ಚಿ, ಅದನ್ನು ಮತ್ತೊಂದು ಕಾಲ ಮೇಲೆ ಇರಿಸಿ ಬಿಸಿನೀರು ತರಲು ಒಳಹೋಗಿದ್ದಳು. ಎರಡನೆಯಾಕೆ ತನ್ನ ಕಾಲ ಮೇಲೆ ಬಂದ ಆ ಕಾಲನ್ನು ಒನಕೆಯಿಂದ ಜಜ್ಜಿದರೆ, ಇನ್ನೊಬ್ಬಳು ಮತ್ತೊಂದನ್ನು ಅಸಿಗಲ್ಲಿನಿಂದ ಜಜ್ಜಿದಳು. ಅಂತೂ ಆತ ಮುರಿಗಾಲನಾದ. ಮೂರನೆಯವನು ತನ್ನ ತಂದೆ ಮತ್ತು ತಾಯಿ ಬಾಂಧವ್ಯವನ್ನು ಬಯಸಿ ಆರಿಸಿದ್ದ ಎರಡೂ ಹೆಣ್ಣು ಮಕ್ಕಳನ್ನು ಇಬ್ಬರೂ ನೋಯಬಾರದೆಂದು ಮದುವೆಯಾದ ಮಹಾಮೂರ್ಖನಾದರೆ, ಕೊನೆಯವನಾದ ಗಲ್ಲಪೋಟನು, ತನ್ನ ತಾಯಿಯ ಮಾತಿನಂತೆ ಹೆಂಡತಿಯ ಮನೆಗೆ ಹೋಗಿ, ಏನನ್ನೂ ತಿನ್ನದೆ, ಕೊನೆಗೆ ರಾತ್ರಿಯಲ್ಲಿ ಹಸಿವೆಯಾಗಿ ಯಾರೂ ಅರಿಯದಂತೆ ಬಾಯೊಳಗೆ ಅಕ್ಕಿ ತುಂಬಿಸಿ, ಕೊನೆಗದು ಬಹಿರಂಗವಾಗುವಾಗ ಗುಪ್ತವಾಗಿರಿಸಿ, ವೈದ್ಯರಿಂದ ಗಲ್ಲವನ್ನು ಕೊರೆಯಿಸಿಕೊಂಡು ಗಲ್ಲಪೋಟನಾದ ಮಹಾಮೂರ್ಖನು !—

ಕಥೆಯನ್ನು ಕೇಳಿದ ನ್ಯಾಯಾಧೀಶರು ನಾಲ್ವರೂ ಮಹಾಮೂರ್ಖರೆಂಬ ತೀರ್ಮಾನವಿತ್ತು, ಅವರನ್ನು ಕಳುಹುವರು. ಸಂತುಷ್ಟರಾದ ಅವರು ಮೊದಲಿನಂತೆ ಆವೇಶದಿಂದ ಒಡನಾಡಿಗಳಾಗಿ ನ್ಯಾಯಾಧೀಶರ ತೀರ್ಮಾನವನ್ನು ಹೊಗಳುತ್ತ ಸಾಗುವರು ! —— ಇದುವೇ ಈ ರೂಪಕದ ವಸ್ತು !

ರೂಪಕದ ಪ್ರಥಮಾಂತರಣವು ಗೀತಗಳ ಮೂಲಕ ಒರಿಗಾಣಿಸುವುದು. ನಾಲ್ವರೂ ಕೂಡಿಕೊಂಡು ತಮ್ಮ ಬರೋಣದ ಪ್ರಸ್ತಾಪ ಎತ್ತುತ್ತ ತಮ್ಮ ಪರಿಚಯದಾನಕ್ಕಾಗಿ ಹಾತೊರೆದು, ದೊಳ್ಳಿಗಣ್ಣನೇ ಮೊದಲಾಗಿ ತನ್ನನ್ನು ಪರಿಚಯ ಪಡಿಸುತ್ತಾನೆ. ಅವನು ತನ್ನ ಪರಿಚಯವನ್ನು ಕೇಳಿ ನಕ್ಕ ಮಂದಿಯ ಮುಂದೆ " ಕುರುಡರೆ..... ನಗಬೇಡಿರಿ ನೀವ್; ಕರೆದೊಯ್ದು ಮನೆಗೆ ಅವರನು ಕರಿಗಡುಬಿಗೆ ತುಪ್ಪವಿಕ್ಕಿ ತಿನಿಸುವುದೀಗ " ಎಂದೆನ್ನುವುದು ನಗೆಯ ಹೊಯ್ಲನ್ನೇ ಎಬ್ಬಿಸುತ್ತಿದೆ ಮುಂದೆ ಮುರಿಗಾಲನು ತನ್ನನ್ನು ಪರಿಚಯಗೊಳಿಸುತ್ತ "ಗಂಟುಗಳ್ಳನು ಎಂದು ಬಗೆಯದಿರಿ ನನ್ನನ್ನು, ನಿಮ್ಮೂರ ದಾರಿಯೊಳು ಮುಳ್ಳು-ಕಲ್ಲೇ " ಎಂದಾಡುವುದೂ, ಮುಂದೆ ಮರುಳಯ್ಯನು ತನ್ನ ಕುರಿತಾಡಿ, ಜನ ನಗುವುದನ್ನು ಕಂಡು " ಮಿಳಮಿಳನೆ ನಮ್ಮನ್ನು ನೋಡುತಿಹರೇಕೆ ? ನಮಗಿರುವುನೇ ಒಂಟಿಗಿರುವಂಥ ರೆಕ್ಕೆ ? " ಎಂದುತ್ತರಿಸುವುದೂ ಚೆಲುವಾಗಿದೆ ! ಮುಂದೆ ಪೋಟುಗಲ್ಲನು ಅಡಿಯಿರಿಸಿ-ತನ್ನನ್ನು ತೋರಗೊಟ್ಟು " .....ಕೊಗಿ ರೆ ಪೋಟುಗಲ್ಲನ ಮನೆಯ ಕೋಳಿ, ಆಗುವುದೆ ಇಲ್ಲ ಸೂರ್ಯೋದಯದ ದಾಳಿ " ಎಂದಾಡುವಾಗ, ಕೇಳಿದ ಮಂದಿ ಈ ಮಹಾಮೂರ್ಖರಿಗೆ ನಗೆಯ ಉಪಹಾರವನ್ನಲ್ಲದೆ ಬೇರೇನನ್ನು ಈಯಬೇಕು ! ಜನ ನಗುವಾಗಲೂ ದೊಳ್ಳಿಗಣ್ಣನು " ಈ ಊರ ಜನರಿಗೇನು ಮೂರ್ಖರೆನ್ನಬೇಕೋ ಅತಿ ಬುದ್ಧಿವಂತರೆನ್ನಬೇಕೋ " ಎಂದಾಡುವುದು, ಈ ಪ್ರಥಮಾಪತರಣಕ್ಕೆ ಮೆರುಗನ್ನಿತ್ತ ಮಧುರ ಸಂಧಿ !—

ಮುಂದೆ-ಜೈನಮುನಿಗಳ ಬಳಿ ಬಂದ ಮೂರ್ಖರು ವಂದಿಸುವ ಬಗೆಯೂ ಚಲುವಾಗಿದೆ. ಅವರ ಚಿತ್ತಸಮಾಧಿಗನುವಾದ ಬಗೆಯಲ್ಲದ್ದು ಮೂಡಿ ಬಂದಿದೆ. ಮುನಿಗಳವರಿಗೆ ಆಶೀರ್ವದಿಸಿದಾಗ, ಮಂತ್ರ ಪಠನಕ್ಕೆ ತೊಡಗಿದಾಗ ಮರುಳಯ್ಯನು " ಏ, ಏನೇನೋ ಮಂತ್ರಾ ಹೇಳ್ಲಿಕ್ಕೆ ಹತ್ತಿದನಲ್ಲೋ ! " ಎಂದಾಡಿದರೆ ಕೂಡಲೆ ಮುರಿಗಾಲನು " ಹೌದೋ, ಮಂತ್ರಾ ಅಂದರ ದೆವ್ವ-ಭೂತಾ ಬರತಾವಂತ ! ಈ ಬೋಳತಲೀ ಬತ್ತಲೇ ಮುನಿಗಳನ್ನು ಅವೇನು ಮಾಡ್ಯಾವು ? ನಮ್ಮಂಥವರ ಬೆನ್ನ ಹತ್ತತಾವು ಅವು ! " ಎಂದಂದು ತಮ್ಮ ಹಿಂಮೆಯನ್ನು ಎತ್ತಿ ತೋರುವನು. ಮುಂದೆ ಅತಿ ವಿನೋದಕ್ಕೆ ನೆಲೆಯಾದ ಸನ್ನಿವೇಶದ ದೃಶ್ಯ. ಇಲ್ಲಿ ಮುನಿಗಳು ಆಶೀರ್ವದಿಸಿದುದು-ಯಾರನ್ನೆಂಬ ಚರ್ಚೆಗೆ ಮೊದಲು ಮಾಡಿದ ಮೂರ್ಖರು ತಮ್ಮನ್ನು ತಾವು ಕಂಡುಕೊಳ್ಳುವುದು ಅತಿ ಸುಂದರವಾಗಿದೆ. ಕೊನೆಗವರು " ನಿಮ್ಮ ನಾಯಿಕಳ್ಳ, ನಿಮ್ಮ ಎಮ್ಮೆಕಳ್ಳ, ನಿಮ್ಮ ಮನಿತನವೇ ಕಳ್ಳ " ಎಂಬುದಾಗಿ ಬೈದುಕೊಳ್ಳುವುದು ರುಚಿರವಿದ್ದಂತೆ, ಆ ಮೂರ್ಖರ

(೪೪ನೆಯ ಪುಟ ನೋಡಿರಿ.)

CONTD IN
NEXT ROLL

END

END